ನೇಮಿಚಂದ್ರರವರ ಸಾಹಿತ್ಯ: ವಿಜ್ಞಾನ ಮತ್ತು ವೈಚಾರಿಕತೆ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಎಲ್.ಎನ್.ಗಿರಿಜಾದೇವಿ

ಮಾರ್ಗದರ್ಶಕರು

ಡಾ.ಎಚ್.ಹನುಮಂತರಾಯಪ್ಪ

ಸಹಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು

ಬೆಂಗಳೂರು – ೫೬೦೦೦೧

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೮

ನೇಮಿಚಂದ್ರರವರ ಸಾಹಿತ್ಯ: ವಿಜ್ಞಾನ ಮತ್ತು ವೈಚಾರಿಕತೆ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು
ಎಲ್.ಎನ್.ಗಿರಿಜಾದೇವಿ

ಮಾರ್ಗದರ್ಶಕರು
ಡಾ.ಎಚ್.ಹನುಮಂತರಾಯಪ್ಪ
ಸಹಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು
ಬೆಂಗಳೂರು – ೫೬೦೦೦೧

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ– ೫೮೩೨೭೬
೨೦೧೮

ಅಭ್ಯರ್ಥಿಯ ಘೋಷಣಾ ಪತ್ರ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೭ – ೧೮ನೇ ಸಾಲಿನ ಪಿಎಚ್.ಡಿ ಪದವಿಗಾಗಿ **'ನೇಮಿಚಂದ್ರ ಅವರ ಸಾಹಿತ್ಯ : ವಿಜ್ಞಾನ ಮತ್ತು ವೈಚಾರಿಕತೆ'** ಎಂಬ ಮಹಾ ಪ್ರಬಂಧವನ್ನು **ಡಾ. ಎಚ್. ಹನುಮಂತರಾಯಪ್ಪ** ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಸಲ್ಲಿಸುತಿದ್ದೇನೆ.

ಈ ಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 08 · 08 · 18
ಸ್ಥಳ : ಬೆಂಗಳೂರು

ಸಂಶೋಧಕರು

L. N. G

(ಎಲ್.ಎನ್.ಗಿರಿಜಾದೇವಿ)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿನಿ,
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರ ಘೋಷಣಾ ಪತ್ರ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೭ – ೧೮ನೇ ಸಾಲಿನ ಪಿಎಚ್.ಡಿ ಪದವಿಗಾಗಿ **'ನೇಮಿಚಂದ್ರ ಅವರ ಸಾಹಿತ್ಯ : ವಿಜ್ಞಾನ ಮತ್ತು ವೈಚಾರಿಕತೆ'** ಎಂಬ ಮಹಾ ಪ್ರಬಂಧವನ್ನು ಎಲ್.ಎನ್.ಗಿರಿಜಾದೇವಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ್ದಾರೆ.

ಈ ಪ್ರಬಂಧವು ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 08 · 08 · 18
ಸ್ಥಳ : ಬೆಂಗಳೂರು

ಮಾರ್ಗದರ್ಶಕರು

(ಡಾ. ಎಚ್. ಹನುಮಂತರಾಯಪ್ಪ)
ಸಹ ಪ್ರಾಧ್ಯಾಪಕರು
ಸರ್ಕಾರಿ ಕಲಾ ಕಾಲೇಜು
ಬೆಂಗಳೂರು – ೫೬೦೦೦೧

Dr. H. Hanumantharayappa
M.A., Ph.D.
Associate Professor in Kannada
Govt. Arts College

ನೆನಕೆಗಳು

ಪಿಎಚ್.ಡಿ ಅಧ್ಯಯನಕ್ಕೆ ನನಗೆ ಮಾರ್ಗದರ್ಶಕರಾಗಲು ಒಪ್ಪಿ ಸೂಕ್ತ ಮಾರ್ಗದರ್ಶನ ನೀಡಿ ಈ ಮಹಾಪ್ರಬಂಧ ರಚಿಸಲು ನೆರವಾದ ಡಾ.ಎಚ್.ಹನುಮಂತರಾಯಪ್ಪನವರಿಗೆ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು.

ಪ್ರತಿ ಹಂತದಲ್ಲೂ ಸೂಕ್ತ ಸಲಹೆಗಳನಿತ್ತ ಡಾ.ಡಿ.ಕೆ. ಚಿತ್ತಯ್ಯ ಪೂಜಾರ್, ಡಾ.ಬಿ.ಆರ್.ನರಸಿಂಹಮೂರ್ತಿ ರವರಿಗೆ ನನ್ನ ಅನಂತ ವಂದನೆಗಳು.

ನನ್ನ ಅಧ್ಯಯನ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿದ ನನ್ನ ಪತಿ ಕೆ.ಕುಶಕುಮಾರ್ ಮತ್ತು ಮಕ್ಕಳಾದ ಕೆ.ಚೈತ್ರ, ಕೆ.ಶ್ವೇತಾ ಅವರನ್ನು ಈ ಸಂದರ್ಭದಲ್ಲಿ ನೆನೆಯದಿರಲಾರೆ.

ಎಲ್.ಎನ್.ಗಿರಿಜಾದೇವಿ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯ ಪರಂಪರೆಯು ಹಲವು ಸಾಹಿತ್ಯ ಚಳುವಳಿಗಳ ಮೂಲಕ ಸಾಗಿಬಂದಿದೆ. ಹನ್ನೆರಡನೆಯ ಶತಮಾನದಲ್ಲಿ ವಿವೇಚನೆಗೊಳಪಟ್ಟ ಎಲ್ಲಾ ವಿಚಾರಗಳು ಇಂದಿನ ಆಧುನಿಕ ವೈಚಾರಿಕತೆಗೆ ಅಡಿಪಾಯವಾಗಿ ನಿಲ್ಲುತ್ತವೆ. ಆದ್ದರಿಂದ ಶರಣರ ಬದುಕು ಮತ್ತು ವಿಚಾರಗಳು ವಿಸ್ಮಯವನ್ನು ಉಂಟು ಮಾಡುತ್ತಿವೆ.

ಆಧುನಿಕ ಸಾಹಿತ್ಯ ಚರಿತ್ರೆಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ (ಸಮನ್ವಯ) ಮೊದಲಾದ ಸಾಹಿತ್ಯ ಘಟ್ಟಗಳ ಜೊತೆಗೆ ಸ್ತ್ರೀ ಸಂವೇದನಗಳನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದೆ. ಅಕ್ಕಮಹಾದೇವಿ ಕನ್ನಡದ ಆದಿಕವಿಯತ್ರಿಯಾದರೂ ಹತ್ತೊಂಬತ್ತನೆಯ ಶತಮಾನದಿಂದೀಚೆಗೆ ಮಹಿಳೆಯರು ಹೆಚ್ಚಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿರುವುದು ಈಗ ಇತಿಹಾಸವಾಗಿದೆ. ಕನ್ನಡ ಮಹಿಳಾ ಸಾಹಿತ್ಯಕ್ಕೆ ದೀರ್ಘಕಾಲದ ಇತಿಹಾಸವಿದ್ದರೂ, ಸ್ತ್ರೀ ವಿಮೋಚನಾ ಚಳುವಳಿ ಆರಂಭವಾದದ್ದು ೧೯೭೦ರ ದಶಕದಲ್ಲಿ. ಪ್ರತಿಯೊಂದು ಸಾಹಿತ್ಯ ಘಟ್ಟವೂ ತನ್ನದೇ ಆದ ವಿಶಿಷ್ಟ ತಾತ್ವಿಕ ದೃಷ್ಟಿ ಧೋರಣೆಗಳನ್ನು ಪ್ರಕಟಗೊಳಿಸಿದೆ. ಈ ಧೋರಣೆಗಳಲ್ಲಿನ ವಿವಿಧ ವೈಚಾರಿಕ ನೆಲೆಗಳು ಸಾಹಿತ್ಯ ಕ್ಷೇತ್ರದ ಆರೋಗ್ಯಕರ ಬೆಳವಣಿಗೆಗೆ ಕಾರಣವಾಗಿವೆ, ಮಾತ್ರವಲ್ಲ ವಿಭಿನ್ನ ಬಗೆಯ ವಿಶಿಷ್ಟ ಚಿಂತನೆಗಳು ಸಾಹಿತ್ಯ ಲೋಕಕ್ಕೆ ಅಡಿಯಿಡಲು ಎಡೆ ಮಾಡಿಕೊಟ್ಟಿವೆ.

ಮೊದಲು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹುಟ್ಟಿಕೊಂಡ ಸ್ತ್ರೀವಾದ ಮತ್ತು ಮಹಿಳಾ ಚಳುವಳಿ ಕ್ರಮೇಣ ಭಾರತದ ಮಹಿಳಾ ಸಮುದಾಯದಲ್ಲಿ ಜಾಗೃತಿ ಮೂಡಿಸಿ, ಸಾಹಿತ್ಯದಲ್ಲಿಯೂ ಸ್ತ್ರೀವಾದಿ ಸಾಹಿತ್ಯ ಎಂಬ ಘಟ್ಟವೊಂದು ರೂಪುಗೊಳ್ಳಲು ಕಾರಣವಾಯಿತು. ಕನ್ನಡದಲ್ಲಿ ದಲಿತ ಬಂಡಾಯ ಚಳುವಳಿಯು ಶೋಷಿತರ ಪರವಾದ ದನಿಯಾಗಿದ್ದರಿಂದ ನಮ್ಮ ಸಮಾಜದಲ್ಲಿ ಮಹಿಳೆಯರನ್ನು ಚಳುವಳಿಯೊಂದಿಗೆ ಸೇರಿಸಿಕೊಂಡಿತು. ಈ ಸಂದರ್ಭದಲ್ಲಿಯೇ ಪಾಶ್ಚಾತ್ಯ ಸ್ತ್ರೀವಾದವು ಭಾರತಕ್ಕೆ ಪ್ರವೇಶಿಸಿದ್ದರಿಂದ ಸುಶಿಕ್ಷಿತ ಮಹಿಳೆಯರಲ್ಲಿ ಹೊಸ ಚಿಂತನೆ, ಅಂದರೆ ಮಹಿಳಾ ಪರವಾದ ಚಿಂತನೆ ಮೂಡಿತು. ಒಂದೆಡೆ ದಲಿತ-ಬಂಡಾಯ ಚಳುವಳಿಯ ಪ್ರೋತ್ಸಾಹ, ಇನ್ನೊಂದೆಡೆ ಜಾಗತಿಕ ಮಹಿಳಾ ಚಳುವಳಿಯ ಪ್ರಭಾವ ಇಂಥ ಮುಕ್ತ ವಾತಾವರಣ ಕನ್ನಡದಲ್ಲಿ ಸ್ತ್ರೀವಾದ ಸಾಹಿತ್ಯ ರಚನೆಗೆ ಕಾರಣವಾಯಿತು.

ಅಲ್ಲದೆ ಇನ್ನು ಹಲವಾರು ಸಾಹಿತಿಗಳು ಯಾವುದೇ ನಿರ್ದಿಷ್ಟ ಸಾಹಿತ್ಯ ಪಂಥಕ್ಕೆ ಒಳಪಡದೆ ವಿಭಿನ್ನ ರೀತಿಯಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಆ ಮೂಲಕ ವಿಶಿಷ್ಟ ಬಗೆಯ ಚಿಂತನೆಗಳನ್ನು

ಸಾರಸ್ವತ ಜಗತ್ತಿಗೆ ಕೊಡುಗೆಯಾಗಿ ನೀಡಿದ್ದಾರೆ. ನೂರಾರು ವರ್ಷಗಳಿಂದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಅನುಭವಿಸಿದ ನೋವು, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಇತ್ಯಾದಿಗಳನ್ನು ಲೇಖಕಿಯರು ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದರು. ಆ ಮೂಲಕ ಸ್ತ್ರೀಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆಗಳನ್ನು ಪ್ರತಿಪಾದಿಸ ತೊಡಗಿದರು. ಅವರುಗಳೆಂದರೆ ಎಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ವಾಣಿ, ತ್ರೀವೇಣಿ, ಜಯಲಕ್ಷ್ಮೀ ಶ್ರೀನಿವಾಸ್, ನಂಜನಗೂಡು ತಿರುಮಲಾಂಬಾ ಮೊದಲಾದವರು. ೧೯೬೦–೭೦ರ ದಶಕದಲ್ಲಿ ಮಹಿಳಾ ಸಂವೇದನೆ ಸೂಕ್ಷ್ಮಗೊಂಡ ಕಾಲ. ಪ್ರಗತಿಶೀಲ ಸಾಹಿತ್ಯ ಘಟ್ಟದಲ್ಲಿ ಸಣ್ಣಕತೆ ಕೊಂಬೆ ರೆಂಬೆಗಳಾಗಿ ಟಿಸಿಲೊಡೆದು ವಿಸ್ತಾರವಾಗಿ ಬೆಳೆದಿತ್ತು. ಇದಕ್ಕೂ ಮೊದಲಿನ ನವೋದಯ ಪ್ರಾರಂಭದ ಘಟ್ಟದಲ್ಲಿ ಸ್ತ್ರೀ ಶಿಕ್ಷಿತಳಾಗಬೇಕೆಂಬ ಆಶಯ ಮುಖ್ಯವಾಗಿತ್ತು. "ಹತ್ತೊಂಬತ್ತನೆಯ ಶತಮಾನದಿಂದಲೂ ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದರೂ, ೧೯೭೦ರ ದಶಕದವರೆಗಿನ ಲೇಖಕಿಯರ ಕೃತಿಗಳಲ್ಲಿ ಸಾಂಪ್ರದಾಯಿಕ ಪುರುಷ ಪ್ರಧಾನ ಸಂಸ್ಕೃತಿಯನ್ನು ಒಪ್ಪಿಕೊಂಡು, ಕೆಲವೊಮ್ಮೆ ಸಮರ್ಥಿಸುತ್ತಾ ಆ ಪರಿಧಿಯೊಳಗಡೆಯೇ ಅಭಿವ್ಯಕ್ತಿಸಿರುವುದು ಕಂಡುಬರುತ್ತದೆ"[೧].

ಸಕಾರಾತ್ಮಕ ಸ್ವೀಕರಣ ನೆಲೆಯಿಂದ ಆಲೋಚಿಸಿದಾಗ ವೈವಿಧ್ಯಮಯ ಚಿಂತನೆಗಳು ಸಾಹಿತ್ಯ ಲೋಕದ ನಿರಂತರ ಕ್ರಿಯಾಶೀಲತೆಗೆ ಹೇಗೆ ಪ್ರೇರಕವಾಗುತ್ತವೆಂಬ ಅಂಶ ಮನವರಿಕೆಯಾಗುತ್ತದೆ. ಚಿಂತನಾ ಕ್ರಮದ ವೈರುಧ್ಯಗಳೂ ಸಹ ಸಾಹಿತ್ಯ ರಚನಾ ವೈವಿಧ್ಯತೆಗೆ ಪೂರಕವಾಗುವ ಸಂಗತಿ ಇದರಿಂದ ವೇದ್ಯವಾಗುತ್ತದೆ.

ಆರ್ಯಾಂಭಪಟ್ಟಾಭಿ, ಪ್ರೇಮಾಭಟ್, ಜಿ.ಸಿ.ಮಂಗಳ, ಅನಸೂಯ, ಗೀತಾಕುಲಕರ್ಣಿ, ಪುಷ್ಪ ಎನ್.ರಾವ್ ಮುಂತಾದ ಲೇಖಕಿಯರು ತಮ್ಮದೇ ಆದ ಚಿಂತನಾ ವಿಧಾನಗಳೊಂದಿಗೆ ಸಾಹಿತ್ಯ ಕೃಷಿ ಮಾಡಿದ್ದಾರೆ. ಮತ್ತಷ್ಟು ಮಂದಿ ಸಾಹಿತಿಗಳು ತಂತಮ್ಮ ಕ್ರಿಯಾಶೀಲತೆ ಮತ್ತು ಪ್ರಯೋಗಶೀಲತೆಗಳನ್ನು ತಮ್ಮ ಸಾಹಿತ್ಯ ರಚನೆಗಳಲ್ಲಿ ಪ್ರಕಟಿಸಿದ್ದಾರೆ. ಆ ಮುಖೇನ ನಾಡಿನ ಸಾಹಿತ್ಯ ಸಂಪನ್ನತೆಯನ್ನು ಸಮೃದ್ಧಿಗೊಳಿಸಿದ್ದಾರೆ.

ಹದಿನಾರನೇ ಶತಮಾನದಲ್ಲಿಯೇ ಬ್ರಿಟಿಷರು ಭಾರತಕ್ಕೆ ವ್ಯಾಪಾರದ ದೃಷ್ಟಿಯಿಂದ ಬಂದು ನೆಲೆಯೂರಿದ ನಂತರ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಹೀಗೆ ಮೊದಲಾದ ರಾಷ್ಟ್ರಗಳು ನಮ್ಮನ್ನು ಆಳುವಾಗ, ಅವರ ಸಂಸ್ಕೃತಿ, ಆಚಾರ–ವಿಚಾರಗಳನ್ನು ಧರ್ಮದ ಕಟ್ಟುಪಾಡುಗಳನ್ನು, ಭಾಷೆಯನ್ನು, ಸಂಪ್ರದಾಯಗಳನ್ನು ಶಿಕ್ಷಣ ಹಾಗೂ ಬದುಕಿನ ಮೂಲಕ ಹೇರಲು ಪ್ರಯತ್ನಿಸಿ

೧.ಡಾ.ಎ.ಮುನಿಶಾಮಪ್ಪ; ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಪುಟ–೯

ಯಶಸ್ವಿಯಾದರು. ನಮ್ಮ ಸಂಸ್ಕೃತಿ, ಆಚಾರ ವಿಚಾರಗಳ ಮೇಲೆ ಹಾಗೂ ಧಾರ್ಮಿಕತೆ, ಸಾಮಾಜಿಕ, ಆರ್ಥಿಕತೆಯ ಮೇಲೆ ಅಮೋಘ ಪ್ರಭಾವ ಬೀರಿತು. ಇದರಿಂದ ಪ್ರಭಾವಿತರಾದ ನಮ್ಮ ಸಮಾಜ ಒಂದು ನೂತನ ಜೀವನಕ್ರಮವನ್ನು ಅಳವಡಿಸಿಕೊಳ್ಳಲು ತೊಡಗಿದರು. ಜೊತೆಗೆ ಜನರು ಆಧುನಿಕತೆಗೆ ಒಳಗಾಗುತ್ತಿರುವುದನ್ನು ಕಾಣಬಹುದಾಗಿತ್ತು. ಈ ದಿಸೆಯಲ್ಲಿ ಹೊಸ ಸಮುದಾಯ ಸಮಾಜವನ್ನು ಬೆಳೆಸುವಂತಹ ವೈಶಿಷ್ಟವಾದ ಪರಿಕಲ್ಪನೆಗಳು ಉದಯಿಸಿದವು. ಸಾಹಿತ್ಯ ಕೃಷಿಯ ಪರಿಕಲ್ಪನೆ ಮುಖ್ಯವಾದದ್ದು. ಸಾಹಿತ್ಯ ಕೃಷಿಯಲ್ಲಿ ತತ್ವಜ್ಞಾನ, ವಿಜ್ಞಾನ ಬಹಳ ಪ್ರಾಮುಖ್ಯತೆ ಪಡೆದಿದೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಅವಕಾಶ ವಂಚಿತರಾಗಿ ಕೇವಲ ಮನೆಗೆ ಸೀಮಿತರಾದ ಮಹಿಳಾ ವರ್ಗ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಆಂದೋಲನದಲ್ಲಿಯೂ ಭಾಗವಹಿಸಿತು. ದೇಶದಲ್ಲಿ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆಯ ಪ್ರಚಾರ ಭರದಿಂದ ನಡೆಯಿತು. ಅವರಿಗೂ ಶಿಕ್ಷಣ ಮೂಲಭೂತ ಹಕ್ಕಾಯಿತು. ಈ ಐತಿಹಾಸಿಕ ಪರಿವರ್ತನೆಯ ಗಾಳಿ ಕರ್ನಾಟಕದಲ್ಲಿಯೂ ವ್ಯಾಪಿಸಿ ಕನ್ನಡ ಸಾಹಿತ್ಯದಲ್ಲಿ ಹಲವು ಮಹತ್ತರ ಬದಲಾವಣೆಗಳಾದವು. ಹೊಸಗನ್ನಡ ಗದ್ಯರಚನೆ ಆರಂಭವಾಗಿ ಕತೆ, ಕಾದಂಬರಿ, ಕವಿತೆ, ಪ್ರಬಂಧ ರೂಪಗಳು ಮೈದಾಳಿ ಸಾಹಿತ್ಯಿಕ ನೆಲೆ ಹದಗೊಂಡಿತು. ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಮಹಿಳೆಯರ ಪ್ರವೇಶ ಮೊದ ಮೊದಲು ಕೈಬೆರಳೆಣಿಕೆಯಷ್ಟಿದ್ದರೂ ಕ್ರಮೇಣ ಅದು ಅಗಣಿತವಾಗಿ ಬೆಳೆಯತೊಡಗಿತು. ಹೆಚ್.ವಿ.ಸಾವಿತ್ರಮ್ಮ, ಎಂ.ಕೆ.ಇಂದಿರಾ, ವಾಣಿ, ತ್ರಿವೇಣಿ, ಜಯಲಕ್ಷ್ಮೀ ಶ್ರೀನಿವಾಸನ್, ನಂಜನಗೂಡು ತಿರುಮಲಾಂಬಾ ಮೊದಲಾದವರು ಮೊದಲ ತಲೆಮಾರಿನ ಅಂದರೆ ಐವತ್ತರ ದಶಕದ ಬರಹಗಾರ್ತಿಯರು.

ಅರವತ್ತರ ದಶಕದಲ್ಲಿ ನಮಗೆ ಕಾಣಸಿಗುವ ಲೇಖಕಿಯರಲ್ಲಿ ಆರ್ಯಾಂಭ ಪಟ್ಟಾಭಿ, ಪ್ರೇಮಭಟ್, ಜಿ.ಸಿ.ಮಂಗಳ, ಅನಸೂಯ ರಾಮರೆಡ್ಡಿ, ಗೀತಾಕುಲಕರ್ಣಿ, ಪುಷ್ಪ ಎನ್.ರಾವ್ ಮಂಗಳ ಸತ್ಯನ್ ಇವರು ಪ್ರಮುಖರು. ಎಪ್ಪತ್ತರ ದಶಕದ ಸಾಹಿತ್ಯದಲ್ಲಿ ಮಹತ್ವಪೂರ್ಣ ಲೇಖಕಿಯರಾಗಿ ಗೋಚರಿಸಿದವರು ಸಿ.ಎಸ್.ಜಯಲಕ್ಷ್ಮೀದೇವಿ, ವೀಣಾಶಾಂತೇಶ್ವರ ಇವರ ನಂತರದ ಸ್ಥಾನ ಎ.ಪಿ.ಮಾಲತಿ, ಗೀತಾನಾಗಭೂಷಣ್, ನಿರುಪಮಾ ಮತ್ತು ವೈ.ಕೆ.ಸಂಧ್ಯಾಶರ್ಮ ಅವರಿಗೆ ಸಲ್ಲುತ್ತದೆ. ಖ್ಯಾತರಾದ ತಿರುಮಲೆ ರಾಜಮ್ಮ ತ್ರಿಪದಿಯಲ್ಲಿ ದೀರ್ಘಕಾವ್ಯ ರಚನೆ ಮಾಡಿದ ಜಯದೇವಿ ತಾಯಿ ಲಿಗಾಡೆಯವರ ಹೆಸರು ಕಾವ್ಯಕ್ಷೇತ್ರದಲ್ಲಿ ಮೈಲಿಗಲ್ಲು ಎನ್ನಬಹುದು. ಸಂಚಿಹೊನ್ನಮ್ಮಳ ತರುವಾಯ ಇವರ ಹೆಸರು ಪ್ರಮುಖವಾದುದು. ಪಿ.ವಿಜಯ, ಕಮಲಹೆಮ್ಮಿಗೆ, ಮಾಲತಿಪಟ್ಟಣಶೆಟ್ಟಿಯಂಥ ಕವಿಯತ್ರಿಯರು ತಮ್ಮ ಕಾವ್ಯದ ಮೂಲಕ ಧ್ವನಿ ಕಳೆದುಕೊಂಡ ಮಹಿಳೆಯ ಬದುಕಿನ ಬಗ್ಗೆ ಅರ್ಥಪೂರ್ಣವಾಗಿ ಧ್ವನಿ ಎತ್ತಿದ್ದಾರೆ. ಮಹಿಳೆ ನಡೆದು ಬಂದ

ದಾರಿಯನ್ನು ಗಮನಿಸಿದಾಗ, ಆಯಾ ಕಾಲ ಸಂದರ್ಭಕ್ಕೆ ಅನುಗುಣವಾಗಿ ಅಭಿವ್ಯಕ್ತಿ ನೀಡುತ್ತಾ ಬಂದಿದ್ದಾಳೆ.

ದಲಿತ ಬಂಡಾಯ ಬರಹಗಾರ್ತಿಯೆಂದೇ ಕರೆಯಿಸಿಕೊಂಡ ಬಿ.ಟಿ.ಲಲಿತಾನಾಯ್ಕರ ಕವನಗಳಲ್ಲಿ ಕೆಳವರ್ಗದ ನೋವಿನ ಹಲವು ಪದರಗಳನ್ನು ಬಿಚ್ಚಿ ತೋರಿಸಲಾಗಿದೆ. ತನ್ನ ಅನುಭವ ಲೋಕ ವಿಸ್ತರಿಸಿದಂತೆ ಕತೆಗಳಲ್ಲಿ ಪಡಿನುಡಿದಿದ್ದಾರೆ. ಹೊಸ ಶಿಕ್ಷಣದಿಂದ, ವಿಸ್ತರಿಸಿದ ಚಿಂತನಾ ಸಾಮಾರ್ಥ್ಯದಿಂದ ಆಧುನಿಕ ವಿಚಾರಗಳ, ವಿಜ್ಞಾನಗಳ ಪ್ರಭಾವದಿಂದ ಸೂಕ್ಷ್ಮ ಸಂವೇದನೆಯೊಂದಿಗೆ ಬರೆಯತೊಡಗಿದವರೆಂದರೆ ತ್ರಿವೇಣಿ, ವಾಣಿ, ನಂತರ ಅನುಪಮ ನಿರಂಜನ, ನೀಳಾದೇವಿ, ಸುಧಾಮೂರ್ತಿ ಮುಂತಾದ ಲೇಖಕಿಯರು ಕಥಾ ಸಾಹಿತ್ಯದ ಪ್ರಮಾಣವನ್ನು ವಿಪುಲಗೊಳಿಸಿದ್ದಾರೆ. ನವೋದಯದ ಪ್ರಾರಂಭದ ಘಟ್ಟದಲ್ಲಿ ಸ್ತ್ರೀ ಶಿಕ್ಷಿತಳಾಗಬೇಕೆಂಬ ಆಶಯ ಮುಖ್ಯವಾಗಿತ್ತು. ವಿಧವಾ ವಿವಾಹ, ಪ್ರೇಮವಿವಾಹ, ಶಿಕ್ಷಣದ ಅವಶ್ಯಕತೆ, ಮೌಢ್ಯ, ಸಂಪ್ರದಾಯಗಳನ್ನು ಪ್ರಶ್ನಿಸುವ ಜನಪ್ರಿಯ ಕತೆಗಳ ಮಾಲೆಯೇ ಹರಿದು ಬಂದಿತು. ಪ್ರಗತಿಶೀಲ ಸಾಹಿತ್ಯ ಘಟ್ಟದಲ್ಲಿ ಸಣ್ಣಕತೆ ಕೊಂಬೆ ರೆಂಬೆಗಳಾಗಿ ವಿಸ್ತಾರವಾಗಿ ಬೆಳೆದಿತ್ತು. ವೀಣಾಶಾಂತೇಶ್ವರ, ರಾಜಲಕ್ಷ್ಮೀ ಎನ್.ರಾವ್ ಇವರು ಮಹಿಳಾ ಸಂವೇದನೆಯನ್ನು, ವೈಚಾರಿಕ ಸೂಕ್ಷ್ಮತೆಯೊಂದಿಗೆ ಬಿಂಬಿಸುವ ಕತೆಗಳನ್ನು ರಚಿಸಿದರು.

ಎಪ್ಪತ್ತರ ನಂತರದ ದಶಕದಲ್ಲಿ ದಲಿತ ಹಾಗೂ ಮುಸ್ಲಿಂ ಮಹಿಳಾ ಸಂವೇದನೆಗಳು ಸೂಕ್ಷ್ಮಗೊಂಡ ಕಾಲವಾಗಿತ್ತು. ಸಾರಾ ಅಬೂಬಕರ್, ಬಿ.ಟಿ.ಲಲಿತಾನಾಯಕ್, ಕಮಲಹೆಮ್ಮಿಗೆ, ವೈದೇಹಿ, ನೇಮಿಚಂದ್ರ ಮುಂತಾದವರು. ತಮ್ಮ ಕಥಾ ಸಂಕಲನಗಳ ಮೂಲಕ ಸಾಂಸ್ಕೃತಿಕ, ಕೌಟುಂಬಿಕ, ಆರ್ಥಿಕ, ಸಾಮಾಜಿಕ ವಲಯಗಳ ವಿಚಾರ ಹಾಗೂ ನಂಬಿಕೆಗಳನ್ನು ಪ್ರಶ್ನಿಸತೊಡಗಿದರು. ವೈದೇಹಿ ಹಾಗೂ ನೇಮಿಚಂದ್ರರು ಹೆಣ್ಣಿನ ಮನಸ್ಸಿನ ಒಳತೋಟಿಗಳನ್ನು ಅನಾವರಣಗೊಳಿಸಿ ಸ್ತ್ರೀವಾದಿ ನೆಲೆಯಲ್ಲಿ ಮಹಿಳೆಯನ್ನು ಚಿತ್ರಿಸುವ ದೃಷ್ಟಿಯಲ್ಲಿ ಸಮಾನಗುಣ ಹೊಂದಿದ್ದಾರೆ. ಕನ್ನಡದ ಸ್ತ್ರೀವಾದಿ ವಿಮರ್ಶೆಯ ಎರಡನೆಯ ಧಾರೆಯೆಂದರೆ ಎನ್.ಗಾಯತ್ರಿ ವಿಜಯದಬ್ಬೆ.

ನೇಮಿಚಂದ್ರರು ತಮ್ಮ ಬರವಣಿಗೆಗಳ ಮೂಲಕ ಬದುಕಿನ ಅಂತರ್ ದರ್ಶನ ಮಾಡಿಸುವ ಅಮೂಲ್ಯ ತಾತ್ವಿಕ ಚಿಂತನೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಹೊಸ ಬಗೆಯಲ್ಲಿ ಭಾಷೆಯನ್ನು ದುಡಿಸಿಕೊಳ್ಳುವ ಮಾದರಿಯನ್ನು ವಿಶಿಷ್ಟತೆ, ವಿನೂತನ ಹಾಗೂ ಸುಲಲಿತವಾಗಿ ಸಾಹಿತ್ಯ ಲೋಕಕ್ಕೆ ಪರಿಚಯಿಸಿದ್ದಾರೆ. ನೇಮಿಚಂದ್ರರ ಸಮಗ್ರ ಸಾಹಿತ್ಯವನ್ನು ಇಡಿಯಾಗಿ ಸಂಶೋಧನಾ ಅಧ್ಯಯನಕ್ಕೆ ಯಾರು ಒಳಪಡಿಸಿದಂತೆ ಕಾಣುವುದಿಲ್ಲ. ಹಾಗಾಗಿ ಹೊಸ ಹೊಸ ಚಿಂತನೆಯ ಹೊಳಹುಗಳ ಬೆಳಕಿನಲ್ಲಿ ನೇಮಿಚಂದ್ರರ ಸಾಹಿತ್ಯದಲ್ಲಿನ ವಿಜ್ಞಾನ ಮತ್ತು ವೈಚಾರಿಕತೆಯ ನೆಲೆಗಳನ್ನು ಪರಿಶೋಧಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಹಾಗೆಯೇ ನೇಮಿಚಂದ್ರರ ಬದುಕು

ಮತ್ತು ಸಾಹಿತ್ಯವನ್ನು ಕುರಿತು ಸಂಪೂರ್ಣ ಮಾಹಿತಿಯನ್ನು ಕಲೆಹಾಕಿ, ಅವರ ಸಾಹಿತ್ಯವನ್ನು ಪುನರ್ ಪರಿಶೀಲಿಸುವ ಸದಾಶಯವೂ ಇದರೊಟ್ಟಿಗಿದೆ.

ನೇಮಿಚಂದ್ರರ ಸಾಹಿತ್ಯ ವಿಜ್ಞಾನ ಲೇಖನಗಳು, ಅವರ ಸಾಹಿತ್ಯದಲ್ಲಿ ವೈಚಾರಿಕತೆ, ವಿಜ್ಞಾನ ಸಾಹಿತ್ಯ, ಕಥಾಸಾಹಿತ್ಯ, ಪ್ರಬಂಧ ಸಾಹಿತ್ಯ, ಪ್ರವಾಸಕಥನ ಕುರಿತು ಪರಾಮರ್ಶನ ಮಾಡಲಾಗಿದೆ. ಇನ್ನುಳಿದಂತೆ ಇತರ ಬರಹಗಾರರ ಸಾಲಿನಲ್ಲಿ ನೇಮಿಚಂದ್ರರ ಗದ್ಯಸಾಹಿತ್ಯ, ನೇಮಿಚಂದ್ರರ ಬಗೆಗೆ ನಡೆದಿರುವ ಅಧ್ಯಯನಗಳ ಲೇಖನಗಳನ್ನು ಆಧರಿಸಿ ಮಾಹಿತಿಗಳನ್ನು ಸಂಗ್ರಹಿಸಿ ಅಧ್ಯಯನ ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ವೈಚಾರಿಕತೆ ಎಂಬ ಪರಿಕಲ್ಪನೆ ಜಿಜ್ಞಾಸೆಯಿಂದ ಕೂಡಿದೆ. "ನೇಮಿಚಂದ್ರ ಅವರ ಸಾಹಿತ್ಯ:ವಿಜ್ಞಾನ ಮತ್ತು ವೈಚಾರಿಕತೆ" ಇದು ನನ್ನ ಮಹಾಪ್ರಬಂಧದ ವಿಷಯ. ಇಲ್ಲಿ ನೇಮಿಚಂದ್ರರ ಸಾಹಿತ್ಯದಲ್ಲಿ ವಿಜ್ಞಾನ ಹಾಗೂ ವೈಚಾರಿಕತೆಯ ನೆಲೆಗಳನ್ನು ಶೋಧಿಸಬೇಕಾಗಿದೆ. ಹಾಗಾಗಿ 'ವೈಚಾರಿಕತೆ' ಎಂಬ ಪರಿಕಲ್ಪನೆಯ ಬಗೆಗೆ ಮೊದಲು ಸ್ಪಷ್ಟತೆ ಕಂಡುಕೊಳ್ಳಬೇಕಾಗಿದೆ.

'ವೈಚಾರಿಕತೆ' ಎಂಬುದು ಶಬ್ದಕೋಶದಲ್ಲಿ 'ವಿಚಾರದೃಷ್ಟಿ, ಆಲೋಚನೆ, ವಿಚಾರ ಮಾಡುವ ಶಕ್ತಿ ಎಂಬುದಾಗಿದೆ. ಅಂದರೆ ವಿಚಾರ ಮಾಡುವ ಕ್ರಮವನ್ನು ನಿರೂಪಿಸುವ ಶಬ್ದ. "ನಿರ್ದಿಷ್ಟ ವಿಚಾರವೊಂದನ್ನು ಕುರಿತು ಅಮೂಲಾಗ್ರವಾಗಿ ವಿವೇಚಿಸುವ ಕ್ರಮಬದ್ಧ ಪ್ರಕ್ರಿಯೆಯನ್ನು ವೈಚಾರಿಕತೆಯೆನ್ನಬಹುದು. ಇನ್ನು ಸರಳವಾಗಿ ಹೇಳಬಹುದಾದರೆ ನಿರ್ದಿಷ್ಟ ವಿಚಾರವೊಂದಕ್ಕೆ ಸಂಬಂಧಿಸಿದ ಕ್ರಮಬದ್ಧ ವಿವೇಚನೆಯೇ ವೈಚಾರಿಕತೆ"[೧] ಹಾಗೆ ಮುಂದುವರೆದಾಗ "ಮಾನವ ಕೇಂದ್ರಿತ ಕಾಳಜಿಗಳನ್ನುಳ್ಳ ಸಾಮಾಜಿಕ ಪ್ರಜ್ಞೆ, ವಿನೋದ ಪರತೆ ಮತ್ತು ಅಚಲವಾದ ಆತ್ಮವಿಶ್ವಾಸ."[೨]

ಪ್ರಜ್ಞೆ ಎಂದರೆ ಎಚ್ಚರದ ಸ್ಥಿತಿ ಎಂದು ಅರ್ಥ ಮಾಡಿಕೊಳ್ಳಬಹುದು. ಈ ನೆಲೆಯಿಂದ ನೋಡಿದಾಗ 'ವೈಚಾರಿಕ ಪ್ರಜ್ಞೆ' ಎಂದರೆ ನಿರ್ದಿಷ್ಟ ವಿಚಾರವೊಂದನ್ನು ಕುರಿತು ಒಂದು ಎಚ್ಚರದ ಸ್ಥಿತಿಯಲ್ಲಿ ಅಮೂಲಾಗ್ರವಾಗಿ ವಿವೇಚಿಸುವ ಕ್ರಮಬದ್ಧ ಪ್ರಕ್ರಿಯೆ ಎಂದು ಅರ್ಥವಾಗುತ್ತದೆ. ವೈಚಾರಿಕತೆಯ ಅಭಾವಕ್ಕೆ ಬಲವಾದ ಅಡ್ಡಿ ಎಂದರೆ ಮನಸ್ಸಿನ ದುರ್ಬಲತೆ, ಎಷ್ಟೇ ಧೈರ್ಯವಂತನಾಗಲಿ, ವಿವೇಚನಾಶಕ್ತಿ ಇರಲಿ ಜೀವನದಲ್ಲಿ ಕಷ್ಟಗಳು ಸಂಭವಿಸಿ ಒಂದಾದ ಮೇಲೊಂದು ಪೆಟ್ಟು ಬಿದ್ದಾಗ ಸಂಶಯಾತ್ಮನಾಗುವ ಸಂಭವವುಂಟು. ಕಾಣದ ಕೈಯ ಸಹಾಯ ಪಡೆಯಲು ಪ್ರಯತ್ನಿಸುತ್ತಾನೆ. ವಿದ್ಯಾಭ್ಯಾಸ ಪದ್ಧತಿಯೂ ಸಹ ಶುದ್ಧವಾದ ವಿವೇಚನಾ ಮಾರ್ಗವನ್ನು ಹೇಳಿಕೊಡುತ್ತಿಲ್ಲ. ಈ ವಿಜ್ಞಾನಯುಗದಲ್ಲೂ ಕೂಡ ವೈಚಾರಿಕ ಮನೋಭಾವ ಎಷ್ಟರಮಟ್ಟಿಗೆ ಪ್ರಗತಿ

೧.ಜಿ.ಪಿ.ರಾಜರತ್ನಂ ಅವರ ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆಯ ನೆಲೆಗಳು, ಪುಟ-೧೩

೨. ಡಾ.ಎಚ್.ನರಸಿಂಹಯ್ಯ ಹೋರಾಟದ ಹಾದಿ, ಪುಟ-೬೫

ಹೊಂದಬೇಕೋ ಅಷ್ಟು ಹೊಂದಿಲ್ಲ. ವಿಜ್ಞಾನಿಗಳಲ್ಲೂ ಸಹ ವೈಜ್ಞಾನಿಕ ಮನೋಭಾವ ತುಂಬಾ ಕಡಿಮೆ. ವಿದ್ಯಾವಂತ ಮೂಢನಂಬಿಕಸ್ಥನು, ಅವಿದ್ಯಾವಂತ ಮೂಢನಂಬಿಕಸ್ಥನಿಗಿಂತ ದೇಶಕ್ಕೆ ಮತ್ತು ಸಮಾಜಕ್ಕೆ ಹೆಚ್ಚು ಅಪಾಯವನ್ನುಂಟು ಮಾಡುತ್ತಾನೆ.

ಪ್ರಕೃತಿಯ ಎಲ್ಲಾ ಘಟನೆಗಳನ್ನು ಸಾವಧಾನವಾಗಿ ಪರಿಶೀಲಿಸಿದಾಗ ಇವೆಲ್ಲ ಒಂದು ಮೂಲ ನಿಯಮಕ್ಕೆ ಬದ್ಧವಾಗಿರುವ ಹಾಗೆ ತೋಚುತ್ತದೆ. ಈ ಮೂಲ ನಿಯಮ ಜಡ ನಿಯಮವೇ ಅಥವಾ ಇದಕ್ಕೆ ಬುದ್ಧಿಯಿದೆಯೇ ಎನ್ನುವುದೇ ದೊಡ್ಡ ಸಮಸ್ಯೆ. ಇದೊಂದು ಜಡ ನಿಯಮವಾದರೆ ಜೀವನದ ಅನೇಕ ಸಮಸ್ಯೆಗಳಿಗೆ ಸಮಂಜಸವಾದ ವಿಶ್ಲೇಷಣೆ ಕೊಡುವುದಕ್ಕಾಗುವುದಿಲ್ಲ. ಪ್ರಜ್ಞಾಪೂರ್ಣವಾದ ವಿಶ್ವನಿಯಮದ ಅಸ್ತಿತ್ವಕ್ಕೆ ವೈಚಾರಿಕ ಮನೋಭಾವ ಪುಷ್ಠಿ ಕೊಡುತ್ತದೆ. ಹಾಗೂ ವೈಚಾರಿಕತೆ ಅನೇಕ ವಿರೋಧಾಭಾಸದ ತೊಡಕುಗಳನ್ನು ಇಲ್ಲವಾಗಿಸಿ, ಕಲುಷಿತವಲ್ಲದ ಅತ್ಯಂತ ಶುದ್ಧವಾದ ವಾತಾವರಣವನ್ನು ನಿರ್ಮಿಸಿ ಈ ವಿಶ್ವದ ನಿಗೂಢ ರಹಸ್ಯವನ್ನು ತಿಳಿದುಕೊಳ್ಳಲು ಉಪಯೋಗಿಸಬಹುದಾದ ಅತ್ಯಂತ ಶ್ರೇಷ್ಠವಾದ ಮಾರ್ಗ. "ವೈಚಾರಿಕತೆಯಲ್ಲಿ ನಂಬಿಕೆ ಇರುವ ಜನರು ಸಮಾಜದ ಹಾಗೂ ಜೀವನದ ಸಮಸ್ಯೆಗಳನ್ನು ಎದುರಿಸುವಲ್ಲಿ ನಿರಂತರವಾಗಿ ಪ್ರಯತ್ನಿಸಿದರೆ ಜಯ ದೊರೆಯುವುದು ಖಂಡಿತ" ಎಂಬುದೊಂದು ಲೋಕ ರೂಢಿ ಮಾತು.

ವಚನ ಚಳುವಳಿಯು ವೈಚಾರಿಕತೆಯ ತಳಹದಿಯಲ್ಲಿಯೇ ಬೆಳೆದಿರುವುದನ್ನು ಕಾಣುತ್ತೇವೆ. ಅಂದಿನ ಕಾಲಕ್ಕೆ ಬೃಹದಾಕಾರವಾಗಿ ಬೆಳೆದಿದ್ದ, ಜಾತಿಯ ವಿರುದ್ಧ ಸಮರ ಸಾರಿದ ಬಸವಣ್ಣ ವೈಚಾರಿಕತೆ ಬೆಳೆಸಿ ಸಾಮಾಜಿಕ ಸಂಘರ್ಷಕ್ಕೆ ನಾಂದಿ ಹಾಡುತ್ತಾರೆ. ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಬೆಳೆಯುತ್ತಾ ಬಂದಿರುವ ವೈಚಾರಿಕತೆ, ದಿನದಿಂದ ದಿನಕ್ಕೆ ಮೇಲ್ಮಟ್ಟಕ್ಕೇರುತ್ತಲೇ ಬಂದಿದೆ. ಆಧುನಿಕ ಸಾಹಿತಿಗಳು ವೈಚಾರಿಕ ಮನೋಭಾವ ಬೆಳಸಲು ಅಧಿಕ ಶ್ರಮ ಪಟ್ಟಿದ್ದಾರೆ. ಈ ನಿಟ್ಟಿನಲ್ಲಿ ಕುವೆಂಪು ಪ್ರಮುಖರಾಗಿದ್ದಾರೆ. ನವೋದಯ ಸಾಹಿತ್ಯದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದ ಕುವೆಂಪುರವರು ವೈಚಾರಿಕತೆಗೆ ಪ್ರಥಮ ಸ್ಥಾನ ನೀಡಿದರು. ನಂತರದ ಸ್ಥಾನದಲ್ಲಿ ವಿವೇಕಾನಂದರು ನಿಲ್ಲುತ್ತಾರೆ. ವಿವೇಕಾನಂದರ ಜೀವನವೇ ಒಂದು ಸಜೀವ ವೈಚಾರಿಕ ಮಹಾಗಾಥೆಯಾಗಿದೆ.

ವಿಜ್ಞಾನಯುಗದಲ್ಲಿದ್ದರೂ ವೈಚಾರಿಕತೆ ಮನುಷ್ಯನಲ್ಲಿ ಸಾಕಷ್ಟು ಬೆಳೆದಿಲ್ಲ. ಮಾನವ ಮುಂದುವರೆಯ ಬೇಕಾದರೆ ವೈಚಾರಿಕತೆ ಅವಶ್ಯಕ. ಒಬ್ಬ ವ್ಯಕ್ತಿಯ ಕವಿಯ ವೈಚಾರಿಕತೆ ಎನ್ನುವುದು, ಅವನ ರಕ್ತಮಾಂಸಗಳಿಂದ ಕೂಡಿದ ದೇಹಕ್ಕೆ ಅಂಟಿಕೊಂಡಿರುವ ಚರ್ಮವಿದ್ದಂತೆ. ವೈಚಾರಿಕತೆ ನಮ್ಮ ಸುತ್ತಮುತ್ತಲಿನ ವಿಚಾರಗಳನ್ನು ತರ್ಕಬದ್ಧವಾಗಿ ಆಲೋಚಿಸಲು, ಸಂಯೋಜಿಸಲು ಸಹಾಯ ಮಾಡುತ್ತದೆ. ಈ ರೀತಿ ಆಲೋಚನೆ ಮಾಡುವ ವ್ಯಕ್ತಿಯೇ ನಿಜವಾಗಲೂ ವಿಚಾರವಾದಿ. ಆದ್ದರಿಂದ ಚಿಂತನಾಶೀಲ ಸಾಹಿತ್ಯವೇ ವಿಚಾರಸಾಹಿತ್ಯ ಎನ್ನಬಹುದು. ಗೌರೀಶ್ ಕಾಯ್ಕಿಣಿಯವರು ಹೇಳಿರುವ

ಮಾತು ಗಮನಾರ್ಹವಾಗಿದೆ. "ಬುದ್ಧಿಯುಳ್ಳವರೆಲ್ಲರೂ ಬುದ್ಧಿವಂತರಲ್ಲ; ಬುದ್ಧಿವಂತರೆಲ್ಲರೂ ಬುದ್ಧಿವಾದಿಗಳಲ್ಲ"[೧].

ನೇಮಿಚಂದ್ರರು ತಮ್ಮ ಸಾಹಿತ್ಯದಲ್ಲಿ ವೈಚಾರಿಕತೆಯನ್ನು ಪ್ರಕಟಿಸಿದ್ದಾರೆ. ಹೀಗೆ ಅವರು ಸಾಹಿತ್ಯದಲ್ಲಿ ಪ್ರಕಟಿಸಿರುವ ಚಿಂತನೆಗಳನ್ನು, ಸಾಧನೆಗಳನ್ನು ಪರಿಶೋಧಿಸುವ ಮತ್ತು ಇವರ ಬರಹಗಳಲ್ಲಿನ ವಿಭಿನ್ನ ವೈಚಾರಿಕ ನೆಲೆಗಳನ್ನು ಅರಿಯುವುದೇ ವೈಚಾರಿಕತೆಯ ಶೋಧನೆಯಾಗುತ್ತದೆ. ಇಂಥ ಶೋಧನೆಯ ಕಾರ್ಯವನ್ನು ನಿರ್ವಹಿಸಲು ಪಿಎಚ್.ಡಿ ಸಂಶೋಧನೆಗೆ 'ನೇಮಿಚಂದ್ರ ಅವರ ಸಾಹಿತ್ಯ : ವಿಜ್ಞಾನ ಮತ್ತು ವೈಚಾರಿಕತೆ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

೧.ಗೌರೀಶ ಕಾಯ್ಕಿಣಿ, ವಿಚಾರವಾದ, ಪುಟ-೨

ಅಧ್ಯಾಯ – ೨

ನೇಮಿಚಂದ್ರರ ಬಗೆಗೆ ಇದುವರೆಗೂ ನಡೆದಿರುವ ಅಧ್ಯಯನಗಳು

ಅಧ್ಯಾಯ – ೨

ನೇಮಿಚಂದ್ರರ ಬಗೆಗೆ ಇದುವರೆಗೆ ನಡೆದಿರುವ ಅಧ್ಯಯನಗಳು

೧೯೭೦ರ ದಶಕದ ನಂತರದ ಕೆಲವು ಸ್ತ್ರೀವಾದಿ ಲೇಖಕಿಯರ ಕೆಲವು ಕಥೆ ಹಾಗೂ ಕಾದಂಬರಿಗಳನ್ನು ನಿದರ್ಶನವಾಗಿಟ್ಟು ಕೊಂಡು, ಕನ್ನಡ ಕಥಾ ಸಾಹಿತ್ಯದಲ್ಲಿ ಕಂಡು ಬರುವ ಮಹಿಳಾ ಚಳುವಳಿಯ ಪ್ರಭಾವವನ್ನು ಗುರುತಿಸಲು ತೊಡಗುವುದು ಸೂಕ್ತವೆನಿಸುತ್ತದೆ.

ಹೊಸ ಪೀಳಿಗೆಯ ಲೇಖಕಿಯರ ಎಲ್ಲ ಕಥೆ ಕಾದಂಬರಿಗಳಲ್ಲಿಯೂ ಹಾಗೂ ಬಹುತೇಕ ಕೃತಿಗಳಲ್ಲಿ ಮಹಿಳಾ ಸಂವೇದನೆಯಿದೆ. ಅಲ್ಲಿ ಕೇವಲ ಸ್ತ್ರೀ ಬದುಕಿನ ಅನುಭವಗಳ ಯಥಾವತ್ ದಾಖಲೆಯಿದೆ. ಇನ್ನು ಕೆಲವು ರಚನೆಗಳಲ್ಲಿ ವ್ಯವಸ್ಥೆಯ ಪಾರಂಪರಿಕ ಸಂಪ್ರದಾಯಗಳು, ಪದ್ಧತಿಗಳು ಮತ್ತು ಮೌಲ್ಯಗಳನ್ನು ಸ್ವೀಕರಿಸುವಂತೆಯೂ, ಇನ್ನು ಕೆಲವೊಮ್ಮೆ ಪ್ರಶ್ನಿಸುವಂತೆಯೂ ಕಾಣುತ್ತದೆ. ಮತ್ತೆ ಪ್ರಗತಿಪರ ಹಾಗೂ ವೈಚಾರಿಕ ನೆಲೆಯಲ್ಲಿರುತ್ತವೆ.

ಈ ಕೃತಿಗಳಲ್ಲಿ ಸಾಮಾನ್ಯವಾಗಿ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯ ವಿರೋಧ ವ್ಯಕ್ತವಾಗಿರುತ್ತದೆ. ಅಂದರೆ ಮಹಿಳೆಯರ ಶೋಷಣೆಗೆ ಪೂರಕವಾಗಬಹುದಾದ ನೆಲೆಗಳನ್ನು ವಿರೋಧಿಸಲಾಗಿರುತ್ತದೆ. ಈ ವಿರೋಧ ಕಥೆಯಲ್ಲಿನ ಪಾತ್ರಗಳ ಬಾಯಲ್ಲಿ ಘೋಷಣಾ ರೂಪದಲ್ಲಿ ವ್ಯಕ್ತವಾಗಬೇಕೆಂದೇನೂ ಇಲ್ಲ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ನಡೆಯುವ ಸ್ತ್ರೀ ಶೋಷಣೆಯನ್ನು ಲೇಖಕಿ ಅಥವಾ ಲೇಖಕ ಮಹಿಳಾ ಪರವಾದ ಕಾಳಜಿಯಿಂದ, ಸಹಾನುಭೂತಿಯಿಂದ, ವಿಷಾದದ ನೆಲೆಯಲ್ಲಿ ದಾಖಲಿಸುವುದು ಶೋಷಣೆಯ ವಿರುದ್ಧ ಅವರ ಪ್ರತಿಭಟನೆಯಾಗಿರುತ್ತದೆ. ಒಟ್ಟಿನಲ್ಲಿ ಯಜಮಾನ ಸಂಸ್ಕೃತಿಯನ್ನು ಧಿಕ್ಕರಿಸುತ್ತಾರೆ.

ಪುರುಷ ಪ್ರಧಾನ ಸಂಸ್ಕೃತಿ ಹೆಣ್ಣಿನ ಮೇಲೆ ಹೇರಿರುವ ಶೀಲಾ, ಪಾವಿತ್ರ್ಯ, ಕನ್ಯತ್ವ, ಪತಿನಿಷ್ಠೆ, ಪಾತಿವ್ರತ್ಯ ಮುಂತಾದ ಮೌಲ್ಯಗಳನ್ನು ಕಥಾ ನಾಯಕಿಯರು ನಿರ್ಲಕ್ಷಿಸುತ್ತಾರೆ. ಇವುಗಳನ್ನೆಲ್ಲ ಚಲಾವಣೆಯಲ್ಲಿ ಇಲ್ಲದ ಸವಕಲು ನಾಣ್ಯಗಳೆಂದೇ ಭಾವಿಸುತ್ತಾರೆ. ಕೆಲವೊಮ್ಮೆ ವಿವಾಹವನ್ನು ಹೆಣ್ಣಿನ ಸ್ವಾತಂತ್ರ್ಯಹರಣದ ಪ್ರತೀಕವೆಂದು ಭಾವಿಸಿ ಅವಿವಾಹಿತರಾಗಿಯೇ ಉಳಿಯುವುದುಂಟು. ಕನ್ನಡ ಸಾರಸ್ವತ ಲೋಕದಲ್ಲಿ ಸ್ತ್ರೀಯ ಬಗ್ಗೆ ಕಾಳಜಿ ಹಾಗೂ ಸಂವೇದನೆ ವ್ಯಕ್ತಪಡಿಸಿರುವ ಕೆಲವೇ ಲೇಖಕಿಯರ ಸಾಲಿನಲ್ಲಿ ನೇಮಿಚಂದ್ರರ ಹೆಸರು ಪ್ರಮುಖವಾಗಿ ಕಂಡುಬರುತ್ತದೆ. ಕನ್ನಡ ಮಹಿಳಾ ಕಥಾ ಸಾಹಿತ್ಯದ ನಾಲ್ಕನೇಯ ಪೀಳಿಗೆಯ ಲೇಖಕಿಯರಲ್ಲಿ ನೇಮಿಚಂದ್ರ ಪ್ರಮುಖವಾಗಿ ಗೋಚರಿಸುತ್ತಾರೆ. ಅವರ ಕೆಲವು ಕತೆಗಳನ್ನು ವಿಮರ್ಶಕರು ತಮ್ಮದೇ ಆದ ಕ್ರಮದಲ್ಲಿ ವಿಶ್ಲೇಷಿಸಿದ್ದಾರೆ.

ನೇಮಿಚಂದ್ರರ ಕತೆಗಳಲ್ಲಿ ಕಾಣಿಸುವ ಹೊಸ ಹೆಣ್ಣಿನ ಆಕಾರವನ್ನು ಗುರುತಿಸುವ ಪ್ರಯತ್ನ ಮಾಡಬಹುದು. ಗಂಡಿನ ಎಲ್ಲ ಬಗೆಯ ದಮನಗಳಿಂದ ಮುಕ್ತರಾಗಲು ಇವರ ಬರವಣಿಗೆಯ ನಾಯಕಿ ಅಹರ್ನಿಶಿ ಹೋರಾಡುತ್ತಾಳೆ. ತನ್ನೊಳಗೂ ಹೊರಗೂ ನೇಮಿಚಂದ್ರ ಸುಮಾರು ನಾಲ್ಕು ದಶಕಗಳಿಂದ ತಮ್ಮ ನಾಯಕಿಯನ್ನು, ಅವಳ ಚಹರೆಗಳನ್ನು ರೂಪಿಸುತ್ತಲೇ ಇದ್ದಾರೆ. ಈ ಚಹರೆಯನ್ನು ಕಟ್ಟಿಕೊಳ್ಳಲು ನಡೆಸಬೇಕಾದ ಪ್ರಯತ್ನ ಅನಂತಮುಖಿಯಾದದ್ದು ಎನ್ನುವುದನ್ನು ಅವಿರತವಾದುದು ಎನ್ನುವುದನ್ನು ಇದು ಸೂಚಿಸುತ್ತದೆ. ಹೆಣ್ಣಿನ ಸವಾಲುಗಳು ಅವಳು ಎದುರಿಸುತ್ತಾ ಹೋದಷ್ಟು ಹೆಚ್ಚಾಗುವ ಪರಿಯನ್ನು ಕುರಿತು ವ್ಯಗ್ರತೆ, ಸೋಲಬಾರದೆನ್ನುವ ಛಲ, ಈ ಹೋರಾಟ ಮುಗಿದೀತೋ ಇಲ್ಲವೋ ಎನ್ನುವ ಉತ್ತರವಿರದ ಪ್ರಶ್ನೆಗಳು ಇವರ ಕತೆಗಳ ಮುಖ್ಯ ಲಕ್ಷಣಗಳು.

ನೇಮಿಚಂದ್ರರ ಕತೆಗಳು ಹಾಗೂ ಇನ್ನಿತರ ಬರವಣಿಗೆ ಕುರಿತಾಗಿ ಕೆಲವು ವಿಮರ್ಶಕರು ವಿಶ್ಲೇಷಿಸಿದ್ದಾರೆ. ಅವುಗಳನ್ನು ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಆರ್ಯಾಂಭ ಪಟ್ಟಾಭಿಯವರು ಸಂಪಾದಿಸಿದ 'ಮಹಿಳಾ ಸಾಹಿತ್ಯ ಸಮೀಕ್ಷೆ' ಕೃತಿಯೂ ಸುದೀರ್ಘವಾಗಿ ಮಹಿಳಾ ಸಾಹಿತ್ಯದ ವಿವರಗಳನ್ನು ಒದಗಿಸುತ್ತದೆ. ಸ್ವಾತಂತ್ರ್ಯೋತ್ತರ ಕನ್ನಡ ಮಹಿಳಾ ಸಾಹಿತ್ಯ ಭಾಗದಲ್ಲಿ ಸ.ಜಿ.ಉಷಾದೇವಿಯವರು ಬರೆದ ಲೇಖನವು ನೇಮಿಚಂದ್ರರ ಕತೆಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡುತ್ತದೆ. ಲೇಖನದಲ್ಲಿ ನೇಮಿಚಂದ್ರರ ಮೂರು ಕಥಾ ಸಂಕಲನಗಳನ್ನು ಪ್ರಸ್ತಾಪಿಸುತ್ತಾ ಲೇಖಕಿಯ ಕತೆಯ ವಿಚಾರವಂತಿಕೆಯ ಜೊತೆಗೆ ಸ್ವಂತಿಕೆಯನ್ನು ಬೆಸೆಯುತ್ತವೆ ಎಂದು ಹೇಳುತ್ತಾರೆ.

ನೇಮಿಚಂದ್ರ ಅವರ ಬಹುಪಾಲು ಕತೆಗಳ ಒಂದು ಸಾಮಾನ್ಯ ಲಕ್ಷಣವೆಂದರೆ ಅನಿರೀಕ್ಷಿತ ಎಂಬಂತೆ ಇವರ ಕತೆಗಳ ನಾಯಕಿಯರಿಗೆ ಬದುಕು ಆಘಾತಗಳ ಮೂಲಕ ಸವಾಲನ್ನು ಒಡ್ಡುತ್ತದೆ. ಡೈವೋರ್ಸ್, ಸಾವು. ಹೀಗೆ ಎದುರಾಗುವ ದಿವ್ಯಗಳ ಎದುರಿಗೆ ಮೊದಲು ಕಂಗಾಲಾಗಿ ಮತ್ತೆ ಆತ್ಮಬಲದಿಂದಲೇ ಚೇತರಿಸಿಕೊಂಡು ಈ ಮಹಿಳೆಯರು ಹೊಸ ಬದುಕಿನ ಕಡೆಗೆ ನಡೆಯುತ್ತಾರೆ. ಆ ವ್ಯಕ್ತಿತ್ವಗಳು ಹೊಚ್ಚ ಹೊಸದಾಗಿ ಕಂಗೊಳಿಸುತ್ತವೆ. ಆತ್ಮಬಲ ಬದುಕು ಮತ್ತು ವ್ಯಕ್ತಿತ್ವಗಳಿಗೆ ತಂದು ಕೊಡುವ ಆತ್ಮಸೌಂದರ್ಯವನ್ನು ಈ ಪಾತ್ರಗಳು ತಾವು ಅನುಭವಿಸುತ್ತವೆ. ಬೇಕಾಗಿ, ಬೇಡವಾಗಿ ಅದನ್ನು ಬೆರಗಿನಿಂದಲೋ, ಅಸೂಯೆಯಿಂದಲೋ ಅನಿವಾರ್ಯವಾಗಿಯೋ ಒಪ್ಪುವ ಹಕ್ಕೊತ್ತಾಯವನ್ನು ಈ ಮಹಿಳೆಯರು ತರುತ್ತಾರೆ.

'ನೇಮಿಚಂದ್ರರ ಕತೆಗಳಲ್ಲಿನ ನಾಯಕಿಯರು ಸಾಮಾನ್ಯವಾಗಿ ಶಶಿ ಮತ್ತು ನಾಯಕನ ಪಾತ್ರದ ಹೆಸರು ರವಿ. ಈ ನಾಯಕ, ನಾಯಕಿ ಎನ್ನುವುದಕ್ಕೆ ಬದಲು ಇನ್ನೇನಾದರೂ

ಪರಿಕಲ್ಪನೆಗಳನ್ನು ಕಟ್ಟಬೇಕು ಅನಿಸುತ್ತಿದೆ!'[೧] ಸೂರ್ಯಚಂದ್ರರ ಹೆಸರುಗಳನ್ನು ತಮ್ಮ ಬರವಣಿಗೆಯುದ್ದಕ್ಕೂ ಬಳಸುವಲ್ಲಿ ನೇಮಿಚಂದ್ರ ಅವರಿಗೆ ನಿರ್ದಿಷ್ಟ ಉದ್ದೇಶಗಳಿವೆ. ತಮ್ಮ ಶೋಧದ ನಿರಂತರತೆಯನ್ನು ಕಾಪಾಡಿಕೊಳ್ಳಲು ಪ್ರತಿಪಾದಿಸಲು ಇದು ಅವರಿಗೆ ಸಹಾಯಕವಾಗಿದೆ. ಸೂರ್ಯಚಂದ್ರರು ಮಾನವ ಸಮುದಾಯದ ಎರಡು ಮುಖ್ಯ ಭೌಗೋಳಿಕ ಸಂಗತಿಗಳು ಎನ್ನುವುದರ ಜೊತೆಗೆ ಅವು ಎರಡು ಅದಿಮ ರೂಪಕಗಳೂ ಹೌದು. ಕೆಲವೆಡೆ ರವಿ ಕಳಾಹೀನ ಮತ್ತೆ ಕೆಲವೆಡೆ ಶಶಿ ಕಳಾಹೀನ. ಇವರಿಬ್ಬರೂ ಒಟ್ಟಿಗೆ ಪ್ರಜ್ವಲಿಸುವ ಗಳಿಗೆಗಾಗಿ ಲೇಖಕಿ ಶೋಧಿಸುತ್ತಿದ್ದಾರೆ. ಗಂಡು – ಹೆಣ್ಣಿನ ನಡುವಿನ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ, ಸಮಾನ ಸ್ತರದ ಬದುಕು ನಡೆಸಬೇಕಾದ ಕ್ಷಣಗಳಿಗಾಗಿ ಅವರು ಹುಡುಕುತ್ತಿದ್ದಾರೆ. ಈ ಸೃಜನಶೀಲ ಹುಡುಕಾಟವೇ ನೇಮಿಚಂದ್ರ ಅವರ ಬರವಣಿಗೆಯನ್ನು ಪ್ರಭಾವಿಸಿವೆ.

ಶಶಿ–ರವಿ ಪರಸ್ಪರ ವಿರುದ್ಧವೆಂಬಂತೆ ಕಂಡರೂ ಒಂದು ಇನ್ನೊಂದನ್ನು ಅನುಸರಿಸುತ್ತಲೇ ಇರುತ್ತದೆ. ಯಾವ ಶ್ರೇಣಿಕರಣಗಳು, ಸೋಲು–ಗೆಲುವು ಹಂಗಿಲ್ಲದೆ, ಭಾರವಿಲ್ಲದೆ, ಎರಡರ ಧಾತುಗಳು, ಸ್ವಭಾವಗಳು ಬೇರೆ. ಆದರೆ ಪ್ರಕೃತಿಗೂ ಮನುಷ್ಯ ಪ್ರಕೃತಿಗೂ ಎರಡೂ ಬೇಕೆ ಬೇಕು. ಎರಡರ ಬಗೆಗೂ ಮನುಷ್ಯನಿಗೆ ಸಮಾನವಾದ ಪ್ರೀತಿ ಮತ್ತು ಅವಲಂಬನೆಯಿದೆ. ಎರಡರ ಅಸ್ತಿತ್ವವು ಮೂಲಭೂತ ಅಗತ್ಯ ಸ್ತ್ರೀವಾದವನ್ನು Separate But equal ಎಂದು ವ್ಯಾಖ್ಯಾನಿಸುತ್ತೇವಲ್ಲ. ಸೂರ್ಯ–ಚಂದ್ರರು ಅದನ್ನೇ ರೂಪಕಾತ್ಮಕವಾಗಿ ಸಂಕೇತಿಸುತ್ತಿದ್ದಾರೆ. ಮಹಿಳೆಯರ ಬರವಣಿಗೆಯನ್ನು ಇಂಥ ಅತಿಕ್ರಮಿಸುವ ಓದಿಗೆ ಒಳಪಡಿಸುವ ಅಗತ್ಯ ಖಂಡಿತಕ್ಕೂ ಇದೆ.

ಗಿರಿಜಾಶಾಸ್ತ್ರೀಯವರ "ಆಧುನಿಕ ಕನ್ನಡ ಸಣ್ಣಕತೆಗಳ ಸ್ತ್ರೀವಾದಿ ಅಧ್ಯಯನ"[೨] ಎನ್ನುವ ಮಹಾಪ್ರಬಂಧವು ನಂತರದಲ್ಲಿ 'ಕಥಾಮಾನಸಿ' ಎಂಬ ಪುಸ್ತಕವಾಗಿ ಪ್ರಕಟವಾಗಿದೆ. ಇವರು ನವ್ಯೋತ್ತರ ಕಥಾ ಸಾಹಿತ್ಯದ ವಿಭಿನ್ನ ಧಾರೆಗಳನ್ನು ವಿಶ್ಲೇಷಿಸುತ್ತಾ ನೇಮಿಚಂದ್ರರ ಕತೆಗಳಲ್ಲಿನ ಒಳತೋಟಿಗಳನ್ನು ವಿವರಿಸಿದ್ದಾರೆ. ಮಾನವೀಯ ಸಂಬಂಧಗಳ ನೆಲೆಯಲ್ಲಿ ಸ್ತ್ರೀ ಪ್ರಜ್ಞೆಯನ್ನೇ ಶೋಧಿಸುತ್ತಾ ಅನುಭವದ ಸಾಚಾತನವನ್ನು ತಮ್ಮ ಕಥೆಗಳ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡಿರುವ ಯುವ ಬರಹಗಾರ್ತಿ ನೇಮಿಚಂದ್ರ ಕನ್ನಡಕ್ಕೆ ಬಹಳ ಒಳ್ಳೆಯ ಕತೆಗಳನ್ನು ಕೊಟ್ಟಿದ್ದಾರೆಂದು ತಮ್ಮ ನಿಲುವನ್ನು ವ್ಯಕ್ತಪಡಿಸಿದ್ದಾರೆ.

೧.ಎಂ.ಎಸ್.ಆಶಾದೇವಿ; ಪ್ರಜಾವಾಣಿ ಪತ್ರಿಕೆ, ಪುರವಣಿ, ದಿನಾಂಕ : ೧೯–೧೦–೨೦೧೪

೨.ಗಿರಿಜಾಶಾಸ್ತ್ರೀ; ಆಧುನಿಕ ಕನ್ನಡ ಸಣ್ಣಕಥೆಗಳ ಸ್ತ್ರೀವಾದಿ ಅಧ್ಯಯನ, ಪುಟ–೫೨

ಕೆ.ಅಕ್ಕಮಹಾದೇವಿಯವರು ನೇಮಿಚಂದ್ರರು ರಚಿಸಿರುವ ಮಹನೀಯ ಮಹಿಳೆಯರ ಜೀವನಚರಿತ್ರೆಗಳನ್ನು ಪರಿಚಯಿಸಿದ್ದಾರೆ. ಮಹಿಳೆಯರ ಬದುಕಿನ ನೋವು-ನಲಿವುಗಳನ್ನು ಬರವಣಿಗೆಯ ಮೂಲಕ ಬಿಚ್ಚಿಡುವ ಪ್ರಯತ್ನದಲ್ಲಿ ಈ ಆತ್ಮಚರಿತೆಗಳು ದಾಖಲೆಯ ಸಾಧನೆಗೈದಿವೆಯೆಂದು ವಿವರಗಳನ್ನು ನೀಡಿದ್ದಾರೆ.

'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ'[೧] ಎಂಬ ಪಿಎಚ್.ಡಿ ಪ್ರಬಂಧದಲ್ಲಿ ಮಲ್ಲಿಕಾಘಂಟಿಯವರು ದಲಿತ - ಬಂಡಾಯದ ಬರಹಗಾರರನ್ನು ಚರ್ಚಿಸುತ್ತಾ ನೇಮಿಚಂದ್ರರು ನಗರೀಕರಣ ಮತ್ತು ಯಾಂತ್ರೀಕರಣಗಳು ಗಂಡು ಹೆಣ್ಣಿನ ನಡುವಣ ಸಂಬಂಧಗಳ ಮೇಲೆ ವಿಶೇಷ ಪರಿಣಾಮ ಬೀರಿವೆ ಎಂಬುದನ್ನು ಸಾಬೀತು ಪಡಿಸುವಂತೆ ವಿಶಿಷ್ಟ ಶೈಲಿಯಲ್ಲಿ ಕತೆಗಳನ್ನು ರಚಿಸಿದ್ದಾರೆಂದು ಅಭಿಪ್ರಾಯ ಪಡುತ್ತಾರೆ.

ಎಲ್.ಹನುಮಂತಯ್ಯನವರ 'ಬಂಡಾಯ ಕತೆಗಳಲ್ಲಿನ ದಲಿತ ಪ್ರಜ್ಞೆ'[೨] ಪಿಎಚ್.ಡಿ ಪ್ರಬಂಧವು 'ಕಥಾಕಥನ' ಎಂಬ ಹೆಸರಿನಲ್ಲಿ ಪುಸ್ತಕವಾಗಿ ಪ್ರಕಟವಾಗಿದೆ. ಲಿಂಗಭೇದ ನೀತಿ ಕತೆಗಾರ್ತಿಯರ ಕೌತುಕಗಳು ಎಂಬ ಭಾಗದಲ್ಲಿ ಸಾರಾ ಅಬೂಬಕರ್‌ರ ಸಾಹಿತ್ಯ, ವೈದೇಹಿಯವರ ಕತೆಗಳು, ವೀಣಾರ ಕತೆಗಳು, ಬಾನುಮುಷ್ತಾಕ್‌ರ ಕತೆಗಳನ್ನು ವಿಶ್ಲೇಷಿಸಿದ್ದಾರೆ. ವೀಣಾ ಶಾಂತೇಶ್ವರ ಮತ್ತು ನೇಮಿಚಂದ್ರರ ಕತೆಗಳಲ್ಲಿ ಸಮಾನ ಅಂಶಗಳಿವೆ ಎಂದು ವಿವರಿಸುತ್ತಾರೆ. ಮಹಿಳೆಯರ ದಿಟ್ಟತನವನ್ನು ಚಿತ್ರಿಸುವಲ್ಲಿ ಲೇಖಕಿಯ ಒಳಮನಸ್ಸು ಕಾರ್ಯ ನಿರ್ವಹಿಸುತ್ತದೆ ಎನ್ನುತ್ತಾರೆ.

ಎಚ್.ಎಸ್.ಶ್ರೀಮತಿಯವರು ಸಂಪಾದಿಸಿರುವ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ'[೩] ಎಂಬ ಕೃತಿಯಲ್ಲಿ ನೇಮಿಚಂದ್ರರ ಕಥಾ ಸಾಹಿತ್ಯವನ್ನು ವಿಶ್ಲೇಷಿಸಲಾಗಿದೆ. ೧೯೭೫ರ ನಂತರದ ಕನ್ನಡ ಮಹಿಳಾ ಸಾಹಿತ್ಯದ ಭಾಗದಲ್ಲಿ ನೇಮಿಚಂದ್ರರ ಕತೆಗಳ ವಸ್ತುವೈವಿಧ್ಯತೆ, ಪಾತ್ರ, ಸಂಭಾಷಣೆಯು ಹೊಸತನದಿಂದ ಕೂಡಿದೆ ಎಂದು ಕೆ.ಆರ್.ಸಂಧ್ಯಾರೆಡ್ಡಿಯವರು ಅಭಿಪ್ರಾಯ ಪಡುತ್ತಾರೆ. ಪರಂಪರಾಗತ ಸ್ತ್ರೀ-ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿಕೊಳ್ಳುವ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ ಎಂದು ವಿವರಿಸುತ್ತಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹೊರತಂದಿರುವ ೧೯೯೨ರ 'ಸಾಹಿತ್ಯ ವಿಮರ್ಶೆ'ಯಲ್ಲಿ ಕೆ.ಕೇಶವಶರ್ಮ ಅವರು ಬರೆದಿರುವ 'ಆಧುನಿಕ ಸಣ್ಣಕತೆಗಳಲ್ಲಿ ಮಹಿಳಾ ಸಮಸ್ಯೆ'

೧.ಮಲ್ಲಿಕಾಘಂಟಿ; ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ, ಪುಟ-೬

೨. ಎಲ್.ಹನುಮಂತಯ್ಯ; ಬಂಡಾಯ ಕಥೆಗಳಲ್ಲಿನ ದಲಿತ ಪ್ರಜ್ಞೆ, ಪುಟ-೧೦೨

೩. ಎಚ್.ಎಸ್.ಶ್ರೀಮತಿ; ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪುಟ-೭೮

ಎಂಬ ಲೇಖನವು ನೇಮಿಚಂದ್ರರ ಸಾಹಿತ್ಯಾಭ್ಯಾಸಿಗಳಿಗೆ ಪೂರಕ ಮಾಹಿತಿ ನೀಡುತ್ತದೆ. ನವೋದಯ, ಪ್ರಗತಿಶೀಲ, ನವ್ಯಕತೆಗಾರ್ತಿಯರ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತಾ ದಲಿತ – ಬಂಡಾಯ ಸಂದರ್ಭದ ನೇಮಿಚಂದ್ರರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ಸ್ತ್ರೀ ಸಮಸ್ಯೆಯ ನೆಲೆಗಳನ್ನು ಗುರುತಿಸಿದ್ದಾರೆ.

ಬರಗೂರು ರಾಮಚಂದ್ರಪ್ಪನವರು ಪ್ರಧಾನ ಸಂಪಾದಕರಾಗಿರುವ ಕನ್ನಡ ಸಾಹಿತ್ಯ ಸಮೀಕ್ಷೆ – ೧೯೯೨ ಎನ್ನುವ ಆಕಾಡೆಮಿಯ ಪುಸ್ತಕವಾದ 'ಸಣ್ಣಕತೆ'ಯ ಭಾಗದಲ್ಲಿ ನೇಮಿಚಂದ್ರರ ಕತೆಗಳ ಕುರಿತಾಗಿ ನಟರಾಜ್ ಹುಳಿಯಾರ್ ಉಪಯುಕ್ತ ಮಾಹಿತಿ ನೀಡಿದ್ದಾರೆ. ಮಹಾಬಲಮೂರ್ತಿ, ಪಿ.ಶ್ರೀನಿವಾಸರಾವ್ ಕತೆಗಳಿಗಿಂತ ನೇಮಿಚಂದ್ರರ ಕತೆಗಳಲ್ಲಿ ಸ್ತ್ರೀವಾದ ಶೋಧನೆ ಸ್ಪಷ್ಟವಾಗಿದೆ ಎಂಬು ಅಭಿಪ್ರಾಯ ಪಡುತ್ತಾರೆ. ಆಧುನಿಕ ಹೆಣ್ಣನ್ನು ಉದಾತ್ತೀಕರಿಸುವಾಗಲೂ ನೇಮಿಚಂದ್ರರ ನಿರೂಪಣಾ ಪ್ರಜ್ಞೆ ಅಲ್ಲಿನ ವಿರೋಧಾಭಾಸಗಳತ್ತ ಒಂದು ಕಣ್ಣನ್ನಿಟ್ಟೇ ಇರುತ್ತದೆ. ಇವರ ಹಲವು ಕತೆಗಳಲ್ಲಿ ಮತ್ತೆ ಮತ್ತೆ ಹಾಜರಾಗುವ ಆಧುನಿಕ ಬದುಕಿನ ಛಿದ್ರತೆ, ತಲ್ಲಣಗಳು ಕತೆಗಳನ್ನು ದಟ್ಟವಾಗಿಸುವ ಪ್ರಯತ್ನ ಮಾಡುತ್ತವೆಯೆಂದು ವ್ಯಾಖ್ಯಾನಿಸುತ್ತಾರೆ.

ಜಿ.ಎಸ್.ಅಮೂರ ಅವರು ತಮ್ಮ 'ಸಾತ್ವಿಕ ಪಥ ಮತ್ತು ಅರ್ಥಲೋಕ'[೧] ಎಂಬ ಎರಡು ಕೃತಿಗಳಲ್ಲಿ ನೇಮಿಚಂದ್ರರ ಕತೆಗಳನ್ನು ವಿಮರ್ಶಿಸಿದ್ದಾರೆ. ಹಗುರವಾದ ಕನಸುಗಾರಿಕೆ ಅಥವಾ ತೀವ್ರವಾದ ಪುರುಷದ್ವೇಷ ಇಂಥ ವೈಪರೀತ್ಯಗಳಿಂದ ಮುಕ್ತರಾಗಿ ಕೇವಲ ಅನುಭವದ ಸಾಚಾತನವನ್ನೇ ನಂಬಿ ಸಾಹಿತ್ಯ ರಚನೆಗೆ ಕೈ ಹಾಕಿರುವ ನೇಮಿಚಂದ್ರರ ಬರವಣಿಗೆ ಮಹತ್ವವಾದುದು ಎಂದು ಅಭಿಪ್ರಾಯ ಪಡುತ್ತಾರೆ.

ಕರೀಗೌಡ ಬೀಚನಹಳ್ಳಿಯವರು 'ಶತಮಾನದ ಸಣ್ಣಕತೆಗಳ ಸಮೀಕ್ಷೆ'[೨] ಕೃತಿಯಲ್ಲಿ ಸ್ತ್ರೀ ಸಂವೇದನೆಯನ್ನು ಚರ್ಚಿಸಿದ್ದಾರೆ. ಹೀಗೆ ಚರ್ಚಿಸುವಾಗ ನೇಮಿಚಂದ್ರರ ಕತೆಗಳು ಸ್ತ್ರೀ ಸಂವೇದನೆಯನ್ನು ದಟ್ಟವಾಗಿ ಪ್ರಭಾವಿಸಿರುವುದನ್ನು ಪ್ರಸ್ತಾಪಿಸುತ್ತಾರೆ. ಇವರ ಕತೆಗಳು ಸ್ತ್ರೀ ಶಕ್ತಿ ಬಿಂಬಿಸುವ ಕತೆಗಳಾಗಿ ಕಾಣಿಸಿಕೊಳ್ಳುತ್ತವೆ. ಮಹಿಳೆಗೆ ಅವಳದೇ ಆದ ಹೆಣ್ಣುತನದ ವ್ಯಕ್ತಿತ್ವ ಆಯ್ಕೆಗಳು ಇರುತ್ತವೆ ಎಂಬ ತತ್ವವನ್ನು ನೇಮಿಚಂದ್ರರ ಕತೆಗಳು ಧ್ವನಿಪೂರ್ಣವಾಗಿ ಚಿತ್ರಿಸುತ್ತವೆ ಎಂದು ವಿಮರ್ಶಿಸಿದ್ದಾರೆ.

೧.ಜಿ.ಎಸ್.ಅಮೂರ; ಸಾತ್ವಿಕ ಪಥ, ಪುಟ–೫೦

೨.ಕರೀಗೌಡ ಬೀಚನಹಳ್ಳಿ; ಶತಮಾನದ ಸಣ್ಣಕಥೆಗಳ ಸಮೀಕ್ಷೆ

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ‘ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ’ ಕೃತಿಯಲ್ಲಿನ ಎಸ್.ವಿ.ಪ್ರಭಾವತಿಯವರ “ಆಧುನಿಕ ಕನ್ನಡ ಮಹಿಳಾ ಕಾವ್ಯ ಮತ್ತು ಕಥಾ ಸಾಹಿತ್ಯ’ ಎಂಬ ಲೇಖನಗಳು ನೇಮಿಚಂದ್ರರ ಕಥಾಸಂಕಲನಗಳನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಷಿಸುತ್ತವೆ. ಎಸ್.ವಿ.ಪ್ರಭಾವತಿಯವರು ತಮ್ಮ ಲೇಖನದಲ್ಲಿ ‘ವೈದೇಹಿ, ನೇಮಿಚಂದ್ರರ ಬರವಣಿಗೆಯ ಹೊಸತನ, ಸರಳತೆ, ಕಲಾತ್ಮಕತೆ, ಸ್ತ್ರೀವಿಶಿಷ್ಟ ದೃಷ್ಟಿಕೋನಗಳಿಂದ ಕೂಡಿ ಪ್ರಗತಿಪರರಾಗಿದ್ದೂ ಕಲಾತ್ಮಕತೆಯನ್ನು ಸಿದ್ಧಿಸಿಕೊಂಡಿದ್ದಾರೆ”[೧] ಎಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ.

ಡಾ.ಎ.ಮುನಿಶಾಮಪ್ಪ ಅವರು ತಮ್ಮ ಪಿಎಚ್.ಡಿ ಪ್ರಬಂಧ ‘ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ’ದಲ್ಲಿ ಈ ರೀತಿ ವಿಶ್ಲೇಷಿಸಿದ್ದಾರೆ. “ಕನ್ನಡ ಮಹಿಳಾ ಕಥಾ ಸಾಹಿತ್ಯದ ನಾಲ್ಕನೇಯ ಪೀಳಿಗೆಯ ಲೇಖಕಿಯರಲ್ಲಿ ನೇಮಿಚಂದ್ರ ಅವರು ಸಂಪೂರ್ಣ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವವರು. ಅವರ ಕಲ್ಪನೆಯ ಸ್ತ್ರೀ ಪಾತ್ರಗಳು ಬಹಳ ವೈಚಾರಿಕ ಆಲೋಚನೆಯುಳ್ಳ, ಕೆಲವೊಮ್ಮೆ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಗೆ ಆಘಾತವುಂಟು ಮಾಡುವಂಥ ಕ್ರಾಂತಿಕಾರಿಗಳಾಗಿದ್ದಾರೆ. ಪುರುಷ ಪ್ರಧಾನ ಸಂಸ್ಕೃತಿ ಸ್ತ್ರೀಯರ ಮೇಲೆ ಹೇರಿರುವ ಶೀಲ, ಪಾತಿವ್ರತ್ಯ, ಕನ್ಯತ್ವಗಳಂಥ ಮೌಲ್ಯಗಳನ್ನು ಗಂಭೀರವಾಗಿ ಪರಿಗಣಿಸದ ಹಾಗೂ ಅವುಗಳನ್ನು ಉಲ್ಲಂಘಿಸುವಂಥ ಧೈರ್ಯವುಳ್ಳವರು. ಎಲ್ಲ ಸಮಸ್ಯೆಗಳನ್ನು ಸುಲಭವಾಗಿ ಪರಿಹರಿಸಿಕೊಳ್ಳುವ ದಿಟ್ಟ ಹಾಗೂ ಛಲಗಾತಿಯರು ನೇಮಿಚಂದ್ರ ಅವರ ಕಥೆಗಳಲ್ಲಿದ್ದಾರೆ”[೨].

ಟಿ.ಪಿ.ಅಶೋಕ ಅವರು ತಮ್ಮ ‘ಸಾಹಿತ್ಯ ಸಂಬಂಧ’ ವಿಮರ್ಶಾ ಕೃತಿಯಲ್ಲಿ ನೇಮಿಚಂದ್ರರ ಕತೆಗಳನ್ನು ವಿಮರ್ಶಿಸಿದ್ದಾರೆ. ಅಂತಃಕರಣವನ್ನು ಕಲಕುವಂಥ ಹಲವು ಕತೆಗಳು ಇಲ್ಲಿವೆ. ನೇಮಿಚಂದ್ರ ತುಂಬಾ ವಿಪುಲವಾದ ಬರವಣಿಗೆಯನ್ನೇನೂ ಮಾಡಿಲ್ಲ. ಆದರೆ ತಮ್ಮ ಇದುವರೆಗಿನ ಬರವಣಿಗೆಯಲ್ಲಿ ಅವರು ಸೂಕ್ಷ್ಮ ನಿರೀಕ್ಷಣೆ, ಸುಲಭವಾಗಿ ದ್ರವಿಸದ ವೈಚಾರಿಕತೆ, ಏನನ್ನೂ ಸರಳೀಕರಿಸದ ಸಮಗ್ರ ಸಂಕೀರ್ಣ ದೃಷ್ಟಿಕೋನಗಳಿಂದಾಗಿ ಮುಖ್ಯವಾಗಿದ್ದಾರೆ. ಅವರು ತಮ್ಮ “ಸಾಹಿತ್ಯ ಮತ್ತು ವಿಜ್ಞಾನ’ ಎಂಬ ಪುಸ್ತಕದ ಮೂಲಕ ತಮ್ಮ ಪ್ರತಿಭೆಯ ಮತ್ತೊಂದು ಮುಖವನ್ನು ಕಾಣಿಸಿದ್ದಾರೆ. ನೇಮಿಚಂದ್ರ ಅವರ ಬರವಣಿಗೆ ನಮ್ಮಲ್ಲಿ ಹೊಸ ಅರಿವಿಗೆ ಇಂಬು ಕೊಡುವಂತಿದೆ ಎಂಬುದಂತೂ ಸತ್ಯ”[೩] ಎಂಬ ಅಭಿಪ್ರಾಯ ಪಡುತ್ತಾರೆ.

೧.ಎಸ್.ವಿ.ಪ್ರಭಾವತಿ; ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಪುಟ-೧೩

೨. ಡಾ.ಎ.ಮುನಿಶಾಮಪ್ಪ; ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಪುಟ-೫೩೮

೩. ಟಿ.ಪಿ.ಅಶೋಕ; ಸಾಹಿತ್ಯ ಸಂಬಂಧ, ಪುಟ-೧೩೨

ಎಂ.ಎಸ್.ಆಶಾದೇವಿಯವರು ನೇಮಿಚಂದ್ರರ ಕತೆಗಳಲ್ಲಿ ಕಾಣಿಸುವ ಹೊಸ ಹೆಣ್ಣಿನ ಆಕಾರವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಪ್ರತಿಭಾ ಮತ್ತು ನೇಮಿಚಂದ್ರರ ಬರವಣಿಗೆಗಳಲ್ಲಿ ಸಾಮ್ಯತೆ ಇದೆ. ಇವರಿಬ್ಬರೂ ಹೊಸ ಹೆಣ್ಣು ಎನ್ನುವವಳು ಸ್ವಯಂಭು ಎಂದೂ ನಂಬಿದವರು. ತನಗೆ ಬೇಕಾದಾಗ ಹೆಣ್ಣು ಬದಲಾಗಬೇಕು ಎನ್ನುವ ಕಟು ಸತ್ಯವನ್ನು ಎದುರಿಸಲು ಬೇಕಾಗುವ ಮನಸ್ಥಿತಿಯನ್ನು ಕಟ್ಟಿಕೊಳ್ಳುವ ಜೊತೆಯ ಪಯಣಿಗರು ನೇಮಿಚಂದ್ರರ ಕತೆಗಳಲ್ಲಿನ ಹೆಣ್ಣಿಗೆ ಸವಾಲುಗಳು, ವ್ಯಗ್ರತೆ, ಸೋಲಬಾರದೆನ್ನುವ ಛಲ ಇವರ ಕತೆಗಳ ಲಕ್ಷಣವೆಂದು ವಿಶ್ಲೇಷಿಸಿದ್ದಾರೆ.

ಉದಾಹರಣೆಗೆಂದು ಎರಡು ಕತೆಗಳನ್ನು ನೋಡೋಣ. 'ಕಪ್ಪು ಮೋಡ ಬೆಳ್ಳಿ ಅಂಚು' ಮತ್ತು 'ಹೊಸಹುಟ್ಟು'. ಮಧ್ಯಮ ವರ್ಗದ ಹೆಣ್ಣೊಬ್ಬಳು ಡೈವೋರ್ಸ್ ನಂತರ ತನ್ನ ಬದುಕನ್ನು ಮೊದಲಿನಿಂದ ಶುರು ಮಾಡಿ ನಿಧಾನವಾಗಿ ಗೆಲ್ಲುವುದು ಮೊದಲ ಕತೆಯಾದರೆ, ಹೆಣ್ಣಿನ ಮೂಲ ಲಕ್ಷಣವೆಂದು ಒಪ್ಪಲಾಗಿರುವ, ಒಪ್ಪಿಸಲಾಗಿರುವ ತಾಯ್ತನದ ಸವಾಲನ್ನು ಭಿನ್ನವಾಗಿ ಎದುರಿಸಿ, ಗೆಲ್ಲುವ ಹೆಣ್ಣಿನ ಕತೆ ಎರಡನೆಯದು ಮದುವೆ ಮತ್ತು ತಾಯ್ತನ ಎನ್ನುವ ಎರಡು 'ಪರಮ ಪದಗಳು' ಸಿಕ್ಕಿ ಬಿಟ್ಟರೆ ಅಲ್ಲಿಗೆ ಬದುಕು ಸಾರ್ಥಕವಾಯಿತು ಎನ್ನುವ ನೆಲೆಗಳನ್ನು ಹೆಣ್ಣಿನಲ್ಲಿ ಹೇಗೆ ಬಿತ್ತಲಾಗಿದೆಯೆಂದರೆ ಬದುಕಿನ ಮಿಕ್ಕ ಆಯಾಮಗಳು ಇಷ್ಟೇ ಮುಖ್ಯವಾದವು ಎನ್ನುವ ಜ್ಞಾನೋದಯ ಸ್ವತಃ ಹೆಣ್ಣಿಗೇ ಅಪಾರ ಕಷ್ಟದ್ದು ಮತ್ತು ಅನೇಕ ಬಾರಿ ಬೇಡವಾದದ್ದು ಆಗುವ ಮಟ್ಟಿಗೆ ಇದಕ್ಕಿಂತ ಅಪಾಯದ ಸಂಗತಿಯೆಂದರೆ ಉಸಿರು ಕಟ್ಟಿಸುವ ದಾಂಪತ್ಯದಲ್ಲೂ 'ಹೆಣ್ಣು ಇಟ್ಟಾಂಗೆ ಇರುವೆನೊ ಹರಿಯೆ' ಎನ್ನುವ ವಿಧಿವಾದಿಯಾಗಿ ಬಿಡುವುದು. ಮೊದಲ ಕತೆಯ ನಾಯಕಿ ಮಧುವಿನ ಪ್ರಯಾಣ ಸೊನ್ನೆಯಿಂದ ಎಂಬಂತೆ ಪ್ರಾರಂಭವಾಗುವುದು. ಇಂಥ ಮನಸ್ಥಿತಿಯಿಂದಲೇ ಬದುಕು ಕೊಟ್ಟಷ್ಟು ಸಾಕು ಎಂದು ಕೊಂಡವಳಿಗೆ ಗಂಡ ಕೊಟ್ಟ ಡೈವೋರ್ಸ್‌ನಿಂದ ಇನ್ನು ಮುಂದೆ ಶಬ್ಧವಿಲ್ಲ ಎನ್ನುವಂಥ ಆಘಾತವಾಗುತ್ತದೆ. ಆತ್ಮಹತ್ಯೆಗೂ ಆಕೆ ಪ್ರಯತ್ನಿಸುತ್ತಾಳೆ. ಗೆಳತಿಯೊಬ್ಬಳು ನೀಡುವ ಮಾರ್ಗದರ್ಶನದಲ್ಲಿ ಸತ್ಯವಿದೆ ಎಂದು ಅನಿಸಿದರೂ ಅದನ್ನು ಅನುಸರಿಸಿ ಬದುಕು ಕಟ್ಟಿಕೊಳ್ಳುವ ರಿಸ್ಕ್, ಶ್ರಮ ತೆರೆದುಕೊಳ್ಳಬೇಕೇ, ಬೇಡವೇ ಎನ್ನುವುದಕ್ಕಿಂತ ಹೆಚ್ಚಾಗಿ ತನಗೆ ಆ ಸಾಮರ್ಥ್ಯವೇ ಇಲ್ಲ ಎನ್ನುವ ಕೀಳರಿಮೆಯೂ ಸೇರಿ ಇವಳಿಗೆ ಬದುಕು ಭಾರ, ಜಡ ಎನಿಸಲು ಶುರುವಾಗುತ್ತದೆ.

ಗಂಡ ಕೊಡುವ ಸಾವಿರದೈನೂರು ರೂಪಾಯಿ ಭಿಕ್ಷೆ ಎನಿಸಿದರೂ ತೆಗೆದುಕೊಳ್ಳದೇ ವಿಧಿಯೂ ಇಲ್ಲ ಎನ್ನುವ ಅಂಶವೂ ಅವಳಲ್ಲಿ ಸ್ವಪ್ರಜ್ಞೆಯನ್ನು ಎಚ್ಚರಿಸುವಲ್ಲಿ ವಿಫಲವಾಗುತ್ತದೆ, ಎನ್ನುವ ಅಂಶ ಅವಲಂಭಿತ ಸ್ಥಿತಿಯನ್ನು ಹೆಣ್ಣು ತನ್ನ ಅಸ್ತಿತ್ವದ ವಿನ್ಯಾಸ ಎಂದೇ ಒಪ್ಪಿಕೊಂಡಿರುವ ಸತ್ಯವನ್ನು ಹೇಳುತ್ತದೆ. ಆದರೆ ಇದರ ಜೊತೆಗೆ ಒಳಗೇ ಎಲ್ಲೋ ಮೂಲೆಯಲ್ಲಿ ಪ್ರಶ್ನೆಯೊಂದು

ಏಳುತ್ತದೆ. ಆ ಪ್ರಶ್ನೆ ಅವಳಿಗೆ ಖಚಿತವಾದಾಗಲೇ ಅದು ಹೆಣ್ಣನ್ನು ನಿಜವಾದ ಅರ್ಥದಲ್ಲಿ ಜಾಗೃತಗೊಳಿಸುತ್ತದೆ.

ಈ ಕತೆ'ಯ ನಾಯಕಿಗೂ ಈ ಪ್ರಶ್ನೆ ಸ್ಪಷ್ಟವಾಗುತ್ತದೆ. ಅಂಗಡಿಯೊಂದರಲ್ಲಿ ಅವಮಾನದ ಪ್ರಸಂಗವನ್ನು ಅನುಭವಿಸಿದಾಗ ಈ ಪ್ರಸಂಗ ಅವಳಲ್ಲಿ 'ಚಿಮ್ಮು ಹಲಗೆಯಂತೆ' ಕೆಲಸ ಮಾಡುತ್ತದೆ, ನಿಧಾನವಾಗಿ ಆತ್ಮಗೌರವವನ್ನು ಪಡೆಯುವ ದಾರಿಯನ್ನು ಹುಡುಕಲು ಆರಂಭಿಸುತ್ತಾಳೆ. ಟೈಲರಿಂಗ್‌ನ ಮೂಲಕ ತನ್ನ ಆರ್ಥಿಕ, ಮಾನಸಿಕ, ಸಾಮಾಜಿಕ ಸ್ಥಿರತೆಯನ್ನು ಪಡೆದುಕೊಳ್ಳುತ್ತಾಳೆ. ತನ್ನ ಬದುಕು ಸೋತುಹೋಯಿತು, ಮುಗಿದುಹೋಯಿತು ಎಂದು ಕೊಂಡಿದ್ದವಳಿಗೆ ಇಲ್ಲಿಯ ತನಕ ತನ್ನದು ಎನ್ನುವ ಬದುಕು ಶುರುವಾಗಿರಲೇ ಇಲ್ಲ. ತಾನು ನಿರ್ದೇಶಿತ ಬದುಕೊಂದನ್ನು ನಡೆಸುತ್ತಿದ್ದೆನಲ್ಲವೆ ಎನಿಸಿಬಿಡುತ್ತದೆ. ಯಶಸ್ವಿ ದಾಂಪತ್ಯ ಯಾರಿಗೆ ಬೇಡ? ಆದರೆ ಅದು ಸಾಧ್ಯವಾಗದಿದ್ದಾಗ ಸ್ವಾವಲಂಬಿಯಾಗಿ ಬದುಕುವ ಮಾರ್ಗವನ್ನು ಹುಡುಕಿಕೊಳ್ಳುವ ಮಧುವಿಗೆ ಅನಾವರಣನಾಗುವ ಹಲವು ಸತ್ಯಗಳಿವೆ. ದಾಂಪತ್ಯದ ಸೋಲು ಮತ್ತು ಯಶಸ್ವಿನ ಆಚೆಗೆ ಹೆಣ್ಣು ತನ್ನ ವ್ಯಕ್ತಿತ್ವನ್ನು ರೂಪಿಸಿಕೊಳ್ಳಬೇಕು. ಅದು ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಆರ್ಥಿಕ ಸ್ವಾವಲಂಭಿತವು ಸ್ವಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಆತ್ಮಗೌರವವು ಬದುಕಿನ ಯಾವ ಬಿಕ್ಕಟ್ಟುಗಳನ್ನು ಎದುರಿಸಲು ಬೇಕಾಗುವ ಧೀರತೆಯನ್ನು ಕೊಡುತ್ತದೆ. ಈ ಎಲ್ಲವೂ ಸೇರಿದಾಗ ಯಾವ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳು ಪೆಡಂಭೂತವಾಗಿ ಗೆಲ್ಲಲಾಗದ ಯುದ್ಧಗಳಾಗಿ ಕಾಣಿಸುತ್ತವೋ ಅವು ಗೆಲ್ಲಬಹುದಾದ ಸವಾಲುಗಳಾಗಿ ಕಾಣಿಸುತ್ತಾ ಹೋಗುತ್ತವೆ. ಈ ಸವಾಲುಗಳನ್ನು ಎದುರಿಸುವ ಪ್ರಕ್ರಿಯೆಯಲ್ಲಿಯೇ ಬದುಕಿನ ಚೇತೋಹಾರಿ ಗುಣಗಳು ಹಿಂದೆಂದಿಗಿಂತ ಹೆಚ್ಚು ತೀವ್ರವಾಗಿ ನಮ್ಮ ಅನುಭವಕ್ಕೆ ಬರುವುದನ್ನೂ ನೇಮಿಚಂದ್ರರ ಕತೆಗಳು ಶಕ್ತವಾಗಿ ತೋರಿಸಿಕೊಡುತ್ತವೆ.

'ಹೊಸಹುಟ್ಟು' ತಾಯ್ತನವನ್ನು ಪಡೆಯಲಾಗದ ಕಲಾವಿದೆಯೊಬ್ಬಳ ಕತೆ, ವೃತ್ತಿ ಪರತೆಯಲ್ಲಿ ನಂಬಿಕೆ ಇಟ್ಟ ಕಲಾವಿದೆಗೆ ಆರಂಭದಲ್ಲಿ ತಾಯ್ತನ ಒಂದು ತೊಡಕು ಎನಿಸಿದರೂ ಮುಂದುವರಿದ ಘಟ್ಟದಲ್ಲಿ ಮಗು ಬೇಕು ಎನಿಸಿದಾಗ ಜೈವಿಕವಾಗಿ ತಾನು ತಾಯಿಯಾಗಲು ಸಾಧ್ಯವಿಲ್ಲ ಎನಿಸಿ ಕಂಗಾಲಾಗುತ್ತಾಳೆ. ಏನೆಲ್ಲ ಪ್ರಯತ್ನಗಳ ನಂತರವೂ ಇದು ಆಗದ್ದು ಎನಿಸಿದಾಗ, ಕುಸಿದವಳಿಗೆ ಸಹ ಕಲಾವಿದೆಯೊಬ್ಬಳು ತಾಯ್ತನದ ವ್ಯಾಖ್ಯಾನವನ್ನೇ ವಿಸ್ತರಿಸಿ ಮಾರ್ಪಡಿಸಿ ಇವಳೆದುರಿಗೆ ಮಂಡಿಸಿದಾಗ ತಾಯ್ತನವೇ ದೊರೆತ ನೆಮ್ಮದಿಯನ್ನು ಇವಳು ಅನುಭವಿಸುತ್ತಾಳೆ. 'ತಾಯ್ತನವೆನ್ನುವುದು ಸೃಷ್ಟಿಕ್ರಿಯೆ ಎಂದಾದರೆ ನೀನು ರಚಿಸುವ ಕಲಾಕೃತಿಗಳೇ ನಿನ್ನ ಮಕ್ಕಳಲ್ಲವೇ' ಎನ್ನುವ ಗೆಳತಿಯ ದೃಷ್ಟಿಕೋನ ಶಂಕೆಯಿಲ್ಲದ ದೃಢ ನಂಬಿಕೆಯನ್ನು ಇವಳಲ್ಲಿ ಹುಟ್ಟಿಸುತ್ತದೆ. ತಾಯ್ತನದ ಕೊರತೆ ತನಗಿಲ್ಲ ಎನ್ನುವ ಆತ್ಮವಿಶ್ವಾಸವನ್ನು ಇದು ಅವಳಲ್ಲಿ ತುಂಬುತ್ತದೆ. ಈ ಕತೆಯ

ಮಹತ್ವ ಇರುವುದು ತಾಯ್ತನದ ವ್ಯಾಖ್ಯಾನವನ್ನು ವಿಸ್ತರಿಸಿರುವುದರಲ್ಲಿ ಮತ್ತು ಈ ಮೂಲಕ ಹೆಣ್ಣಿನ ವ್ಯಕ್ತಿತ್ವದ ವ್ಯಾಖ್ಯಾನವನ್ನು ಭಿತ್ತಿಯನ್ನು ಇದು ಅದ್ಭುತವಾಗಿ ವಿಸ್ತರಿಸುತ್ತದೆ ಎನ್ನುವ ಕಾರಣಕ್ಕೆ.

ಈ ಎರಡಲ್ಲದ ಇನ್ನೂ ಅನೇಕ ಮಹತ್ವದ ಆಯಾಮಗಳನ್ನು ನೇಮಿಚಂದ್ರರ ಕತೆಗಳು ಶೋಧಿಸುತ್ತವೆ. ಆದರೆ ಈ ಎರಡನ್ನೇ ಪ್ರಾತಿನಿಧಿಕವಾಗಿ ಆರಿಸಿಕೊಳ್ಳಲು ನಿರ್ದಿಷ್ಟ ಕಾರಣಗಳಿವೆ. ಹೆಣ್ಣಿನ ವ್ಯಕ್ತಿತ್ವದ ಎರಡು ಮುಖ್ಯ ವೈಯುಕ್ತಿಕವೂ, ಸಾಮಾಜಿಕವೂ ಆದ ನೆಲೆಗಳೆಂದರೆ ದಾಂಪತ್ಯ ಮತ್ತು ತಾಯ್ತನ. ಈ ಎರಡರ ವ್ಯಾಖ್ಯಾನವನ್ನು ನೇಮಿಚಂದ್ರರ ಈ ಎರಡೂ ಕತೆಗಳು ಯಶಸ್ವಿಯಾಗಿ ಮುರಿದು ಕಟ್ಟುತ್ತದೆ. ಅಗೋಚರವೂ, ಅಧೀನವೂ ಆಗಿದ್ದ ಹೆಣ್ಣಿನ ನೆಲೆಗಳನ್ನು ಸ್ವಾಯತ್ತ ನೆಲೆಗೂ, ಆಯ್ಕೆಯ ನೆಲೆಗೂ ಈ ಕತೆಗಳು ಪಲ್ಲಟಿಸುತ್ತವೆ. "ಅನಿವಾರ್ಯವಾದಾಗಲೂ ಅದನ್ನು ಹೆಣ್ಣು ತನ್ನಿಚ್ಛೆಯಂತೆ ರಚಿಸಿಕೊಳ್ಳುವ ಮೂಲಕ ಅಗತ್ಯವಾದ ಅವಕಾಶವನ್ನು ಸೃಷ್ಟಿಸಿಕೊಳ್ಳುವ ವ್ಯಕ್ತಿ ಸ್ವಾತಂತ್ರ್ಯವನ್ನೂ ಇವು ಬಲವಾಗಿ ಪ್ರತಿಪಾದಿಸುತ್ತವೆ. ಪ್ರತಿಕೂಲ ಪರಿಸ್ಥಿತಿಯನ್ನೇ ತನ್ನತನದ ರಚನೆಗೆ ಬಳಸಿ ಗೆಲ್ಲುವ ಈ ನಾಯಕಿಯರು ನಮ್ಮ ನಡುವಿನ ಹೊಸ ಹೆಣ್ಣಿನ ಮಾದರಿಗಳು" ಎಂದು ಎಂ.ಎಸ್.ಆಶಾದೇವಿಯವರ ನಿಲುವು.

ಹೆಣ್ಣನ್ನು ಒಂದು ಲಿಂಗಸ್ಥಿತಿಯಾಗಿ ಮತ್ತು ಸಾಮಾಜಿಕ ಪಾತ್ರವಾಗಿ ಏಕಕಾಲದಲ್ಲಿ ಗ್ರಹಿಸುವ ಮೂಲಕ ನೇಮಿಚಂದ್ರ ತಮ್ಮ ಕಥೆಗಳ ಮೂಲಕ ಕೆಲವು ನಿರ್ದಿಷ್ಟ ಮಾನವೀಯ ಸನ್ನಿವೇಶಗಳನ್ನು ಒಂದು ಬಗೆಯ ಸಂಸ್ಕೃತಿ ಚಿಂತನೆಯನ್ನು ಒಂದೆಡೆ ಬೆಸೆಯುವಂತೆ ನಿರೂಪಣೆಯನ್ನು ಸಾಧಿಸುತ್ತಾರೆ. ಕೆಲವು ಕಥೆಗಳಲ್ಲಿ ಪುರುಷ ಪಾತ್ರಗಳು ಕೆಲವು ಸ್ತ್ರೀ ಪಾತ್ರಗಳಿಗಿಂತ ಹೆಚ್ಚಿನ ಮೆಚ್ಚುಗೆ ಗಳಿಸಿಕೊಂಡರೂ ಲೇಖಕಿಯ ಒಟ್ಟಾರೆ ಜೀವನ ದೃಷ್ಟಿಯ ಅಖಂಡತೆಗೆ ಭಂಗವೇನೂ ಬರುವುದಿಲ್ಲ. ಇವರ ಅತ್ಯುತ್ತಮ ಕಥೆಗಳಲ್ಲಿ ಪುರುಷ ಖಳನಾಯಕನಾಗದೆ ಸ್ತ್ರೀ ಅನಗತ್ಯ ವಿಜೃಂಭಣೆಯಾಗದೆ ಮೂಡಿಬರುತ್ತಾರೆ.

ನೇಮಿಚಂದ್ರರ ಕತೆಗಳು ಹಾಗೂ ಅವರ ಇನ್ನಿತರ ಬರವಣಿಗೆ ಕುರಿತಾಗಿ ಕೆಲವು ವಿಮರ್ಶಕರು ವಿಶ್ಲೇಷಿಸಿದ್ದಾರೆ. ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿ ಕೊಳ್ಳಲಾಗಿದೆ. ಆರ್ಯಾಂಭ ಪಟ್ಟಾಭಿಯವರು ಸಂಪಾದಿಸಿರುವ ಮಹಿಳಾ ಸಾಹಿತ್ಯ ಸಮೀಕ್ಷೆ ಕೃತಿಯೂ ಸುದೀರ್ಘವಾಗಿ ಮಹಿಳಾ ಸಾಹಿತ್ಯದ ವಿವರಗಳನ್ನು ಒದಗಿಸುತ್ತದೆ. ಇಷ್ಟೆಲ್ಲಾ ಅಧ್ಯಯನದ ವಿಶಾಲತೆಯನ್ನು ಹೊಂದಿರುವ ಕನ್ನಡ ಸಾಹಿತ್ಯದ ವಿಶಿಷ್ಟ ಮಹಿಳಾ ಬರಹಗಾರ್ತಿಯಾದ ನೇಮಿಚಂದ್ರರ ಬಗೆಗಿನ ಅಧ್ಯಯನವು ಪ್ರಮುಖವಾದುದಾಗಿದೆ.

ಇಲ್ಲಿ ಪ್ರಸ್ತಾಪಿಸಬಹುದಾದ ಅವರ ಕತೆಗಳ ಕುರಿತಾಗಿ ನಡೆದಿರುವ ಪ್ರಮುಖ ಅಧ್ಯಯನಗಳಾಗಿವೆ. ಇದಲ್ಲದೆ ನೇಮಿಚಂದ್ರರ ಬಗೆಗೆ ಇತರೆಡೆಗಳಲ್ಲೂ ಅಲ್ಲಲ್ಲಿ ಪ್ರಸ್ತಾಪವಾಗಿರುವ ಸಾಧ್ಯತೆಗಳಿವೆ. ಒಟ್ಟಾರೆಯಾಗಿ ಹೇಳುವುದಾದರೆ ಇಲ್ಲಿ ಪ್ರಸ್ತಾಪಿಸಿರುವ ಅಧ್ಯಯನಕಾರರೆಲ್ಲ

ನೇಮಿಚಂದ್ರ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿರುವ ವೈಚಾರಿಕತೆಯ ವಿವಿಧ ನೆಲೆಗಳನ್ನು ಗುರುತಿಸಿ ವಿಶ್ಲೇಷಿಸಿದ್ದಾರೆಂಬುದು ಗಮನಾರ್ಹ.

ಅಧ್ಯಾಯ –೩

ನೇಮಿಚಂದ್ರರ ಸಾಹಿತ್ಯದಲ್ಲಿ ವೈಚಾರಿಕತೆ.

೩.೧ ಕಥಾಸಾಹಿತ್ಯದಲ್ಲಿ

೩.೨ ಪ್ರಬಂಧ ಸಾಹಿತ್ಯದಲ್ಲಿ

೩.೩ ಪ್ರವಾಸ ಕಥನಗಳಲ್ಲಿ

ಅಧ್ಯಾಯ – ೩

ನೇಮಿಚಂದ್ರ ಸಾಹಿತ್ಯದಲ್ಲಿ ವೈಚಾರಿಕತೆ

ವೈಚಾರಿಕತೆ, ವಿಚಾರವಾದ, ಬೌದ್ಧಿಕತೆ ಇವೆಲ್ಲ ಹೆಚ್ಚು ಕಡಿಮೆ ಒಂದೇ ಅರ್ಥವುಳ್ಳ ಬೇರೆ ಬೇರೆ ಪದಗಳು. ವಿಚಾರವಾದ ವೈಚಾರಿಕತೆಯ ನೆಲೆಗಟ್ಟಿನ ಮೇಲೆ ನಿಂತಿದೆ ಎಂದು ಹೇಳಬಹುದು. 'ವೈಚಾರಿಕತೆ' ಎಂದರೆ ಯಾವುದೋ ಒಂದು ವಿಷಯವನ್ನು ವಿಮರ್ಶೆಯ ಒರೆಗಲ್ಲಿಗೆ ಉಜ್ಜಿ ಅದರ ಒಳಿತು – ಕೆಡುಕುಗಳನ್ನು ಗುರುತಿಸಿ, ಒಳಿತನ್ನು ಸ್ವೀಕರಿಸುವ ಕೆಡುಕನ್ನು ಬಿಟ್ಟು ಬಿಡುವ ಚಿಂತನಾ ಕ್ರಮ. ಅದು ನಿಂತ ನೀರಾಗಿರದೇ ಸದಾ ಬದುಕನ್ನು ಅರ್ಥಪೂರ್ಣವಾಗಿ ಹುಡುಕುವತ್ತ ಸಾಗುವ ನಿರಂತರ ಕ್ರಿಯೆಯಾಗಿದೆ.

ಯಾವುದು ಓದುಗನಲ್ಲಿ ಪ್ರತಿಕ್ರಿಯೆಯನ್ನುಂಟು ಮಾಡುವುದೋ, ಚಿಂತನೆ ಮನನಗಳಿಗೆ ಪ್ರೇರಣೆ ನೀಡುವುದೋ, ಚರ್ಚೆಗೆ ವಸ್ತುವಾಗುವುದೋ, ಯಾವುದು ತಿಳುವಳಿಕೆಗೆ ಹೊಸದೊಂದು ಆಯಾಮವನ್ನು ನೀಡಿ ಹೊಸ ಹೊಸ ಕ್ಷಿತಿಜಗಳನ್ನು ತೆಗೆದು ತೋರಿಸುವುದೋ ಅದೇ ವೈಚಾರಿಕತೆ.

ಮಾನವ ಬುದ್ಧಿಜೀವಿ, ಅವನು ಬುದ್ಧಿಯುಳ್ಳ ಪ್ರಾಣಿಯಾಗಿರುವುದರಿಂದಲೇ ಸಂಘ, ಸಂಸ್ಥೆಗಳನ್ನು ಕಟ್ಟಿಕೊಂಡು ಸಾಮಾಜಿಕ ಜೀವಿಯಾಗಿರಲು ಸಾಧ್ಯವಾಯಿತು. ಆದ್ದರಿಂದಲೇ 'Man is Rational Animal' ಎಂದಿದ್ದು, ಅವನು ನಡೆಸಿದ ಬದುಕೇ ಬುದ್ಧಿವಂತಿಕೆಯಿಂದ ಕೂಡಿರುವುದರಿಂದ ಮತ್ತು ತನ್ನ ವೈಚಾರಿಕತೆಯ ಮೇಲೆ ಬಾಳನ್ನು ನಡೆಸಬೇಕಾಗಿರುವುದರಿಂದ, ಆತನಲ್ಲಿ ವೈಚಾರಿಕಾ ಪ್ರಜ್ಞೆ ಮೂಡುವುದು ಸಹಜ. ಬುದ್ಧಿ, ತಿಳುವಳಿಕೆ, ಜ್ಞಾನ, ಪ್ರಜ್ಞೆ, ವೈಚಾರಿಕತೆ ಇವೆಲ್ಲ ಹೆಚ್ಚು ಕಡಿಮೆ ಅವನಲ್ಲಿರುವ ಮುಖ್ಯ ಅಂಶಗಳಾಗಿವೆ. ವೈಚಾರಿಕನಲ್ಲದ ಮನುಷ್ಯನಿದ್ದರೆ ಅವನು ಮನುಷ್ಯನೆನಿಸಿಕೊಳ್ಳಲಾರ ಎಂದಿದ್ದಾರೆ ತತ್ವಜ್ಞಾನಿಗಳು. ಆದ್ದರಿಂದ ಅವನು ಸದಾ ವಿಚಾರ ಮಾಡುತ್ತಾ ತನ್ನಲ್ಲಿ ವೈಚಾರಿಕ ಪ್ರಜ್ಞೆ ಬೆಳೆಸಿಕೊಳ್ಳಲು ಹೆಣಗುತ್ತಿರುತ್ತಾನೆ. ವೈಚಾರಿಕತೆ ಇರುವುದರಿಂದ ಮಾನವ ಉಳಿದ ಪ್ರಾಣಿಗಳಿಗಿಂತ ಭಿನ್ನವೆನಿಸಿಕೊಳ್ಳುತ್ತಾನೆ. ವೈಚಾರಿಕಾ ಪ್ರಜ್ಞೆ ಮೂಡಿಸಿಕೊಂಡ ವ್ಯಕ್ತಿ ಯಾವುದೇ ಸಂಗತಿ, ವಿಷಯವನ್ನು ಒಂದೇ ಬಾರಿಗೆ ಒಪ್ಪಲಾರ.

ಪ್ರತಿಯೊಂದು ವಸ್ತುವನ್ನು ಕುರಿತು ಪ್ರಶ್ನಿಸುವುದು ವೈಚಾರಿಕತೆಯ ಉದ್ದೇಶವಾಗಿದೆ. ಇದು ಒಳಿತು, ಇದು ಕೆಡುಕು ಎಂದು ವಿಚಾರ ಮಾಡುವುದೇ ವೈಚಾರಿಕತೆಯ ಉದ್ದೇಶ. ಲೌಕಿಕ, ಪಾರಮಾರ್ಥಿಕ ಎರಡನ್ನು ಗೆಲ್ಲುವವನಿಗೆ ಜಾಣ ವಿಚಾರವಂತ ಎಂದು ಕರೆಯುತ್ತಾರೆ. ಇವೆಲ್ಲ ವೈಚಾರಿಕತೆಯನ್ನು ತಿಳಿಸುವ ಪದಗಳಾಗಿವೆ.

ವೇದ ಉಪನಿಷತ್ತುಗಳ ಕಾಲದಿಂದ ಇಲ್ಲಿಯವರೆಗೆ ವೈಚಾರಿಕತೆ ಹರಿದು ಬಂದಿದೆ. ವೈಚಾರಿಕತೆ ಎನ್ನುವುದು ಕಷ್ಟದ ದಾರಿ. ಈ ದಾರಿಯಲ್ಲಿ ನಡೆಯುವುದೆಂದರೆ ಮುಳ್ಳಿನ ದಾರಿಯಲ್ಲಿ ನಡೆದಂತೆ. ವೈಚಾರಿಕತೆ ಬೆಳೆದಂತೆ ಪ್ರಜ್ಞಾವಂತ ಸಮಾಜ ನಿರ್ಮಾಣವಾಗುತ್ತದೆ. ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವುದು ಕಷ್ಟದ ಕೆಲಸವಾದರೂ ಅವರಲ್ಲಿ ಕೆಲವೊಂದು ವೈಚಾರಿಕ ಜಾಗೃತಿಯನ್ನು ಮೂಡಿಸಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸಲು ಸಾಧ್ಯವಿದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಮಹಿಳೆಗೂ, ಪುರುಷನಿಗೂ ಸಮಾನವಾದ ಸ್ಥಾನಮಾನ ಸಿಕ್ಕಿ ಮನುವಿನ ಕಾಲದಿಂದ ರೂಢಿಯಾಗಿದ್ದ ಮಾತು ಅರ್ಥ ಕಳೆದುಕೊಂಡಿತು. ನಮ್ಮ ಸುತ್ತಲಿನ ಸಾಮಾಜಿಕ ಜಗತ್ತಿನ ಗ್ರಹಿಕೆಗೆ ಹವಣಿಸುವುದು, ಆವಾಸ್ತವವನ್ನು ಸರಳೀಕರಿಸಿದಂತೆ ಎಂಬ ಅಭಿಪ್ರಾಯವನ್ನು ಇಂದು ಚಾಲ್ತಿಯಲ್ಲಿರುವ ಆಲೋಚನೆಗಳು ಮತ್ತು ಸಂಶೋಧನಾ ವಿಧಾನಗಳು ಗಟ್ಟಿಪಡಿಸಿವೆ. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಪ್ರವೇಶಿಸುತ್ತಾ, ಶ್ರಮಪಟ್ಟು ದುಡಿಯುತ್ತಿರುವುದರಿಂದ ದೇಶಕ್ಕೆ ಒಂದು ಹೊಸ ಆಯಾಮ ಬಂತೆಂದು ಹೇಳಬಹುದು. ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿರುವಂತೆ ಶಿಕ್ಷಣ, ಸಂಸ್ಕೃತಿ, ಕಲೆ ಮುಂತಾದ ಕ್ಷೇತ್ರಗಳಲ್ಲಿ ಆಧುನಿಕ ಮಹಿಳೆ ತನ್ನ ಪಾತ್ರ ನಿರ್ವಹಿಸುತ್ತಾ ದೇಶವನ್ನು ಹೊಸ ಹಾದಿಯಲ್ಲಿ ಕೊಂಡೊಯ್ಯಲು ಸಾಧ್ಯವಾಯಿತು. ವಿಜ್ಞಾನವು ಸೇರಿದಂತೆ ಎಲ್ಲಾ ಉತ್ಪಾದನಾ ಕ್ಷೇತ್ರಗಳಲ್ಲೂ ಮಹಿಳೆಯರು ಅಧಿಕ ಸ್ಥಾನ, ಕೆಲವು ಅಸಾಧಾರಣ ಸ್ತ್ರೀಯರು ಪುರುಷರನ್ನು ಸರಿಗಟ್ಟಿ ಅಥವಾ ಮಿಗಿಲೆನಿಸಿ ಮುಂದೆ ಬಂದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಮಹಿಳಾ ವಿಜ್ಞಾನಿಗಳಾದ ಮೇರಿಕ್ಯೂರಿ, ರೋಸ್‌ಲಿಂಡ್, ಪ್ರಾಂಕ್ಲಿನ್ ಮತ್ತು ಬಾರ್ಬರಾ ಮಕ್ಲಿಂಟಾಕ್ ಮೊದಲಾದವರನ್ನು ಕಾಣಬಹುದು, ಇವರನ್ನು ಇವರ ಸಮಕಾಲೀನ ಸಮಾಜವೂ, ಸಹೋದ್ಯೋಗಿಗಳ ವಿಲಕ್ಷಣ ಮತ್ತು ಸ್ತ್ರೀ ಸಹಜವಲ್ಲದ ವ್ಯಕ್ತಿತ್ವವುಳ್ಳವರೆಂದು ಹೇಳುತ್ತಿದ್ದರು.

ಈ ದಿಸೆಯಲ್ಲಿ ಹೊಸ ಸಮುದಾಯ ಸಮಾಜವನ್ನು ಬೆಳೆಸುವಂತಹ ವೈಶಿಷ್ಟ್ಯವಾದ ಪರಿಕಲ್ಪನೆಗಳು ಉದಯಿಸಿದವು. ಅವುಗಳಲ್ಲಿ ಸಾಹಿತ್ಯದ ಕೃಷಿಯ ಪರಿಕಲ್ಪನೆ ಮುಖ್ಯವಾದದ್ದು. ಸಾಹಿತ್ಯ ಕೃಷಿಯಲ್ಲಿ ಮಾತ್ರವಲ್ಲದೆ ತತ್ವಜ್ಞಾನ, ವಿಜ್ಞಾನ ಪ್ರಪಂಚಗಳಲ್ಲಿಯೂ ಕಥನ ಸಾಹಿತ್ಯ ಬಹಳ ಪ್ರಸಿದ್ಧವಾಗಿದೆ. ಶತಶತಮಾನಗಳಿಂದ ವಂಚಿತವಾಗಿದ್ದ ಮಹಿಳೆಗೆ ಸ್ವಾತಂತ್ರ್ಯ ಲಭ್ಯವಾಗಿ ಅವಳಲ್ಲಿ ಸುಪ್ತವಾಗಿದ್ದ ಪ್ರತಿಭೆ, ಕಲ್ಪನೆ, ಪ್ರತೀಕಾರ ಭಾವನೆಗಳು ಜಾಗೃತಗೊಂಡು ಅದು ಕತೆ, ಕಾವ್ಯ, ಕಾದಂಬರಿ, ಸಂಗೀತ, ಕಲೆ ಇವುಗಳ ರೂಪದಲ್ಲಿ ವ್ಯಕ್ತವಾಗಲಾರಂಭಿಸಿತು. ಕನ್ನಡ ಮಹಿಳಾ ಸಾಹಿತ್ಯದ ಜಗತ್ತನ್ನು ಬೆಸೆಯುವ ಎಳೆಗಳನ್ನು ಅರಸುತ್ತಾ ಸಾಹಿತ್ಯವನ್ನು ಓದುವಾಗ ಸಾಹಿತ್ಯಕ ಮಾನದಂಡಗಳನ್ನಷ್ಟೇ ಬಳಸುವುದಕ್ಕಿಂತ ಸಾಹಿತ್ಯ ಕ್ಷೇತ್ರದಲ್ಲಿ ಸಮಾಜ ಮತ್ತು ಸಂಸ್ಕೃತಿಗಳು

ರೂಪುಗೊಂಡು ವಿಮರ್ಶೆಗೊಳಗಾಗಿ ಪುನಃ ಸೃಷ್ಟಿಗೊಳ್ಳುವ ರೀತಿಯನ್ನು ಅಧ್ಯಯನ ಮಾಡುವುದು ಮುಖ್ಯ.

ಮಹಿಳಾ ಸಾಹಿತ್ಯವನ್ನು ಇಂಥ ದೃಷ್ಟಿಕೋನದಿಂದ ಅಧ್ಯಯನ ಮಾಡಿದಾಗ ಸಂಸ್ಕೃತಿ ಹಾಗೂ ಅದರಿಂದ ಬೇರ್ಪಡಿಸಲಾಗದ ಆಲೋಚನೆ, ಭಾವನೆ, ವಿಶ್ಲೇಷಣೆಯ ಕೇಂದ್ರವಾಗುತ್ತವೆ. ಸಮಾಜ, ಸಂಸ್ಕೃತಿಗಳ ಜೊತೆ ಮಹಿಳಾ ಸಾಹಿತ್ಯ ಜಗತ್ತು ಸಂಭಾಷಣೆ ನಡೆಸಿ, ಸಾಮಾಜಿಕ ಸನ್ನಿವೇಶಗಳನ್ನು ಬಿಂಬಿಸುವುದರ ಜೊತೆಗೆ ಅವುಗಳನ್ನು ನಿರ್ಮಿಸುವುದರಲ್ಲೂ ತೊಡಗಿದೆ. ಪಿತೃ ಪ್ರಧಾನ್ಯದ ವೈಚಾರಿಕ ಬುನಾದಿ ಮತ್ತು ಬಾಹ್ಯ ಸ್ವರೂಪಗಳನ್ನು ಗಣನೆಗೆ ತೆಗೆದು ಕೊಳ್ಳದೆ ಮಹಿಳಾ ಬರವಣಿಗೆಯನ್ನು ಅರ್ಥೈಸಲು ಸಾಧ್ಯವಿಲ್ಲ, ನಿಜವಾದ ವಿಜ್ಞಾನಿಯಾಗಿರಲು ಕೆಲವು ಮೂಲಭೂತ ಗಂಡುಗುಣಗಳನ್ನು ಪಡೆದಿರಬೇಕು ಎಂದಾದರೆ ವಿಜ್ಞಾನ ಯಾರ ಜ್ಞಾನ? ಅದರಿಂದ ಯಾರಿಗೆ ಲಾಭ ಎನ್ನುವ ಅನುಮಾನ ಮಾಡುತ್ತದೆ.

ಮಹಿಳಾ ಸಾಹಿತ್ಯ ಜಗತ್ತಿನ 'ವೈಚಾರಿಕ ನಿರ್ಧಿಷ್ಟತೆ'ಯನ್ನು ಎತ್ತಿ ಹಿಡಿಯುವ ಈ ಮಾತು ಮುಂದೆ ಬರಲಿರುವ ವಿಚಾರದ ಮೂನ್ಸೂಚಿ ಅಷ್ಟೆ. ಆಧುನಿಕ ಮಹಿಳೆ ತನ್ನ ಸುತ್ತಲಿನ ಪರಿಸರ, ಮದುವೆ, ಮೂಢನಂಬಿಕೆಗಳು, ಮೇಲು-ಕೀಳು, ಅಸಮಾನತೆ, ಸ್ತ್ರೀಯರ ಸ್ಥಾನಮಾನಗಳು ಹಲವು ವರ್ಷಗಳಿಂದ ಹಾಗೂ ವರ್ತಮಾನದಲ್ಲಿ ಕಾಡುವ ಸಮಸ್ಯೆಗಳು ಇತ್ಯಾದಿ ಸಾಹಿತ್ಯಕ ವಸ್ತುವಾಗಿ ಗಮನ ಸೆಳೆದವು. ಸಾಹಿತ್ಯದ ಹೊಸ ಭಾವನೆ, ಹೊಸ ವಿಚಾರಗಳಿಂದ ಪ್ರೇರಿತವಾಗಿ ಪ್ರಗತಿಯ ಹೆಜ್ಜೆಯನ್ನಿಡುತ್ತಾ ಮುನ್ನೆಡೆದ ಸಂದರ್ಭದಲ್ಲಿ ಕೊಡಗಿನ ಗೌರಮ್ಮ, ತ್ರಿವೇಣಿ, ಎಚ್.ಎಸ್. ಪಾರ್ವತಿ, ನೀಳಾದೇವಿ, ವೀಣಾಶಾಂತೇಶ್ವರ, ಅನುಪಮ ನಿರಂಜನ, ಸಾರಾ ಅಬೂಬಕ್ಕರ್, ಶಾಂತಾದೇವಿ ಮಾಳವಾಡ, ನೇಮಿಚಂದ್ರ ಮುಂತಾದವರು ಬರೆಯಲು ಪ್ರಾರಂಭಿಸಿದರು.

೩.೧ ಕಥಾಸಾಹಿತ್ಯದಲ್ಲಿ :

ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಥನ ಸಾಹಿತ್ಯಕ್ಕೆ ಬೇರೆ ಯಾವ ಸಂಸ್ಕೃತಿಯಲ್ಲಿಯೂ ಕಾಣದ ಪ್ರಾಶಸ್ತ್ಯ ದೊರಕಿದೆ. "ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕಥೆಯೇ ಅತ್ಯಂತ ಲೋಕಪ್ರಿಯವಾದ ರೂಪವಾಗಿದೆ. ಈ ಮಾತು ಭಾರತದ ಉಳಿದೆಲ್ಲ ಪ್ರಾಂತಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ".[೧] ಕೀರ್ತಿನಾಥ ಕುರ್ತಕೋಟಿಯವರ ಅಭಿಪ್ರಾಯ. ಭಾರತದ ಎಲ್ಲಾ ಭಾಷೆಗಳಲ್ಲಿಯೂ ದೊರೆಯುವ ಜನಪದ ಕಥೆಗಳು ಹೀಗೆ ಕಥನಪ್ರಪಂಚಕ್ಕೆ ತನ್ನದೇ ಆದ ವಿಸ್ತಾರ, ವೈವಿಧ್ಯತೆಗಳಿವೆ. ವೇದ, ಉಪನಿಷತ್ತುಗಳಲ್ಲಿ ಬರುವ ಕಥೆಗಳು, ಪುರಾಣಗಳು,

---

೧. ಕೀರ್ತಿನಾಥ ಕುರ್ತಕೋಟಿ; ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪುಟ-೧೩೪

ರಾಮಾಯಣ, ಮಹಾಭಾರತ, ರಘುವಂಶದ ಮಹಾಕಾವ್ಯಗಳು, ಬೌದ್ಧ-ಜೈನರ ಜಾತಕ ಕತೆಗಳು, ಆರಾಧನ ಕತೆಗಳು, ಪಂಚತಂತ್ರ, ನೀತಿ ಕತೆಗಳು, ಹಿತೋಪದೇಶಗಳನ್ನು ಕಾಣಬಹುದು. ಕಥೆಯು ಮೂಲದಲ್ಲಿ ಮೌಖಿಕ ಸ್ವರೂಪದ್ದಾಗಿದ್ದರೂ ಅದು ಲಿಖಿತ ಸ್ವರೂಪವನ್ನು ಪಡೆದುಕೊಂಡು ಸಾಹಿತ್ಯದ ಒಂದು ಪ್ರಮುಖ ಹಾಗೂ ಆಕರ್ಷಕ ಪ್ರಕಾರವಾಗಿ ಬೆಳೆದಿದೆ. ಕಥೆ ಹೇಳುವುದು ಮನುಷ್ಯನ ಹುಟ್ಟು ಗುಣಗಳಲ್ಲಿ ಒಂದು. ಅದರ ಇತಿಹಾಸ ಭಾಷೆಯ ಇತಿಹಾಸದಷ್ಟೇ ಹಳೆಯದು. ಕಥೆಯ

ಆಕರ್ಷಣೆಯಿಂದ ಯಾರೂ ತಪ್ಪಿಸಿಕೊಳ್ಳಲಾರರು. ಮನುಷ್ಯ ತಾನು ಕಂಡಿದ್ದನ್ನು, ಕೇಳಿದ್ದನ್ನು, ಚಿಂತಿಸಿದ್ದನ್ನು, ಅನುಭವಿಸಿದ್ದನ್ನು, ಕಲ್ಪಿಸಿದ್ದನ್ನು ಎರಡನೆಯವರಿಗೆ ಹೇಳತೊಡಗಿದಾಗ ಕಥೆಯ ಉಗಮವಾಯಿತು. ಕಿರಿಯರಿಂದ ಹಿಡಿದು ಹಿರಿಯವರೆಗೆ ಎಲ್ಲರೂ ಕಥೆಗಳಲ್ಲಿ ಆಸಕ್ತಿ ಹೊಂದಿದವರೆ. ತೆಲುಗು ಕವಿ ಪಿಂಗಳಸೂರನು ಕಲಾಬ್ರಹ್ಮ ಸರಸ್ವತಿಗೆ ಕಥೆ ಹೇಳಿದುದರ ಉಲ್ಲೇಖವಿದೆ. ಭಾರತೀಯ ಪರಂಪರೆಯಲ್ಲಿ ಕಥೆಯ ಹುಟ್ಟನ್ನು ಅಲೌಕಿಕ ನೆಲೆಯಲ್ಲಿಯೇ ನೋಡಬಹುದು. ಶಿವಪಾರ್ವತಿಗೆ ಹೇಳಿದ ಕತೆಗಳನ್ನು ಕದ್ದು ಕೇಳಿದ ಗಣನೊಬ್ಬ ಗುಣಾಢ್ಯನಾಗಿ ಜನ್ಮ ತಾಳಿ ಬೃಹತ್ ಕಥೆಯ ಸೃಷ್ಟಿಗೆ ಕಾರಣನಾದ ಎಂದು ಪರಂಪರೆ ಹೇಳುತ್ತದೆ. ದೇವತೆಗಳು ಕೂಡ ಕಥೆಗಳ ಮೋಹಕ್ಕೆ ಒಳಗಾದವರೇ. ಕಥೆಯ ಬಗ್ಗೆ ಮನುಷ್ಯನಿಗಿರುವ ಜನ್ಮಜಾತವಾದ ಕುತೂಹಲವೇ ಇದಕ್ಕೆ ಕಾರಣ.

ಮಹಿಳೆ ಹಾಗೂ ಕಥೆ ಸಂಬಂಧ ಇಂದು ನಿನ್ನೆಯದಲ್ಲ. ಭಾರತೀಯ ಪರಂಪರೆಯಲ್ಲಿ ಇದಕ್ಕೆ ದೈವಿ ನೆಲೆಯನ್ನು ಕಲ್ಪಿಸಲಾಗಿದೆ. ಕನ್ನಡದಲ್ಲಿ ಕಥೆ ಕೂಡ ಒಂದು ಗಂಭೀರ ಸಾಹಿತ್ಯ ಪ್ರಕಾರವೆಂದು ನೆಲೆಗೊಂಡಿದ್ದು ೨೦ನೇ ಶತಮಾನದಲ್ಲಿಯೇ ಎನ್ನುವುದು ನಿರ್ವಿವಾದ. ಕಥೆಗಳು ವ್ಯಕ್ತಿಯ ವ್ಯಕ್ತಿತ್ವವನ್ನು ಸೊಗಸಾಗಿ ಚಿತ್ರಿಸಬಲ್ಲರು. ಈ ದಿಸೆಯಲ್ಲಿ ಕಥೆಗಳು ಹೆಚ್ಚಿನ ಮಹತ್ವವನ್ನು ಪಡೆದುಕೊಂಡಿದೆ. ಕಥೆಗಳು ಸಾಮಾನ್ಯವಾಗಿ ವ್ಯಕ್ತಿಯ ವ್ಯಕ್ತಿತ್ವದೊಂದಿಗೆ ಬೆಸೆದುಕೊಂಡಿದೆ. ರಾಜರ ನಂತರ ಬಂದ ಪಾಶ್ಚಾತ್ಯರು ಭಾರತೀಯರ ಮೇಲೆ ಅವರ ಸಂಸ್ಕೃತಿ, ಆಚಾರ-ವಿಚಾರಗಳನ್ನು ಧರ್ಮದ ಕಟ್ಟುಪಾಡುಗಳನ್ನು, ಭಾಷೆಯನ್ನು, ಸಂಪ್ರದಾಯಗಳನ್ನು ಶಿಕ್ಷಣ ಮತ್ತು ಬದುಕಿನ ಮೂಲಕ ಹೇರಲು ಪ್ರಯತ್ನಿಸಿ ಯಶಸ್ವಿಯಾದರು. ಜೊತೆಗೆ ನಮ್ಮ ಆಚಾರ-ವಿಚಾರ, ಸಂಸ್ಕೃತಿಯ ಮೇಲೆ ಧಾರ್ಮಿಕತೆ, ಸಾಮಾಜಿಕತೆ, ಆರ್ಥಿಕತೆಯ ಮೇಲೆ ಆಮೋಘ ಪ್ರಭಾವ ಬೀರಿತು. ಇದರಿಂದ ಪ್ರಭಾವಿತರಾದ ನಮ್ಮ ಸಮಾಜ ಒಂದು ನೂತನ ಜೀವನ ಕ್ರಮವನ್ನು ಅಳವಡಿಸಿಕೊಳ್ಳತೊಡಗಿದರು. ಜೊತೆಗೆ ಜನರು ಆಧುನಿಕತೆಗೂ ಜಾರುತ್ತಿದ್ದುದನ್ನು ಕಾಣಬಹುದು.

ಆಧುನಿಕತೆಯ ಮೊದಲ ಹಂತ ಪ್ರಾರಂಭವಾಗಿದ್ದು ಐತಿಹಾಸಿಕ ಕತೆಗಳ ರೂಪದಲ್ಲಿ, ಪಂಜೆಮಂಗೇಶರಾಯರು, ಗಳಗನಾಥರು, ಕೆರೂರು ವಾಸುದೇವಚಾರ್, ಎಂ.ಎಸ್.ಪುಟ್ಟಣ್ಣ, ಕುವೆಂಪು, ಕಾರಂತ ಅವರಿಂದ ನವೋದಯದ ಸಂದರ್ಭದಲ್ಲಿ ದೇಶಾದ್ಯಂತ ಹಬ್ಬಿದ್ದ ಸಾಮಾಜಿಕ ಹಾಗೂ ರಾಜಕೀಯ ಚಟುವಟಿಕೆಗಳಿಂದ ಆಧುನಿಕ ವಿಚಾರ ಧಾರೆಗಳಿಂದ ಈ ಲೇಖಕರು ಪ್ರಭಾವಿತರಾದರು. ಅಂದಿನ ಸಾಮಾಜಿಕ ಚಳುವಳಿಯ ಭಾಗವಾಗಿ ವಿಧವಾವಿವಾಹ, ಬಾಲ್ಯವಿವಾಹದ ವಿರೋಧ, ಸ್ತ್ರೀಶಿಕ್ಷಣ ಮುಂತಾದ ಆದರ್ಶಗಳು ಅವರ ಸಾಹಿತ್ಯದ ವಸ್ತುವಾದವು. ಕೆಲವರಿಗೆ ರಜಪೂತ ಮಹಿಳೆಯರು ಆದರ್ಶವಾಗಿದ್ದರು. ಬಾಲ್ಯ ವಿಧವೆಯೊಬ್ಬಳ ವೈದವ್ಯದ ಬವಣೆಗಳನ್ನು, ಆಕೆಯ ಮರುವಿವಾಹವನ್ನು ಚಿತ್ರಿಸಿರುವ ಇಂದಿರಾಬಾಯಿ; ಸ್ತ್ರೀಯು ಸುಶಿಕ್ಷಿತಳಾದರೆ ಅವಳ ವ್ಯಕ್ತಿತ್ವದ ವಿಕಾಸ ಹೇಗೆ ಸಾಧ್ಯ ಎಂದು ಪೆರೂರರ ಇಂದಿರೆ ಒಳಗೊಂಡಿದೆ.

ಸಾಹಿತ್ಯದಲ್ಲಿ ಅಭಿವ್ಯಕ್ತವಾಗುವ ಮಹಿಳಾ ಪರ ಪ್ರಜ್ಞೆ; ಅನುಭವಗಳನ್ನು ಸ್ತ್ರೀಸಂವೇದನೆ ಎಂದು ಕರೆಯಬಹುದಾಗಿದೆ. ಇಂತಹ ಸಂವೇದನೆಗಳು ಮಹಿಳೆಯರ ಹಲವಾರು ಸಾಹಿತ್ಯದ ಪ್ರಕಾರಗಳಲ್ಲಿ ಕಾಣಿಸಿಕೊಂಡಿದೆ. ಸ್ತ್ರೀವಾದಿ ಸಾಹಿತಿಗಳು ನಮ್ಮ ಕಥೆ, ಕಾದಂಬರಿಗಳಲ್ಲಿ ಪುರುಷರ ದರ್ಪ, ಅಹಂಕಾರ, ದೌರ್ಜನ್ಯ, ದಬ್ಬಾಳಿಕೆ ಹಾಗೂ ಕ್ರೂರ ವರ್ತನೆಯನ್ನು ಚಿತ್ರಿಸಿ ಪುರುಷರನ್ನು ದುಷ್ಟರಂತೆ, ಖಳನಾಯಕರಂತೆ ಬಿಂಬಿಸಿ ಶೋಷಕರ ಸ್ಥಾನದಲ್ಲಿ ನಿಲ್ಲಿಸಲಾಗುತ್ತದೆ. ಸ್ತ್ರೀವಾದಿ ಪ್ರಭಾವಕ್ಕೆ ಒಳಗಾಗಿರುವ ಸಾಹಿತ್ಯ ಕೃತಿಗಳಲ್ಲಿನ ಕಥಾನಾಯಕಿಯರು ಮತ್ತು ಕೆಲವು ಇತರ ಸ್ತ್ರೀ ಪಾತ್ರಗಳು ವೈಚಾರಿಕತೆಯನ್ನು ರೂಢಿಸಿಕೊಂಡು ಪ್ರಗತಿ ಪರವಾದ ಜೀವನಕ್ಕೆ ಹಾಗೂ ಸಾಮಾಜಿಕ ಬದಲಾವಣೆಗೆ ಹಾತೊರೆಯುತ್ತಾರೆ.

ಹೀಗೆ ಕನ್ನಡ ಸ್ತ್ರೀವಾದಿ ಕಥಾಸಾಹಿತ್ಯದಲ್ಲಿ ಗೋಚರವಾಗುವ ಪ್ರಗತಿಪರ ಧೋರಣೆ, ವೈಚಾರಿಕ ಆಲೋಚನಾಕ್ರಮ ಹಾಗೂ ಕ್ರಾಂತಿಕಾರಕ ಗುಣಗಳಿಗೆ ಬಹುತೇಕ ಸ್ತ್ರೀವಿಮೋಚನಾ ಆಲೋಚನಾ ಶಕ್ತಿ ಕಾರಣವಾಗಿರುತ್ತದೆ. ನವೋದಯದ ತಿರುಮಲಾಂಬ, ಸರಸ್ವತಿಬಾಯಿ, ರಾಜವಾಡೆ, ಶಾಮಲಾದೇವಿಯಿಂದ ಹಿಡಿದು ಕೊಡಗಿನ ಗೌರಮ್ಮ, ತ್ರಿವೇಣಿಯರನ್ನು ದಾಟಿ ಇಂದಿನ ವೀಣಾಶಾಂತೇಶ್ವರ, ವೈದೇಹಿ, ಅನುಪಮಾನಿರಂಜನ, ನೇಮಿಚಂದ್ರರ ಕಥೆಗಾರ್ತಿಯರ ವರೆಗೆ ಈ ಪ್ರಕಾರ ಬೆಳೆದು ಬಂದಿದೆ. ನೂರಾರು ವರ್ಷಗಳಿಂದ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಅನುಭವಿಸಿದ ನೋವು, ಶೋಷಣೆ, ದೌರ್ಜನ್ಯ, ದಬ್ಬಾಳಿಕೆ ಇತ್ಯಾದಿಗಳನ್ನು ಕೆಲವು ಲೇಖಕಿಯರು ತಮ್ಮ ಕೃತಿಗಳಲ್ಲಿ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ. ಆ ಮೂಲಕ ಸ್ತ್ರೀ ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆಗಳನ್ನು ಪ್ರತಿಪಾದಿಸ ತೊಡಗಿದರು. ಇಂತಹ ರಚನೆಗಳು ಕನ್ನಡದ ಸ್ತ್ರೀವಾದಿ ಕೃತಿಗಳಾಗಿವೆ.

ನಮ್ಮ ಸಮಾಜದಲ್ಲಿ ಮೊದಲಿಗೆ ಮಾತೃಪ್ರಧಾನ ಕುಟುಂಬವಿತ್ತು. ನಂತರ ಚರಿತ್ರೆಯ ಕಾಲ ಘಟ್ಟದಲ್ಲಿ ಪಿತೃಪ್ರಧಾನ ಕುಟುಂಬ ಅಸ್ತಿತ್ವಕ್ಕೆ ಬಂತು. ಆದರೂ ಇಂದಿಗೂ ಅಲ್ಲಲ್ಲಿ ಮಾತೃಪ್ರಧಾನ ಸಂಸ್ಥೆ ಪಳೆಯುಳಿಕೆಗಳಂತೆ ಕಂಡುಬರುತ್ತದೆ. ಇಂದು ಅನೇಕ ಕಥೆಗಳಲ್ಲಿ ಅಂದರೆ ನವೋದಯ ಕಾಲದಿಂದ ಪ್ರಸ್ತುತದವರೆಗೆ ಅನೇಕ ಕಥೆಗಳಲ್ಲಿ ಹೆಣ್ಣು ಗಂಡಿನಿಂದ ಆಗುತ್ತಿರುವ ಅನ್ಯಾಯ, ಶೋಷಣೆಯ ವಿರುದ್ಧ ಸೌಮ್ಯವಾಗಿ ಹಾಗೂ ಕೆಲವು ಸಲ ತೀವ್ರವಾಗಿ ಬಂಡಾಯ ಏಳುವುದನ್ನು ನೋಡಬಹುದು. ಅನುಪಮಾ ನಿರಂಜನ ರವರು ಎರಡನೆಯ ಪೀಳಿಗೆಯ ಲೇಖಕಿಯರ ಗುಂಪಿಗೆ ಸೇರಿದ್ದಾರೆ. ಸ್ವತಃ ಮಹಿಳಾ ಹೋರಾಟಗಾರ್ತಿಯಾಗಿದ್ದ ಅನುಪಮಾ ಅವರ ಬಹುತೇಕ ಕಥೆ, ಕಾದಂಬರಿಗಳು ಸ್ತ್ರೀ ಸಂವೇದನೆಯುಳ್ಳವುಗಳು ಆಗಿವೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಪ್ರಬುದ್ಧವೆನ್ನಬಹುದಾದ ಮಹಿಳಾ ಪ್ರಜ್ಞೆ ಪ್ರವೇಶಗೊಂಡಿದ್ದೇ ಎಪ್ಪತ್ತರ ದಶಕದ ಸಾಹಿತ್ಯದ ಮಹತ್ವದ ಲೇಖಕಿಯರಾದ ಸಿ.ಎಸ್.ಜಯಲಕ್ಷ್ಮೀ, ವೀಣಾ ಶಾಂತೇಶ್ವರ, ಎ.ಸಿ.ಮಾಲತಿ, ಗೀತಾನಾಗಭೂಷಣ, ನಿರೂಪಮ, ಸಾರಾ ಅಬೂಬಕ್ಕರ್, ನೇಮಿಚಂದ್ರ ಇವರ ಕಥೆಗಳಲ್ಲಿ ಗುರುತಿಸಬಹುದು.

ಹೀಗೆ ಸ್ತ್ರೀಸಂವೇದನೆಯನ್ನು ತಮ್ಮ ಕತೆಗಳಲ್ಲಿ ಸಾರ್ಥಕ ರೀತಿಯಲ್ಲಿ ನಿರ್ವಹಿಸುತ್ತಿರುವವರ ಸಾಲಿನಲ್ಲಿ ನೇಮಿಚಂದ್ರರು ಸಹ ಒಬ್ಬರಾಗಿದ್ದಾರೆ. ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ಬಗೆಗಿನ ಆಶಯಗಳು, ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷಗಳು, ಶಿಕ್ಷಣ ಮತ್ತು ಉದ್ಯೋಗದ ಬಗೆಗಿನ ತುಡಿತಗಳು, ಉದ್ಯೋಗಸ್ಥ ಮಹಿಳೆಯ ಒಳತೋಟಿಗಳು, ಕೌಟುಂಬಿಕ ಸಮಸ್ಯೆಗಳು, ಸ್ತ್ರೀಶೋಷಣೆ ಇತ್ಯಾದಿ ಅಂಶಗಳು ಒಳಗೊಳ್ಳುತ್ತವೆ. ಮಹಿಳಾ ಪ್ರಜ್ಞೆ ಎನ್ನುವಂತಹದ್ದು ಇಂದಿನದ್ದಲ್ಲ. ವಸಾಹತು ಕಾಲದಿಂದಲೂ ಬಂದಿರುವಂತಹದ್ದು. ಸ್ತ್ರೀ ತನ್ನ ಅಸ್ತಿತ್ವದ ಸ್ಥಾಪನೆಗಾಗಿ ಕಾಲಾನಂತರದಿಂದಲೂ ಬೇರೆ ಬೇರೆ ನೆಲೆಯಲ್ಲಿ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಳ್ಳುವಂತೆ ಕಾಣುತ್ತದೆ. ನವ್ಯ ಮೂಲದ ನೇಮಿಚಂದ್ರರಲ್ಲಿ "ಅವರ ಕಲ್ಪನೆಯ ಸ್ತ್ರೀಪಾತ್ರಗಳು ಬಹಳ ವೈಚಾರಿಕ ಆಲೋಚನೆಯುಳ್ಳ ಕೆಲವೊಮ್ಮೆ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಗೆ ಆಘಾತ ಉಂಟು ಮಾಡುವಂತಹ ಕ್ರಾಂತಿಕಾರಿಗಳಾಗಿದ್ದಾರೆ."[೧] ಎಂದು ಡಾ.ಎ.ಮುನಿಶಾಮಪ್ಪ ಅಭಿಪ್ರಾಯ ಪಡುತ್ತಾರೆ. ಇಂದಿನ ಮಹಿಳಾ ಸಾಹಿತ್ಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನೇಕ ಸಮಸ್ಯೆಗಳಿಗೆ ಸ್ಪಂದಿಸುವಂತಾಗಿದೆ. ವಚನಗಾರ್ತಿಯರ ವೈಚಾರಿಕತೆ, ಪ್ರೇರಣೆ, ಪ್ರಭಾವ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಸಂದರ್ಭದ ಲೇಖಕಿಯರು ಮಧ್ಯಮ ವರ್ಗದ ಅನುಭವಗಳೊಂದಿಗೆ ಶೋಷಿತರ ಸಂವೇದನೆಯನ್ನು ಬಿಚ್ಚಿಟ್ಟಿದ್ದಾರೆ. ಪುರುಷರಂತೆ ಸ್ತ್ರೀ ಸಹ ಇಂದು ನಾನಾ ಕ್ಷೇತ್ರಗಳಲ್ಲಿ ಸಮಾನಳಾಗಿ ಭಾಗವಹಿಸುತ್ತಾಳೆ.

೧.ಡಾ.ಎ.ಮುನಿಶಾಮಪ್ಪ; ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಪುಟ-೨೧೫

ಕನ್ನಡ ಮಹಿಳಾ ಕಥಾ ಸಾಹಿತ್ಯದ ನಾಲ್ಕನೇಯ ಪೀಳಿಗೆಯ ಲೇಖಕಿಯರಲ್ಲಿ ನೇಮಿಚಂದ್ರ ಅವರು ಸಂಪೂರ್ಣ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿರುವವರು. "ಲೇಖಕಿ ನೇಮಿಚಂದ್ರರ ಕತೆಗಳು ಸ್ತ್ರೀ ಶಕ್ತಿಯನ್ನು ಬಿಂಬಿಸುವ ಕಥೆಗಳಾಗಿ ಕಾಣಿಸಿಕೊಳ್ಳುತ್ತವೆ"[೧] ಕರೀಗೌಡ ಬೀಚನಹಳ್ಳಿಯವರು ಅಭಿಪ್ರಾಯ ಪಡುತ್ತಾರೆ. ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಯೇ ಪ್ರಧಾನವೆನಿಸುತ್ತದೆ. ಪುರುಷ ಪ್ರಧಾನ ಸಂಸ್ಕೃತಿ ಸ್ತ್ರೀಯರ ಮೇಲೆ ಹೇರಿರುವ ಶೀಲಾ, ಪಾತಿವ್ರತ್ಯ ಮೌಲ್ಯಗಳನ್ನು ಗಂಭೀರವಾಗಿ ಪರಿಗಣಿಸದ ಕಥಾನಾಯಕಿಯರು, ಪುರುಷ ಪ್ರಾಬಲ್ಯದಿಂದ ಉಂಟಾಗುವ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ದಿಟ್ಟತನ ಹಾಗೂ ಛಲಗಾರ್ತಿ ಸ್ತ್ರೀಪಾತ್ರಗಳು ನೇಮಿಚಂದ್ರರವರ ಕಥೆಗಳಲ್ಲಿದ್ದಾರೆ. ಅವರ ಸಾಹಿತ್ಯದಲ್ಲಿ ವೈಚಾರಿಕತೆಯನ್ನು ಹೀಗೆ ಗುರುತಿಸಬಹುದು. ನೇಮಿಚಂದ್ರರು ದುಡಿವ ದಂಪತಿಗಳ ಬದುಕನ್ನು ಕುರಿತಂತೆ 'ದುಡಿವ ಹಾದಿಯಲ್ಲಿ ಜೊತೆಯಾಗಿ' ಕೃತಿ ರಚಿಸಿರುವ ಇವರು ತಮ್ಮ ಬದುಕಿನ ಅನುಭವದ ನೆಲೆಯಲ್ಲಿ 'ಬದುಕು ಬದಲಿಸಬಹುದು' ಎನ್ನುವ ವಿಶಿಷ್ಟ ಪುಸ್ತಕವನ್ನು ತಂದಿದ್ದಾರೆ. ಸ್ತ್ರೀವಾದಿ ವಿಮರ್ಶಾ ಬರಹವನ್ನು ಒಳಗೊಂಡಿರುವ 'ಮಹಿಳಾ ಲೋಕ ಮತ್ತು ಮಹಿಳಾ ಅಧ್ಯಯನ' ಎನ್ನುವ ಎರಡು ಪುಸ್ತಕಗಳನ್ನು ತಂದಿದ್ದಾರೆ.

ಸ್ತ್ರೀಪರ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಲೇಖಕಿ ನೇಮಿಚಂದ್ರ 'ಯಾದವಶೇಮ್' ಎಂಬ ಕಾದಂಬರಿಯನ್ನು ಇತಿಹಾಸದ ಹಿನ್ನೆಲೆಯಲ್ಲಿ ರಚಿಸಿದ್ದಾರೆ. ಈ ಕಾದಂಬರಿಯು ದೀರ್ಘವಾಗಿದ್ದು, ೨೮೮ ಪುಟಗಳಲ್ಲಿ ವಿಸ್ತರಿಸಿಕೊಂಡಿದೆ. ಜರ್ಮನಿಯಲ್ಲಿ ಹಿಟ್ಲರ್‌ನ ಆಳ್ವಿಕೆಯಲ್ಲಿ ಯೆಹೂದಿಗಳು ದೇಶಾಂತರ ಹೋದರು. ಹಿಟ್ಲರ್‌ನ ನೆಲದಿಂದ ಗಾಂಧಿಯ ನೆಲಕ್ಕೆ ಬಂದ ಪುಟ್ಟ ಯಹೂದಿ ಬಾಲೆಯ ಸುತ್ತ ಹೆಣೆದ ಕತೆಯಿದು. ಕಾದಂಬರಿಯು ೩೪ ಅಧ್ಯಾಯಗಳಲ್ಲಿ ಯಹೂದಿಗಳ ಚಿತ್ರವಿಚಿತ್ರ ಹಿಂಸೆಯ, ನರಕಯಾತನೆಯ ಬದುಕನ್ನು ಚಿತ್ರಿಸುತ್ತದೆ. ನಾಜಿಗಳ ಆಳ್ವಿಕೆಯಲ್ಲಿ ಯಹೂದಿಗಳು ಜೀವಭಯದಿಂದ ಪ್ರಪಂಚದ ನಾನಾ ಭಾಗಗಳಿಗೆ ವಲಸೆ ಬಂದರು. ಅದರಲ್ಲಿ ವಿಜ್ಞಾನಿಗಳು ಸಹ ಸೇರಿದ್ದರು. ಹೀಗೆ ವಲಸೆ ಬಂದವರಲ್ಲಿ ಭಾರತಕ್ಕೆ ಬಂದು ನೆಲೆಸಿದವರು ತಂದೆ ಮತ್ತು ಮಗಳು. ಅವರೇ ಹ್ಯಾನಾ ಮತ್ತು ಅವಳ ತಂದೆ ಆರನ್ ಮೋಸೆಸ್. ಇವರ ಸುತ್ತ ಕಾದಂಬರಿ ಹೆಣೆದು ಕೊಂಡಿದೆ. ಭಾರತವು ನಾನಾ ಧರ್ಮಗಳ ನೆಲೆವೀಡು ಹಾಗೂ ಪರಧರ್ಮ ಸಹಿಷ್ಣುತೆ ಗುಣ ಹೊಂದಿದೆ ಎಂಬುದನ್ನು ಕಾದಂಬರಿಯಲ್ಲಿ ಬರುವ ಒಳ ವಿವರಗಳು

೧.ಕರೀಗೌಡ ಬೀಚನಹಳ್ಳಿ; ಶತಮಾನದ ಸಣ್ಣಕತೆಗಳ ಸಮೀಕ್ಷೆ, ಪುಟ-೧೬೦

ಸ್ಪಷ್ಟಪಡಿಸುತ್ತವೆ. ಜರ್ಮನಿಯ ಹಿಟ್ಲರ್‌ನ ಮುಷ್ಟಿಯಿಂದ ತಪ್ಪಿಸಿಕೊಂಡು ಬಂದ ಹ್ಯಾನಾ ಮತ್ತು ಅವಳ ತಂದೆ ಆರನ್ ಮೋಸೆಸ್ ಭಾರತವನ್ನು ತಲುಪುತ್ತಾರೆ. ಈ ಕುಟುಂಬಕ್ಕೆ ವಿವೇಕನ ಕುಟುಂಬ ಪರಿಚಯವಾಗುತ್ತದೆ. ಹ್ಯಾನಾಳ ತಂದೆ ಮರಣ ಹೊಂದಿದಾಗ ಅವಳನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವ ಮಟ್ಟಕ್ಕೆ ತಲುಪುತ್ತದೆ. ಅವರ ಸಂಬಂಧ ಹ್ಯಾನಾ ಅನಿತಳಾಗಿ ಮಾರ್ಪಾಡುತ್ತಾಳೆ. ಇವರಿಗೆ ಭಾರತ ಬಯಸಿ ಬಂದ ತಾಣವಾಗಿರಲಿಲ್ಲ. ಅಪತ್ಕಾಲಕ್ಕೆ ನೆರಳು ಕೊಟ್ಟ ಸ್ಥಳ ಮಾತ್ರವಾಗಿತ್ತು.

ಯಹೂದಿಯರ ಎದೆಯ ಭಾವಗಳನ್ನು ಎಳೆ ಎಳೆಯಾಗಿ ಈ ಕಾದಂಬರಿ ತೆರೆದಿಡುತ್ತದೆ. ೫೦ ವರ್ಷಗಳ ನಂತರ ಅನಿತಾ ಮರಳಿ ತನ್ನ ತಾಯಿ, ಅಕ್ಕ, ತಮ್ಮನನ್ನು ಅರಸುತ್ತಾ ಅಮೆರಿಕಾ, ಪ್ಯಾಲೆಸ್ಟೈನ್ ಇತ್ಯಾದಿ ದೇಶಗಳನ್ನು ಸುತ್ತುತ್ತಾಳೆ. ಜೆರುಸಲೇಮ್‌ನಿಂದ ಮರಳಿ ಬಂದ ಅನಿತಾಳ ಚಟುವಟಿಕೆಯೂ ತೀವ್ರಗತಿಯಲ್ಲಿ ಬೆಳವಣಿಗೆ ಹೊಂದಿತ್ತು. ಜೆರುಸಲೇಂಗೆ ಬಂದಾಗ ಅಲ್ಲಿ ಸಿಕ್ಕ ಅಕ್ಕನನ್ನು ನೋಡಿ ತುಂಬಾ ಸಂತೋಷಪಡುತ್ತಾಳೆ. ಅಕ್ಕನಿಂದ ಜರ್ಮನಿಯಲ್ಲಿ ೬೦ ಲಕ್ಷ ಜನರನ್ನು ಕೊಂದ ಕತೆಯ ಚಿತ್ರಣ ಮಾರ್ಮಿಕವಾಗಿ ಪ್ರಕಟವಾಗಿದೆ. ಕಾದಂಬರಿಯ ತಿಮ್ಮಣ್ಣನ ಪಾತ್ರ ಲೇಖಕಿಯು ಕಾರ್ಯ ನಿರ್ವಹಿಸುತ್ತಿರುವ ಕಾರ್ಖಾನೆಯ ಗುರ್ರಪ್ಪನ ಪಾತ್ರವಾಗಿ ಮೂಡಿಬಂದಿದೆ. ಹೀಗೆ ಹಲವು ಪಾತ್ರಗಳು ಕಾದಂಬರಿಯ ವಾಸ್ತವಿಕತೆಗೆ ಕೊಂಡಿಯಾಗಿ ಬೆಸೆದಿವೆ.

ಯೂರೋಪಿನ ಇತಿಹಾಸ, ಹಿಟ್ಲರ್‌ನ ಅಧಿಕಾರದಾಹ, ಯಹೂದಿಯರ ಚರಿತ್ರೆ ಪ್ರಪಂಚದ ಮೊದಲ ಮಹಾಯುದ್ಧ, ಎರಡನೇ ಮಹಾಯುದ್ಧ, ಇಸ್ರೇಲ್ ಸ್ಥಾಪನೆ ಇತ್ಯಾದಿ ಐತಿಹಾಸಿಕ ವಿವರಗಳನ್ನು ಖಚಿತವಾಗಿ ಈ ಕಾದಂಬರಿ ಒದಗಿಸುತ್ತದೆ. ಕಾದಂಬರಿಯಲ್ಲಿ ಅಲ್ಲಲ್ಲಿ ಗ್ರಾಮ್ಯ ಭಾಷೆಯ ಬಳಕೆಯನ್ನು ಗಮನಿಸಬಹುದು. 'ಸ್ವರ್ಗಕ್ಕೆ ಹೋಗುವಾಗ, ಭೀಮ್ಸೆ ನಾನು ಬಿದ್ದುಬಿಟ್ಟ, ಧರಮ್‌ರಾಯಂಗೆ ದುಃಖ ತತ್ಯಾಕೆ ಆಗ್ನಿಲ್ಲ. ಭೀಮನ್ ಯೆಣ ಎತ್ಕೊಂಡು ಹೊಂಟ ಅಲ್ಲಿ ದಾರ್‍ಯಾಗೆ ನೋಡ್ತಾನೆ. ಒಬ್ಬಾತ ಒಂದು ಗಿತಾನ ತಲೆಕೆಳಗಾಗಿ ಊರಿ, ನೂರಾ ಒಂದು ತೂತದ ಮಡಕೆನಾಗೆ ನೀರಾಕ್ತಾ ಅವ್ನೆ, ಧರಮ್‌ರಾಯ ನೋಡ್ದ ಆಗ ಅವಂಗೆ ಗ್ಯಾನೋದಯ ಆತು"[೧]

ಅನಿತಾ ಸ್ತ್ರೀಪರ ಹೋರಾಟ, ಸಂಘಟನೆ ಇತ್ಯಾದಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾಳೆ. ಏಕೆಂದರೆ ಅಂದು ಹೊತ್ತಿ ಉರಿದಿತ್ತು ಜರ್ಮನಿ. ನಿಂತು ನೋಡಿತ್ತು ಜಗತ್ತು.

೧.ನೇಮಿಚಂದ್ರ; ಯಾದ್ ವಶೇಮ್, ಪುಟ-೪೯

ಇಂದು ಎಲ್ಲಿ ಬೇಕಾದರೂ ಹುಟ್ಟಬಲ್ಲ. ಅಮೆರಿಕಾದಲ್ಲಿ, ಜರ್ಮನಿಯಲ್ಲಿ, ಇಸ್ರೇಲ್‌ನಲ್ಲಿ 'ಅಹಿಂಸೆಯೇ ಪರಮಧರ್ಮ' ಎಂದು ಸಾರಿದ ಭಾರತದಲ್ಲೂ ಕೂಡ ನಮ್ಮ ನಡುವೆ ಎಲ್ಲಿ ಬೇಕಾದರೂ ಹುಟ್ಟಿಬಿಡಬಲ್ಲ, ನಮ್ಮೊಳಗೇ ಜನಿಸಿಬಿಡಬಲ್ಲ. ಹಿಟ್ಲರ್‌ನನ್ನು ತಡೆಹಿಡಿವ ಹೊಣೆ ನಮ್ಮದು. ಹೀಗಾಗಿ ಕ್ರಿಯಾ ಮುಖಿ ಬೆಳವಣಿಗೆಯೊಂದಿಗೆ ಕೊನೆಗೊಳ್ಳುತ್ತದೆ.

ನೇಮಿಚಂದ್ರರು ಮೂರು ಕಥಾಸಂಕಲನಗಳನ್ನು ಹೊರತಂದಿದ್ದು, ಅವುಗಳ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

೧.ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು :

ನೇಮಿಚಂದ್ರರ ಸಮಗ್ರ ಕತೆಗಳ ಸಂಕಲನವಿದು. 'ಮರಳಿ ಬದುಕಿಗೆ ಈ ಪಯಣ' ಕತೆಯು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲ ಮನಸ್ಸಿನ ಸುಧಾಳ ಸುತ್ತ ಹೆಣೆದ ಕತೆ. ಸುಧಾ ಮೆದುಳು ರೋಗದ ನಿಮಿತ್ತ ಹಾಸಿಗೆ ಹಿಡಿದಿದ್ದಾಳೆ. ಕೋಮಾ ಸ್ಥಿತಿಯಲ್ಲಿರುವ ಸುಧಾಳನ್ನು ರಿಪುದಮನ್ ಸಿಂಗ್ ಬಹಳ ಜಾಗರೂಕತೆಯಿಂದ ಶುಶ್ರೂಷೆ ಮಾಡುತ್ತಾನೆ. ನಾಯಕಿಯ ಹಿಂದಿನ ನೆನಪುಗಳನ್ನು ಹೊರ ತೆಗೆಯಲು ಹರಸಾಹಸ ಮಾಡುತ್ತಾನೆ. ಸುಧಾಳ ತವರಿಗೆ ಕರೆದೊಯ್ದು 'ಇಲ್ಲಿ ನೋಡು ನೀನು ಆಡಿದ್ದೆ, ಅಲ್ಲಿ ನೀನು ನಡೆದಿದ್ದೆ, ಇದೋ ನೋಡು ನಿಮ್ಮ ಮನೆ. . . . . . ಈ ಜಗಲಿಯ ಮೇಲೆ ಮಲ್ಲಿಗೆಯ ದಂಡೆ ಕಟ್ಟಿದ್ದೆ. ಅಪ್ಪನ ಶಿವಪೂಜೆಗೆ ತುಂಬೆ ಹೂ ಬಿಡಿಸಿ ಪೋಣಿಸಿದ್ದೆ"[೧] ಎಂದು ರಿಪು ನಾಯಕಿಯ ನೆನಪುಗಳನ್ನು ಮರಳಿಸುತ್ತಾನೆ.

ಕತೆಯು ಆಶಾದಾಯಕ ಮಾತುಗಳಿಂದ ಕೊನೆಗೊಂಡಿರುವುದು ಲೇಖಕಿಯು ಬದುಕಿನ ಬಗೆಗೆ ಹೊಂದಿರುವ ಉತ್ಸಾಹವನ್ನು ತೋರಿಸುತ್ತದೆ. 'ಕತ್ತಲನ್ನು ಶಪಿಸುವ ಬದಲು ಸಣ್ಣ ಹಣತೆಯನ್ನು ಹಚ್ಚಿಡೋಣ ಅಲ್ವ'? ಎಂಬ ಮಾತುಗಳು ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಬೇಕು ಹಾಗೂ ಸಮಸ್ಯೆಗಳಿಗೆ ಪರಿಹಾರ ಮಾಡಿಕೊಳ್ಳುವುದರ ಕಡೆಗೆ ಮನುಷ್ಯನ ಆಲೋಚನೆಗಳಿರಬೇಕೆ ವಿನಹಃ ಸಮಸ್ಯೆಯನ್ನು ಹೆಮ್ಮರದಂತೆ ಬೆಳಸಿಕೊಳ್ಳಬಾರದು ಎಂಬ ಆಶಯವನ್ನು ಈ ವಾಕ್ಯವು ಧ್ವನಿಸುತ್ತದೆ.

'ತಣ್ಣನೆಯ ಕಣಿವೆಯಲ್ಲಿ ಒಂದು ಪ್ರೀತಿಯ ಕನಸು' ಈ ಕತೆಯು ಆಕರ್ಷಕ ನಿರೂಪಣೆಯ ರೂಪದಲ್ಲಿದೆ. ಹಿಮಾಂಕನ ಪರಿಚಯ ಸ್ನೇಹವಾಗಿ ಬೆಳೆಯುವುದನ್ನು ಕತೆಯು ಸೂಕ್ಷ್ಮವಾಗಿ ವಿವರಿಸುತ್ತದೆ. ಚೀನಾ, ಆಫ್ಘಾನಿಸ್ತಾನ, ರಷ್ಯಾಗಳಿಂದ ಸುತ್ತುವರೆದ 'ಲೆ' ಎಂಬ ಭೂಪ್ರದೇಶದ ನಿಸರ್ಗದ ವರ್ಣನೆ ಓದುಗರ ಕಣ್ಣ ಮುಂದೆಯೇ ಬರುವಂತೆ ಲೇಖಕಿ ಕತೆಯನ್ನು ಕಟ್ಟಿಕೊಟ್ಟಿದ್ದಾರೆ. ಭಾಷೆ ಜನರ ಪರಿಚಯವಿಲ್ಲದ ಊರಿನ ಅನುಭವಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾರೆ. ಹಿಮಾಂಕನ ಕುಟುಂಬ ತೋರಿಸುವ ಅತಿಥಿ ಸತ್ಕಾರವನ್ನು ನೆನೆಯುತ್ತಾರೆ. ಹಿಮಾಂಕನನ್ನು ಅಗಲಿ ಹೋಗುವುದು ನಾಯಕಿಗೆ ವಿರಹವಾಗಿ ಕಾಣುತ್ತದೆ.

೧.ನೇಮಿಚಂದ್ರ; ಮರಳಿ ಬದುಕಿಗೆ ಈ ಪಯಣ, ಪುಟ–೩೮

'ನೀನಿರುವೆ ನಮ್ಮೊಡನೆ' ಕತೆಯು 'ಗ್ಲಿಯೋಮಾ' ಎಂಬ ಮಿದುಳು ಕ್ಯಾನ್ಸರ್‌ಗೆ ತುತ್ತಾದ ಕೊನೆಯ ದಿನಗಳನ್ನು ಚಿತ್ರಿಸುತ್ತದೆ. ರವಿ ಹೆಂಡತಿ ಮತ್ತು ಮಗಳನ್ನು ನೆನೆದು ಟಾಯ್ಲೆಟ್‌ನಲ್ಲಿ ಅಳುವ ಪ್ರಸಂಗ ಕರುಣಾಜನಕವಾಗಿದೆ. ಪುರಾಣದ ಸಾವಿತ್ರಿಯ ಹಾಗೆ ಯಮನೊಡನೆ ಸೆಣಸಾಡಿ ಗಂಡನ ಪ್ರಾಣವನ್ನು ಉಳಿಸಲು ಸಾಧ್ಯವಿಲ್ಲವೆಂದು ಹೆಂಡತಿ ಉದ್ಗರಿಸುತ್ತಾಳೆ. 'ದೇವರೆ ರವಿಗೆ ನೋಡು

ಕೊಡದಿರು, ನೀ ಎಣಿಸಿಟ್ಟ ಕೆಲವು ಕ್ಷಣಗಳನ್ನು ನೆಮ್ಮದಿಯಿಂದ ಕಳೆಯಲು ಬಿಡು, ಅದೊಂದೆ ನನ್ನ ಪ್ರಾರ್ಥನೆ"[೧]

'ನಿನ್ನೆಗಳ ಹೊರೆ ಇಳಿಸಿ' ಕತೆಯು ಜೀವನದ ಜಂಜಾಟಗಳನ್ನು ಪರಿಚಯಿಸುತ್ತದೆ. ತಂದೆ ಕಿರಣ್, ತಾಯಿ ವಿಜಿ, ಮಗಳು ಚೈತ್ರ. ಇವರದು ಚಿಕ್ಕ ಚೊಕ್ಕ ಕುಟುಂಬ ಕಿರಣ್ ಸರ್ಕಾರಿ ಕಾರ್ಖಾನೆಯ ಮ್ಯಾನೇಜರ್, ವಿಜಿ ಶಾಲಾ ಶಿಕ್ಷಕಿ. ನೆಮ್ಮದಿಯ ಕುಟುಂಬ. ಆದರೆ ನೆಮ್ಮದಿ ಬಹುಕಾಲ ಉಳಿಯಲಿಲ್ಲ. ಕಾರಣ ಕಿರಣನ ಕಾರ್ಖಾನೆಯಲ್ಲಿ ಆದ ಬದಲಾವಣೆಗಳು. ವಿಜಿಗೆ ಬೆಳಗ್ಗೆ ೪.೩೦ರಿಂದ ಪ್ರಾರಂಭವಾದ ಕೆಲಸ ಮುಗಿಯುವುದು ಸಂಜೆಗೆ. ದಿನದಿಂದ ದಿನಕ್ಕೆ ಒತ್ತಡಗಳ ಏರಿಕೆಯಿಂದ ಎಗರಾಟವೇ ಜಾಸ್ತಿ ಆಯಿತು. ಒಬ್ಬರಿಗೊಬ್ಬರು ಕ್ಷಣ ಕೂತು ಮಾತನಾಡಲು ಸಾವಧಾನ, ಸಮಾಧಾನ ಇಲ್ಲದ ಹಾಗಾಗಿತ್ತು. ಬದುಕಲು ಪುರುಸೊತ್ತಿಲ್ಲದ ಬದುಕು.

ಶಿಸ್ತಿನ ಸಿಪಾಯಿ ಕಿರಣ್ ಒಮ್ಮೊಮ್ಮೆ ರೇಗಾಡುತ್ತಿದ್ದ, 'ಅವರು ಏನು ಮಾಡ್ತಾರೆ ಅದು ನನಗೆ ಬೇಡ, ಒಂದು ವಿಭಾಗದ ಎ.ಜಿ.ಎಮ್ ನಾನು, ನಾನು ಸರಿಯಾದ ಸಮಯಕ್ಕೆ ಹೋಗಲಿಲ್ಲ ಎಂದರೆ ನನ್ನೊಡನೆ ಕೆಲಸ ಮಾಡೋ ಐವತ್ತು 'ಜನರಿಗೆ ಸಮಯ ಪ್ರಜ್ಞೆ' ಬಗ್ಗೆ ಹೇಳೋ ನೈತಿಕ ಹಕ್ಕು ನನಗಿರುತ್ತಾ' ಎನ್ನುವವ.

ಒಂದು ದಿನ ಬೆಂಗಳೂರಿನಲ್ಲಿ ಬಾಂಬ್ ಬ್ಲಾಸ್ಟ್ ಆಯಿತು ಎಂಬ ಸುದ್ದಿ ಹರಡಿದಾಗ ಗಂಡ, ಮಗಳಿಗೆ ಏನಾಗಿದೆಯೋ ಎಂಬ ಆತಂಕದಿಂದ ಮನೆಗೆ ಬಂದಾಗ ಯಾವುದೇ ಅವಘಡ ಸಂಭವಿಸದೇ ಇದದ್ದು, ಆದರೆ ಕಿರಣ್ ಸ್ವಲ್ಪದರಲ್ಲಿ ಸಾವಿನಿಂದ ಗೆದ್ದು ಬಂದಿದ್ದ. ಮಗಳು ಕ್ಷೇಮವಾಗಿ ಮನೆ ಸೇರಿದ್ದಳು. ವಿಜಿ ಉದ್ದವಾದ ಉಸಿರು ಬಿಟ್ಟಿದ್ದಳು. ವಿಜಿಯ ಇದ್ದ ಒಬ್ಬ ಅಣ್ಣ ಅಮೆರಿಕಾ ಸೇರಿಕೊಂಡಿದ್ದ. ಅಲ್ಲಿಂದಲೇ ಯೋಗಕ್ಷೇಮ ವಿಚಾರಿಸಿದಾಗ ಮೌನ ಮುರಿದಿತ್ತು.

೧.ನೇಮಿಚಂದ್ರ; ನೀನಿರುವೆ ನಮ್ಮೊಡನೆ, ಪುಟ-೬೮

ಮಾತಾಗಿ ಹರಿದಿತ್ತು. ಕಹಿನೆನಪುಗಳ ತೆರೆ ಸರಿದು ಮನಸ್ಸು ಮಗುವಾಗಿತ್ತು. ಮತ್ತೊಂದು ಬೆಳಗು ಹರಿದಿತ್ತು, ಎಂದಿನಂತೆ ಎಲ್ಲರೂ ಅವರವರ ಕೆಲಸಗಳಲ್ಲಿ ತೊಡಗಿಸಿಕೊಂಡರು. ನಿನ್ನೆಗಳ ಹೊರ ಇಳಿಸಿ, ನಾಳೆಗಳಿಗೆ ಕಾಲಿಟ್ಟು ಹೊರಟ್ಟಿದ್ದರು.

ನೇಮಿಚಂದ್ರರ ಎರಡನೇ ಕಥಾ ಸಂಕಲನವಿದು. ಇದು ಏಳು ಕತೆಗಳನ್ನೊಳಗೊಂಡಿದೆ. ಲೇಖಕಿ ಕಥಾಹಂದರಕ್ಕೆ ಬೌದ್ಧಿಕತೆಯ ಬಲ ನೀಡಿ ಭಿನ್ನ ಮಾದರಿಯ ಕತೆಗಳನ್ನು ನೀಡಿದ್ದಾರೆ. ವಿಭಿನ್ನ ಮಾದರಿಯ ಕತೆಗಳಿಂದ ಕನ್ನಡ ಸಾಹಿತ್ಯ ವಿಶಿಷ್ಟತೆ ಪಡೆದಿದೆ. ಈ ಸಂಕಲನದ 'ಬದುಕು ಕಾಯುವುದಿಲ್ಲ' ಮೊದಲ ಕತೆಯು ಭಿನ್ನ ಮಾದರಿಯ ಕಥಾವಸ್ತುವನ್ನು ಹೊಂದಿದೆ. ವಿಶೂ ಸಂಯುಕ್ತ ವಿದ್ಯಾವಂತರು, ಉದ್ಯೋಗಸ್ಥರು. ಆದರೆ ಇವರಿಬ್ಬರ ವೈವಾಹಿಕ ಸಂಬಂಧದಲ್ಲಿ ಬಿರುಕು ಬಿಟ್ಟಿದೆ. ಬದುಕಿನ ಮೇಲೆ ಎಲ್ಲಿಲ್ಲದ ಉತ್ಸಾಹ ಸಂಯುಕ್ತಗಳಿಗೆ, ಆದರೆ ಸಂಬಂಧಗಳ ಅಸ್ತಿತ್ವವನ್ನೇ ಅರಿಯದ ವಿಶೂಗೆ ಹಣವೇ ಎಲ್ಲ. ತಾಯಿಯ ಕಾಯಿಲೆಗೆ ಖರ್ಚು ಮಾಡಲು ಹಿಂದು-ಮುಂದು ನೋಡುವ ವಿಚಿತ್ರ ಸ್ವರೂಪದ ವ್ಯಕ್ತಿ. ವಿಶೂನ ಈ ವರ್ತನೆಯನ್ನು ಬದಲಿಸಲು ಸಂಯುಕ್ತ ಮಾಡಿದ ಪ್ರಯತ್ನ ನಿಶ್ಪ್ರಯೋಜಕವಾಯಿತು.

ಗಂಡ-ಹೆಂಡತಿ ಸಂಬಂಧ ಸೂಕ್ಷ್ಮವಾದುದು. ಸಂಬಂಧಗಳಲ್ಲಿ ಬಿರುಕು ಮೂಡಿದರೆ ಸಂಸಾರ ಒಡೆಯುತ್ತದೆ. ಇಂಥ ಕಥಾ ಹಂದರವನ್ನು 'ನನ್ನೆದೆಯ ಕದನದಲ್ಲಿ' ಕತೆಯು ಹೊಂದಿದೆ. ಪುರುಷ ತಾನು ಏನು ಬೇಕಾದರೂ ಮಾಡಬಹುದೆಂದು, ನಾಲ್ಕು ದಿನಕ್ಕೆಂದು ತವರಿಗೆ ಹೋದ ಹೆಂಡತಿ ಇಲ್ಲದ ವೇಳೆಯಲ್ಲಿ ಕೆಲಸದ ಹುಡುಗಿಯ ಮೇಲೆ ಲೈಂಗಿಕ ಅತ್ಯಾಚಾರ ಮಾಡುತ್ತಾನೆ. ಆಕಸ್ಮಿಕವಾಗಿ ಅಲ್ಲಿಗೆ ಬಂದ ಹೆಂಡತಿ ಮಿಹಿಕಾ, ಪರಿಸ್ಥಿತಿಯಿಂದ ಪಾರಾಗಲು ತನ್ನೊಳಗೆ ಕದನ ನಡೆಸುತ್ತಾಳೆ. ಆಲೋಚಿಸಿ ಮಿಹಿಕಾ ಯಾವ ಗೊಂದಲಕ್ಕೂ ಒಳಗಾಗದೆ ಗಂಡನಿಂದ ಸರಳವಾಗಿಯೂ ದೂರವಾಗಿ ತನ್ನ ವಿರೋಧವನ್ನು ತೋರಿಸುತ್ತಾಳೆ. ಲೇಖಕಿ ಈ ಕತೆಯನ್ನು ನಿರ್ವಹಿಸಿರುವ ರೀತಿ ನಾಟಕೀಯವಾಗಿದೆ. ಕುಟುಂಬದಿಂದ ಅವಳು ಬೇರ್ಪಡುವುದು ಆಧುನಿಕ ಸ್ತ್ರೀಯ ಮನೋಧರ್ಮವನ್ನು ಪ್ರತಿನಿಧಿಸುತ್ತದೆ. ಗಂಡ ಹೆಂಡತಿ ಸಂಬಂಧ ಏಳೇಳು ಜನ್ಮದ್ದು, ಪತಿಯೇ ಪರದೈವ, ಆತ ಏನು ಮಾಡಿದರೂ ಒಪ್ಪಿಕೊಳ್ಳಬೇಕಾದುದ್ದು ಸತಿಯ ಧರ್ಮ ಎಂಬ ಸಂಪ್ರದಾಯದ ನಿಲುವನ್ನು ಪ್ರಶ್ನಿಸಿ ವಿರೋಧಿಸಿ ಹೊಸ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಈ ಕತೆಯಲ್ಲಿ ಸ್ತ್ರೀಪರ ಕಾಳಜಿಯನ್ನು ಕಾಣಬಹುದು.

'ನೆನಪುಗಳು ನೋಯಲಿಲ್ಲ' ಕತೆಯು ವಿಶಿಷ್ಟ ಕಥಾಹಂದರವನ್ನು ಹೊಂದಿದೆ. ಸಾವಿತ್ರಿ ತನ್ನ ಯೌವ್ವನದ ದಿನಗಳಲ್ಲಿ ಒಂದು ಘಟನೆಯಿಂದ ರವಿಯಲ್ಲಿ ಪ್ರೀತಿ ಅಂಕುರಿಸಿದ ರೀತಿಯನ್ನು ಹಾಗೂ ಅದರ ನೆನಪಾಗಿ ಮಗಳಿಗೆ ಶಾಮೋನಿ ಎಂದು ಹೆಸರಿಟ್ಟದ್ದನ್ನು ಡೈರಿಯಲ್ಲಿ ದಾಖಲಿಸಿರುತ್ತಾಳೆ. ಪ್ರೀತಿಸಿದ ವ್ಯಕ್ತಿಯನ್ನು ಮದುವೆಯಾಗಲು ಅಸಾಧ್ಯವಾದಾಗ ಗೋಪಿಯನ್ನು ವಿವಾಹವಾಗುತ್ತಾಳೆ. ಇಲ್ಲಿ ಸಾವಿತ್ರಿಯೂ ಪ್ರೀತಿಸಿದ ರವಿಯನ್ನು ತನ್ನ ಜೀವನದುದ್ದಕ್ಕೂ ನೆನಪಿನಲ್ಲಿ ಇಡುತ್ತಾಳೆ. ಬದುಕು ನೀಡಿದ ಮಾನವೀಯತೆ ತೋರಿದ ರವಿಯನ್ನು ಸಾವಿತ್ರಿ ಎಂದೂ ಮರೆಯುವುದಿಲ್ಲ. ಆದರೆ ಬದುಕಿನಲ್ಲಿ ಜೊತೆಗಿರುವ ಗೋಪಿಯನ್ನು ಎಂದೂ ಕ್ಷಮಿಸಲಾರಳು.

'ಬದುಕು ನಿನ್ನಲ್ಲೆಂಥಾ ಮುನಿಸು' ಕತೆಯು ಶಶಿಯ ಮಾನಸಿಕ ಒಳತೋಟಿಗಳನ್ನು ಹಂತಹಂತವಾಗಿ ತೆರೆದಿಡುತ್ತದೆ. ದೈಹಿಕವಾಗಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವ ಶಶಿಯ ಮನಸ್ಸಿಗೂ ಮಿದುಳಿಗೂ ಅಸ್ವಸ್ಥತೆ ಕಾಡುತ್ತದೆ. ಭೌದ್ಧಿಕ ಸ್ಥೈರ್ಯವನ್ನು ಕಳೆದುಕೊಂಡಿರುವ ಶಶಿಯ ಮನಸ್ಸಿನ ವಿಷಯಗಳನ್ನು ಕತೆಯು ಒಂದೊಂದಾಗಿ ವಿಶ್ಲೇಷಿಸುತ್ತದೆ. ಈ ಕತೆಯಲ್ಲಿ ರಮೇಶನ ಪಾತ್ರ ತುಂಬಾ ಸ್ವಾರಸ್ಯಕರವಾದುದು. ಏಕೆಂದರೆ ಹೆಂಡತಿಯ ಹಲವು ಗೊಂದಲ ಸಮಸ್ಯೆಗಳ ಜೊತೆಗೆ ಆರ್ಥಿಕ ಸಮಸ್ಯೆ ಎದುರಾದರೂ ಯಾವುದೇ ರೀತಿಯ ಕೋಪ, ಕ್ರೌರ್ಯ ವರ್ತನೆಗಳಿಗೆ ಒಳಗಾಗದೆ ಸೌಮ್ಯವಾದ ರೀತಿಯಲ್ಲಿ ವರ್ತಿಸುತ್ತಾನೆ. ಹೆಂಡತಿಯ ಕಾಯಿಲೆಯ ನಿಮಿತ್ತವಾಗಿ ತಾನೇ ಅಡುಗೆ ಮಾಡಿ ಮಗು ಮತ್ತು ಹೆಂಡತಿಯ ಶುಶ್ರೂಷೆಯನ್ನು ಮಾಡುತ್ತಾನೆ. ಓದುಗರಿಗೆ ಹೃದಯ ವಿದ್ರಾವಕತೆಯನ್ನು ಕತೆಯು ಮೂಡಿಸುತ್ತದೆ. ಸ್ತ್ರೀಪರ ಕಾಳಜಿಯನ್ನು ಹೊಂದಿರುವ ಪುರುಷನ ಮನೋಗುಣವನ್ನು ಇಲ್ಲಿ ಮನಗಾಣಬಹುದು. ಕತೆಯ ಕೊನೆಯು ತೀರಾ ಸ್ವಾರಸ್ಯಕರವಾದ ರೀತಿಯಲ್ಲಾಗಿದೆ. ಆಧುನಿಕತೆಯ ಅಬ್ಬರದ ನಡುವೆ ಸ್ತ್ರೀಪುರುಷ ಸಮಾನವಾಗಿ ದುಡಿದಾಗ ಕುಟುಂಬ ನಿರ್ವಹಣೆ ಸುಲಭ ಸಾಧ್ಯವೆಂದರಿತ ಶಶಿಯು ತಾನೇ ಸ್ವ ಆಸಕ್ತಿಯಿಂದಾಗಿ ಬರವಣಿಗೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾಳೆ. ಹೆಣ್ಣಿನ ಬೆಳವಣಿಗೆಯನ್ನು ತೋರಿಸುತ್ತದೆ. ಈ ಸಂಕಲನದ ಶೀರ್ಷಿಕೆಯನ್ನೊತ್ತ ಕತೆಯು ಸೌಮ್ಯ ಸ್ವಭಾವದ ಹೆಣ್ಣೊಬ್ಬಳು ಗಂಡನಿಂದ ಅನ್ಯಾಯಕ್ಕೊಳಗಾಗಿ ವಿಚ್ಛೇದನ ಪರಿಸ್ಥಿತಿಯಿಂದ ಬದಲಾಗಲು ಆಧ್ಯಾತ್ಮದ ಮಾರ್ಗವನ್ನು ಹಿಡಿಯುತ್ತಾಳೆ. ಲೇಖಕಿ ತನ್ನ 'ಹತ್ತಿರದಿಂದ ಕಂಡ ಅನುಭವವನ್ನು ಕತೆಯಾಗಿಸಿದ್ದೇನೆ ಎಂದು ಅವರ ಬದುಕು ಬದಲಿಸಬಹುದು ಕೃತಿಯಲ್ಲಿ ವಿವರಿಸಿದ್ದಾರೆ'[೧]

೧.ನೇಮಿಚಂದ್ರ; ಬದುಕು ನಿನ್ನಲ್ಲೆಂಥಾ ಮುನಿಸು. ಪುಟ-೧೪೧

ಹೆಣ್ಣಿನ ಮನಸ್ಸು ಸೂಕ್ಷ್ಮವಾದುದು. ಅವಳು ಬಾಳಿನಲ್ಲಿ ಬಂದೊದಗುವ ಭೀಕರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದು 'ಕಳೆಯ ಬೇಕಿದೆ ನಿನ್ನ ಜೊತೆಯಲ್ಲಿ ಒಂದು ಶ್ಯಾಮಲ ಸಂಜೆ' ಕತೆಯ ಕೊನೆಯಲ್ಲಿ ಲೇಖಕಿ ಸೂಚ್ಯವಾಗಿ ನಿರೂಪಿಸುತ್ತಾರೆ. ಅಹಲ್ಯ ಮದುವೆಯಾದ ಹೊಸದರಲ್ಲಿ ಗಂಡನೊಡನೆ ಅತ್ಯಂತ ಸಂತೋಷದಿಂದಿರುತ್ತಾಳೆ. ಆದರೆ ಗಂಡ ಮದುವೆಗೆ ಮುಂಚೆಯೇ ಬೇರೊಂದು ಹೆಣ್ಣನ್ನು ಪ್ರೀತಿಸಿದ್ದ ಹಾಗೂ ಅವಳ ನಡುವಿನ ಸಂಬಂಧ ಮದುವೆಯಾದ ಕೆಲದಿನಗಳ ನಂತರ ಮತ್ತೆ ಮುಂದುವರೆಯುತ್ತದೆ. ಕೊನೆಗೆ ರವಿ ಅಹಲ್ಯಾಳಿಗೆ ವಿಚ್ಛೇದನ ನೀಡಿಯೇ ಬಿಡುತ್ತಾನೆ. ಮಾನಸಿಕವಾಗಿ ಬಹಳ ಆಘಾತಕ್ಕೊಳಗಾಗಿ ಅಹಲ್ಯ ಸನ್ಯಾಸಿಯಾಗುವ ಹಂತ ತಲುಪುತ್ತಾಳೆ. ಚಿಕ್ಕ ಮಗುವನ್ನು, ವಯಸ್ಸಾದ ತಾಯಿಯ ಬಳಿ ಬಿಟ್ಟು, ಆಧ್ಯಾತ್ಮದ ಕಡೆಗೆ ತಿರುಗುತ್ತಾಳೆ. ಮಾನಸಿಕವಾಗಿ ಸ್ತ್ರೀಯು ಒಳತೋಟಿಗಳನ್ನು ಹಿಡಿದಿಡಲು ಆಗದೆ ಅವುಗಳನ್ನು ನಾನಾ ರೂಪಗಳಲ್ಲಿ ಹೊರ ಹಾಕುತ್ತಾಳೆ ಎಂಬುದನ್ನು ಕಥೆಯು ವಿಶ್ಲೇಷಿಸುತ್ತದೆ.

'ಇತಿಹಾಸದಂಚಿನಲಿ' ಕತೆಯು ಪೀಠಿಕೆ, ಪ್ರಾರಂಭ, ಪುನರಾರಂಭ ಎಂಬ ಮೂರು ಭಾಗಗಳಲ್ಲಿ ವಿಸ್ತರಿಸಿದೆ. ಬದುಕಿನಲ್ಲಿ ಬರುವ ಸಣ್ಣಪುಟ್ಟ ತೊಂದರೆಗಳನ್ನು ಬೃಹದಾಕಾರದ ಸಮಸ್ಯೆ ಎಂದು ಪರಿಗಣಿಸಿ ಎದುರಿಸುವ ದಂಪತಿಗಳ ಕತೆಯಿದು. ಮಕ್ಕಳ ಸಂಪೂರ್ಣ ಬೆಳವಣಿಗೆಗೆ ಪಾಲಕರ ಪ್ರೋತ್ಸಾಹ, ಸಹಕಾರ ಅತ್ಯಗತ್ಯ. ಆದರೆ ತಾವು ಹೇಳಿದ ಮಾರ್ಗದಲ್ಲೇ, ತೋರಿದ ದಾರಿಯಲ್ಲೇ ಮಕ್ಕಳು ನಡೆಯಬೇಕು ಎಂಬ ಹಠ ಒಳ್ಳೆಯದಲ್ಲ ಎಂಬುದನ್ನು ಈ ಕತೆಯು ಸಾರಿ ಹೇಳುತ್ತದೆ. ಶಶಿ ಮತ್ತು ಕಿರಣ್ ಒಳ್ಳೆಯ ಉದ್ಯೋಗಸ್ಥರು ತಮ್ಮ ಮಗ ರವಿಯು ತಮ್ಮಂತೆ ಇಂಜಿನೀಯರ್ ಅಥವಾ ಡಾಕ್ಟರ್ ಆಗಬೇಕೆಂದು ಆತನ ಮೇಲೆ ತೀವ್ರ ಒತ್ತಡ ಹೇರುತ್ತಾರೆ. ಹಾಗೂ ಅವನ ಭವಿಷ್ಯದ ಬಗ್ಗೆ ಈ ದಂಪತಿಗಳು ತುಂಬಾ ಆಸೆ, ಆಕಾಂಕ್ಷೆ, ನಿರೀಕ್ಷೆಗಳನಿಟ್ಟು ಕೊಂಡಿರುತ್ತಾರೆ. ಆದರೆ ರವಿ ಇವರ ಯೋಚನೆ, ಯೋಜನೆಗಳಿಗೆ ಸ್ಪಂದಿಸದೆ, ವಿರುದ್ಧವಾಗಿ ವರ್ತಿಸುತ್ತಾನೆ. ತಾವು ಮಗನನ್ನು ಬೆಳೆಸುವ ಹಾದಿಯಲ್ಲಿ ಎಲ್ಲಾದರೂ ತಪ್ಪಿದ್ದೇವೆಯೇ ಎಂದು ತಮ್ಮ ಬದುಕನ್ನು ಪುನರಾವಲೋಕಿಸಿ ಕೊಳ್ಳುತ್ತಾರೆ.

ಕಿರಣ್ ಮತ್ತು ಶಶಿ ಅತಿ ಬಡತನದಲ್ಲಿಯೇ ಓದಿ, ರ್‍ಯಾಂಕು ಪಡೆದು ಉದ್ಯೋಗ ಗಿಟ್ಟಿಸಿದ್ದರು. ಆದರೆ ಶಶಿಯ ಅಣ್ಣ ಓದು ಇಲ್ಲದೆ, ಕೆಲಸವು ಇಲ್ಲದೆ ಪೋಲಿ ಬಿದ್ದಿದ್ದ. ಅವರ ತಂದೆ ಮಗನ ಅನುಚಿತ ವರ್ತನೆಯಿಂದ ಪಾರಾಗಲು ಆಶ್ರಮವಾಸಿಯಾಗುತ್ತಾರೆ. ಆದರೆ ಶಶಿ ತನ್ನ

ಕುಟುಂಬದಲ್ಲಿ ಎದ್ದ ಬಿರುಗಾಳಿಯನ್ನು ಶಮನ ಮಾಡಲು ತಿಳಿಯಾದ ಪರಿಸ್ಥಿತಿಗೆ ತರಲು ಪ್ರಯತ್ನಿಸುತ್ತಾಳೆ.

ನೇಮಿಚಂದ್ರ ಹೇಳುವಂತೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಅಣುಸ್ಫೋಟದಲ್ಲಿ ನೆಲೆ ಕಚ್ಚಿದ ಜಪಾನ್ ಚೇತರಿಸಿಕೊಳ್ಳಲು ಡೆಮಿಂಗ್ ಅವರ ಸಿದ್ಧಾಂತಗಳನ್ನು ಅಳವಡಿಸಿಕೊಂಡಿತಂತೆ, ನಿರೀಕ್ಷಿಸಿದ, ನೀರಿಕ್ಷೆಗೂ ಮೊದಲೆ ಜಪಾನ್ ಡೆಮಿಂಗ್ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಮೇಲೆದ್ದಿತು. ಅದೇ ಡೆಮಿಂಗ್‌ನನ್ನು ಭಾರತಕ್ಕೆ ಆಹ್ವಾನಿಸಿದಾಗ ಆಗಮಿಸಲು ನಿರಾಕರಿಸಿದನಂತೆ. ಏಕೆಂದರೆ ಸಿದ್ದಾಂತಗಳಿಗೆ ಜನರು ತಯಾರಿರಬೇಕು. ಇಡೀ ದೇಶ ಸಿದ್ಧವಿರಬೇಕು. ಅದಿಲ್ಲದೆ ಪ್ರವಚನಗಳು ಪವಾಡ ಮಾಡಲಾರವು. ಹೀಗೆ ಬೆರಳಿಡಿದು ಎಳೆದೊಯ್ಯಲು ಸಾಧ್ಯವೇ “ಅವನ ಬದುಕಿನ ಆಗು ಹೋಗುಗಳಿಗೆ ಅವನೂ ಜವಾಬ್ದಾರ. ನಾವು ದಾರಿ ತೋರಬಲ್ಲೆವು, ನಡೆಯಬೇಕಾದವನು ಅವನು ಮಾತ್ರ, ಅವನ ಕಾಲ ಮೇಲೆ. ಮಡಿಲಲ್ಲಿ, ಹೆಗಲಲ್ಲಿ ಎತ್ತೊಯ್ಯುವ ಕಾಲ ಆಯಿತಲ್ಲ. ಕಿರಣ್, ಕೊಡುವ ಕೈ ದೊಡ್ಡದಿರಬಹುದು, ಪಡೆವ ಹಸ್ತಗಳ ಮಿತಿಗೇನು ಮಾಡುವುದು”[೧] ಎಂದು ಗಂಡನನ್ನು ಸಹಜ ಸ್ಥಿತಿಗೆ ತರಲು ಶಶಿ ಪ್ರಯತ್ನಿಸುತ್ತಾಳೆ.

‘ನೆನಪಿನಂಗಳದಲ್ಲಿ ನೂರು ಚಿತ್ತಾರ’ ಈ ಕತೆಯ ನಾಯಕಿ ಅನಘಾ ಪ್ರೇಮದ ಆದರ್ಶದಲ್ಲಿ ಬಿದ್ದು ಇಲ್ಲದ ಕಲ್ಪನೆಗಳನ್ನು ಕಟ್ಟಿಕೊಂಡು ಕೊರಗುತ್ತಿರುತ್ತಾಳೆ. ಅವಳ ತಾಯಿ ಮಗಳಲ್ಲಿ ಮನಃಪರಿವರ್ತನೆ ಮಾಡುತ್ತಾಳೆ. ಹಾಗೆ ಮಾಡಲು ಅವಳು ಅನುಸರಿಸಿದ ವಿಧಾನವೆಂದರೆ ತನ್ನ ಭೂತಕಾಲದ ಪ್ರೇಮ ಪ್ರಸಂಗಗಳನ್ನು ಮಗಳಿಗೆ ವಿವರಿಸುವುದು. ನಾ ಇಲ್ಲಿಗೆ ತಲುಪಿದ್ದರೆ ಹಾರಿ ಜಿಗಿದು ತಲುಪಿಲ್ಲ, ಹಲವು ಬಾಗಿಲುಗಳನ್ನು ತಟ್ಟಿ ನನ್ನ ಅಂಗಳಕ್ಕೆ ಬಂದಿರುವೆ, ಹಲವು ತಾಣಗಳಲ್ಲಿ ತಂಗಿ ಪಯಣಿಸಿದ್ದೇನೆ”[೨] ಎಂದು ಹೇಳುತ್ತಾ ತನ್ನ ‘ತಂಗುದಾಣ’ಗಳನ್ನು ಮಗಳಿಗೆ ಪರಿಚಯ ಮಾಡಿಕೊಡುತ್ತಾಳೆ. ಆದರ್ಶ ಪ್ರೇಮದ ಅಮಲಿನಲ್ಲಿದ್ದ ಮಗಳ ಕಣ್ಣು ತೆರೆಸುತ್ತಾಳೆ. ಅನಘಾಳಂಥ ಪಾತ್ರ ರಚನೆಯಲ್ಲಿ ವೈಚಾರಿಕತೆ ಮತ್ತು ಸ್ತ್ರೀವಾದಿ ಪ್ರಜ್ಞೆಯಿದೆ.

೧.ನೇಮಿಚಂದ್ರ; ಇತಿಹಾಸದಂಚಿನಲ್ಲಿ, ಪುಟ-೧೦೦
೨. ಅದೇ; ನೆನಪಿನಂಗಳದಲ್ಲಿ ನೂರು ಚಿತ್ತಾರ, ಪುಟ-೧೨೦

೨. ಮತ್ತೆ ಬರೆದ ಕತೆಗಳು :

ಸ್ತ್ರೀಸಂವೇದನೆಗೆ ಇಂದು ಹೊಸ ಅರ್ಥ ತಂದು ಕೊಡುತ್ತಿರುವ ಕೆಲವೇ ಕೆಲವು ಲೇಖಕಿಯರ ಸಾಲಿನಲ್ಲಿ ನೇಮಿಚಂದ್ರರು ಮುಖ್ಯವಾಗಿದ್ದಾರೆ. ಅವರ 'ಮತ್ತೆ ಬರೆದ ಕತೆಗಳು' ಒಂದು ಉತ್ತಮ ಕಥಾ ಸಂಕಲನವಾಗಿದೆ. ಇಲ್ಲಿಯ ಕತೆಗಳು ಮಧ್ಯಮ ವರ್ಗದ ಗಂಡು ಹಾಗೂ ಹೆಣ್ಣಿನ ನಡುವಿನ ಸಂಬಂಧವನ್ನು ಮಾನವೀಯ ದೃಷ್ಟಿಕೋನಗಳಿಂದ ಪರಿಶೋಧಿಸುತ್ತವೆ. ಈ ವರ್ಗದ ಕುಟುಂಬಗಳಲ್ಲಿ ಉಂಟಾಗುವ ಸಾಂಪ್ರದಾಯಿಕ ಹಾಗೂ ಸಾಮಾಜಿಕ ಏರುಪೇರುಗಳನ್ನು ಇವರ ಕತೆಗಳು ವಸ್ತುವಾಗಿ ಸ್ವೀಕರಿಸಿವೆ.

'ಮತ್ತೆ ಬರೆದ ಕವನಗಳು' ಕತೆಯಲ್ಲಿ ನಿರೂಪಣೆ ಭೂತಕ್ಕೆ ಜಾರಿ ಬಂಡುಕೋರ ಹುಡುಗಿಯ ಹುಟ್ಟನ್ನು ವರ್ಣಿಸುವಾಗ ಭಾವುಕತೆಯ ನಿಯಂತ್ರಣಕ್ಕೆ ಒಳಪಡುತ್ತದೆ. ಬದುಕಿಗೆ ಬೇಸತ್ತು ಸಾವಿನತ್ತ ಮುಖ ಮಾಡಿ ಮತ್ತೆ ಬದುಕಿಗೆ ಹಿಂತಿರುಗಿ ಬರುವ ಜೀವದಾಯಕವಾದ ಒಂದು ಯತ್ನ 'ಸಾವಿನತ್ತ ಒಂದು ಹೆಜ್ಜೆ' ಕತೆಯಲ್ಲಿ ಸೊಗಸಾಗಿ ಮೂಡಿಬಂದಿದೆ. ನೇಮಿಚಂದ್ರರ ಕತೆಗಳ ಮೆಚ್ಚುಗೆಯ ಗುಣವೆಂದರೆ ಮಾನವೀಯತೆ ಪ್ರಧಾನವಾಗಿರುವುದು. ಬದುಕಿನ ವೈವಿಧ್ಯತೆಯನ್ನು ವಾಸ್ತವದ ನೆಲೆಯಿಂದ ಪರಿಭಾವಿಸುವುದನ್ನು ಕಾಣಬಹುದು. 'ಕಪ್ಪು ಮೋಡ ಬೆಳ್ಳಿ ಅಂಚು' ಕತೆಯಲ್ಲಿ ಹೆಣ್ಣು ಅಭದ್ರತೆಯ ಕಾರಣಕ್ಕಾಗಿ ಗಂಡಿನ ಮೇಲ್ಮೆಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮತ್ತು ಬಿಡುಗಡೆಯ ಸಂದರ್ಭವನ್ನು ಸವಾಲಾಗಿ ಸ್ವೀಕರಿಸುವ ಎರಡು ರೀತಿಯ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತಾಳೆ. ವಿಚ್ಛೇದನ ಎನ್ನುವುದು ಸಾಂಪ್ರದಾಯಿಕತೆಗೆ ವಿರುದ್ಧವಾದುದು. ವಿಚ್ಛೇದನದ ನಂತರ ಸ್ತ್ರೀಗೆ ಸಮಾಜದಲ್ಲಿ ಒಪ್ಪಿತವಾದ ಸ್ಥಾನವಿಲ್ಲ. ಆದರೆ ಲೇಖಕಿ ಆಧುನಿಕತೆಯ ಪರಿಣಾಮದಿಂದಾಗಿ ಏನೆಲ್ಲಾ ಬದಲಾವಣೆಗಳು ಗತಿಸಿವೆ ಎಂಬುದನ್ನು ತೋರ್ಪಡಿಸಲೆತ್ನಿಸಿದ್ದಾರೆ. ವಿಚ್ಛೇದನದ ನಂತರ ಮಹಿಳೆಗೆ ಸಮಾಜದಲ್ಲಿ ಸ್ಥಾನ ಹಾಗೂ ತನ್ನದೇ ಆದ ನೆಲೆಯ ಸ್ಥಾಪನೆ ಎಂಬುದನ್ನು ಕತೆಯ ಮೂಲಕ ಸಂದೇಶವನ್ನು ನೀಡಿದ್ದಾರೆ. ಪರಾವಲಂಭನೆ ಬದುಕನ್ನು ಲೇಖಕಿ ವಿರೋಧಿಸುತ್ತಾರೆ. ಮಗುವಿನ ಲಾಲನೆ ತಾಯಿಯ ಆದ್ಯ ಕರ್ತವ್ಯ, ಆದರೆ ಗಂಡನ ಜೊತೆಗೆ ಬಾಳುವುದು ಅನಿವಾರ್ಯವೇನಲ್ಲ. ಮಹಿಳೆಗೆ ತನ್ನ ಅಸ್ತಿತ್ವದ ಸ್ಥಾಪನೆಗೆ, ಸ್ವತಂತ್ರವಾದ ನಿರ್ಧಾರಗಳಿಗೆ ತಕ್ಕುದಾದ ಸ್ಥಾನವಿದೆ. ಖಾಸಗಿ ಲೋಕದ ಅನಾವರಣ ಆಟವಾಗದೆ, ಶೋಧನೆಯಾಗುತ್ತದೆ.

ಆದರೆ ಬೌದ್ಧಿಕ ತೀವ್ರತೆಯಿಂದ ತಮ್ಮ ಕತೆಗಳಿಗೆ ಚೈತನ್ಯವನ್ನು ತಂದಿದ್ದಾರೆ. ಅಂತರ್‌ಜಾತಿ ವಿವಾಹದಿಂದ ಮಡಿವಂತ ಕುಟುಂಬದಲ್ಲಿ ಘಟಿಸುವ ಪ್ರಸಂಗವೊಂದನ್ನು 'ನೀವು ಕಾಣದ ನಾಳೆಗಳಲ್ಲಿ' ಕತೆಯಲ್ಲಿ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಮಡಿವಂತ ತಂದೆ-ತಾಯಿಯರು ಮಗನ ವಿಚ್ಛೇದನಕ್ಕೆ ಪ್ರೇರೆಪಿಸುವುದು ಕುತೂಹಲಕಾರಿಯಾಗಿದೆ. ಮಗ ಇಲ್ಲಿ ಸ್ವಾತಂತ್ರ್ಯ ಬಯಸಿದನಾದರೂ, ಅಪ್ಪನ ಹಳೆಯ ಪದ್ಧತಿಗೆ ಜೋತು ಬಿದ್ದವನು, ಹಾಗೆಯೇ 'ಹೊಸಹುಟ್ಟು' ಈ ಸಂಕಲನದ ಉತ್ತಮ ಕತೆಯಾಗಿದೆ. ಮಗುವನ್ನು ಹಡೆಯಬೇಕು ಎಂದು ಹಂಬಲಿಸುವ ಹೆಣ್ಣೊಬ್ಬಳ ಪಾತ್ರ ಅಪೂರ್ವವಾಗಿ ಚಿತ್ರಿತವಾಗಿದೆ. ಕೊನೆಗೆ ತನ್ನ ಚಿತ್ರಕಲೆಯಲ್ಲಿಯೇ ಮಗುವಿನ ಆನಂದ ಕಾಣುವುದು ಮನೋಹರವಾಗಿದೆ.

'ಏನೊಂದೂ ಆಗದವರು' ಕಥೆಯ ರವಿ ಅಲ್ಪತೃಪ್ತ. ಹೊಸತನದ ಅನ್ವೇಷಣೆಯ ಲವಲವಿಕೆಯಿಲ್ಲದ ವ್ಯಕ್ತಿ. ಜೀವನದ ಗಂಭೀರತೆ ಇಲ್ಲದ, ಮುನ್ನುಗುವ ಉತ್ಸಾಹವಿಲ್ಲದ, ಏರುತಗ್ಗಿಲ್ಲದ ಸಮತಟ್ಟಾದ ನೆಲದಲ್ಲಿ ಜೋಡೆತ್ತಿನ ಗಾಡಿ ಹೂಡ ಬಯಸದವ, ಬಾಲ್ಯ ಗೆಳತಿ ಶಶಿಯನ್ನು ನಿಶ್ಚಿತಾರ್ಥ ಆದಾಗಲಿಂದ ಅವಳು ತನ್ನವಳು ಎಂದು ನಿಶ್ಚಿಂತನಾಗಿದ್ದನು. ಆದರೆ ರವಿ ಪ್ರೀತಿಯಲ್ಲಿ ಗೆದ್ದವನಲ್ಲ. ತನ್ನದೇ ಆದ ಊಟ ತಿಂಡಿ ನಿದ್ದೆ ಈ ಪುಟ್ಟ ಜಗತ್ತಿನಲ್ಲಿ ಅವ ಸುಖಿ.

ಆದರೆ ಶಶಿ ಹಾಗಲ್ಲ, ತುಂಬಾ ದೂರದೃಷ್ಟಿವುಳ್ಳವಳು. ತನ್ನ ಗಂಡನಾಗುವವನಲ್ಲಿ ಉತ್ತಮ ಬದಲಾವಣೆ ಬಯಸುವ ಹುಡುಗಿ. ಆದರೆ ಏನೂ ಆಗದವನಂತೆ ಇದ್ದ ರವಿಯನ್ನು ಶಶಿ, ತನ್ನ ಪ್ರಪಂಚ ವಿಸ್ತಾರವಾದಂತೆ ಅವಳು ರವಿಯನ್ನು ತ್ಯಜಿಸುವುದು ಅನಿವಾರ್ಯವಷ್ಟೆ ಅಲ್ಲ, ಅಪೇಕ್ಷಣೀಯವು ಸಹಜವು ಆಗುತ್ತದೆ. 'ನೇಮಿಚಂದ್ರ ಅವರ ಮತ್ತೆ ಬರೆದ ಕತೆಗಳು' ಸಂಕಲನದ ಸಂವೇದನಾ ಸೂಕ್ಷ್ಮತೆ, ಸಂಯಮ ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆ ವಿಶಿಷ್ಟವಾದವು"[೧] ಎಂದು ವಿಮರ್ಶಕ ಎಲ್.ಎಸ್.ಶೇಷಗಿರಿಯವರು ಅಭಿಪ್ರಾಯ ಪಟ್ಟಿರುವುದು ಸೂಕ್ತವಾಗಿದೆ.

೧.ಎಲ್.ಎಸ್.ಶೇಷಗಿರಿರಾವ್; ೨೦೦೨, ಪುಟ-೨೬೬

೩. ನಮ್ಮ ಕನಸುಗಳಲ್ಲಿ ನೀವಿದ್ದೀರಿ.

ಈ ಕಥಾ ಸಂಕಲನವು ವಿಭಿನ್ನ ಕಥಾವಸ್ತುಗಳನ್ನು ಹೊಂದಿದೆ. ಈ ಸಂಕಲನದ ಮೊದಲ ಕಥೆ 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಕತೆಯ ನಾಯಕಿ ಕಾವ್ಯ ಗಂಡನ ನಿರ್ಭಾವದ ಬದುಕಿಗೆ, ಬೇಸತ್ತು ಗಂಡನ ಗೆಳೆಯ ಕಿರಣನ ಸಹವಾಸಕ್ಕೆ ಉತ್ಸುಕಳಾಗುತ್ತಾಳೆ. ಅಲ್ಲದೆ ಗಂಡನಿಂದ ಸ್ನೇಹಿತನ ಸಂಗಕ್ಕೆ ವರ್ಗಾಂತರ ಹೊಂದುತ್ತಾಳೆ. ಅಲ್ಲಿ ಆಕೆಯ ಮನಸ್ಸು ವಿವೇಚನೆಗೆ ಒಳಗಾಗಿ ಪುನಃ ಗಂಡನ ಬಳಿಗೆ ಸರಿಯುತ್ತಾಳೆ. ಇದೇ ರೀತಿಯ ಕಥಾಹಂದರವನ್ನು 'ಸಂಜೆಗಳು ಎಷ್ಟು ಸುಂದರ' ಎಂಬ ಕತೆಯೂ ಹೊಂದಿದೆ. ಹಿಂದಿನ ಕತೆಯ ಕಾವ್ಯಳ ಪಾತ್ರವನ್ನು ಈ ಕತೆಯ ಮೇಘ ನಿರ್ವಹಿಸಿದಂತಿದೆ. ಇಲ್ಲಿ ಭೂತದ ಸ್ವೀಕೃತ ಘಟನೆಗಳು ಅಸಹ್ಯವಾಗುತ್ತಿರುವ ವರ್ತಮಾನದ ಕೌಟುಂಬಿಕ ಸ್ಥಿರತೆಯ ಮೇಲೆ ಆಕ್ರಮಣ ಮಾಡುತ್ತವೆ. ಇದರಿಂದ ತಪ್ಪಿಸಿಕೊಳ್ಳುವ ಏಕೈಕ ಮಾರ್ಗವೆಂದರೆ ಕುಟುಂಬದ ಪವಿತ್ರವ್ಯೂಹದಿಂದ ಹೊರಗೆ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡುವುದು.

'ತೆರೆಗಳು ಸರಿದವು' ಈ ಕತೆಯು ಸಹ ಕೌಟುಂಬಿಕ ಕ್ರೌರ್ಯದ ನೆಲೆಯನ್ನು ತಿಳಿಸುತ್ತದೆ. ಅಣ್ಣ–ಅತ್ತಿಗೆಯರ ಬಣ್ಣದ ಮಾತುಗಳು ತನ್ನ ಮೇಲಿನ ಮಮತೆಯದಲ್ಲ, ತಾನು ಸಂಪಾದಿಸುತ್ತಿರುವ ಹಣದ ಮೇಲೆ ಎಂದು ತಿಳಿದು ಅಚಲ ಮಾನಸಿಕವಾಗಿ ತಳಮಳಕ್ಕೀಡಾಗುತ್ತಾಳೆ. ಹೆಣ್ಣಿಗೆ ಮದುವೆ ಎಂಬುದು ತನ್ನ ನಿರ್ಧಾರವಾಗುತ್ತದೆ. ಆದರೆ ಅಚಲಳ ಕುಟುಂಬ ಆಕೆಯ ವಿವಾಹವನ್ನು ತಿರಸ್ಕರಿಸುತ್ತದೆ. ಹೆಣ್ಣು ಪರರ ಸುಖ ಸಂತೋಷಕ್ಕೆ ಮಾತ್ರ ದುಡಿಯಬೇಕು, ತನ್ನ ಆಸೆ, ಭಾವನೆಗಳಿಗೆ ಬೆಲೆ ಇಲ್ಲವಾಗುತ್ತದೆ. ೪೦ ವರ್ಷ ದಾಟಿರುವ ಅಚಲ ಯೌವ್ವನದಲ್ಲಿರುವಾಗ ಬಂದ ಮದುವೆಯ ಆಹ್ವಾನಗಳನ್ನು ನಿರಾಕರಿಸುತ್ತಾಳೆ. ತನ್ನ ಉನ್ನತಶಿಕ್ಷಣ, ಉದ್ಯೋಗ ಇವೆ ಅವಳಿಗೆ ಬಾಳಿನ ಉತ್ಸಾಹವನ್ನು ತುಂಬುತ್ತದೆ. ಕೊನೆಗೆ ಮನೆಯವರ ವಿರೋಧದ ಮಧ್ಯೆ ಪ್ರಕಾಶನೊಂದಿಗೆ ವಿವಾಹವಾಗಲೂ ನಿರ್ಧರಿಸುತ್ತಾಳೆ. ಇದೊಂದು ರೀತಿಯ ಅಸ್ತಿತ್ವ ಸ್ಥಾಪನೆಯ ಪ್ರತೀಕವಾಗಿ ಗೋಚರವಾಗುತ್ತದೆ. ವಿವಾಹ ಹಾಗೂ ಶಿಕ್ಷಣ ಇನ್ನಿತರ ಯಾವುದೇ ವಿಷಯಗಳಲ್ಲಿ ಹೆಣ್ಣಿಗೆ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಇಲ್ಲಿ ಲೇಖಕಿ ಸದಾ ಹೊಸ ರೀತಿಯ ಆಲೋಚನೆಯುಳ್ಳ ಸ್ತ್ರೀಪ್ರಜ್ಞೆಯನ್ನು ಈ ಕಥೆಯಲ್ಲಿ ಪ್ರತಿಪಾದಿಸುತ್ತಾರೆ.

'ತ್ರಿಕೋನದಾಚೆಗೆ' ಕತೆಯು ಕುಟುಂಬದ ಪವಿತ್ರ ವ್ಯೂಹದಿಂದ ಹೊರಬರದಂತೆ ಲೀಲಾಳನ್ನು ತಡೆಯುತ್ತದೆ. ಗಂಡ ಯೌವ್ವನದ ಸ್ತ್ರೀಯರೊಂದಿಗೆ ನಡೆಸುವ ಒಡನಾಟವನ್ನು ಲೀಲಾ ಮೌನವಾಗಿಯೇ ವಿರೋಧಿಸುತ್ತಾಳೆ. ತನ್ನ ಸ್ಥಿರತೆಯೊಂದಿಗೆ ಪರಿಸ್ಥಿತಿಯ ಬದಲಾವಣೆ

ಬಯಸುತ್ತಾಳೆ. ಈ ಸಂಕಲನದ 'ಕೆಂಪು ಕಲಕಿದ ನೀರು' ಕತೆಯು ವಿಭಿನ್ನ ಕಥಾವಸ್ತುವನ್ನು ಹೊಂದಿದೆ. ಉದ್ಯೋಗಸ್ಥ ಮಹಿಳೆಯ ಮೇಲೆ ನಡೆಯುವ ಅತ್ಯಾಚಾರ ಅದನ್ನು ಸರಿಪಡಿಸಲು ಸ್ನೇಹಿತನೊಬ್ಬ ಮುಂದಾಗುತ್ತಾನೆ. ಆದರೆ ಶೀಲಾ ಆತನ ನೆರವನ್ನು ನಿರಾಕರಿಸುತ್ತಾಳೆ. ಮಾನಸಿಕ ತೊಳಲಾಟಗಳಿಗೆ ಒಳಗಾಗುತ್ತಾಳೆ. ಏಕೆಂದರೆ ಮಾನಸಿಕವಾಗಿ ಆಕೆ ಆಗಲೇ ಒಬ್ಬನ ಪ್ರೀತಿಗೆ ಪಾತ್ರಳಾಗಿರುತ್ತಾಳೆ. ಆಕೆಯ ದೇಹ ಮಾತ್ರ ಆಕ್ರಮಣಕ್ಕೆ ಒಳಗಾಗಿರುತ್ತದೆ. ಹೀಗಿರುವಾಗ ಮನಸ್ಸನ್ನು ಸಹ ಛಿದ್ರಗೊಳಿಸಲು ನಾಯಕಿ ನಿರಾಕರಿಸುತ್ತಾಳೆ. ಪ್ರಸ್ತುತ ಕತೆಯಲ್ಲಿ ಬರುವ ಗಂಡುಗಳು ಸ್ತ್ರೀಪರ ಕಾಳಜಿ ಹೊಂದಿರುವಂತವು. ಏಕೆಂದರೆ ಶೀಲಾಳ ಮೇಲೆ ಅತ್ಯಾಚಾರ ನಡೆದ ವಿಷಯ ಇಬ್ಬರು ಗಂಡಸರಿಗೂ ತಿಳಿದಿದ್ದರೂ ಸಹ ಪರಿಸ್ಥಿತಿಯನ್ನು ಅರ್ಥೈಸಿಕೊಂಡು ಆಕೆಯೊಂದಿಗೆ ಸಹಜೀವನ ನಡೆಸಲು ಮುಂದಾಗುತ್ತಾರೆ. ಇದೊಂದು ಹೊಸರೀತಿಯ ಬದಲಾವಣೆಯೇ ಸರಿ. ಆದ್ದರಿಂದಲೇ ಲೇಖಕಿ ಯಾವಾಗಲೂ ಹೊಸದನ್ನು ಹೇಳಲು ಬಯಸುತ್ತಾರೆ.

'ನನ್ನದಲ್ಲದ ಬದುಕಿಗಾಗಿ' ಕತೆಯ ಈ ಸಂಕಲನದ ಉತ್ತಮ ಕತೆ. ಕತೆಯ ನಾಯಕಿ ಸರೂ ಸಾಂಪ್ರದಾಯಕ ಮದುವೆಯಾಗಿದ್ದರೂ, ಗಂಡನಿಲ್ಲದವಳು ವಿಧವೆ. ಆದರೆ ಗಂಡನಿಂದಲೇ ಶಾಸ್ತ್ರಕಿಂತ ಮುಂಚಿತವಾಗಿ ಬಲತ್ಕಾರಕ್ಕೆ ಒಳಗಾದವಳು. ವಿಧವೆಗೆ ಮರುವಿವಾಹದ ಅವಕಾಶ ಸಿಕ್ಕಾಗ ಆ ಕುಟುಂಬ ಎಲ್ಲಿಲ್ಲದ ಆನಂದ ಅನುಭವಿಸುತ್ತದೆ. ಆ ಕಾರಣವಾಗಿ ತನ್ನ ಕಳೆದುಕೊಂಡಿದ್ದ ಕನ್ಯತ್ವವನ್ನು ಮರುಜೋಡಿಸಿ ಕೊಳ್ಳಲು ನಾಯಕಿ ವೈದ್ಯಕೀಯ ಸಲಹೆ ಕೋರುತ್ತಾಳೆ. ಕೊನೆಗೆ ನಾಯಕಿ ಲೈಂಗಿಕ ರಾಜಕಾರಣವನ್ನು ವಿರೋಧಿಸಿ ಕನ್ಯತ್ವ ಎನ್ನುವುದು ಹರಿದು ಹೋಗಲಿಕ್ಕೆ ಇರುವ ಪೊರೆ. ಮತ್ತೆ ಅದಕ್ಕೆ ತೇಪೆ ಹಚ್ಚುವ ಕಾರ್ಯವನ್ನು ನಿರಾಕರಿಸುತ್ತಾಳೆ. ಮಡಿ, ಶೀಲ ಎಂಬ ಮೌಲ್ಯಗಳು ಹೆಣ್ಣಿಗೆ ಮಾತ್ರ ಸೀಮಿತವೇ ಎಂದು ಕತೆಯು ಪ್ರಶ್ನಿಸುತ್ತದೆ. ಹೆಣ್ಣಿಗೆ ಆರೋಪಿತವಾಗಿರುವ ಶೀಲದ ಪ್ರಶ್ನೆಗೆ ಮರುವಿವಾಹವಾಗಲು ಬಂದಿರುವ ಗಂಡಿಗೆ ಏಕೆ ಇಲ್ಲ? ಎಂದು ನಾಯಕಿ ಪ್ರಶ್ನಿಸುತ್ತಾಳೆ. ನೇಮಿಚಂದ್ರ ಯಾವಾಗಲೂ ಹೊಸರೀತಿಯ ಆಲೋಚನೆ, ಸ್ತ್ರೀಪ್ರಜ್ಞೆಯನ್ನು ಪ್ರತಿಪಾದಿಸುತ್ತಾರೆ.

'ಎಲ್ಲಿ ನನ್ನ ಪಿಯರಿ . . . .' ಈ ಕತೆಯಲ್ಲಿಯೂ ಸಹ ಹೆಣ್ಣನ್ನು ಹಿಂದಕ್ಕೆ ತಳ್ಳುವ ಹುನ್ನಾರ. ನಾಯಕಿ ಶಶಿ ಎಂಜಿನಿಯರ್ ಓದಿ ಸಂಶೋಧನೆಗೆ ಸೀಟ್ ಸಿಕ್ಕಿ ಅದಕ್ಕೆ ಸೇರಿದಳು. ಆದರೆ ರವಿ ಮದುವೆಗೆ ಮುನ್ನವೇ ಸಂಶೋಧನೆಗೆ ಸೇರಿದ್ದ. ಆದರೆ ಅದು ಆಮೆಗತಿಯಲ್ಲಿ ಸಾಗಿತ್ತು. ಸಂಶೋಧನೆ ಮುಗಿಸಿ ವಿದೇಶಕ್ಕೆ ಹಾರಲು ಹೊರಟಿರುವ ಶಶಿಯನ್ನು ಕಂಡು ಆತನಿಗೆ ಅಸಾಧ್ಯ

ಹೊಟ್ಟೆಕಿಚ್ಚಾಗಿ ಅದು ವಿಚ್ಛೇದನಕ್ಕೆ ಬಂದು ನಿಂತಿತ್ತು. ಆದರೆ ಶಶಿ ದೃಢ ನಿರ್ಧಾರ ಮಾಡಿಯಾಗಿತ್ತು. ಹೆಂಡತಿಗೆ ಸಿಕ್ಕ ಅವಕಾಶ ತನಗಿಲ್ಲವಲ್ಲ ಎಂದು ತಿಳಿದು ಕೊನೆಗೆ ಸಂದರ್ಭಕ್ಕೆ ತಕ್ಕಂತೆ ರಾಜೀಯಾಗಿ ಶಶಿ ಹೋಗಲು ಅನುಮತಿ ಕೊಟ್ಟನು. ಇಲ್ಲಿ ಸ್ತ್ರೀಯರ ಶೋಷಣೆ ಕಾಣಬಹುದು. ಆದರೆ ಬದಲಾದ ಸಂದರ್ಭಕ್ಕೆ ಹೆಣ್ಣು ಮಾತ್ರ ಹೊಂದಬಲ್ಲಳು ಎಂಬುದನ್ನು ಈ ಕತೆಯು ಪ್ರತಿಪಾದಿಸುತ್ತದೆ.

ನೋವಿಗದ್ದಿದ ಕುಂಚ :

ಪ್ರಸಿದ್ಧ ಪಾಶ್ಚಾತ್ಯ ಚಿತ್ರಕಾರ ವ್ಯಾನ್‌ಗೋನ ಜೀವನಚರಿತ್ರೆಯೇ ಈ ಕೃತಿ. ಆತನೇ ಬರೆದಿರುವ ಡಿಯರ್‌ಥಿಯೋ ಹಾಗೂ ಇನ್ನಿತರ ಲೇಖಕರ ಕೃತಿಗಳನ್ನಾಧರಿಸಿದ ವ್ಯಾನ್‌ಗೋನ ಬದುಕಿನ ವ್ಯಥೆಯನ್ನೊಳಗೊಂಡಿದೆ. ಬಾಲಕ ವಿನ್ಸೆಂಟ್ ಮಾರ್ಚ್ ೩೦. ೧೮೫೩ರಲ್ಲಿ ವ್ಯಾನ್‌ಗೋನ ಮನೆತನದಲ್ಲಿ ಹುಟ್ಟಿದನು. ತಂದೆ ತಾಯಿಗಳ ತಿರಸ್ಕಾರದಲ್ಲಿ ಬೆಳೆದವನು. ತಾನು ಪ್ರೀತಿಸಿದ ಯಾವ ಹೆಣ್ಣು ಈತನನ್ನು ಪ್ರೀತಿಸಲಿಲ್ಲ. ಉರ್ಸುಲಾ, ಕಿ, ಸಿಯೇನ್, ಒಬ್ಬ ವೇಶ್ಯಾ ಹುಡುಗಿ ಇವರೆಲ್ಲ ಬದುಕಿನಲ್ಲಿ ಹಾದು ಹೋದವರು. ಉರ್ಸುಲಾ, ಕೀ ಇಬ್ಬರೂ ಈತನ ಪ್ರೀತಿಯನ್ನು ಪ್ರಾರಂಭದಲ್ಲಿಯೇ ತಿರಸ್ಕರಿಸಿ ಹೋದರು. ಸಿಯೇನ್ ಸಿಡುಬು ಮುಖದ, ಯಾರಿಗೋ ಬಸಿರಾದ, ವೈಶ್ಯಾ ವೃತ್ತಿಯಲ್ಲಿ ಪಳಗಿದ ಹೆಣ್ಣು. ಈಕೆ ಕೂಡ ವಿನ್ಸೆಂಟ್‌ನನ್ನು ಮನಃಪೂರ್ವಕವಾಗಿ ಪ್ರೀತಿಸದೆ, ತನ್ನ ವೃತ್ತಿಗೆ ಪ್ರಾಮುಖ್ಯತೆ ಕೊಟ್ಟಳು. ಕಲಾವಿದನಾಗಿ ವ್ಯಾನ್‌ಗೋ ಯಶಸ್ವಿಯಾಗಲಿಲ್ಲ. ಅವನ ಮರಣ ನಂತರ ಕೋಟಿಗಟ್ಟಲೆ ಡಾಲರ್‌ಗಳಿಗೆ ಮಾರಾಟವಾಗುವ ಈತನ ಚಿತ್ರಗಳು ಒಂದು ಹೊತ್ತಿನ ಊಟಕ್ಕೂ ಒದಗದಿದ್ದದ್ದು ದಾರಿದ್ರ್ಯದ ಅಂಚಿನಲ್ಲಿ ಹುಚ್ಚಾಸ್ಪತ್ರೆಯ ಒಳ ಹೊರಗೆ ಬದುಕು ತಾಕಲಾಡಿದ್ದು ಚರಿತ್ರೆಯ ವ್ಯಂಗ್ಯ.

ಬೆಳಗೆರೆ ಜಾನಕಮ್ಮ ಬದುಕು- ಬರಹ :

ಈ ಕೃತಿಯಲ್ಲಿ ನೇಮಿಚಂದ್ರರು ಬೆಳಗೆರೆ ಜಾನಕಮ್ಮನವರ ಬದುಕು-ಬರಹವನ್ನು ಸಂಕಲಿಸುವುದರೊಂದಿಗೆ ಅವರು ರಚಿಸಿದ ಕವನಗಳಲ್ಲಿ ಕೆಲವನ್ನು ಸಂಗ್ರಹಿಸಿ ನೀಡಿದ್ದಾರೆ. ಬಯಲುಸೀಮೆಯ ಹಳ್ಳಿಗಾಡಿನಲ್ಲಿ ಜನಿಸಿದ, ಓದು ಬರಹಗಳಿಂದ ವಂಚಿತಳಾದ ಮತ್ತೆಲ್ಲಾ ಸಾಮಾನ್ಯ ಹೆಣ್ಣಿನಂತೆ ಮದುವೆ ಮಕ್ಕಳ ತುಂಬು ಸಂಸಾರಕ್ಕೆ ಎಳೆಯ ವಯಸ್ಸಿನಲ್ಲಿ ಪ್ರವೇಶಿಸಿದರೂ ಬದುಕು ಪೂರಾ ನಿರ್ಭಿಡೆಯಿಂದ ಬಾಳಿದರು. ಕೊನೆಯ ಉಸಿರಿನವರೆಗೂ ಬರೆದರು. ಜಾನಕಮ್ಮ ೧೯೪೦ರ ಸುಮಾರಿಗೆ ಬರೆದಿಡುವ ಹವ್ಯಾಸ ಬೆಳೆಸಿಕೊಂಡರು. ಅವರಿಗೆ ಕ್ಲಿಷ್ಟ ಪದಗಳನ್ನು

ಬರೆಯುವುದು ಕಷ್ಟವಾಗುತ್ತಿತ್ತು. ಕಾಗುಣಿತದ ತಪ್ಪುಗಳೂ ಉಂಟಾಗುತ್ತಿದ್ದವು. ತೌರಿಗೆ ಬಂದಾಗ ತಮ್ಮ ಕೃಷ್ಣಶಾಸ್ತ್ರೀಯ ಕೈಗೆ ಕೊಟ್ಟು ತಿದ್ದಿಸಿ ಕೊಳ್ಳುತ್ತಿದ್ದೆ ಎಂದು ಲೇಖಕಿ ವಿವರಿಸುತ್ತಾರೆ. ಸ್ವತಂತ್ರ್ಯ ಪೂರ್ವ ಕಾಲದ ಜಾನಕಮ್ಮನವರ ಬದುಕು ಹಾಗೂ ಆ ಕಾಲದಲ್ಲಿ ಕವಿತೆ ರಚಿಸುವವರನ್ನು ಸಮಾಜ ನೋಡುತ್ತಿದ್ದ ರೀತಿ ಇತ್ಯಾದಿ ವಿವರಗಳನ್ನು ಲೇಖಕಿ ಸಮಗ್ರವಾಗಿ ಸಂಕಲಿಸಿದ್ದಾರೆ.

ದುಡಿವ ಹಾದಿಯಲ್ಲಿ ಜೊತೆಯಾಗಿ :

ದುಡಿಯುವ ಹಾದಿಯಲ್ಲಿ ಜೊತೆಯಾಗಿ ಸಾಗಿ ಬದುಕಿನ ಸಾರ್ಥಕತೆಯನ್ನು ಕಂಡ ಹಲವು ದಂಪತಿಗಳ ವ್ಯಕ್ತಿ ಚಿತ್ರಣ ಇಲ್ಲಿದೆ. ದುಡಿಯುವ ದಂಪತಿಗಳಿಗಾಗಿ ಇದನ್ನು ರಚಿಸಿರುವ ನೇಮಿಚಂದ್ರ ತಮ್ಮ ಬದುಕಿನ ಉದಾಹರಣಯೊಂದಿಗೆ ಪರಿಚಿತ ದಂಪತಿಗಳ ಬದುಕನ್ನು ಸಮೀಪದಿಂದ ಚಿತ್ರಿಸಿದ್ದಾರೆ. ಪರಸ್ಪರ ಅರಿತು ನಡೆಯುವ ಗಂಡ-ಹೆಂಡತಿಯರಾದಾಗ ಸಂಸಾರದ ಗಾಡಿ ಸುಗಮವಾಗಿ ನಡೆಯುತ್ತದೆ. ಗಂಡನ ಏಳಿಗೆಯನ್ನು ಬಯಸಿ, ಮನೆ ನಿಭಾಯಿಸಲು ಉಳಿಯುವ ಹೆಂಡತಿ, ಜೊತೆಗೆ ಹೆಂಡತಿಯ ಏಳಿಗೆಗಾಗಿ ಸಣ್ಣಪುಟ್ಟ ಸಂತೋಷಗಳನ್ನು ತ್ಯಾಗ ಮಾಡುವ ಗಂಡ ಇವರೆಲ್ಲ ಇರುವ ಸಂಸಾರ ಅರ್ಥಪೂರ್ಣವಾಗಿರುತ್ತದೆ. ಸಿ.ಪದ್ಮಾ ಮತ್ತು ಚಂದ್ರಶೇಖರ್ ಇಬ್ಬರೂ ಉದ್ಯೋಗನಿರತ ದಂಪತಿಗಳು. ಪದ್ಮಾ ತನ್ನ ಉದ್ಯೋಗದಲ್ಲಿ ಉನ್ನತ ಹುದ್ದೆಗೆ ಏರಿದಾಗ ಮನೆಯ ಉಸ್ತುವಾರಿಕೆ ಹಾಗೂ ಮಗುವಿನ ಆರೈಕೆಯನ್ನು ಆಕೆಯ ಪತಿ ವಹಿಸಿಕೊಳ್ಳುತ್ತಾರೆ. ಕೊನೆಗೆ ಚಂದ್ರಶೇಖರ್ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಹೆಂಡತಿಯ ಏಳಿಗೆಗಾಗಿ ನೆರವಾಗುತ್ತಾರೆ.

ಹಂಚಿ ಮಾಡಿದರೆ ಸ್ವರ್ಗಸುಖ ಎಂಬುದಕ್ಕೆ ಉದಾಹರಣೆ ಮಮತಾ-ಮೂರ್ತಿ ಅವರ ಕುಟುಂಬ. ಇಂಜಿನೀಯರ್ ಆಗಿದ್ದರೂ ಮೂರ್ತಿ ಮಮತಾ ಒಂದು ಮಗುವಾದ ಮೇಲೆ ಎಂ.ಟೆಕ್‌ಗೆ ಸೇರಿದರು. ವಿಶ್ವವಿದ್ಯಾಲಯಕ್ಕೆ ಎರಡನೇ ರ್‍ಯಾಂಕ್ ಗಳಿಸಿದರು. ಮನೆಯ ಅಷ್ಟು ಜವಾಬ್ದಾರಿಯನ್ನು ಹೊತ್ತು ನಿಭಾಯಿಸಿದವರು ಮೂರ್ತಿ. ಪತ್ನಿಯ ದುಡಿಮೆಯ ರಂಗದ ಏರುಪೇರುಗಳಲ್ಲಿ ಮೂರ್ತಿ ಜೊತೆ ನಿಂತರು. ಆಕೆಯ ನಿರ್ಧಾರಗಳನ್ನು ಗೌರವಿಸಿದರು.

ತಾಯ್ತನ ಅನೇಕ ಮಹಿಳೆಯರ ಉದ್ಯೋಗವನ್ನು ನುಂಗಿಹಾಕುತ್ತದೆ. ಆದರೆ ರೀನಾ ರಾಮಚಂದ್ರನ್ ಅವರ ಕುಟುಂಬವೂ ಇದಕ್ಕೆ ವಿರುದ್ಧವಾಗಿದೆ. ಮೂರು ತಿಂಗಳ ಮಗಳನ್ನು ತಂದೆಯ ಬಳಿ ಬಿಟ್ಟು ತರಬೇತಿಗಾಗಿ ಫ್ರಾನ್ಸ್‌ಗೆ ತೆರಳಿ, ಕೊನೆಗೆ 'ಫಾರ್ಚೂನ್ ಇನ್‌ಸ್ಟಿಟ್ಯೂಟ್ ಆಫ್

ಇಂಟರ್ ನ್ಯಾಷನಲ್ ಬಿಸಿನೆಸ್'ನ ಡೈರೆಕ್ಟರ್ ಜನರಲ್ ಆದಳು. ಹೀಗೆ ಆದರ್ಶ ದಂಪತಿಗಳ ಹಲವು ಚಿತ್ರಣಗಳು ಇಲ್ಲಿವೆ.

ಮಹಿಳಾ ಅಧ್ಯಯನ :

ತಮ್ಮ ಕತೆ ಮತ್ತು ಲೇಖನಗಳ ಮೂಲಕ ಪರಿಚಿತರಾದ ನೇಮಿಚಂದ್ರ ಅವರ 'ಮಹಿಳಾ ಅಧ್ಯಯನ'ಕ್ಕೆ ಸಂಬಂಧಿಸಿದ ಲೇಖನಗಳ ಸಂಗ್ರಹವಿದು. ವಿಜ್ಞಾನ, ತಂತ್ರಜ್ಞಾನ, ವೈಮಾನಿಕ ರಂಗಗಳ ಮಹಿಳಾ ಪರಂಪರೆ ಮತ್ತು ಸಾಧನೆ ಇವರ ತೀವ್ರ ಆಸಕ್ತಿ ಮತ್ತು ಅಧ್ಯಯನ ವಿಷಯವಾದ ಕಾರಣ, ಇಲ್ಲಿಯ ಅನೇಕ ಲೇಖನಗಳು ಈ ವಿಷಯಕ್ಕೆ ಸಂಬಂಧಿಸಿವೆ. ಒಟ್ಟು ಹದಿನೆಂಟು ಲೇಖನಗಳ ಸಂಗ್ರಹವಿದು. ಇದರಲ್ಲಿ ವೈಚಾರಿಕ ಲೇಖನಗಳೂ ಸೇರಿಕೊಂಡಿವೆ.

ಹೆಣ್ಣನ್ನು ಎಲ್ಲ ರಂಗಗಳಲ್ಲೂ ಶೋಷಣೆ ಮಾಡುವ ಲೇಖನವೇ ಬದುಕುವ ಹಕ್ಕನ್ನು ಕಿತ್ತುಕೊಂಡ 'ಮರ್ಯಾದಾ ಹತ್ಯೆಗಳು'. ಪಾಕಿಸ್ತಾನದ ರಾವಲ್‌ಪಿಂಡಿಯ ಬಳಿ ವಾಸಿಸುವ ಪರ್ವಿನ್ ೩೨ ವರ್ಷದ ವಿವಾಹಿತ ಸ್ತ್ರೀ. ಒಂದು ದಿನ ಇಕ್ಬಾಲ್ ಮನೆಗೆ ಬಂದವನೇ ನಿನಗೆ 'ನನ್ನ ತಮ್ಮನ ಜೊತೆ ಸಂಬಂಧವಿದೆ' ಎಂದು ಆರೋಪಿಸಿದ. ಇದು ಸತ್ಯವಲ್ಲ ಎಂಬ ಆಕೆಯ ಅಸಹಾಯಕತೆಯ ಮೊರೆಯಾಗಲೀ, ಮೂರು ತಿಂಗಳ ಗರ್ಭಿಣಿಯ ಆರ್ತನಾದವಾಗಲಿ ಅವನನ್ನು ತಡೆಯಲಿಲ್ಲ. ಕುಟುಂಬದ ಗೌರವದ ಹೆಸರಲ್ಲಿ ಪುರುಷರು ಹೆಂಗಸರ ಮೇಲೆ ಎಸಗುವ ಇಂಥಾ ಪೈಶಾಚಿಕ ಕೃತ್ಯಕ್ಕೆ 'ಮಾರ್ಯಾದಾ ಹತ್ಯೆ' ಎಂಬ ಹೆಸರು.

ನಿಜಕ್ಕೂ ಇಪ್ಪತ್ತೊಂದನೇ ಶತಮಾನಕ್ಕೆ ಕೆಲ ದೇಶದ ಕೆಲವರಷ್ಟೇ ಕಾಲಿಟ್ಟಿದ್ದಾರೆ. ಜಗತ್ತಿನ ಬಹುಭಾಗದ ಮಹಿಳೆಯರ ಬದುಕು ಕತ್ತಲೆಯಿಂದ ಮುಕ್ತವಾಗಿಲ್ಲ. ಮಹಿಳಾ ಹಕ್ಕುಗಳಿಗಾಗಿ ವ್ಯಾಪಕ ಹೋರಾಟ ನಡೆಯದಿದ್ದರೆ ಹೆಣ್ಣಿಗೆ ಬದುಕುವ ಹಕ್ಕು ಕೂಡ ಉಳಿಯುವುದಿಲ್ಲ.

'ಸ್ತ್ರೀವಾದಿ ಚಿಂತನೆ ಮತ್ತು ನನ್ನ ಬರಹ' ಲೇಖನದಲ್ಲಿ ತಮ್ಮ ಕತೆಗಳ ರಚನೆಗೆ ಹಿನ್ನೆಲೆಯನ್ನು ಪ್ರಸ್ತಾಪಿಸಿದ್ದಾರೆ. ಸ್ತ್ರೀವಾದಿ ದೃಷ್ಟಿಕೋನವು 'ಹೊಸಹುಟ್ಟು' 'ಮತ್ತೆ ಬರೆದ ಕವನಗಳು' ಕತೆಗಳು ನಿರ್ಮಾಣವಾಗಲಿಕ್ಕೆ ಆಂತರಿಕವಾಗಿ ಪ್ರೋತ್ಸಾಹ ನೀಡಿತು ಎನ್ನುತ್ತಾರೆ ಲೇಖಕಿ. "ಒಂದು ಕೃತಿ, ಕೃತಿಕಾರಳ ಜೀವನದರ್ಶನ ಧೋರಣೆ ಚಿಂತನೆಗಳನ್ನು ಪ್ರತಿಬಿಂಬಿಸಬೇಕು. ಬರಹದಲ್ಲಿ ಅಪ್ಪಟ ಸ್ತ್ರೀವಾದಿಯಾಗಿ, ಅಪ್ರಮಾಣಿಕವಾಗಿ ಕಾಣುತ್ತದೆ. ನಿಜ ನಮ್ಮ ಸ್ತ್ರೀವಾದಿ ಧೋರಣೆಗಳೆಲ್ಲವನ್ನೂ ಒಮ್ಮೆಗೆ ಅಳವಡಿಸುವುದು ಸುಲಭವಲ್ಲ. ಆದರೆ ಆ ಸ್ತ್ರೀವಾದದಲ್ಲಿ ನಂಬುಗೆ ಇರಬೇಕು. ಅದನ್ನು

ಬದುಕಿಗಳವಡಿಸುವ ಪ್ರಜ್ಞಾಪೂರ್ವಕ ಪ್ರಯತ್ನ ನಮ್ಮದಾಗಬೇಕು ಎಂದು ಬಯಸುತ್ತೇನೆ, ಎಂದು ಸ್ತ್ರೀವಾದದ ವಾಸ್ತವತೆಯನ್ನು ಕುರಿತು ಚರ್ಚಿಸುತ್ತಾರೆ"[೧]

'ಸ್ವಾತಂತ್ರ್ಯ ಸಂಗ್ರಾಮದ ಓರ್ವ ಸ್ವಾಭಿಮಾನಿ ಮಹಿಳೆ ಅತ್ತರ್‌ಕೌರ್' ಈ ಲೇಖನವು ಜಲಿಯನ್ ವಾಲಾಬಾಗ್ ದುರಂತದಲ್ಲಿ ಹುತಾತ್ಮನಾದ ಪತಿಯ ಹೆಣಕ್ಕೆ ಹೆಗಲುಕೊಟ್ಟು, ಮನಗೆ ಹೊತ್ತು ತಂದ ಗರ್ಭಿಣಿ ಅತ್ತರ್‌ಕೌರ್‌ನ ಸಾಹಸವನ್ನು ಪರಿಚಯಿಸುತ್ತದೆ. ೧೮೯೬ರಲ್ಲಿ ಹುಟ್ಟಿದ ಅತ್ತರ್ ಕೌರ್, ೧೯೧೦ರಲ್ಲಿ ಭಾಗಮಲ್ ಭಾಟಿಯಾ ಅವರನ್ನು ವಿವಾಹವಾಗಿದ್ದರು. ಭಾಟಿಯಾ ಲಕಡಿ ಮಂಡೀ ಬಜಾರ್‌ನಲ್ಲಿ ಅಂಗಡಿ ಇದ್ದು, ಸ್ಥಿತಿವಂತ ವ್ಯಾಪಾರಿ. ೧೯೧೭ರಲ್ಲಿ ಪಂಜಾಬಿನ ಅಮೃತಸರದಲ್ಲಿ ಕಾಂಗ್ರೆಸ್ ಶಾಖೆ ತೆರೆದಾಗ, ಭಾಟಿಯಾ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದರು.

ಜಲಿಯನ್ ವಾಲಾಬಾಗ್ ದುರಂತದಲ್ಲಿ ಅತ್ತರ್‌ಕೌರ್ ಸಾವಿರಾರು ಹೆಣಗಳ ನಡುವೆ ರಕ್ತತಪ್ತ ನೆಲದಲ್ಲಿ ತಮ್ಮ ಪತಿಯ ದೇಹವನ್ನು ಹುಡುಕತೊಡಗಿದರು. ಆಗ ಆಕೆ ಎರಡು ತಿಂಗಳ ಗರ್ಭಿಣಿ. ಸತ್ತವರ, ಸಾಯುತ್ತಿರುವವರ ಆಕ್ರಂದನ ಮಧ್ಯೆ ಆ ಕ್ಷಣದಲ್ಲಿ ಅವರಿಗೆ ಕೇಳುತ್ತಿದ್ದುದು ನಗಾರಿಯಂತೆ ಬಾರಿಸುತ್ತಿದ್ದ ತಮ್ಮ ಎದೆಯ ಬಡಿತವೊಂದೆ. ಹೆಣಗಳನ್ನು ಎತ್ತಿ ಅಲುಗಿಸಿ ತಮ್ಮ ಪತಿಯ ಮುಖವನ್ನು ಹುಡುಕುವ ಈ ಮಹಿಳೆಯ ಸೀರೆಯೆಲ್ಲ ರಕ್ತಮಯ. ನೆಲದ ಮಟ್ಟಕ್ಕಿದ್ದ ಅಗಲ ಭಾವಿಯಲ್ಲಿ ಇಣುಕುತ್ತಾರೆ. ಆಳದ ನೀರೆಲ್ಲ ರಕ್ತಕೆಂಪು, ಕತ್ತಲಾಗುತ್ತಿದೆ. ಮೋಟು ಹಳೆಯ ಗೋಡೆ ಕಾಣಿಸಿತು. ಹತ್ತಿರ ಬಂದವರೇ ಗುರುತಿಸಿದರು. ಸಾವನಪ್ಪಿದ ಪತಿಯನ್ನು. ತೆರೆದ ಬರಿಗಣ್ಣು, ಎಗರಿಹೋದ ಕಿವಿ, ಜೀವ ಹಾರಿ ಹೋದರೂ, ಇನ್ನೂ ಬಿಸಿ ಇದ್ದ ದೇಹ, ಮಡಿಲಿಗೆ ಎಳೆದುಕೊಳ್ಳುತ್ತಿದ್ದಂತೆ ಸೀರೆ, ಸೆರಗು, ತೋಳುಗಳೆಲ್ಲ ರಕ್ತದಿಂದ ತೋಯ್ದವು. ಗಂಡನ ದೇಹದ ಅದೆಷ್ಟು ಗುಂಡಿನ ಗುರುತುಗಳು! ಇಷ್ಟೆಲ್ಲಾ ದುರಂತ ವಿಸ್ಮಯಗಳನ್ನು ಲೇಖನದಲ್ಲಿ ಹೃದಯವಿದ್ರಾವಕವಾಗಿ ಲೇಖಕಿ ವಿವರಿಸಿದ್ದಾರೆ.

ಪತಿಯ ಮರಣದೊಂದಿಗೆ ಸೌದೆ ವ್ಯಾಪಾರ ಮುಚ್ಚಿಹೋಯಿತು. ಮೂರು ಸಣ್ಣ ಮಕ್ಕಳ ಭಾರವನ್ನು ಹೆಗಲಲ್ಲಿ ಹೊತ್ತು ಏಕಾಂಗಿಯಾಗಿ ಅತ್ತರ್‌ಕೌರ್ ಬದುಕಿನ ಹೋರಾಟಕ್ಕೆ ಸನ್ನದ್ಧರಾದರು.

೧.ನೇಮಿಚಂದ್ರ; ೨೦೦೧, ಪುಟ-೧೫೦

ಸರಕಾರಿ ಅಧಿಕಾರಿಗಳು ಸಾಕಷ್ಟು ಬಾರಿ ಅತ್ತರ್ ಕೌರ್ ಮನೆಗೆ ಬಂದು 'ಮಕ್ಕಳ ಭವಿಷ್ಯಕ್ಕಾದರೂ ಪರಿಹಾರ ಧನವನ್ನು ತೆಗೆದುಕೊಳ್ಳಿ' ಎಂದು ಹೇಳುತ್ತಿದ್ದರು. ಅತ್ತರ್ ಕೌರ್‌ದು ಒಂದೇ ಉತ್ತರ 'ಭಾರತೀಯ ನಾರಿಗೆ ಪತಿ ಭಗವಂತನ ಸ್ವರೂಪ, ಹಣಕ್ಕಾಗಿ ನನ್ನ ದೇವರನ್ನು ನಾ ಮಾರುವುದಿಲ್ಲ. ನನ್ನ ಮಕ್ಕಳು ಹಸಿವಿನಿಂದ ಒದ್ದಾಡುವುದನ್ನಾದರೂ ನೋಡುತ್ತೇನೆ, ಪತಿಯ ರಕ್ತದ ಬೆಲೆ ಪಡೆದು, ಆ ಹಣದಲ್ಲಿ ಮಕ್ಕಳನ್ನು ಸಾಕಲಾರೆ ಎಂದು ಸರಕಾರದ ಸಹಾಯಧನವನ್ನು ನಿರಾಕರಿಸಿದ ದಿಟ್ಟ ಮಹಿಳೆ. ಪತಿಯ ರಕ್ತಕ್ಕೆ ಪರಿಹಾರವಾಗಿ ಹಣ ಪಡೆಯುವುದಿಲ್ಲ ಎಂದು ತಿರಸ್ಕರಿಸಿದ ವ್ಯಕ್ತಿಗಳು ಇಬ್ಬರೇ ಇಬ್ಬರು ತಾಯಿ ಅತ್ತರ್ ಕೌರ್ ಮತ್ತು ರತನ್‌ದೇವಿ.

ಸ್ವತಃ ವಿದ್ಯಾಭ್ಯಾಸದ ಅವಕಾಶವಿಲ್ಲದೆ, ಕಡುಬಡತನದಲ್ಲಿ ಬಾಲ್ಯವನ್ನೆಲ್ಲ ಕಳೆದು, ಇಂದು ಒಂದು ಸಣ್ಣ ಎಲೆಕ್ಟ್ರಿಕಲ್ ಅಂಗಡಿ ಇಟ್ಟುಕೊಂಡು ಈಗಲೂ ದುಡಿಯುತ್ತಿರುವ ಆ ವೀರಮಾತೆಯ ಮಗ ಸೋಹಲ್ ಲಾಲ್ ಭಾರತಿ, ತಮ್ಮ ತಾಯಿಯ ಆದರ್ಶವನ್ನೇ ಪಾಲಿಸಿದವರು. ಸ್ವತಃ ಸ್ವಾತಂತ್ರ್ಯ ಯೋಧರಾದರೂ ಅದರ ಯಾವ ಲಾಭವನ್ನೂ ಪಡೆಯಲಿಲ್ಲ.

ಇಂದು ಅಮೃತಸರದ ಮುಖ್ಯ ರಸ್ತೆಯೊಂದು ಅತ್ತರ್ ಕೌರ್ ಹೆಸರು ಹೊತ್ತಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇರವಾಗಿ ಧುಮುಕಿ ಹುತಾತ್ಮರಾದ ಸಾವಿರಾರು ಜನರಂತೆ, ಇತಿಹಾಸ ಪುಟಗಳಲ್ಲಿ ಅದೃಶ್ಯರಾಗಿ ಎಲ್ಲಿಯೂ ದಾಖಲಾಗಲಿಲ್ಲ. ಸ್ವಾತಂತ್ರ್ಯದ ಕನಸು ಕಂಡ ಅತ್ತರ್ ಕೌರ್ ಅಂಥಾ ಸಾವಿರಾರು ಮಹಿಳೆಯರಿದ್ದಾರೆ. ಅವರೆಲ್ಲರ ತ್ಯಾಗದ ಬಲಿದಾನದ ಬುನಾದಿಯ ಮೇಲೆ ನಿಂತಿದೆ. ನಮ್ಮ ಇಂದಿನ ಸುವರ್ಣ ಸ್ವಾತಂತ್ರ್ಯವೆಂದು ಲೇಖಕಿ ನೇಮಿಚಂದ್ರ ಅಭಿಪ್ರಾಯ ಪಡುತ್ತಾರೆ. ಈ ಮೇಲೆ ಪ್ರಸ್ತಾಪಿಸಿದ ಲೇಖನಗಳಲ್ಲದೆ ಪತಿತೆಯ ಪರ ನಿಂತು ಹೋರಾಡಿದ ಜೋಸೆಫಿನ ಬಟ್ಲರ್ ವೇಶ್ಯೆಯರ ಪರ ಹೋರಾಡಿದ ಮಹಿಳೆಯ ಕುರಿತಾಗಿ ಪರಿಚಯ ಮಾಡಿ ಕೊಡುತ್ತದೆ. ಸಾಮಾಜಿಕ ನ್ಯಾಯ ಮತ್ತು ಸ್ತ್ರೀಪುರುಷರ ಸಮಾನತೆಯತ್ತ ಹೋರಾಡುತ್ತಿರುವ ಇಂಗ್ಲೇಂಡಿನ ಜೋಸೆಫೀನ್ ಬಟ್ಲರ್ ಸೊಸೈಟಿ ವೇಶ್ಯೆಯರ ಸಹಾಯಕ್ಕೆ ಮುಂದಾದುದನ್ನು ಲೇಖಕಿ ತಿಳಿಸುತ್ತಾರೆ.

ಜೋಸೆಫಿನ್ ಬಟ್ಲರ್ ವೇಶ್ಯೆಯರ ಪರವಾಗಿ ಇನ್ನಿಲ್ಲದಂತೆ ಹೋರಾಡಿದಾಕೆ. ಲಿಂಗಭೇದ ನೀತಿಗಳ ವಿರುದ್ಧ ಒಂದೂವರೆ ಶತಮಾನಗಳ ಹಿಂದೆಯೇ ದನಿಯೆತ್ತಿದವಳು. ಜೋಸೆಫಿನ್ ಬಟ್ಲರ್ ಆಂಗ್ಲ ಸ್ತ್ರೀವಾದಿ, ಸಕ್ರಿಯ ಸಮಾಜ ಸೇವಕಿ. ಈಕೆ ನಾರ್ತ್ ಅಂಬರ್ಲಾಂಡ್‌ನಲ್ಲಿ ೧೮೨೮ರಲ್ಲಿ ಜನಿಸಿದರು. ಸಾಕಷ್ಟು ಶ್ರೀಮಂತ ಪ್ರಭಾವಶಾಲಿ, ಭೂಮಾಲೀಕರ ಕುಟುಂಬದಲ್ಲಿ ಹುಟ್ಟಿದಾಕೆ. ತಂದೆ ಜಾನ್ ಗ್ರೇ. ಕೃಷಿ ಸುಧಾರಣೆಯಲ್ಲಿ ತೊಡಗಿದವ. ಗುಲಾಮಗಿರಿ ಪದ್ಧತಿಯನ್ನು ರದ್ದು ಮಾಡುವತ್ತ

ವಾದಿಸಿದವ. ಏಳು ಮಕ್ಕಳಲ್ಲಿ ಕಡೆಯವಳಾಗಿ, ಮುದ್ದಿನವಳಾಗಿ ಬೆಳೆದವಳು ಜೋಸೆಫಿನ್. ಈಕೆ ತಾಯಿಯಿಂದ ವಿದ್ಯಾಭ್ಯಾಸ ಪಡೆದಳು. ನ್ಯಾ ಕ್ಯಾಸಲ್‌ನಲ್ಲಿ ಶಾಲೆಗೆ ಹೋದದ್ದು ಉಂಟು. ಬಾಲ್ಯದಿಂದಲೂ ಆಕೆ ಬೆಳೆದ ಪರಿಸರ ರಾಜಕೀಯ ವಾದ ವಿವಾದಗಳನ್ನು ಕುರಿತು ಸಾಕಷ್ಟು ಮಾಹಿತಿಗಳಣ್ನು ಈ ಲೇಖನ ನೀಡುತ್ತದೆ. ಜೋಸೆಫಿನ್ ಬಟ್ಲರ್ ತೋರಿದ ದಿಟ್ಟ ಹಾದಿಯಲ್ಲಿ ಆಕೆ ಸ್ಥಾಪಿಸಿದ ಸಂಸ್ಥೆ ಇಂದಿಗೂ ಮಹಿಳಾ ಸಮಾನತೆಗಾಗಿ, ಲಿಂಗತಾರತಮ್ಯ ನೀತಿಗಳ ವಿರುದ್ಧವಾಗಿ ಹೋರಾಟ ಮುಂದುವರೆಸಿದೆ.

ಸಾಮಾಜಿಕ ಏಳು-ಬೀಳುಗಳು ಆಕೆಯನ್ನು ಅಳುಕಿಸಲಿಲ್ಲ. ಜೊತೆಗೆ ಜೋಸೆಫಿನ್‌ರ ಹೋರಾಟಕ್ಕೆ ಪತಿಯ ಬೆಂಬಲವಿತ್ತು. ಅವರದು ಸುಗಮವಾಗಿ ಸಾಗಿದ ಸುಖೀ ದಾಂಪತ್ಯ. ಜೋಸೆಫಿನ್ ಆಯ್ದ ಹಾದಿ ಕಲ್ಲು ಮುಳ್ಳಿನದಾಗಿತ್ತು ಎಂದು ಜೋಸೆಫಿನ್ ಸಾಧನೆಯನ್ನು ಕೂಲಂಕುಶವಾಗಿ ಪರಿಚಯಿಸಿದ್ದಾರೆ.

ಪ್ರವಾಸ ಕಥನ : ಪೆರುವಿನ ಪವಿತ್ರ ಕಣಿವೆಯಲ್ಲಿ

ನೇಮಿಚಂದ್ರರ ಮತ್ತೊಂದು ಪ್ರವಾಸ ಕಥನ "ಪೆರುವಿನ ಪವಿತ್ರ ಕಣಿವೆಯಲ್ಲಿ" ಈ ಪ್ರವಾಸ ಕಥನ ಕುರಿತಾಗಿ ರಹಮತ್ ತರೀಕೆರೆ ಈ ರೀತಿಯಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ತಿರುಗಾಟವು ಕೇವಲ ಹೊಸ ಹೊಸ ಅರಿವು ಅನುಭವಗಳಿಗೆ ಮಾತ್ರ ಕಾರಣವಾಗುವುದಿಲ್ಲ. ಅದು ಜಾತಿ, ಮತ, ಭಾಷೆ, ದೇಶಗಳ ಹೆಸರಲ್ಲಿ ನಾವು ಕಟ್ಟಿಕೊಂಡಿರುವ ಸಣ್ಣತನಗಳನ್ನು ಕಳೆದು ಹಾಕಿಬಿಡುತ್ತದೆ. ಈ ಅರ್ಥದಲ್ಲಿ ಪ್ರವಾಸವು ಎಂದೂ ಜಾತ್ಯಾತೀತವಾದುದು ಮತ್ತು ದಾರ್ಶನಿಕವಾದುದು. ಪ್ರವಾಸ ಕಥನಗಳಲ್ಲಿ ಪ್ರವಾಸಿಗರ ದೇಶದ ನೆನಪು ಎರಡು ಬಗೆಯಲ್ಲಿ ಕಾಣಿಸಿಕೊಳ್ಳುತ್ತದೆ. ಒಂದೂ ಇದು ಪರದೇಶವನ್ನು ಅಲ್ಲಗಳೆಯುತ್ತ ನಮ್ಮ ಗತಕಾಲದ ಆಧ್ಯಾತ್ಮಿಕ ಪರಂಪರೆಯನ್ನು ವೈಭವೀಕರಿಸುವುದಕ್ಕಾಗಿ ಬರುತ್ತದೆ. ಇಲ್ಲವೇ ಶ್ರೀಮಂತ ದೇಶಗಳ ಅಭಿವೃದ್ಧಿ, ಶಿಸ್ತು, ಅಚ್ಚುಕಟ್ಟತನ, ಪ್ರಾಮಾಣಿಕತೆಗಳನ್ನು ಕೊಂಡಾಡುತ್ತಾ ನಮ್ಮನ್ನು ನಾವು ಹಳಿದುಕೊಳ್ಳುವುದಕ್ಕಾಗಿ ಬರುತ್ತದೆ. ಆದರೆ ಪ್ರವಾಸದಲ್ಲಿ ಸಿಗುವ ನೋಟಗಳು, ಆತ್ಮನಿಂದನೆಗೂ, ಆತ್ಮಸ್ತುತಿಗೂ ಕಾರಣವಾಗಬೇಕಿಲ್ಲ. ಬದಲಿಗೆ ಆತ್ಮವಿಮರ್ಶೆಗೂ ಆತ್ಮ ಪ್ರತ್ಯಯಕ್ಕೂ ಪ್ರೇರಣೆ ಕೊಡಲು ಸಾಧ್ಯವಾಗುವುದಾದರೆ, ಪರಿಣಾಮ ಭಿನ್ನವಾಗಿರಬಲ್ಲದು. ಆಗ ಪ್ರವಾಸ ಕಲಿಕೆಯಾಗುತ್ತದೆ. ಅರಿವಿನ ಪಯಣವಾಗುತ್ತದೆ. ಕನ್ನಡಿಯ

ನೋಟವಾಗುತ್ತದೆ, ಚಿಂತನೆಯಾಗುತ್ತದೆ. ಇಂತಹ ಕನ್ನಡ ನೋಟದ ಕೆಲವನ್ನು ಈ ಕೃತಿ ಮಾಡುತ್ತದೆ."[೧]

ಹಾಗೆಯೇ ಕಾರುಣ್ಯರವರು ಈ ಕೃತಿಯ ಕುರಿತಾಗಿ ಈ ರೀತಿಯ ಮಾತುಗಳನ್ನಾಡಿದ್ದಾರೆ. "ತಮ್ಮ ಪ್ರವಾಸದುದ್ದಕ್ಕೂ ವರ್ತಮಾನದ ಕಣ್ಣಿನಿಂದ ಪೆರುವಿನ ಇತಿಹಾಸವನ್ನು ಸಂಗ್ರಹಿಸುತ್ತಾ ಹೋಗುತ್ತಾರೆ. ಮೂಲತಃ ಕತೆಗಾರ್ತಿಯಾಗಿರುವ ನೇಮಿಚಂದ್ರರ ಗದ್ಯಕ್ಕೆ ಕಾವ್ಯದ ಸ್ಪರ್ಶವಿದೆ. ಸಂಗ್ರಹಿಸಿದ ಇತಿಹಾಸವನ್ನು ಬರೇ ವರದಿಯ ರೂಪದಲ್ಲಿ ಮಂಡಿಸುತ್ತಾ ಹೋಗುವುದಿಲ್ಲ. ಆದ್ದರಿಂದ ಇಡೀ ಪ್ರವಾಸ ಲೇಖನಕ್ಕೆ ಕಥನ ಗುಣವಿದೆ." ಲೇಖಕಿಗೆ ಎಲ್ಲೂ ಪ್ರದೇಶಗಳನ್ನು ವಿವರಿಸಲು ಮಧ್ಯವರ್ತಿಗಳಿಲ್ಲ. ಆದುದರಿಂದ ಈ ಕೃತಿ ಯಾವನೋ ಒಬ್ಬ ಗೈಡ್ ಹೇಳಿದ ವಿವರವಾಗುವ ಅಪಾಯವು ತಪ್ಪಿದೆ. ಇಂಗ್ಲೀಷ್ ಬಾರದ ಜನರೊಂದಿಗೆ ಮೂಕಭಾಷೆಯಲ್ಲಿ ವ್ಯವಹರಿಸುವ ಮೂಲಕ ಅವರನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಬಡತನ, ದುಡಿಮೆಯ ನಡುವೆಯೂ ಹೃದಯವಂತಿಕೆಯನ್ನು ಗುರುತಿಸುವಲ್ಲಿ ಮೂಕಭಾಷೆಯಿಂದ ಲೇಖಕಿ ಯಶಸ್ವಿಯಾಗುತ್ತಾರೆ"[೨]

'ಪೆರು' ದೇಶವನ್ನು ಪರಿಚಯ ಮಾಡಿಕೊಡುವ ಪುಸ್ತಕವೊಂದನ್ನು ಓದಿ ಆ ದೇಶದ ಅಮೆಜಾನ್ ನದಿ, ಕಾಡು ಇತ್ಯಾದಿಗಳ ಬಗ್ಗೆ ಕುತೂಹಲ ಬೆಳೆಸಿಕೊಂಡ ಕತೆಗಾರ್ತಿ ಮತ್ತು ಲೇಖಕಿ ನೇಮಿಚಂದ್ರ ಅವರು ಪೆರುವಿನಲ್ಲಿ ಮಾಡಿದ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಅಮೆರಿಕಾದ ಉದ್ದಗಲಕ್ಕೂ ಸುತ್ತಾಡಿ ಆ ದೇಶದ ಜನರ 'ಎಲ್ಲವನ್ನು ಬಳಸು ಬಿಸಾಕು' ಧೋರಣೆಯ ಅತಿರೇಕಗಳನ್ನು ಕಂಡು ಅಚ್ಚರಿ ಪಡುತ್ತಲೇ, ಅದಕ್ಕೆ ತದ್ವಿರುದ್ಧವಾದ ಪುರಾತನ ಸಂಸ್ಕೃತಿಯ 'ಪೆರು' ಆಸಕ್ತಿಗೆ ಪೂರಕವಾಗಿ ಪೆರುವಿನ ಸಂಸ್ಕೃತಿ, ಇತಿಹಾಸ, ರಾಜಕೀಯ ವ್ಯವಸ್ಥೆ, ಮಹಿಳಾ ಹೋರಾಟ, ಅಮೆಜಾನ್ ನದಿ ಮತ್ತು ಕಾಡು ನೋಡಿದ ವಿವರಗಳು ಕುತೂಹಲ ಹುಟ್ಟಿಸುತ್ತವೆ. ಲೇಖಕಿಯ ಈ ಪ್ರವಾಸ ಕಥನದ ಒಂದೊಂದೇ ಲೇಖನ ಓದುತ್ತಾ ಹೋದಂತೆ ಬದುಕಿನ ಹಲವು ಮುಖಗಳ ಪರಿಚಯವಾಗುತ್ತದೆ. ಇದೊಂದು ಮಹತ್ವಪೂರ್ಣ ಕೃತಿ ಎಂದು ಹೇಳಬಹುದು.

೧.ನೇಮಿಚಂದ್ರ; ೨೦೦೮, ಪುಟ-೪

೨..ನೇಮಿಚಂದ್ರ; ೨೦೦೮, ಪುಟ-೫

ನೇಮಿಚಂದ್ರರ ಸ್ತ್ರೀವಾದಿ ದೃಷ್ಟಿಕೋನದ ವೈಚಾರಿಕ ಬರಹಗಳನ್ನು, ಮಹಿಳಾಲೋಕ, ಮಹಿಳಾ ಅಧ್ಯಯನ, ಸಾಹಿತ್ಯ ಮತ್ತು ವಿಜ್ಞಾನ ಕೃತಿಯಲ್ಲಿ ಗುರುತಿಸಬಹುದು.

ಬದುಕು ಬದಲಿಸಬಹುದು :

ಈ ಕೃತಿಯಲ್ಲಿನ ಒಂದೊಂದು ಲೇಖನವು ಬದುಕಿನ ಹಲವು ಮುಖಗಳ ಪರಿಚಯ ಮಾಡಿಸುತ್ತದೆ. ನೋವು ನಲಿವಿನ, ನಿಟ್ಟುಸಿರಿನ ತುಣುಕುಗಳು ಸೇರಿಯೇ ಈ ಬದುಕು ನಡೆಯುತ್ತದೆ ಎಂಬುದನ್ನು ಸೋಲನ್ನು, ನೋವನ್ನು, ನಿರಾಶೆಯನ್ನು, ಕೆಲವೊಮ್ಮೆ ತನ್ನ ತಪ್ಪಿಲ್ಲದಿದ್ದರೂ ಒದಗಿ ಬರುವ ಅಪಮಾನವನ್ನು ಹೇಗೆ ಎದುರಿಸಬೇಕೆಂಬುದನ್ನು, ಮುಗ್ಗರಿಸಿ ಬಿದ್ದರೂ ಎದ್ದು ಕೊಡವಿ ನಡೆಯುವ ತಾಕತ್ತನ್ನು, ಸತ್ತು ಮುಗಿಯದೆ ಇದ್ದು ಬದುಕುವ ದಿಟ್ಟತನವನ್ನೂ, ಮತ್ತೆ ಪ್ರಾರಂಭಿಸಲ್ಲ ಛಲವನ್ನು ಓದುಗರ ತಲೆಗೂ ಹೋಗಿಸುವ ಲೇಖನಗಳಿವು.

'ಸ್ನೇಹಕ್ಕೆ ಯಾವ ಸರಹದ್ದು' ಎನ್ನುವ ಲೇಖನದಲ್ಲಿ ಮನುಷ್ಯ-ಮನುಷ್ಯರ ನಡುವೆ ಸ್ನೇಹದ ಸೇತುವೆ ನಿರ್ಮಾಣವಾಗಲು ಅರೆ ಗಳಿಗೆ ಸಾಕು ಎಂದು ಹೇಳುತ್ತಾ ಯಾರ್ಕ್‌ಶೈರ್‌ಗೆ ಹೋದ ಅನುಭವವನ್ನು ಹೇಳಿಕೊಳ್ಳುತ್ತಾರೆ. ಮುಂದಿನ 'ಆಯ್ಕೆಯಿದೆ ನಮ್ಮ ಕೈಯಲ್ಲಿ' ಈ ಲೇಖನದಲ್ಲಿ ಲೇಖಕಿಯು ತಮ್ಮ ವೈವಾಹಿಕ ಜೀವನವನ್ನೇ ಉದಾಹರಣೆಯಾಗಿ ನೀಡಿ, ನೂರು ಹಾದಿಯನ್ನು ಹಾಸಿದೆ. ಆದರೆ ಎದ್ದು ನಡೆಯಬೇಕಷ್ಟೇ ಎಂಬ ಸಂದೇಶ ನೀಡುತ್ತಾರೆ.

'ರೂಪ ರೂಪಗಳನ್ನು ದಾಟಿ' ಲೇಖನದಲ್ಲಿ ಆಂತರಿಕ ಸೌಂದರ್ಯಕ್ಕಿಂತ ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿರುವುದನ್ನು ಕಾಣಬಹುದು. ಸೌಂದರ್ಯ ಸಾಧನಗಳ, ಸರಕು ಮಾರಾಟದ ಅಬ್ಬರದ ಜಾಹೀರಾತು ಯುಗದಲ್ಲಿ ನಮ್ಮ ಹೆಣ್ಣು ಗಂಡು ಮಕ್ಕಳಿಗೆ ಇಲ್ಲದ ಕೀಳರಿಮೆ ಕಾಡುತ್ತಿದೆ. ಇಲ್ಲದ ಊನಗಳು ಎದ್ದು ಕಾಣುತ್ತವೆ. ತಮ್ಮ ಓದು, ಜ್ಞಾನ, ಪ್ರತಿಭೆ, ಹವ್ಯಾಸ, ಸ್ನೇಹಗಳನ್ನು ಬೆಳಸಿಕೊಳ್ಳುವ ವಯಸ್ಸಿನಲ್ಲಿ ಸೌಂದರ್ಯ ಗೀಳು ರೋಗಕ್ಕೆ ಬಲಿಯಾಗಿ ಬದುಕಿನ ನೂರು ಸಾಧ್ಯತೆಗಳನ್ನು ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದಿದ್ದಾರೆ ಲೇಖಕಿ.

'ಜಗದ ಸಂತೆಯಲ್ಲಿ ಮನೆಯ ಮಾಡಿ' ಈ ಲೇಖನದಲ್ಲಿ ಸಂತೆಯಲ್ಲಿ ಮನೆಯ ಮಾಡಿ ಗದ್ದಲಕ್ಕೆ ಹೆದರಿದರೆ ಹೇಗೆ? ಎಂಬುದನ್ನು ಲೇಖಕಿ ತಮ್ಮ ಮನೆಯ ಸುತ್ತಮುತ್ತಲಿನ ಘಟನೆಗಳನ್ನೇ ಉದಾಹರಣೆಯಾಗಿ ನೀಡಿದ್ದಾರೆ. ನಮ್ಮ ಕೆಲಸಗಳಲ್ಲಿ ನಾವು ಮೈಮರೆತಾಗ ಯಾವುದೇ ಗದ್ದಲ, ಗಡಿಬಿಡಿಗೆ ಕಿವುಡಾಗಿ ನಮ್ಮದೇ ಲೋಕದಲ್ಲಿ ನಾವು ಮುಳುಗಬಹುದು ಎಂಬುದನ್ನು ತಿಳಿಸಿದ್ದಾರೆ.

'ಆದದ್ದೆಲ್ಲ ಒಳಿತೇ ಆಯಿತು' ಈ ಲೇಖನವು ಆದದ್ದಾಯಿತು, ಆದದ್ದೆಲ್ಲ ಬಹುಶಃ ಒಳಿತಿಗೇ ಇರಬಹುದು ಎಂದು ಅತಿ ಕೆಟ್ಟ ಅನುಭವದಲ್ಲೂ ಒಳ್ಳೆಯದೇನನ್ನೋ ಹುಡುಕುವ ಕಡೆಗೆ ಒಳ್ಳೆಯದೇನೂ ಇಲ್ಲದಿದ್ದರೆ, ಕೆಟ್ಟ ಅನುಭವದಿಂದ ಪಾಠವನ್ನಾದರೂ ಕಲಿತು ಮುನ್ನಡೆಯುವ ಅನೇಕ ಪ್ರಸಂಗಗಳನ್ನು ತಿಳಿಸುತ್ತದೆ. ನೇಮಿಚಂದ್ರರು ತಮ್ಮ ಕುಟುಂಬದಲ್ಲಿ ನಡೆದ ಘಟನೆಗಳನ್ನೇ ಉದಾಹರಣೆಯಾಗಿ ಕಟ್ಟಿ ಕೊಟ್ಟಿದ್ದಾರೆ.

'ಬದುಕು ಬದಲಾದಾಗ' ಲೇಖನದಲ್ಲಿ ಮನುಷ್ಯನ ಬದುಕು ಬದಲಾಗುವುದುಂಟು. ಕೆಲವೊಮ್ಮೆ ಏಕಾಏಕಿ ಬದಲಾವಣೆ ಅನಿವಾರ್ಯವಾದಾಗ, ಹೊಂದಿಕೊಳ್ಳುವುದು ಅನಿವಾರ್ಯವಾಗುತ್ತದೆ. ಆದರೆ ಯಾವುದೇ ಬದಲಾವಣೆಗೂ ಮನುಷ್ಯ ಒಂದಿಷ್ಟು ಬೆದರುತ್ತಾನೆ. ಹೊಂದಿಕೊಳ್ಳಲಾರದೆ ಚಡಪಡಿಸುತ್ತಾರೆ. ಕೆಲವು ಸಲ ಆರಾಮದ್ದಾಗಿ ಕಾಣುತ್ತದೆ. ಗೊತ್ತಿಲ್ಲದ್ದು ಭಯ ಹುಟ್ಟಿಸುತ್ತದೆ. ಬದಲಾವಣೆ ಅಗತ್ಯವೂ, ಅನಿವಾರ್ಯವೂ ಆದಾಗ ಭೂತಕಾಲಕ್ಕೆ ಹಿಂದಿರುಗಲು ಸಾಧ್ಯವಿಲ್ಲದಿದ್ದಾಗ ಮುನ್ನಡೆದು ಬದುಕಿಗೆ ಹೊಂದಿಕೊಳ್ಳುವುದು ಅನಿವಾರ್ಯ ಎಂಬುದನ್ನು ಚಿತ್ರಿಸಿದ್ದಾರೆ.

ನೇಮಿಚಂದ್ರರಿಗೆ ಆರೋಗ್ಯದ ಬಗ್ಗೆ ತುಂಬಾ ಕಾಳಜಿ ಎನ್ನುವುದಕ್ಕೆ ಅವರ ಲೇಖನ 'ಅಂಧ ಅನುಕರಣೆಯ ಬಿಟ್ಟು'ವಿನಲ್ಲಿ ನೋಡಬಹುದು. ಈ ಲೇಖನದಲ್ಲಿ ಲೇಖಕಿ ವಿದೇಶಕ್ಕೆ ಹೋದಾಗ ಅಲ್ಲಿನ ಆಹಾರ ಪದ್ಧತಿಯನ್ನು ನೋಡಿ ಹೌಹಾರಿದ್ದಾರೆ. 'ಅಮೆರಿಕಾದಲ್ಲಿ ೨೦ ವರ್ಷಗಳಲ್ಲಿ ಬೊಜ್ಜು ಮೈನವರ ಸಂಖ್ಯೆ ದ್ವಿಗುಣವಾಗಿದೆ. ಇಂದು ಮೂರರಲ್ಲಿ ಒಬ್ಬ ವಯಸ್ಕ ಬೊಜ್ಜು ಮೈನವನಾಗಿದ್ದಾನೆ. ಚಿಕ್ಕ ವಯಸ್ಸಿಗೆ 'ಜಂಕ್ ಫುಡ್' ಕಂಪನಿಗಳು ಆಕರ್ಷಿಸುತ್ತವೆ"[೧] ಇಡೀ ಜಗತ್ತಿನಲ್ಲಿ ಇಂದು ಒಂದು ಬಿಲಿಯನ್ ವಯಸ್ಕರು 'ಅತಿತೂಕ'ದವರಾಗಿದ್ದಾರೆ. ನಮ್ಮ ಪರಿಸರಕ್ಕೆ ಹೊಂದುವುದನ್ನು ಮಾತ್ರ ಕೊಳ್ಳುವ ಜಾಣತನವಿರಬೇಕು ಎಂದು ಆರೋಗ್ಯದ ಬಗ್ಗೆ ತಮ್ಮ ಕಾಳಜಿ ತೋರಿದ್ದಾರೆ. ಹೀಗೆ ಇಲ್ಲಿಯ ೪೫ ಲೇಖನಗಳಲ್ಲಿ ತಮ್ಮ ಬದುಕಿನ ವಿವಿಧ ಅನುಭವಗಳನ್ನು ಚಿತ್ರಿಸಿದ್ದಾರೆ.

೧.ನೇಮಿಚಂದ್ರ; ೨೦೧೩, ಪುಟ-೧೪೭

ಸೃಜನೇತರ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ಲೇಖಕಿ ನೇಮಿಚಂದ್ರರು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಹಿತ್ಯ, ವಿಜ್ಞಾನ, ವೈದ್ಯಕೀಯ ಹೀಗೆ ಹಲವು ಕ್ಷೇತ್ರದಲ್ಲಿ ಮಹಿಳೆಯ ಸಾಧನೆಯ ಮೈಲಿಗಲ್ಲುಗಳನ್ನು ಇಲ್ಲಿ ನೆನೆದಿದ್ದಾರೆ. ಹೀಗೆ ಬೇರೆ ಬೇರೆ ರಂಗಗಳಲ್ಲಿ ದುಡಿವ ಮಹನೀಯರ ಬಗೆಗೆ ವ್ಯಕ್ತಿ ಚಿತ್ರಗಳನ್ನು 'ದುಡಿವ ಹಾದಿಯಲಿ ಜೊತೆಯಾಗಿ' ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ವ್ಯಕ್ತಿ ವಿಕಸನ ಸಂಬಂಧಿ ಲೇಖನಗಳನ್ನು ಇದು ಒಳಗೊಂಡಿದೆ.

ಅನುವಾದ :

ನನ್ನ . . . . . ನಮ್ಮ ಕತೆ : ಫ್ಲೇವಿಯಾ ಅವರ ಬದುಕಿನ ಸಾಹಸಗಾಥೆ ಆದ ಈ ಆತ್ಮಚರಿತ್ರೆಯನ್ನು ನೇಮಿಚಂದ್ರ ಅವರು ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ಸ್ತ್ರೀವಾದಿ ಸಾಹಿತ್ಯ ಹಾಗೂ ಬದುಕಿನ ಅಪರೂಪದ ಆತ್ಮಕಥನವಾಗಿ ಈ ಕೃತಿ ಸಾಮಾಜಿಕ ಬದುಕಿನೊಳಗಿನ ವೈರುದ್ಯಗಳನ್ನು ಎತ್ತಿ ತೋರುತ್ತದೆ. ಈ ಸಾಹಸಗಾಥೆಯ ಕುರಿತಾಗಿ ಲೇಖಕಿ ಈ ರೀತಿ ಹೇಳುತ್ತಾರೆ. "ಇದು ಕೌಟುಂಬಿಕ ಕ್ರೌರ್ಯದಲ್ಲಿ ಛಿದ್ರ ಛಿದ್ರಗೊಂಡು ಮತ್ತೆ ಪುನರುಜ್ಜೀವನಗೊಂಡ ಫ್ಲೇವಿಯಾರ ಕತೆ. ನೂರು ಸೋಲಿನ ಅಂಚಿನಲ್ಲೂ ಜಯದ ಕನಸು ಕಂಡ ದಿಟ್ಟ ಹೆಣ್ಣಿನ ಕತೆ. ಹಿಂಸೆಯ ವಿವಾಹದ ಈ ಕತೆ ಕೇವಲ ಫ್ಲೇವಿಯಾರ ಕತೆಯಾಗಿ ಮುಗಿಯುವುದಿಲ್ಲ. ಮುಸುಕಿನ ಮರೆಯಲ್ಲಿ ಅನುಭವಿಸುತ್ತಿರುವ ನಮ್ಮ ನಡುವಿನ ನೂರಾರು ಹೆಂಗಳೆಯರ ನೋವಿನ ಕತೆ ಇದು. ಓರ್ವ ಸಾಮಾನ್ಯ ಗೃಹಿಣಿಯ ಅಸಾಧಾರಣ ಸಾಧನೆಯ ಕತೆ"[೧] ವೈವಾಹಿಕ ಬದುಕಿನಲ್ಲಿ ಗಂಡನ ಹೊಡೆತ ಕಿರುಕುಳ ಕೇವಲ ಕೆಳವರ್ಗಕ್ಕೆ, ಅವಿದ್ಯಾವಂತರಿಗೆ ಮಾತ್ರೆ ಅನ್ವಯಿಸುತ್ತದೆ. ಕುಡುಕರು, ಕೆಡುಕರು ಮಾತ್ರ ಹೊಡೆಯುತ್ತಾರೆ ಎಂಬ ತಪ್ಪು ಕಲ್ಪನೆಯನ್ನು ಈ ಕೃತಿ ಹುಸಿ ಎಂದು ತೋರಿಸುತ್ತದೆ.

ಕೌಟುಂಬಿಕ ಹಿಂಸೆ ನಮ್ಮ ಸಮಾಜದಲ್ಲಿ ಬೆಳಕಿಗೆ ಬಾರದೆ, ಸೆರಗಿನ ಮರೆಯಲ್ಲಿ, ಬಿಗಿದ ತುಟಿಗಳ ಬಿಕ್ಕುಗಳಲ್ಲಿ ತಡೆದು ಮುಗಿಯುತ್ತದೆ. ಕ್ರೌರ್ಯ ತುಂಬಿದ ವಿವಾಹದಲ್ಲೇ ಕಡೆಯವರೆಗೂ ಉಳಿದು ತಮ್ಮೊಡನೆ ತಮ್ಮ ಕರ್ಮಕತೆಯನ್ನು ನಿಗೂಢವಾಗಿ ಉಳಿಸಿ ಹೋಗುವವರೇ ಹೆಚ್ಚು. ಅತ್ಯಂತ ದುಃಖದ ವಿಚಾರವೆಂದರೆ 'ಮನೆತನ ಗೌರವ' ಎಂಬ ಪದಗಳಿಗೆ ಜೋತುಬಿದ್ದು ವಿವಾಹದೊಳಗಿನ ದೌರ್ಜನ್ಯ ವರದಿಯಾಗದೆ ಉಳಿಯುತ್ತದೆ. ಅನಿವಾರ್ಯವೆಂಬಂತೆ ಅನುಭವಿಸುವವರು ಜೀವನವಿಡೀ

೧.ನೇಮಿಚಂದ್ರ; ೨೦೧೧, ಪುಟ-೯

ಬಿಡಿಸಿಕೊಂಡು ಬದುಕುತ್ತಾರೆ. ಅಸಾಧ್ಯವೆನಿಸಿದಾಗ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇಂಥ ಹಿಂಸೆಯ ಸಂಬಂಧವನ್ನು ಬಯಲಿಗಿಟ್ಟು, ಓದು, ಉದ್ಯೋಗವಿಲ್ಲದಿದ್ದರೂ ಹೊರಬಂದು, ತಮ್ಮ ಕಾಲ ಮೇಲೆ ನಿಂತವರು ಅಪರೂಪ. ಇಂಥ ಅಪರೂಪದಿ ಮಹಿಳೆ ಫ್ಲೇವಿಯಾ. ಹದಿನೈದು ವರ್ಷಗಳ ಕಾಲ ಸಿಕ್ಕಿಬಿದ್ದ, ಹಿಂಸೆಯ ವಿವಾಹದಾಚೆಗೆ ಸಿಡಿದು ನಡೆದ ದಿಟ್ಟ ಮಹಿಳೆ. ಈ ಮಹಿಳೆ ಮಾಡಿದ ದಾಖಲೆಗಳನ್ನು ನೇಮಿಚಂದ್ರರು 'ನನ್ನ ಕಥೆ. . . ನಮ್ಮ ಕಥೆ' ಕೃತಿಯ ರೂಪದಲ್ಲಿ ಅನುವಾದಿಸಿದ್ದಾರೆ. ಮೂಲ ಕೃತಿಗೆ ಧಕ್ಕೆ ಬಾರದ ರೀತಿಯಲ್ಲಿ ಅನುವಾದಿಸಿದ್ದಾರೆ. ನೇಮಿಚಂದ್ರರು ಕೈ ಹಾಕದ ಸಾಹಿತ್ಯ ವಲಯವೇ ಇಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ.

ಕೇವಲ ಒಂದು ದಶಕದಲ್ಲಿ, ಹಿಂಸೆಯ ವಿವಾಹದಲ್ಲಿ ಸಿಕ್ಕಿಬಿದ್ದ ಸಾಮಾನ್ಯ ಗೃಹಿಣಿ, ಫ್ಲೇವಿಯಾ ಯಶಸ್ವಿ ಸ್ತ್ರೀವಾದಿ ನ್ಯಾಯವಾದಿಯಾಗಿ ಬೆಳೆದುನಿಂತರು. ಇಂದು ಫ್ಲೇವಿಯಾ ಕೇವಲ

ನ್ಯಾಯವಾದಿ ಮಾತ್ರವಲ್ಲ, ಅಪರೂಪದ ಸ್ತ್ರೀ ದೃಷ್ಟಿಕೋನದ ನ್ಯಾಯವಾದಿಯಾದುದನ್ನು ಕೃತಿಯು ಚಿತ್ರಿಸುತ್ತದೆ. ಪ್ರತಿ ಹೆಣ್ಣಿನಲ್ಲಿರುವ ಸ್ತ್ರೀ ಶಕ್ತಿಯನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ಈ ಕೃತಿಯೂ ಕೈಗನ್ನಡಿಯಾಗಿದೆ. "ಸಹಾಯ ಬೇಡಿ ಆಗಮಿಸುತ್ತಿರುವ ಮಹಿಳೆಯರು ಸಾಂಪ್ರದಾಯಿಕ ವ್ಯವಸ್ಥೆಯೊಳಗೆಯೆ ಸುಲಭದ ಪರಿಪೂರ್ಣ ಪರಿಹಾರವನ್ನು ಬಯಸುತ್ತಾರೆ. ಸಮಾಜ ತಮ್ಮ ಮೇಲೆ ಹೇರಿರುವ ಈ ಅವಲಂಭಿತ ಸ್ಥಿತಿಯಿಂದ ಹೊರಬರಲು ಹಿಂಜರಿಯುತ್ತಾರೆ. ಬಿಡಿಸಿಕೊಳ್ಳುವ ಹೆಣ್ಣಿಗೆ ಇಷ್ಟು ಡೊಂಕು ಸಮಾಜದಲ್ಲಿ ಪರಿಪೂರ್ಣ ಪರಿಹಾರ ಎಂಬುದೊಂದಿದೆಯೇ?[೧] ಫ್ಲೇವಿಯಾ ಅಭಿಪ್ರಾಯ ಪಡುತ್ತಾರೆ.

ಸಾಹಿತ್ಯ ಮತ್ತು ವಿಜ್ಞಾನ : 'ಸಾಹಿತ್ಯ ಮತ್ತು ವಿಜ್ಞಾನ' ಕೃತಿಯೂ ಅಂತರ್‌ಶಿಸ್ತೀಯ ನೆಲೆಯ ಅಧ್ಯಯನವನ್ನು ಒಳಗೊಂಡಿದೆ. ಸಾಹಿತ್ಯವನ್ನು ಇತರ ಶಿಸ್ತುಗಳೊಂದಿಗೆ ತುಲನೆ ಮಾಡಿ ಅಧ್ಯಯನ ಮಾಡುವ ಕ್ರಮವಿದೆ. ಇದೇ ಮಾದರಿಯಲ್ಲಿ ಸಾಹಿತ್ಯ ಮತ್ತು ವಿಜ್ಞಾನ ಕೃತಿಯು ಹೊರಹೊಮ್ಮಿದೆ. ಈ ಕೃತಿಯು ಏಳು ಅಧ್ಯಾಯಗಳನ್ನು ಹೊಂದಿದೆ. ಸಾಹಿತ್ಯ ಮತ್ತು ವಿಜ್ಞಾನ ಮೇಲ್ನೋಟಕ್ಕೆ ಸಂಪೂರ್ಣವಾಗಿ ವಿಭಿನ್ನ ಪ್ರಕಾರಗಳಾಗಿ ಕಂಡರೂ ಮೂಲಭೂತವಾಗಿ ಎರಡು ರಂಗಗಳ ನಡುವಿನ

೧.ನೇಮಿಚಂದ್ರ; ೨೦೦೧, ಪುಟ-೭೦

ಅಂತರ ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ವಿಜ್ಞಾನ ಪ್ರಶ್ನಿಸುತ್ತದೆ. ಪೂರ್ವಗ್ರಹಗಳನ್ನು ಧಿಕ್ಕರಿಸುತ್ತದೆ. ಸಿದ್ಧಜಾಡಿನ ಚಿಂತನೆಗಳಲ್ಲಿ ಕೊಳೆತರೆ ವಿಜ್ಞಾನ ಮುಂದುವರೆಯಲಾರದು. ಬದುಕಿನ ಸತ್ಯ ಚಿತ್ರವನ್ನು ಕೊಡುವ ಪ್ರಯತ್ನ ಸಾಹಿತ್ಯದ್ದು. ಇವೆರಡೂ ಸತ್ಯದ ಅನ್ವೇಷಣೆಯ ಬೇರೆ ಬೇರೆ ಮಾಧ್ಯಮಗಳು ಎಂದು ಲೇಖಕಿ ವಿವರಸುತ್ತಾರೆ. ವಿಜ್ಞಾನದ ಚರಿತ್ರೆಯನ್ನು ಹೇಳುತ್ತಾ ಲೇಖಕಿ ಕ್ರಿಸ್ತಪೂರ್ವ ೬೦೦ರಿಂದ ೪ನೇ ಶತಮಾನದ ಅರಿಸ್ಟಾಟಲ್ ೧೬೬೧ರ ರಾಬರ್ಟ್ ಬಾಯ್ಲೆ, ೧೭ನೇ ಶತಮಾನದ ನ್ಯೂಟನ್‌ರ ಚರಿತ್ರೆ, ೧೯೦೫ರ ಅಲ್ಬರ್ಟ್ ಐನ್‌ಸ್ಟೈನ್ ಚರಿತ್ರೆ ಹಾಗೂ ಕೊನೆಯಲ್ಲಿ ೧೯೧೨ರ ವಿ.ಹೈಸನ್‌ಬರ್ಗ್ ಚರಿತ್ರೆಯವರೆಗೆ ವಿಸ್ತಾರವಾಗಿ ತಿಳಿಸಿದ್ದಾರೆ. ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವ ಎಂಬ ಅಧ್ಯಾಯದಲ್ಲಿ ವಿಜ್ಞಾನದ ಪ್ರಭಾವಕ್ಕೆ ಒಳಗಾಗಿರುವ ಕೃತಿಗಳನ್ನು ಚರ್ಚಿಸುತ್ತಾ, ವಿಜ್ಞಾನ ಮಾನವನ ಬದುಕಿನ ಗತಿಯನ್ನೇ ಬದಲಿಸಿತು. ಬಹುಮುಖ್ಯವಾಗಿ ರೂಢಿಗತ ಪದ್ಧತಿಗಳನ್ನು ಮೊದಲ ಬಾರಿಗೆ ಪ್ರಶ್ನಿಸಿತು. ಈ ಶತಮಾನದ ಆರಂಭದಲ್ಲೇ ಜಾತೀಯತೆ, ಬಾಲ್ಯವಿವಾಹ ಪದ್ಧತಿಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದ ಕಾದಂಬರಿಗಳು ಹೊರಬಂದವು ಎಂದು ಲೇಖಕಿ ವಿವರಿಸುತ್ತಾರೆ. ವೈಜ್ಞಾನಿಕತೆಗಳು ಎನ್ನುವ ಅಧ್ಯಾಯದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ನೇರವಾಗಿ ಸಂಧಿಸುವುದನ್ನು ವೈಜ್ಞಾನಿಕ ಕತೆಗಳನ್ನು ಉದಾಹರಣೆ ಸಹಿತ ಚರ್ಚಿಸಿದ್ದಾರೆ.

ಬೆಳಕಿನೊಂದು ಕಿರಣ ಮೇರಿ ಕ್ಯೂರಿ:

ಪರಾಡಳಿತದ ಪದತಳದಲ್ಲಿ ತುಳಿದ ಸಣ್ಣ ದೇಶ ಪೋಲೆಂಡಿನಲ್ಲಿ ಜನಿಸಿದ ಈ ಹುಡುಗಿ, ಕಡುಬಡತನದಲ್ಲಿ ದುಡಿದು ಕಲಿತು, ಪ್ರತಿಕೂಲ ಪರಿಸ್ಥಿತಿಗಳನ್ನು ಮೀರಿ ಜಗತ್ ಪ್ರಸಿದ್ಧ ವಿಜ್ಞಾನಿಯಾದದ್ದು, ಭೌತಶಾಸ್ತ್ರ, ರಸಾಯನಶಾಸ್ತ್ರ ಎರಡರಲ್ಲೂ ನೊಬೆಲ್ ಪಾರಿತೋಷಕ ಪಡೆದದ್ದು ಒಂದು ಅದ್ಭುತ ರಮ್ಯ ಕತೆಯಂತೆ ಭಾಸವಾಗುತ್ತದೆ. ವಿಜ್ಞಾನ ಚರಿತ್ರೆಯಲ್ಲೇ ಅತ್ಯಂತ ಕಷ್ಟವಾದ ಅವಿಷ್ಕಾರ 'ರೇಡಿಯಂ' ಮೇರಿ ಕ್ಯೂರಿ, ಆಧುನಿಕ ಅನುಕೂಲತೆಗಳೊಂದು ಇಲ್ಲದೆ, ಆರ್ಥಿಕ ಮುಗ್ಗಟ್ಟಿನಲ್ಲಿ ಮುರುಕಲು ಮರದ ಕೊಟ್ಟಿಗೆಯೊಂದರಲ್ಲಿ 'ರೇಡಿಯಂ' ಕಂಡು ಹಿಡಿದಳು. 'ರೇಡಿಯೋ ಅಕ್ಟಿವಿಟಿ' ಎಂಬ ಹೊಚ್ಚ ಹೊಸ ರಂಗಕ್ಕೆ ಜನ್ಮ ಕೊಟ್ಟಳು. ಮೇರಿ 'ರೇಡಿಯಂ'ನನ್ನು ಪೇಟೆಂಟ್ ಮಾಡದೆ ಮಾನವ ಸೇವೆಗೆ ಮೀಸಲೆಂದು, ತನ್ನ ಸಂಶೋಧನೆಯ ಫಲಿತಾಂಶವನ್ನೆಲ್ಲ ಪ್ರಕಟಿಸಿದ ಆ ಹೊತ್ತು ಅಣುಯುಗದ ಅರುಣೋದಯವಾಯಿತು."

ಬೆಳಕು ತಂದ ಜೀವ : ಡಾ.ಈಡಾ ಸೋಫಿಯಾ ಸ್ಕಡರ್

ಇದು ಪ್ರಸಿದ್ಧ ವೈದ್ಯೆ ಈಡಾ ಸೋಫಿಯಾ ಸ್ಕಡರ್‌ಳ ಜೀವನ ಚರಿತ್ರೆ. "ಊರು ಕೇರಿಗಳಲ್ಲಿ ಹೈಟೆಕ್ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ತೆರೆದು ನಿಂತ ಕಾಲದಲ್ಲೂ, ರೋಗ ಉಲ್ಬಣವಾದಾಗ, ಅಸಾಧ್ಯ ರೋಗ ಬಡಿದಾಗ 'ವೆಲ್ಲೂರು ಆಸ್ಪತ್ರೆ' ರೋಗಿಗಳ ಕಣ್ಣಲ್ಲಿ ಸಂಜೀವಿನಿಯಂತೆ ಹೊಳೆಯುತ್ತವೆ. ಶತಮಾನಕ್ಕೂ ಹಿಂದೆ ಆರಂಭವಾದ ವೆಲ್ಲೂರು ಆಸ್ಪತ್ರೆಯ ಹಿಂದೊಂದು ಅದ್ಭುತ ಕತೆ ಇದೆ. ಒಂದು ನಿಸ್ವಾರ್ಥ ಹೃದಯದ ಜೀವನ ಪ್ರೀತಿಯ ಕತೆ ಅದೇ ಡಾ.ಈಡಾ ಸ್ಕಡರ್‌ಳ ಕತೆ"[೧]

ಈ ಕೃತಿಯು ೧೩ ಅಧ್ಯಾಯಗಳನ್ನು ಒಳಗೊಂಡಿದೆ. ಈ ಅಧ್ಯಾಯಗಳಲ್ಲಿ ಈಡಾಳ ವೈದ್ಯಕೀಯ ಸೇವೆಯ ಆರಂಭ, ಸಾಧನೆ ಹಾದಿಗಳನ್ನು ವಿಸ್ತಾರವಾಗಿ ಲೇಖಕಿ ತಿಳಿಸಿದ್ದಾರೆ. ನಮ್ಮ ನೆಲದಲ್ಲೇ ಹುಟ್ಟಿದ ಈಡಾ ಭಾರತದ ಮಹಿಳೆಯರ ನೋವಿನ ಸ್ಥಿತಿಗೆ ಕರಗಿದವಳು. ಭಾರತದ ಮಹಿಳೆಯರಿಗಾಗಿಯೇ ವೈದ್ಯಳಾಗಿ ಅಮೆರಿಕಾದ ಸರ್ವಸಂಪತ್ತನ್ನು ತೊರೆದು ಭಾರತದಲ್ಲಿ ನೆಲೆಸಿದವಳು.

ಡಿಸೆಂಬರ್ ೯, ೧೮೭೦ರಂದು ಈಡಾ ಜನಿಸಿದಾಗ, ಈ ನೆಲದ ಹೆಣ್ಣುಮಕ್ಕಳ ಭವಿಷ್ಯವನ್ನೇ ಬದಲಿಸುತ್ತಾಳೆ ಎಂದು ಯಾವ ಪ್ರವಾದಿಯೂ ನುಡಿದಿರಲಿಲ್ಲ. ಈ ನೆಲದ ಹೆಣ್ಣು ಮಕ್ಕಳಿಗೆ ವೈದ್ಯರಂಗದ ಬಾಗಿಲು ಬಡಿದು ತೆರೆಸಲಿದ್ದಳು ಈಡಾ ಸೋಫಿಯಾ ಸ್ಕಡರ್. ಸ್ಕಡರ್ ಮನೆತನದ ಅನೇಕ ಪೀಳಿಗೆಗಳಿಗೆ ಮಿಷನರಿ ವೈದ್ಯರಾಗಿ ಜನಸೇವೆಯಲ್ಲಿ ತೊಡಗಿದ ಹಿನ್ನೆಲೆಯಿದೆ. ತಾಯಿಯ ಆರೋಗ್ಯ ಕೆಟ್ಟ ಕಾರಣದಿಂದ ಅಮೇರಿಕಾದಿಂದ ಭಾರತಕ್ಕೆ ಈಡಾ ಹೊರಟಳು. ಆದಾಗಲೇ ಪದವೀಧರಳಾಗಿದ್ದಳು. ವೆಲ್ಲೂರು ಕ್ಯಾಂಪಿನಲ್ಲಿ ನಡೆದ ಮೂರು ಜನ ಮಹಿಳೆಯರ ಸಾವುಗಳು ಈಡಾಳ ಮನಸ್ಸನ್ನು ಬದಲಿಸಿ, ವೈದ್ಯಳಾಗುವಂತೆ ಮಾಡಿದವು. ೧೮೯೪ಳರಲ್ಲಿ ಪುನಃ ಅಮೇರಿಕಾಗೆ ತೆರಳಿ ವೈದ್ಯಕೀಯ ಕಾಲೇಜು ಸೇರಿ, ತನ್ನ ಅಭ್ಯಾಸವನ್ನು ಮುಗಿಸಿದಳು. ೧೯೦೦ರಲ್ಲಿ ಪುನಃ ಭಾರತಕ್ಕೆ (ವೆಲ್ಲೂರು) ಆಗಮಿಸಿ ತನ್ನ ವೃತ್ತಿಯನ್ನು ಆರಂಭಿಸಿದಳು. ಸುತ್ತಮುತ್ತಲ ೫೦,೦೦೦ ಭಾರತೀಯ ಸ್ತ್ರೀಯರ ಸೇವೆಗೆ ನಿಂತಿದ್ದಳು. ಮಹಿಳೆಯರಿಗಾಗಿಯೇ ೧೯೧೬ರಲ್ಲಿ ಹೊಸ ಆಸ್ಪತ್ರೆಗೆ ಹಾಗೂ ಮಹಿಳಾ ಮೆಡಿಕಲ್ ಕಾಲೇಜಿಗಾಗಿ ಈಡಾ ಹೋರಾಡಿದಳು. ಕೊನೆಗೂ ಆಕೆಯ ಪ್ರಯತ್ನ

೧.ನೇಮಿಚಂದ್ರ; ೨೦೧೧, ಪುಟ-೫

ಫಲಿಸಿತು. ನಮ್ಮ ಚರಿತ್ರೆಯ ಪುಟಗಳಲ್ಲಿ ಎಲ್ಲೋ ಕಳೆದುಹೋದ ಅದ್ಭುತ ಮಾನವತಾವಾದಿ ಮಹಿಳೆ ಈಡಾಳ ಬದುಕನ್ನು, ಲೇಖಕಿ ನೇಮಿಚಂದ್ರರು ದಾಖಲಿಸುವ ಮೂಲಕ ಆಕೆಗೊಂದು ಕೃತಜ್ಞತೆ ತೋರಿದ್ದಾರೆ. ಎಲ್ಲಾ ಸ್ತ್ರೀಯರ ವೈದ್ಯಕೀಯ ಅಧ್ಯಯನದ ಹಿಂದೆ ಈಡಾಳ ಸಾಧನೆಯು ಗುರುತು ಮಾಸದೆ ಉಳಿದಿದೆ. ಇದನ್ನು ಲೇಖಕಿ ನೇಮಿಚಂದ್ರ ಅರ್ಥಪೂರ್ಣವಾಗಿ ದಾಖಲಿಸಿದ್ದಾರೆ.

ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು :

ಸಂಶೋಧನೆಗಳನ್ನು ಕೈಗೊಂಡ ನೊಬೆಲ್ ಪಾರಿತೋಷಕಗಳನ್ನು ಗಳಿಸಿದ ಮಹಿಳಾ ವಿಜ್ಞಾನಿಗಳ ಬದುಕಿನ ಸಾಧನೆಗಳನ್ನು ಲೇಖಕಿ ನೇಮಿಚಂದ್ರ ಇಲ್ಲಿ ದಾಖಲಿಸಿದ್ದಾರೆ.

ಮೇರಿಕ್ಯೂರಿ (೧೯೦೨, ೧೯೧೧ರಲ್ಲಿ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ)

ಐರೀನ್ ಜೋಲಿಯೋ ಕ್ಯೂರಿ (೧೯೩೫-ರಸಾಯನಶಾಸ್ತ್ರ)

ಗರ್ಟಿ ತೆರೇಸಾ ಕೋರಿ (೧೯೪೭ – ವೈದ್ಯಶಾಸ್ತ್ರ)

ಮರಿಯಾ ಗೋಪರ್ಟ್ ಮೇಯರ್ (೧೯೬೩ – ಭೌತಶಾಸ್ತ್ರ)

ಡರೋತಿ ಕ್ರೊಪುಟ್ ಹಾಜ್ಕಿನ್ (೧೯೭೭– ವೈದ್ಯಶಾಸ್ತ್ರ)

ಮ್ಯಾಕ್ ಕ್ಲಿಂಟ್‌ಕ್ ಬಾರ್ಬರ (೧೯೮೩ – ವೈದ್ಯಶಾಸ್ತ್ರ)

ರೀಟಾ ಲೆವಿ ಮಾಂಟಾಲ್ಜಿನಿ (೧೯೮೬ – ವೈದ್ಯಶಾಸ್ತ್ರ)

ಗರಟ್ರೂಡ್ ಬಿ ಇಲಿಯನ್ (೧೯೮೮ – ವೈದ್ಯಶಾಸ್ತ್ರ)

ಕ್ರಿಸ್ಟೀನ್ ನುಸ್‌ಲಾಯ್ನ್ ವೋಲ್ ಹಾರ್ಡ್ (೧೯೯೫ – ವೈದ್ಯಶಾಸ್ತ್ರ)

ಈ ಹತ್ತು ಮಹಿಳಾ ವಿಜ್ಞಾನಿಗಳು ಮನೆ, ಮಕ್ಕಳು, ಸಂಸಾರದ ಜವಾಬ್ದಾರಿಗಳ ಜೊತೆಗೆ ತಮ್ಮ ಇಷ್ಟವುಳ್ಳ ಕ್ಷೇತ್ರದಲ್ಲಿ ಸಾಧನೆ ಮಾಡಿ ಕೀರ್ತಿಯನ್ನು ಗಳಿಸಿದರು. ಇವರು ಆಯ್ಕೆ ಮಾಡಿದ ಪುರುಷ ಸಂಗಾತಿಗಳೂ ಕೂಡಾ ಪತ್ನಿಯರ ಪ್ರತಿಭೆಯನ್ನು ಪೋಷಿಸಿ ಸಹಕಾರ ನೀಡಿದವರು. ಈ ತೆರನಾದ ವಿವಿಧ ವಿಜ್ಞಾನಿಗಳ ಸಾಧನೆಯನ್ನು ಗುರುತಿಸಬಹುದಾಗಿದೆ. ಇಂಥ ಅಸಾಧಾರಣ ಸಾಧನೆಗೈದ ಮಹಿಳೆಯರನ್ನು ಪರಿಚಯಿಸಿದ ಲೇಖಕಿ ನೇಮಿಚಂದ್ರ ಅಭಿನಂದನಾರ್ಹರು.

ನೇಮಿಚಂದ್ರರ ಬಹುಪಾಲು ಕತೆಗಳ ಲಕ್ಷಣವೆಂದರೆ ಅನಿರೀಕ್ಷಿತ ಎಂಬಂತೆ ಇವರ ಕತೆಗಳ ನಾಯಕಿಯರಿಗೆ ಬದುಕು ಆಘಾತಗಳ ಮೂಲಕ ಸವಾಲನ್ನು ಒಡ್ಡುತ್ತದೆ. ಡೈವೋರ್ಸ್, ಸಾವು ಎಂದು ಮೊದಲು ಕಂಗಾಲಾಗಿ ನಂತರ ತಮ್ಮ ಆತ್ಮಬಲದಿಂದಲೇ ಚೇತರಿಸಿಕೊಂಡು ಈ ಮಹಿಳೆಯರು ಹೊಸ ಜೀವನದ ಕಡೆಗೆ ನಡೆಯುತ್ತಾರೆ. ಅನುಪಮಾ ನಿರಂಜನ ಅವರ ಪೌರಾಣಿಕ ಕಾದಂಬರಿಯ ಮಾಧವಿ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಿಂದ ಸೃಷ್ಟಿಯಾಗಿರುವ ಈ ಕೃತಿಯಲ್ಲಿ ಪ್ರಾಚೀನ ಭಾರತದಲ್ಲಿ ಪುರುಷ ಪ್ರಧಾನ ಸಂಸ್ಕೃತಿ ಮತ್ತು ಅಂದಿನ ವ್ಯವಸ್ಥೆಯಲ್ಲಿ ನಡೆಯುತ್ತಿದ್ದ ಸ್ತ್ರೀಶೋಷಣೆಯನ್ನು ಶೋಧಿಸಲಾಗಿದೆ. ಹಾಗೂ ಸಮಾಜ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ. ಸ್ತ್ರೀಶೋಷಣೆಯ ಪ್ರತೀಕಗಳಾಗಿರುವ ಸೀತೆ, ದ್ರೌಪದಿ, ಅಹಲ್ಯೆಯರಿಗಿಂತ ಹೆಚ್ಚು ಶೋಷಿತಳಾಗಿರುವ ಮಾಧವಿಯನ್ನು ಕುರಿತು ಅನುಪಮಾ ನಿರಂಜನ ಅವರು ಚರ್ಚೆಗೆ ತೊಡಗಿರುವುದು ಪ್ರಸ್ತುತ ಸಂದರ್ಭದಲ್ಲಿ ಅರ್ಥಪೂರ್ಣವಾಗಿದೆ.

ನೇಮಿಚಂದ್ರರ ಕಥೆಗಳಲ್ಲಿನ ಚಿಂತನೆಯ ಪ್ರಧಾನ ನೆಲೆಗಳು : –

ಮಹಿಳಾ ಸಾಹಿತ್ಯ ಪುರುಷ ಪ್ರಧಾನ ವ್ಯವಸ್ಥೆಯೊಂದಿಗೆ ರಾಜಿಯಾಗದೆ ಮೌಲ್ಯಗಳು ಸಂಪೂರ್ಣ ಬದಲಾವಣೆಯನ್ನು ಬಯಸುತ್ತದೆ. ಪ್ರಗತಿಪರ ಮಹಿಳಾ ಸಂಘಟನೆಗಳ ಹೋರಾಟ, ಸ್ತ್ರೀವಾದಿ ನಿಲುವುಗಳು ವಚನಗಾರ್ತಿಯರ ವೈಚಾರಿಕತೆ ಮೊದಲಾದ ಆಶಯ, ಪ್ರೇರಣೆ ಪ್ರಭಾವಕ್ಕೆ ಒಳಗಾದವು. ಆಗಾಗಿ ಇಂದಿನ ಮಹಿಳಾ ಸಾಹಿತ್ಯ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನ ಅನೇಕ ಸಮಸ್ಯೆಗಳಿಗೆ ಸ್ಪಂದಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ನೇಮಿಚಂದ್ರರ ಕಥೆಗಳಲ್ಲಿ ಅಭಿವ್ಯಕ್ತವಾಗುವ ಚಿಂತನೆಯನ್ನು ಗುರುತಿಸಬಹುದಾಗಿದೆ.

- ಮಾನಸಿಕ ತಳಮಳ
- ತಾಯ್ತನದ ಸಮಸ್ಯೆ
- ಮಧ್ಯಮ ವರ್ಗದ ಸ್ತ್ರೀಯರ ಗೊಂದಲ
- ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷ
- ಕೌಟುಂಬಿಕ ಸಮಸ್ಯೆ

ಪ್ರತಿಷ್ಠಾನ ನಗರದ ರಾಜ ಯಯಾತಿಯ ಮಗಳಾದ ಮಾಧವಿ ಅಪೂರ್ವ ಸುಂದರಿ. ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡವಳು. ತಾರುಣ್ಯಕ್ಕೆ ಬಂದಾಗ ವಿಶ್ವಾಮಿತ್ರನ ಶಿಷ್ಯ ಗಾಲವ ತನ್ನ ಗುರುವಿಗೆ ಗುರುದಕ್ಷಿಣೆ ಸಲ್ಲಿಸಲು ದಾನ ಕೇಳಲೆಂದು ಯಯಾತಿಯ ಬಳಿ ಬಂದು, ಮೈಯೆಲ್ಲಾ ಬಿಳಿ, ಒಂದು ಕಿವಿ ಮಾತ್ರ ಕಪ್ಪಗೆ ಇರುವ ಎಂಟು ನೂರು ಅಶ್ವಗಳನ್ನು ಕೇಳುತ್ತಾನೆ. ಯಯಾತಿಯ ಬಳಿ ಅಂಥ ಕುದುರೆಗಳು ಇಲ್ಲದ ಕಾರಣ ಮಾಧವಿಯನ್ನೇ ದಾನ ಮಾಡುತ್ತಾನೆ. ಆತ ಮಾಧವಿಯನ್ನು ಅಯೋಧ್ಯೆಯ ರಾಜ ಹರ್ಯಾಶ್ವ, ಕುಶೀನಗರದ ರಾಜ ದಿವೋದಾಸ ಹಾಗೂ ಕೌಸಲ ದೇಶದ ದೊರೆ ಉಶಿನರ ಇವರ ಬಳಿ ತಲಾ ಒಂದೊಂದು ವರ್ಷ ಬಿಟ್ಟು, ಅವರಿಂದ ಇನ್ನೂರು ಕುದುರೆಗಳಂತೆ ಆರು ನೂರು ಕುದುರೆಗಳನ್ನು ಪಡೆಯುತ್ತಾನೆ. ಉಳಿದ ಇನ್ನೂರು ಕುದುರೆಗಳ ಬದಲಿಗೆ ವಿಶ್ವಾಮಿತ್ರನ ಬಳಿ ಮಾಧವಿಯನ್ನು ಒಂದು ವರ್ಷ ಬಿಟ್ಟು ಗುರುದಕ್ಷಿಣೆ ಸಲ್ಲಿಸಿದಂತೆ ತೃಪ್ತನಾಗುತ್ತಾನೆ. ಮಾಧವಿ ನಂತರ ಯಾವ ರಾಜನನ್ನು ವರಿಸದೆ ಕಾಡಿಗೆ ಹೊರಟು ಹೋಗುತ್ತಾಳೆ. ಲೇಖಕಿ ಹಳೆಯ ಕಥೆಯನ್ನು ಆಧುನಿಕ ಸ್ತ್ರೀವಾದಿ ದೃಷ್ಟಿಕೋನದಿಂದ ಪುನರ್ ರಚಿಸಿದ್ದಾರೆ. ಮಾಧವಿ ಕೇಳುವ ಪ್ರಶ್ನೆಗಳು ಆಧುನಿಕ ಸ್ತ್ರೀವಾದಿ ಆಲೋಚನೆಯುಳ್ಳ ಪ್ರಶ್ನೆಗಳಾಗಿವೆ. ಹೃದಯ ಹೀನರ ನಡುವೆ ಬದುಕುವುದಕ್ಕಿಂತ ಕಾಡಿನ ಮಧ್ಯೆ ಸ್ವತಂತ್ರವಾಗಿ ಇರುವುದೇ ಲೇಸು ಎಂದು ಹೊರಡುತ್ತಾಳೆ. ಭಾರತದಲ್ಲಿ ಸ್ತ್ರೀದಾಸ್ಯದ ವಿರುದ್ಧ ಮೊದಲು ಬಂಡೆದ್ದವಳು ಮಾಧವಿ. ಅದು ತಣ್ಣನೆಯ ಬಂಡಾಯವಾಗಿದೆ.

ಮಾನಸಿಕವಾಗಿ ತೊಳಲಾಟಕ್ಕೆ ಒಳಗಾಗುವ ಸ್ತ್ರೀಪಾತ್ರಗಳನ್ನು ನಿರ್ವಹಿಸುವಲ್ಲಿ ನೇಮಿಚಂದ್ರ ಯಶಸ್ವಿಯಾಗಿದ್ದಾರೆ. "ನೆನಪುಗಳು ನೋಯಲಿಲ್ಲ" ಈ ಕತೆಯ ಸಾವಿತ್ರಿಯ ಪಾತ್ರವೂ ಸಹ ಮನೋವೇದನೆಯನ್ನು ಅನುಭವಿಸುತ್ತದೆ. ರವಿಯನ್ನು ಬಾಳಿನ ಸಂಗಾತಿಯನ್ನಾಗಿ ಪಡೆದು ಅವಳು ಬಾಳಿನ ಉದ್ದಕ್ಕೂ ಮಾನಸಿಕ ಗೊಂದಲಕ್ಕೆ ಒಳಗಾದುದನ್ನು ಈ ಕತೆಯು ಚಿತ್ರಿಸುತ್ತದೆ. ಬೆಟ್ಟದ ತುದಿಯಿಂದ ಜಾರುತ್ತಿದ್ದ ತನ್ನನ್ನು ರಕ್ಷಿಸಲಿಲ್ಲ ಎಂಬ ಆಕ್ರೋಶ ಗಂಡನ ಮೇಲೆ, ರಕ್ಷಿಸಿದ ರವಿ ಈ ಪ್ರಕರಣ ಅವಳ ಮನಸ್ಥಿತಿಯನ್ನು ಬದಲಾಯಿಸುತ್ತದೆ. ಮಗಳು ಶ್ಯಾಮೋನಿ ತಾಯಿಯ ಮಾನಸಿಕ ಗೊಂದಲ ನಿವಾರಿಸಲು ಈ ಮಾತುಗಳನ್ನಾಡುತ್ತಾಳೆ. "ಅಮ್ಮ ನಮ್ಮ ಆಕ್ರೋಶ ಇತರರನ್ನು ನೋಯಿಸುವುದಕ್ಕಿಂತಾ ಹೆಚ್ಚು ನಮ್ಮನ್ನು ನೋಯಿಸುತ್ತದೆ. ನಮ್ಮೊಳಗಿನ ಅಗ್ನಿಪರ್ವತ ನಮ್ಮೊಡಲನ್ನೇ ಮೊದಲು ಸುಡುತ್ತದೆ". ಹಾಗೆಯೇ ಮುಂದುವರೆದು "ಪ್ರೀತಿಯನ್ನು ಸಾವು-ಬದುಕಿನಲ್ಲಿ ತೂಗಲಾದೀತೆ, ಅಮ್ಮ ಸಾವಿನ ಆ ಕ್ಷಣದಲ್ಲಿ ಮನುಷ್ಯ ಏನಾಗುತ್ತಾನೆ ಎಂದು ಊಹಿಸಬಹುದು, ಕಲ್ಪಿಸಬಹುದು. ಆದರೆ ಕಲ್ಪಿಸಿದ್ದೆಲ್ಲವೂ ಕಲ್ಪನೆಯೇ, ಸಾವು ಎದುರು ನಿಂತ ಆ ಕ್ಷಣ ನಮ್ಮೊಳಗೆ

ನಾವಿರುವೆವೆ ಬಲ್ಲವರಾರು? ಯಾರಿಗೂ ಗೊತ್ತಿಲ್ಲದ ಅಪರಿಚಿತರ ಜೀವ ಉಳಿಸಲು ತಾವು ಹಾರಿ ಪ್ರಾಣ ಬಿಟ್ಟವರಿದ್ದಾರೆ. ಆದರೆ ಒಂದೇ ಮಾನದಂಡದಲ್ಲಿ ಮಾನವ ಸಂಬಂಧಗಳನ್ನೆಲ್ಲ ಅಳೆಯಲು ಸಾಧ್ಯವೇ?"[೧] ಹೀಗೆ ಮಗಳ ನೀತಿ ಮಾತುಗಳಿಂದ ಸಾವಿತಿರಿಯ ಮಾನಸಿಕ ಗೊಂದಲ ದೂರವಾಗಿ ಎದೆಯ ಭಾರ ಇಳಿದಿತ್ತು, ನೆತ್ತಿಯ ಬಿಸಿ ತಗ್ಗಿತ್ತು.

ಹೀಗೆ ಮಾನಸಿಕ ತೊಳಲಾಟಕ್ಕ ಒಳಗಾದವರನ್ನು ಬದುಕಿನ ಮಹತ್ವಾಕಾಂಕ್ಷೆಯೆಡೆಗೆ ತರಲು ಲೇಖಕಿ ಪೂರಕ ಪಾತ್ರಗಳನ್ನು ಸೃಷ್ಟಿಸುತ್ತಾರೆ. ಈ ಕತೆಯಲ್ಲಿ ಮಾನಸಿಕ ಒಳತೋಟಿಯ ಅಂಶಗಳನ್ನು ಗುರುತಿಸಬಹುದು.

'ಏನೊಂದೂ ಆಗದವರು' ಕತೆಯ ಶಶಿ ಮಹತ್ವಾಕಾಂಕ್ಷೆಯ ಹೆಣ್ಣುಮಗಳು. ದೂರದ ಸಂಬಂಧಿ ರವಿ. ನಾಳೆ ಶಶಿಯ ಗಂಡನಾಗುವವನು. ಕಲಿಕೆಯ ಹಂತದಲ್ಲಿ ಶಶಿಗೆ ರವಿ ಆದರ್ಶವಾಗಿ ಕಂಡಿದ್ದ. ಆದರೆ ಕಲಿಕೆಯ ಹಂತಗಳನ್ನು ಏರುತ್ತಿದ್ದಂತೆ ರವಿ ಒಂದೊಂದೇ ಮೆಟ್ಟಿಲಲ್ಲೂ ನಪಾಸಾಗುತ್ತ ಇಳಿದ. ಆಗ ಅವರಲ್ಲಿ ತಾರತಮ್ಯದ ಅಂತರ ಹೆಚ್ಚಾಯಿತು. ಈಗ ಇರುವ ಸ್ಥಿತಿಗಿಂತ ಮೇಲು ಹಂತಕ್ಕೆ ಏರಬೇಕೆನ್ನುವುದು ಶಶಿಯ ಬದುಕಿನ ಆಕಾಂಕ್ಷೆ, ಆದರೆ ರವಿಯ ನಿರ್ಲಿಪ್ತ ಸ್ಥಿತಿ, ಉದಾಸೀನತೆಯನ್ನು ಶಶಿ ಸಹಿಸುವುದಿಲ್ಲ. ಗಂಡು ತನಗಿಂತ ಎಲ್ಲಾ ವಿಷಯದಲ್ಲೂ ಮೇಲಿರಬೇಕು ಎಂಬ ಹೆಣ್ಣಿನ ಸಹಜ ಆಕಾಂಕ್ಷೆಯನ್ನು ಶಶಿ ಇಟ್ಟುಕೊಂಡಿದ್ದಾಳೆ. ಆದರೆ ರವಿ ಬದುಕನ್ನು ಆರಾಮವಾಗಿ ಕಳೆಯಬೇಕೆನ್ನುವ ಮನೋಭಾವ ಹೊಂದಿದವನೆಂದು ಅವನದೇ ಮಾತುಗಳಿಂದ ಸ್ಪಷ್ಟವಾಗುತ್ತದೆ.

'ಶಶಿ ಸ್ವಂತ ಏನೇನೋ ಮಾಡೋದು, ಕೈ ಸುಟ್ಟುಕೊಳ್ಳೋದು ಏಕೆ? ಅಷ್ಟು ಹಣ ನಿಜಕ್ಕೂ ನಮಗೆ ಬೇಕಾ? ಮನೆ ಇದೆ, ನಮ್ಮಿಬ್ಬರ ಸಂಬಳದಲ್ಲಿ ನೆಮ್ಮದಿಯ ಬದುಕಿದೆ, ಇಲ್ಲದ ಗೊಡವೆ ಏಕೆ"[೨] ಶಶಿ ಜೀವನದ ಬಗೆಗೆ ವಿಶೇಷ ನಿರೀಕ್ಷೆಗಳನ್ನು ಬಯಸಿದವಳು. ಓದು, ಕೆಲಸ, ಸಾಧನೆ ಎಲ್ಲವನ್ನು ಬಿಟ್ಟು ಬೆತ್ತಲಾಗಿ ಪ್ರೀತಿಸುವುದು ಅವಳಿಗೆ ಅಸಾಧ್ಯವಾದುದು. ಇಂಜಿನಿಯರಿಂಗ್‌ನಲ್ಲಿ ಪ್ರಥಮ ರ‍್ಯಾಂಕ್ ಗಳಿಸಿದ ಶಶಿ ಹೆಚ್ಚಿನ ಓದಿಗೆ ಜರ್ಮನಿಗೆ ಹೊರಡಲು ಅನುವಾಗುತ್ತಾಳೆ. ರವಿಯನ್ನು ಅವನ ಪ್ರೀತಿಯನ್ನು ತೊರೆದು ಜರ್ಮನಿಗೆ ಹೋಗಲು ನಿರ್ಧಾರ ಕೈಗೊಳ್ಳುವಾಗ ಪ್ರಬಲವಾದ ಮಾನಸಿಕ ಗೊಂದಲಕ್ಕೆ ಈಡಾಗುತ್ತಾಳೆ. ಏನೊಂದು ಆಗದ ಗಂಡಂದಿರ

೧.ನೇಮಿಚಂದ್ರ; ನೆನಪುಗಳು ನೋಯಲಿಲ್ಲ, ಪುಟ-೧೭೬

೨.ನೇಮಿಚಂದ್ರ; ಏನೊಂದು ಆಗದವರು, ಪುಟ-೨೯೦

ಹೆಂಡತಿಯರನ್ನು ಶಶಿ ವಿರೋಧಿಸುತ್ತಾಳೆ. ತಂದೆ, ತಾಯಿ, ಪ್ರೀತಿ, ಗೆಳೆಯನ ಪ್ರೇಮ ಎಲ್ಲವನ್ನು ನಿರಾಕರಿಸಿ ಬದುಕಿನ ಸಾಧನೆಗೆ ಜರ್ಮನಿಗೆ ತೆರಳುವುದು ಕತೆಯಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ.

ಸಾಂಪ್ರದಾಯಿಕ ವಿವಾಹ ಸಂಬಂಧ ಮತ್ತು ಪತಿನಿಷ್ಠೆ ಎಂಬ ನಿಯಮಗಳನ್ನು ಉಲ್ಲಂಘಿಸುವ ಪ್ರವೃತಿ ನೇಮಿಚಂದ್ರ ಅವರ "ಸಂಜೆಗಳು ಎಷ್ಟು ಸುಂದರ" ಕತೆಯ ಮೇಘಳಲ್ಲಿ ಕಾಣಬಹುದು. ಕಾವ್ಯ ತನ್ನ ಗಂಡನ ಸ್ನೇಹಿತನೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಳ್ಳುವುದಲ್ಲದೆ, ಅವನೊಂದಿಗೆ ಹೊರಟು ಹೋಗುತ್ತಾಳೆ. ಹೆಣ್ಣು ತನಗೆ ಬೇಕೆನಿಸಿದ ಸಂಬಂಧದೊಡನೆ ಬಾಳುವ ಸ್ವಾತಂತ್ರ್ಯವನ್ನು ಪಾತ್ರಕ್ಕೆ ಒದಗಿಸಿದ್ದಾರೆ. ಇನ್ನೊಬ್ಬ ಗಂಡಸಿನೊಂದಿಗಿದ್ದಾಗಲೂ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳಲು ಸಿದ್ಧಳಿಲ್ಲ. ಪತಿಯ ವಿನಹ ಪರ ಪುರುಷನನ್ನು ಕಣ್ಣೆತ್ತಿ ನೋಡುವುದು ಅಪರಾಧ ಎನ್ನುವ ವಾದವನ್ನು ಲೇಖಕರು ಅಲ್ಲಗಳೆದಿದ್ದಾರೆ. ಮೇಘಾ ತಾನು ಬಯಸುವ ಸ್ಥಿತಿಯನ್ನು ತನ್ನದಾಗಿಸಿಕೊಳ್ಳಲು ಕಲಾವಿದ ವರ್ಣನ ಕಡೆಗೆ ಸರಿಯುತ್ತಿರುವ ಕ್ರಿಯೆಯಲ್ಲಿ ಮಗ್ನಳಾಗುತ್ತಾಳೆ. ಈ ರೀತಿಯಾದ ಸರಿಯುವ ನೆಲೆಯನ್ನು ಲೇಖಕಿಯು ಯಾವುದೇ ರೀತಿಯ ತುಮುಲಗಳಿಲ್ಲದೇ ವಿಶ್ಲೇಷಿಸಿದ್ದಾರೆ. ಗಂಡ ಮಾನಸಿಕವಾಗಿ, ದೈಹಿಕವಾಗಿಯೂ ಸರಿ ಹೊಂದದಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಹೆಣ್ಣು ಕೈಗೊಳ್ಳಬೇಕಾದ ನಿರ್ಧಾರವನ್ನು ಲೇಖಕಿ ನಿರ್ಭಯವಾಗಿ ಚಿತ್ರಿಸಿದ್ದಾರೆ.

ಲೇಖಕಿಯ "ತ್ರಿಕೋನದಾಚೆಗೆ" ಎಂಬ ಕಥೆಯಲ್ಲಿಯೂ ಪುರುಷನ ಶೋಷಕ ಪ್ರವೃತ್ತಿಯನ್ನು ಎತ್ತಿ ತೋರಿಸಲಾಗಿದೆ. ಇಲ್ಲಿನ ಮೂರು ಪಾತ್ರಗಳಲ್ಲಿ ಎರಡು ಸ್ತ್ರೀಪಾತ್ರಗಳು ಮತ್ತು ಒಂದು ಪುರುಷ ಪಾತ್ರವಿದ್ದು, ಈ ಪುರುಷ ಪಾತ್ರ ಎರಡು ಸ್ತ್ರೀಪಾತ್ರಗಳ ಪಾಲಿಗೆ ಶೋಷಿತನಾಗಿದ್ದಾನೆ. ತುಷಾರ್ ಎಂಬ ನಲವತ್ತೈದರ ವಿವಾಹಿತ ವ್ಯಕ್ತಿ ಯೌವ್ವನದ ಹೆಣ್ಣುಗಳೊಡನೆ ಚಕ್ಕಂದವಾಡಬೇಕೆಂಬ ಆಸೆವುಳ್ಳವನು. ಇವನಿಗೆ ಹೆಂಡತಿ ಮಕ್ಕಳಿದ್ದೂ, ಇಪ್ಪತ್ತೈದರ ಹರೆಯದ ವರ್ಷಾಳನ್ನು ಪರಿಚಯ ಮಾಡಿಕೊಂಡು ಅವಳೊಂದಿಗೆ ಪ್ರೀತಿ-ಪ್ರೇಮದ ನಾಟಕವಾಡುತ್ತಾನೆ. ತನ್ನ ಹೆಂಡತಿಗೆ ವಿಚ್ಛೇದನ ನೀಡಲು ಮುಂದಾಗುತ್ತಾನೆ. ಅವನ ಅವನಲ್ಲಿನ ಗಂಭೀರ ಅನಿಸುವ ವಿಚಾರಗಳು ಕೇವಲ ಇಚ್ಛಿಸಿದ ಹೆಣ್ಣನ್ನು ಮರುಳು ಮಾಡುವಷ್ಟಕ್ಕೆ ಸೀಮಿತವಾಗುತ್ತವೆ ಎಂಬುದನ್ನು ವರ್ಷಾ ಕಂಡುಕೊಳ್ಳುತ್ತಾಳೆ. ಇಲ್ಲಿ ಸ್ತ್ರೀಯರಿಗೆ ಅನ್ಯಾಯವಾಗುತ್ತಿದೆ ಎಂಬುದು ಸತ್ಯ. ಆದರೆ ಹಾಗಾಗಲು ಸ್ತ್ರೀಯರು ಕಾರಣ ಎಂಬುದನ್ನು ಲೇಖಕಿ ಮರೆತಿಲ್ಲ. ಈ ಕಥೆಯಲ್ಲಿ ಮಧ್ಯ ವಯಸ್ಕನಾದ ತುಷಾರ್‌ನನ್ನು ಪ್ರೀತಿಸುವ ವರ್ಷಾ ಅವಿದ್ಯಾವಂತಳಲ್ಲ. ಇಂಜಿನಿಯರ್ ಆಗಿದ್ದು

ಪ್ರತಿಷ್ಠಿತ ಸಂಸ್ಥೆಯೊಂದರ ನೌಕರಳು. ನೇಮಿಚಂದ್ರರು ಲೀಲಾಳ ಪಾತ್ರಕ್ಕೆ ಸ್ಥಿರತೆಯನ್ನು ನೀಡಿದ್ದಾರೆ. ಹಾಗೂ ಗಟ್ಟಿಯಾಗುವ ಪ್ರಕ್ರಿಯೆ ಕಾಣಬಹುದು.

ಸುಶಿಕ್ಷಿತ ಮಹಿಳೆ ಪುರುಷರ ಲಂಪಟತನಕ್ಕೆ ಅಷ್ಟು ಸುಲಭವಾಗಿ ಬಲಿಯಾಗುತ್ತಾಳೆಂದರೆ ಅದರಲ್ಲಿ ಅವರ ಸ್ವಾರ್ಥವಿದೆ ಎಂಬುದು ತಿಳಿಯುತ್ತದೆ. ನೇಮಿಚಂದ್ರ ಈ ಸತ್ಯ ತಿಳಿದಿರುವುದರಿಂದಲೇ ತುಷಾರನ ಪತ್ನಿ ಲೀಲಾಳ ಬಾಯಲ್ಲಿ "ಗಂಡಸನ್ನು ದೂಷಿಸಿ ಏನು ಪ್ರಯೋಜನ, ಸ್ವತಃ ಗಂಡು ಹೆಣ್ಣನನ್ನು ಶೋಷಿಸಲು ಅವಕಾಶ ಮಾಡಿಕೊಡೋ ನಿಮ್ಮಂಥ ಹೆಣ್ಣುಗಳಿರುವಾಗ ಶೋಷಣೆಗೆಲ್ಲಿ ಅಂತ್ಯ?"[೧] ಎಂದು ಹೇಳಿಸಿದ್ದಾರೆ. ಮನೆಗೆ ಬಂದ ವರ್ಷಾಳಿಗೂ ಸಹ ಗಂಡನ ಅಭಿಲಾಷೆಗಳ ಕುರಿತು ಸ್ಪಷ್ಟ ಪರಿಚಯ ಮಾಡುತ್ತಾಳೆ. ಅವಳ ತಪ್ಪಿನ ಅರಿವು ಅವಳಿಗೆ ಮನದಟ್ಟಾಗುವಂತೆ ಮಾಡಿದಾಗ, ವರ್ಷಾ ತುಷಾರನನ್ನು ದೂರ ಮಾಡುತ್ತಾಳೆ. ಇದು ಪುರುಷರ ಶೋಷಣೆಯ ವಿರುದ್ಧ ಸ್ತ್ರೀಯರಲ್ಲಿ ಉಂಟಾಗುತ್ತಿರುವ ಜಾಗೃತಿಯನ್ನು ಸಂಕೇತಿಸುತ್ತದೆ.

ಅನಾರೋಗ್ಯದಿಂದ ನರಳುತ್ತಿರುವ ಶಶಿ, ಮಾನಸಿಕವಾಗಿಯೂ ಕಾಯಿಲೆಗೆ ಗುರಿಯಾಗುತ್ತಾಳೆ. ಗಂಡ ತೋರಿಸುತ್ತಿದ್ದ ಪ್ರೀತಿ ಈಗ ಇಲ್ಲವಾಗಿದೆ ಎಂದು ಅನಾವಶ್ಯಕ ಅನುಮಾನ, ಗೊಂದಲಗಳಿಗೆ ಒಳಗಾಗುವುದನ್ನು "ಬದುಕು ನಿನ್ನಲ್ಲೆಂಥ ಮುನಿಸು" ಕತೆಯೂ ತಿಳಿಸುತ್ತದೆ. ಗಂಡನನ್ನು ಪ್ರತಿ ಹಂತದಲ್ಲಿಯೂ ಅನುಮಾನಿಸುತ್ತಾಳೆ. ತನಗೆ ಕ್ಯಾನ್ಸರ್ ಬಂದಿದೆ, ಇನ್ನು ತನಗೆ ಬದುಕುವ ಹಕ್ಕಿಲ್ಲವೆಂದು ನಿಸ್ತೇಜಕವಾಗಿ ಹಲುಬುತ್ತಾಳೆ. ಪತ್ರಕರ್ತೆಯಾದ ರೇಖಾಳ ಸಲಹೆ ಸೂಚನೆಯ ಮೇರೆಗೆ ಅವಳು ಪತ್ರಿಕೆಗೆ ಲೇಖನವೊಂದನ್ನು ಬರೆದು ಕೊಡುತ್ತಾಳೆ. ಆ ಲೇಖನ ಪ್ರಕಟಗೊಂಡಾಗ ಅವಳಲ್ಲಿ ಬಾಳಿನ ಬಗ್ಗೆ ಉತ್ಸಾಹ ಮೂಡುತ್ತದೆ. ಆಗಷ್ಟೇ ಪತ್ರಿಕೆಯಿಂದ ಬಂದ ನೂರೈವತ್ತು ರೂಪಾಯಿಗಳ ಚೆಕ್ಕು ಅವಳಲ್ಲಿ ಆತ್ಮವಿಶ್ವಾಸ ತುಂಬಿತ್ತು. ರಮೇಶನನ್ನು ಅವನ ಹತ್ತನೆರಡು ಗಂಟೆಗಳ ದುಡಿಮೆಯಿಂದ ಪಾರು ಮಾಡಬಲ್ಲೆನೆಂಬ ಆತ್ಮವಿಶ್ವಾಸ, ಸಾವಿಗೆ ಬೆನ್ನಿಕ್ಕಿ ಬದುಕಿನತ್ತ ಮುಖ ಮಾಡಬಲ್ಲ ಆತ್ಮವಿಶ್ವಾಸ ಶಶಿಯಲ್ಲಿ ಮೂಡುತ್ತದೆ.

೧.ನೇಮಿಚಂದ್ರ; ತ್ರಿಕೋನಾದಾಚೆಗೆ, ಪುಟ-೩೫೨

ತಾಯ್ತನದ ಸಮಸ್ಯೆ :

ತಾಯ್ತನದ ಸಮಸ್ಯೆ ಸ್ತ್ರೀ ಪ್ರಜ್ಞೆಯನ್ನು ಆಳವಾಗಿ ಪ್ರಭಾವಿಸುವ ಸಮಸ್ಯೆಗಳಲೊಂದು ಈ ಸಮಸ್ಯೆಗೆ ಬೌದ್ಧಿಕ, ಭಾವುಕ, ಸಾಮಾಜಿಕ ಹೀಗೆ ಹಲವಾರು ಆಯಾಮಗಳಿರುವುದರಿಂದ ಅದಕ್ಕೆ ಪರಿಹಾರಗಳಿಲ್ಲ. ಈ ಸಮಸ್ಯೆಯನ್ನು ಕೇಂದ್ರವಾಗಿಟ್ಟುಕೊಂಡು ನೇಮಿಚಂದ್ರರು "ಹೊಸ ಹುಟ್ಟು" ಕತೆಯನ್ನು ಬರೆದಿದ್ದಾರೆ. ಮಗುವೊಂದಕ್ಕೆ ಜನ್ಮ ನೀಡುವ ಹೆಣ್ಣಿನ ಪ್ರಕೃತಿದತ್ತವೆನಿಸಿರುವ ಜೈವಿಕ ಸೃಷ್ಟಿಶೀಲತೆ ಮತ್ತು ಆಕೆಯ ವ್ಯಕ್ತಿತ್ವದ ಮೂಲವಾದ ಕಲಾಸೃಷ್ಟಿ ಇವುಗಳಲ್ಲಿ ಯಾವುದು ಹೆಣ್ಣಿನ ಬದುಕಿಗೆ ಹೆಚ್ಚು ಅರ್ಥಪೂರ್ಣತೆ ತರಬಲ್ಲದು ಎಂಬುದು ಕತೆಯ ತಿರುಳು.

ಕತೆಯ ನಾಯಕಿಗೆ ಮಗುವಿನ ಬಯಕೆ ಇದ್ದರೂ ತನ್ನ ಸಾಧನೆಗೆ ತೊಂದರೆಯಾಗಬಹುದೆಂಬ ಕಾರಣದಿಂದ ಮುಂದೂಡುವಳು. ಇಂಥ ಪರಿಸ್ಥಿತಿಯನ್ನು ಅರಿತು ನಡೆಯುವ ರಮೇಶ ಆಕೆಗೆ ಸಂಗಾತಿಯಾಗಿದ್ದಾನೆ. ಆದರೆ ಸಮಾಜ ಇವಳು ಬಂಜೆ ಇರಬಹುದೆಂಬ ಅನುಮಾನದಲ್ಲಿ ನೋಡುತ್ತದೆ. ಆಕೆ ಮಗು ಬೇಕೆಂಬ ಹಂಬಲಕ್ಕೆ ಸಿದ್ಧಳಾಗ ತೊಡಗಿದಾಗ ತಾನು ಗರ್ಭಧರಿಸುವುದು ಸಾಧ್ಯವೇ ಇಲ್ಲ ಎಂಬ ಸತ್ಯವು ಗೋಚರಿಸಿ ಆಘಾತಕ್ಕೊಳಗಾಗುತ್ತಾಳೆ. ಅನಾಥ ಮಕ್ಕಳನ್ನು ದತ್ತು ಪಡೆದುಕೊಂಡು ಬದುಕನ್ನು ಚಿಗುರಿಸಿಕೊಳ್ಳುವ ಎಂಬ ರಮೇಶನ ವಾದವನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಾಳೆ. ಶಶಿಯ ಈ ಪರಿವರ್ತನೆಯ ಹಿಂದೆ ರಮೇಶ ಇದ್ದಾನೆ ಎಂಬುದನ್ನು ಗಮನಿಸಬೇಕು. ಪುರುಷ ಪ್ರಧಾನವಾದ ಸಮಾಜದಲ್ಲಿದ್ದರೂ ಕೂಡ ಶಶಿಯ ನೋವಲ್ಲಿ ಪಾಲುದಾರನಾಗಿ ಅವಳಿಗೆ ಮಾನಸಿಕ ಸ್ಥೈರ್ಯವನ್ನು ತುಂಬುತ್ತಾನೆ. ಅವನ ಮಾತುಗಳಲ್ಲಿ ಹೇಳುವುದಾದರೆ "ಹುಚ್ಚು ಹುಡುಗಿ ನಮ್ಮದಾವ ಚಂದ್ರ ವಂಶ? ಸೂರ್ಯವಂಶ? ಇಲ್ಲೇನು ರತ್ನಖಚಿತ ಸಿಂಹಾಸನ ಕಾದು ಕುಳಿತ್ತಿದೆಯೇ ಉತ್ತರಾಧಿಕಾರಿ ಬೇಕು ಎಂದು? ನನ್ನ ಮಟ್ಟಿಗೆ ನೀನೆ ಹೆತ್ತರೂ, ನಿನ್ನ ನವಮಾಸಗಳ ಹೊರೆಯಿಂದ, ಹೆರುವ ನೋವಿನಿಂದ ನೀನು ಹೊರಗೇ ಉಳಿದಿರುತ್ತೆಯೇ? ಆ ಅರ್ಥದಲ್ಲಿ ಪ್ರತಿ ಗಂಡಸೂ ಬಂಜೆಯೇ, ನರ್ಸ್ ತಂದು ನಿಮ್ಮ ಮಗು ಎಂದಾಗ ತಂದೆಯಾಗುವುದಕ್ಕೂ, ಅನಾಥ ಆಶ್ರಮದಲ್ಲಿ ಒಂದು ಮಗುವನ್ನೆತ್ತಿ 'ನನ್ನದು' ಎನ್ನುವುದಕ್ಕೂ ವ್ಯತ್ಯಾಸ ಇಲ್ಲ. ಸುಮ್ಮನೆ ಹುಚ್ಚುಚ್ಚಾಗಿ ಯೋಚಿಸಬೇಡ. ದಿಲ್ಲಿ ಕಲಾಮೇಳಕ್ಕೆ ತಯಾರಿ ಮಾಡಿಕೋ, ಆದಾದ ನಂತರ ಮಗು ಬೇಕೆನಿಸಿದರೆ ದತ್ತು ತೆಗೆದುಕೊಳ್ಳೋಣ ತಾಯ್ತನ ಹೊರುವ ಹೆರುವ ಕ್ರಿಯೆಯಲ್ಲಿ ಅಡಗಿಲ್ಲ ಎಂದನು"[೧] ರಮೇಶನಲ್ಲಿಯ ಮೌಲ್ಯವು ಲೇಖಕಿಯ ಮಾನವೀಯತೆಯ

೧.ನೇಮಿಚಂದ್ರ; ಹೊಸಹುಟ್ಟು, ಪುಟ-೨೭೭

ಪ್ರತೀಕದಂತಿದೆ. ತನ್ನನ್ನು ಕಾಡುವ ಸಮಸ್ಯೆಗಳಿಂದ ಪಾರಾಗಿ ಶಶಿ ಹೊಸ ಹುಟ್ಟನ್ನು ಪಡೆಯುವಂತಾಗುವುದು ಮತ್ತೊಬ್ಬ ಹೆಣ್ಣಿನ, ಕಲಾವಿದೆಯ ಮೂಲಕ ಎನ್ನುವುದು ಅರ್ಥಪೂರ್ಣವಾಗಿದೆ. ದಿಲ್ಲಿಯ ಕಲಾಮೇಳವೊಂದರಲ್ಲಿ ಅದಿತಿಗುಪ್ತಾಳ ಪರಿಚಯವಾಗಿ "ಚಿತ್ರ ಬಿಡಿಸೋದು, ಕತೆ ಬರೆಯೋದು ಯಾವುದೇ ಸೃಜನಶೀಲ ಕಾರ್ಯವು ಹೆರುವ, ಹೊರುವ ಕ್ರಿಯೆಯಂತೆಯೇ ಎಂದು ಹೇಳುತ್ತಾಳೆ."[೧] ಬಹುಪಾಲು ಸ್ತ್ರೀಯರು ಬದುಕಿನಲ್ಲಿ ಯಾವ ಕ್ರಿಯಾಶೀಲ ಕೆಲಸಕ್ಕೂ ಕೈ ಹಾಕಿದವರಲ್ಲ. ಗಂಡ, ಮನೆ, ಕಸಮುಸುರೆ ಈ ಬಗೆಯ ಬದಲಿಲ್ಲದ ಬದುಕಿನ ಬೇಸರದಲ್ಲಿ ಮಕ್ಕಳು ಅದ್ಭುತ ಸೃಷ್ಟಿಯಾಗಿ ಕಾಣುತ್ತವೆ. ಹದಿನೈದು ದಿವಸ ಕಲಾವಿದರ ಒಡನಾಟ, ಅನುಭವ ಶಶಿಯಲ್ಲಿ ಆತ್ಮವಿಶ್ವಾಸ ಹುಟ್ಟಿಸುತ್ತದೆ. ಈ ಕತೆಯ ಮುಖ್ಯಾಂಶಗಳೇಂದರೆ ಗಂಡು ಹೆಣ್ಣಿನ ಸಂಬಂಧದಲ್ಲಿ ಸಾಮಾನ್ಯವಾಗಿ ತಲೆದೋರುವ ಸಂಘರ್ಷ ಇಲ್ಲಿಲ್ಲ, ಒಂದು ಮೌಲ್ಯವಾಗಿ ಸೃಜನಶೀಲತೆ ಪಡೆಯುವುದು.

ಕೇವಲ ತಾಯ್ತನದಿಂದಲೇ ಮಾತ್ರ ಹೆಣ್ಣಿನ ಬಾಳು ಸಾರ್ಥಕವಾಗುತ್ತದೆ ಎಂಬ ವಾದವು ಹುಸಿಯಾಗುತ್ತದೆ. ಏಕೆಂದರೆ ಪ್ರಾಕೃತಿಕವಾಗಿ ತಾಯಿಯಾಗಲು ದುರ್ಬಲವಾದ ಹೆಣ್ಣು ಬೇರೊಂದು ಪ್ರಪಂಚದಲ್ಲಿ ತಾಯ್ತನದ ಸುಖವನ್ನು ಪಡೆಯಲು ಸಾಧ್ಯವೆಂದು ಈ ಕತೆಯು ಸಾಬೀತು ಪಡಿಸುತ್ತದೆ. ಜೀವನದಲ್ಲಿ ನಮಗೆ ಎದುರಾಗುವ ಪರಿಸ್ಥಿತಿಯಿಂದ ಸೂಕ್ತ ಪರಿಹಾರವನ್ನು ಕಂಡುಕೊಂಡು ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬುದು ಲೇಖಕಿಯ ಆಶಯ.

ಮಧ್ಯಮ ಮರ್ಗದ ಸ್ತ್ರೀಯರ ಗೊಂದಲ :

ಉದ್ಯೋಗಸ್ಥ ಮಹಿಳೆಯನ್ನು ಆಧುನಿಕತೆಯ ಸಂಕೇತ, ಸ್ತ್ರೀಸ್ವತಂತ್ರ ಎಂದೆಲ್ಲಾ ವ್ಯಾಖ್ಯಾನಿಸುವಾಗ ಕೂಡ ಮಹಿಳೆ ಶೋಷಣೆಗೆ ಗುರಿಯಾಗಿರುವುದನ್ನು ಕಾಣಬಹುದು. ಆರಕ್ಕೇರದ ಮೂರಕ್ಕಿಳಿಯದ ಮಧ್ಯಮ ವರ್ಗದ ಸ್ತ್ರೀಯರು ತಮ್ಮ ಕುಟುಂಬದಲ್ಲಿ, ಸಮಾಜದಲ್ಲಿ ಎದುರಿಸುವ ಸಮಸ್ಯೆಗಳನ್ನು ನೇಮಿಚಂದ್ರರು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಗಂಡು ಹೆಣ್ಣಿನ ಸಂಬಂಧಗಳು ಸಾಂಸಾರಿಕ ಕಲಹ ಇತ್ಯಾದಿ ಅಂಶಗಳನ್ನು ಮಾರ್ಮಿಕವಾಗಿ ನಿರೂಪಿಸಿದ್ದಾರೆ.

೧.ನೇಮಿಚಂದ್ರ; ಹೊಸಹುಟ್ಟು, ಪುಟ-೨೭೮

ಹೊಸಗನ್ನಡ ಸಾಹಿತ್ಯದ ದಿಕ್ಕನ್ನು ಬದಲಾಯಿಸಿದವರಲ್ಲಿ ನೇಮಿಚಂದ್ರರು ಪ್ರಮುಖರು. ಮಧ್ಯಮ ವರ್ಗದ ಸ್ತ್ರೀಯರ ನಗರೀಕೃತ ಬದುಕಿನ ಉದ್ಯೋಗಸ್ಥ ಹೆಣ್ಣುಗಳ ಸಂವೇದನೆಯ ವಸ್ತು ಪ್ರತಿರೂಪವೂ ಕಾರಣವಾಗಿದೆ. ಸ್ತ್ರೀ ಪ್ರಜ್ಞೆಯನ್ನೇ ಕೇಂದ್ರವಾಗಿಟ್ಟುಕೊಂಡು ಬರೆಯುತ್ತಿರುವ ಮಹಿಳಾ ಪರ ಬರವಣಿಗೆಗಳ ದಿಸೆಯಲ್ಲಿ ಬಹಳ ಭರವಸೆ ಮೂಡಿಸುವ ಕತೆಗಾರ್ತಿ. ಇವರ "ನನ್ನದಲ್ಲದ ಬದುಕಿಗಾಗಿ" ಎಂಬ ಕತೆಯಲ್ಲಿ ಪಿತೃಪ್ರಧಾನ ವ್ಯವಸ್ಥೆಯಲ್ಲಿನ ಸ್ತ್ರೀಪುರುಷ ತಾರತಮ್ಯ ನೀತಿಯನ್ನು ಎತ್ತಿ ತೋರಿಸಿದ್ದಾರೆ. ಹೆಣ್ಣಿಗೆ ಮಾತ್ರ ಪಾವಿತ್ರ್ಯ, ಶೀಲ, ಕನ್ಯತ್ವಗಳನ್ನು ಕಡ್ಡಾಯಗೊಳಿಸಿ, ಗಂಡು ಎರಡನೆಯ ಮದುವೆಯಲ್ಲಿಯೂ ಹೆಣ್ಣಿನಲ್ಲಿ ಇವುಗಳನ್ನು ನಿರೀಕ್ಷಿಸುವುದನ್ನು ಲೇಖಕಿ ಈ ಕಥೆಯ ಮೂಲಕ ಖಂಡಿಸಿದ್ದಾರೆ. ಇಲ್ಲಿ ವಿವಾಹ ನಿಶ್ಚಯವಾಗಿರುವ ಯುವತಿಯೊಬ್ಬಳು ತನ್ನ ಭಾವಿ ಗಂಡನಿಗಾಗಿ ಕಳೆದು ಹೋಗಿರುವ ಕನ್ಯಾಪೊರೆಯನ್ನು ಕೃತಕವಾಗಿ ಹೊಲಿಸಿಕೊಳ್ಳಲೆತ್ನಿಸುವುದು, ಈ ಪುರುಷ ಪ್ರಧಾನ ವ್ಯವಸ್ಥೆಯನ್ನು ಅಣಕಿಸುವಂತಿದೆ. ಕೊನೆಗೆ ತನ್ನ ಗೆಳತಿ ಹಾಗೂ ವೈದ್ಯರ ಸಲಹೆಗಳಿಂದ ಜ್ಞಾನೋದಯವಾಗಿ ಕನ್ಯಾ ಪೊರೆಯನ್ನು ಹೊಲಿಸಿಕೊಳ್ಳದೇ ಹಿಂದಿರುಗುತ್ತಾಳೆ. ಹೀಗೆ ಹರಿದು ಹೋಗಲಿಕ್ಕೆ ಇರುವ ಪೊರೆಯನ್ನು ಹೊಲಿಸಿಕೊಳ್ಳುವ ವ್ಯಂಗ್ಯದಲ್ಲಿ ನಾಯಕಿ ರೋಗಗ್ರಸ್ಥ ಸಂಬಂಧಗಳನ್ನು ಕಡಿದು ಉತ್ತರ ಹುಡುಕುತ್ತಾ ಬರುತ್ತಾಳೆ. ನಾಯಕಿ ತನ್ನ ನಿರ್ಧಾರವನ್ನು ಬದಲಿಸಿ ಮರಳಿ ಹೊರಟು ಹೋಗುವುದು ಲೈಂಗಿಕ ರಾಜಕಾರಣವನ್ನು ಟೀಕಿಸುವ, ಅದರ ವಿರುದ್ಧ ತನ್ನ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಈ ಕತೆಯ ಇತ್ಯಾತ್ಮಕ ಅಂಶವಾಗಿದೆ.

ನೇಮಿಚಂದ್ರ ಅವರ ಇನ್ನು ಕೆಲವು ಕಥೆಗಳಲ್ಲಿ ಈ ರೀತಿ ಸ್ತ್ರೀವಾದಿ ಪ್ರಜ್ಞೆಯಿಂದ ಸೃಷ್ಟಿಯಾದ ಪಾತ್ರಗಳಿವೆ. ಅವರ ಕಥೆಗಳಲ್ಲಿ ಬರುವ ಪಾತ್ರಗಳು, ಘಟನೆಗಳು, ಸಂಭಾಷಣೆ ಹಾಗೂ ನಿರೂಪಣೆಯಲ್ಲಿ ಸ್ತ್ರೀಯರು ಸಿಡಿದೇಳುವುದು ನಿಚ್ಚಳವಾಗಿ ಕಾಣುತ್ತದೆ. ಭೌತಿಕ, ಕ್ರಿಯಾತ್ಮಕ ಚಳುವಳಿಗೆ ನೇಮಿಚಂದ್ರರ ಕಥೆಗಳು ಉತ್ತೇಜನಕಾರಿಯಾಗಿದೆ.

'ನನ್ನದಲ್ಲದ ಬದುಕಿಗಾಗಿ' ಕತೆಯ ಸರೂ ಹಾಗೂ 'ಕಪ್ಪು ಮೋಡ ಬೆಳ್ಳಿ ಅಂಚು' ಕತೆಯ ಮಧು ಪಾತ್ರಗಳು ಗಂಡಿನ ಆಸರೆಯನ್ನು ನಿರಾಕರಿಸಿ ಸ್ವಂತ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುತ್ತವೆ. ಆದರೆ ಈ ಕತೆಯ ಶೀಲಾ ಮತ್ತೆ ಗಂಡಿನ ಆಸರೆಯನ್ನು ಬಯಸುವುದು ವಿಮುಖ ಚಲನೆಯಾಗಿದೆ. ಶಿಕ್ಷಿತಳು, ಉದ್ಯೋಗಸ್ಥಳು ಆದ ಶೀಲಾಳ ಮೇಲೆ ನಾಲ್ಕು ಜನ ಗಂಡಸರು ನಡೆಸುವ ಲೈಂಗಿಕ ಶೋಷಣೆಯ ಚಿತ್ರಣವನ್ನು "ಕೆಂಪು ಕಲಕಿದ ನೀರು" ಕತೆಯು ಒಳಗೊಂಡಿದೆ. ಶೋಷಣೆಯ ಸಂದರ್ಭದಲ್ಲಿ ಶೀಲಾ ಅನುಭವಿಸುವ ವೇದನೆಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಆಕ್ರಮಣ ನಂತರದಲ್ಲಿ ಶೀಲಾ ಎದುರಿಸುವ ಸಮಸ್ಯೆಗಳನ್ನು ಹೃದಯ ಕಲಕುವಂತೆ ನೇಮಿಚಂದ್ರ ಚಿತ್ರಿಸಿದ್ದಾರೆ.

ಲೈಂಗಿಕ ಶೋಷಣೆ ಸಂದರ್ಭಗಳು ಅತಿ ಹೆಚ್ಚು ಲೇಖಕರ ಕತೆ ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವುದು ಗಮನಿಸಬೇಕಾದ ಅಂಶ. ವೀಣಾ ಶಾಂತೇಶ್ವರರ 'ಗಂಡಸರು' ಕಾದಂಬರಿಯು ನೇಮಿಚಂದ್ರ 'ಕೆಂಪು ಕಲಕಿದ ನೀರು' ಕತೆಯ ಮಾದರಿಯನ್ನು ನೆನಪಿಸುವಂತದ್ದು.

ಉದ್ಯೋಗದ ಭದ್ರತೆಯಿದ್ದರೂ ಶೀಲಾಳ ಬಾಳು ಅಸ್ಥಿರತೆಯಿಂದ ಕೂಡಿದೆ. ಅವಳ ಕತೆ ಕೇಳಿಸಿಕೊಂಡ ನಂತರ ಆಶು ಪ್ರತಿಕ್ರಿಯೆಯಲ್ಲಿ ಭಾರತೀಯ ಗಂಡೇ ಆಗಿಬಿಡುವುದು ಹಾಗೂ ಕತೆಯ ಮುಕ್ತಾಯ ಭಾಗದಲ್ಲಿ ಆತನನ್ನು ಒಪ್ಪಿಕೊಳ್ಳುವುದು ಶೀಲಾಳ ದುರಂತವೆನಿಸುತ್ತದೆ. ತನ್ನ ಮೇಲೆ ನಡೆದ ಆಕ್ರಮಣವನ್ನು ಕಂಡ ತುಷಾರ್‌ನ ಸಂಧಾನವನ್ನು ನಿರಾಕರಿಸುತ್ತಾಳೆ. ಏಕೆಂದರೆ ತುಷಾರ್ ಒಬ್ಬ ಗೆಳೆಯ. ಆತನ ಬಗೆಗೆ ಯಾವುದೇ ರೀತಿಯ ಪ್ರೇಮಾಲಾಪನೆಗಳು ಶೀಲಾಳಿಗೆ ಮೂಡಲಿಲ್ಲ. ಕೊನೆಗೆ ಆಶುವನ್ನು ವರಿಸುತ್ತಾಳೆ.

ಉದ್ಯೋಗಸ್ಥ ಮಹಿಳೆಯನ್ನು ಆಧುನಿಕತೆಯ ಸಂಕೇತ ಸ್ತ್ರೀಸ್ವತಂತ್ರ ಎಂದೆಲ್ಲ ವ್ಯಾಖ್ಯಾನಿಸುವಾಗಲೂ ಕೂಡ ಮಹಿಳೆ ಶೋಷಣೆಗೆ ಗುರಿಯಾಗಿರುವುದನ್ನು ಕಾಣಬಹುದು. ಕಥೆ, ಕಾದಂಬರಿಗಳ ಹೆಣ್ಣು ಪಾತ್ರಗಳಲ್ಲಿ ಕ್ರಾಂತಿಕಾರಕ ಗುಣವನ್ನು ತುಂಬಿ, ಅವು ಪುರುಷರು ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಹೋರಾಟದಲ್ಲಿ ತೊಡಗುವಂತೆ ಮಾಡುವುದು ಮಾತ್ರವೇ ಸ್ತ್ರೀವಾದಿ ಪ್ರಜ್ಞೆಯಲ್ಲ. ಪಿತೃಪ್ರಧಾನ ಸಂಸ್ಕೃತಿಯಲ್ಲಿ ಮಹಿಳೆ ಯಾವ ರೀತಿ ದೌರ್ಜನ್ಯಕ್ಕೆ, ಶೋಷಣೆಗೆ ಒಳಗಾಗುತ್ತಿದ್ದಾಳೆ, ಅದಕ್ಕೆ ಕಾರಣವಾಗುವ ಸಂಸ್ಥೆಗಳು ಯಾವುವು ಎಂಬುದನ್ನು ಶೋಧಿಸುವುದು ಹಾಗೂ ಈ ನಿಟ್ಟಿನಲ್ಲಿ ಸ್ತ್ರೀ ಶೋಷಣೆಯನ್ನು ವಿಷಾದದ ನೆಲೆಯಲ್ಲಿ ಚಿತ್ರಿಸುವುದು ಸ್ತ್ರೀವಾದಿ ಪ್ರಜ್ಞೆಯೇ ಎಂಬುದು ಸ್ಪಷ್ಟವಿದೆ. ಸಾಹಿತ್ಯದಲ್ಲಿ ಕೇವಲ ಪುರುಷ ವಿರೋಧಿ ಧೋರಣೆಯೇ ಪ್ರಧಾನವಾದರೆ ಅದು ಕಲಾತ್ಮಕತೆಗೆ ಎರವಾಗುವುದಲ್ಲದೆ ಪುರುಷ ದ್ವೇಷದ ವರದಿಯಾಗುತ್ತದೆ.

ಇಂಥ ಅಪಾಯದಿಂದ ಪಾರಾಗಿ ಸ್ತ್ರೀವಾದಿ ಪ್ರಜ್ಞೆಯನ್ನೊಳಗೊಂಡು ಕಲಾತ್ಮಕತೆಯನ್ನು ಕಾಯ್ದು ಕೊಂಡಿರುವ ಸಾಹಿತ್ಯ ಕೃತಿಗಳನ್ನು ಸಾರಾ ಅಬೂಬಕರ್ ಅವರ ಕತೆ, ಕಾದಂಬರಿಗಳು ಮೊದಲ ಸಾಲಿನಲ್ಲಿವೆ. ಇವರು ವೈಯಕ್ತಿಕವಾಗಿ ಸ್ತ್ರೀವಾದಿಯಾಗಿರುತ್ತಾರೆ.

ಸಂಪ್ರದಾಯ ಮತ್ತು ಆಧುನಿಕತೆಯ ನಡುವಿನ ಸಂಘರ್ಷ :

ತಮ್ಮ ಕಥೆಗಳಲ್ಲಿ ಹೊಸ ರೀತಿಯನ್ನು ಅಭಿವ್ಯಕ್ತ ಪಡಿಸಬೇಕೆಂದು ನಿಶ್ಚಯಿಸಿಕೊಂಡವರು ನೇಮಿಚಂದ್ರರು. ಇವರ ಕಥೆಗಳಲ್ಲಿನ ಹೆಣ್ಣುಗಳು ಬದುಕಿನ ಆಯ್ಕೆಯ ಪ್ರಶ್ನೆ ಬಂದಾಗ ಅದಕ್ಕೆ ತಕ್ಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಧೈರ್ಯ ತೋರುತ್ತಾರೆ. ಸಂಪ್ರದಾಯದ ಮುಲಾಜಿಗೆ ಸಿಲುಕದೆ

ಆಧುನಿಕತೆಗೆ ನಿರ್ಭಯದಿಂದ ತೆರೆದುಕೊಳ್ಳುತ್ತಾರೆ. ಕುಟುಂಬ, ಮದುವೆ, ಗಂಡನ ಆಕ್ರಮ ಸಂಬಂಧ ಮೊದಲಾದ ವಿಷಯಗಳನ್ನು ವಿರೋಧಿಸುವ ಮೂಲಕ ಆಧುನಿಕತೆ ಮತ್ತು ಸಂಪ್ರದಾಯದ ಸಂಘರ್ಷಗಳಲ್ಲಿ, ಸಂಘರ್ಷಗಳು, ಸ್ತ್ರೀಪಾತ್ರಗಳು ಗೋಚರವಾಗಿ ಇಲ್ಲವೇ ಅಗೋಚರವಾಗಿಯೂ ಅಸ್ಫೋಟಿಸುತ್ತವೆ.

'ಮತ್ತೆ ಬರೆದ ಕವನಗಳು' ಕತೆಯಲ್ಲಿನ ನಾಯಕಿಗೆ ತನ್ನ ಅಸ್ತಿತ್ವದ ಅರಿವು ಚೆನ್ನಾಗಿದೆ. ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಹುಡುಗಿ ವಿದ್ಯಾವಂತೆಯಾಗಿ ಉನ್ನತ ಹುದ್ದೆಗೇರುವ ಹುಡುಗಿಯು ಹಿರಿಯರ ಆದೇಶದಂತೆ ಸಾಂಪ್ರದಾಯಿಕ ಮದುವೆಗೆ ಒಪ್ಪುತ್ತಾಳೆ. ಹುಡುಗಿ ಎನ್ನುವ ಕಾರಣಕ್ಕಾಗಿ ಬಾಲ್ಯದಲ್ಲಿ ಬಹಳ ಕಟುವಾಗಿ ಅವಳ ಸಾಮಾಜಿಕ ವ್ಯವಹಾರಗಳ ನಿಯಂತ್ರಿಸಿದ ಅಪ್ಪ, ಸೀರೆಯಿಂದ ಹಿಡಿದು ಅವಳು ಹಾಕುವ ಕುಪ್ಪಸದ ಬಗ್ಗೆ ಕಾಳಜಿ ವಹಿಸುವ ಅಮ್ಮ ಇವು ಗಂಡನೊಡನೆ ಸಹಜವಾಗಿ ಮುಕ್ತವಾಗಿ ತೆರೆದುಕೊಳ್ಳದಂತೆ ಮಾಡಿ ಗಂಡನೊಡನೆ ಅವಳ ಸಂಬಂಧವನ್ನು ಕಮರಿಸಿಬಿಟ್ಟಿರುತ್ತದೆ. ತಾನು ಸೆಮಿನಾರ್‌ಗೆಂದು ಕಾಶ್ಮೀರಕ್ಕೆ ಹೋದಾಗ ಆ ಮುಕ್ತ ವಾತಾವರಣದಲ್ಲಿ ಗೆಳೆಯನೊಬ್ಬನ ಜೊತೆ ಆತ್ಮೀಯವಾಗಿ ಇರುವುದಲ್ಲದೆ ಯಾವುದೇ ಪಾಪಪ್ರಜ್ಞೆ ಇಲ್ಲದೆ ಮುಕ್ತವಾಗಿ ಅವನೊಡನೆ ತನ್ನ ಕೊರತೆಯನ್ನೆಲ್ಲಾ ತುಂಬಿಕೊಳ್ಳುತ್ತಾಳೆ. ಇಲ್ಲಿ ಕ್ಷಣಗಳನ್ನು ಹೋಲಿಸುತ್ತಾ, ತನ್ನ ಕಿಶೋರಾವಸ್ಥೆಯ ನಿಯಂತ್ರಿತ ಬದುಕಿನಿಂದ ಪ್ರಬುದ್ಧವಾಗಿ ಬೆಳೆದುದರ, ಭೂತ ಭವಿಷ್ಯತ್ತುಗಳ ಸಾಮ್ಯಗಳಲ್ಲಿ ಈ ಕಥೆ ಬೆಳೆಯುತ್ತಾ ಹೋಗುತ್ತದೆ. ಇಲ್ಲಿ ಒಂದು ನಿರ್ದಿಷ್ಟವಾದ ಮತ್ತು ಕಿಲುಬುಗಟ್ಟಿದ ಸಂಬಂಧಕ್ಕೆ ಹೊಂದಿಕೊಳ್ಳಬೇಕೆಂಬ ಸಾಂಪ್ರದಾಯಿಕ ಹಠವಿಲ್ಲ. ಕತೆಯಲ್ಲಿ ಮುಕ್ತವಾಗಿ ಬದುಕು ಹಸನುಗೊಳ್ಳುವ ಪರಿ ದಾಖಲಾಗಿದೆಯೇ ಹೊರತು ಪಾಪ ಭಯ ಕಾಡುವುದಿಲ್ಲ.

'ನಮ್ಮ ಕನಸುಗಳಲ್ಲಿ ನೀವಿದ್ದಿರಿ' ಕತೆಯಲ್ಲಿನ ನಾಯಕಿ ಕಾವ್ಯ ಗಂಡನ ಏಕತಾನದ ಬದುಕಿಗೆ ಬೇಸತ್ತು ನಾಲ್ಕು ದಿನಗಳಿಗೆಂದು ಬಂದು ಉಳಿದುಕೊಂಡ' ಕಿರಣನ ಸಹಜ ಉತ್ಸಾಹ, ಹುಮ್ಮಸ್ಸಿಗೆ ಸ್ಪಂದಿಸುವ ತೀವ್ರತೆಯಲ್ಲಿ ಕೌಟುಂಬಿಕ ಬಂಧನಗಳನ್ನು ಕಿತ್ತೊಗೆದು ಅವನ ಹಿಂದೆ ಹೋಗುತ್ತಾಳೆ. ಆದರೆ ತಾನು ಹುಡುಕುತ್ತಿರುವುದು ಏನು ಎಂಬುದು ಅವಳಿಗೆ ಅಷ್ಟು ಖಚಿತತೆ ಇಲ್ಲದೆ ಇರುವುದರಿಂದ ಕಿರಣನ ಬಳಿಯೂ ಸಂತೋಷದಿಂದ ಇರುವುದು ಸಾಧ್ಯವಾಗುವುದಿಲ್ಲ. ಈ ದ್ವಂದ್ವ ಇರುವುದರಿಂದ ಕಿರಣನ ಲೈಂಗಿಕ ಬಯಕೆಗೆ ತನ್ನನ್ನು ಒಡ್ಡಿ ಕೊಳ್ಳುವುದಿಲ್ಲ. ಇಲ್ಲಿ ತನ್ನ ಪಾವಿತ್ರ್ಯವನ್ನು ಕಾಪಾಡಿಕೊಳ್ಳಬೇಕೆಂಬ ಅಶಯಕ್ಕಿಂತ ಕಿರಣನ ಹಿಂದೆ ಬಂದ ಉದ್ದೇಶ ಏನು ಎಂಬುದು ಸ್ಪಷ್ಟವಾಗದಿರುವುದರಿಂದ, ಅವನ ಜೊತೆ ದೈಹಿಕ ಸಂಬಂಧ ಅವಶ್ಯಕ ಅನಿಸುವುದಿಲ್ಲ. ಇದರಿಂದ ಕಿರಣ ಕೂಡ ಅಪೂರ್ಣವಾಗಿ ಉಳಿಯುತ್ತಾನೆ. ಹೆಣ್ಣು ತನ್ನ ಭಾವನೆಗಳನ್ನು ಎಷ್ಟೇ

ಅದುಮಿಡಲು ಪ್ರಯತ್ನಿಸಿದರೂ ಕೆಲವೊಮ್ಮೆ ಅವು ಸ್ಫೋಟವಾಗುತ್ತವೆ. ಅದಕ್ಕೆ ಕಾವ್ಯಳ ಮನಸ್ಸೇ ಸಾಕ್ಷಿ. ತನ್ನ ಗಂಡನ ಜೊತೆಗೆ ಹತ್ತು ವರ್ಷಗಳ ಕಿಲುಬು ಹಿಡಿದ ಸಂಬಂಧ ಒಂದು ಕಡೆ, ಹೊಸ ಸಂಬಂಧದ ಆಕರ್ಷಣೆ ಇನ್ನೊಂದು ಕಡೆ, ಇವೆರಡರ ತುಯ್ದಾಟದಲ್ಲಿ ಒಲಿಯುವುದು ಹೊಸದರ ಆಕರ್ಷಣೆಗೆ, ಅನಂತರ ಅಲ್ಲಿ ಕೂಡ ಪ್ರಾಮಾಣಿಕವಾಗಿ ಬದುಕಿನ ಸಂಗತಿಗಳಿಗೆ ತೆರೆದುಕೊಳ್ಳಲಾರದೆ ವಾಪಾಸಾಗುತ್ತಾಳೆ. ವಿವಾಹದ ಪಾವಿತ್ರ್ಯ, ಮಾತೃತ್ವದ ಹೊಣೆಯನ್ನು ಬದಿಗಿರಿಸಿ ಹೊರಟೆ ಎನ್ನುವ ಪಾಪಪ್ರಜ್ಞೆ ಅವಳನ್ನು ಕಾಡುತ್ತದೆ. ಹಳೆಯದಾದ ರೋಗಗ್ರಸ್ತ ಸಂಬಂಧಗಳನ್ನು ಕಡಿದು ಹೊರ ಬರುವ ಆರೋಗ್ಯ ಪೂರ್ಣ ದೃಷ್ಟಿಕೋನಕ್ಕಿಂತ ಅದನ್ನೇ ತೇಪೆಹಚ್ಚಿ ಬದುಕುವ ಆಶಯವನ್ನು ಇಲ್ಲಿ ಕಾಣಬಹುದು. ಇದು ಭಾರತೀಯ ಸ್ತ್ರೀಗೆ ಅನಿವಾರ್ಯವಾಗುತ್ತದೆ. ಏಕೆಂದರೆ ಸಂಪ್ರದಾಯವನ್ನು ವಿರೋಧಿಸಿ ವಿವಾಹ ಬಾಹಿರ ಸಂಬಂಧದೊಡನೆ ಹೊಂದಾಣಿಕೆ ಅಸಾಧ್ಯವಾಗುತ್ತದೆ. ಹೆಣ್ಣಿನ ತುಮುಲಗಳನ್ನು ಅತ್ಯಂತ ಸೂಕ್ಷ್ಮವಾಗಿ ವ್ಯಕ್ತಪಡಿಸುವಲ್ಲಿ ಈ ಕತೆ ಯಶಸ್ವಿಯಾಗಿದೆ.

ಮುಸ್ಲಿಂ ಸಮಾಜದಲ್ಲಿ ಸ್ತ್ರೀಯರಿಗೆ ಕನಿಷ್ಠ ಸ್ವಾತಂತ್ರ್ಯವೂ ಇಲ್ಲ. ಹೆಣ್ಣಿನ ಮೇಲೆ ಇಸ್ಲಾಂ ಧರ್ಮ ಹೇರಿರುವಷ್ಟು ನಿರ್ಬಂಧಗಳನ್ನು ಪ್ರಾಯಶಃ ಇನ್ನಾವ ಧರ್ಮವೂ ಹೇರಿಲ್ಲ. ಜೊತೆಗೆ ಧರ್ಮದ ನಿಯಮಗಳನ್ನು ತಿರುಚಿ ಇಲ್ಲವೆ ಅಪಾರ್ಥ ಮಾಡಿಕೊಂಡು ದುರುಪಯೋಗ ಪಡಿಸಿಕೊಂಡ ಪುರುಷರು, ಸ್ತ್ರೀಯರನ್ನು ತೀವ್ರ ಶೋಷಣೆಗೊಳ್ಳಪಡಿಸಿದ್ದಾರೆ. ಈ ಸ್ಥಿತಿಯಿಂದ ಅನೇಕ ಮುಸ್ಲಿಂ ಮಹಿಳೆಯರು ಜೀವನಪರ್ಯಂತ ನರಳಿ, ಚಿತ್ರಹಿಂಸೆ ಅನುಭವಿಸಿ, ಬದುಕನ್ನೇ ಕಳೆದುಕೊಂಡಿದ್ದಾರೆ. ಈ ಕಟು ಸತ್ಯವನ್ನು ಸಾರಾ ಅಬೂಬಕರ್ ಅವರ ಕಥಾ ಸಾಹಿತ್ಯ ಕಲಾತ್ಮಕವಾಗಿ ದಾಖಲಿಸಿದೆ.

ಕಥೆಯ ಆರಂಭದಲ್ಲಿ ಆತ್ಮಹತ್ಯೆ ಮಾಡಿ ಕೊಳ್ಳಲು ಪ್ರಯತ್ನಿಸುವುದರ ಮೂಲಕ ಕೌಟುಂಬಿಕ ಸಂಬಂಧವನ್ನು ಉಳಿಸಲು ಯತ್ನಿಸುತ್ತಾಳೆ. ಹೀಗೆ ಆತನ ಇಚ್ಛೆಗೆ ಒಪ್ಪಿದ್ದು ಒಂದು ರೀತಿಯಲ್ಲಿ ಅವಳ ಬೆಳವಣಿಗೆಯೇ ಆಗುತ್ತದೆ. ಒಮ್ಮೆಲೆ ಒಂದು ಪ್ರಕ್ರಿಯೆಯಿಂದ ಇನ್ನೊಂದು ಪ್ರಕ್ರಿಯೆಗೆ ಹಲವಾರು ಆತಂಕ, ದ್ವಂದ್ವಗಳೊಡನೆ ದಾಟುವುದು ಅನಿವಾರ್ಯವಾಗುತ್ತದೆ. ಬದಲಿ ಜೀವನವನ್ನು ಉತ್ಸಾಹದಿಂದ ಎದುರುಗೊಂಡಾಗ ಆಕೆ ನಿರೀಕ್ಷಿಸಿದ್ದ ಮಟ್ಟದಲ್ಲಿ ಯಶಸ್ವಿಯಾಗುತ್ತಾಳೆ. ಅದು ಬದುಕಬೇಕೆಂಬ ಛಲವನ್ನು ದ್ವಿಗುಣಗೊಳಿಸುತ್ತದೆ. "ನನ್ನದಲ್ಲದ ಬದುಕಿಗಾಗಿ" ಕತೆಯ ಸರೂಗೂ ಇಲ್ಲಿನ ವ್ಯವಸ್ಥೆಯನ್ನು ಆರಾಧಿಸದೆ, ಅದರ ಆಧಾರ ಸ್ತಂಭಗಳನ್ನು ನಿರಾಕರಿಸಿ ಬದುಕುವ ಹಿನ್ನೆಲೆಯಲ್ಲಿ ಸಾಮ್ಯವಿದೆ.

ಸ್ತ್ರೀಯೊಬ್ಬಳ ಪರಾಧೀನ ಬದುಕನ್ನು ಗಂಡನ ವಿಚ್ಛೇದನದ ನಂತರ ಸ್ವಾವಲಂಭನೆಯ ಉತ್ಕೃಷ್ಟತೆಗೆ ಆತ್ಮವಿಶ್ವಾಸವನ್ನು ಮೂಡಿಸುವುದರ ಕಡೆಗೆ ವಾಸ್ತವದ ಬದುಕಿಗೆ ಒರೆ ಹಚ್ಚುವ ಅವರ ಕಥಾ ನಿರೂಪಣೆ "ಕಪ್ಪು ಮೋಡ ಬೆಳ್ಳಿ ಅಂಚು" ಕತೆಯಲ್ಲಿ ಸಮರ್ಥವಾಗಿ ಮೂಡಿಬಂದಿದೆ. "ಈ ಕತೆಯ ಮಧು ನೇಮಿಚಂದ್ರರ ಕತೆಗಳ ಸಂದರ್ಭದಲ್ಲೆ ಹೆಚ್ಚು ಭರವಸೆಯನ್ನು, ಆ ಮೂಲಕ ಹೆಣ್ಣಿನ ಬದುಕಿಗೆ ಸ್ಥೈರ್ಯವನ್ನು ಕೊಡುವ ಪಾತ್ರವಾಗಿದೆ"[೧] ಎಂದು ತಿಳಿಸಿದ್ದಾರೆ. ಏಕೆಂದರೆ ಮಧು ಅಭದ್ರತೆಯ ಕಾರಣವಾಗಿ ಗಂಡಿನ ಮೇಲ್ಮೈಯನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಮತ್ತು ಬಿಡುಗಡೆಯ ಸಂದರ್ಭವನ್ನು ಸವಾಲಾಗಿ ಸ್ವೀಕರಿಸುವ ಎರಡು ರೀತಿಯ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಾಳೆ. ಮಧು ರವಿಯ ವಿಘಟನೆ ಆಶಯವನ್ನು ಆರಂಭದಲ್ಲಿ ಅಂದರೆ ತನಗೆ ಏನೂ ಆಧಾರವಿಲ್ಲದ ಅಭದ್ರತೆಯ ಸಂದರ್ಭದಲ್ಲಿ ವಿರೋಧಿಸುವುದು ಸಹಜವಾಗಿದೆ. ಆದರೆ ಆತ ತಿಂಗಳಿಗೆ ಇಂತಿಷ್ಟು ಹಣ ಕೊಡುತ್ತೇನೆ ಎಂದು ವ್ಯಾಪಾರದ ರೀತಿಯಲ್ಲಿ ಒಪ್ಪಂದ ಮಾಡಿಕೊಂಡಾಗ ಇದ್ದ ಅಸಹನೆಯಲ್ಲಿ ಬೇಯುವುದಕ್ಕಿಂತ ಪ್ರತ್ಯೇಕವಾಗಿರುವುದು ಸರಿಯಾಗಬಹುದು ಎಂದು ವಿಚ್ಛೇದನಕ್ಕೆ ಒಪ್ಪಿ ಕೊಳ್ಳುತ್ತಾಳೆ. ದಾಂಪತ್ಯದ ಸೋಲು ಮತ್ತು ಯಶಸ್ಸಿನ ಆಚೆಗೆ ಹೆಣ್ಣು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಅದು ಮೂಲಭೂತ ಅವಶ್ಯಕತೆಗಳಲ್ಲಿ ಒಂದು. ಆರ್ಥಿಕ ಸ್ವಾವಲಂಭಿತವು ಸ್ವಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಆತ್ಮಗೌರವವು ಬದುಕಿನ ಯಾವ ಬಿಕ್ಕಟ್ಟುಗಳನ್ನು ಎದುರಿಸಲು ಬೇಕಾಗುವ ಧೀರತೆಯನ್ನು ಕೊಡುತ್ತದೆ. ಈ ಎಲ್ಲವೂ ಸೇರಿದಾಗ ಯಾವ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಗಳು ಪೆಡಂಭೂತವಾಗಿ ಕಾಣಿಸುತ್ತವೋ ಅವು ಗೆಲ್ಲಬಹುದಾದ ಸವಾಲುಗಳಾಗಿ ಕಾಣಿಸುತ್ತಾ ಹೋಗುತ್ತವೆ. ಗಂಡಿನಿಂದ ಶೋಷಿತಳಾಗುತ್ತಾ ಇರುವ ಹೆಣ್ಣಿಗೆ ಇರುವ ಸಾಧ್ಯತೆಗಳ ಬಗೆಗೆ ಈ ಎರಡು ಕತೆಗಳು ಹಲವಾರು ಹೊಳಹುಗಳನ್ನು ಕೊಡುತ್ತವೆ. ಹಾಗೂ ನೇಮಿಚಂದ್ರರ ಬೆಳವಣಿಗೆಯ ಪ್ರಬುದ್ಧತೆಯನ್ನು ಮತ್ತು ಶಕ್ತತೆಯನ್ನು ವ್ಯಕ್ತಪಡಿಸುತ್ತವೆ.

ಹೀಗೆ ಮೇಲೆ ಈ ಎಲ್ಲಾ ಕತೆಗಳಲ್ಲಿ ಸಂಪ್ರದಾಯ ಆಧುನಿಕತೆಯ ಸಂಘರ್ಷವನ್ನು ಗುರುತಿಸಬಹುದಾಗಿದೆ. ಗಂಡು-ಹೆಣ್ಣಿನ ನಡುವೆ ಆಧುನಿಕತೆ ಮತ್ತು ಸಂಪ್ರದಾಯಗಳ ಸಂಘರ್ಷಕ್ಕೆ ಒಳಗಾಗಿರುವುದು ಇವರ ಕತೆಗಳಿಗೆ ಮೂಲಭಿತ್ತಿಯಾಗಿದೆ.

೧.ನೇಮಿಚಂದ್ರ; ಕಪ್ಪು ಮೋಡ ಬೆಳ್ಳಿ ಅಂಚು, ಪುಟ-೨೩೪

ಕೌಟುಂಬಿಕ ಸಮಸ್ಯೆ :

ಕೌಟುಂಬಿಕ ಸಮಸ್ಯೆಯನ್ನು ಕೇಂದ್ರವಾಗುಳ್ಳ ಕತೆಗಳನ್ನು ನಿರ್ಮಿಸುವುದರಲ್ಲಿ ನೇಮಿಚಂದ್ರ ಯಶಸ್ವಿಯಾಗಿದ್ದಾರೆ. ಇವರ ಬಹುಪಾಲು ಕತೆಗಳ ಒಂದು ಸಾಮಾನ್ಯ ಲಕ್ಷಣವೆಂದರೆ ಅನಿರೀಕ್ಷಿತ ಎಂಬಂತೆ ಇವರ ಕತೆಗಳ ನಾಯಕಿಯರಿಗೆ ಬದುಕು ಆಘಾತಗಳ ಮೂಲಕ ಸವಾಲನ್ನು ಒಡ್ಡುತ್ತದೆ. ಡೈವೋರ್ಸ್, ಸಾವು ಹೀಗೆ ಎದುರಾಗುವ ದಿವ್ಯಗಳ ಎದುರಿಗೆ ಮೊದಲು ಕಂಗಾಲಾಗಿ ಮತ್ತೆ ಆತ್ಮಬಲದಿಂದಲೇ ಚೇತರಿಸಿಕೊಂಡು ಈ ಮಹಿಳೆಯರು ಹೊಸ ಬದುಕಿನ ಕಡೆಗೆ ನಡೆಯುತ್ತಾರೆ. ಇಲ್ಲಿ ಬದುಕು ಮಾತ್ರವಲ್ಲ ಆ ವ್ಯಕ್ತಿತ್ವಗಳೂ ಹೊಚ್ಚ ಹೊಸದಾಗಿ ಕಂಗೊಳಿಸುತ್ತವೆ. ಆತ್ಮಬಲ ಮತ್ತು ವ್ಯಕ್ತಿತ್ವಗಳಿಗೆ ತಂದು ಕೊಡುವ ಆತ್ಮ ಸೌಂದರ್ಯವನ್ನು ಈ ಪಾತ್ರಗಳು ತಾವು ಅನುಭವಿಸುತ್ತವೆ. ಮಿಕ್ಕವರೂ ಬೇಕಾಗಿ ಬೇಡವಾಗಿ ಅದನ್ನು ಬೆರಗಿನಿಂದಲೋ ನೋಡುವಂತೆ ಮಾಡುತ್ತಾರೆ. ಪರಂಪರೆಯಿಂದಲೂ ಹೆಣ್ಣು ಕುಟುಂಬದ ಕಣ್ಣಾಗಿದ್ದಾಳೆ. ಕುಟುಂಬದ ನಿರ್ವಹಣೆಯ ಹೊಣೆ ಹೊತ್ತಿರುವ ಸ್ತ್ರೀಯು ಹಲವಾರು ತುಮುಲಗಳಿಗೆ ಒಳಗಾಗುತ್ತಾಳೆ. ಮಹಿಳೆ ಆಧುನಿಕಳಾದ ಮೇಲೆಯೂ ಕೆಲವೊಂದು ಕೌಟುಂಬಿಕ ಸಮಸ್ಯೆಗಳಿಗೆ ಗುರಿಯಾಗುತ್ತಾಳೆ. ಅಂತಹ ಸಮಸ್ಯೆಗಳನ್ನು ನೇಮಿಚಂದ್ರರ ಕತೆಗಳಲ್ಲಿ ಗುರುತಿಸಬಹುದು.

ಪ್ರೇಮವಿವಾಹದ ಸೋಲು ಎನ್ನುವುದು ವೈಯಕ್ತಿಕ ಸೋಲಾಗಿರುತ್ತದೆಯೇ ಹೊರತು ಪ್ರೇಮವಿವಾಹದ ಸೋಲಾಗಿರುವುದಿಲ್ಲ ಎಂಬುದನ್ನು ಒಂದು ಸಾಂಸಾರಿಕ ಚೌಕಟ್ಟಿನಲ್ಲಿ ಅಭಿವ್ಯಕ್ತಪಡಿಸಲಾಗಿದೆ. "ತೆರೆಗಳು ಸರಿದವು" ಕತೆಯು ಕೌಟುಂಬಿಕ ಸಂಬಂಧಗಳ ವಿಘಟನೆಯನ್ನು ತಿಳಿಸುತ್ತದೆ. ಅಚಲಳ ಸಂಬಳ ತನ್ನ ಕುಟುಂಬಕ್ಕೆ ಭದ್ರತೆಯನ್ನು ನೀಡುವುದೆಂದು ಅಣ್ಣನ ಲೆಕ್ಕಚಾರ, ಮಾನವೀಯ ಸಂಬಂಧಗಳು ಇಲ್ಲಿ ಪಕ್ಕ ವ್ಯವಹಾರಕ್ಕಿಳಿಯುತ್ತವೆ. ಅಚಲಳ ಮಾನಸಿಕ ತಳಮಳವನ್ನು ಅವಳ ಅಣ್ಣ-ಅತ್ತಿಗೆ ಅರ್ಥೈಯಿಸಿ ಕೊಳ್ಳುವುದಿಲ್ಲ. ಅಚಲ ಅವರಿಗೆ ಕೇವಲ ದುಡಿಯುವ ಯಂತ್ರ ಮಾತ್ರ, ಅವಳಿಗೊಂದು ಮನಸ್ಸಿದೆ, ಅವಳಲ್ಲಿ ಆಸೆ ಆಕಾಂಕ್ಷೆಗಳಿವೆ ಹಾಗೂ ಸುಂದರ ಬದುಕನ್ನು ರೂಪಿಸಿಕೊಳ್ಳುವ ಕನಸುಗಳಿವೆ ಎಂಬುದನ್ನು ಮರೆತ ಆ ಕುಟುಂಬ 'ನಿನಗೆ ವಯಸ್ಸಾಗಿದೆ ಮುಟ್ಟು ನಿಲ್ಲುವ ಕಾಲದಲ್ಲಿ ಮದುವೆಯಾಗುವುದು ಬೇಡ' ಎಂದು ಅವಳನ್ನು ತಡೆಯುತ್ತಾರೆ. ಅಣ್ಣನ ಸಂಸಾರದ ಭದ್ರತೆಯನ್ನು ನೆನೆಯುತ್ತಾ ಅಚಲ ಅಣ್ಣನಿಗೆ ಹೇಳಿದಳು. "ಅಣ್ಣ ಕಾಗೆಗೂಡಿನಲ್ಲಿರೋ ಕೋಗಿಲೆಯ ಮೊಟ್ಟೆಯನ್ನು ತನ್ನದು ಅಂತಾ ಕಾವು ಕೊಟ್ಟು, ಮರಿ ಮಾಡಿ ಗುಟುಕು ನೀಡುತ್ತಾ ಪ್ರೀತಿಸುತ್ತೆ, ಕೋಗಿಲೆ ಬಾಯಿ ಬಿಟ್ಟಾಗಲಷ್ಟೇ ಗೊತ್ತಾಗೋದು ಅದರ ನಿಜ ಬಣ್ಣ, ಅದು ತನ್ನದಲ್ಲ

ಯಾವುದೋ ಪರಪುಟ್ಟ ಕೋಗಿಲೆಯೆಂದು"[1] ಎಂದು ಅಣ್ಣ-ಅತ್ತಿಗೆಯರ ಬಣ್ಣದ ಬದುಕನ್ನು ನಿರಾಕರಿಸಿ ಸ್ವತಂತ್ರಳಾಗಿ ಸರಳ ವಿವಾಹದೊಂದಿಗೆ ಹೊಸ ಜೀವನವನ್ನು ಪ್ರಾರಂಭಿಸುತ್ತಾಳೆ. ವಿವಾಹ ಹೆಣ್ಣಿನ ಬಾಳಿನಲ್ಲಿ ಮುಖ್ಯವಾದ ಘಟ್ಟ. ಅಂತಹ ಸಮಯದಲ್ಲಿ ಮನೆಯವರ ಪ್ರೋತ್ಸಾಹ, ಸಹಕಾರ ಅವಶ್ಯ, ಆಯ್ಕೆಗಳು ಅವಳಿಗೆ ಮಾತ್ರ ಸೀಮಿತವಾಗಿರುತ್ತವೆ. ಸುಳ್ಳು ಸಂಬಂಧಗಳನ್ನು ತೊರೆದು ಅಚಲ ಗಟ್ಟಿಯಾಗುತ್ತಾಳೆ. ನೇಮಿಚಂದ್ರರು ಸ್ತ್ರೀ ಸ್ವಾತಂತ್ರದ ಕಡೆಗೆ ಧ್ವನಿ ಎತ್ತಿರುವುದನ್ನು ಇಲ್ಲಿ ಗಮನಿಸಬಹುದು.

೩೮-೩೯ರ ವಯಸ್ಸಿನ ಅಚಲ ತನ್ನ ಸಹೋದ್ಯೋಗಿ ಪ್ರಕಾಶನನ್ನು ಮದುವೆಯಾಗಲಿಚ್ಛಿಸಿದಾಗ ಅವಳ ಅಣ್ಣ ಅತ್ತಿಗೆ ತೋರುವ ಅನಿರೀಕ್ಷಿತ ಅಮಾನುಷ ಪ್ರತಿಕ್ರಿಯೆಯು ತನ್ನ ಅವರ ಸಂಬಂಧದ ನಿಜವಾದ ಸ್ವರೂಪವನ್ನು ತೆರೆದು ತೋರಿಸುತ್ತದೆ ಎಂದು ವಿಮರ್ಶಕ ಜಿ.ಎಸ್.ಅಮೂರರು ಅಭಿಪ್ರಾಯ ಪಡುತ್ತಾರೆ.

"ನನ್ನೆದೆಯ ಕದನದಲ್ಲಿ" ಕತೆಯು ಗಂಡನ ಅತ್ಯಾಚಾರದ ಬದುಕನ್ನು ಕಂಡು, ತಾನು ಅತ್ಯಾಚಾರಿಯ ಹೆಂಡತಿಯಾಗಲಾರದೆ ಕುಟುಂಬದಿಂದ ಹೊರ ಹೋಗುವ ಸ್ತ್ರೀಯ ಕತೆಯಾಗಿದೆ. ಗಂಡನು ವ್ಯಭಿಚಾರದ ಕ್ರಿಯೆಯಲ್ಲಿ ತೊಡಗಿದಾಗ ಅವಳ ಮನಸ್ಸಿನಲ್ಲಾಗುವ ಗೊಂದಲವನ್ನು ಕತೆಗಾರ್ತಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. "ಪದತಲದಲ್ಲೆ ನೆಲಬಾಯಿ ಬಿಟ್ಟಿತ್ತು, ಕಣ್ಣೇದುರೆ ಹೆಣವಾದ ಕನಸುಗಳು" ಕಿರಣನನ್ನು ನೆಲದಲ್ಲಿ ಹೂತು ಹಾಕುವ ಆಕ್ರೋಶ ಅವಳ ಕಣ್ಣುಗಳಲ್ಲಿ ಕಾಣುತ್ತದೆ. ಗಂಡನನ್ನು ಅನುಸರಿಸಿ ಬಾಳುವುದು ಅಸಾಧ್ಯವಾಗುತ್ತದೆ. ಅದಕ್ಕೆ ಲೇಖಕಿಯು ಈ ರೀತಿ ವಿವರಿಸುತ್ತಾರೆ. "ಗಂಡನನ್ನು ಸೂಳೆ ಮನೆಗೆ ಹೊತೊಯ್ದು ಕನ್ಯೆಯರು ಇರುವ ಈ ನಾಡಿನಲ್ಲಿ, ಸವತಿಯ ನಡುವೆಯೂ ಪತಿಯೇ ಪರದೈವವೆಂದು ಪೂಜಿಸುವ ಪುಣ್ಯಭೂಮಿಯಲ್ಲಿ, ನನಗೆ ಕ್ಷಮೆ ಇರುತ್ತದೆ" ಗಂಡನ ಯಾವುದೇ ಕಾರ್ಯಕ್ಕೂ ಹೆಂಡತಿಯ ಬೆಂಬಲಬೇಕು. ಅಲ್ಲದೆ ಎಂತಹುದೇ ಕೆಟ್ಟ ಕೆಲಸಕ್ಕೂ ಅವಳು ಅವನಿಗೆ ಸಹಕರಿಸಬೇಕು, ಆಗ ಅವಳು ಸಹಧರ್ಮಿಣಿಯಾಗುತ್ತಾಳೆ. ಈ ಸಂಪ್ರದಾಯಿಕ ನಡವಳಿಕೆಗೆ ವಿರೋಧ ಎಂಬಂತೆ ಈ ಕತೆಯ ನಾಯಕಿ ಮಿಹಿಕಾ ಗಂಡನನ್ನು ವಿರೋಧಿಸುತ್ತಾಳೆ. ಹೀಗೆ ವಿರೋಧಿಸುವ ಇಲ್ಲವೇ ಪ್ರಶ್ನಿಸುವ ಪ್ರಸಂಗಗಳು ಅವಳ ಜೀವನದಲ್ಲಿ ಬಂದರೂ ಆಕೆಯ ಹೆತ್ತವರು ಅವಳನ್ನು ನಿಯಂತ್ರಿಸುತ್ತಾರೆ. "ನಾನೆಂದೂ ನಾನಾಗಿ ನಾನೊಬ್ಬಳೇ

೧.ನೇಮಿಚಂದ್ರ; ತೆರೆಗಳು ಸರಿದವು, ಪುಟ-೩೩೭

ಯಾವ ನಿರ್ಧಾರವನ್ನು ತೆಗೆದುಕೊಂಡದ್ದಿಲ್ಲ, ನನ್ನ ಓದು, ಡಿಗ್ರಿ, ಕೈಹಿಡಿದ ಗಂಡ ಎಲ್ಲವೂ ಇತರ ಆಯ್ಕೆಯಾಗಿತ್ತು. ನನ್ನ ಅಭ್ಯಂತರವಿರಲಿಲ್ಲ. ನನ್ನ ನಿರ್ಧಾರಗಳ ಬಗ್ಗೆ ವಿಶ್ವಾಸ ಇರಲಿಲ್ಲವೊ ಗೊತ್ತಿಲ್ಲ, ಆದರೆ ಇಂದು ಇದು ನನ್ನೊಬ್ಬಳ ನಿರ್ಣಯ"[೧] ಸ್ತ್ರೀಯ ಎದೆಯ ಬಡಿತಕ್ಕೊಂದು ದನಿ ಬೇಕು. ಆ ದನಿಯ ಪರಿಸ್ಥಿತಿಯನ್ನು ಎದುರಿಸಿ ಆಸ್ಫೋಟಿಸಬೇಕು ಎಂಬ ಆಶಯ ಈ ಕತೆಯಲ್ಲಿದೆ.

'ನೀವು ಕಾಣದ ನಾಳೆಗಳಲ್ಲಿ' ಕತೆ ರಚಿಸುವಾಗ ನೇಮಿಚಂದ್ರರ ಹಾದಿ ಹೊಸದಾಗಿದೆ. ಮಗನನ್ನು ಕಟ್ಟೆಚ್ಚರದ ಕಣ್ಣುಗಾವಲಿನಲ್ಲಿ ಸಲಹಿದ ತಾಯಿ ಅವನ ಇಡೀ ಬದುಕು ತನ್ನ ನಿಯಂತ್ರಣದಲ್ಲಿ ಅರಳಬೇಕೆಂದು ನಿರೀಕ್ಷಿಸುತ್ತಾಳೆ. ಆದರೆ ಒಂದು ಹಂತದವರೆಗೆ ತಾಯಿಯ ಹಿಡಿತದಲ್ಲಿದ್ದ ರವಿ, ತನ್ನ ಬದುಕಿಗೆ ಇನ್ನೊಂದು ಜೀವ ಪ್ರವೇಶಿಸುತ್ತದೆ ಎಂಬ ನಿರೀಕ್ಷೆಯಲ್ಲಿ ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವ ಆಶಯ ವ್ಯಕ್ತಪಡಿಸುತ್ತಾನೆ. ಸಾಂಪ್ರದಾಯಿಕ ಆಲೋಚನೆಯ ಹೆಣ್ಣು-ಗಂಡು ಇಬ್ಬರೂ ಒಂದೇ ಪಾತಳಿಯಲ್ಲಿ ಯೋಚಿಸುತ್ತಾರೆ. ಇಲ್ಲಿ ಗಂಡಿಗೆ ವ್ಯವಸ್ಥೆಯು ಆ ಬಗೆಯ ಆಲೋಚನೆಯ ಮಾದರಿಗಳನ್ನು ನೀಡುತ್ತದೆ. ಎಲ್ಲ ಸಂದರ್ಭಗಳು ನಿರ್ಣಾಯಕ ಘಟಕವಾದ್ದರಿಂದ ಹೆಣ್ಣು ಆತನನ್ನು ಅನುಸರಿಸುತ್ತಾಳೆ. ಈ ಹಿನ್ನೆಲೆಯಲ್ಲಿ ರವಿಯ ತಾಯಿ ಮಗನ ಮೇಲೆ ಆತನ ಬದುಕಿನ ವಿಷಯವಾಗಿ ತನ್ನದೇ ಆದ ಕೆಲವು ನಿರ್ಧಾರಕ ಆಶಯಗಳನ್ನು ಹೇರಲು ಪ್ರಯತ್ನಿಸುತ್ತಾಳೆ. ಈ ಪ್ರಯತ್ನದ ಹಿಂದೆ ತಾನು ಗಂಡನ ನಿಯಂತ್ರಣದಲ್ಲಿ ಭಯದಲ್ಲಿ ಬೆಳೆದು ಬಂದವಳೂ ಎಂಬ ಪ್ರಜ್ಞೆಯಿದೆ. ಸ್ವತಂತ್ರವಾದ ಅನಿಸಿಕೆಗಳಿಗೆ ಗೌರವ ಕೊಡದ ಸಂದರ್ಭವು, ಉದ್ದಕ್ಕೂ ಅವಳನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿಸಿತ್ತು. ಗಂಡ ತನ್ನ ಮೇಲೆ ನಡೆಸಿದ್ದ ಅಧಿಕಾರವನ್ನು ಪ್ರೀತಿಯ ಹೆಸರಿನಲ್ಲಿ ಮಗನ ಮೇಲೆ ಪ್ರಯೋಗಿಸಲು ಇಚ್ಛಿಸುತ್ತಾಳೆ. ಇದು ಆಕೆಯ ಮಾನಸಿಕ ಸ್ಥಿತಿಗೆ ಸಂಬಂಧಿಸಿದ ಸಮಸ್ಯೆಯಾಗಿದೆ. ತಂದೆಯ ಒರಟು ಪ್ರಕ್ರಿಯೆಯು ಹಿಂದೆ ಸರಿದಿರುವುದು ಸಹಜವಾಗಿಯೇ ಇದೆ. ಏಕೆಂದರೆ ಅಂತಃಕರಣದ ಸಮಸ್ಯೆಯಲ್ಲಿ ಗಂಡಿಗಿಂತ ಹೆಣ್ಣು ಮುಂದಿರುತ್ತಾಳೆ. ಲೇಖಕಿ ಈ ಆಶಯವನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ.

"ಬದುಕು ಕಾಯುವುದಿಲ್ಲ" ಕತೆಯು ವಿಭಿನ್ನ ನೆಲೆಯ ಕುಟುಂಬದ ಚಿತ್ರಣ ನೀಡುತ್ತದೆ. ಇಲ್ಲಿ ದಾಂಪತ್ಯದ ಸಂದರ್ಭದಲ್ಲಿ ಅಸಮತೆಯಾಗಲಿ, ವಿಷಮತೆಯಾಗಲಿ ಇಲ್ಲ" ಎಂದು ಜಿ.ಎಸ್.ಅಮೂರರವರು ಅಭಿಪ್ರಾಯ ಪಡುತ್ತಾರೆ. ಏಕೆಂದರೆ ಸಂಯುಕ್ತ ವಿಶೂರ ನಡುವೆ ಪರಸ್ಪರ ತಿಳುವಳಿಕೆ ಇದೆ, ಗೌರವವಿದೆ. ಆರ್ಥಿಕವಾಗಿಯೂ ಇವರು ಸ್ವತಂತ್ರರು ಇಬ್ಬರಿಗೂ ತಮ್ಮದೇ ಆದ

೧.ನೇಮಿಚಂದ್ರ; ನನ್ನೆದೆಯ ಕದನದಲ್ಲಿ, ಪುಟ-೧೧೫

ವೃತ್ತಿಗಳಿವೆ. ಸಮಸ್ಯೆ ಇರುವುದು, ಅವರು ಪ್ರತಿನಿಧಿಸುವ ಜೀವನ ದೃಷ್ಟಿಯಲ್ಲಿ ಸಂಯುಕ್ತಾಗೆ ಬದುಕು ಮುಖ್ಯ. ಅದು ಯಾರಿಗೂ ಕಾಯುವುದಿಲ್ಲ ಎನ್ನುವುದು ಅವಳ ಜೀವನದ ನಿಲುವು. ಆ ಸತ್ಯ ವಿಶೂಗೂ ತಿಳಿದಿದೆ. ಆದರೆ ಅವನು ಯಶಸ್ಸಿನ ಬೆನ್ನು ಹತ್ತಿದ್ದಾನೆ. ಅವನಿಗೆ ಪುರುಸೊತ್ತಿಲ್ಲ, ವೈವಾಹಿಕ ಜೀವನದ ಹತ್ತು ವರ್ಷಗಳ ನಂತರ ಅವರು ಎರಡನೆಯ ಮಧುಚಂದ್ರಕ್ಕೆಂದು ಗೋವಾಗೆ ಬರುತ್ತಾರೆ. ಆದರೆ ವಿಶೂ ಕಛೇರಿಯ ಬೇತಾಳವನ್ನು ಹೊತ್ತುಕೊಂಡೇ ಬರುತ್ತಾನೆ. ಈ ತಣ್ಣನೆಯ ನುಣ್ಣನೆಯ ಮರಳಲ್ಲೂ ಅವನಿಗೆ ಕಛೇರಿಯ ತಿರುಗು ಕುರ್ಚಿಯಲ್ಲಿ ಕುಳಿತಂತೆ ಚಡಪಡಿಕೆ, ಮುಂದಿನವರನ್ನೆಲ್ಲ ಹಿಂದೆ ಹಾಕುವ ಛಲದಲ್ಲಿ, ಬೆನ್ನ ಹಿಂದಿನವರನ್ನೆಲ್ಲ ಅಡ್ಡಕಟ್ಟಿ ಓಡುವ ಜಯದಲ್ಲಿ, ಓಟದ ಖುಷಿಯನ್ನೇ ಮರೆತವನು. ಅವನು ಬದುಕಿನ ಸೌಂದರ್ಯಕ್ಕೆ ವಿಮುಖನಾಗಿದ್ದಾನೆ. ಗಂಡನ ಮನಃಸ್ಥಿತಿಯನ್ನು ಬೇರೆಡೆಗೆ ತರಲು ಮಾಡಿದ ಸಂಯುಕ್ತಾಳ ಪ್ರಯತ್ನ ವಿಫಲವಾಗುತ್ತದೆ. ಹಣವೇ ಮನುಷ್ಯನ ಬದುಕನ್ನು ನಿಯಂತ್ರಿಸುತ್ತದೆ ಎನ್ನುವ ನಿಲುವು ವಿಶುದಾದರೆ, ಮಾನವೀಯತೆಯ ಬದುಕನ್ನು ಅರಸುವುದು ಸಂಯುಕ್ತಾಳದು. ಹೀಗೆ ದ್ವಿಮುಖ ಚಲನೆಯ ದಂಪತಿಗಳ ಚಿತ್ರಣ ಕತೆಯಲ್ಲಿದೆ.

"ಸಾವಿನತ್ತ ಒಂದು ಹೆಜ್ಜೆ" ಕಥೆಯಲ್ಲಿ ಪ್ರೇಮ ಸಫಲವಾಗದ ಕಾರಣ ಶಶಿಯು ಆತ್ಮಹತ್ಯೆಗೆ ಈಡಾಗುತ್ತಾಳೆ. ಈ ಸಾವಿನಿಂದ ಪಾಠ ಕಲಿತ ರವಿಯೂ ಸುಧಾಳ ನಿರಾಕರಣೆಯಲ್ಲಿಯೂ ಬದುಕಬೇಕೆಂಬ ಆತ್ಮವಿಶ್ವಾಸ ಹೊಂದುತ್ತಾನೆ. ಆತ್ಮಹತ್ಯೆಯ ಮೂಲಕ ಬದುಕಿನ ಅಂತ್ಯವನ್ನು ಒಪ್ಪದ ಲೇಖಕಿ ಜೀವನೋತ್ಸಾಹದ ಬದುಕನ್ನು ಇಚ್ಛಿಸುತ್ತಾರೆ. ಇದೊಂದು ತ್ರಿಕೋನ ಪ್ರೇಮಕತೆಯಾದರೂ ದುರಂತದಲ್ಲಿ ಸುಖಾಂತವನ್ನು ಕಾಣಬಹುದು. ಭಗ್ನಪ್ರೇಮದಿಂದಾಗಿ ಸಾವಿನತ್ತ ಹೆಜ್ಜೆ ಹಾಕಿದ ರವಿಯೂ ಮರಳಿ ಬದುಕಿನತ್ತ ಸಾಗುತ್ತಾನೆ. ಲೇಖಕಿಯೂ ಬದುಕಿನಲ್ಲಿ ಆತ್ಮವಿಶ್ವಾಸ, ನಿಸ್ವಾರ್ಥದ ಬದುಕಿಗೆ ಒತ್ತು ಕೊಟ್ಟಂತೆ ತೋರುತ್ತದೆ. ತಾನು ಪ್ರೀತಿಸುವ ಸುಧಾ ಬೇರೊಬ್ಬರೊಂದಿಗೆ ವಿವಾಹವಾಗಲು ನಿಶ್ಚಯಿಸಿದಾಗ ರವಿಗೆ ಆತಂಕವಾಗುವುದಿಲ್ಲ. ಶಶಿಯ ಸಾವಿನಿಂದ ಅವನು ಕಲಿತ ಪಾಠ ಬದುಕಿನಲ್ಲಿ ಎಂತಹುದೇ ಸಮಸ್ಯೆಗಳು ಎದುರಾದರೂ ಸಮಸ್ಯೆಗೆ ವಿಮುಖನಾಗಿರದೇ ಧೈರ್ಯವಾಗಿ ಎದೆಗುಂದದೇ ಬದುಕನ್ನು ಸ್ವೀಕರಿಸಬೇಕು ಎಂಬ ಪಾಠವನ್ನು ಕಲಿಯುತ್ತಾನೆ. ಸುಧಾಳ ಮೇಲಿನ ಪ್ರೀತಿ ಯಾವಾಗಲೂ ಅವನ ಎದೆಯ ಆಳದಲ್ಲಿ ಶಾಶ್ವತವಾಗುಳಿಯುತ್ತದೆ. ಬದುಕಿನ ಬಗ್ಗೆ ಆತ ನಿರ್ಧರಿಸಿದ ನಿಲುವು ಮಾತ್ರ ಸಾಯುತ್ತದೆ.

ಶಶಿ ತಂದೆಯನ್ನು ಕಳಕೊಂಡು ಅನಾಥಳಾಗಿದ್ದಾಳೆ. ಬಿ.ಎಸ್ಸಿ.ವರೆಗೂ ಶಿಕ್ಷಣ ಹೊಂದಿದ ಶಶಿಗೆ ಬದುಕಿನ ಬಗ್ಗೆ ನಿರಾಸಕ್ತಿ, ಏಕೆಂದರೆ 'ಅಪ್ಪ ಇದ್ದಿದ್ದರೆ'. . . .. . ಎಂದು ಭಾವುಕಳಾಗಿ ನುಡಿಯುತ್ತಾಳೆ. ಸಾವಿನ ಬಗ್ಗೆ ಸಿದ್ಧಾಂತವನ್ನು ಪ್ರಾರಂಭಿಸಿ ಬಿಡುತ್ತಾಳೆ. ಅವಳದೇ ಮಾತುಗಳಲ್ಲಿ ಹೇಳುವುದಾದರೆ "ಬದುಕಲಾಗದವರು ಸಾಯುತ್ತಾರೆ ಅನ್ನೋದು ಮೂರ್ಖತನ. ನಿಜವಾಗಿ ನೋಡಿದರೆ ಸಾಯಲಾರದವರಷ್ಟೇ ಬದುಕುತ್ತಾರೆ. ನೋಡು ಅತ್ತೆ ಬದುಕಿದ್ದಾಳೆ, ಮೂರು ಕಾಸು ಕೈಗೆ ಹಾಕದ ಮುಂಗೋಪಿ ಮಾವನೊಡನೆ. ಅಪ್ಪನನ್ನು ಕಳಕೊಂಡೂ ಅಮ್ಮ ಬದುಕಿದ್ದಾಳೆ. . . .ಏನೋ ಸುಖ ದೋಚಿಕೊಳ್ಳಲು ನಿಧಿಯಾಗಿ ಕಾದಿದೆ ಎಂಬ ಕಾರಣಕ್ಕಲ್ಲ, ಕೇವಲ ಸಾಯಲಾರದೆ. . . . . ."[೧] ಬದುಕಿನ ನೋವುಗಳನ್ನು, ಸೋಲುಗಳನ್ನು ಸವಾಲಿನಂತೆ ಸ್ವೀಕರಿಸಬೇಕು ಶಶಿ ಎಂದು ಭಾಷಣ ಬೀಗಿದ್ದ ರವಿಯೇ ಶರಣಾಗ ಬಯಸುತ್ತಾನೆ. ಬದುಕಿನಲ್ಲಿ ತುಂಬಾ ಆಶಾವಾದಿಯಾದ ರವಿ, ಸುಧಾ ಅವನ ಪ್ರೀತಿಯನ್ನು ನಿರಾಕರಿಸಿದಳೆಂದು ಸಾವಿನ ಕಡೆಗೆ ಮುಖ ಮಾಡುತ್ತಾನೆ. ಶಶಿಯ ಸಾವು ರವಿಯನ್ನು ಆತಂಕಕ್ಕೀಡು ಮಾಡುತ್ತದೆ. "ಸಾಯುವ ಹಕ್ಕು ನಮಗಿರಬಹುದು, ಇತರರಿಗೆ ಇಷ್ಟು ನೋವುಣಿಸುವ ಹಕ್ಕು ಇದೆಯೇ? . . . . . . ಎಲ್ಲವನ್ನು ತ್ಯಜಿಸಿ ನಾ ಸಾಯುತ್ತಿಲ್ಲ, ಎಲ್ಲವನ್ನು ಬಯಸಿ ಸಾಯುತ್ತಿರುವೆ"[೨] ಎನ್ನುತ್ತಾನೆ. ಬದುಕಿನಲ್ಲಿ ಅಂದುಕೊಂಡದ್ದು ಆಗಲಾರದಾಗ, ಬಯಸಿದ್ದು ಸಿಗದಾಗ, ಬದುಕು ನಿರಾಕರಣೆ ಮಾಡುವುದು ಸರಿಯಲ್ಲ. ಬದುಕಿನಲ್ಲಿ ಪ್ರೇಮ, ಮದುವೆ, ನಿರಾಕರಣೆಯಾದರೆ ಜೀವನವನ್ನೇ ನಿರಾಕರಿಸಬಾರದು ಎಂದು ಲೇಖಕಿ ಬದುಕಿನ ಬಗ್ಗೆ ಮಹತ್ವಾಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

ಪೀಠಿಕೆ, ಪ್ರಾರಂಭ, ಪುನರಾರಂಭ ಎಂಬ ಮೂರು ಭಾಗಗಳಲ್ಲಿ ವಿಸ್ತರಿಸಿರುವ "ಇತಿಹಾಸದಂಚಿನಲ್ಲಿ" ಹೊಸತನದ ಕತೆಯು ಬದುಕಿನ ಸಣ್ಣಪುಟ್ಟ ತೊಂದರೆಗಳನ್ನು ಬೃಹದಾಕಾರದ ಸಮಸ್ಯೆ ಎಂದು ಎದುರಿಸುವ ದಂಪತಿಗಳ ಕತೆಯಿದು. ಮಕ್ಕಳ ಸರ್ವಾಂಗೀಣ ಬೆಳವಣಿಗೆಗೆ ಹೆತ್ತವರ ಸಹಕಾರ ಅತ್ಯಗತ್ಯ. ಆದರೆ ತಾವು ಹೇಳಿದ ಮಾರ್ಗದಲ್ಲಿಯೇ ಮಕ್ಕಳು ನಡೆಯಬೇಕು ಎಂಬ ಹಠ ಒಳ್ಳೆಯದಲ್ಲ ಎಂಬುದನ್ನು ಕತೆಯು ಹೇಳುತ್ತದೆ. ಶಶಿ ಮತ್ತು ಕಿರಣ್ ಉದ್ಯೋಗಸ್ಥರು, ಮಗ ರವಿಯು ತಮ್ಮಂತೆ ಸಾಫ್ಟವೇರ್ ಇಂಜೀನಿಯರ್ ಆಗಬೇಕೆಂದು ಆತನ ಮೇಲೆ ತೀವ್ರ ಒತ್ತಡ ಹೇರುತ್ತಾ ಮಗನ ಭವಿಷ್ಯದ ಬಗ್ಗೆ ದಂಪತಿಗಳು ತುಂಬಾ ಆಸೆ, ಆಕಾಂಕ್ಷೆ, ನಿರೀಕ್ಷೆಗಳನ್ನಿಟ್ಟು ಕೊಂಡಿರುತ್ತಾರೆ. ಆದರೆ ರವಿ ಇವರ ಯೋಚನೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾನೆ.

೧.ನೇಮಿಚಂದ್ರ; ಸಾವಿನತ್ತ ಒಂದು ಹೆಜ್ಜೆ, ಪುಟ-೨೧೨
೨.ಅದೇ, ಪುಟ-೨೨೦

ತಾವು ಮಗನನ್ನು ಬೆಳೆಸುವ ಹಾದಿಯಲ್ಲಿ ಎಲ್ಲಾದರೂ ತಪ್ಪಿದ್ದೇವೆಯೇ ಎಂದು ತಮ್ಮ ಬದುಕನ್ನೊಮ್ಮೆ ಪುನರಾವಲೋಕಿಸಿಕೊಳ್ಳುತ್ತಾರೆ. ಆದರೆ ಅದರ ಸುಳಿವು ಸಿಗುವುದಿಲ್ಲ. ಕಿರಣ್ ಮಗನ ಅನುಚಿತ ವರ್ತನೆಯಿಂದ, ಪರಿಸ್ಥಿತಿಯಿಂದ ಬೇರಾಗಲು ಆಶ್ರಮವಾಸಿಯಾಗುತ್ತಾನೆ. ಆದರೆ ಶಶಿ ಕುಟುಂಬವನ್ನು ತಿಳಿಯಾದ ಪರಿಸ್ಥಿತಿಗೆ ಮತ್ತೆ ತರಲು ಅಲ್ಲಿಯೇ ನೆಲೆಯೂರುತ್ತಾಳೆ.

ಲೇಖಕಿಯೇ ಹೇಳುವಂತೆ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಚೇತರಿಸಿಕೊಳ್ಳಲು ಡೆಮಿಂಗ್ ಅವರ ಸಿದ್ಧಾಂತಗಳನ್ನು ಅಳವಡಿಸಿಕೊಂಡಿರುವಂತೆ, ಹಾಗೆ ಭಾರತಕ್ಕೆ ಬರಲು ನಿರಾಕರಿಸಿದನಂತೆ. ಏಕೆಂದರೆ ಸಿದ್ಧಾಂತಗಳಿಗೆ ಜನ ತಯಾರಿರಬೇಕು. ಇಡೀ ದೇಶ ಸಿದ್ಧವಿರಬೇಕು. ಅದಿಲ್ಲದೆ ಪ್ರವಚನಗಳು ಪವಾಡ ಮಾಡಲಾರವು. ಹೀಗೆ "ಅವನ ಬದುಕಿನ ಆಗು ಹೋಗುಗಳಿಗೆ ಅವನೂ ಜವಾಬ್ದಾರ. ದಾರಿ ತೋರಬಲ್ಲೆವು. ನಡೆಯಬೇಕಾದವನು ಅವನು ಮಾತ್ರ ಅವನ ಕಾಲುಗಳ ಮೇಲೆ, ಮಡಿಲಲ್ಲಿ ಹೆಗಲಲ್ಲಿ ಹೊತ್ತೊಯ್ಯುವ ಕಾಲ ಆಯಿತಲ್ಲ, ಕಿರಣಾ ಕೊಡುವ ಕೈ ದೊಡ್ಡದಿರಬಹುದು?" ಪಡೆವ ಹಸ್ತಗಳ ಮಿತಿಗೇನು ಮಾಡುವುದು, ಎಂದು ಗಂಡನನ್ನು ಸಹಜ ಸ್ಥಿತಿಗೆ ತರಲು ಶಶಿ ಪ್ರಯತ್ನಿಸುತ್ತಾಳೆ.

ಹೀಗೆ ಆಧುನಿಕ ಮಹಿಳಾ ಪ್ರಜ್ಞೆಯು ವಿವಿಧ ನೆಲೆಗಳಲ್ಲಿ ನೇಮಿಚಂದ್ರ ಅವರ ಕತೆಗಳಲ್ಲಿ ಅಭಿವ್ಯಕ್ತವಾಗಿದೆ. ಸಾಹಿತ್ಯ ಸಂದರ್ಭದಲ್ಲಿ ನವೋದಯ ಕಾಲ ಘಟ್ಟದಿಂದಲೇ ನಮ್ಮಲ್ಲಿ ಆಧುನಿಕವೆನ್ನಬಹುದಾದ ವಿಚಾರಗಳು ಪ್ರತಿಪಾದಿತವಾಗ ತೊಡಗಿವೆ. ಅವುಗಳಲ್ಲಿ ಪುರುಷರ ಅಭಿವ್ಯಕ್ತಿಯೂ ಇದೆ. ನವೋದಯದ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹದಂತಹ ವಿಚಾರಗಳು ಒಂದು ರೀತಿಯ ಸುಧಾರಣಾವಾದಿ ನಿಲುವಿನಲ್ಲಿ ಅಭಿವ್ಯಕ್ತಗೊಂಡವು. ಆರಂಭ ಘಟ್ಟದ ನಮ್ಮ ಕಾದಂಬರಿಗಳು ಇದಕ್ಕೆ ಸೂಕ್ತ ಉದಾಹರಣೆಗಳಾಗಿ ನಿಲ್ಲುತ್ತದೆ. ಮುಂದೆ ವೇಶ್ಯಾ ಸಮಸ್ಯೆಯು ಸಾಹಿತ್ಯದಲ್ಲಿ ಪ್ರವೇಶ ಪಡೆಯಿತು. ಪ್ರಗತಿಶೀಲ ಕಾಲಘಟ್ಟದಲ್ಲಿ ಅದರೊಂದಿಗೆ ಲೈಂಗಿಕತೆಯ ವಿಚಾರಗಳು ಪ್ರತಿಪಾದಿತವಾಗತೊಡಗಿದವು. ನವ್ಯ ಸಂದರ್ಭದಲ್ಲಿ ಮಹಿಳಾ ಪ್ರಜ್ಞೆಯು ಆತ್ಮಶೋಧಕ್ಕೆ ಒಳಗಾಯಿತು. ನವ್ಯ ಕಾಲಘಟ್ಟದಲ್ಲಿ ಆಧುನಿಕ ರೀತಿಯಲ್ಲಿ ಬರೆಯುತ್ತಿದ್ದ ಕೆಲವು ಲೇಖಕಿಯರಿಗೆ ನವ್ಯೋತ್ತರದ ದಲಿತ ಬಂಡಾಯ ಚಳುವಳಿಗಳು ಹೊಸ ಹುರುಪನ್ನು ನೀಡಿದವು. ಜೊತೆಗೆ ಈಗಿನ ಸ್ತ್ರೀವಾದಿ ವಿಚಾರಧಾರೆಗಳು ಸೇರಿಕೊಂಡು ಸಾಹಿತ್ಯದಲ್ಲಿ ಇಂದು ಮಹಿಳಾ ಪ್ರಜ್ಞೆಯೆಂಬುದು ಹೆಚ್ಚು ನಿಖರತೆಯನ್ನು ಪಡೆದುಕೊಂಡಿದೆ. ಹಾಗಾಗಿ ಇವತ್ತಿನ ಮಹಿಳಾ ಪ್ರಜ್ಞೆ ಎಂಬುದು ಕೇವಲ ಆಧುನಿಕವಷ್ಟೇ ಅಲ್ಲದೆ ಸಮಕಾಲೀನವು ಹೌದು. ಅದು ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ ಹಾಗೂ ಸಮನ್ವಯಗಳೆರಡನ್ನು ಒಳಗೊಂಡ ಮಹಿಳಾ ಪ್ರಜ್ಞೆ ಪ್ರಸ್ತುತ ನೇಮಿಚಂದ್ರ

ಅವರು ತಮ್ಮ ಕತೆಗಳ ಮೂಲಕ ಅಭಿವ್ಯಕ್ತಿಸುವ ಮಹಿಳಾ ಪ್ರಜ್ಞೆಯು ಅಂತಹುದೇ ಆಗಿದ್ದು ಗಮನ ಸೆಳೆಯುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳಿಗೆ ಒಂದು ಪರಂಪರೆ ಇದೆ. ಜನಪದ ಸಾಹಿತ್ಯದಲ್ಲಂತೂ ಮಹಿಳೆ ಮನಬಿಚ್ಚಿ ಮಾತನಾಡಿದ್ದಾಳೆ. ಆದರೆ ಮಹಿಳಾ ಸಂವೇದನೆ, ಮಹಿಳಾ ಪ್ರಜ್ಞೆ ಎಂಬಿವುಗಳು ಅಧ್ಯಯನ ಕ್ರಮ ರೂಪುಗೊಂಡ ನಂತರದ ಪರಿಭಾಷೆ, ಪರಿಕಲ್ಪನೆಗಳು. ಆಧುನಿಕ ವಚನ ಚಳುವಳಿಯ ಕಾಲದಲ್ಲಿ ಸ್ತ್ರೀ ಸಂವೇದನೆಯ ವಿಶಿಷ್ಟ ಅಭಿವ್ಯಕ್ತಿ ನಮ್ಮ ಸಾಹಿತ್ಯ ಕೃತಿಗಳಲ್ಲಿ ಪ್ರಾರಂಭವಾದುದು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನವೋದಯ ಕಾಲದಿಂದಲೇ ಈ ತೆರನಾದ ಪ್ರಜ್ಞೆ-ಸಂವೇದನೆಗಳನ್ನು ನಾವು ಗುರುತಿಸಬಹುದಾಗಿದೆ. ನಂತರದ ಪ್ರಗತಿಶೀಲ, ನವ್ಯ, ನವ್ಯೋತ್ತರ ಸಾಹಿತ್ಯ ಪಂಥಗಳಲ್ಲಿ ಅದು ಇನ್ನಷ್ಟು ನಿಖರತೆಯನ್ನು ಪಡೆದುಕೊಂಡಿತು. ಪ್ರಸ್ತುತ ನೇಮಿಚಂದ್ರ ಅವರು ನವ್ಯೋತ್ತರ ಸಂದರ್ಭದ ಬರಹಗಾರ್ತಿಯರಲ್ಲಿ ಪ್ರಮುಖರು.

ನೇಮಿಚಂದ್ರರ ಕತೆಗಳ ಬಗೆಗೆ ವಿಮರ್ಶಕರು ವ್ಯಕ್ತಪಡಿಸುವ ಅಭಿಪ್ರಾಯಗಳು ಇಲ್ಲಿ ಮುಖ್ಯವೆನಿಸುತ್ತವೆ. "ಕನ್ನಡದ ಹೊಸ ಪೀಳಿಗೆಯ ಕತೆಗಾರ್ತಿಯರಲ್ಲಿ ಗಮನಾರ್ಹರಾದ ನೇಮಿಚಂದ್ರ ಅವರ ಬರವಣಿಗೆ ಹೆಣ್ಣಿನ ಮನಃಸ್ಥಿತಿ ಆಶೋತ್ತರಗಳ ಧ್ಯಾನವೇ ಆಗಿದ್ದರೂ ಅದೆಂದೂ ಸರಳವಾದ ಸ್ತ್ರೀಪರ, ಪುರುಷ ವಿರೋಧಿ ಘೋಷಣೆ ಅಥವಾ ತೀರ್ಮಾನಗಳಲ್ಲಿ ಸಡಿಲವಾಗಿಲ್ಲ. ಗಂಡು – ಹೆಣ್ಣಿನ ನಡುವಣ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ ಸಮಾನ ಸ್ತರದ ಬದುಕು ನಡೆಸಬೇಕಾದ ಕ್ಷಣಗಳಿಗಾಗಿ ಅವರು ಹುಡುಕುತ್ತಿದ್ದಾರೆ. ಈ ಸೃಜನಶೀಲ ಹುಡುಕಾಟವೇ ನೇಮಿಚಂದ್ರರ ಬರವಣಿಗೆಯನ್ನು ಪ್ರಭಾವಿಸಿವೆ"[೧] ಟಿ.ಪಿ.ಅಶೋಕ್ ಅವರ ಮಾತುಗಳು ಲೇಖಕಿಯ ಕತೆಗಳನ್ನು ಅರ್ಥೈಯಿಸಿಕೊಳ್ಳುವಲ್ಲಿ ನೆರವಾಗುತ್ತವೆ.

ನವ್ಯ ಸಂದರ್ಭದ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ನೇಮಿಚಂದ್ರರ ಧ್ವನಿ ವೀಣಾ ಶಾಂತೇಶ್ವರ ನಂತರ ಬಂದ ಎಲ್ಲಾ ಲೇಖಕಿಯರಿಗಿಂತ ಹೆಚ್ಚು ಹೊಸತಾಗಿ ಸ್ಪಷ್ಟವಾಗಿ ಕೇಳಿಬರುತ್ತದೆ. ಹೊಸ ಸಾಮಾಜಿಕ ಸಂದರ್ಭದಲ್ಲಿ ನೈತಿಕತೆಯ ಪ್ರಜ್ಞೆಯನ್ನು ಮುಚ್ಚುಮರೆಯಿಲ್ಲದೆ ಎದುರಿಸುವ ಮೂಲಕ, ಈ ಕತೆಗಾರ್ತಿ ತಮ್ಮ ವೈಶಿಷ್ಟ್ಯವನ್ನು ಗಳಿಸಿಕೊಂಡಿದ್ದಾರೆ. ಸಹಜ ಪ್ರತಿಭೆಯುಳ್ಳ ಈ ಲೇಖಕಿ ಕನ್ನಡಕ್ಕೆ ಉತ್ತಮ ಕತೆಗಳನ್ನು ನೀಡಿದ್ದಾರೆ.

ಇವರು ಸಂಪೂರ್ಣವಾಗಿ ಪುರುಷರನ್ನು ವಿರೋಧಿಸುವುದಿಲ್ಲ. ಶೋಷಣೆಯ ನೆಲೆಯನ್ನು

೧.ಟಿ.ಪಿ.ಅಶೋಕ್; ಸಾಹಿತ್ಯ ಸಂವಾದ, ಪುಟ-೧೧೪

ವಿರೋಧಿಸುತ್ತಾರೆಂಬ ಅಂಶವು ಲೇಖಕಿಯು ಸೃಷ್ಟಿಸಿದ 'ನನ್ನದಲ್ಲದ ಬದುಕಿಗಾಗಿ' ಕತೆಯು ರಮೇಶ, 'ಹೊಸ ಹುಟ್ಟು' ಕತೆಯ ರವಿ, 'ಮರಳಿ ಬದುಕಿಗೆ ಈ ಪಯಣ' ಕತೆಯ ರಿಪುದಮನ್‌ಸಿಂಗ್ ಇತ್ಯಾದಿ ಪೋಷಕ ಪಾತ್ರಗಳ ಮೂಲಕ ಮನದಟ್ಟಾಗುತ್ತದೆ. ನೇಮಿಚಂದ್ರ ಕನ್ನಡದ ಹೊಸ ತಲೆಮಾರಿನ ಕತೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆಯ ಪ್ರತಿಪಾದಕಿಯಂತೆ ತಮ್ಮ ಕತೆಗಳನ್ನು ಸ್ಪಷ್ಟವಾಗಿ ರಚಿಸಿದ್ದಾರೆ. ನೇಮಿಚಂದ್ರರ ಕತೆಗಳ ನಾಯಕಿಯರು ಮಧ್ಯಮ ವರ್ಗದ ಶಿಕ್ಷಿತ, ಸಂಪಾದಿಸುವ ಹೆಣ್ಣುಗಳಾದ್ದರಿಂದ ಅವರಿಗೆ ಬದುಕನ್ನು ತರ್ಕಬದ್ಧವಾಗಿ ನೋಡುವುದು ಅನಿವಾರ್ಯವಾಗುತ್ತದೆ. 'ನನ್ನದಲ್ಲದ ಬದುಕಿಗಾಗಿ' ಕತೆಯ ಸರೂ 'ಹೊಸ ಹುಟ್ಟು' ಕತೆಯ ಶಶಿ, 'ಕೆಂಪು ಕಲಕಿದ ನೀರು' ಕತೆಯ ಶೀಲಾ ಇತ್ಯಾದಿ ಪಾತ್ರಗಳು ಇದಕ್ಕೆ ಮಾದರಿಯಾಗಿವೆ. ಪರಂಪರಾಗತ ಸ್ತ್ರೀ–ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿ ಕೈಗೊಳ್ಳುವ ನಿಲುವುಗಳನ್ನು ಲೇಖಕಿ ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ. ಸ್ತ್ರೀಪರ ಕಾಳಜಿಯ ದೃಷ್ಟಿಯಿಂದ ಮೆಚ್ಚಬೇಕಾದ ಕತೆಗಳನ್ನು ಬರೆದಿರುವ ನೇಮಿಚಂದ್ರ ಅವರಲ್ಲಿ ಹೊಸ ಹೊಸ ವಸ್ತುಗಳನ್ನು ಪ್ರಸ್ತುತ ಪಡಿಸುವ ಕಲೆಗಾರಿಕೆ ಇದೆ. ಸ್ತ್ರೀವಾದಿ ಚಿಂತನೆಯಿಂದಲೇ ಮೂಡಿಬರುವ ಇವರ ಕತೆಗಳಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಹಾಗೂ ಅವರಿಗೆ ಎದುರಾಗುವ ನಿರ್ಬಂಧಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಇದೆ. ಸ್ತ್ರೀವಾದಿ ಚಿಂತನೆಗಳನ್ನು ಪ್ರತಿನಿಧಿಸುವ ಪಾತ್ರ, ಸನ್ನಿವೇಶ, ಸಂಭಾಷಣೆಗಳನ್ನು ಅವರು ತಮ್ಮ, ಈ ಕೆಳಗಿನ ಕತೆಗಳಲ್ಲಿ ನಿರೂಪಿಸಿದ್ದಾರೆ. ನನ್ನದಲ್ಲದ ಬದುಕಿಗಾಗಿ, ಸಾವಿನತ್ತ ಒಂದು ಹೆಜ್ಜೆ, ಬದುಕು ಕಾಯುವುದಿಲ್ಲ, ಹೊಸಹುಟ್ಟು ಈ ಕಥೆಗಳನ್ನು ಹೆಸರಿಸಬಹುದು.

ಘಟನೆ ಇಲ್ಲವೆ ಪ್ರಕರಣವೊಂದರಿಂದ ಕತೆಗಳು ಪ್ರಾರಂಭವಾಗುವುದನ್ನು ಇವರ ಬಹುತೇಕ ಕತೆಗಳಲ್ಲಿ ಗುರುತಿಸಬಹುದು. ನೇಮಿಚಂದ್ರರ ಕಥನಶೈಲಿ, ಸಂಭಾಷಣೆಯಲ್ಲಿ ಸರಳತೆ ಇದ್ದು, ಹೇಳಬೇಕಾದುದನ್ನು ನೇರವಾಗಿ ಹೇಳುವುದರಿಂದ ಇವರ ಕತೆಗಳಿಗೆ ಜೀವಂತಿಗೆಯನ್ನು ನೀಡಿವೆ. ಹೊಸದುದರ ಕಡೆಗೆ ಮಿಡಿತ ಇರುವುದನ್ನು ಇವರ ಹಲವು ಕತೆಗಳ ಸಂಭಾಷಣೆಯಿಂದ ತಿಳಿಯಬಹುದು. ದಾರ್ಶನಿಕರ, ಮಹಾವ್ಯಕ್ತಿಗಳ ಹೇಳಿಕೆ, ವಾಕ್ಯಗಳನ್ನು ಕತೆಯ ಮಧ್ಯದಲ್ಲಿ ಇಲ್ಲವೇ ಅಂತ್ಯದಲ್ಲಿ ಬಳಸುವುದರಿಂದ ಇವರ ಕತೆಗಳು ಓದುಗರ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತದೆ. ಹಾಗೂ ಲೈಂಗಿಕತೆಯ ವಿಚಾರಗಳನ್ನು ಸೂಚ್ಯವಾಗಿ ಹೇಳಿಬಿಡುವ ಕುಶಲತೆಯನ್ನು ಕಾಣಬಹುದು. ನಗುವುದು, ಅಳುವುದು ತಮ್ಮ ಭಾವನೆಗಳನ್ನು ಪ್ರಕೃತಿಯ ಸಹಜ ಕ್ರಿಯೆಗಳು. ಪುರುಷ ಸಂಸ್ಕೃತಿಯ ಯಜಮಾನ್ಯವನ್ನು ಯಾವುದೇ ಹಿಂಜರಿಕೆಯಿಲ್ಲದೆ ತಮ್ಮ ಕತೆಗಳ ಮೂಲಕ ದಿಟ್ಟತನದಿಂದ

ವಿವರಿಸುತ್ತಾರೆ. ಮೌನವಾಗಿರುವುದು ಸಹ್ಯವಾಗದ ಗುಣ. 'ಕಪ್ಪು ಮೋಡ ಬೆಳ್ಳಿ ಅಂಚು' ಕತೆಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಚರ್ಚೆ ನಡೆಸಿದ್ದಾರೆ. ಪುರುಷರ ಸಹಾನುಭೂತಿಯ ಜೀವನ ನಿರ್ವಹಣೆಯನ್ನು ವಿರೋಧಿಸುತ್ತಾಳೆ. ನಿನಗಾಗಿ, ನಿನ್ನ ಬದುಕಿಗಾಗಿ, ಜೀವನದ ಸೋಲುಗಳನ್ನೆಲ್ಲ ಸವಾಲಾಗಿ ಸ್ವೀಕರಿಸಿ ಬದುಕಬೇಕೆಂದು ಕತೆಯ ಅಂತಿಮ ಸಾರಾಂಶವಾಗಿ ಮೂಡಿಬಂದಿದೆ. ಸ್ತ್ರೀಯು ಮೌನವಾಗಿದ್ದು ಅನುಭವಿಸುವ ವೇದನೆಗಳನ್ನು ತಮ್ಮ ಕತೆಗಳಲ್ಲಿ ದಟ್ಟವಾಗಿ ಚಿತ್ರಿಸಿದ್ದಾರೆ ನೇಮಿಚಂದ್ರ.

ಇವರು ಕತೆಗಳಲ್ಲದೆ ಇನ್ನಿತರ ಬರಹಗಳಾದ ಜೀವನಚರಿತ್ರೆ ಅನುವಾದದಲ್ಲಿಯೂ ಕೂಡ ಸ್ತ್ರೀಪ್ರಜ್ಞೆ, ಸ್ತ್ರೀ ಸಂವೇದನೆ ಪ್ರಮುಖವಾಗಿರುವುದನ್ನು ಗಮನಿಸಬಹುದು. ಅದರಲ್ಲೂ ಸಾಧನೆ ಮಾಡಿದ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಮಹನೀಯ ಮಹಿಳೆಯರನ್ನು ಗುರುತಿಸಿ ಅವರ ವ್ಯಕ್ತಿತ್ವವನ್ನು ಸಮಾಜಕ್ಕೆ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವಂತಹ ಕತೆಗಳನ್ನೇ ನೇಮಿಚಂದ್ರರು ರಚಿಸಿರುವುದು ಶ್ಲಾಘನೀಯ.

ವೀಣಾಶಾಂತೇಶ್ವರ ಅವರ 'ಗಂಡಸರು' ಕಾದಂಬರಿಯಲ್ಲಿ ಕಥಾನಾಯಕಿ ಶಾಂತಿಯು ತನ್ನ ಅಸ್ತಿತ್ವಕ್ಕಾಗಿ ತೆಗೆದುಕೊಳ್ಳುವ ನಿರ್ಧಾರ 'ಆಧುನಿಕ ಮಹಿಳಾ ಪ್ರಜ್ಞೆ'ಗೆ ಉದಾಹರಣೆಯಾಗಿದೆ. ಗಂಡಸರು ಕಾದಂಬರಿಯು ಆಧುನಿಕ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯು ರೂಪುಗೊಂಡಿರುವ ವಿವಿದ ನೆಲೆಗಳನ್ನು ಪರಿಚಯಿಸುತ್ತದೆ. ಇಲ್ಲಿ ಗಂಡಸರ ಪೂರ್ವಗ್ರಹ ಪೀಡಿತ ಮನೋಭಾವವನ್ನು ನಿರೂಪಿಸುತ್ತದೆ. ಕಾದಂಬರಿಯ ನಾಯಕಿ ಶಾಂತಿಯಲ್ಲಿ ಬದಲಾಗುತ್ತಿರುವ ಆಧುನಿಕ ಹೆಣ್ಣಿನ ಸೂಕ್ಷ್ಮ ಲಕ್ಷಣಗಳನ್ನು ಗುರುತಿಸಬಹುದು. ಸಾಂಪ್ರದಾಯಿಕ ಬದುಕಿನಿಂದ ಸಿಡಿದೆದ್ದ ಹೊಸ ಲಕ್ಷಣಗಳನ್ನು ಗುರುತಿಸಬಹುದು. ಸಾಂಪ್ರದಾಯಿಕ ಬದುಕಿನಿಂದ ಸಿಡಿದೆದ್ದ ಹೊಸ ಬದುಕಿನ ಅನ್ವೇಷಣೆಯಲ್ಲಿರುವುದನ್ನು ಕಾಣಬಹುದು. ಶಾಂತಿಯು ತನ್ನ ವಿದ್ಯಾಭ್ಯಾಸದ ದಿನಗಳಲ್ಲಿಯೇ ತಾತ್ವಿಕವಾದ ಆಲೋಚನೆಯಲ್ಲಿ ಮಗ್ನವಾಗುತ್ತಿದ್ದಳು. ನಮ್ಮ ಹಿಂದೂ ಹೆಂಗಸರು ಅನ್ಯಾಯ ಅತ್ಯಾಚಾರಗಳನ್ನು ಇನ್ನೂ ಸಹಿಸಬಾರದು. ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡೇಳಬೇಕು, ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು, ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು.

ಹೆಂಗಸರ ಉದ್ಧಾರದ ಮಾತುಗಳಿಂದಲೇ ಎಷ್ಟೋ ಅಮಾಯಕ ಹೆಣ್ಣುಮಕ್ಕಳ ಬದುಕನ್ನು ಹಾಳು ಮಾಡಿರುವ ಪ್ರೊ.ಮತದ್‌ನನ್ನು ಕಾದಂಬರಿಯು ಪರಿಚಯಿಸುತ್ತದೆ. ಬೌದ್ಧಿಕತೆಯನ್ನು ಬಂಡವಾಳವನ್ನಾಗಿಸಿಕೊಂಡು ಆ ಮುಖಾಂತರ ಹೆಣ್ಣಿನ ಬದುಕಿನಲ್ಲಿ ಚೆಲ್ಲಾಟವಾಡುವ ಮತದ್‌ನಂತೆ

ಪುರುಷರನ್ನು ವಾಸ್ತವದಲ್ಲಿ ಇಂದಿಗೂ ಕಾಣಬಹುದು. ನಾಯಕಿ ಶಾಂತಿ ಪ್ರಾಮಾಣಿಕ ಪ್ರೀತಿಗಾಗಿ ಕಾತುರುಪಡುತ್ತಿದ್ದಾಗ ಮಠದ್‌ನ ನಿಜವಾದ ಬಣ್ಣ ಬಯಲಾಗಿದ್ದು ಒಂದು ರೀತಿಯಲ್ಲಿ ಸಂತೋಷ ದುಃಖವಾಗುತ್ತದೆ. ಏಕೆಂದರೆ ತನ್ನ ಪ್ರೀತಿಯ ಅನ್ವೇಷಣೆಯ ಎರಡನೇ ವ್ಯಕ್ತಿಯಿಂದಲೂ ಸಾಧ್ಯವಾಗಲಿಲ್ಲವೆಂಬ ನೋವು ಅವಳನ್ನು ಬಾಧಿಸುತ್ತಿತ್ತು.

ತನ್ನ ಹಳೆಯ ಬದುಕು ಮತ್ತು ಭಾವನೆಗಳನ್ನು ಬದಲಾಯಿಸಿಕೊಳ್ಳಲು ಶಾಂತಿಯು ಮುಂಬೈನ ಒಂದು ಕಂಪನಿಯಲ್ಲಿ ಸ್ವಾಗತಕಾರಿಣಿಯಾಗಿ ಕೆಲಸಕ್ಕೆ ಸೇರಿಕೊಳ್ಳುತ್ತಾಳೆ. ಅಲ್ಲಿನ ವಾತಾವರಣ ಶಾಂತಿಗೆ ಹೊಸ ಅನುಭವದ ಜೊತೆಗೆ ಆಶ್ಚರ್ಯವನ್ನು ಉಂಟು ಮಾಡುತ್ತದೆ. ಮುಂಬೈ ಭಾರತದ ವಾಣಿಜ್ಯನಗರ. ಅದು ಭಾರತದ ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ಸುಮಾರು ವರ್ಷ ಮುಂದಿರುವ ನಗರ. ಅಂತಹ ಸ್ಥಳದಲ್ಲಿ ಶಾಂತಿಯು ತನ್ನ ಬದುಕಿನ ಅಸ್ತಿತ್ವಕ್ಕಾಗಿ ಹೋರಾಟ ಪ್ರಾರಂಭಿಸುತ್ತಾಳೆ. ರಮಾಕಾಂತ ಸಿಂಧೆ ಎಂಬ ವ್ಯಕ್ತಿಯ ಪರಿಚಯವಾಗುತ್ತದೆ. ಅದು ಆತ್ಮೀಯ ಸ್ನೇಹಕ್ಕೆ ಬದಲಾಗುತ್ತದೆ. ರಮಾಕಾಂತರ ಸರಳತೆ, ಮುಕ್ತವಾಗಿ ಬೆರೆಯುವ ಮನಸ್ಸಿಗೆ ಶಾಂತಿ ಬೇಗ ಶರಣಾಗುತ್ತಾಳೆ.

ರಮಾಕಾಂತ ನಾನೊಬ್ಬ ಅನಾಥನೆಂದು ಹೇಳುವುದರ ಮೂಲಕ ಶಾಂತಿಗೆ ಹತ್ತಿರವಾಗುತ್ತಾನೆ. ಅವನ ಬದುಕಿನ ಹಿನ್ನೆಲೆ ಅರಿಯದ ಶಾಂತಿ ಭಾವುಕಳಾಗುತ್ತಾಳೆ. ತನ್ನ ವೈಯಕ್ತಿಕ ಬದುಕನ್ನು ಮುಚ್ಚಿಡುವುದರ ಜೊತೆಗೆ ಶಾಂತಿಯೊಂದಿಗೆ ಪ್ರಮಾಣಿಕ ಸ್ನೇಹದ ನಾಟಕವಾಡುತ್ತಾನೆ. "ನಿನ್ನ ಗುರ್ತು ಆಗುವತನಕಾ ಫ್ರೆಂಡ್ಸ್ ಯಾರೂ ಇದ್ದಿಲ್ಲಾ, ಫ್ರೆಂಡ್ಸ್ ಅಂದರೇ ಖರೇ ಅರ್ಥವಾದಾಗ ಫ್ರೆಂಡ್ಸ್. ಅಂದರ ಯಾರ ಸಹವಾಸದಿಂದ ಮನಸ್ಸಿಗೇ ಸಮಾಧಾನ ಸಿಗತದೋ ಅಂಥ ಫ್ರೆಂಡ್ಸ್"[೧] ಎಂದು ಶಾಂತಿಯಲ್ಲಿ ಕನಿಕರ ಸೃಷ್ಟಿಸಿ ಅವಳ ಮನಸ್ಸನ್ನು ಗೆಲ್ಲಲು ಪ್ರಯತ್ನಿಸುತ್ತಾನೆ.

ಮುಂಬೈನ ಯಾಂತ್ರಿಕತೆಯ ಬದುಕನ್ನು ಜೀರ್ಣಿಸಿಕೊಳ್ಳಲು ಪ್ರಯತ್ನ ಪಡುತಿದ್ದಳು. ಬದುಕು ಏಕಾಂಗಿತನವನ್ನು ಅನುಭವಿಸಿ ತೊಡಗಿದ್ದ ಕಾಲದಲ್ಲೇ ತಂದೆಯ ಸಾವು ಶಾಂತಿಯನ್ನು ಮತ್ತಷ್ಟು ಗಂಭೀರವಾಗಿಸಿತು. ಈ ಸಂದರ್ಭವನ್ನು ಸಂಪೂರ್ಣವಾಗಿ ಸದುಪಯೋಗ ಪಡಿಸಿಕೊಂಡ ರಮಾಕಾಂತ ಶಾಂತಿಯನ್ನು ತನ್ನ ಕಡೆಗೆ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾನೆ. "ಅವಳ

೧.ವೀಣಾಶಾಂತೇಶ್ವರ; ಗಂಡಸರು, ಪುಟ–೧೭೮

ತುಟಿಯ ಮೇಲೆ ತುಟಿಯಿಟ್ಟು ಮೆತ್ತಗೆ ಮುದ್ದಿಸಿ ಆತ ಅಂದ 'ಹಿಂದಕ ಏನೇನು ಆತು ಅನ್ನೋದನ್ನು ಮರೆತುಬಿಡು ಶಾಂತಿ, ನಾನೂ ನನ್ನ ಭೂತ ಮರ್ತ್ತೆಬಿಡ್ತಿನಿ, ನಾವು ಹೊಸ ಜೀವನ ಸುರೂ ಮಾಡೋಣ' ಎಂದು ಶಾಂತಿಯ ಹಿಂದಿನ ಬದುಕನ್ನು ತಡೆಯುವುದರ ಜೊತೆಗೆ ತನ್ನ ಭೂತಕಾಲದ ಬದುಕನ್ನು ಮರೆಮಾಚಲು ಯತ್ನಿಸುತ್ತಾನೆ.

ಶಾಂತಿಯು ಮಠದ್ ಮತ್ತು ರಮಾಕಾಂತನ ಸಂಬಂಧದಲ್ಲಿನ ವ್ಯತ್ಯಾಸವನ್ನು ಕಂಡುಕೊಳ್ಳುತ್ತಾಳೆ. ರಮಾಕಾಂತನಲ್ಲಿ ವಿಲಕ್ಷಣವಾದುದೊಂದು ಸಂರಕ್ಷಣೆ ಭಾವವಿದೆ. ಆತನೊಡನೆ ಮಲಗಿ ಎದ್ದಾಗ ಆಗುವ ಸಮಾಧಾನ ಕಾಮವಷ್ಟೇ ಅಲ್ಲ ಅದು, ಮಗುವಾಗಿದ್ದಾಗ ತಂದೆಯ ಮಡಿಲಲ್ಲಿ ಆಡುವಾಗ ಆಗುವಂಥ ಸಮಾಧಾನ" ಎಂದು ತಮ್ಮ ಸಂಬಂಧದ ಪಾವಿತ್ರ್ಯತೆಯ ಬಗ್ಗೆ ತೃಪ್ತಿಪಟ್ಟುಕೊಳ್ಳುತ್ತಾಳೆ. ಮಠದ್‌ನದು ಸ್ವಾರ್ಥದ ಬುದ್ಧಿಯಾಗಿದ್ದರಿಂದ ರಮಾಕಾಂತನ ನಿಸ್ವಾರ್ಥತೆಯನ್ನು ಮೆಚ್ಚಿಕೊಳ್ಳುತ್ತಾಳೆ.

ರಮಾಕಾಂತನು ತಾನು ಪ್ರಾಮಾಣಿಕ ಪ್ರೀತಿ ಮಾಡುತ್ತೇನೆ ಮತ್ತು ಪ್ರಾಮಾಣಿಕ ಪ್ರೀತಿಯನ್ನು ಬಯಸುತ್ತೇನೆಂದು ಹೊಸ ಭರವಸೆಯ ಮಾತುಗಳನ್ನಾಡುತ್ತಾನೆ. ಶಾಂತಿಯು ವಿವಾಹಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳಲು ತೊಡಗಿದ ಸಂದರ್ಭದಲ್ಲಿ ರಮಾಕಾಂತ ತನ್ನ ಭೂತದ ಬದುಕನ್ನು ತೆರೆದುಕೊಳ್ಳುತ್ತಾನೆ. ಮದುವೆಯಾದ ಹೆಂಡತಿ ಜೀವಂತವಾಗಿರುವುದು, ತಾನು ಪ್ರೀತಿ ಮಾಡಿದ ಹುಡುಗಿಯ ಜೊತೆ ದೈಹಿಕ ಸಂಬಂಧ ಹೊಂದಿದ್ದು ಎಲ್ಲವನ್ನು ಶಾಂತಿಗೆ ತಿಳಿಸುತ್ತಾನೆ. ಆದರೂ ಶಾಂತಿಯಲ್ಲಿ ಯಾವುದೇ ರೀತಿಯ ಅಸಮಾಧಾನ ಉಂಟಾಗಲಿಲ್ಲ. ಆದರೆ ಶಾಂತಿಗೆ ಆಶ್ಚರ್ಯವಾಗಿದ್ದು ನನ್ನನ್ನು ಕ್ಷಮಿಸು ನನ್ನನ್ನು ಮರೆತು ಕ್ಷಮಿಸು ಬಿಡು ಎಂದು ಪತ್ರದ ಮುಖೇನ ತಿಳಿಸಿದ ರಮಾಕಾಂತನ ವಿದಾಯದ ಮಾತುಗಳಿಂದ ಶಾಂತಿಗೆ ಎರಡನೇ ಪ್ರೀತಿಯು ಮೂರನೇ ವ್ಯಕ್ತಿಯಿಂದ ದೊರಕದೇ ಹೋಯಿತು. ನಾವು ಭೂತಕಾಲವನ್ನು ಮರೆತು ಬಿಡೋಣ, ಪ್ರಾಮಾಣಿಕ ಪ್ರೀತಿಗೆ ಬೆಲೆ ಕೊಡುತ್ತೇನೆ, ತ್ಯಾಗ, ಕ್ಷಮಾಗುಣ ಇವೆರಡೂ ಪ್ರೀತಿಗಿಂತ ಅಮೂಲ್ಯವಾದುದೆಂದು ಹೇಳಿದ ರಮಾಕಾಂತನ ನಿಜಸ್ವರೂಪ ಯಾವುದೆಂದು ತಿಳಿಯಲು ಶಾಂತಿಗೆ ಸಾಧ್ಯವಾಗಲಿಲ್ಲ.

ಗಂಡಿನ ಅನೇಕ ಸಮಸ್ಯೆಗಳನ್ನು ಕ್ಷಮಿಸಲು ಸಿದ್ಧವಿದ್ದಾಗ ಹೆಣ್ಣಿನ ಒಂದು ಸಮಸ್ಯೆಯನ್ನು ಕ್ಷಮಿಸಲಾಗದಿರುವುದನ್ನು ಕಾಣಬಹುದು. ಶಾಂತಿಯು ಭವಿಷ್ಯದ ಬದುಕನ್ನು ನಿರೀಕ್ಷಿಸುತ್ತಿರುವಾಗ ಲೂಸ್ ಫರ್ನಾಂಡಿಸ್‌ನ ಸಂಬಂಧದಿಂದ ಕ್ರಾಂತಿ ಪತ್ರಿಕೆಯ ವರದಿಗಾರಳಾಗಿ ಕೆಲಸಕ್ಕೆ ಸೇರುತ್ತಾಳೆ. ಅಲ್ಲಿ ಪರಿಚಯವಾದ ಅಶೋಕ್‌ಕುಮಾರನ ಜೊತೆ ದೈಹಿಕವಾಗಿ ಸಂಬಂಧ ಆರಂಭಿಸಿ, ವೈವಾಹಿಕ

ಸಂಬಂಧದವರೆಗೂ ಮುಂದುವರೆಯುತ್ತದೆ. ಅವರಿಬ್ಬರು ಮದುವೆಗೆ ಮುಂಚೆ ಒಂದೇ ಮನೆಯಲ್ಲಿ ವಾಸ ಮಾಡತೊಡಗುತ್ತಾರೆ. ಬದುಕಿನ ಉದ್ದಕ್ಕೂ ಶಾಂತಿಯು ಬರೀ ಪ್ರೀತಿಯ ಅನ್ವೇಷಣೆ ಮಾಡುತ್ತಲೇ ಬರುತ್ತಾಳೆ. ಅದು ಫಲಿಸದೇ ಹೋಗುವುದು ವಿಪರ್ಯಾಸವಾಗುತ್ತದೆ. ಆದರೆ ಶಾಂತಿ ಮಾತ್ರ ಎಲ್ಲಿಯೂ ತನ್ನ ಬದುಕಿನ ಶ್ರದ್ಧೆಯನ್ನು ಕಳೆದುಕೊಳ್ಳದೇ ಮುಂದೆ ಸಾಗುತ್ತಾಳೆ. ತನ್ನ ಬದುಕಿನಲ್ಲಿ ಬಂದಂತಹ ಗಂಡಸರೊಂದಿಗೆ ತನ್ನ ಸಂಬಂಧವನ್ನು ದೈಹಿಕ ನೆಲೆಯೊಂದಿಗೆ ಸಮೀಕರಿಸಿಕೊಳ್ಳುತ್ತಾಳೆ. ಅಲ್ಲಿಯೇ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾಳೆ. ಇಲ್ಲಿ ಶಾಂತಿಯು ಆಧುನಿಕ ಮಹಿಳಾ ಪ್ರಜ್ಞೆಯ ಪ್ರತೀಕದಂತೆ ಕಾಣಿಸುತ್ತಾಳೆ.

ಶ್ರೀಮತಿ ಉಮಾರಾವ್‌ರವರ 'ನೂರು ಸ್ವರ' ಕಾದಂಬರಿಯು ಆಧುನಿಕ ಸಾಹಿತ್ಯದ ಪ್ರಯೋಗಾತ್ಮಕವಾದ ಕತೆಯಾಗಿದೆ. ಇವರು ತಮ್ಮ ಕಾದಂಬರಿಯಲ್ಲಿ ಸಾಂಪ್ರದಾಯಕ, ಸ್ತ್ರೀಪಾತ್ರಗಳನ್ನು ಮತ್ತು ಆಧುನಿಕ ಸ್ತ್ರೀಪಾತ್ರಗಳನ್ನು ಏಕಕಾಲದಲ್ಲಿ ಕೊಂಡೊಯ್ಯುತ್ತಾರೆ. ನಗರ ಪ್ರದೇಶದಲ್ಲಿನ ತಲ್ಲಣ, ಏಕಾಂಗಿತನ, ಅನಾಥಪ್ರಜ್ಞೆ ಮತ್ತು ದ್ವಂದ್ವವನ್ನು ಕಾದಂಬರಿಯಲ್ಲಿ ಕಾಣಬಹುದಾಗಿದೆ. ಹೊಸತನದ ತುಡಿತವನ್ನು ವ್ಯಕ್ತಪಡಿಸುವುದರ ಜೊತೆಗೆ ಬದಲಾವಣೆಗಾಗಿ ಕಾಯುತ್ತ ಕುಳಿತ್ತಿದ್ದ ಹೆಣ್ಣಿನ ಮನಸ್ಥಿತಿಯನ್ನು ದಾಖಲಿಸಲು ಲೇಖಕಿ ಪ್ರಯತ್ನಿಸಿರುವುದನ್ನು ಕಾದಂಬರಿಯಲ್ಲಿ ಕಾಣಬಹುದು.

ಶ್ರೀಮತಿಉಮಾರಾವ್‌ರವರು ಗೌರಿಯಲ್ಲಿ ಆಧುನಿಕ ಬದುಕಿನ ಒತ್ತಡಗಳನ್ನು ನಿಭಾಯಿಸಲು ಸೃಜನಶೀಲತೆಯನ್ನು ಸೃಷ್ಟಿ ಮಾಡಿರುವುದನ್ನು ಕಾಣಬಹುದು. ಕತೆಯ ನಾಯಕಿ ಗೌರಿಯ ಬದುಕಿನ ಹಲವು ಮುಖಗಳನ್ನು ತೆರೆದಿಡುತ್ತದೆ. ಅವಳ ಬದುಕಿನಲ್ಲಿ ಬಹುದೊಡ್ಡ ಪ್ರಶ್ನೆಯಾಗಿ ಉದ್ಭವಿಸುವುದು ಮನೆಪಾಠಕ್ಕೆ ಬರುವ ಚಿಂಚುವಿನ ಪರಿಸ್ಥಿತಿ, ಗೌರಿ ಮತ್ತು ಚಿಂಚುವಿನ ಸಂಬಂಧದ ಎಳೆಗಳು ಕಾದಂಬರಿಯಲ್ಲಿ ಬಹಳ ಮುಖ್ಯವಾಗುತ್ತದೆ. ಹೇಗೆಂದರೇ 'ಅವಳಿಗೆ ಚಿಂಚು ಟ್ಯೂಷನ್ನಿಗೆ ಬರುವ ಹುಡುಗ ಮಾತ್ರವಲ್ಲ ಪ್ರಶ್ನೆಯಾದುದು ನಿರುತ್ತವಾಗಿ ಕುಳಿತುಕೊಳ್ಳುವ ಸ್ವತಃ ತಾಯಿಯಾಗದ, ಆದರೆ ತಾಯಿಗಣ್ಣು ಪಡೆದಿರುವ ಗೌರಿ ಮತ್ತು ಚಿಂಚುವಿನ ಸಂಬಂಧ ಉದ್ದಕ್ಕೂ ಅರ್ಥಪೂರ್ಣವಾಗಿ ಹೆಣೆದುಕೊಂಡಿದೆ"

ಕಾದಂಬರಿಯು ಗೌರಿ ಮತ್ತು ಅನಿರುದ್ಧರ ಪರಿಚಯದಿಂದ ಪ್ರಾರಂಭವಾಗುತ್ತದೆ. 'ಸೇಮ್ ಫಾರ್ ಮಿ' ಎಂಬ ಶಬ್ಧದಿಂದ ಅವಳ ಅಂತರಾತ್ಮದಲ್ಲಿ ಮೌನವಾಗಿದ್ದ ಸುಪ್ತ ಮನಸ್ಸಿನ ಮಿಡಿತವನ್ನು ಬಡಿದು ಎಬ್ಬಿಸುತ್ತದೆ. ಅ ಮನಸ್ಸು ಅನಿರುದ್ಧನಿಗೆ ಪ್ರವೇಶ ನೀಡುತ್ತದೆ. ಪ್ರವೇಶ ಪಡೆದ ಅನಿರುದ್ಧ

ಗೌರಿಯ ಹೃದಯದಲ್ಲಿ ಪದೇ ಪದೇ ತನ್ನ ಇರುವಿಕೆಯನ್ನು ನೆನಪಿಸುತ್ತಿದ್ದ, ಗೌರಿಯು ಅದಕ್ಕೆ ಸ್ಪಂದಿಸಿ ತನ್ನಲ್ಲಿಯೇ ಆತನ ರೂಪವನ್ನು ಓಡಿಹೋಗಿ ಅಪ್ಪಿಕೊಳ್ಳುತ್ತಿತ್ತು. ತನ್ನ ಜೊತೆಯಲ್ಲಿ ಬಿ.ಎಸ್.ಸಿ ಓದಿದ ಲಕ್ಷ್ಮಿಯ ಭೇಟಿ ಮತ್ತು ಸಂಸಾರದ ಸುಖದ ಮಾತುಗಳು ಒಂದು ರೀತಿಯ ಸಂಚಲನ ಉಂಟು ಮಾಡುತ್ತಿದ್ದವು. ಜೊತೆಗೆ ಅನಿರುದ್ಧನ ನೆನಪು ಮಾತ್ರ ಎದೆಬಡಿತದ ವೇಗವನ್ನು ಹೆಚ್ಚಿಸುತ್ತಿತ್ತು.

ಗೌರಿಯು ಮೈಸೂರಿನ ನೆನಪಿನಾಳದಿಂದ ಹೊರಬರಲು ಸರ್ವ ಪ್ರಯತ್ನ ಮಾಡುತ್ತಿದ್ದಳು. ಆದರೆ ಮನೆಯಲ್ಲಿ ನಡೆಯುತ್ತಿದ್ದ ಘಟನೆಗಳು ಮಾತ್ರ ಅವಳನ್ನು ಜಾಗೃತಗೊಳಿಸುತ್ತಿದ್ದವು. 'ನೀನೇನೇ ಹೇಳು ಮದುವೆ ಆಗದ ಹೆಣ್ಣಿನ ಜೀವನದಂಥಾ ಬೋರ್ ಇನ್ನೊಂದಿಲ್ಲ" ಎನ್ನುವ ಪಾಪಳ ಮಾತು ಗೌರಿಯ ಪರಿಸ್ಥಿತಿಯನ್ನು ಹೇಳ ಹೊರಟಂತಿತ್ತು. ಆದರೆ ಗೌರಿ ಅದಕ್ಕೆ ವಿರುದ್ಧವಾದ ಮನಃಸ್ಥಿತಿಯನ್ನು ಹೊಂದಿದ್ದಳು. ಗೌರಿಯನ್ನು ಮದುವೆಯಾಗಲು ಬಂದ ಗಿರೀಶ ಪಾಪಳನ್ನು ಒಪ್ಪಿಕೊಂಡ ನಂತರ ಬದುಕನ್ನು ಬೇರೊಂದು ರೀತಿಯಲ್ಲಿ ನೋಡಲು ಗೌರಿ ಸಿದ್ಧವಾಗುತ್ತಾಳೆ. ಈ ರೀತಿಯ ಪ್ರಯತ್ನವೇ ಗೌರಿಯು ಮುಂಬೈಗೆ ಹೋಗಲು ಪ್ರೇರೇಪಿಸಿತು ಎನ್ನಬಹುದು.

ಮುಂಬೈಗೆ ಬಂದು ಗೌರಿ ತನ್ನ ಬದುಕನ್ನು ಹರಸುತ್ತಿರುವಾಗ, ವಿಕೃತ ಮನಸ್ಸಿನ ಶ್ಯಾಂ, ಲತಾ, ಚಿಂಚೂ, ಅನಿರುದ್ಧರಂಥವರನ್ನು ಭೇಟಿಯಾಗಲು ಸಾಧ್ಯವಾಯಿತು. ಚಿಂಚೂ ಬದುಕಿನ ಒಂದು ಮುಖವನ್ನು ಪರಿಚಯಿಸಿದರೇ, ಅನಿರುದ್ಧನಿಗಾಗಿ ತನ್ನಲ್ಲಿ ಯಾವುದೋ ಬದಲಾವಣೆ ಕಂಡುಬರುತ್ತಿದೆ. ಅವನಿಗಾಗಿ ಕೆಲವೊಂದು ಬದಲಾವಣೆ ಕಂಡುಕೊಳ್ಳುತ್ತಿದ್ದೇನೆ ಎನಿಸುತ್ತಿತ್ತು.

ಗೌರಿಯ ಬದುಕಿನಲ್ಲಿ ಎದುರಾಗುವ ಮತ್ತೊಂದು ಕುಟುಂಬವೆಂದರೆ ರಕುಮಾಳದು. ತನ್ನ ಗಂಡ ಬೇರೊಂದು ಹೆಣ್ಣನ್ನು ತಂದು ಮನೆಯಲ್ಲಿಟ್ಟು ಕೊಂಡರೂ ಪ್ರತಿಭಟಿಸಲಾಗದ ಅಸಹಾಯಕತೆ ರಕುಮಾಳದ್ದಾಗಿದೆ. ತಾನೇ ಕಷ್ಟಪಟ್ಟು ಸಂಪಾದಿಸಿದ ಮನೆಯಲ್ಲಿ ಅವಳಿಗೆ ಅಧಿಕಾರವಿಲ್ಲದಿರುವುದು ಸಾಮಾನ್ಯ ಸ್ತ್ರೀ ಶೋಷಣೆಯ ಪರಿಸ್ಥಿತಿಯನ್ನು ತೆರೆದಿಡುತ್ತದೆ. ಇದು ಅನ್ಯಾಯ, ನೀನು ಪೋಲಿಸ್‌ಗೆ ಒಪ್ಪಿಸಬಹುದಲ್ಲ ಎಂದಾಗ 'ಪೋಲಿಸ್, ಕೋರ್ಟ್ ಎಲ್ಲಾ ಪ್ರಯೋಜನ ಇಲ್ಲ ನಾನೇ ಸರಿ ಮಾಡ್ತೀನಿ ಅವನನ್ನು, ಆಗಲಿ ಒಂದಷ್ಟು ದಿನ, ಪೋಲಿಸ್‌ಗೆ ತಿನ್ನಿಸೋಕೆ ಪೈಸಾ ಎಲ್ಲಿದೆ"[೧] ಎನ್ನುವ

೧.ಉಮಾರಾವ್; ನೂರು ಸ್ವರ, ಪುಟ-೮೫

ರಕುಮಾ ಬಂದವಳಿಗೆ ಉಡಲು ಸೀರೆ ಕೊಟ್ಟು, ಸ್ನಾನ ಮಾಡಲು ಬಿಸಿ ನೀರು ಕಾಸಿ ಕೊಟ್ಟಿದ್ದನ್ನು ಕಂಡ ಗೌರಿ ಅಚ್ಚರಿ ಪಡುತ್ತಾಳೆ.

ರಕುಮಾ ಪರಿಸ್ಥಿತಿ ತರ್ಕಕ್ಕೂ ಸಿಗದೆ, ಅರ್ಥವೂ ಆಗದೆ ವಿಚಿತ್ರವೆನಿಸಿತು. ನನ್ನ ಬದುಕಿಗೂ ರಕುಮಾ ಬದುಕಿಗೂ ಏನಾದರೂ ಸಂಬಂಧವಿದೆಯೇ? ಛೇ ಅನಿರುದ್ಧ ನನ್ನ ಜೊತೆಯಲ್ಲಿ ಕೊನೆವರೆಗೂ ಬರುತ್ತಾನೆಂಬ ಹಠವೇಕೆ? ಎಂದು ಸುಮ್ಮನಾದಳು. ತನ್ನ ಅನಾಥ ಪ್ರಜ್ಞೆಯನ್ನು ಹೋಗಲಾಡಿಸಲು ಅನಿರುದ್ಧನಿಂದ ಮಾತ್ರ ಸಾಧ್ಯ ಎಂದು ಅವನ ಸ್ನೇಹಮಯ ವ್ಯಕ್ತಿತ್ವಕ್ಕೆ ಮರುಳಾದ ತನ್ನ ಮನಸ್ಸನ್ನು ಪ್ರಶ್ನಿಸಿಕೊಳ್ಳುತ್ತಾಳೆ. ಮದುವೆ ಇಲ್ಲದ ಜೀವನ ಕಳೆಯುವಾಗ ಅವಳಿಗೆ ತಿಳಿಯದಂತೆ ಖಾಲಿತನದ ಅನುಭವ ಪಡೆದುಕೊಳ್ಳುತ್ತಾಳೆ. ತನ್ನ ಸಮಸ್ಯೆಗಳಿಗೆ ಮದುವೆ ಪರಿಹಾರವಲ್ಲವೆಂದು ಅರಿತುಕೊಳ್ಳುತ್ತಾಳೆ. ಆದರೆ ಅನಿರುದ್ಧ ತನ್ನಗಿಷ್ಟವಾದರೇ, ಅವನಿಗೆ ತಾನು ಹಿಡಿಸಿದರೆ ಮದುವೆಯಾಗುವುದರಲ್ಲಿ ಭಯವೇನು? ಬದುಕೆಲ್ಲ ಒಟ್ಟಿಗೆ ಕಳೆಯುವುದರಲ್ಲಿ ತಪ್ಪೇನು? ಮುದ್ದುಮಕ್ಕಳನ್ನು ಒಟ್ಟಿಗೆ ಬೆಳೆಸುವುದರಲ್ಲಿ ಅಳುಕೇನು? ಎಂದು ತನ್ನನ್ನ ತಾನೇ ಪ್ರಶ್ನಿಸಿಕೊಳ್ಳುತ್ತಾ ಉತ್ತರಗಳನ್ನು ಕಂಡುಕೊಳ್ಳುತ್ತಾಳೆ. ಅಂದು ಗಿರೀಶ ನನ್ನನ್ನು ಒಪ್ಪಿದ್ದರೆ ನಾನೂ ಕೂಡ ಪಾಪು ಮತ್ತು ಲಕ್ಷ್ಮಿಯಂತೆಯೇ ಬದುಕನ್ನು ಸಾಗಿಸುತ್ತಿದೆ. ಅದು ತಪ್ಪಿದ ಮೇಲೆ ನನ್ನ ಬದುಕಿನ ದಾರಿಯನ್ನು ಬದಲಿಸುವುದು ಅನಿವಾರ್ಯವೆಂದುಕೊಂಡಳು.

ಅಮ್ಮನ ಅನೇಕ ಪ್ರಶ್ನೆಗಳಲ್ಲಿ ಅನಿರುದ್ಧ ಯಾರು? ಒಂದು ಅವನಿಗೆ ಮದುವೆಯಾಗಿದ್ಯಾ? ಇಲ್ಲವೋ? ಎಂದಾಗ ಅವುಗಳ ಅವಶ್ಯಕತೆ ಇಲ್ಲವೆಂಬಂತೆ ಗೌರಿ ಉತ್ತರಿಸಿದಳು. ಮತ್ತೆ ಏನಾದರೂ ಹೆಚ್ಚು ಕಡಿಮೆ ಆದರೆ ಮುಂದೆ ಯೋಚನೆ ಮಾಡಿದ್ದೀಯಾ? ಅವನು ನಂಜೊತೆ ಓಡಾಡ್ತಿರೋ ಹಾಗೆ ನಾನೂ ಅವನ ಜೊತೆ ಓಡಾಡ್ತಿದ್ದೀನಿ. ನನಗೆ ಅವನು ಇಷ್ಟ ನಾನು ಅವನಂತೆ ಓಡಾಡಿ ಮುಂದೆ ಅವನು ಕೈ ಬಿಡಬಹುದು. ಅವನು ಗಂಡಸು, ಹಾಗಾದರೆ ಅವನು ಮಾಡಿದರೆ ಸರಿ, ನಾನು ಮಾಡಿದರೆ ತಪ್ಪಾ? ಎಂಬಂತಹ ತಾಯಿ ಮಗಳ ನಡುವಿನ ಜಗಳವು ಆಧುನಿಕ ಮತ್ತು ಸಂಪ್ರದಾಯಿಕ ಬದುಕಿನ ಘರ್ಷಣೆಗಳಂತೆ ಕಾಣುತ್ತಿತ್ತು. ಅಮ್ಮನ ಮಾತನ್ನು ವಿರೋಧಿಸಲೆಂದೇ ಗೌರಿಯು ಮುಂಬೈಗೆ ಪ್ರಯಾಣ ಬೆಳೆಸುತ್ತಾಳೆ. ಅಲ್ಲಿದ್ದಷ್ಟು ದಿನವೂ ಸಂತೋಷದಿಂದ ಇದ್ದಳು.

ಆಧುನಿಕ ಸೂಕ್ಷ್ಮತೆಗಳನ್ನು ಒಳಗೊಂಡ ಒಂದು ಹೆಣ್ಣು ತನ್ನ ಬದುಕನ್ನು ತೆರೆದುಕೊಳ್ಳುವ ಸಂದರ್ಭದಲ್ಲಿ ಉಂಟಾಗುವ ಎಲ್ಲ ತಲ್ಲಣ, ದ್ವಂದ್ವಗಳನ್ನು ಕಾಣಬಹುದು. ಇಲ್ಲಿ ಪ್ರತಿಯೊಬ್ಬರ

ಪಾತ್ರವಾಗಿರದೆ, ಪ್ರಶ್ನೆಯಾಗಿಯೇ ಉಳಿಯುತ್ತಾರೆ. ಅಭಿಮಾನ ಕೋಮಲತೆ, ಆಧುನಿಕ ಮಹಿಳಾ ಪ್ರಜ್ಞೆಯನ್ನು ಗೌರಿಯು ಹೊರ ಹಾಕುವುದನ್ನು ಕಾದಂಬರಿಯ ಅಂತ್ಯದಲ್ಲಿ ಕಾಣಬಹುದಾಗಿದೆ.

ಪಿ.ಲಂಕೇಶ್‌ರವರ ಕಾದಂಬರಿ 'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ರಂಗವ್ವನ ಪಾತ್ರವು ಪ್ರಧಾನವಾಗಿ ಕಂಡು ಬರುವುದರಿಂದ ಇದೊಂದು ವಿಶಿಷ್ಟ ಕೃತಿಯಾಗಿದೆ ಎನ್ನಬಹುದು. ರಂಗವ್ವ ಒಬ್ಬ ಸಾಮಾನ್ಯ ಹೆಣ್ಣಾಗಿದ್ದರೂ ಬಡ್ಡಿ ವ್ಯವಹಾರದ ಮೂಲಕ ಊರಿನ ಜನರನ್ನು ತನ್ನ ಹಿಡಿತದಲ್ಲಿಟ್ಟು ಕೊಂಡಿರುತ್ತಾಳೆ. ಗಂಡ ಸತ್ತ ನಂತರ ಮನೆಯ ಜವಾಬ್ದಾರಿಯನ್ನು ವಹಿಸಿಕೊಂಡು ಮಗಳಾದ ಸಾವಂತ್ರಿಯನ್ನು ಸಾಕುವಲ್ಲಿ ಯಶಸ್ವಿಯಾಗುತ್ತಾಳೆ. ಆದರೆ ರಂಗವ್ವನ ಬದುಕು ಅಷ್ಟು ಸುಲಭವಾಗಿರಲಿಲ್ಲ. ರಂಗವ್ವನ ಬದುಕಿಗೆ ಅಡ್ಡವಾಗಿರುವ ವ್ಯಕ್ತಿಯೆಂದರೆ ಭರ್ಮಣ್ಣ, ರಂಗವ್ವ ಮತ್ತು ಭರ್ಮಣ್ಣನ ಸಂಘರ್ಷದಿಂದ ಅವರಿಬ್ಬರ ಸಂಬಂಧ ಮುರಿದುಬೀಳುತ್ತದೆ. ಜೊತೆಗೆ ಅವರ ಹಣಕಾಸಿನ ವ್ಯವಹಾರವು ಅಂತ್ಯಗೊಳ್ಳುತ್ತದೆ. ಅಂತಹ ಸಂಘರ್ಷದಲ್ಲಿ ರಂಗವ್ವ ತೋರಿದ ಧೈರ್ಯ ನಿಜಕ್ಕೂ ಮೆಚ್ಚತಕ್ಕದ್ದು. 'ಹಿಂಗೆಲ್ಲ ಮಾತಾಡಿದ್ರೆ ನಿನ್ನ ಕಚ್ಚೆ ಹಿಡಿದು ಎಳೆದು ಬೀದ್ಯಾಗೆ ಮೆರವಣಿಗೆ ಮಾಡಿಸೇನು, ಕೊಳಕ ಮುಂಡೇ ಮಗನೇ ನನಗೆ ಕೊಡೋದನ್ನು ಕೊಟ್ಟು ಮುಂದಿನ ಮಾತನಾಡಲೇ"[೧] ಎಂದು ತನ್ನ ಬಡ್ಡಿವ್ಯವಹಾರದ ಹಣವನ್ನು ವಸೂಲಿ ಮಾಡುತ್ತಾಳೆ. ರಂಗವ್ವ ತನ್ನ ಬದುಕನ್ನು ತುಂಬಾ ಆತ್ಮವಿಶ್ವಾಸದಿಂದ ಸಾಗಿಸುತ್ತಿದ್ದಳು. ಆದರೆ ಮಗಳ ವಿಷಯ ಬಂದಾಗ ಅವಳಲ್ಲಿ ಅನೇಕ ದ್ವಂದ್ವಗಳು ಮೂಡುತ್ತಿದ್ದವು. ಸಾವಂತ್ರಿ ಮತ್ತು ಮಂಜುವಿನ ಸಂಬಂಧವನ್ನು ಸಂಪೂರ್ಣವಾಗಿ ನಿಯಂತ್ರಿಸುವಲ್ಲಿ ರಂಗವ್ವ ವಿಫಲಳಾಗುತ್ತಾಳೆ.

ಆದರೆ ಊರಿನ ಎಲ್ಲ ಗಂಡಸರು ರಂಗವ್ವನ ಹಣದ ಮೇಲೆಯೇ ಕಣ್ಣು ಹಾಕುತ್ತಿದ್ದರು. ಅಂತಹ ಸಂದರ್ಭದಲ್ಲಿ ಮಂಜ ಶಕ್ತಿಯುಳ್ಳ ಒಂದು ಪ್ರಾಣಿಯೇ ಹೊರತು ಸಾವಂತ್ರಿಯ ಪ್ರೇಮಿಯಾಗಲು ಗಂಡನಾಗಲು ಸಾಧ್ಯವಿಲ್ಲವೆಂದು ಅವರಿಬ್ಬರ ಸಂಬಂಧವನ್ನು ಸಮ್ಮತಿಸುತ್ತಾಳೆ. ಕಂಬಳಿಯ ಸ್ಕೂಲ್ ಮೇಸ್ಟ್ರು ಸಣ್ಣೀರಪ್ಪ ಮತ್ತೊಂದು ಸಮಸ್ಯೆಯನ್ನು ತಂದಿಡುತ್ತಾನೆ. 'ರಂಗವ್ವ ನೀನು ಮಾಡುತ್ತಿರುವ ಬಡ್ಡಿ ವ್ಯವಹಾರಕ್ಕೂ ಕೋಪ ಅಷ್ಟಾಗಿ ಹೊಂದುವುದಿಲ್ಲ' ಎಂಬ ಅರಿವು ಮೂಡಿಸುತ್ತಾನೆ. 'ಭರ್ಮನ ಚಿತಾವಣೆಯಲ್ಲಿ ಊರೆದೇರು ಚೆಲ್ಲಿ, ಅವನಿಗೆ ಊರಾಗೊಂದು ತೊಟ್ಟು ನೀರು ಸಿಗದಂಗೆ ಮಾಡದಿದ್ರೆ ದೊಡ್ಡ ಮನೆ ಭದ್ರಮ್ಮಳ ಮಗಳಾ ನಾನು?" ಎಂದು ಅಲ್ಲಿನ ಪುರುಷ

೧.ಪಿ.ಲಂಕೇಶ್; ಮುಸ್ಸಂಜೆಯ ಕಥಾಪ್ರಸಂಗ, ಪುಟ-೧೦೫

ಪ್ರಧಾನ ವ್ಯವಸ್ಥೆಗೆ ನೂರ್ ಹಾರುತ್ತಾಳೆ. ಯಾರ ಕುತಂತ್ರಕ್ಕೂ ಬಲಿಯಾಗದ ರಂಗವ್ವ ಸಾವಂತ್ರಿ ಮತ್ತು ಮಂಜುವಿನ ಮದುವೆ ಮಾಡುತ್ತಾಳೆ. ಊರಿನ ಭರ್ಮಣ್ಣ, ಶಿವಾಜಿ, ಬಸ್ಯ, ಶಿವನಂಜ ಎಲ್ಲರೂ ರಂಗವ್ವನ ಬದುಕಿಗೆ ಒಂದಲ್ಲ ಒಂದು ರೀತಿಯಲ್ಲಿ ಬಿರುಗಾಳಿಯಾಗಿಯೇ ರೂಪುಗೊಂಡವರು. ಆದರೆ ಇಕ್ಬಾಲ, ಉಡುಪ, ಶಾಸ್ತ್ರೀಯಂತಹ ಕೆಲವರು ಮಾತ್ರ ರಂಗವ್ವನ ಬದುಕಿಗೆ ಸಹಕಾರಿಗಳಾಗುತ್ತಾರೆ. ಈ ಸಮಸ್ಯೆಗಳ ಮಧ್ಯದಲ್ಲಿಯೂ ರಂಗವ್ವನ ಪಾತ್ರವು ಕಾದಂಬರಿಯಲ್ಲಿ ಗಟ್ಟಿತನವನ್ನು ಹಾಗೂ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ

೨.೩ ಪ್ರಬಂಧ ಸಾಹಿತ್ಯದಲ್ಲಿ

ಪ್ರಬಂಧ, ಹರಟೆ, ವ್ಯಕ್ತಿಚಿತ್ರಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾದ ಗದ್ಯ ಸಾಹಿತ್ಯ ಪ್ರಕಾರಗಳು. ಇಂಗ್ಲೀಷಿನ 'ಎಸ್ಸೆ' ಎಂಬ ಪದಕ್ಕೆ ಬದಲಾಗಿ ಕನ್ನಡದಲ್ಲಿ ಭಾವಪ್ರಬಂಧ ಮತ್ತು ಲಲಿತಪ್ರಬಂಧ ಎಂಬ ಹೆಸರುಗಳ ಈ ಸಾಹಿತ್ಯ ಪ್ರಕಾರ ರೂಢಿಯಲ್ಲಿವೆ. ಪ್ರೆಂಚ್ ಬರಹಗಾರ ಮಾನ್‌ತೇನ್‌ನನ್ನು ಲಲಿತಪ್ರಬಂಧ ಸಾಹಿತ್ಯ ರೂಪದ ಪಿತಾಮಹಾ ಎನ್ನಬಹುದಾಗಿದೆ. ಕನ್ನಡದ ಮೊದಲ ಪ್ರಬಂಧಕಾರರು ಎಂದರೆ ಮುದ್ದಣ ಹಾಗೂ ಪಂಜೆಮಂಗೇಶರಾಯರು ಎಂದಿದ್ದಾರೆ ಆ.ರಾ.ಮಿತ್ರ. ಈ ಮಿತ್ರರು ಸಹ ಉತ್ತಮ ಲೇಖನಗಳನ್ನು ರಚಿಸಿದ್ದಾರೆ. "ತೀವ್ರಗತಿಯೆಂದೂ, ರಸನಿಷ್ಠೆಯಲ್ಲೂ, ಲಯಬದ್ಧತೆಯಲ್ಲೂ ಪ್ರಬಂಧವು ಭಾವಗೀತೆಗಿಂತ ಕೆಳಮಟ್ಟದದ್ದಾರೂ ಎರಡಕ್ಕೂ ಬಲುಮಟ್ಟಿನ ಸಾದೃಶ್ಯವಿದೆ"[೧] ಎಂದಿದ್ದಾರೆ ತೀ.ನಂ.ಶ್ರೀರವರು. "ಉತ್ತಮವಾದ ಎಸ್ಸೆಯಲ್ಲಿ ಲೇಖಕನ ಸ್ವಂತ ವ್ಯಕ್ತಿತ್ವವೆಂಬ ಮೆರಗು ಬೆರೆಯಬೇಕು. ಎಸ್ಸೆ ಎಂಬುದು ವೈಯಕ್ತಿಕ ಭಾವನೆಗಳ ಒಂದು ಪದ ವಿನ್ಯಾಸ"[೨] ಎಂಬುದು ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರ ವಿಚಾರಸರಣಿ. "ಸಾಹಿತ್ಯ ಪ್ರಕಾರಗಳ ಸಾಮ್ಯ ವೈಷಮ್ಯಗಳನ್ನು ಎ.ಎನ್.ಮೂರ್ತಿರಾಯರು ವಿವರವಾಗಿ ವಿಶ್ಲೇಷಿಸಿದ್ದಾರೆ."[೩] "ಹರಟೆಯಲ್ಲಿ ಮಾತುಗಾರಿಕೆಯೂ ವಾಚಾಳತ್ವದ ಮಟ್ಟವನ್ನು ಮುಟ್ಟಿದರೆ ಪ್ರಬಂಧದಲ್ಲಿ ವಾಗ್ಮೀಯತೆಯ ಸೀಮೆಯಲ್ಲಿ ನಿಲ್ಲುತ್ತದೆ."[೪] ಎಂದಿದ್ದಾರೆ ಆ.ರಾ.ಮಿತ್ರ.

ಪ್ರಬಂಧಗಳ ಸ್ವರೂಪವೂ ಭಿನ್ನ. ಇದು ಸಹಜವೇ, ಸಾಮಾನ್ಯವಾಗಿ ಪ್ರಬಂಧ ಮಾದರಿಯ ಲೇಖನಗಳು ವಿವಿಧ ಗೋಷ್ಠಿಗಳಲ್ಲಿ ಮಂಡನೆಗಾಗಿ ಪತ್ರಿಕೆ ಸ್ಮರಣಸಂಚಿಕೆಗಳಿಗಾಗಿ ಬರೆಯಲ್ಪಡುತ್ತವೆ ಅಥವಾ ಅಧ್ಯಯನದ ಫಲವಾಗಿ ಸ್ವಇಚ್ಛೆಯಿಂದ ರೂಪುಗೊಂಡು ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತದೆ.

೧.ತೀ.ನಂ.ಶ್ರೀ; ನೆಂಟರು, ಪುಟ-೬೫

೨.ಗೊರೂರು ರಾಮಸ್ವಾಮಿ ಅಯ್ಯಂಗಾರ್; ಹೊಸಗನ್ನಡ ಪ್ರಬಂಧ, ಪುಟ-೮೬

೩. ಎ.ಎನ್.ಮೂರ್ತಿರಾಯರು; ಸಮಗ್ರ ಲಲಿತ ಪ್ರಬಂಧಗಳು, ಪುಟ-೧೭

೪. ಆ.ರಾ.ಮಿತ್ರ; ಚಿನ್ನದ ಬೆಳಕು, ಪುಟ-೫೮

ಈ ಸಂದರ್ಭಗಳಿಗೆ ತಕ್ಕಂತೆ ಪ್ರಬಂಧಗಳ ಆಳ, ವಿಸ್ತಾರಗಳು ನಿರ್ಧಾರವಾಗುತ್ತವೆ. ನೇರವಾದ ಸ್ಪಷ್ಟ ನಿರೂಪಣೆ ಯಾವುದೇ ಪ್ರಬಂಧದಲ್ಲಿ ಎದ್ದು ಕಾಣುವ ಗುಣ, ಕೆಲವು ಕಡೆ ಪೂರ್ವ ಪೀಠಿಕೆ, ತುಸು ವಿಸ್ತಾರವಾಗಿಯೇ ಬರುವುದು ಉಂಟು. ಆದರೆ ಅನೇಕ ಲೇಖನಗಳಲ್ಲಿ, ಒಂದೆರಡು ಪ್ಯಾರಾಗಳ ನಂತರ ನೇರವಾಗಿ ಪ್ರಬಂಧದ ವಿಷಯ ವಿವೇಚನೆ ಆರಂಭವೇ ಆಗಿಬಿಡುತ್ತದೆ. ಗಂಭೀರ ಪ್ರಬಂಧಗಳ ಆರಂಭದಲ್ಲೇ ಆ ಪ್ರಬಂಧದ ವ್ಯಾಪ್ತಿ, ಆ ವಿಷಯ ಕುರಿತ ತಮ್ಮ ನಿಲುವು, ಬರಹದ ಉದ್ದೇಶ ಇವುಗಳನ್ನು ಸಂದೇಹಕ್ಕೆಡೆ ಇಲ್ಲದಂತೆ ಲೇಖಕರು ಸ್ಪಷ್ಟಪಡಿಸುತ್ತಾರೆ. ಇದು ಸಾಮಾನ್ಯವಾಗಿ ವಿದ್ವತ್ ಪ್ರಬಂಧಗಳ ಲೇಖಕರೆಲ್ಲರೂ ಅನುಸರಿಸುವ ಒಂದು ಕ್ರಮ.

ಈಚೆಗೆ ಬಹಳಷ್ಟು ಲೇಖಕಿಯರು ಮಹಿಳಾ ಸಾಹಿತ್ಯದ ಇತಿಮಿತಿಗಳ ಬಗ್ಗೆ ಬಿಚ್ಚುಮನಸ್ಸಿನಿಂದ ಮಾತನಾಡಿದ್ದಾರೆ. ನಿಜ, ಕಮಲಾಹಂಪನಾ ಅವರು ೨೦ ವರ್ಷಗಳಿಗೂ ಹಿಂದೆಯೇ ಇಂತಹ ಮಾತುಗಳನ್ನಾಡಿದರು ಎಂಬುದು ಮಹತ್ವದ್ದಾಗುತ್ತದೆ. ಇದಕ್ಕೆ ಉದಾಹರಣೆಯಾಗಿ "ಅವರ ಪರಂಪರೆ ಪ್ರತಿಭಟನೆ ಮತ್ತು ಲೇಖಕಿಯರು ಎಂಬ ಲೇಖನದ ಈ ಸಾಲುಗಳನ್ನು ನೋಡಬಹುದು. ಈ ಲೇಖಕಿಯರು ವೈಚಾರಿಕತೆಯಿಂದ ಕೂಡಿದ ಸಾಹಿತ್ಯವನ್ನು ಕೊಡಲು ಸಮರ್ಥರಾಗಿದ್ದಾರೆಯೇ? ವೈಚಾರಿಕತೆಯ ನಂತರ ಗುರುತಿಸಬಹುದಾದ ಪ್ರತಿಭಟನೆ ಇನ್ನೂ ಹೇಗೆ ಸಾಧ್ಯ"[೧]

ಈ ಮೇಲಿನ ಮಾತುಗಳನ್ನು ಹೇಳಿದ ಬಳಿಕ ಈಚೀಚೆಗೆ ಲೇಖಕಿಯರ ಬರಹಗಳಲ್ಲಿ ಕಾಣತೊಡಗಿರುವ ಪ್ರತಿಭಟನೆಯ ಸೋಲಿನ ಬಗ್ಗೆ ಪ್ರಸ್ತಾಪಿಸುತ್ತಾರೆ. ಅನಂತರ ಹೇಳುತ್ತಾರೆ! ಈ ಪ್ರತಿಭಟನಾ ಮೌಲ್ಯದ ಪರಿಪಕ್ವತೆಗೆ ಬಹುಶಃ ಇನ್ನೂ ಕೆಲವು ವರ್ಷಗಳು ಕಾಯಬೇಕಾಗಬಹುದು. ಈ ಮಾತಿನ ಹಿಂದೆ ಎಷ್ಟೊಂದು ಸಂಯಮ, ವಿವೇಚನೆ ಅಡಗಿದೆ ಎಂಬುದನ್ನು ಬದುಕನ್ನು ಅನುಭವಿಸಿದವರು ತಿಳಿಯಬಲ್ಲರು.

ಹೀಗೆ ವಿಸ್ತಾರವಾದ ಪ್ರಬಂಧ ಪ್ರಪಂಚವನ್ನು ಸೃಷ್ಟಿಸಿರುವ ಡಾ.ಕಮಲಾಹಂಪನಾ "ಕೆಲವೆಡೆ ಎಡವಿದ್ದಾರೆ ನಿಜ (ನಡೆವರೆಡದೆ ಕುಳಿತವರೆಡವುಹರೆ). ಆದರೆ ಮುಳುಗಿರುವ ಆಳ, ಏರಿರುವ ಎತ್ತರಗಳು ಗಮನಾರ್ಹವಾದುದು."[೨]

೧.ಡಾ.ಕಮಲಾಹಂಪನಾ; ಬಾಸಿಂಗ, ಪುಟ-೫೦

೨.ಡಾ.ಕಮಲಾಹಂಪನಾ ಒಂದು ಅಧ್ಯಯನ; ಡಾ.ಎಸ್.ಜಿ.ಪದ್ಮಪ್ರಸಾದ್, ಪುಟ-೫೦

ಸೌಂದರ್ಯದ ಗೀಳು ರೋಗ : ಅನೊರೆಕ್ಸಿಯಾ

ಭಾರತದಂತಹ ಬಡದೇಶದಲ್ಲಿ ಹೊಟ್ಟೆಗಿಲ್ಲದೆ ಹಸಿದು ಸಾಯುವ ಜನರಿದ್ದರೆ ಅಚ್ಚರಿಯಲ್ಲ. ಆದರೆ ಮೃಷ್ಟಾನ್ನ ಭೋಜನವಿದ್ದು ತಿನ್ನದೇ ಸಾಯುವ ರೋಗವೊಂದಿದೆ, ಎಂದು ಗೊತ್ತೆ? ಕಡ್ಡಿ ದೇಹದ ಆಸೆಯಿಂದ ಊಟ ಬಿಟ್ಟು, ದಿಟವಾಗಿಯೂ ಜೀವ ಬಿಟ್ಟವರಿದ್ದಾರೆ. 'ಅನೊರೆಕ್ಸಿಯಾ', 'ಬುಲೇಮಿಯಾ' ಇಂತಹ ವಿಚಿತ್ರ ರೋಗಗಳು. ಇಲ್ಲಿಯವರೆಗೂ ಪಾಶ್ಚಾತ್ಯ ದೇಶಗಳ ಪ್ರಾರಬ್ದವಾಗಿದ್ದ ಈ ರೋಗಗಳು ಇಂದು ಭಾರತಕ್ಕೆ ಆಮದಾಗಿವೆ. ಇಂತಹ ವ್ಯಾಧಿಗಳು ಹುಚ್ಚೆದ್ದು ಹೆಚ್ಚುವ ಮೊದಲು ಜನಜಾಗೃತಿ ಮೂಡಿಸುವ ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವ ತುರ್ತು ಅಗತ್ಯವಿದೆ.

'ಸಣ್ಣಗಿದ್ದಷ್ಟೂ ಚೆನ್ನ' ಎನ್ನುವ ಸೌಂದರ್ಯ ಸ್ಪರ್ಧೆಗಳು, ಜಾಹೀರಾತಿನ ರೂಪದರ್ಶಿಗಳು ಎಳೆಯ ಹುಡುಗಿಯರು. ತೆಳು ದೇಹದ ಆಸೆಯಲ್ಲಿ ಅರ್ಧ ಜೀವವಾಗಿರುವಂತೆ ಮಾಡುತ್ತಿವೆ. "ಅಮೇರಿಕಾದಲ್ಲಿ ತೆಳುಕಾಯದ ಗೀಳಿನಲ್ಲಿ, ಉಪವಾಸ ಬಿದ್ದು ಒಂದು ವರ್ಷಕ್ಕೆ ೧,೫೦,೦೦೦ ಎಳೆಯ ಯುವತಿಯರು 'ಅನೊರೆಕ್ಸಿಯಾ' ರೋಗಕ್ಕೆ ಬಲಿಯಾಗಿ ಸಾಯುತ್ತಾರೆಂದು ನಿಮಗೆ ಗೊತ್ತೆ? ಸಾಧಾರಣ ಅಮೇರಿಕಾದ ಮಹಿಳೆ ೫ ಅಡಿ ೪ ಅಂಗುಲ ಎತ್ತರವಿರುತ್ತಾಳೆ. ಆಕೆ ಸರಾಸರಿ ೬೨ ಕೆ.ಜಿ. ತೂಗುತ್ತಾಳೆ. ಆದರೆ 'ಫ್ಯಾಶನ್ ಲೋಕದ ರೂಪದರ್ಶಿಗಳು ಶೇ೯೮ರಷ್ಟು ಮಹಿಳೆಯರು ಸಣ್ಣಗಿರುತ್ತಾರೆ"[೧] ಗ್ಲಾಮರ್ ಜಗತ್ತು ಮತ್ತು ಮಾಧ್ಯಮಗಳು ನಮ್ಮ ಮಾಧ್ಯಮಗಳು ನಮ್ಮ ಬದುಕನ್ನು ಹೇಗೆ ನಿಯಂತ್ರಿಸುತ್ತವೆ ಎಂದರೆ, ಅಮೇರಿಕಾದ ಪ್ರಾಥಮಿಕ ಶಾಲೆಯಲ್ಲಿರುವ ಶೇಕಡ ೬೦ರಷ್ಟು ಮಕ್ಕಳು ಸಣ್ಣಗಿರಲು ಬಯಸುತ್ತಾರೆ. ಇಲ್ಲಿಯ ಮಕ್ಕಳಿಗೆ ದಪ್ಪವಾಗಿ ಬಿಡುವ ಭಯ ಕಾಡುತ್ತದೆ. ಇಂಗ್ಲೆಂಡಿನಲ್ಲಿ ೧೨ರಿಂದ ೧೫ವರ್ಷದ ಎಳೆಯ ಹುಡುಗಿಯರು ಅರ್ಧಕ್ಕೂ ಹೆಚ್ಚು ಮಂದಿಗೆ ಅವರ ಜೀವನದ ಅತಿ ದೊಡ್ಡ ಚಿಂತೆ ತಾವು ಹೇಗೆ ಕಾಣುತ್ತೇವೆ ಎಂಬುದಾಗಿತ್ತು.

ದಶಕ ದಶಕಗಳಿಂದ ವಿದೇಶಿಯರನ್ನು ಕಾಡಿದ ಇಂತಹ ರೋಗಗಳನ್ನು ಭಾರತ ದೇಶದಲ್ಲಿ ಕಂಡಿರಲಿಲ್ಲ. ಶಿಲಾಬಾಲಿಕಿಯರಂತೆ ಮೈತುಂಬಿಕೊಂಡು ಆರೋಗ್ಯವಂತರಾಗಿ ಕಾಣುವುದು ಇಲ್ಲಿಯವರೆಗೂ ಭಾರತೀಯ ಸೌಂದರ್ಯದ ಪರಿಕಲ್ಪನೆಯಾಗಿತ್ತು. ಆದರೆ ಪರದೇಶದ ಎಲ್ಲವನ್ನು ಕೊಂಡು ತಂದ ಮೇಲೆ ಅನುರೇಕ್ಸಿಯಾ, ಬುಲೇಮಿಯಾಗಳಂತಹ ರೋಗಗಳನ್ನು ಹಿಂದೆ ಬಿಡಲು ಸಾಧ್ಯವೇ. ಭಾರತದ ಸುಂದರಿಯರು ಕಿರೀಟ ಗೆದ್ದು ತರಲು ಆರಂಭವಾಗುತ್ತಿದ್ದಂತೆ, ಈ ರೋಗಗಳು ಭಾರತದಲ್ಲೂ ತಲೆದೋರತೊಡಗಿದವು. ಕೆಲವು ವರ್ಷಗಳ ಹಿಂದೆಯೇ ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ತಿಂಗಳಿಗೆ ೫ ಇಂತಹ ಕೇಸುಗಳು ದಾಖಲಾಗತೊಡಗಿದ್ದವು. ದೆಹಲಿಯ ಮನೋವೈದ್ಯರಾದ ಸಂಜಯ್ ಜುಕ್ "ಕಳೆದ ಮೂರು ವರ್ಷಗಳಲ್ಲಿ ಒಂದು ನೂರಕ್ಕೂ ಹೆಚ್ಚು ಅನೊರೆಕ್ಸಿಯಾ

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ–೧೧೦

ಕೇಸುಗಳು ನನ್ನಲ್ಲಿಗೆ ಬಂದಿವೆ. ಇದು ತೀರ ಆತಂಕಕಾರಿ ಬೆಳವಣಿಗೆ"[೧] ಎನ್ನುತ್ತಾರೆ. ಈ ರೋಗ ೧೨ವರ್ಷದ ಪುಟ್ಟ ಬಾಲೆಯರಲ್ಲೂ ಕಂಡುಬಂದಿದೆ. ದೆಹಲಿಯ ಮತ್ತೊಬ್ಬ ಮನೋವೈದ್ಯರಾದ ಜೀತೇಂದ್ರ ನಾಗ್‌ಪಾಲ್ 'ರೂಪದರ್ಶಿಗಳಾಗುವ ಕನಸಿನಲ್ಲಿ ಈ ಹೆಣ್ಣು ಮಕ್ಕಳು ಹಸಿವನ್ನು ಮುಚ್ಚಿಹಾಕಲು ಸಿಗರೇಟು ಸೇದುವ ಚಟಕ್ಕೆ ಇಳಿದಿರುವತ್ತಾ ಗಮನ ಸೆಳೆದಿದ್ದಾರೆ'. ಇಂದು ಇಡೀ ಭಾರತದಲ್ಲಿ ಅನೊರೆಕ್ಸಿಯಾ ರೋಗಿಗಳ ಸಂಖ್ಯೆ ಎಷ್ಟೆಂದು ಯಾರೂ ಅಂಕಿಸಂಖ್ಯೆ ಕಲೆಹಾಕಿಲ್ಲ, ತಲೆ ಕೆಡಿಸಿಕೊಂಡಿಲ್ಲ. ವಿದೇಶದ ಸೌಂದರ್ಯ ಸಾಧನಗಳೊಡನೆ ನಾವು ಈ ಸೌಂದರ್ಯದ ಗೀಳು ರೋಗಗಳನ್ನು ಕೊಂಡು ತಂದಿದ್ದೇವೆ.

'ಅನೊರೆಕ್ಸಿಯಾ' ಎಂಬುದೊಂದು ತಿನ್ನುವ ವ್ಯಾಧಿ. ಬಾಹ್ಯ ಸೌಂದರ್ಯವೇ ಗೀಳಾಗಿ, ಮಾನಸಿಕ ಅಸ್ವಸ್ಥತೆ, 'ನಾನುದಪ್ಪಗಿರುವೆ', ಇರಬೇಕಾದಷ್ಟು ಸಣ್ಣಗಿಲ್ಲ ಎಂಬ ದೇಹದ ವಕ್ರಚಿತ್ರವನ್ನು ಕಲ್ಪಿಸುತ್ತದೆ. ಈ 'ತಿನ್ನುವ ವ್ಯಾಧಿ' ಎಳೆಯ ವಯಸ್ಸಿನ ಹೆಣ್ಣು ಮಕ್ಕಳನ್ನೇ ಹೆಚ್ಚು ಬಾಧಿಸುತ್ತದೆ. ಇಂದು ಜಗತ್ತಿನಲ್ಲಿ ೭೦ಲಕ್ಷ ಮಹಿಳೆಯರು 'ಅನೊರೆಕ್ಸಿಯಾ' ಅಥವಾ 'ಬುಲೇಮಿಯಾ'ದಿಂದ ನರಳುತ್ತಿದ್ದಾರೆ. ಇವರಲ್ಲಿ ಶೇಕಡ ಆರರಷ್ಟು ಮಹಿಳೆಯರು ಈ ಕಾಯಿಲೆಗಳಿಂದ ಸಾಯುತ್ತಾರೆ. ಕೇವಲ ಶೇಕಡ ೫೦ ರಷ್ಟು ಮಂದಿ ಗುಣವಾಗುತ್ತಾರೆ. ವಿಪರೀತ ವ್ಯಾಯಾಮ ಮಾಡಿ ದೇಹವನ್ನು ದುಡಿಸುವುದು, ಧಿಡೀರ್ ಸಣ್ಣಗಾಗಿಸುವ ಮಾತ್ರೆ ನುಂಗುವುದು ಇಂಥ ವಿಷಮರ್ತುಲದಲ್ಲಿ ಸಿಕ್ಕಿ ಬಿದ್ದಿದ್ದಾರೆ. ಅನೊರೆಕ್ಸಿಯಾ ರೋಗಿಗಳಿಗೆ ತಮ್ಮ ದೇಹದಬಗ್ಗೆ ಎಲ್ಲಿಲ್ಲದ ಕೀಳರಿಮೆ, ಅದು ತಾವು ಬಯಸಿದಷ್ಟು ಸಣ್ಣಗಿಲ್ಲ ಎಂಬ ಆತಂಕ, ಕೋಣೆಯಲ್ಲಿ ಅವಿತುಕೊಂಡು ಉಪವಾಸ ಬೀಳುತ್ತಾರೆ. ಅನೊರೆಕ್ಸಿಯಾದ ಮುಖ್ಯ ಲಕ್ಷಣಗಳೆಂದರೆ ಶೇಕಡಾ ೨೫ ಅಥವಾ ಇದಕ್ಕೂ ಹೆಚ್ಚು ತೂಕ ಕಳೆದುಕೊಳ್ಳುವುದು, ಚಳಿಯನ್ನು ಸಹಿಸಲಾಗದುದು, ಮಲಬದ್ಧತೆ, ತಿಂಗಳಿನ ಮುಟ್ಟಿನ ಅಸ್ತವ್ಯಸ್ತ, ರಕ್ತದ ಒತ್ತಡ ತಗ್ಗುವುದು, ಹಲ್ಲುಗಳಲ್ಲಿ ಕುಳಿ ಬೀಳುವುದು, ದೇಹದ ರಕ್ಷಣಾ ವ್ಯವಸ್ಥೆ ಕ್ಷೀಣಿಸಿ, ಬಲುಬೇಗ ರೋಗದ ಸೋಂಕು ತಾಗುವುದು, ರಕ್ತಹೀನತೆ, ನ್ಯೂನಪೋಷಣೆ, ಬಣ್ಣಗೆಟ್ಟ ಚರ್ಮ, ಒಣಗಿದ ಕೂದಲು, ಸರಿಯಾಗಿ ನಿದ್ದೆಬಾರದು, ದೇಹದ ಶಾಖ, ರಕ್ತದ ಒತ್ತಡ ಕಡಿಮೆಯಾಗುವುದು, ನಿತ್ರಾಣ, ಸುಸ್ತು ಮೂಳೆಗಳು ಕ್ಯಾಲ್ಸಿಯಂ ಕಳಕೊಳ್ಳುವುದರಿಂದ ಬಿದಿರಾಗುವ ಮೂಳೆಗಳು.

ಇವೆಲ್ಲ ರೋಗದ ದೈಹಿಕ ಸಮಸ್ಯೆಗಳಾದರೆ ಮಾನಸಿಕ ಸಮಸ್ಯೆಗಳೆಂದರೆ ಮಾನಸಿಕ ಖಿನ್ನತೆ, ಅಸಹಾಯಕಭಾವ, ಸಂಶಯ, ತನ್ನ ರೋಗ ಇತರರಿಗೆ ತಿಳಿದುಬಿಡುವುದೆಂಬ ಭಯ, ಆತಂಕ, ಏಕಾಂಗಿಯಾದ ಭಾವ ಮೂಡುವುದು. ತಿನ್ನುವ ವ್ಯಾಧಿ ನಮ್ಮ ದೇಹದ ಪ್ರತಿ ಜೀವಕೋಶದ ಮೇಲೆ, ಪ್ರತಿಯೊಂದು ಅಂಗದ ಮೇಲೂ ಪ್ರಭಾವ ಬೀರಬಲ್ಲದು. ಈ ರೋಗದ ಚಿಕಿತ್ಸೆ ಎಂದರೇ ದೇಹದ

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೧೧೧

ತೂಕವನ್ನು 'ನಾರ್ಮಲ್' ಮಟ್ಟಕ್ಕೆ ತರುವುದಾಗಿದೆ. ಹಾಗೆಯೇ ಸರಿಯಾದ ತಿನ್ನುವ ಅಭ್ಯಾಸವನ್ನು ಬೆಳೆಸುವುದಾಗಿದೆ. ಮಾನಸಿಕ ಚಿಕಿತ್ಸೆಯನ್ನು ನೀಡುವುದು ಬಹು ಮುಖ್ಯವಾದದ್ದು. ಆಪ್ತಸಲಹೆ ಬಹಳಷ್ಟು ಸಹಾಯಕಾರಿ. ಈ ವಿಷಯದ ಬಗ್ಗೆ ಸಾರ್ವಜನಿಕರಲ್ಲಿ ಎಚ್ಚರಿಕೆ ಮೂಡಿಸುವ ತುರ್ತು ಅಗತ್ಯವಿದೆ. ವಿದೇಶಗಳಂತೆ ನಮ್ಮ ದೇಶದಲ್ಲಿ ತಿನ್ನುವ ವ್ಯಾಧಿಗಳ ಬಗ್ಗೆ ಜಾಗೃತಿ ಮೂಡಿಲ್ಲ. ಊಟ ಬಿಡುವುದು, ಊಟ ಮಾಡಿದಾಗ ಸ್ವಲ್ಪವೇ ತಿನ್ನುವುದು, ಇತರರ ಮುಂದೆ ತಿನ್ನದೇ ಇರುವುದು, ತಿನ್ನುವುದಿಕ್ಕೆ ನೆಪ ಹೇಳುವುದು ಗಮನಿಸಬೇಕಾದ ರೋಗದ ಪ್ರಾರಂಭಿಕ ಚಿಹ್ನೆಗಳು. ಇಂತಹ ರೋಗಿಗಳಿಗೆ ತಮ್ಮ ತೂಕ ಹೆಚ್ಚುವುದರ ಬಗ್ಗೆ ವಿಪರೀತದ ಭಯ. ಬಹಳಷ್ಟು ಸಮಯ ಕನ್ನಡಿಯ ಮುಂದೆ ದೇಹವನ್ನು ಪರಿಶೀಲಿಸುವುದರಲ್ಲಿ ಹಾಗೂ ಸಣ್ಣಗಿಲ್ಲವೆಂದು ಕೊರಗುತ್ತಾರೆ.

ತಿನ್ನುವ ವ್ಯಾಧಿಗೆ ಚಿಕಿತ್ಸೆ ಇದೆ. ದೇಹದ ತೂಕವನ್ನು ನಾರ್ಮಲ್ ಮಟ್ಟಕ್ಕೆ ತರುವುದಾಗಿದೆ ಮತ್ತು ಸರಿಯಾದ ತಿನ್ನುವ ಅಭ್ಯಾಸವನ್ನು ಬೆಳೆಸುವುದಾಗಿದೆ. ಮಾನಸಿಕ ಚಿಕಿತ್ಸೆಯನ್ನು ನೀಡುವುದು ಬಹು ಮುಖ್ಯವಾದದ್ದು. ಅಪ್ತಸಲಹೆ ಬಹಳಷ್ಟು ಸಹಾಯಕಾರಿ. ಈ ವ್ಯಾಧಿ ಪಾಶ್ಚಾತ್ಯರಂತೆ ನಮ್ಮ ಇಡೀ ಸಮಾಜವನ್ನು ಕಾಡುವ ಮೊದಲು ಎಚ್ಚರಿಕೆ ವಹಿಸಿ, ಮುನ್ಸೂಚನಾ ಕ್ರಮಗಳನ್ನು ತೆಗೆದುಕೊಳ್ಳುವುದು. ಹೆಣ್ಣುಮಕ್ಕಳಿಗೆ ತಮ್ಮ ದೇಹಕ್ಕಿಂತ ಬುದ್ಧಿಯನ್ನು ಬಳಸುವತ್ತಗಮನ ನೀಡುವ ಅಗತ್ಯವಿದೆ. ಗಂಡಸರೂ ದಷ್ಟಪುಷ್ಟವಾಗಿ ಮಾಂಸಖಂಡಗಳಿಂದ ಮಿಂಚುವಂತಿರಬೇಕು, ಅದೇ ಹೆಣ್ಣು ಸಣ್ಣಗೆ ನಾಜೂಕಾಗಿರಬೇಕು ಎಂಬ ಸಾಮಾಜಿಕ ಒತ್ತಡವನ್ನು ತೊಡೆಯುವುದು ಮುಖ್ಯ.

ಮುಖ್ಯವಾಗಿ ಗಮನಿಸಬೇಕಾದದ್ದು ತಿನ್ನುವ ವ್ಯಾಧಿ ಒಂದು ಮಾನಸಿಕ ರೋಗ. ಅದಕ್ಕೆ ಚಿಕಿತ್ಸೆ ಅಗತ್ಯ. ಜನ ಜಾಗೃತಿ ಮೂಡಿಸುವುದು ಅತ್ಯಗತ್ಯ. "ಏಡ್ಸ್‌ನಂತೆ ಇದೊಂದು ಅಜ್ಞಾನದಲ್ಲಿ ಹುಚ್ಚೆದ್ದು ಹೆಚ್ಚುವ ಮೊದಲು ನಮ್ಮ ಹೆಣ್ಣು ಮಕ್ಕಳಲ್ಲಿ ದೇಹದ ಅಳತೆ, ತೂಕ, ಊಟ, ತಿಂಡಿಯನ್ನು ಕುರಿತು ಆರೋಗ್ಯಕರ ಮತ್ತು ವಾಸ್ತವಿಕ ಚಿಂತನೆಯನ್ನು ಬೆಳೆಸುವ ಅಗತ್ಯವಿದೆ."[೧]

ವಿಜ್ಞಾನ, ತಂತ್ರಜ್ಞಾನ, ವೈಜ್ಞಾನಿಕ ಮನೋಭಾವನೆಗಳಿಂದ ಮುಂದುವರೆದ ಇಂದಿನ ಆಧುನಿಕ ಕಾಲದಲ್ಲಿಯೂ, ಮಹಿಳೆಯ ಆರೋಗ್ಯದತ್ತ ಗಮನಹರಿಸುತ್ತಿರುವ ಸಂದರ್ಭದಲ್ಲಿ ಸೌಂದರ್ಯದ ರಾಣಿಯರಾಗಲು, ರೂಪದರ್ಶಿಗಳಾಗಲು ಹಾತೊರೆಯುವ ಬಹಳಷ್ಟು ಹೆಣ್ಣುಮಕ್ಕಳು, ತಮ್ಮ ದೇಹ ಸೌಂದರ್ಯದ ಮೇಲಿನ ವ್ಯಾಮೋಹಕ್ಕೆ ಒಳಗಾಗಿ ಈ ರೋಗಕ್ಕೆ ತುತ್ತಾಗುತ್ತಿರುವ ಹೆಣ್ಣುಮಕ್ಕಳಿಗೆ ವೈಚಾರಿಕ ಅರಿವು ಮೂಡಿಸುವ ನಿಟ್ಟಿನಲ್ಲಿ ನೇಮಿಚಂದ್ರರ ಈ ಪ್ರಬಂಧ ಲೇಖನ ಗಮನಾರ್ಹವಾಗಿದೆ ಎನ್ನಬಹುದು.

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೧೧೪

ಬದುಕುವ ಹಕ್ಕನ್ನೂ ಕಿತ್ತುಕೊಂಡ ಮರ್ಯಾದಾ ಹತ್ಯೆಗಳು

ಮುಖದ ತುಂಬಾ ಬಿಳಿಯ ದುಪ್ಪಟವನ್ನು ಬಾರಿ ಬಾರಿಗೆ ಎಳೆದುಕೊಳ್ಳುತ್ತಾಳೆ. ಜಹೀದಾ ಪರ್ವೀನ್. ಪುಟ್ಟ ಕಂದವನ್ನು ಹಿಡಿಯಲು ಬಗ್ಗಿದಾಗ ತಟ್ಟನೆ ಅದು ಜಾರುತ್ತದೆ. ಬೀಭತ್ಸ ಮುಖ ಎದೆ ನಡುಗಿಸುತ್ತದೆ. ಕಣ್ಣುಗಳು ಕೊರೆದು ತೆಗೆದ ಎರಡು ತೂತುಗಳು. ಕಿವಿಗಳು ಕತ್ತರಿಸಿ ಹೋಗಿವೆ. ತುಂಡರಿಸಿದ ಮೂಗಿನ ಜಾಗದಲ್ಲಿ ಎರಡುಗುಳಿಗಳು ಎದ್ದು ಕಾಣುತ್ತವೆ. ಏನು ಈಕೆ ಅಪಘಾತಕ್ಕೊಳಗಾದವಳೇ? ಇಲ್ಲ, ಇದು ಆಕೆಯ ಪತಿಯ ಬಳುವಳಿ. ಪತ್ನಿ ಮೈದುನನೊಡನೆ ಮಾತನಾಡಿದಳು,

ಆಕೆಗೆ ಆತನೊಡನೆ ಸಂಬಂಧವಿದೆ ಎಂಬ ಅನುಮಾನವೇ ಸಾಕಿತ್ತು. ಪತಿಯನ್ನು ಕೋಪದಿಂದ ಕೆರಳಿಸಲು, ಜಹೀದಾ ಪರಿಪರಿಯಾಗಿ ಹೇಳಿದರೂ ನಂಬದ ಗಂಡ, ಆಕೆಯನ್ನು ಕಟ್ಟಿಹಾಕಿ ರೇಸರ್ ಮತ್ತು ಚಾಕುವಿನಿಂದ ಮುಖವನ್ನು ಕೊರೆದು, ಕತ್ತರಿಸಿ ವಿಕಾರಗೊಳಿಸಿದ. ಆಕೆ ಆಗ ಮೂರು ತಿಂಗಳ ಗರ್ಭಿಣಿ. ಕೋಪೋದ್ರಿಕ್ತ ಕ್ಷಣದಲ್ಲಿ ಎಸಗಿದ ಕೃತ್ಯ, ನಂತರ ಪಶ್ಚಾತ್ತಾಪ ಪಟ್ಟಿರಬಹುದು ಎಂದು ನೀವು ಭಾವಿಸಿದರೆ ಅದು ಸುಳ್ಳು. ಆಕೆಯ ಗಂಡ ಹೇಳುವುದೇನು ಗೊತ್ತೆ "ನಾನು ಮಾಡಿದ ಕೆಲಸದಿಂದ ನನಗೆ ತೃಪ್ತಿಯಾಗಿದೆ, ಪಶ್ಚಾತಾಪವಿಲ್ಲ"[೧] ಕೋರ್ಟಿನ ಅಂಗಳದ ಕೆಲವು ಗಂಡಸರನ್ನು ವರದಿಗಾರರು ಪ್ರತಿಕ್ರಿಯೆ ವ್ಯಕ್ತಪಡಿಸಿ ಎಂದಾಗ–ಯಾರೇ ಗಂಡಸು ಮಾಡುವುದನ್ನೇ ಇಕ್ಬಾಲ್ ಮಾಡಿದ್ದಾನೆ. ಹೆಂಡತಿಯ ಮೇಲಿನ ಹಕ್ಕನ್ನು ಪ್ರತಿಷ್ಠಾಪಿಸಲು ಇದಕ್ಕಿಂತ ಒಳ್ಳೆಯ ಮಾರ್ಗ ಇನ್ನಾವುದಿದ್ದೀತು.

ಪಾಕಿಸ್ತಾನದ ರಾವಲ್‌ಪಿಂಡಿಯ ಬಳಿ ವಾಸಿಸುವ ಪರ್ವೀನ್ ೩೨ ವರ್ಷದ ವಿವಾಹಿತ ಸ್ತ್ರೀ. ಅದಿನ ಇಕ್ಬಾಲ್ ಮನೆಗೆ ಬಂದವನೇ 'ನಿನಗೆನನ್ನ ತಮ್ಮನ ಜೊತೆ ಸಂಬಂಧವಿದೆ' ಎಂದು ಆರೋಪಿಸಿದ. ಇದು ಸತ್ಯವಲ್ಲ ಎಂಬ ಆಕೆಯ ಅಸಹಾಯಕ ಮೊರೆಯಾಗಲಿ. ಮೂರು ತಿಂಗಳ ಗರ್ಭಿಣಿಯ ಆರ್ತನಾದವಾಗಲಿ ಅವನನ್ನು ತಡೆಯಲಿಲ್ಲ. ಪಾಕಿಸ್ತಾನದಲ್ಲಿ ಸಾವಿರಾರು ಮಹಿಳೆಯರು, ಎಳೆಯ ಹುಡುಗಿಯರು, ತಮ್ಮ ಗಂಡ, ತಂದೆ ಇಲ್ಲ ಸೋದರರಿಂದ ಇರಿಯಲ್ಪಡುತ್ತಾರೆ, ಕತ್ತರಿಸಲ್ಪಡುತ್ತಿದ್ದಾರೆ, ಸುಡಲ್ಪಡುತ್ತಿದ್ದಾರೆ, ಅಂಗವಿಕಲರಾಗುತ್ತಿದ್ದಾರೆ. ಕಾರಣ ಅವರು ತಮ್ಮ ಇಷ್ಟದ ಹುಡುಗನನ್ನು ಆಯ್ದುಕೊಂಡದ್ದಾಗಿರಬಹುದು, 'ತಮಗೆ ನಿಷ್ಠರಾಗಿಲ್ಲ' ಎಂಬ ಪತಿಯ ಅನುಮಾನವಾಗಿರ ಬಹುದು. ಕುಟುಂಬದ ಗೌರವದ ಹೆಸರಿನಲ್ಲಿ ಪುರುಷರು ಹೆಂಗಸರ ಮೇಲೆ ಎಸಗುವ ಇಂಥಾ ಪೈಶಾಚಿಕ ಕೃತ್ಯಕ್ಕೆ 'ಮರ್ಯಾದಾ ಹತ್ಯೆ' ಎಂಬ ಹೆಸರು. ಸಾಂಪ್ರದಾಯಿಕ ಸಮಾಜ ಹೆಣ್ಣನ್ನು ಸಂರಕ್ಷಿಸುತ್ತದೆ ಎಂಬ ಭ್ರಮೆ ಇದ್ದರೆ, ಇಂಥಾ ಹಾಡು ಹಗಲ ಹತ್ಯೆಗಳು ಕಣ್ಣು ತೆರೆಸುತ್ತವೆ.

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ–೧೩೦

೧೯೯೬ ರಲ್ಲಿ ಎಂ.ಬಿ.ಎ. ವಿದ್ಯಾರ್ಥಿನಿ ಸೈಮಾವಹೀದ್ ತನ್ನ ಇಂಗ್ಲೀಷ್ ಪ್ರಾಧ್ಯಾಪಕರಾದ ಅರ್ಶದ್ ಅಹ್ಮದ್ ಅವರನ್ನು ತನ್ನ ಪಾಲಕರ ಒಪ್ಪಿಗೆ ಇಲ್ಲದೆಯೇ ವಿವಾಹವಾದಳು. 'ಈ ಮದುವೆಗೆ ತನ್ನ ಅನುಮತಿ ಇಲ್ಲದಿರುವ ಕಾರಣ ಇದು ಕುರಾನಿಗೆ ವಿರುದ್ಧವಾಗಿದೆ ಮದುವೆಯನ್ನು ತಕ್ಷಣ ರದ್ದು ಮಾಡಬೇಕು'[೧] ಎಂದು ಕೋರಿ ಆಕೆಯ ತಂದೆ ಕೋರ್ಟಿನಲ್ಲಿ ದಾವಾ ಹೂಡಿದ. ಲಾಹೋರಿನ ಹೈಕೋರ್ಟ್ ಆತನ ವ್ಯಾಜ್ಯವನ್ನು ಸ್ವೀಕರಿಸಿತ್ತು ದೇಶದಾದ್ಯಂತ ವಾದವಿವಾದವನ್ನು ಹುಟ್ಟಿಸಿದ ಕೇಸ್ ಇದು. ಒಂದೆಡೆ ಮಹಿಳೆ ಮತ್ತು ಮಾನವ ಹಕ್ಕುಗಳ ಹೋರಾಟಗಾರರು,ಇನ್ನೊಂದೆಡೆ ಸಂಪ್ರದಾಯಸ್ಥ ಮುಸ್ಲಿಯರು ಮತ್ತು ಧಾರ್ಮಿಕ ಕ್ಲರ್ಜಿಗಳು, ಸಾವಿನ ಬೆದರಿಕೆಯನ್ನು ಎದುರಿಸುವ ಸೈಮಾಳ ಗಂಡ ಜೀವಭಯದಿಂದ ಅವಿತುಕೊಳ್ಳಬೇಕಾಯಿತು. ಮಾನವ ಹಕ್ಕುಗಳ ಚಳುವಳಿಗಾರ್ತಿ ಅಸ್ಮಾಜಹಂಗೀರ್ ಸೈಮಾಳ ಕೇಸನ್ನು ಎತ್ತಿಕೊಂಡರು. ಹತ್ತು ತಿಂಗಳ ವಾದ-ವಿವಾದದ ನಂತರ ಲಾಹೋರ್ ಹೈಕೋರ್ಟ್ ಕಡೆಗೂ ಸೈಮಾಗೆ ತನ್ನ ಗಂಡನನ್ನು ಸೇರಿಕೊಳ್ಳಲು ಅನುಮತಿ ನೀಡಿದರೂ, ನ್ಯಾಯಧೀಶರು "ಇಂಥಾ ಪ್ರಕರಣಗಳಾಗದಂತೆ ತಡೆಯಲು ಗಂಡಸರು-ಹೆಂಗಸರೂ ಸಮೀಪಕ್ಕೆ ಬಾರದಂತೆ ಶಾಸನ ತರಬೇಕೆಂದು ತಿಳಿಸಿದರು"[೨] ಅಂದರೆ "ಹೆಣ್ಣಾದ ನನಗೆ ಗಂಡಸರಿರುವ ಕೋರ್ಟಿನಲ್ಲಿ ನನ್ನ ಕಕ್ಷಿಗಾರಳ ಪರವಾಗಿ ವಾದಿಸುವ ಹಕ್ಕೂ ಇಲ್ಲವೆಂದೇ?" ಅಸ್ಮಾ ಕೋಪದಿಂದ ಕೂಗಿದ್ದರು. ಮಹಿಳಾ ಹಕ್ಕುಗಳ ಪ್ರತಿಪಾದಕರಿಗೆ ಅಸ್ಮಾಜಹಂಗೀರ್ ಅವರಿಗೆ ಸಣ್ಣ ವಿಜಯವನ್ನು ತಂದಿತ್ತು.

ಎರಡು ವರ್ಷಗಳ ನಂತರ ಇದೇ ಮಾನವ ಹಕ್ಕುಗಳ ಹೋರಾಟಗಾರ್ತಿಯ ಕಛೇರಿಯಲ್ಲಿ ಆಕೆಯ ಕಣ್ಣೆದುರಿನಲ್ಲಿಯೇ ಸಮೀಯೂ ಇಮ್ರಾನ್ ಎಂಬ ಮಹಿಳೆಯನ್ನು ಗುಂಡಿಕ್ಕಿ ಕೊಲ್ಲಲಾಯಿತು. ಸಮೀಯಾಳ ಅಪರಾಧ ಆಕೆ ವಿಚ್ಛೇದನ ಬಯಸಿ ಮನೆತನದ ಗೌರವಕ್ಕೆ ಧಕ್ಕೆ ತಂದದ್ದು. ಆಕೆಯ ತಂದೆಯೇ ಈ ಕೊಲೆಯನ್ನು ಮಾಡಿಸಿದ್ದರು. ೨೮ ವರ್ಷದ ಸಮೀಯಾ ಇಮ್ರಾನ್ ತನ್ನ ಕ್ರೂರಿ ಗಂಡನಿಂದ ವಿಚ್ಛೇದನ ಬಯಸಿದ್ದಳು. ಉಗ್ರ ಕೋಪದ ತೀವ್ರ ಹಿಂಸೆಯ ಗಂಡನಿಂದ ಬಿಡುಗಡೆ ಪಡೆಯಲು ಈಕೆ ಲಾಹೋರಿನ ಹೀನಾ ಜಿಲಾನಿ ಮತ್ತು ಅಸ್ಮಾಜಹಂಗೀರ್ ಅವರ ಕಛೇರಿಗೆ ಬಂದಳು. ಐದೇ ನಿಮಿಷದಲ್ಲಿ ಹಬೀಬ್ ರೆಹ್ಮಾನ್ ಎಂಬ ಮನುಷ್ಯ ಒಳ ನುಗ್ಗಿದವನೇ ಸಮೀಯಾಳ ತಲೆಗೆ ಪಿಸ್ತೂಲ್ ಹಿಡಿದು ಗುಂಡು ಹಾರಿಸಿದ. ಸಮೀಯ ವಿಚ್ಛೇದನ ಪಡೆದು ಮನೆತನದ ಗೌರವಕ್ಕೆ ಧಕ್ಕೆ ತರುವ ಮೊದಲು ಆಕೆಯನ್ನು ಮುಗಿಸಿ ಬಿಡಲು ಆಕೆಯ ತಂದೆ-ತಾಯಿ ಮತ್ತು ಸಹೋದರರು ಬಯಸಿದ್ದರು.

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ-೧೩೨

೨.ಅದೇ, ಪುಟ-೧೩೪

ಸಮೀಯಾಳ ಪ್ರಕರಣದಿಂದ ಜನ ಎಚ್ಚೆತ್ತು ಆಕೆಯ ಕೊಲೆಗಾರರಿಗೆ ಶಿಕ್ಷೆ ಕೊಡುವಂತೆ ಕೂಗಿದ್ದು ಕೇಳಿ ಬರಲಿಲ್ಲ. ಬದಲು ಸಮೀಯಲೀಗೆ ರಕ್ಷಣೆ ನೀಡಿದ ಅಸ್ಮಾ ಜಹಂಗೀರ್ ಮತ್ತು ಜಿಲಾನಿಗೆ ಶಿಕ್ಷೆ ನೀಡುವ ಕೂಗಿತ್ತು. ಮಹಿಳೆಯರಿಗೆ ಅನೇಕಾನೇಕ ಹಕ್ಕುಗಳನ್ನು ನೀಡಿರುವ ಇಸ್ಲಾಂ ಧರ್ಮದಲ್ಲೆಲ್ಲೂ ಇಂಥ ಕೊಲೆಗೆ ಮನ್ನಣೆ ಇಲ್ಲ. ಆದರೆ ಧರ್ಮವನ್ನು ತಮ್ಮ ಇಚ್ಛೆಯಂತೆ ಅರ್ಥೈಸುವ ಪುರುಷ ಪ್ರಧಾನ ಸಮಾಜದ ಪ್ರಬಲರು, ಹೆಣ್ಣಿನ ಮೇಲೆ ನಿರಂತರ ಶೋಷಣೆ ನಡೆಸಿದ್ದಾರೆ. ಸಮೀಯಾಳ ಕೇಸಿನಂತೆ ಎಲ್ಲಾ 'ಮರ್ಯಾದಾ ಹತ್ಯೆ'ಗಳೂ ಬೆಳಕಿಗೆ ಬರುವುದಿಲ್ಲ. ಬದುಕುಳಿದ ಹೆಣ್ಣುಗಳೂ ತಮ್ಮ ಮೇಲಿನ ಆಕ್ರಮಣವನ್ನು ಭೀತಿಯಿಂದ ಮುಚ್ಚಿಡುತ್ತಾರೆ. ಬೇರೆ ದಾರಿಯಿಲ್ಲದ ಅನಿವಾರ್ಯದಲ್ಲಿ 'ಅಪಘಾತ' ಎಂದು ಉಲಿದು ಅದೇ ಹಿಂಸೆಯಕೊಪಕ್ಕೆ, ಕೊಲೆಗಡುಕರ ನಡುವಿನ ಬದುಕಿಗೆ ಹಿಂತಿರುಗುತ್ತಾರೆ. ಪಾಕಿಸ್ತಾನದ ಮಾನವ ಹಕ್ಕುಗಳ ನಿಯೋಗದ ಪ್ರಕಾರ ೧೯೯೭ರಲ್ಲಿ ಸಿಂಧ್ ಪ್ರಾಂತವೊಂದರಲ್ಲೆ ೩೦೦ ಮಹಿಳೆಯರು ಇಂಥಾ 'ಗೌರವದ ಕೊಲೆ'ಗೆ ಬಲಿಯಾದರು. ೧೯೯೮ ಮತ್ತು ೧೯೯೯ರ ಎರಡು ವರ್ಷದಲ್ಲಿಯೇ, ಪಾಕಿಸ್ತಾನದ ಪಂಜಾಬ್ ಪ್ರಾಂತವೊಂದರಲ್ಲಿಯೇ, ೮೫೦ ಮಹಿಳೆಯರು ತಮ್ಮ ತಂದೆ, ಅಣ್ಣ ತಮ್ಮ, ಇಲ್ಲ ಗಂಡನ ಕೈಯಿಂದ ಕೊಲೆಯಾಗಿದ್ದಾರೆ.

ಕೊಲೆಗೆ ಅತಿ ಸಣ್ಣ ಕಾರಣ ಸಾಕು. ನಲವತ್ತು ವರ್ಷದ ಜರೀನಾಳ ಎಳೆಯ ಮಗಳನ್ನು ಇಪ್ಪತ್ತು ವರ್ಷದ ಆಕೆಯ ಮಲಮಗ ಗಂಡಿಟ್ಟು ಕೊಂದ. ಕಾರಣ ಆಹುಡುಗಿ ಮಲ ಅಣ್ಣನಿಗೆ ಇಷ್ಟವಿಲ್ಲದ ಹುಡುಗನನ್ನು ವಿವಾಹವಾಗಲು ಬಯಸಿದ್ದಳು! ಮಗನನ್ನೇ ಸಮರ್ಥಿಸಿದ ಗಂಡನಿಂದ, ಭಯಭೀತಳಾದ ಜರೀನಾ ವಿಚ್ಛೇದನ ಕೇಳಿದಾಗ, ಎರಡು ವರ್ಷದ ಆಕೆಯ ಇನ್ನೊಬ್ಬ ಮಗಳನ್ನು ಕೊಲ್ಲುವುದಾಗಿ ಬೆದರಿಸಿದ.

ಕೌಸರ್ ಪರ್ವೀನ್ ನಾಲ್ಕು ಮಕ್ಕಳ ತಾಯಿ. ಅವಳನ್ನು ಆಕೆಯ ಅತ್ತೆಯ ಮನೆಯವರು ಬಡಿದು ಸುಟ್ಟರು. ಕಾರಣ ಮನೆಯ ಹೊರಗೆ ಸೊಸೆ ಕಾಲಿಡಬರದು ಎಂದು ವಿಧಿಸಿದಾಗ, ಆಕೆ ತನ್ನ ರೋಗಗ್ರಸ್ಥ ತಂದೆ ತಾಯಿಯರನ್ನು ಕಾಣಲು ಮನೆಯ ಹೊರಗೆ ಕಾಲಿಟ್ಟಿದ್ದಳು! ಬಹಳಷ್ಟು ಕೊಲೆಗಳು ಮನೆಯೊಳಗಿನ ಆಕಸ್ಮಿಕವಾಗಿ ದಾಖಲಾಗಿ ಮುಗಿದು ಹೋಗುತ್ತವೆ.

ಇಪ್ಪತ್ತೊಂದನೆ ಶತಮಾನಕ್ಕೆ ಕೆಲದೇಶದ ಕೆಲವರಷ್ಟೇ ಕಾಲಿಟ್ಟಿದ್ದಾರೆ. ಜಗತ್ತಿನ ಬಹುಭಾಗದ ಮಹಿಳೆಯರ ಬದುಕು ಮಧ್ಯಯುಗದ ಕತ್ತಲೆಯಿಂದ ಮುಕ್ತವಾಗಿಲ್ಲ. ಹೊರಗಿನ ಗಂಡಸರಿಂದ ರಕ್ಷಿಸಲು ಹೆಣ್ಣನ್ನು ಪರದೆಯಲ್ಲಿರಿಸಿ ಮನೆಯಲ್ಲಿ ಅಡಗಿಸುತ್ತಾರೆ. ಆದರೆ ಒಳಗಿನ ಗಂಡಸರಿಂದ ಹೆಣ್ಣೆಲ್ಲಿ ಸುರಕ್ಷಿತವಿದ್ದಾಳೆ? ಇದು ಪಾಕಿಸ್ತಾನವೊಂದರ ಕಥೆಯಲ್ಲ, 'ಮನೆತನಕ್ಕೆ ಕಳಂಕ ತಂದಳು' ಎಂದು ಮನೆಯವರಿಂದಲೇ ನಡೆಯುವ ಹತ್ಯೆಗಳು ಭಾರತಕ್ಕೂ ಹೊಸದಲ್ಲ. ಹೆಣ್ಣು ಸದಾ ಕಾಲಕ್ಕೂ ತಂದೆ, ಸೋದರ, ಇಲ್ಲ ಗಂಡನ ಇಚ್ಛೆ, ಆಜ್ಞೆಯಂತೆ ಬದುಕಬೇಕಿದೆ. ನಿಜಕ್ಕೂ ದೇಶಕ್ಕೆ ಸ್ವತಂತ್ರ

ಬಂದಿದೆ ಎನ್ನುವುದು ಶುದ್ಧ ಸುಳ್ಳು. ಹೆಂಗಸರಿನ್ನೂ ಬಂಧನದಲ್ಲಿದ್ದಾರೆ, ಪರಾಡಳಿತದಿಂದ ಮುಕ್ತರಾದರೂ, 'ಪುರುಷಾಡಳಿತ'ದ ಪದತಳದಲ್ಲಿ ತುಳಿಯಲ್ಪಡುತ್ತಿದ್ದಾರೆ. ಮಹಿಳಾ ಹಕ್ಕುಗಳಿಗಾಗಿ ಮಾನವ ಹಕ್ಕುಗಳಿಗಾಗಿ ವ್ಯಾಪಕ ಹೋರಾಟ ನಡೆಯದಿದ್ದರೆ, ಹೆಣ್ಣಿಗೆ ಬದುಕುವ ಹಕ್ಕು ಕೂಡ ಉಳಿಯುವುದಿಲ್ಲ.

ಈ ಪ್ರಬಂಧದ ಮೂಲಕ ಹಲವು ಮುಖಗಳ ಪರಿಚಯವಾಗುತ್ತದೆ. ಸೋಲನ್ನು, ನೋವನ್ನು, ನಿರಾಶೆಯನ್ನು, ಕೆಲವೊಮ್ಮೆ ತನ್ನ ತಪ್ಪಿಲ್ಲದಿದ್ದರೂ ಒದಗಿಬರುವ ಅಪಮಾನವನ್ನು ಹೇಗೆ ಎದುರಿಸಬೇಕು ಎನ್ನುವ ಗಟ್ಟಿತನವನ್ನು ಹಾಗೂ ನೇಮಿಚಂದ್ರರ ವೈಚಾರಿಕ ಮನೋಭಾವನೆಯನ್ನು ಇಲ್ಲಿ ಗುರುತಿಸಬಹುದು.

ಅವರೊಂದು ಉದಾಹರಣೆ

ಓರ್ವ ಬಡ ಹುಡುಗ ಬ್ಯಾಂಕಿನಲ್ಲಿ ಜವಾನನಾಗಿ ಕೆಲಸ ಮಾಡುತ್ತಿದ್ದ. ಒಂದೂವರೆ ದಶಕದ ಅನಂತರ ಆ ಹುಡುಗ, ಐ.ಐ.ಎಂ. ನಿಂದ ಎಂ.ಬಿ.ಎ ಅಮೆರಿಕಾದ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಡಿಗ್ರಿಗಳನ್ನು ಹಿಡಿದು ಅದೇ ಬ್ಯಾಂಕಿಗೆ ಹಿಂದಿರುಗಿದ, 'ಮ್ಯಾನೇಜ್‌ಮೆಂಟ್' ಡೆವಲಪ್‌ಮೆಂಟ್' ವಿಭಾಗದ ಮುಖ್ಯಸ್ಥನಾಗಿ! ಇದೆಲ್ಲೋ ಸಿನಿಮಾ ಕತೆ ಹೇಳುತ್ತಿದ್ದೇನೆ ಅಂದು ಕೊಳ್ಳಬೇಡಿ. ಮೊನ್ನೆ 'ಎಚ್.ಎ.ಎಲ್. ಮ್ಯಾನೇಜ್ ಮೆಂಟ್ ಆಕಾಡೆಮಿ'ಯಲ್ಲಿ ಈ ಅದ್ಭುತ ವ್ಯಕ್ತಿಯನ್ನು ಭೇಟಿ ಆಗಿದ್ದೆ. ಡಾ॥ ರಾಜೂ ಭಾಟಿಯಾ-ತಮ್ಮ ಬದುಕಿನ ಹಿನ್ನೆಲೆಯ ಮಿತಿಗಳನ್ನು ಮೀರಿದ ವ್ಯಕ್ತಿ.

ಡಾ॥ ಭಾಟಿಯಾ ೧೯೬೨ರಲ್ಲಿ ಭಾರತದಲ್ಲಿ ಹುಟ್ಟಿದರೂ ಅವರ ಕುಟುಂಬ ಕರಾಚಿಯಿಂದ ಬಂದದ್ದು, ಶ್ರೀಮಂತ ಮನೆತನಕ್ಕೆ ಸೇರಿದ ಇವರ ತಂದೆ ತಾಯಿ ಪಾಕಿಸ್ತಾನದಲ್ಲಿದ್ದವರು. ತಾಯಿ ಅಪ್ಪಟ ಅನಕರಸ್ಥೆ, ತಂದೆ ಅಲ್ಪ ಸ್ವಲ್ಪ ಓದಿಕೊಂಡವರು. ದೇಶ ಇಬ್ಭಾಗವಾದ ಸಮಯ, ಓರ್ವ ಮುಸ್ಲಿಂ ಕುಟುಂಬ, ಇವರ ತಂದೆ ತಾಯಿ ಮತ್ತು ಆರು ಮಕ್ಕಳನ್ನು ಅಡಗಿಸಿಕೊಂಡಿತು. ಆದರೆ ಪರಿಸ್ಥಿತಿ ಕೈಮೀರಿತು. ತಂದೆ ತಾಯಿ ಮಕ್ಕಳೊಂದಿಗೆ ಓಡಬೇಕಾಗಿತ್ತು. ಇಬ್ಬರು ಮಕ್ಕಳು ತಂದೆಗಿಂತ ಮಗನೇ ಕೊಲೆಯಾದನು. ಉಳಿದ ಮಕ್ಕಳನ್ನು ಎತ್ತಿಕೊಂಡು ಆ ತಾಯಿ ತಂದೆಗಿಂತ ಮುಂದೆ ಓಡಿದ್ದಳು. ! ಕೊನೆಯ ರೈಲು ಸರ್ವಸ್ವವನ್ನು ಹಿಂದೆ ಬಿಟ್ಟು ಬರೀಗೈಯಲ್ಲಿ ಭಾರತದಲ್ಲಿ ಇಳಿದಿದ್ದರು.

ಮುಂಬಯಿ ಬಡತನದ ಚಾಲ್ ಒಂದರಲ್ಲಿ ಭಾಟಿಯಾರ ಬಾಲ್ಯ ಕಳೆಯಿತು. ತಂದೆ ಮನೆ ಮನೆಗೆ ಹೋಗಿ ಬಟ್ಟೆ ಮಾರುತ್ತಿದ್ದರು. ಭಾರತಕ್ಕೆ ಬಂದ ಮೇಲೆ ಮಕ್ಕಳು ಹುಟ್ಟಿದರು. ಭಾಟಿಯ ಕೊನೆಯ ಮಗು. ಅಣ್ಣಂದಿರು, ಅಕ್ಕಂದಿರು ಯಾರೂ ಓದಿರಲಿಲ್ಲ. ತಾಯಿಗೆ ಈ ಮಗನ ಮೇಲೆ ಅಗಾಧ ಭರವಸೆ, ಅಖಂಡ ಆಸೆ. ಚಾಲ್‌ದ ಪುಂಡಪೋಕರಿ ಹುಡುಗರನ್ನು ತೋರಿಸಿ,

"ನೋಡು, ನಿನ್ನೆದುರು ಆಯ್ಕೆ ಇದೆ, ಅವರಂತೆ ಬೀಡಿ ಸೇದಿಕೊಂಡು, ಹೆಂಡ ಕುಡಿದುಕೊಂಡು ಹಾಳಗಬಹುದು. ಇಲ್ಲ ಓದಿ ದೊಡ್ಡಮನುಷ್ಯನಾಗಬಹುದು"[೧] ಆ ತಾಯಿ ಮಗನನ್ನು ಓದಿಸಲು ಸರ್ವ ಪ್ರಯತ್ನ ಮಾಡಿದಳು. ಶ್ರೀಮಂತ ಬದುಕಿನಿಂದ ದಟ್ಟ ದಾರಿದ್ರ್ಯಕ್ಕೆ ಎಸೆಯಲ್ಪಟ್ಟರು ಬದುಕಿನ ಅನುಭವಗಳು ಆಕೆಯನ್ನು ಕಹಿಯಾಗಿಸಲಿಲ್ಲ. ಬದಲಿಗೆ ಗಟ್ಟಿಯಾಗಿಸಿದವು. 'ಎಂತಹ ನೋವು ಸಮಯದೊಡನೆ ಮಾಯುತ್ತದೆ' ಎಂದು ನಂಬಿದವಳು. ಇತಿಹಾಸದ ಕ್ರೌರ್ಯವನ್ನು ಎದೆಯಲ್ಲಿ ಹೊತ್ತು ಕುಸಿಯದೆ, ಮಗನಲ್ಲಿ ಕನಸುಗಳನ್ನು ತುಂಬಿದಳು. ಓದುವ ಕನಸದು.

ಶಾಲೆಗೆ ಸೇರುವುದು, ಫೀಸು ಕಟ್ಟುವುದು ಸುಲಭವಿರಲಿಲ್ಲ. 'ಹೋಲಿ ಫ್ಯಾಮಿಲಿ ಪ್ರೌಢಶಾಲೆ'ಯ ಫಾದರ್ ಎಡ್ಗರ್ ಅವರಲ್ಲಿ ತಾಯಿ ಬೇಡಿದಳು. ಶಾಲೆಯಲ್ಲಿ ಕಸ ಗುಡಿಸಿ ಮಗನನ್ನು ಆ ಶಾಲೆಯಲ್ಲಿ ಓದುವಂತೆ ಮಾಡಿದಳು. ಫಾದರ್ ಎಡ್ಗರ್ ಭಾಟಿಯಾ ಅವರಿಗೆ ಆರ್ಥಿಕವಾಗಿ ಸಹಾಯ ಮಾಡಿದ್ದಲ್ಲದೆ, ಬೆನ್ನಿಗೆ ನಿಂತರು. ಶಾಲೆಯಲ್ಲಿ ಓದುತ್ತಿರುವ ಈ ವಯಸ್ಸಿನಲ್ಲಿಯೇ, ರಾಜು 'ಸ್ಟಾಂಡರ್ಡ್ ಚಾರ್ಟ್‌ಡ್ ಬ್ಯಾಂಕಿ'ನಲ್ಲಿ ಜವಾನನಾಗಿ ಸೇರಿಕೊಂಡಿದ್ದ. ಅಲ್ಲಿ ಚಹಾ ಕಪ್ಪುಗಳನ್ನು ತೊಳೆಯುವ, ಮೇಜುಗಳನ್ನು ಒರೆಸುವ ಕೆಲಸ ಆತನದು. ತರಗತಿಗಳಿಗೆ ಹಾಜರಿದ್ದದ್ದು ಅಪರೂಪ. ಪ್ರಾಧ್ಯಾಪಕರ ಕೃಪೆಯಿಂದ ಪರೀಕ್ಷೆ ತೆಗೆದುಕೊಂಡಿದ್ದು ಒಂಬತ್ತನೇಯ ತರಗತಿಯಲ್ಲಿ. ಹೆಚ್ಚು ಕಡಿಮೆ ಎಲ್ಲ ವಿಷಯಗಳ್ಳಲೂ ನಪಾಸು! ಅಲ್ಲಿಗೆ ಪ್ರಾಧ್ಯಾಪಕರು ಇವನ ಆಸೆ ಬಿಟ್ಟಿದ್ದರು. ತಾಯಿ ಮತ್ತೆ ಮಗನಿಗೆ ಬುದ್ಧಿ ಹೇಳಿದಳು. ಹೊಸ ಬದುಕಿನ ಕನಸನ್ನು ತುಂಬಿದರು. ಅಂತೂ ಕಷ್ಟದಿಂದ ಹುಡುಗ

ಹತ್ತನೆಯ ತರಗತಿಯಲ್ಲಿ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದ. ಆ ಶಾಲೆಯಲ್ಲಿ ಸೆಕೆಂಡ್ ಕ್ಲಾಸ್ ಬಂದ ಏಕೈಕ ಹುಡುಗ ಈತ. ಉಳಿದವರೆಲ್ಲ ಫಸ್ಟ್ ಬಂದಿದ್ದರು. ತಾಯಿಯ ಆಗಾಧ ಶ್ರಮ, ಪ್ರೋತ್ಸಾಹದಿಂದ ಭಾಟಿಯಾ ಕಾಲೇಜು ಸೇರಿದನು. ಬೆಳಿಗ್ಗೆ ೭ಗಂಟೆಯಿಂದ ೧೦ ಗಂಟೆಯವರೆಗೆ ತರಗತಿಗಳಿಗೆ ಹಾಜರು. ೧೦ ರಿಂದ ೬ ಗಂಟೆಯವರೆಗೆ ಬ್ಯಾಂಕಿನಲ್ಲಿ ಕೆಲಸ. ಸಂಜೆ ಚಾಲ್‌ನ ಮಕ್ಕಳಿಗೆ ಮನೆ ಪಾಠ ಹೇಳಿಕೊಟ್ಟು ಒಂದಿಷ್ಟು ಹಣ ಸಂಗ್ರಹ. ಈ ಪ್ರಯತ್ನ ಪರಿಶ್ರಮ ಫಲ ನೀಡಿತು. ಕಾಮರ್ಸ್‌ನಲ್ಲಿ ಬಾಂಬೆ ವಿಶ್ವವಿದ್ಯಾಲಯಕ್ಕೆ ಮೊದಲಿಗರಾಗಿ ಹೊರಬಂದರು. "೧೯೮೮ಳಲ್ಲಿ ಅಹಮದಾಬಾದಿನ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ಎಂ.ಬಿ.ಎ ಡಿಗ್ರಿ ಪಡೆದರು. ಅಮೆರಿಕಾಕ್ಕೆ ಹೋಗಿ ಮಿಸೂರಿ ವಿಶ್ವವಿದ್ಯಾಲಯದಿಂದ 'ಹ್ಯೂಮನ್ ರಿಸೋರ್ಸ್‌ಸ್' ವಿಷಯದಲ್ಲಿ ಡಾಕ್ಟರೇಟ್ ಪಡೆದು ಹಿಂದಿರುಗಿದರು."[೨] ತಾವು ಜವಾನರಾಗಿ ದುಡಿದ ಅದೇ ಬ್ಯಾಂಕಿಗೆ ವಿಭಾಗದ ಮುಖ್ಯಸ್ಥರಾಗಿ ಸೇರಿದರು.

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೪೬
೨. ಅದೇ, ಪುಟ-೫೦

ಅನೇಕ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಮಾಡಿದ ಭಾಟಿಯಾ ೧೯೯೮ರಲ್ಲಿ ತಮ್ಮದೇ 'ಹ್ಯೂಮನ್ ರಿಸೋರ್ಸ್ ಕನ್ಸಲ್‌ಟೆಂಟ್ ಕಂಪನಿ ಸೆಂಟರ್ ಫಾರ್ ಚೇಂಜ್ ಮ್ಯಾನೇಜಮೇಂಟ್'ನ್ನು ಆರಂಭಿಸಿದರು. ಇಂದು ಇವರಿಂದ ೫೮ ಕಂಪನಿಗಳು ಸಲಹೆ ಪಡೆಯುತ್ತಿವೆ. ೨೪ ಜನ ತಜ್ಞರು ಇವರಲ್ಲಿ ಕೆಲಸ ಮಾಡುತ್ತಿದ್ದಾರೆ. ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗೆ ಪ್ರವಚನಗಳನ್ನು ನೀಡುವ ಅತ್ಯಂತ ಯಶಸ್ವಿ ಸಲಹಾಗಾರರಾಗಿ ಮೇಲೆ ಬಂದಿದ್ದಾರೆ. ಜೊತೆಯಲ್ಲಿಯೇ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಭಾಟಿಯಾ ಅವರದು ಅತ್ಯಂತ ಪ್ರೀತಿಯ ಕುಟುಂಬ ಜೀವನ. ಪತಿ ಪತ್ನಿ ಎರಡು ಹೆಣ್ಣು ಮಕ್ಕಳನ್ನು ದತ್ತು ತೆಗೆದುಕೊಂಡಿದ್ದಾರೆ, ದಿತಿಗೆ ೫ ವರ್ಷ, ಅಂಜಲಿಗೆ ನಾಲ್ಕು ವರ್ಷ, "ತಮ್ಮ ಮಿತಿಗಳಾಚೆ ಕನಸು ಕಂಡು ಹುರಿದುಂಬಿಸಿದ ನಮ್ಮ ತಾಯಿ ನನಗೆ ಸ್ಫೂರ್ತಿ"[೧] ಎನ್ನುತ್ತಾರೆ. ತಮ್ಮ ಈ ಬಡತನ ಹಿಂದೇಳೆಯುವ ಪರಿಸರದಿಂದ ಮೇಲೆದ್ದು ನಿಂತ ಉದಾಹರಣೆಗಳು ಭಾಟಿಯಾದ ಎದುರಿರಲಿಲ್ಲ. ಆದರೆ ಅವರೇ ಒಂದು ಉದಾಹರಣೆಯಾಗಿ, ಮಾದರಿಯಾಗಿ ಮೇಲೆದ್ದರು. ತಮ್ಮ ಬದುಕಿನ ಆರ್ಥಿಕ, ಸಾಮಾಜಿಕ ಮಿತಿಗಳನ್ನು ಮೀರಿ ಮೇಲೆದ್ದ ಭಾಟಿಯಾ ನಮಗೆ ಸ್ಫೂರ್ತಿಯಾಗಬಲ್ಲರು.

ಈ ಮೇಲಿನ ಪ್ರಬಂಧ ಲೇಖನದಲ್ಲಿ ಡಾ.ಭಾಟಿಯಾ ದಟ್ಟ ದಾರಿದ್ರ್ಯ ತುಂಬಿದ ಕುಟುಂಬದಿಂದ ಬಂದರೂ, ತಾಯಿಯ ಸ್ಫೂರ್ತಿದಾಯಕ ಮಾತುಗಳಿಂದ ಮೇಲೆದ್ದು ನಿಂತು, ಸಮಾಜದಲ್ಲಿ ಪ್ರತಿಷ್ಠಿತ ಹೆಸರು ಗಳಿಸಿದ ಭಾಟಿಯಾರವರಲ್ಲಿ ನೇಮಿಚಂದ್ರರ ವೈಚಾರಿಕತೆಯ ಗುಣವನ್ನು ಕಾಣಬಹುದು.

ಸೋಲಿಲ್ಲದ ಮನೆಯ ಸಾಸಿವೆ:

ಮೊನ್ನೆ ಪೇಪರ್ ತೆರೆದಾಗ ನೋಡುತ್ತೇನೆ, ನಾಲ್ಕನೇ ತರಗತಿಯ ಒಂಭತ್ತು ವರ್ಷದ ಮಗು 'ಟೀಚರ್ ಬೈದರು, ತನಗೆ ಅವಮಾನ ಆಯಿತು' ಎಂದು ಹೇಳಿ ಆತ್ಮಹತ್ಯೆ ಮಾಡಿಕೊಂಡಿದೆ. ಮಲ್ಲೇಶ್ವರಂನ ಇಂಗ್ಲೀಷ್ ಶಾಲೆಯಲ್ಲಿ ಓದುತ್ತಿದ್ದ ನಾಲ್ಕನೆಯ ತರಗತಿಯ ಮಗು ಹರೀಶ್‌ಬಾಬು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ಕೇಳಿದಾಗ ಆಘಾತವಾಯಿತು. ಇಂತಹ ಸುದ್ದಿಗಳು ಆಗಾಗ್ಗೆ ತೂರಿ ಬಂದರೂ ಇಂದೂ ಕೂಡ ಅಷ್ಟೇ ಆಘಾತವಾಗುತ್ತದೆ. ಹರೀಶ್ ಆತ್ಮಹತ್ಯೆ ಮಾಡಿಕೊಂಡಿದ್ದಾದರೂ ಏತಕೆ? ಆ ಹುಡುಗ ಫೇಲ್ ಆಗಿರಲಿಲ್ಲ, ಆತ ತೆಗೆದ ಅಂಕಗಳಾದರೂ ಎಷ್ಟು? ಶೇಕಡಾ ೬೩ರಷ್ಟು, ಯಾರು ಅವರಿಗೆ ಕಲಿಸಿದರು ಫಸ್ಟೇ ಬರಬೇಕೆಂಬ ಹಠ, ಗೆಲ್ಲುವ ಚಟ. ಪರೀಕ್ಷೆಯಲ್ಲಿ ಫೇಲ್ ಆದರೆ ಬದುಕೇ ಫೇಲ್ ಆದಂತೆ ಎಂದು ಬೋಧಿಸಿದವರಾರು?

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೫೨

ತಂದೆತಾಯಿಗಳ ಒತ್ತಡ ಇದ್ದಿರಬಹುದು. ಕೆಲವೊಮ್ಮೆ ಮನೆಯವರ ಒತ್ತಡ ಇಲ್ಲದೆಯೂ ಪರಿಸರದ ಒತ್ತಡ ಏರಿ ನಿಂತ ಕಾಲವಿದು. ಎಂಟನೇ ತರಗತಿಗೆ ಐ.ಐ.ಟಿಗೆ ಸಿದ್ಧತೆ ಮಾಡುತ್ತೇವೆ. ಗೆಲ್ಲುವುದು ಹೇಗೆ ಮೇಲೇರುವುದು ಹೇಗೆ ಎಂದು. ಒಂದು ಕ್ಷಣ ಯೋಚಿಸಿ, ಸೋಲುವ ಬಗ್ಗೆ ತಿಳಿಸಿದ್ದೇವೆಯೋ, ಸೋಲುವುದನ್ನು ಕಲಿಸಬೇಕಿಲ್ಲ. ಆದರೆ ಸೋಲನ್ನು ಎದುರಿಸುವ ಶಕ್ತಿಯನ್ನು ಸೋಲನ್ನು ಸ್ವೀಕರಿಸುವ ಬಗೆಯನ್ನು ಹೇಳಿಕೊಟ್ಟಿದ್ದೇವೆಯೇ, ಸಾವಿಲ್ಲದ ಮನೆಯ ಸಾಸಿವೆಯಂತೆ, ಸೋಲಿಲ್ಲದ ಮನೆಯ ಸಾಸಿವೆ ಸಿಕ್ಕಿತೇ. ಅವಮಾನ, ಆತ್ಮಹತ್ಯೆ ಇವೆಲ್ಲ ಬೆಳೆಯುವ ಬಾಲ್ಯದ ಮುಗ್ಧತೆಯಲ್ಲಿ ಅರಿವಿಗೆ ಬಂದಿರುವುದಿಲ್ಲ. ಬೆಂಚಿನ ಮೇಲೆ ನಿಲ್ಲಿಸಿದ್ದು, ಹೋಂವರ್ಕ್ ತಂದಿಲ್ಲ ಎಂದು ತರಗತಿಯಿಂದ ಆಚೆ ಕಳಿಸುವುದು, ಮೊಣಕೈಗೆ ಇಂಚುಪಟ್ಟಿಯಿಂದ ಹೊಡೆದಿದ್ದು, ಅಮ್ಮ ಕೋಲಿನಿಂದ ಬಾರಿಸಿದ್ದು, ಇವೆಲ್ಲಾ ಅವಮಾನದ ವಿಷಯವೇ ಅಲ್ಲ. ಆದರೆ ಗೆಲುವೇ ಬದುಕು, ಸೋಲೇ ಸಾವು ಎಂದು ತಿಳಿದಿರುವುದು.

ಆಗಷ್ಟೇ ಡಾಕ್ಟರೇಟ್ ಮುಗಿಸಿದ ಆ ಹುಡುಗಿಗೆ ಕೈತುಂಬಾ ಸಂಬಳದ ಕೆಲಸವಿತ್ತು. ಆದರೆ ಮನಸ್ಸಿನಲ್ಲೆ ಹುಟ್ಟಿ, ಮನಸ್ಸಿನಲ್ಲೇ ಮುಗಿದ ಒಂದು ಮುಗ್ಧ ಪ್ರೇಮದ ಹಿನ್ನೆಲೆಯಲ್ಲಿ ನರಕ್ಕೆ ಬ್ಲೇಡು ತೀಡಿಕೊಂಡು ಬದುಕು ಮುಗಿಸಿ ನಡೆದೇ ಬಿಟ್ಟಿದ್ದಳು.

ಇನ್ನೊಬ್ಬ ಹುಡುಗಿ ಇಂಜಿನಿಯರ್, ಹೆಚ್ಚು ಓದಲು ಬಯಸಿದ್ದಳು. ಹೆಚ್ಚು ಓದಿದರೆ ಮದುವೆಯಾಗುವುದು ಕಷ್ಟ ಎಂದು ಹಿರಿಯರು ಒತ್ತಾಯಿಸಿ, ಅವರೇ ಮದುವೆ ನಿಶ್ಚಯ ಮಾಡಿ ಮುಗಿಸಿದರು. ಹುಡುಗ ಬೆಂಗಳೂರಿನ ಕಾರ್ಖಾನೆಯೊಂದರಲ್ಲಿ ಮ್ಯಾನೇಜರ್. ನೂರು ಸುಳ್ಳು ಹೇಳಿ ಒಂದು ಮದುವೆ ಎನ್ನುವ ಜನರಿರುವಾಗ ಸತ್ಯ ಹೊರ ಬೀಳುವುದಾದರೂ ಎಲ್ಲಿ? ಬಲು ವಿಜೃಂಭಣೆಯಿಂದ ಲಕ್ಷ ಲಕ್ಷ ಖರ್ಚು ಮಾಡಿ ವಿವಾಹ ಮಾಡಿದರು. ಈ ಹುಡುಗಿ ಹನಿಮೂನ್ ಮುಗಿಸಿ ಬರುವಷ್ಟರಲ್ಲಿ ಒಂದು ಕಾಗದ ಕಾದಿತ್ತು. ಅದು ಆತನ ಮೊದಲ ಹೆಂಡತಿಯ ಪತ್ರ. ಅವನಿಗಾಗಲೇ ಮದುವೆಯಾಗಿ ಮಗು ಇದೆ ಎಂದು ಹೇಳುವ ಕಾಗದ. ಈ ಹುಡುಗಿಗೆ ಆಕಾಶ ಕಳಚಿ ತಲೆ ಮೇಲೆ ಬಿದ್ದಂತಾಗಿತ್ತು. ಹೋಗಿ ನೋಡಿದಾಗ ಅದು ನಿಜವಾಗಿತ್ತು. ಆ ಹುಡುಗಿಯನ್ನು ರಿಜಿಸ್ಟರ್ಡ್ ವಿವಾಹವಾಗಿದ್ದ. ಆ ಹುಡುಗ ಅಪ್ಪಅಮ್ಮನನ್ನು ಸಂತೃಪ್ತಿಪಡಿಸಲು ಇಲ್ಲಿ ಹಸೆಮಣೆಯೇರಿದ್ದ. ಆದರೆ ಈ ಹುಡುಗಿ ಬಹಳ ಕಷ್ಟದಿಂದ ಒಂದು ನಿರ್ಧಾರಕ್ಕೆ ಬಂದಳು. ಮನೆತನದ ಮರ್ಯಾದೆಗೆ, ಜನರ ಮಾತಿಗೆ ಗಮನಕೊಡದೆ ಮದುವೆ ರದ್ದು ಮಾಡಿಸಿಕೊಂಡಳು. ತಾನು ಬಯಸಿದ ಹೆಚ್ಚಿನ ವಿದ್ಯಾಭ್ಯಾಸದ ಗುರಿಯ ಬೆನ್ನತ್ತಿ ಅಮೇರಿಕೆಗೆ ಹಾರಿದಳು.

ಒಂದಿಷ್ಟು ಸಮಯ ಕೊಟ್ಟರೆ ಬದುಕು ಎಲ್ಲವನ್ನೂ ಕಲಿಸುತ್ತದೆ. ಬದುಕುವುದನ್ನು ಆ ಕ್ಷಣ 'ಆದದ್ದಾಯಿತು ಹೋದದ್ದೋಯಿತು, ಒಗೆಯೊ ಕಂತೆನಾ, ಗುಂಡಾ ಒಗೆಯೊ ಕಂತೆನಾ" ಡಿ.ವಿ.ಜಿಯವರ ಮಾತುಗಳು ನೆನಪಾದವು. ಕಲಿಸುವುದು ಹೇಗೆ? ಬರುವ ಸೋಲನ್ನು, ನೋವನ್ನು,

ನಿರಾಶೆಯನ್ನು ಕೆಲವೊಮ್ಮೆ ನಮ್ಮ ತಪ್ಪೇಯಿಲ್ಲದೆ ಮುಗಿಬೀಳುವ ಅಪಮಾನವನ್ನು ಎದುರಿಸುವುದು, ಮುಗ್ಗರಿಸಿಬಿದ್ದರು ಎದ್ದು ಕೊಡವಿಕೊಂಡು ನಡೆಯುವ ವೈಚಾರಿಕ ಮನೋಭಾವನೆಯನ್ನು ಇಂದಿನ ಯುವಜನಾಂಗಕ್ಕೆ ನೇಮಿಚಂದ್ರರು ತಿಳಿಸಿಕೊಟ್ಟಿದ್ದಾರೆ.

ಮಹಿಳಾ ವೈಮಾನಿಕರು:

ಸಂಪೂರ್ಣ ಮಹಿಳಾತಂಡವೊಂದು ೧೯೮೯ರಲ್ಲಿ ಬೋಯಿಂಗ್ ಜೆಟ್ ವಿಮಾನವನ್ನು ಹಾರಿಸಿದ್ದು ದೊಡ್ಡ ಸುದ್ದಿಯಾಯಿತು. ಇದೀಗ ಮೊಟ್ಟಮೊದಲ ಬಾರಿಗೆ ವಾಯುಪಡೆ, ಮಹಿಳೆಯರನ್ನು ತಾಂತ್ರಿಕ ಪೈಲಟ್ ಆಫೀಸರ್‌ಗಳಾಗಿ ಸ್ವಾಗತಿಸಿ ಭಾರತದ ವೈಮಾನಿಕ ಚರಿತ್ರೆಯಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿತು. ಆದರೆ ವೈಮಾನಿಕ ರಂಗಕ್ಕಾಗಲೀ ವಾಯುಪಡೆಗಾಗಲೀ ಮಹಿಳೆ ಹೊಸಬಳಲ್ಲ. ಮೊಟ್ಟಮೊದಲ ವಿಮಾನ ಹಾರಿದ ದಶಕದಲ್ಲಿಯೇ ವಿಮಾನ ಹಾರಿಸಿದ ಮಹಿಳೆಯರಿದ್ದಾರೆ. ವೈಮಾನಿಕ ಚರಿತ್ರೆಯ ಉದ್ದಕ್ಕೂ ಹೆಸರು ಮಾಡಿದ ಸಾಹಸಿಗಳಿದ್ದಾರೆ. ವಿಮಾನ ರಿಪೇರಿ, ಅಗತ್ಯದ ಪರಿವರ್ತನೆ, ಹೆಚ್ಚಿನ ವಿನ್ಯಾಸ ಎಲ್ಲವನ್ನು ಕೈಗೊಳ್ಳಬೇಕಿದ್ದ ಪರಿಸ್ಥಿತಿಯಲ್ಲಿಯೇ ಹಾರಾಟಕ್ಕಿಳಿದ ಮಹಿಳೆಯರಿದ್ದಾರೆ.

೧೯೦೮ರಲ್ಲಿ ವಿಮಾನವೊಂದರಲ್ಲಿ ಪ್ರಯಾಣಿಕಳಾಗಿ ಹಾರಿದ ಮೊದಲ ಮಹಿಳೆ, ಫ್ರಾನ್ಸ್ ದೇಶದ ತೇರೇಸ್ ಪೆತ್ತಿ. ವಿಮಾನವನ್ನು ಏಕಾಂಗಿಯಾಗಿ ಹಾರಿಸಿದ ಬ್ರಿಟನ್ನಿನ ಮೊಟ್ಟಮೊದಲ ಮಹಿಳೆ ಎಡಿತ್ ಮಾಂಡ್‌ಕುಕ್. ೧೯೧೦ರ ಮೊದಲ ಭಾಗದಲ್ಲಿಯೇ ವಿಮಾನವನ್ನು ಉಡಾಯಿಸಿದ ಈಕೆ ಆಕಾಶದಲ್ಲಿ ಸಾಕಷ್ಟು ಕಸರತ್ತು ಮಾಡಿ ತೋರಿಸಿದ ಸಾಹಸಿ. ೧೯೨೬ರಲ್ಲಿ ಸೋಫಿಯಾ ಹೀತ್ ಮಹಿಳಾ ನಿಷೇಧದ ವಿರುದ್ಧ ಹೋರಾಡಿ, ಮಹಿಳೆಯ ಸಾಮರ್ಥ್ಯವನ್ನು ಪ್ರದರ್ಶಿಸಿದಳು. ೨೪ ಮೇ ೧೯೩೦ರ ಒಂದು ವರ್ಷದ ಹಿಂದಷ್ಟೇ ಹಾರಲು ಕಲಿತ ಈ ತೆಳ್ಳನೆಯ ಹುಡುಗಿ 'ಏಮಿ'. ಏಕಾಂಗಿಯಾಗಿ ಇಂಗ್ಲೇಂಡಿನಿಂದ ಆಸ್ಟ್ರೇಲಿಯಾಕ್ಕೆ ಹಾರಿದ ಪ್ರಪಂಚದ ಮೊಟ್ಟಮೊದಲ ಮಹಿಳೆಯಾಗಿ ದಾಖಲೆ ಸ್ಥಾಪಿಸಿದಳು. ಇಡೀ ಪ್ರಯಾಣ ೧೯ ದಿನಗಳ ಅವಧಿಯನ್ನು ತೆಗೆದುಕೊಂಡಿತ್ತು. "ಆಕೆಯ ಈ ಸಾಧನೆ, ಎಲ್ಲಿಲ್ಲದ ಪ್ರಸಿದ್ಧಿ ಗೌರವ ತಂದು ಕೊಟ್ಟಿದ್ದಲ್ಲದೆ, ವೈಮಾನಿಕ ರಂಗವನ್ನು ಮಹಿಳೆಯರಿಗೆ ಹತ್ತಿರವಾಗಿಸಿತು."[೧] ಬಹಳ ಕಷ್ಟದಿಂದ ಏಮಿ, ಬಳಸಿ ಬಿಟ್ಟಿದ್ದ 'ಜೆಸ್ಸಿ ಮಾತ್' ವಿಮಾನವೊಂದನ್ನು ಕೊಂಡು ಕೊಂಡಳು. ಈ ವಿಮಾನದ ಮುಂಬದಿಗೆ ವಿಶೇಷವಾದ ಇಂಧನ ತೊಟ್ಟಿಗಳನ್ನು, ಹಿಂಬದಿಗೆ ಸಾಮಾನು ಸರಂಜಾಮುಗಳನ್ನು ತುಂಬಲು

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ-೩೩

ಕಪಾಟುಗಳನ್ನು ಅಳವಡಿಸಿದಳು. ವಿಮಾನದ ಸತತ ಹಾರುವ ಮಿತಿಯನ್ನು ೧೯೦೦ ಕಿಲೋಮೀಟರ್‌ಗಳಿಗೆ ಏರಿಸಿದಳು.

ಏಮಿ ಮೊಟ್ಟಮೊದಲಿಗೆ ೧೨೫೫ಕಿ.ಮೀ ದೂರವನ್ನು ಕ್ರಮಿಸಿ, ವಿಯೆನ್ನಾ ತಲುಪಿದಳು. ಎರಡನೆಯ ದಿನ ೧೨೭೦ಕಿ.ಮೀ ಹಾರಿ ಕಾನ್‌ಸ್ಟಾಂಡಿನೋಪಲ್ ಸೇರಿದಳು. ನಂತರ ೧೪,೦೦೦ಅಡಿ ಎತ್ತರದ ಟಾರಸ್ ಪರ್ವತಗಳ ಮೇಲೆ ಹಾರಿ ಸಿರಿಯಾದ ಮರಳುಗಾಡನ್ನು ನಾಲ್ಕನೇ ದಿನ ಬಂದು ಮುಟ್ಟಿದಳು. ನಂತರ ಇಂಗ್ಲೇಂಡಿಗೆ ಹಿಂತಿರುಗಿದಾಗ ಏಮಿಗೆ ಪ್ರಶಸ್ತಿ ಪುರಸ್ಕಾರಗಳ ಸರಮಾಲೆ. ಬಂದಿಳಿದ ಸ್ವಲ್ಪ ಹೊತ್ತಿನಲ್ಲೆ ಮತ್ತೊಂದು ಸಾಹಸದ ಯೋಜನೆಗೆ ಸಿದ್ಧಳಾದಳು. ನವೆಂಬರ್ ೧೫ರಂದು ಹೊರಟು ಮಾಲಿಸನ್ ದಾಖಲಿಸಿದ ಸಮಯಕ್ಕಿಂತ ಹತ್ತೂವರೆ ಗಂಟೆಗಳು ಮುಂಚೆಯೇ ಕೇಪ್‌ಟೌನ್ ತಲುಪಿದಳು. ಅಲ್ಲಿಂದ ಇಂಗ್ಲೇಂಡಿಗೆ ಹಿಂತಿರುಗಿ ಹಾರಿ ಬಂದಾಗ ಆಕೆಯ ಈ ಸಾಧನೆಗೆ 'ಸಗ್ರೇವ್ ಟ್ರೋಫಿ' ಕಾದಿತ್ತು.

ಅಮಿಲಿಯಾ ಎರ್‌ಹಾರ್ಟ್:

ಅಮಿಲಿಯಾ ಎರ್‌ಹಾರ್ಟ್ ಹಾರಾಟದ ವಿಸ್ಮಯಕಾರಿ ಸಾಹಸದ ಬದುಕು ಆರಂಭವಾದದ್ದು ಬಯಸದೇ ಬಂದ ಕೀರ್ತಿಯಿಂದ, ಜೂನ್ ೧೯೨೮ ಅಮಿಲಿಯಾ ಅಟ್ಲಾಂಟಿಕ್ ಮೇಲೆ ಹಾರಿದ ಮೊಟ್ಟಮೊದಲ ಮಹಿಳೆಯಾದಳು. ಅಟ್ಲಾಂಟಿಕ್ ದಾಟಿದ ಮೊಟ್ಟಮೊದಲ ಮಹಿಳೆಯೆಂದು ಎಲ್ಲಿಲ್ಲದ ಪ್ರಸಿದ್ಧಿ ಹುಡುಕಿಕೊಂಡು ಬಂತು. ಹಾಗೂ "ಫ್ಲೈಟ್ ಕಮಾಂಡರ್ ಎಂಬ ಬಿರುದು ಕೂಡ ಬಂತು."[೧]

ಅಟ್ಲಾಂಟಿಕ್ ಮಹಾಸಾಗರವನ್ನು ವಿಮಾನದಲ್ಲಿ ಹಾರಿ ದಾಟುವುದು ಅಪಾಯಕಾರಿ ಪ್ರಯತ್ನವಾಗಿತ್ತು. ಈ ಪ್ರಯತ್ನದಲ್ಲಿ ಮೃತರಾದ ಸಾಹಸಿಗಳ ಸಾಲು ಸಾಲೇ ಇತ್ತು. ಇಂದಿನಂತೆ ಹವಾಮಾನವನ್ನು, ದಿಕ್ಕನ್ನು ವಿಮಾನದ ಸಕಲ ವಿವರಗಳನ್ನು, ಸೇರಬೇಕಾದ ಗುರಿಗೆ ಹಾದಿಯನ್ನು ತೋರುವ ಅತ್ಯಾಧುನಿಕ ಸಲಕರಣೆಗಳಿದ್ದ ಕಾಲವಲ್ಲ. ಆ ಹಿಂದಿನ ಕೆಲವು ವರ್ಷಗಳಲ್ಲಿ ಅಟ್ಲಾಂಟಿಕ್ ದಾಟಲು ೩೧ ಪ್ರಯತ್ನಗಳು ನಡೆದಿದ್ದವು. ಅವುಗಳಲ್ಲಿ ಹತ್ತು ಯತ್ನಗಳು ಸಫಲವಾದರೂ, ಅವುಗಳಾವವು ತಾವು ಉದ್ದೇಶಿತ ಗುರಿಯನ್ನು ತಲುಪಿರಲಿಲ್ಲ. ಈ ಯತ್ನದಲ್ಲಿ ಮೂವರು ಮಹಿಳೆಯರೂ ಸೇರಿದಂತೆ ಹತ್ತೊಂಬತ್ತು ಜನ ಪ್ರಾಣ ಕಳೆದುಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಅಮಿಲಿಯಾ ಹೊರಟ್ಟಿದ್ದಳು. ಹಾರಾಟದ ಖುಷಿಗೆ, ಹೆಂಗಸರೂ, ಗಂಡಸರಂತೆಯೇ ದುಸ್ತರಮಾರ್ಗಗಳಲ್ಲಿ ವಿಮಾನ ಹಾರಿಸಬಲ್ಲರೆಂದು ಸಾಬೀತುಪಡಿಸುವುದು ಆಕೆಗೆ ಮುಖ್ಯವಾಗಿತ್ತು.

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ–೩೫

ಜೀನ್ ಬ್ಯಾಟನ್:

ನ್ಯೂಝಿಲ್ಯಾಂಡಿನ ಜೀನ್ ಬ್ಯಾಟನ್ ವೈಮಾನಿಕ ಇತಿಹಾಸದ ಮತ್ತೊಬ್ಬ ಸಾಹಸಿ ಮಹಿಳೆ. ೮ ಏಪ್ರಿಲ್ ೧೯೩೩ ಲಿಂಫೋಯಿಂದ ಆಸ್ಟ್ರೇಲಿಯಾಗೆ ಜೀನ್ ಹೊರಟಳು. ಎಂಟು ದಿನಗಳಲ್ಲಿ ಭಾರತ ತಲುಪಿದ ಜೀನ್ ಕರಾಚಿಯಿಂದ ಕೆಲವು ಮೈಲಿಗಳ ದೂರದಲ್ಲಿದ್ದಾಗ ವಿಮಾನ ನೆಲಕ್ಕಪ್ಪಳಿಸಿ ನುಚ್ಚು ನೂರಾಯಿತು. ಬದುಕುಳಿದ ಜೀನ್ ಚೇತರಿಸಿಕೊಂಡು ಆಮೇಲೆ ಕಾಲಿ ಕೈಯಲ್ಲಿ ಇಂಗ್ಲೇಂಡ್ ತಲುಪಬೇಕಾಯಿತು. ಇಂಥಾ ದುರ್ಘಟನೆಯೂ ತಡೆದು ನಿಲ್ಲಿಸದೇ, ಈ ಉತ್ಸಾಹಿ ಹುಡುಗಿಗೆ ಅನೇಕರಿಂದ ಬೆಂಬಲ ದೊರೆತು ಮರುವರ್ಷವೇ ಜೀನ್ ಹೊರಟಳು. ಆರು ಎಂಜಿನ್‌ಗಳ ವಿಮಾನವನ್ನು ಕೊಂಡು ಪಶ್ಚಿಮ ಆಫ್ರಿಕಾದಿಂದ ಬ್ರಝಿಲ್‌ಗೆ ಹಾರಿದಳು. ಅಕ್ಟೋಬರ್ ೧೯೩೩ರಲ್ಲಿ ಜೀನ್ ಆಸ್ಟ್ರೇಲಿಯಾದಿಂದ ಇಂಗ್ಲೇಂಡಿಗೆ ಹಿಂತಿರುಗಿ ಬಂದಳು. ಕೇವಲ ೫ದಿನ ೧೮ಗಂಟೆಗಳ ಈ ಪ್ರಯಾಣ ಮತ್ತೆ ದಾಖಲೆ ಸ್ಥಾಪಿಸಿತು. ಎರಡೂ ದಿಕ್ಕಿನ ದಾಖಲೆಗಳನ್ನು ಹೊತ್ತ ಏಕೈಕ ವ್ಯಕ್ತಿ "ರಾಯಲ್ ಏಕೋ ಕ್ಲಬ್"ನ ಚಿನ್ನದ ಪದಕ ಜೀನ್‌ಗೆ ದೊರೆಯಿತು.

ಹ್ಯಾನಾರೈಶ್‌ರ ಅಪಾಯದೊಡನೆ ಹಾರಾಟ:

ಈಕೆ ಹುಟ್ಟಿದ್ದು ೧೯೧೨ರಲ್ಲಿ. ಜರ್ಮನಿಯ ಈ ಹುಡುಗಿ ಬಾಲ್ಯದಲ್ಲಿಯೇ ಹಾರಾಟದತ್ತ ಆಕರ್ಷಿತ ಆಗಿದ್ದಳು. ಶಾಲೆ ಮುಗಿದೊಡನೆ ಎಂಜಿನಿಲ್ಲದ ಫಲಕ ವಿಮಾನ 'ಗ್ಲೈಡರ್' ಹಾರಿಸುವುದನ್ನು ಕಲಿತಳು. ಆ ತರಬೇತಿ ತಂಡದ ಏಕಮಾತ್ರ ಹುಡುಗಿ ಹ್ಯಾನಾ. ಹುಡುಗಿಯರಿಗಿದು ಅಸಾಧ್ಯ ಎಂಬ ಉಪದೇಶಗಳನ್ನು ಪಕ್ಕಕ್ಕಿಟ್ಟು ಪರೀಕ್ಷೆಗಳಲ್ಲಿ ಉತ್ತೀರ್ಣಳಾದಳು. ಕ್ರೀಡಾವಿಮಾನಗಳ ಹಾರಾಟದ ತರಬೇತಿ ಕೂಡ ಪಡೆದು ವಿಮಾನದ ದುರಸ್ತಿ ಮಾಡುವುದನ್ನು ಕಲಿತಳು. ೧೯೩೩ರ ಬೇಸಿಗೆಯ ಹೊತ್ತಿಗೆ ಹ್ಯಾನಾ ಗ್ಲೈಡರ್ ಚಾಲಕಿಯಾಗಿ, ಅತ್ಯಂತ ಎತ್ತರಕ್ಕೆ ಹಾರಿಸಿದ ದಾಖಲೆ ಸ್ಥಾಪಿಸಿದಳು. 'ರೈವಲ್ ಆಫ್ ಏರ್' ಎಂಬ ಚಲನಚಿತ್ರಕ್ಕೆ ಅಪಾಯಕಾರಿ ಸ್ಟಂಟ್ ಹಾರಾಟ ಮಾಡಿ ಹಣ ಗಳಿಸಿದಳು. ಈ ಚಿತ್ರದಲ್ಲಿ ನಟಿಸಿ ಸ್ತ್ರೀಶಕ್ತಿ ಸಹಿಷ್ಣುತರೆಯ ವಿಶ್ವ ದಾಖಲೆಯನ್ನು ಮಾಡಿದಳು.

೧೯೪೧ರ ಹೊತ್ತಿಗೆ ಮಹಿಳೆಯರು ಸೇನೆಗೆ ಸೇರಿದ್ದರು. ವೀರಮಹಿಳೆ ಮರೀನಾರಸ್ಕೊವಗೆ ಮಹಿಳಾ ಏರ್‌ರೇಜಿಮೆಂಟ್ ನಿರ್ಮಿಸಲು ಅನುಮತಿ ನೀಡಲಾಗಿತ್ತು. ಮಹಿಳಾ ಪಡೆಗಳು ಎಲ್ಲಿಲ್ಲದ ಸಾಹಸದಿಮದ ಹೋರಾಡಿದವು. ನೇರವಾಗಿ ಯುದ್ಧದ ತರಬೇತು, ಅನುಭವಗಳಿಲ್ಲದೆಯೂ, ದೇಶದ ತುರ್ತು ಸಮಯದಲ್ಲಿ ಯುದ್ಧರಂಗಕ್ಕೆ ಧುಮುಕಿದ ಈ ಪಡೆಗಳು ಎಲ್ಲಿಲ್ಲದ ಸಾಹಸ ತೋರಿದವು. ಸಮಯಕ್ಕೆ ಒದಗಿ ಬಂದ ಧೀರತನ ತೋರಿದ ಈ ದಿಟ್ಟೆಯರ ಧೈರ್ಯಸಾಹಸಗಳು ಇತಿಹಾಸದಲ್ಲಿ ಉಳಿದಿವೆ.

ಈ ಮೇಲಿನ ಪ್ರಬಂಧ ನೋಡಿದಾಗ ಮಹಿಳಾ ಸಾಧಕಿಯರ ದೊಡ್ಡ ಪರಂಪರೆಯೇ ಇತಿಹಾಸದಾಳದಲ್ಲಿದೆ. ಚರಿತ್ರೆಯಲ್ಲಿ ಮಹಿಳೆ ಕೇವಲ ವಿಧೇಯ ಪತ್ನಿಯಾಗಿ, ವೈಭವೀಕೃತ ತಾಯಿಯಾಗಿ, ಮೋಹಕ ಅಲಂಕಾರದ ವಸ್ತುವಾಗಿ ಮಾತ್ರ ಬಿತ್ತರಿಸಲ್ಪಟ್ಟಿದ್ದಳು. ಮಹಿಳೆಯರ ಸಾಧನೆಗಳು ಇತಿಹಾಸದ ಆಳದಲ್ಲೆಲ್ಲೋ ಹುದುಗಿ ಹೋಗಿದ್ದವು. ಮಹಿಳೆಗೆ ಯಾವುದೇ ರಂಗಕ್ಕೆ ಪ್ರವೇಶ ಸುಲಭವಿರಲಿಲ್ಲ. ಇಂತಹ ಸಂದರ್ಭಗಳಲ್ಲಿ ಅನೇಕ ದಿಟ್ಟ ಮಹಿಳೆಯರ ಸಾಲು ಸರಮಾಲೆಯನ್ನೇ ಪರಿಚಯಿಸಿದ ಕೀರ್ತಿ ನೇಮಿಚಂದ್ರ ಅವರದು. ಸುತ್ತಲಿನ ಸಮಾಜದ ದಟ್ಟ ಪೂರ್ವಗ್ರಹದ ನಡುವೆಯೂ ಇಂತಹ ಸಾಹಸ, ಧೈರ್ಯ ಪ್ರದರ್ಶಿಸಿದ ಮಹಿಳೆಯರನ್ನು ಸಮಾಜದ ವಾಹಿನಿಗೆ ತಂದು ಪರಿಚಯಿಸಿದ ಕೀರ್ತಿಗೆ ನೇಮಿಚಂದ್ರರು ಭಾಜನರು.

ನಕ್ಕು ಗುಣವಾದವರು :

ಸುಮಾರು ಎಂಟು ವರ್ಷಗಳ ಹಿಂದಿನ ಮಾತು. ಪದೇ ಪದೇ ಶೀತ, ನೆಗಡಿ, ಗಂಟಲುನೋವು ನನ್ನನ್ನೂ ಸತಾಯಿಸುತ್ತಿತ್ತು. ಪ್ರತಿ ಬಾರಿ 'ಆಂಟಿಬಯಾಟಿಕ್' ನುಂಗುವುದರಲ್ಲಿ ಕೊನೆಗೊಳ್ಳುತ್ತಿತ್ತು. ವೈದ್ಯರು ಆ ಕ್ಷಣದ 'ಇನ್‌ಫೆಕ್ಷನ್' ಅನ್ನು ಹತೋಟಿಗೆ ತರುತ್ತಿದ್ದರೂ ಅವೆಲ್ಲವೂ ತಾತ್ಕಾಲಿಕ ಪರಿಹಾರಗಳಾಗಿದ್ದವು. ಈ ಶೀತ, ನೆಗಡಿ, ಗಂಟಲುನೋವಿನ ವಿಷವರ್ತುಲದಿಂದ ಹೊರಬರಲು ಬಯಸಿದ್ದೆ. ವಿಟಮಿನ್ 'ಸಿ' ದೇಹದ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆಂದು ಓದಿದ್ದೆ. ಪ್ರತಿದಿನ ಕಾಫಿ ಕುಡಿಯುವುದನ್ನು ಬಿಟ್ಟು, ಒಂದು ದೊಡ್ಡ ಲೋಟ ನೀರಿನಲ್ಲಿ ನಿಂಬೆಹಣ್ಣಿನ ರಸ ಹಿಂಡಿ ಕುಡಿಯತೊಡಗಿದೆ. ಥಟ್ಟನೆ ಪವಾಡವಾಗಲಿಲ್ಲ. ಆದರೆ ಸುಮಾರು ಆರು ತಿಂಗಳ ಸತತ ನಿಂಬೆಹಣ್ಣಿನ ಪ್ರಯೋಗ ಪರಿಣಾಮ ಬೀರಿತು. ನಿಧಾನವಾಗಿ ಶೀತ ನೆಗಡಿ ಕಾಣಿಸಿಕೊಳ್ಳುವುದು ಕಡಿಮೆಯಾಯಿತು, ಕಾಣಿಸಿಕೊಂಡಾಗಲೂ ಹಿಂದಿನಷ್ಟು ಸತಾಯಿಸಲಿಲ್ಲ. ಸುಮಾರು ಆರು ವರ್ಷ ನಾನು ಯಾವೊಂದೂ ಮಾತ್ರೆಯನ್ನೂ ತೆಗೆದುಕೊಳ್ಳದೆ, ನನ್ನ ಮಟ್ಟಿಗೆ ನಾನೊಂದು ದಾಖಲೆ ಸ್ಥಾಪಿಸಿದೆ.

ನಮ್ಮ ದೇಹದ ಸುಧಾರಣೆಗೆ ನಾವು ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ನಂಬುವವಳು ನಾನು. ನಮ್ಮ ದೇಹದೊಡನೆ ೨೪ ಗಂಟೆಯೂ ಇರುತ್ತೇವೆ. ಅದನ್ನು ಸೂಕ್ಷ್ಮವಾಗಿ ಅವಲೋಕಿಸಿ ಅದರ ಮೇಲಿನ ಪರಿಣಾಮಗಳನ್ನು ನಾವು ಗಮನಿಸದಿದ್ದರೆ, ಕೆಲವು ನಿಮಿಷಗಳು ನಮ್ಮನ್ನು ಪರೀಕ್ಷಿಸುವ ವೈದ್ಯರಿಗೆ ಎಲ್ಲವೂ ಗೋಚರವಾಗಬೇಕೆಂದು ಬಯಸುವುದು ತಪ್ಪು. ನಮ್ಮ ದೇಹದ ಬಗ್ಗೆ ನಾವು ನೀಡುವ ಮಾಹಿತಿ ವೈದ್ಯರು ಚಿಕಿತ್ಸಾ ಕ್ರಮವನ್ನು ನಿರ್ಧರಿಸುವಲ್ಲಿ ಉಪಯೋಗವಾಗಬಲ್ಲದು. ಕೆಲವೊಮ್ಮೆ ವೈದ್ಯರು ಕೈಬಿಟ್ಟಾಗ ರೋಗಿ ತನ್ನ ಸುಧಾರಣೆಯ ಹಾದಿಯನ್ನು ತಾನೇ ಕಂಡುಕೊಳ್ಳುತ್ತಾನೆ. ಅಂತಹ ಒಂದು ಅದ್ಭುತ ಕತೆ, ನಾರ್ಮನ್ ಕಸಿನ್ಸ್ ಅವರದು. 'ನಾರ್ಮನ್'

ನಗುನಗುತ್ತಾ ತನ್ನ ರೋಗದಿಂದ ಪಾರಾಗಿ ಹೊರಬಂದರು ಎಂದರೆ ನಂಬುತ್ತೀರಾ”[೧]

ಆಗಸ್ಟ್ ೧೯೬೪, ನಾರ್ಮನ್ ಕೆಲಸದ ಮೇಲೆ ರಷ್ಯಾಕ್ಕೆ ಹೋದವರು ಹಿಂದಿರುಗಿದಾಗ ಮೈ ಬಿಸಿಯೇರಿತು. ಒಂದೇ ವಾರದಲ್ಲಿ ನಾರ್ಮನ್‌ಗೆ ಕೈಕಾಲು ಕುತ್ತಿಗೆಯನ್ನು ಚಲಿಸುವುದೂ ಕಷ್ಟವಾಯಿತು. ‘ಸೆಡ್ ರೇಟ್’ ನಮ್ಮ ದೇಹದಲ್ಲಿ ‘ಸೋಂಕು’ ಎಷ್ಟು ತೀವ್ರವಾಗಿದೆ ಎಂಬುದನ್ನು ಸೂಚಿಸುತ್ತದೆ. ಸಾಧಾರಣ ಉರಿಶೀತ ಮುಂತಾದ ರೋಗಗಳು ೩೦, ಹೆಚ್ಚೆಂದರೆ ೪೦ರಷ್ಟು ಸೆಡ್‌ರೇಟ್ ಉತ್ಪಾದಿಸುತ್ತವೆ. ಇದಕ್ಕಿಂತ ‘ಸೆಡ್‌ರೇಟ್’ ಹೆಚ್ಚಾಯಿತೆಂದರೆ ಅದು ಸಾಧಾರಣ ರೋಗವಲ್ಲ ಎಂದು ವೈದ್ಯರಿಗೆ ತಿಳಿಯುತ್ತದೆ. ‘ಸೆಡ್‌ರೇಟ್’ ೮೮ ಆದಾಗ ನಾರ್ಮನ್ ಅವರನ್ನು ಆಸ್ಪತ್ರೆಗೆ ಸೇರಿಸಿದರು. ಒಂದೇ ವಾರದಲ್ಲಿ ಪರಿಸ್ಥಿತಿ ತೀರಾ ಗಂಭೀರವಾಗಿ ‘ಸೆಡ್‌ರೇಟ್’ ೧೧೫ಕ್ಕೆ ಏರಿ ಹೋಯಿತು. ನೂರೆಂಟು ತಪಾಸಣೆಯ ಆನಂತರ ನಾರ್ಮನ್ ಗಂಭೀರ ಬಗೆಯ ‘ಕಾಲಜನ್’ ಜೋಡಣೆ ಅಂಗಾಂಶಗಳ ರೋಗಕ್ಕೆ ಬಲಿಯಾಗಿದ್ದಾರೆ ಎಂದು ತಿಳಿದು ಬಂದಿತು.

ಇದೀಗ ಅವರ ಸ್ಥಿತಿ ಹೇಗಿತ್ತೆಂದರೆ, ಕೈಕಾಲು ಚಲಿಸುವುದಿರಲಿ ಹಾಸಿಗೆಯಲ್ಲಿ ದೇಹವನ್ನು ಹೊರಳಿಸುವುದು ಕೂಡ ಅವರಿಂದಾಗುತ್ತಿರಲಿಲ್ಲ. ನ್ಯೂಯಾರ್ಕಿನಿಂದ ಬಂದ ತಜ್ಞರ ತೀರ್ಪು ಸಹ ನಿರಾಶಾದಾಯಕವಾಗಿತ್ತು. ನಾರ್ಮನ್‌ರವರು ವೈದ್ಯರು ಪರಿಹಾರ ಮಾರ್ಗವನ್ನು ಕಂಡು ಹಿಡಿಯುತ್ತಾರೆ ಎಂದು ಕಾದಿದ್ದರು. ಇದೀಗ ನಾರ್ಮನ್ ಅವರಿಗೆ ತಮ್ಮ ಪರಿಸ್ಥಿತಿಯ ಬಗ್ಗೆ ತಾವೇ ಏನಾದರೂ ಮಾಡುವುದು ಅನಿವಾರ್ಯ ಎಂದು ಅರಿವಾಯಿತು.

ನಾರ್ಮನ್ ಏಕಾಏಕಿ ಬಡಿದ ಈ ರೋಗಕ್ಕೆ ಕಾರಣ ಹುಡುಕುತ್ತಾ ತಮ್ಮ ರಷ್ಯಾ ಪ್ರವಾಸದ ಬಗ್ಗೆ ಯೋಚಿಸಿದರು. ತಮ್ಮ ಅನುಭವಕ್ಕೆ ಹಿಂದಿರುಗಿ ನೋಡಿದಾಗ ‘ತಾನು ಅದೆಷ್ಟು ಒತ್ತಡದಲ್ಲಿ ಕೆಲಸ ಮಾಡುತ್ತಿರುವೆ’ ಎಂದು ಅರಿವಾಗಿತ್ತು. ಬಿಸಿನೆಸ್ ಮೀಟಿಂಗ್‌ನ ಮಾನಸಿಕ ಒತ್ತಡ, ದೈಹಿಕ ನಿರೋಧ ಶಕ್ತಿಯನ್ನು ತಗ್ಗಿಸಿ, ಆಗ ರೋಗ ಒಳನುಗ್ಗಲು ಸಾಧ್ಯವಾಗಿದೆ ಎಂದು ನಾರ್ಮನ್‌ಗೆ ಅನಿಸಿತು. ಹ್ಯಾನ್ಸ್ ಸೆಟ್ಯೆ ಅವರ ‘ದಿಸ್ಟ್ರೆಸ್ ಆಫ್ ಲೈಫ್’ ಪುಸ್ತಕವನ್ನು ನಾರ್ಮನ್ ಓದಿದ್ದರು. ಮಾನಸಿಕ ಒತ್ತಡ ಅದುಮಿಟ್ಟ ಕೋಪ, ಹತಾಶೆಯಂತಹ ಋಣಾತ್ಮಕ ಭಾವನೆ ದೇಹದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ ಎಂದು ಇಲ್ಲಿ ವಿವರಿಸಿತ್ತು. ಪ್ರೀತಿ, ಭರವಸೆ, ವಿಶ್ವಾಸ, ನಗು ಇವೆಲ್ಲ ಒಳ್ಳೆಯ ಪರಿಣಾಮ ಬೀರಬೇಕಲ್ಲವೆ? ಅವುಗಳ ಪರಿಣಾಮವನ್ನು ವೈಜ್ಞಾನಿಕ ರೀತಿಯಲ್ಲಿ ಅಳತೆ ಮಾಡುವುದು ಸಾಧ್ಯವೇ? ನಾರ್ಮನ್ ಅವರು ಒಂದು ವ್ಯವಸ್ಥಿತ ಯೋಜನೆಯನ್ನು ಹಾಕಿಕೊಂಡರು.

೧.ನೇಮಿಚಂದ್ರ; ನಕ್ಕುಗುಣವಾದವರು, ಪುಟ-೨೩

ತಮಗೆ ತಗುಲಿರುವ ಈ ತೀವ್ರತರದ ಸಂಧಿವಾತವನ್ನು ಅಥವಾ ಯಾವುದೇ ರೋಗವನ್ನು ಎದುರಿಸಲು ತಮ್ಮ ದೇಹದ ನಿರ್ನಾಳಗ್ರಂಥಿಗಳ ವ್ಯವಸ್ಥೆ ಕೆಲಸ ಮಾಡಬೇಕೆಂದು ಅವರಿಗೆ ತಿಳಿದಿತ್ತು. ನಾರ್ಮನ್ ತಮ್ಮ ದೇಹದ ಜವಾಬ್ದಾರಿಯನ್ನು ತಮ್ಮ ಕೈಗೆ ತೆಗೆದುಕೊಂಡರು. ಹಾಸ್ಯಭರಿತ 'ಕಾಮಿಡಿ' ಚಿತ್ರಗಳನ್ನು ತರಿಸಿಕೊಂಡರು. 'ನಗು' ನಿಜಕ್ಕೂ ದೇಹದಲ್ಲಿ ಒಳ್ಳೆಯ ರಾಸಾಯನಿಕಗಳ ಉತ್ಪತ್ತಿಗೆ ಕಾರಣವಾದರೆ, ಅದನ್ನು ಅಳೆ ಮಾಡುವಂತಿರಬೇಕು. ಸರಿ, ನಾರ್ಮನ್ ಅವರು ಅತ್ಯಂತ ಹಾಸ್ಯಭರಿತ ಚಿತ್ರಗಳನ್ನು ನೋಡುವ ಮೊದಲು 'ಸೆಡ್‌ರೇಟ್' ಪರೀಕ್ಷಿಸಿಕೊಂಡರು. ಅನೇಕ ಗಂಟೆಗಳ ಕಾಲ ನಕ್ಕು ನಲಿದ ನಂತರ ಮತ್ತೆ 'ಸೆಡ್ ರೇಟ್' ಪರೀಕ್ಷಿಸಿದರೂ ಪ್ರತಿ ಬಾರಿ ಅವರ ಸೆಡ್‌ರೇಟ್ ಐದು ಅಂಕದಷ್ಟು ಕಡಿಮೆ ಆಯಿತ್ತಲ್ಲದೆ ಮತ್ತೆ ಏರದೆ ಅದೇ ಹಂತದಲ್ಲಿ ನಿಲ್ಲುವುದನ್ನು ಗಮನಿಸಿದರು.

ವಿಟಮಿನ್ 'ಸಿ'ಯನ್ನು ಇನ್‌ಟ್ರಾವೀನಸ್ ಮೂಲಕ ತೆಗೆದುಕೊಂಡರು. ತೆಗೆದುಕೊಳ್ಳುವ ಮೊದಲು ಸೆಡ್‌ರೇಟ್ ಪರೀಕ್ಷಿಸಿಕೊಂಡರು. ವಿಟಮಿನ್ 'ಸಿ' ತೆಗೆದುಕೊಂಡ ಮೇಲೆ ಪುನಃ ಪರೀಕ್ಷಿಸಿಕೊಂಡಾಗ ಸೆಡ್‌ರೇಟ್ ಕುಸಿದಿತ್ತು. ವಿಟಮಿನ್ 'ಸಿ' ಮತ್ತು ನಗು ಇವೆರಡೇ ಮದ್ದಿನ ಮೂಲಕ ನಾರ್ಮನ್ ಸಂಪೂರ್ಣ ಗುಣವಾದರು. ತಮ್ಮ 'ಸ್ಯಾಟರ್ಡೆ ರಿವ್ಯೂ' ಕಛೇರಿಯ ಪೂರ್ಣಾವಧಿ ಕೆಲಸಕ್ಕೆ ಹಿಂತಿರುಗಿದರು.

ಬದುಕಬೇಕೆಂದು ನಿರ್ಧರಿಸುವ ರೋಗಿಯ ನಿರ್ಧಾರ, ದೇಹದ ಮೇಲೆ ನೇರ ಪರಿಣಾಮ ಬೀರಬಲ್ಲದು. ವೈದ್ಯರು ರೋಗ ವಾಸಿಯಾಗದೆಂದು ತಿಳಿಸಿದ್ದರು. ಆದರೆ ವೈದ್ಯರ ಈ ತೀರ್ಪನ್ನು ಸ್ವೀಕರಿಸಲಿಲ್ಲ. ರೋಗದೊಟ್ಟಿಗೆ ಆಗಮಿಸುವ ಭೀತಿ, ದಿಗಿಲು, ಖಿನ್ನತೆಗೆ ಬಲಿಯಾಗಲಿಲ್ಲ. ಬಹಳಷ್ಟು ಬಾರಿ ನಾವು ಪರಿಸ್ಥಿತಿಯ ಕೈಗೊಂಬೆಗಳಾಗುತ್ತೇವೆ. ಸಮಸ್ಯೆಗೆ ಬೆನ್ನು ತೋರಿಸದೆ ಮುಖಾಮುಖಿಯಾದಾಗ, ಪರಿಹಾರದ ಹೊಚ್ಚ ಹೊಸ ಹಾದಿಗಳು ಗೋಚರಿಸುತ್ತವೆ. ಈ ಲೇಖನದ ಉದ್ದೇಶ ಸ್ವಯಂವೈದ್ಯ ಮಾಡಿಕೊಳ್ಳಬೇಕೆಂದು ಖಂಡಿತ ಅಲ್ಲ. ಆದರೆ ಅಂತಿಮ ತೀರ್ಪು ವೈದ್ಯರ ಕೈಯಲ್ಲಿಲ್ಲ. ಅದು ನಮ್ಮ ಕೈಯಲ್ಲಿದೆ. ವೈದ್ಯರು ಕೈಬಿಟ್ಟಾಗ ಬದುಕು ಮುಗಿಯುವುದಿಲ್ಲ. ಆದರೆ ಅದು ಮುಗಿಯುವುದು ನಮ್ಮ ಮೇಲೆ ನಾವು ಭರವಸೆ ಕಳೆದುಕೊಂಡಾಗ ಎನ್ನುವ ವೈಜ್ಞಾನಿಕ ವಿಚಾರಧಾರೆಯನ್ನು ನೇಮಿಚಂದ್ರರು ಈ ಲೇಖನದಲ್ಲಿ ತಿಳಿಸಿ ಹೇಳಿದ್ದಾರೆ.

ಮುಗಿಲುಗಳು :

ಮುಗಿಲಿಲ್ಲದ ತಿಳಿಯಾದ ಆಳವಾದ ಆಕಾಶವನ್ನು ನೋಡಿ ಮೂಕನಾಗಿ ಹೋಗಿದ್ದೇನೆ. ಆ ನೀಲಿಯ ಆಕಾಶವು ಅಪಾರವಾದುದು. ಅದರ ವಿಸ್ತಾರವನ್ನು ಕಂಡವರಾರು ಇಲ್ಲ. ಅದರ ಆಳವಂತೂ ನಮ್ಮ ಬಗೆಗೆ ನಿಲುಕದು. ನಮ್ಮ ಕಣ್ಣು ಹರಿಯುವಷ್ಟೂ ಆ ನೀಲಿಯ ಆಳವೂ ಹೆಚ್ಚುತ್ತಾ

ಹೋಗುತ್ತದೆ. ಎಷ್ಟೋ ವೇಳೆ ನಾನು ಆ ನೀಲಿಮಯ ಆಳದಲ್ಲಿ ಮುಳುಗಿರುವೇನಾದರೂ ಅಲ್ಲಿಂದ ಎದ್ದು ತೇಲಿಕೊಂಡು ಬಂದ ಮೇಲೆ ಮುಳುಗಿದ್ದ ಅರಿವು ಮಾತ್ರ ಇರುತ್ತದೆಯೆ ಹೊರತು ಆ ಆಳದ ಅರಿವಿರುವುದಿಲ್ಲ. ಕಲ್ಪನಾತೀತವಾದ ಇಂಥ ವಿಶಾಲ ನೀಲಗಗನವನ್ನು ನೋಡಿದಾಗಲೆಲ್ಲ ಮೂಕಭಾವದಿಂದಿರುತ್ತೇನೆ. ಅದೇ ಆಕಾಶದಲ್ಲಿ ಮುಗಿಲಿನ ತಂಡವೊಂದನ್ನು ಕಂಡೊಡನೆಯೇ ನನ್ನ ಕಲ್ಪನೆ ಕುದುರುತ್ತದೆ; ಗರಿಗೂಡಿ ಬಾನಿಗೇರುತ್ತದೆ. ಇದು ಇಂದಿನ ಮಾತಲ್ಲ ಬಲು ಹಿಂದಿನ ಮಾತು. ಒಂದು ದಿನ ಹಾಗೆ ಚಂದ್ರನನ್ನು ನೋಡುತ್ತಿದ್ದಾಗ ಒಂದೆರಡು ಬಿಳಿಯ ಮುಗಿಲುಗಳು ಚಂದ್ರನ ಮೇಲೆ ತೇಲಿಹೋದವು.

ಅಂದಿನಿಂದಲೂ ಮುಗಿಲುಗಳನ್ನು ನೋಡುತ್ತಿರುವುದೇ ನನಗೊಂದು ಹುಚ್ಚಾಗಿ ಹೋಗಿದೆ. ಎಷ್ಟೋ ಮುಗಿಲುಗಳು ಎಲ್ಲಿಂದಲೋ ಬಂದು ಎಲ್ಲಿಗೋ ಹೋಗಿವೆ. ನಾವು ಎಲ್ಲಿಂದ ಬಂದೆವು- ಎಲ್ಲಿಗೆ ಹೋಗುತ್ತೇವೆ ಎಂಬ ತತ್ವ ವಿಚಾರವು ಎಷ್ಟು ಗಹನವಾದುದೋ ಮುಗಿಲುಗಳು ಎಲ್ಲಿಂದ ಬಂದು ಎಲ್ಲಿಗೆ ಹೋಗುತ್ತವೆ ಎಂಬ ಸಾಮಾನ್ಯ ವಿಚಾರವು ಅಷ್ಟೇ ಗಹನವಾದುದು ಎಂದು ನನಗೆ ತೋರುತ್ತದೆ. ನಾನು ಬದುಕಿರುವವರೆಗೂ ಇನ್ನೂ ಎಷ್ಟೋ ಲೆಕ್ಕವಿಲ್ಲದಷ್ಟು ಮುಗಿಲುಗಳನ್ನು ನನ್ನ ಬಯಕೆಯ ಬಿಂಬಿಗಳನ್ನು ಕಾಣಬಹುದು.

ಇದೇನು ಮುಗಿಲುಗಳ ಮೇಲೆ ಇಷ್ಟು ಮಮತೆಯೆಂದು ಯಾರಾದರೂ ಕೇಳಬಹುದು. ಹೌದು, ನನಗೆ ಮುಗಿಲುಗಳ ಮೇಲೆ ಬಹಳ ಮಮತೆ. ಈ ಮಮತೆ ಹಿಂದಿನಿಂದಲೂ ಬಂದುದು. ಶಾಲೆಗೆ ತಪ್ಪಿಸಿಕೊಂಡು ಮನೆಯಲ್ಲಿ ಇರುತ್ತಿದೆ. ಆಗ ಬಿಸಿಲು ಮಚ್ಚಿನ ಮೇಲೆ ಒರಗಿ ಒಬ್ಬನೇ ನಿಲ್ಲುತ್ತಿದೆ. ನಿಂತು ನೋಡಿದಾಗ ಮನಸ್ಸಿಗೆ ಏನೋ ಆನಂದ. ಬೆಟ್ಟದ ಮೇಲ್ಭಾಗ ಅವುಗಳ ಮೇಲೆ ನಾನಾ ತೆರನಾಗಿ ತೇಲಿ ಹೋಗುತ್ತಿದ್ದ ಬಿಳಿಮುಗಿಲಿನ ಮಾಲೆ. ರಾಜಕುಮಾರಿ ನಾನಾಗದೆಯೇ ನಾನು ಮುಗಿಲ್ಗುದುರೆಯೊಂದರ ಮೇಲೆ ಕುಳಿತು ಪ್ರಪಂಚವನ್ನೆಲ್ಲಾ ಸುತ್ತಿದ್ದಂತೆ ಬಗೆದಿದ್ದೇನೆ.

ಒಮ್ಮೊಮ್ಮೆ ಈ ಕರಿಮೋಡಗಳ ತಂಡ ನನಗೆ ಬಹಳ ಭಯಂಕರವಾಗಿ ಕಾಣುತ್ತಿದ್ದವು. ನನ್ನ ತಾಯಿ ನನಗೆ ಎಷ್ಟೋ ದಿನ ಪಿಶಾಚಿ, ದೆವ್ವ, ಭೂತಗಳ ಕಥೆ ಹೇಳುತ್ತಿದ್ದರು. ಆಗ ಕಥಾ ಪ್ರಪಂಚದಲ್ಲಿ ಇದ್ದ ಪಿಶಾಚಿ, ಭೂತಗಳು ಈ ಕರಿಮೋಡಗಳಲ್ಲಿ ಮೂರ್ತಿವೆತ್ತಂತಿದ್ದು ವಾಸ್ತವ ಪ್ರಪಂಚದಲ್ಲಿ ಕಂಡಾಗ ಬೆದರಿ ಒಳಗೆ ಓಡಿಹೋಗಿದ್ದೇನೆ. ರಾಮಾಯಣದ ಕಥೆ ಗೊತ್ತಿತ್ತು. ಆ ಕಾರ್ಮೋಡಗಳ ತಂಡವನ್ನು ನೋಡಿ ಲಂಕೆಗೆ ದಂಡೆತ್ತಿ ಹೋಗುತ್ತಿರುವ ವಾನರ ಸೈನ್ಯವೆಂದು ತಿಳಿದಿದ್ದೆ. ಆ ಉದ್ದದಿಂದ ಈ ಉದ್ದಕ್ಕೆ ಆಗೋಚರವಾಗಿ ತೇಲಿ ಹೋಗುತ್ತಿದ್ದ ದೊಡ್ಡದೊಂದು ಕಾರ್ಮುಗಿಲನ್ನು ನೋಡಿ ನಿದ್ರಿಸುತ್ತಿರುವ ಕುಂಭಕರ್ಣನೆಂದು ಬಗೆಯುತ್ತಿದೆ. ಮಳೆ ಗಾಳಿಯು ಜೋರಾಗಿ ಮೊಡಗಳೆಲ್ಲ ಚೆದುರಿ ಒಂದರೊಡನೊಂದು ಸೆಣಸುತ್ತಿರುವಂತೆ ಕಂಡಾಗ ರಾಮಾಯಣದ

ಯುದ್ಧವೇ ಕಣ್ಣಿಗೆ ಕಟ್ಟದಂತಾಗುತ್ತಿತ್ತು. ಮೇಲೆ ನೋಡುತ್ತಾ ಅನೇಕ ವೇಳೆ ಎಡವಿರುವುದು ಉಂಟು ಒಂದೆರಡು ಸಲ ಎಡವಿ ಬಿದ್ದಿರುವುದೂ ಉಂಟು.

ಯಾವನೋ ಒಬ್ಬ ಚಿತ್ರಕಾರನು ಹೊತ್ತು ಕಳೆಯುವುದಕ್ಕಾಗಿ ಹಾಕಿದ ಗೆರೆಬರೆಗಳ ಗೊಂದಲದಿಂದ ಒಮ್ಮೊಮ್ಮೆ ಮೂಡಿ ಬರುವ ಅಸಾಧಾರಣವಾದ ಭಾವಪೂರಿತವಾದ ಚಿತ್ರಗಳಂತೆ ಕಾಣುತ್ತವೆ ಕೆಲವು ಮುಗಿಲುಗಳು. ಅದೋ ವದನವುಳ್ಳವಾಗಿ ಅಳುವ ಮುಗಿಲುಗಳನ್ನು ಕಂಡು, ಪ್ರಕೃತಿಗೂ ಈ ಗತಿಯೇ ಎಂದು ಚಕಿತಚಿತ್ತಳಾಗಿದ್ದೇನೆ. ನಗೆ ಮುಗಿಲುಗಳನ್ನು ಕಂಡು ನಲಿದಿದ್ದೇನೆ. ನಾನು ನಕ್ಕಾಗ, ನಕ್ಕು, ಅತ್ತಾಗ ಅತ್ತು, ನಾನು ಕಂಬನಿಗರೆದಾಗ ತಾವು ಆಶ್ರುಧಾರಾವರ್ಷವನ್ನು ಕರೆದು, ನಾನು ಕೋಪಗೊಂಡಾಗ ತಾವು ಕೋಪಗೊಂಡು, ಮಿಂಚನ್ನು ಎಸೆದು, ನಾನು ರೇಗಿದಾಗ ತಾವೂ ಆರ್ಭಟಿಸಿ, ನಾನು ಶಾಂತನಾದಾಗ ತಾವು ಶಾಂತರಾಗಿ, ನನ್ನೊಡನೆ ಸಹಾನುಭೂತಿಯನ್ನು ತೋರುತ್ತಿವೆ ಎಂದು ನನ್ನ ಭಾವನೆ. ಮರುಳರ ಮಾತಿಗೆ ಅಡ್ಡಿಯೇನು ಇಲ್ಲವಲ್ಲ! ನಾನು ಹೇಳುವುದಿದು, ನೊಂದ ಹೃದಯ ಉಳ್ಳವರು ಸಹಾನುಭೂತರಾಗಿ ಸುತ್ತಾ ನೋಡಬೇಡಿ; ಕತ್ತೆತ್ತಿ ಮೇಲೆ ನೋಡಿ"[೧]

'ನನಗೆ ನನ್ನದೇ ಒಂದು ಬಯಕೆ ಇದೆ. ನಾನೇ ಒಂದು ಮುಗಿಲಾದರೆ ಬೇಕು ಬೇಕಾದೆಡೆಯಲ್ಲಿ ಸುತ್ತುತ್ತಿರಬಹುದು. ಒಂದೇ ಅವಲೋಕನದಿಂದ ವಿಶ್ವವೆಲ್ಲವನ್ನು ಒಮ್ಮೆಯೇ ನೋಡಿಬಿಡಬಹುದು. ಸೂರ್ಯನನ್ನು ಸೇವಿಸಬಹುದು. ಚಂದ್ರನನ್ನು ಅಲಂಕರಿಸಬಹುದು. ಹರ್ಷ ವರ್ಷದ ಹನಿಗಳಾಗಿ ಉದುರಿ, ಪೈಯರು ಪಚ್ಚೆಗಳನ್ನು ನಗಿಸಿ ಹೂವುಗಳನ್ನರಳಿಸಿ ಇಳೆಯನ್ನು ತಣಿಸಿ ಜನ್ಮ ಸಾರ್ಥಕ್ಯವನ್ನು ಪಡೆದು ಮತ್ತೆ ಮುಗಿಲಾಗಿ ಹುಟ್ಟಿ ಎಂದಿನಂತೆ ನಾನೇ ನಾನಾಗಿ ಗಗನ ಸಾಮ್ರಾಜ್ಯ' ಚಕ್ರವರ್ತಿಯಾಗಿ ಬಾಳಬಹುದು. ನಾನು ಮುಗಿಲಾದರೆ ಎಂದೆಂದಿಗೂ ಮುಗಿಲೇ, ರೂಪಭೇದ ರೂಪಾಂತರಗಳನ್ನು ಬಿಟ್ಟರೆ ನಾನು ಅಮರಳೇ ಸರಿ. ಅಂತೂ ಮುಗಿಲಾಗಿರುವ ಬಯಕೆ ಬಹಳ ದಿನದಿಂದೆ.

ಆದರೆ ಒಂದು ವಿಷಯ ನಾನು ಮುಗಿಲಾಗಿ ಬಿಟ್ಟರೆ ಮುಗಿಲುಗಳನ್ನು ಕೇಳುವವರಾರು? ಆದ್ದರಿಂದ ಬದುಕಿರುವವರೆಗೂ ನಾನು ಮುಗಿಲಾಗಲೊಲ್ಲೆ. ಮುಗಿಲುಗಳನ್ನು ನೋಡುತ್ತಿರುತ್ತೇನೆ. ಮಾನವರ ಪ್ರತಿನಿಧಿಯಾಗಿ ಅವುಗಳ ಜೊತೆಗಾರನಾಗಿರುತ್ತೇವೆ. ಒಂದು ವಿಷಯ ನಾನು ಮುಗಿಲಾಗಿಬಿಟ್ಟರೆ ಮುಗಿಲುಗಳನ್ನು ಕೇಳುವರಾರು? ಆದ್ದರಿಂದ ಬದುಕಿರುವವರೆಗೂ ನಾನು ಮುಗಿಲಾಗಲೊಲ್ಲೆ, ಮುಗಿಲುಗಳನ್ನು ನೋಡುತ್ತಿರುತ್ತೇನೆ. ಮಾನವರ ಪ್ರತಿನಿಧಿಯಾಗಿ ಅವುಗಳ ಜೊತೆಗಾರನಾಗಿರುತ್ತೇನೆ. ಇದು ನಿಶ್ಚಯವಾಗಿ ನೇಮಿಚಂದ್ರರ ವೈಜ್ಞಾನಿಕ ಪ್ರಕೃತಿ ಪ್ರೇಮವನ್ನು ವಿವರಿಸುತ್ತದೆ.

೧.ಎಂ.ವಿ.ಸೀತಾರಾಮಯ್ಯ: ಮುಗಿಲುಗಳು, ಪುಟ-೪೫

ಜಗ್ಗದಿರಿ ಹಗ್ಗವನ್ನು :

ಈಕೆ ನನ್ನ ಬಲು ಹಳೆಯ ಗೆಳತಿ. ಹತ್ತು ವರ್ಷಗಳ ಹಿಂದಿನ ಮಾತು, ಮನೆ ಬದಲಾಯಿಸಿದ್ದಳು. ಮೊದಲು ಆಕೆಯ ಮನೆ ಅಮ್ಮನ ಮನೆಗೆ ಹತ್ತಿವಾಗಿಯೇ ಇತ್ತು. ಶಾಲೆಯಿಂದ ಬಂದ ಮಗು ಅಜ್ಜಿಯ ಮನೆಯಲ್ಲಿರುತ್ತಿತ್ತು. ಈಕೆಯ ಹೊಸ ಮನೆಗೆ ಹೋದ ನಾನು 'ಈಗ ಮಗೂನ ಎಲ್ಲಿ ಬಿಡ್ತಿಯ? ಬೇಬಿ ಸಿಟ್ಟಿಂಗ್ ಹತ್ತಿರ ಇರಬೇಕಲ್ಲ' ಕೇಳಿದ್ದೆ. ಇಲ್ಲ, ಇಲ್ಲೆ ಪಕ್ಕದ ಮನೆಯಲ್ಲಿರ್ತಾನೆ. ನಾನು ಬೇಗ ಬಂಡು ಬಿಡ್ತೀನಲ್ಲ ಅಂದಳು. ಚಿಕ್ಕ ಮಗು ಎರಡು ಗಂಟೆಗೇನೂ ಮನೆಗೆ ಬಂದು ಬಿಡುತ್ತಿತ್ತು. ಈಕೆ ಕೆಲಸ ಮುಗಿಸಿ ಮನೆ ತಲುಪುವಾಗ ಐದಾದರೂ ಆಗುತಿತ್ತು. ಆ ಮೂರು ಗಂಟೆಗಳ ಕಾಲ ಮಗುವನ್ನು ನೋಡಿಕೊಳ್ಳಲು ನೆರೆಹೊರೆಯವರು ಸಿಕ್ಕಿದ್ದಾರಲ್ಲ 'ಅದೃಷ್ಟವಂತೆ' ಅಂದುಕೊಂಡೆ. ಪ್ರತಿದಿನವೂ ಅವರೇ ನೋಡಿಕೊಳ್ಳುತ್ತಾರಾ? ಕೇಳಿದೆ. 'ಹೂಂ ಅವರೇನೂ ಕೆಲಸಕ್ಕೆ ಹೋಗೋಲ್ಲವಲ್ಲ, ಸುಮ್ಮನೆ ಕುಳಿತಿರ್ತಾರೆ, ಮಗು ಮಧ್ಯಾಹ್ನ ಬರುತ್ತೆ, ಒಂದು ಚೂರು ನೋಡಿಕೊಂಡಿರಿ ಅಂತ ಕೇಳಿದ್ದೆ' ಎಂದಳು. ಮಕ್ಕಳು ಅಂದರೆ ಬಲು ಪ್ರೀತಿ ಇರುವ ಮನುಷ್ಯರಿರಬೇಕು ಅಂದುಕೊಂಡೆ. ಇಲ್ಲದಿದ್ದರೆ ಮಧ್ಯಾಹ್ನದ ನಿದ್ದೆ, ಟಿವಿ ಬಿಟ್ಟು ಮಗುವಿನ ಜವಾಬ್ದಾರಿ ಹೊರುವುದೇನೂ ಸುಲಭವಲ್ಲ. ಕೆಲವು ತಿಂಗಳ ಅನಂತರ ಮತ್ತೊಮ್ಮೆ ಈಕೆಯ ಮನೆಗೆ ಹೋದಾಗ ಅದಾಗಲೇ ನೆರೆಯ ಮನೆಯವರ ಮೇಲೆ ದೂರು ಆರಂಭವಾಗಿತ್ತು. 'ಅಲ್ಲ ಮೊನ್ನೆ ನೋಡ್ತಿನಿ ಮಗೂನ ಬೀದಿಗೆ ಬಿಟ್ಟಿದ್ದಾರೆ. ಹೊರಗೆ ಮಣ್ಣಲ್ಲಿ ಆಡ್ತಾ ಇದ್ದ' ಎಂದಳು. ಆಶ್ಚರ್ಯದಿಂದ ಅವಳನ್ನೇ ನೋಡಿದೆ. ಕೈತುಂಬಾ ಸಂಬಳ ತರುವ ಈ ದುಡಿವ ಮಹಿಳೆ ಮಗುವಿಗೊಂದು ಬೇಬಿ ಸಿಟ್ಟಿಂಗ್ ಹುಡುಕದೇ, ಸಂಕೋಚಕ್ಕೆ ಹೂಂಗುಟ್ಟಿದ ಪಕ್ಕದ ಮನೆಯವರ ಸೌಜನ್ಯವನ್ನು ಜಗ್ಗಿ ಜಗ್ಗಿ ಬಳಸಿಕೊಳ್ಳುತ್ತಿದ್ದಾಳಲ್ಲ ಎಂದು ಅಚ್ಚರಿಯಾಯಿತು. ಆ ನೆರೆಹೊರೆ ಸಂಬಂಧ ಅದರಾಚೆಗೆ ಹೆಚ್ಚು ದಿನವೇನು ಉಳಿಯಲಿಲ್ಲ.

ನನಗೆ ನನ್ನ ಬಾಲ್ಯದ ಘಟನೆ ನೆನಪಾಯಿತು. ನಾವೊಂದು ದೊಡ್ಡ ಅಂಗಳದ ಮನೆಯಲ್ಲಿದ್ದೆವು. ನಮ್ಮದೇ ರಸ್ತೆಯಲ್ಲಿದ್ದ ಸ್ನೇಹಿತರ ಮನೆಯಲ್ಲಿ ಬೆಳೆದು ನಿಂತ ಮಕ್ಕಳು. ಇಂಥ ಸಮಯದಲ್ಲಿ ವಯಸ್ಸಾದ ತಾಯಿಗೆ ಅನಿರೀಕ್ಷಿತವಾಗಿ ಮಗು ಹುಟ್ಟಿತು. ತಾಯಿಗೆ ಮಾನಸಿಕ ಆರೋಗ್ಯವಿರಲಿಲ್ಲ. ಹುಟ್ಟಿದ ಆ ಮಗು ಎಲ್ಲರಿಗೂ ಭಾರವಾದಂತಿತ್ತು. ಅಗಾಗ್ಗೆ ಮಗುವನ್ನು ಎತ್ತಿಕೊಂಡು ಬಂದು ನಮ್ಮ ಮನೆಯಲ್ಲಿ ಬಿಡುವುದಿತ್ತು. ಕೊನೆ ಕೊನೆಗೆ ಮಗು ಇಲ್ಲಿರುವುದೇ ಹೆಚ್ಚಾಗಿ ನಾವು ಚಿಕ್ಕವರು, ಓದುವುದು ಬರೆಯುವುದು ಬಿಟ್ಟು ಮಗು ಆಡಿಸುತ್ತಾ ಕುಳಿತಿರುತ್ತಿದ್ದೆವು. ಹೀಗೆ ಅದೆಷ್ಟೋ ದಿನ ನಡೆದಿದ್ದು, ಒಂದು ದಿನ ನಮ್ಮ ತಂದೆಗೆ ಪಿತ್ತ ನೆತ್ತಿಗೇರಿ ಕೂಗಾಡಿದಾಗ ಬಲು ಕೆಡುಕೆನಿಸಿತ್ತು.

ಆದರೆ ಅಮ್ಮ ಹೇಳುವ ಮಾತು ನೆನಪಾಗುತ್ತದೆ. ಹಗ್ಗ ಹರಿಯೋತನಕಾನೂ ಜಗ್ಗಬಾರದು. ನಿಜ ಯಾರೋ ನಮಗೆ ತೋರುವ ಸೌಜಜನ್ಯವನ್ನು ದುರುಪಯೋಗ ಪಡಿಸಿಕೊಳ್ಳಬಾರದು.

ಒಬ್ಬರಿಗೊಬ್ಬರು ಸಹಾಯಕ್ಕೆ ಒದಗುವುದು ಅಗತ್ಯ ಮತ್ತು ಅನಿವಾರ್ಯ. ಆದರೆ ಈ ಸಹಾಯ ಸದಾ ಕಾಲಕ್ಕೂ ಏಕಮುಖವಾಗಬಾರದು. ಏಕಮುಖವಾದರೂ ಅಷ್ಟು ಚಿಂತೆ ಇಲ್ಲ, ಸಹಾಯವನ್ನು 'ಏನು ಮಹಾ ಮಾಡುತ್ತಿದ್ದಾರೆ' ಎಂಬ ಧೋರಣೆಯಿಂದ ಸ್ವೀಕರಿಸಬಾರದು. ಒಂದಿನಿತು ನಮ್ರತೆ, ಕೃತಜ್ಞತೆ ನಮ್ಮ ಬದುಕನ್ನು ಬಹಳಷ್ಟು ಹಗುರ ಮಾಡಬಲ್ಲದು.

ಒಂದು ದಿನ ಕಛೇರಿಗೆ ಒಬ್ಬಾಕೆ ಫೋನ್ ಮಾಡಿದರು. ತಮಗೆ ತುರ್ತಾಗಿ ಕೌನ್ಸಿಲಿಂಗ್ ಬೇಕಿದೆ ಎಂದೂ, ಈಗಲೇ ಕಛೇರಿಗೆ ಬರಲೇ ಎಂದೂ ಕೇಳಿದರು. ಮನೆಗೆ ಬನ್ನಿ ಎಂದೆ, ನಮ್ಮ ಮನೆ ಆಕೆಗೆ ಬಲು ದೂರವಿತ್ತು. ಕಡೆಗೆ ಇಬ್ಬರೂ ಒಂದು ಪಾರ್ಕ್‌ನಲ್ಲಿ ಆರು ಗಂಟೆಗೆ ಭೇಟಿಯಾಗುವುದೆಂದು ನಿರ್ಧರಿಸಿದೆವು. ಸಂಜೆ ಪಾರ್ಕ್‌ನಲ್ಲಿ ನನಗಾಗಿ ಕಾದ ಈ ಮಹಿಳೆ ಮಧ್ಯಮ ವಯಸ್ಸಿನವರು. ವಿಪರೀತ ಖಿನ್ನತೆ ಮತ್ತು ಆಕ್ರೋಶಕ್ಕೆ ಗುರಿಯಾಗಿದ್ದರು. ಈಕೆ ವಿವಾಹಿತೆ, ಮನೆಗೆ ಕಿರಿಯ ಸೊಸೆ, ಅತ್ತೆ-ಮಾವ ಜೊತೆಯಲ್ಲಿದ್ದರು. ಗಂಡನ ಇಬ್ಬರು ಅಣ್ಣಂದಿರು ಅಮೆರಿಕದಲ್ಲಿ ವಿವಾಹದ ಅನಂತರ ಕೆಲಸ ಬಿಟ್ಟಿದ್ದ ಆಕೆ ಹೇಳಿದಳು. ಅತ್ತೆಗೆ ಸಕ್ಕರೆ ಖಾಯಿಲೆ, ಮಾವನವರಿಗೆ ರಕ್ತದೊತ್ತಡ, ಅವರ ಆರೋಗ್ಯ ಹೆಚ್ಚು-ಕಡಿಮೆ ಆಗದ ಹಾಗೆ ನೋಡಿಕೊಂಡು, ಬೆಳಗ್ಗಿನಿಂದ ರಾತ್ರಿಯವರೆಗೂ ಸೇವೆ ಮಾಡುತ್ತೇನೆ. ನನ್ನವರು ಅಮ್ಮನ ಮಾತು ಮೀರಿ ನಡೆಯುವುದಿಲ್ಲ. ಹೀಗಿದ್ದೂ ಅತ್ತೆಯವರು ಸದಾ ಏನಾದರೂ ತಪ್ಪು ಹುಡುಕಿ, 'ನನ್ನ ಹಿರಿಮಗ ಹಿರಿಸೊಸೆ ಆಗಿದ್ದರೆ ಹೀಗೆ ಮಾಡ್ತಾ ಇದ್ದರಾ?' ಎಂದು ಅಲ್ಲೆಲ್ಲೋ ಅಮೆರಿಕದಲ್ಲಿ ಆರಾಮ ಇರುವ, ಎರಡು ವರ್ಷಕ್ಕೊಮ್ಮೆ ಬಂದು ಒಂದಷ್ಟು ಉಡುಗೊರೆ ಸುರಿದು, ಬಾಯಿ ತುಂಬಾ ಮಾತನಾಡಿ ಹೊರಟು ಹೋಗಿಬಿಡುವ ಆ ಮಗ-ಸೊಸೆಯನ್ನೇ ಹಾಡಿ ಹೊಗಳಿ ನನಗೆ ತಲೆ ಚಿಟ್ಟು ಹಿಡಿಸುತ್ತಾರೆ ಎಂದು ತೋಡಿಕೊಂಡಳು. ಬೇರೆ ಮನೆ ಮಾಡಬೇಕು ಎಂಬಷ್ಟು ಇವರಿಗೆ ರೇಗಿ ಹೋಗಿತ್ತು. ಇದು ನನಗೆ ಹೊಸ ಕತೆಯಾಗಿರಲಿಲ್ಲ. ಅನೇಕ ಮನೆಗಳ ಕತೆ ಇದಾಗಿತ್ತು. "ನಮ್ಮ ನಿಕಟ ಸಂಬಂಧಗಳಲ್ಲೂ ಹಗ್ಗ ಹರಿಯುವಷ್ಟು ಜಗ್ಗಬಾರದು"[೧]

ಕೆಲಸದ ಮೇಲೆ ಹೊರ ಊರಿಗೆ ಹೋದ ಒಂದು ಸಂದರ್ಭ. ನನ್ನ ಸ್ನೇಹಿತರೊಬ್ಬರು 'ಮೊಬೈಲ್' ತಂದಿದ್ದರು. ಇದ್ದಬದ್ದವರೆಲ್ಲ ಸ್ವಲ್ಪ ಫೋನ್ ಮಾಡಬಹುದೇ? ಕೇಳುವರು. ತಮ್ಮ ತಮ್ಮ ಮನೆಗಳಿಗೆ ಫೋನ್ ಹಿಡಿದು ಕುಳಿತರೆ ಮಾತು ಮುಗಿಯದು. ಇವರಿಗಂತು ಕೊನೆ ಕೊನೆಗೆ ರೇಗಿ ಹೋಗುತ್ತಿತ್ತು. ನನಗೆ ಆಪ್ತರಾದ ಇವರು, ಪ್ರತಿ ದಿನ ನಾನು ಹೊರಗೆ ಹೋಗಿ ಮನೆಗೆ ಫೋನ್ ಮಾಡಿ ಬರುವುದು ನೋಡಿ 'ಹೊರಗೇಕೆ ಹೋಗ್ತಿರ, ಇದರಲ್ಲೆ ಮಾಡಿ' ಎಂದು ಮೊಬೈಲ್ ಕೊಡಲು ಮುಂದಾಗುತ್ತಿದ್ದರು. ಬೀದಿ ಬೀದಿಯಲ್ಲೂ ಫೋನ್‌ಗಳಿರುವ ಈ ಕಾಲದಲ್ಲಿ ನನಗೆ ಹೊರಗೆ ಹೋಗಿ

೧.ನೇಮಿಚಂದ್ರ; ಜಗ್ಗದಿರಿ ಹಗ್ಗವನ್ನು, ಪುಟ-೧೨೬

ಒಂದು ಫೋನ್ ಮಾಡುವುದು ಕಷ್ಟವೇನಿರಲಿಲ್ಲ. 'ಇಲ್ಲ ತುರ್ತು ಸಮಯಕ್ಕೆ ನಿಮ್ಮಲ್ಲಿಗೆ ಬರುತ್ತೇನೆ' ಎನ್ನುತ್ತಿದ್ದೆ.

ಇನ್ನೊಬ್ಬರ ಒಳ್ಳೆಯತನ ಸೌಜನ್ಯ, ನಮ್ಮ ಮೇಲೆ ಅವರು ತೋರುವ ಕೃಪೆ, ಇವೆಲ್ಲವನ್ನು 'ಬ್ಯಾಂಕಿನಲ್ಲಿ ಕಾದಿರಿಸಿದ ಹಣ'ದಂತೆ ಉಳಿಸಿಕೊಂಡು ಬರಬೇಕು. ಅಗತ್ಯವಿದ್ದಾಗ ಮಾತ್ರ ಅಗತ್ಯವಿದ್ದಷ್ಟು ಮಾತ್ರ ಬಳಸಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ತುರ್ತಿನ ಸಮಯಕ್ಕೆ 'ಬ್ಯಾಂಕ್'ನಲ್ಲಿ ಬಿಡಿಗಾಸಿರುವುದಿಲ್ಲ! ಲೇಖಕಿ ನೇಮಿಚಂದ್ರರು ಈ ಲೇಖನದಲ್ಲಿ ವೈಚಾರಿಕ ಪ್ರಜ್ಞೆ ಇರುವಂತಹ ಮಹನೀಯರು ಬೇರೆಯವರ ಸಹಾಯವನ್ನು ಅತಿಯಾಗಿ ಅಪೇಕ್ಷೆ ಪಡಬಾರದು ಎಂಬ ಅಂಶವನ್ನು ಸೂಚ್ಯವಾಗಿ ತಿಳಿಸಿರುತ್ತಾರೆ.

ಸಾಲಾಯ ತಸ್ಮೈ ನಮಃ :

ಸಮಾಜದ ಪ್ರತಿಷ್ಠೆಯ ದೃಷ್ಟಿಯಿಂದ ಗಮನಿಸಿದರೆ ಸಾಲ ಅಂತಹ ಗೌರವ ತರುವ ಅತಿಥಿಯೇನಲ್ಲ. ಈ ಸಮಾಜದ ಹಿರಿಯರು 'ಆಪ್ತಗೌರವ' ಎಂಬ ಅತಿ ದುಬಾರಿಯ ಹಸುವಿನ ರಕ್ಷಣೆಯನ್ನು ನಮಗೆ ವಹಿಸಿದ್ದಾರೆ. ನಾವು ಭಯಭಕ್ತಿಗಳಿಂದಲೇ ದಿಲೀಪನಂತೆ ಈ ಮರ್ಯಾದೆ ನಂದಿನಿಯನ್ನು ಕಾಪಾಡಿಕೊಳ್ಳಲು ಬಹಳ ಹೆಣಗುತ್ತೇವೆ. ಅಲ್ಲಲ್ಲಿ ಸಾಲ ತಂದು ಒಪ್ಪವಾಗಿ ಸಂಸಾರ ನಡೆಸಿ ಆತ್ಮಗೌರವದ ಬೊಜ್ಜು ಬೆಳೆಸುತ್ತೇವೆ. ಒಂದು ಕಾಲಕ್ಕೆ ಸಾಲವು ಸಿಂಹದಂತೆ ಮೇಲೆದ್ದು ಮರ್ಯಾದೆಯ ನಂದಿನಿಯ ಕುತ್ತಿಗೆಗೆ ಬಾಯಿ ಹಾಕಲು ಮುಂದಾಗುತ್ತಾರೆ. ಅದನ್ನು ಹೊಡೆದು ಉರುಳಿಸಬೇಕಾದದ್ದು ನಮ್ಮ ಕರ್ತವ್ಯ.

ಪುರಂದರದಾಸರು ತಮ್ಮ ತಂಬೂರಿಗೆ ಸಹಜವಾದ ಭಾಷೆಯಲ್ಲಿ 'ಸಾಲ ಮಾಡಬೇಡ, ಪಾಲು ಎನ್ನಬೇಡ; ನಾಳೆಗೆ ಇಡಬೇಡ' ಎಂದು ಹೇಳಿದ್ದಾರೆ. ಈ ಮಾತನ್ನು ಅಪಾದಮಸ್ತಕವಾಗಿ ಒಪ್ಪಲು ಮನುಷ್ಯನಿರಲಿ, ನಮ್ಮ ಆದರ್ಶ ನರ ಕಾಲಕ್ಕೆ ಕೂಡ ಸಾಧ್ಯವಾಗಿಲ್ಲ.

ಋಣಭಾರಕ್ಕೆಣೆಯಾವುದೈ ಎಂಬ ಉಕ್ತಿ ಮುಕ್ತಾಫಲವನ್ನು ಬರೆದ ಸೋಮೇಶ್ವರ ಕವಿ ಏನೇ ಹೇಳಿದರೂ ಸಾಲವನ್ನು ಕೊಂಬಾಗ ಹಾಲೋಗರ ತಿಂದಷ್ಟು ಸಂತೋಷಪಟ್ಟರೆ ಅದೀಗ ನಿಜವಾದ ಆನಂದ, ಮುಂದೆ ಸಾಲಿಗರ ಕ್ರೌರ್ಯದಿಂದ ಕಿಬ್ಬದಿಯ ಕೀಲು ಮುರಿಸಿಕೊಳ್ಳದ ಹಾಗೆ ತಪ್ಪಿಸಿಕೊಳ್ಳುವ ಸತಾಯಿಸುವ ಭಂಡ ಬುದ್ಧಿ ಸಾಲ ತೆಗೆದುಕೊಂಡ ಮೇಲೆ ಬಂದು ಬಿಡುತ್ತದೆ.

ಆದರೂ ಕೊಡುವ ಕೈ ಮೇಲೆ, ಬೇಡುವ ಕೈ ಕೆಳಗೆ ಎಂಬ ಅಹಂಭಾವ ನಿಮಗಿದ್ದೀತು. ವಿಷ್ಣುವಿನಂತಹ ಜಗದರಾಧ್ಯ ದೇವರು ಕೂಡ ಬಲಿಯ ಬಳಿ ಬೇಡಲು ಬಂದಾಗ ಮೂರಡಿ ಕುಬ್ಜ ವೇಷದಲ್ಲಿ ಬರಬೇಕಾಯಿತು ಎಂದು ನಿಮಗನ್ನಿಸೀತು. ಆದರೆ ಇಷ್ಟರಿಂದಲೇ ಮೋಸ ಹೋಗಬೇಡಿ

ಆಶ್ಚರ್ಯಕರ ರೀತಿಯಲ್ಲಿ ಬದಲಾಯಿಸಿ ಬೆಳೆದು ತ್ರಿವಿಕ್ರಮನಾಗಿ ಬಿಟ್ಟಿದ್ದಾನೆ. ಚಿತ್ತ ತಾ ಬಾಗಿದರು ಮತ್ತೆದ್ದು ಮೀಟುವುದು ಅದರ ಸ್ವಭಾವ ತಾನೆ.

ಸಾಲಗಾರನ ಜೀವನದ ಏರಿಳಿತಗಳನ್ನು ಗಮನಿಸಿ ಅವನ್ನು ದುರಂತ ನಾಯಕನಿಗೆ ಹೋಲಿಸುವ ಪ್ರಯತ್ನ ಹಲವರದು. ತೂತಿನ ದೋಣಿಯಲ್ಲಿ ಕುಳಿತು ನದಿ ದಾಟುವುದು, ಸಾಲದ ಸಂಸಾರವನ್ನು ನಡೆಸುವುದು ಎರಡು ಒಂದೇ ಎಂದು ಅನೇಕರು ನಂಬಿದ್ದಾರೆ. 'ಸಾಲಬಿಟ್ಟರೆ ಮಾರಿಕೊಂಬರಯ್ಯ' ಎಂದು ಬಸವಣ್ಣನವರು ಹೆದರಿಸಿದ್ದಾರೆ"[೧] ಒಟ್ಟಿನಲ್ಲಿ ಎಲ್ಲರ ಅಭಿಪ್ರಾಯವು ಸಾಲಕ್ಕೆ ವಿರೋಧವಾದುದೇ ಆಗಿದೆ. ಆದರೆ ನಮ್ಮ ದೇಶ ಎಂದಿಗೂ ನುಡಿದಂತೆ ನೆಲೆಗೆ ಪ್ರಸಿದ್ಧವಾಗಿಲ್ಲ.

ಪಂಚೇಂದ್ರಿಯಗಳಂತೆ ವಿಷಯಾಸಕ್ತಿಯಂತೆ ಸಾಲವು ನಮ್ಮ ಬದುಕಿನಲ್ಲಿ ಅತ್ಯಂತ ನಿಕಟವರ್ತಿಯಾಗಿದೆ. ಮುನಿದ ತಾಯಿಯಂತೆ ನಾವು ಎಷ್ಟೆಷ್ಟು ದೂರ ಸರಿಯಲು ಯತ್ನಿಸಿದ ಈ ಶಿಶುವು ಅಷ್ಟಷ್ಟು ಹತ್ತಿರಕ್ಕೆ ಬಂದು ನಿಲ್ಲುತ್ತದೆ. ಕಲಿಯಬೇಕೆಂಬ ಜ್ಞಾನದ ತೃಷ್ಣಿ, ಸಾಲ ತೀರಿಸಬೇಕೆಂಬ ತಿಳಿಯ ಮನಸ್ಸು ಇವೆರಡೂ ಲೋಕದಲ್ಲಿ ಅಪೂರ್ವವಾದವು. ಕಲಿಯಬೇಕಾದರೆ ಓದು, ಬರಹ ಎಷ್ಟು ಅವಶ್ಯಕವೋ ಸಾಲ ತೀರಿಸಬೇಕಾದರೆ ಸಾಲ ಮಾಡುವುದು ಅಷ್ಟೇ ಮುಖ್ಯವಾದುದು. ತಿಳಿಯ ಮನಸ್ಸು ಮನುಷ್ಯನಿಗೆ ಬರುವುದು ಬಹಳ ಕಷ್ಟ. ಹೀಗೆ ಸಾಲವು ಮನುಷ್ಯನನ್ನು ಸುಧಾರಿಸುವ ಒಂದು ಬೆಟ್ಟದಷ್ಟು ವ್ಯಾಪಕ ಶಕ್ತಿಯನ್ನು ಪಡೆದುಕೊಂಡಿದೆ. ಆದ್ದರಿಂದ ನಾನಂತೂ ಸಾಲದ ಬೆಂಡು ಕಟ್ಟಿಕೊಂಡ ಸಂಸಾರ ಸಾಗರದಲ್ಲಿ ಈಸುತ್ತೇವೆ. ಸಾಲಿಗರು ಕರುಣಾಶಾಲಿಗಳಾದ ಪಕ್ಷದಲ್ಲಿ ಈಸುವುದಷ್ಟೇ ಅಲ್ಲ 'ಇದ್ದು ಜಯಿಸುತ್ತೇನೆ' ಎಂಬ ಭರವಸೆಯನ್ನು ಕೊಡಬಲ್ಲೆ.

ದಾಸರಾದಿಯಾಗಿ ಎಲ್ಲರೂ ಸಾಲವನ್ನು ಪಡೆಯುವುದಕ್ಕೆ ವಿರೋಧಿಸುತ್ತಾರೆ. ಆದರೆ ಈಗಿನ ಕಾಲದಲ್ಲಿ ಜೀವನ ನಡೆಸುವುದಕ್ಕೆ ಸಾಲವಿಲ್ಲದೆ ಸಾಧ್ಯವೇ ಇಲ್ಲ ಎನ್ನುವ ಪರಿಸರವಿದೆ. ಹಾಗಾಗಿ ವೈಚಾರಿಕ ಪ್ರಜ್ಞಾವಂತ ಜನರು ಇತಿಮಿತಿ ಅರಿತು ಸಾಲ ಮಾಡಬೇಕಿದೆ ಎಂದು ನೇಮಿಚಂದ್ರರು ತಿಳಿಸಿದ್ದಾರೆ.

ಎಲ್ಲ ಮಗಳ ಮದುವೆಗಾಗಿ :

ಒಂದೂರಲ್ಲಿ ಒಬ್ಬ ಬಡವ. ಅವನಿಗೆ ಮೂವರು ಹೆಣ್ಣುಮಕ್ಕಳು. ಮೊದಲ ಮಗಳ ಮದುವೆಗೆ ಆತ ಒಂದು ಮೂತ್ರಪಿಂಡ ಮಾರಿದ. ಎರಡನೇ ಮಗಳ ವರದಕ್ಷಿಣೆಗೆ ತನ್ನೆರಡು ಕಣ್ಣುಗಳನ್ನು ಮಾರಿದ.

೧.ಆ.ರಾ.ಮಿತ್ರ: ಸಾಲಾಯತಸ್ಮೈ ನಮಃ, ಪುಟ-೧೧೧

ಮೂರನೇ ಮಗಳ ಮದುವೆಗೆ ಏನೂ ಉಳಿದಿರಲಿಲ್ಲ. ತನ್ನ ಉಳಿದೊಂದು ಮೂತ್ರಪಿಂಡವನ್ನು ಮಾರಿ ನೆಗೆದುಬಿದ್ದ.

ಸದ್ಯಕ್ಕೆ ಇದೊಂದು ಕಟ್ಟುಕತೆ. ಆದರೆ ಈ ಕತೆ ಅದಾಗಲೇ ವಾಸ್ತವದ ಹಾದಿ ಹಿಡಿದಿದೆ. ಬಾಂಬೆಯ ಉಲ್ಲಾಸನಗರದಲ್ಲಿರುವ ಗೋವಿಂದರಾಮ ಮೀರ್ ಚಂದಾನಿ ಅಡಿಗೆ ಸೋಡಾ ತಯಾರಿಸುವ ಪುಟ್ಟ ಯೂನಿಟ್‌ನ ಮಾಲೀಕ. ಆತನಿಗೆ ಐದು ಜನ ಗಂಡು ಮಕ್ಕಳು, ನಾಲ್ಕು ಹೆಣ್ಣುಮಕ್ಕಳು. ಈತ ಇದೀಗ ತನ್ನ ಎರಡನೇ ಮಗಳ ಮದುವೆಗಾಗಿ ತನ್ನ ಒಂದು ಮೂತ್ರಪಿಂಡ ಮಾರಲು ಹೊರಟ್ಟಿದ್ದಾನೆ. ಆತನ ಈ ನಿರ್ಧಾರ ಒಂದೆಡೆ ಸ್ತ್ರೀವಾದಿ ಸಹೃದಯಿಗಳನ್ನು ಬೆಚ್ಚಿ ಬೀಳಿಸಿದರೆ, ಮತ್ತೊಂದೆಡೆ ಕೊಂಡು ಕೊಳ್ಳಲು ಉತ್ಸುಕರಾದ ಜನ 'ಕ್ಯೂ' ಬೆಳೆಸಿದ್ದಾರೆ.

ಮೀರ್‌ಚಂದಾನಿಯ ಮೊದಲ ಮಗಳು ೨೩ ವರ್ಷದ ಉಷಾ, ಆರು ತಿಂಗಳ ಹಿಂದೆ ಸತ್ತಳು. ಹತ್ತಿರದ ಸಂಬಂಧಿ ಹುಡುಗನೊಡನೆ ಆಕೆಯ ವಿವಾಹ ನಿಶ್ಚಯವಾಗಿತ್ತು. ನಿಶ್ಚಿತಾರ್ಥದ ಸಮಯದಲ್ಲಿ ೨೫,೦೦೦/-ರೂ ವರದಕ್ಷಿಣೆ ಕೊಡುವುದಾಗಿ ಮಾತು ಕೊಟ್ಟದ್ದು, ಆತನ ಕೈ ಮೀರಿತ್ತು. ಮದುವೆಗೆ ಮೊದಲೇ ಹುಡುಗನ ಬೇಡಿಕೆ ಏರುತ್ತಲೇ ಹೋದವು. ತನ್ನ ಬೇಡಿಕೆಗಳನ್ನೆಲ್ಲ ತೀರಿಸುವಂಥಾ ಸಿರಿವಂತನಲ್ಲ ಮೀರ್‌ಚಂದಾನಿ ಎಂದು ತಿಳಿದಾಗ, ಆ ಹುಡುಗ ಮತ್ತೊಂದು ಹುಡುಗಿಯನ್ನು ಆರಿಸಿಕೊಂಡ, ಅದೇ ನೋವಿನಲ್ಲಿ ಉಷಾ ಕಣ್ಣು ಮುಚ್ಚಿದಳು.

ಈ ಸಾವು ಮೀರ್‌ಚಂದಾನಿಗೆ ವರನ ಲೋಭ, ದುರಾಸೆ, ಸ್ವಾರ್ಥ ಇಂಥ ಮುಖಗಳನ್ನು ಅರ್ಥ ಮಾಡಿಸಲಿಲ್ಲ. ಇಂಥ ಹುಡುಗನಿಗೆ ತಾನೆಷ್ಟೇ ಸುರಿದು ಮದುವೆ ಮಾಡಿದ್ದರೂ ಮಗಳು ಸುಖವಾಗಿರುತ್ತಿರಲಿಲ್ಲ, ಎಂದೂ ಆತನ ವಿವೇಕಕ್ಕೆ ಹೊಳೆಯಲಿಲ್ಲ, ತನ್ನ ಮಗಳನ್ನು ಇನ್ನಷ್ಟು ಓದಿಸಿ ಸ್ವತಂತ್ರಳಾಗಿ ಮಾಡಬೇಕಿತ್ತು ಎಂಬ ಯಾವ ನಿಲುವುಗಳನ್ನು ಆತ ತಳೆಯಲಿಲ್ಲ, ಬದಲಾಗಿ ಈ ಘಟನೆ ನೊಂದ ತಂದೆಗೆ ವಿಚಿತ್ರ ತರ್ಕಗಳನ್ನು ಕಲಿಸಿತು. ತನ್ನಲ್ಲಿ ಸಾಕಷ್ಟು ಹಣವಿದ್ದಿದ್ದರೆ ಬಹುಶಃ ತನ್ನ ಮಗಳ ಬದುಕನ್ನು, ಸುಖವನ್ನು ಕೊಂಡುಕೊಳ್ಳಬಹುದಿತ್ತು ಅನಿಸತೊಡಗಿತು.

ಇದೀಗ ಎರಡನೇ ಮಗಳಿಗೆ ವರಗಳು ಬರತೊಡಗಿವೆ. ಮೊದಲ ಮಗಳ ಕತೆಯ ಪುನರಾವರ್ತನೆ ಆತನಿಗೆ ಬೇಕಿಲ್ಲ. ಒಂದು ಮೂತ್ರಪಿಂಡಕ್ಕೆ ಮಾರುಕಟ್ಟೆಯಲ್ಲಿ ೫೦ ರಿಂದ ೬೦ ಸಾವಿರ ರೂ ಬರುವುದೆಂದು ಗೊತ್ತು. ಧಂಡಿಯಾಗಿ ದಕ್ಷಿಣೆ ಕೊಟ್ಟು ಮಗಳ ಮದುವೆ ಮಾಡುವ ಕನಸು' ಹೊತ್ತಿದ್ದಾನೆ.

ಇಲ್ಲಿಯವರೆವಿಗೂ ಮಾವನ ಮನೆಯನ್ನಷ್ಟೇ ತೊಳೆಯುತ್ತಿದ್ದ 'ಅಳಿಯ' ಇದೀಗ ಮಾವನನ್ನೇ ಕಬಳಿಸಿಲಿದ್ದಾನೆ. ಅತ್ಯಂತ ಶೋಚನೀಯವೆಂದರೆ, ಮಗಳು ತಂದೆ ಮೂತ್ರಪಿಂಡ ಮಾರಿಯಾದರೂ ತನ್ನ ಮದುವೆ ಮಾಡಲಿ ಎಂದು ಒಪ್ಪಿದ್ದಾಳೆ. ಅವಳು ಬೆಳೆದು ಬಂದ ವಾತಾವರಣ, ಅವಳಲ್ಲಿ ತುಂಬಿರುವ ಸಂಪ್ರದಾಯದ ತತ್ವಗಳೇ ಹಾಗಿವೆ. 'ಮಾದರಿ ಮಗಳಂತೆ'

ಗಂಡನನ್ನು ಹುಡುಕುವ, ತನ್ನ ಭವಿಷ್ಯವನ್ನು ನಿಲ್ಲಿಸುವ ಜವಾಬ್ದಾರಿ, ಒದ್ದಾಟಗಳನ್ನು ತನ್ನ ತಂದೆಗೆ ಬಿಟ್ಟಿದ್ದಾಳೆ. ತಂದೆಯ ವಯಸ್ಸು, ಆರೋಗ್ಯ ನೋಡಿದರೆ ಈ ಆಪರೇಷನ್ ತುಂಬಾ ಅಪಾಯಕಾರಿ ಮುದಿ ಮೂತ್ರಪಿಂಡಕ್ಕೆ ಬೆಲೆಯೂ ಕಡಿಮೆ. ಹಾಗೆಂದು ಕತೆ ಇಲ್ಲಿಗೆ ಮುಗಿಯುವುದಿಲ್ಲ. ನಿರೀಕ್ಷಿತ ಹಣ ದೊರೆಯದಿದ್ದರೆ, ಮೀರ್‌ಚಂದಾನಿಯ ಎರಡನೇ ಮಗ, ತನ್ನ ಮೂತ್ರಪಿಂಡ ನೀಡಲು ಮುಂದಾಗಿದ್ದಾನೆ.

ಈ ಎಲ್ಲ ವಿಪರೀತಗಳಿಗೆ ಕಾರಣವಾಗಿ ಕಾಣುವುದು 'ವರದಕ್ಷಿಣೆ' ಮೂಲದಲ್ಲಿ ಯಾವ ಕಾರಣಕ್ಕೆ ಯಾವ ರೂಪದಲ್ಲಿ ಹೇಗೆ ಈ ವರದಕ್ಷಿಣೆ ಹುಟ್ಟಿತು, ಈಗ ಅಪ್ರಸ್ತುತ. ಇದೀಗ ಕಾಲದ ಗತಿಯಲ್ಲಿ ಅದು ತಳೆದಿರುವ ಕರಾಳರೂಪ ಮಾತ್ರ ಭಯಂಕರ. ಇಂಥ ವರದಕ್ಷಿಣೆ ಹೆಣ್ಣಿಗೆಗೆ ಆಸರೆಯಾಗಿ, ಭವಿಷ್ಯದ ಭದ್ರತೆಯ ಗಂಟಾಗಿಲ್ಲ. ನೇರ ಗಂಡಿನ ಕೈ ಸೇರುವ ಸ್ವತ್ತಾಗಿದೆ. ದಕ್ಷಿಣೆ ಕೂಡ ಅಪ್ಪನ ಆಸ್ತಿಯ ಅಳತೆಗೆ ತೂಗಿದ್ದಲ್ಲ. ಅದಕ್ಕೆ ಇಂದು ಮನೆ-ಮಠಮಾರಿದ್ದಲ್ಲದೆ ಮೂತ್ರಪಿಂಡಗಳನ್ನೂ ಮಾರಲು ಹೊರಟ್ಟಿದ್ದಾರೆ. ಈ ವರದಕ್ಷಿಣೆ ಪಿಡುಗನ್ನು ಸದೆಬಡಿಯಲು ಕನ್ಯಾಪಿತೃಗಳು ತಮ್ಮ ಮಗಳ ಓದು-ವಿದ್ಯಾಭ್ಯಾಸ-ಕೆಲಸ ಆರ್ಥಿಕ ಸ್ವಾವಲಂಬನೆಗೆ ಗಮನ ಹರಿಸಬೇಕಾಗಿದೆ. ಹಾಗೆಯೇ ಹುಡುಗಿಯರು ಇಂಥಾ ಅಧ್ವಾನದ ಹಣದಾಸೆಯ ವಿವಾಹಕ್ಕಿಂತ ಕೌಮಾರ್ಯವೇ ವಾಸಿ ಎಂದು ಉಳಿಯಬೇಕಿದೆ. ಅದರ ಬದಲು ವರದಕ್ಷಿಣೆಯ ಬ್ರಹ್ಮರಾಕ್ಷಸನಿಗೆ ದೇಹವನ್ನು ಬಿಡಿಬಿಡಿಯಾಗಿ ಕತ್ತರಿಸಿ ಕೊಡುತ್ತಿದ್ದಾರೆ.

ಇದೇ ಹಿನ್ನೆಲೆಯಲ್ಲಿ ಮೊನ್ನೆ ಮೇ ತಿಂಗಳಲ್ಲಿ ದಿಲ್ಲಿಯಲ್ಲಿ ನಡೆದ ಘಟನೆ ನೆನಪಾಗುತ್ತದೆ. ಮತ್ತದೇ ಹೆಣ್ಣಿನ 'ವಿವಾಹ' ಪ್ರಶ್ನೆಯಾಗುತ್ತದೆ. ಆರು ವರ್ಷದ ಬಾಲೆ 'ರೇಖಾ' ಬಡಗಿ ರಾಧೇಶ್ಯಾಮ್ ಮತ್ತು ಆತನ ಹೆಂಡತಿ ಲಕ್ಷ್ಮಿಯ ಮಗಳು. ಸಣ್ಣ ಗಾಯವಾದ ರೇಖಾಳ ಕಾಲು ಅಪ್ಪ-ಅಮ್ಮನ ಅಲಕ್ಷ್ಯದಲ್ಲಿ ಕೀವು ತುಂಬಿ ಗ್ರ್ಯಾಂಗ್ರೀನ್ ಆಗಿ, ಬಲಗಾಲನ್ನು ಕತ್ತರಿಸುಲ್ಲಿಗೆ ಬಂದಿತು. ಒಂಟಿಕಾಲಿನ ಅಂಗವಿಕಲ ಮಗಳನ್ನು ಮುಂದೆ ಯಾರು ವಿವಾಹವಾಗುತ್ತಾರೆ ಎಂಬ ಪ್ರಶ್ನೆಗೆ ಈ ಅಪ್ಪ-ಅಮ್ಮನಲ್ಲಲಿ ಒಂದೇ ಉತ್ತರವಿದ್ದಂತೆ ಕಾಣುತ್ತದೆ. "ಆರು ವರ್ಷದ ಮುದ್ದು ರೇಖಾಳನ್ನು ರಾತ್ರಿ, ಉಣ್ಣೆಶಾಲಿನಲ್ಲಿ ತುರುಕಿ ಸುತ್ತಿ ಜಮುನಾ ನದಿಗೆ ಎಸೆದು ಬಂದರು"[೧]

ಮಾತೃದೇವೋಭವ, ಪಿತೃದೇವೋಭವ ಎಂಬ ನಾಡಿನಲ್ಲಿ ಮೃತ್ಯುದೇವತೆಗಳಾದ ಈ ತಂದೆ ತಾಯಿಯರನ್ನು ಬಯ್ಯೋಣವೆ, ಇಲ್ಲ ಹೆಣ್ಣಿನ ಬದುಕನ್ನು ಮದುವೆಯೊಡನೆ ಇನ್ನಿಲ್ಲದಂತೆ ಬೆಸೆದಿರುವ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ದೂರೋಣವೆ? ಒಂಟಿ ಕಾಲಿನಲ್ಲಿ ಗೆಜ್ಜೆ ಕಟ್ಟಿ ನೃತ್ಯವನ್ನೆ ಮಾಡುತ್ತಿರುವ ಸುಧಾಚಂದ್ರನ್ ಇರುವ ಈ ದೇಶದಲ್ಲಿ ಅಂಗವಿಕಲ ಮಕ್ಕಳಿಗೆ ಭವಿಷ್ಯವಿಲ್ಲೆಂದು

೧.ನೇಮಿಚಂದ್ರ; ಎಲ್ಲ ಮಗಳ ಮದುವೆಗಾಗಿ, ಪುಟ-೧೭೫

ಸಾವಿಗೆ ದೂಡುವಇಂಥಾ ಪ್ರಸಂಗಗಳು ಎಷ್ಟು ವಿಪರ್ಯಾಸ?

ಅಪ್ಪನ ಮೂತ್ರಪಿಂಡವನ್ನು ಮಾರಿಯಾದರೂ ಮದುವೆಯಾಗುವ ಅನಿವಾರ್ಯತೆ ನಮ್ಮ ಹೆಣ್ಣುಗಳಿಗೇಕೆ ಬಂದಿದೆ? ಕಾಲು ಹೋದದ್ದಕ್ಕೆ ಜೀವವನ್ನೇ ಕಳೆವ ಕ್ರೌರ್ಯ ತಂದೆ-ತಾಯಿಗಳಿಗೇಕೆ? ಈ ಎಲ್ಲ ಪ್ರಶ್ನೆಗಳಿಗೂ ಉತ್ತರವಿದೆ, ಪರಿಹಾರವಿದೆ. ಅದು ಹೊಸತಲ್ಲ, ಹೇಳುತ್ತಲೇ ಬಂದಿರುವುದು ಸ್ತ್ರೀಶಿಕ್ಷಣ, ಸ್ತ್ರೀಜಾಗೃತಿ, ಎಲ್ಲಿಯವರೆಗೂ ನಾವು ಮದುವೆಯನ್ನು ಆರ್ಥಿಕ ಅವಲಂಬನೆಗಾಗಿ ನಂಬಿ, ನಮ್ಮೆಲ್ಲ ಭವಿಷ್ಯವನ್ನು ತಾಳಿಗೆ ತೂಗು ಹಾಕಲು ಹೊರಡುತ್ತೇವೋ ಅಲ್ಲಿಯವರೆವಿಗೂ ವಿವಾಹ ಕೊಟ್ಟು – ಕೊಳ್ಳುವ ವ್ಯಾಪಾರವಾಗುವುದೇ ಹೊರತು ಪ್ರೀತಿಯ ಸಾಂಗತ್ಯವಾಗಲಾರದು.

ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ಸಂಶೋಧನೆಯ ವಿಷಯವಾಗಿ ಉಳಿದರೆ ಸಾಲದು, ವಿಚಾರಗಳು ರೂಪುಗೊಳ್ಳುವ ಶಾಲಾದಿನಗಳಲ್ಲಿ, ಹದಿವಯಸ್ಸಿನ ಕಾಲೇಜು ಹಂತದಲ್ಲಿ ಮಹಿಳಾ ವಿಚಾರಗಳು ಪಠ್ಯವಾಗಿ, ಈ ವಿಷಯದ ಬಗ್ಗೆ ಯುವಕ-ಯುವತಿಯರು ಗಮನ ಕೊಡುವಂತಹ ಕಾರ್ಯಕ್ರಮಗಳನ್ನು ಯೋಚಿಸಬೇಕಿದೆ. ಅಪ್ಪನ ಮೂತ್ರಪಿಂಡವನ್ನು ಮಾರಿಯಾದರೂ ಮದುವೆಯಾಗುವ ಅನಿವಾರ್ಯತೆ ನಮ್ಮ ಹೆಣ್ಣುಗಳಿಗೇಕೆ ಬಂದಿದೆ? ಕಾಲು ಹೋದದ್ದಕ್ಕೆ ಜೀವನವನ್ನೇ ಕಳೆವ ಕ್ರೌರ್ಯ ತಂದೆತಾಯಿಗಳಿಗೇಕೆ? ಈ ಎಲ್ಲ ಪ್ರಶ್ನೆಗಳಿಗು ಉತ್ತರವಿದೆ, ಪರಿಹಾರವಿದೆ. ಅದು ಹೊಸತಲ್ಲ, ಹೇಳುತ್ತಲೇ ಬಂದಿರುವುದು ಏನೆಂದರೆ ಸ್ತ್ರೀಯರಿಗೆ ಶಿಕ್ಷಣ, ಸ್ತ್ರೀಜಾಗೃತಿ ಮೂಡಿಸುವುದು, ಸ್ತ್ರೀಯರಲ್ಲಿ ವೈಚಾರಿಕತೆಯನ್ನು ರೂಢಿಸುವುದಿಲ್ಲವೋ ಅಲ್ಲಿಯವರೆಗೂ ವಿವಾಹ ಕೊಟ್ಟು ಕೊಳ್ಳುವ ವ್ಯಾಪಾರವಾಗುವುದೇ ಹೊರತು, ಪ್ರೀತಿಯ ಸಾಂಗತ್ಯವಾಗಲಾರದು ಎನ್ನುವ ನೇಮಿಚಂದ್ರರು ಸಾಮಾಜಿಕ ಬದಲಾವಣೆ ಹಾಗೂ ವೈಚಾರಿಕತೆಯ ಬೆಳವಣಿಗೆಗೆ ಇಂಬು ನೀಡಿದ್ದಾರೆ.

ಬದುಕು ಬದಲಾದಾಗ :

ಬದುಕು ಬದಲಾಗುವುದುಂಟು. ಕೆಲವೊಮ್ಮೆ ಏಕಾಏಕಿ ಬದಲಾವಣೆ ಅನಿವಾರ್ಯವಾದಾಗ ಹೊಂದಿಕೊಳ್ಳುವುದೂ ಅನಿವಾರ್ಯವಾಗುತ್ತದೆ. ಕೆಲವೊಮ್ಮೆ ಬದಲಾದ ಬದುಕಿಗೆ ಹೊಂದಿಕೊಳ್ಳಲಾರದೆ ಚಡಪಡಿಸುತ್ತೇವೆ ಮತ್ತೆ ಮತ್ತೆ ಹಳೆಯದನ್ನು ನೆನಪಿಸಿಕೊಂಡು ಪರಿತಪಿಸುತ್ತೇವೆ. ಭೂತಕ್ಕೆ ಹಿಂದಿರುಗಲಾರದೆ ಖಿನ್ನತೆಗೆ ಬಲಿಯಾಗುತ್ತೇವೆ.

ರಾಧಳಿಗೆ ಹತ್ತನೇ ತರಗತಿಯ ಪರೀಕ್ಷೆ ಮುಗಿಯುತ್ತಾ ಬಂದಿದೆ. ಎಲ್.ಕೆ.ಜಿ.ಯಿಂದ ಓದಿದ ಶಾಲೆಯನ್ನು ಬಹುಶಃ ಬಿಡಬೇಕಾಗಬಹುದು. ಪರಿಚಿತ ಪರಿಸರವನ್ನು, ಸಹಪಾಠಿಗಳನ್ನು, ಸ್ನೇಹಿತರನ್ನು ಅಗಲಬೇಕಾಗಬಹುದು, ಬದಲಾವಣೆಯ ಬಗ್ಗೆ ಒಂದಿಷ್ಟು ಗಲಿಬಲಿಗೊಂಡಂತಿದ್ದ ರಾಧಳಿಗೆ ಡಾ.ಸ್ಪೆನ್ಸರ್ ಜಾನ್ಸನ್ ಅವರ ಪುಟ್ಟ ಪುಸ್ತಕ 'ಹೂ ಮೂವ್ಡ್ ಮೈ ಚೀಸ್' ಸಿಕ್ಕಿತು.

ಮ್ಯಾನೇಜ್‌ಮೆಂಟ್ ವೃತ್ತಗಳಲ್ಲಿ ಬಲು ಪ್ರಸಿದ್ಧವಾದ ಪುಸ್ತಕ ಇದು. ಈ ಪುಟ್ಟ ಪುಸ್ತಕದಲ್ಲೊಂದು ಆಕರ್ಷಕ ಕತೆ ಇದೆ.

ಇದು 'ಮೇಸ್'ನಲ್ಲಿ ವಾಸಿಸುತ್ತಿರುವ ಎರಡು ಇಲಿಗಳ ಕತೆ, ಒಂದರ ಹೆಸರು 'ಸ್ನಿಫ್', ಇನ್ನೊಂದರ ಹೆಸರು 'ಸ್ಕರಿ'. ಇದೇ ಮೇಸ್‌ನಲ್ಲಿ ಇಬ್ಬರು 'ಹಫ್' ಮತ್ತು 'ಹಾ' ಎಂಬ ಇಲಿಗಳಷ್ಟೇ ಅಳತೆಯ ಲಿಲ್ಲಿಪುಟ್ಟ ಮನುಷ್ಯರಿದ್ದಾರೆ. ಪ್ರತಿದಿನ ಬೆಳಗ್ಗೆ ಇಲಿಗಳು ಮತ್ತು ಲಿಲ್ಲಿಪುಟ್ಟರು 'ಜಾಗಿಂಗ್' ಉಡುಪು ಧರಿಸಿ, ಓಡುವ ಬೂಟುಗಳನ್ನು ಏರಿಸಿ, ಮೇಸ್‌ನಲ್ಲಿ ತಮಗೆ ಬಲು ಇಷ್ಟವಾದ ಚೀಸ್ ಹುಡುಕಿ ಓಡುತ್ತಿದ್ದರು. ಹುಡುಕಾಟದ ಕೊನೆಗೆ ಇಲಿಗಳಿಗೂ ಲಿಲ್ಲಿಪುಟ್ಟರಿಗೂ ಮೇಸ್‌ನ ಒಂದು ಮೂಲೆಯಲ್ಲಿದ್ದ 'ಚೀಸ್ ಸ್ಟೇಷನ್' 'ಸಿ' ನಲ್ಲಿ ಅವರು ಬಯಸಿದ್ದ ಚೀಸ್ ದೊರೆಯಿತು. ದಿನವೂ ಇಲಿಗಳು, ಲಿಲ್ಲಿಪುಟ್ಟರು ಚೀಸ್ ಸ್ಟೇಷನ್‌ಗೆ ಓಡಿ ತಮಗೆ ಇಷ್ಟವಾದ ಚೀಸ್ ಅನ್ನು ಮನಸೋ ಇಚ್ಛೆ ಮೆದ್ದು ಬರುವುದು ದಿನಚರಿಯಾಯಿತು. ಪ್ರತಿದಿನ ಇಲಿಗಳು ಬೆಳಗ್ಗೆ ಬೇಗ ಎದ್ದು ಓಡುವವು. ಚೀಸ್ ಸ್ಟೇಷನ್ ತಲುಪಿದಾಗ ಸುಧಾರಿಸಿಕೊಂಡು ಬೂಟು ಬಿಚ್ಚಿದರೂ ಅಗತ್ಯ ಬಿದ್ದರೆ ತಟ್ಟನೆ ಏರಿಸಿ ಓಡಲು ಅನುಕೂಲಕರವಾಗಿ, ಬೂಟುಗಳನ್ನು ತಮ್ಮ ಕುತ್ತಿಗೆಯ ಸುತ್ತ ಜೋತು ಹಾಕಿಕೊಂಡು ಚೀಸ್ ತಿನ್ನತೊಡಗಿದವು. ಚೀಸ್ ಅಲ್ಲಿ ಇದ್ದೇ ಇದೆ ಎಂಬ ಭರವಸೆಯಲ್ಲಿ ಲಿಲ್ಲಿಪುಟ್ಟರು ದಿನದಿಂದ ದಿನಕ್ಕೆ ನಿಧಾನವಾಗಿ ಎದ್ದು, ಉಡುಪು ಏರಿಸಿಕೊಂಡು ಬರತೊಡಗಿದರು. 'ಎಂದೆಂದಿಗೂ ಆಗುವಷ್ಟು ಚೀಸ್ ಇಲ್ಲಿದೆ' ಎಂದುಕೊಂಡು ಲಿಲ್ಲಿಪುಟ್ಟರು ಬಲು ಖುಷಿಯಾಗಿದ್ದರು. ಒಂದು ರೀತಿಯ ಭದ್ರತೆಯ ಅನುಭವ ಅವರಿಗೆ, ಇದೀಗ ಲಿಲ್ಲಿಪುಟ್ಟರು ತಮ್ಮ ಮನೆಯನ್ನು ಚೀಸ್ ಸ್ಟೇಷನ್ ಹತ್ತಿರಕ್ಕೆ ಸಾಗಿಸಿದರು. ಓಡುವ ಬೂಟಿನ ಅಗತ್ಯವಾದರೂ ಏನು? ಎಂದು ಅವುಗಳನ್ನು ಒಗೆದರು. ಚೀಸ್ ಸ್ಟೇಷನ್ ಸುತ್ತಲೆ ತಮ್ಮ ಬದುಕನ್ನು ಸುತ್ತಿಟ್ಟರು. ತಮ್ಮ ಸುಭದ್ರತೆಯ ಗುಂಗಿನಲ್ಲಿ ಎಷ್ಟು ಮುಳುಗಿದ್ದರೆಂದರೆ ಚೀಸ್ ಸ್ಟೇಷನ್ 'ಸಿ'ನಲ್ಲಿ ಆಗುತ್ತಿರುವ ಸಣ್ಣಪುಟ್ಟ ಬದಲಾವಣೆಗಳು ಅವರ ಕಣ್ಣಿಗೆ ಬಿದ್ದಿರಲೇ ಇಲ್ಲ.

ಒಂದು ದಿನ ಇಲಿಗಳು ಚೀಸ್ ಸ್ಟೇಷನ್ 'ಸಿ'ಗೆ ಬಂದಾಗ ನೋಡುತ್ತವೆ. ಅಲ್ಲಿ ಚೀಸೆ ಇಲ್ಲ! ಇಲಿಗಳಿಗೆ ಅಚ್ಚರಿಯಾಗಲಿಲ್ಲ, ಚೀಸ್ ಕಡಿಮೆಯಾಗುತ್ತಿರುವುದನ್ನು ಅವು ಗಮನಿಸಿದ್ದವು. ಸರಿ ಇಲಿಗಳು ತತ್‌ಕ್ಷಣ ಬೂಟು ಏರಿಸಿದವು. ಮೇಸ್‌ನಲ್ಲಿ ಮತ್ತೆಲ್ಲಾದರೂ ಚೀಸ್ ಇದೆಯೇ ಎಂದು ಹುಡುಕಲು ಓಡಿದವು. ಆದರೆ ಲಿಲ್ಲಿಪುಟ್ಟ ಮನುಷ್ಯರು ಚೀಸ್ ಸ್ಟೇಷನ್‌ಗೆ ಬಂದಾಗ ಅಲ್ಲಿ ಚೀಸ್ ಇಲ್ಲದೇ ಇರುವುದನ್ನು ಕಂಡು ಆಘಾತಗೊಂಡರು. 'ಅರೆ ಚೀಸ್ ಎಲ್ಲಿ?' ಎಲ್ಲಿ ಹೋಯಿತು ಚೀಸ್? ಯಾರು ನನ್ನ ಚೀಸ್ ಎತ್ತಿಟ್ಟಿರುವುದು?' ಕೂಗಾಡಿದರು. ಛೀ, ಇದು ನ್ಯಾಯವಲ್ಲ, ಹಲುಬಿದರು. ಚೀಸ್ ಮಾಯವಾಗಿದೆ ನಂಬಲಾರದಾದರು. 'ನಾಳೆಯೂ ಚೀಸ್ ಇರದಿದ್ದರೆ? ಆತಂಕ ಪಟ್ಟರು.

ಮರುದಿನ ಅದೇ ಸ್ಟೇಷನ್ 'ಸಿ'ಗೆ ಹಿಂದಿರುಗಿದರು. ಬಹುಶಃ ತಮ್ಮ ಚೀಸ್ ಹೇಗಾದರೂ ಅಲ್ಲಿ ಮತ್ತೆ ಪ್ರತ್ಯಕ್ಷವಾಗಿರುತ್ತದೆ ಎಂಬ ನಿರೀಕ್ಷೆ. ಆದರೆ ಚೀಸ್ ಅಲ್ಲಿರಲಿಲ್ಲ ಅವರಿಗೇನು ಮಾಡಬೇಕು ಎಂದು ತಿಳಿಯಲಿಲ್ಲ. ಇಲ್ಲೇನಾಗುತ್ತಿದೆ? ಯಾರು ನಮ್ಮ ಚೀಸ್ ಬಚ್ಚಿಟ್ಟಿರುವುದು? ಕುಣಿದಾಡಿದರು.

ಇತ್ತ ಹಫ್ ಮತ್ತು ಹಾ ಲಿಲ್ಲಿಪುಟ್ಟ ಮನುಷ್ಯರು ಚೀಸ್ ಸ್ಟೇಷನ್ 'ಸಿ'ಗೆ ಮತ್ತೆ ಮತ್ತೆ ಹಿಂದಿರುಗಿ ಹಲುಬುತ್ತಿರುವಾಗ ಅತ್ತ ಸ್ನಿಫ್ ಮತ್ತು ಸ್ಕರ್ರಿ ಇಲಿಗಳು ಅದಾಗಲೇ ಮೇಸ್‌ನಲ್ಲಿ ಸಾಕಷ್ಟು ಮುಂದೆ ಓಡಿದ್ದವು. ಒಂದಷ್ಟು ಹೊತ್ತಿನವರೆಗೂ ಅವರಿಗೆ ಚೀಸ್ ಕಾಣಿಸಲಿಲ್ಲ. ಆದರೆ ಚೀಸ್ ಸ್ಟೇಷನ್ 'ಎನ್'ಗೆ ಬಂದಾಗ ಅಲ್ಲಿ ಹೊಚ್ಚ ಹೊಸದಾದ ಅತ್ಯಂತ ರುಚಿಕರವಾದ ಚೀಸ್‌ನ ಭಾರೀ ಸಂಗ್ರಹವಿತ್ತು. ಇತ್ತ ಲಿಲ್ಲಿಪುಟ್ಟರಿಬ್ಬರೂ ಮತ್ತೆ ಮತ್ತೆ ಚೀಸ್ ಸ್ಟೇಷನ್ 'ಸಿ'ಗೆ ಹೋಗಿ ನಿರಾಶರಾದ ಮೇಲೆ, ಒಂದು ದಿನ ತಮ್ಮ ಹತಾಶೆಯನ್ನು ಮೀರಿ ಹಲುಬುವುದನ್ನು ನಿಲ್ಲಿಸಿ, ಕಡೆಗೂ ಧೈರ್ಯ ತಂದುಕೊಂಡು ಮೇಸ್‌ನಲ್ಲಿ ತಾವು ಹಿಂದೆಂದೂ ಕಾಲಿರಿಸಿಲ್ಲದ ಗಲ್ಲಿಗಳಲ್ಲಿ ಹುಡುಕಿ ಹೊರಟರು. ಮೇಸ್‌ನ ಗೊತ್ತಿಲ್ಲದ ಮೂಲೆಗಳನ್ನು ತಡಕುವಾಗ ಆತಂಕಪಟ್ಟರೂ ಧೈರ್ಯ ತಂದುಕೊಂಡು ಮುಂದಕ್ಕೆ ಹೆಜ್ಜೆ ಹಾಕಿ, ಕಡೆಗೆ ಅವರೂ ಚೀಸ್ ಸ್ಟೇಷನ್ 'ಎನ್'ಗೆ ಬಂದು ತಲುಪಿದರು.

"ಇದ್ದಕ್ಕಿದ್ದಂತೆ ಬದುಕು ಬದಲಾಗಬಹುದು, ಮನೆ ಬದಲಾಯಿಸುವುದು, ಭಡ್ತಿ ಬಂದ ಮೇಲೆರುವುದು, ಪ್ರಿಯರ ಸಾವು, ಪುಟ್ಟ ಕಂದನ ಆಗಮನ ಎಲ್ಲವೂ ಬದಲಾವಣೆಗಳು. ಬದುಕಿನಲ್ಲಿ ಪ್ರಿಯವೋ ಅಪ್ರಿಯವೋ ಆದಂತಹ ಬದಲಾವಣೆಗಳು ಬರುತ್ತಲೇ ಇರುತ್ತವೆ."[೧] ಆದರೆ ಯಾವುದೇ ಬದಲಾವಣೆಗೂ ನಾವು ಒಂದಿಷ್ಟು ಬೆದರುತ್ತೇವೆ. ಇದ್ದದ್ದು ಹೇಗಿದ್ದರೂ ಆರಾಮದ್ದಾಗಿ ಕಾಣುತ್ತದೆ. ಗೊತ್ತಿರುವುದು ನಿರಾತಂಕವಾಗಿ ಕಾಣುತ್ತದೆ. ಗೊತ್ತಿಲ್ಲದ್ದು ಭಯ ಹುಟ್ಟಿಸುತ್ತದೆ. ಬದಲಾವಣೆ ಅಗತ್ಯವು ಅನಿವಾರ್ಯವೂ ಆದಾಗ, ಭೂತಕ್ಕೆ ಹಿಂದಿರುಗಲು ಮಾರ್ಗವಿಲ್ಲದಿದ್ದಾಗ ಮುನ್ನಡೆದು ಬದುಕಿಗೆ ಹೊಂದಿಕೊಳ್ಳುವುದೂ ಅನಿವಾರ್ಯ.

ಪುಸ್ತಕ ಓದಿ ರಾಧ ಗೆಲುವಾದಳು. ಆದರೆ ಕತೆ ಓದುತ್ತಾ ಈ ಪುಸ್ತಕ ಬದಲಾವಣೆಯನ್ನು ಒಂದಿಷ್ಟು ಹೆಚ್ಚೇ ವೈಭವೀಕರಿಸಿದೆ ಎಂಬ ಅನುಮಾನ. ವರ್ಷಕ್ಕೊಮ್ಮೆ ಕೆಲಸ ಬದಲಿಸುವ, ಮನೆ ಬದಲಿಸುತ್ತಲೇ ಇರುವ, ಅನೇಕರು ಬಾಳಸಂಗಾತಿಯನ್ನೂ ಬದಲಿಸುವ, ಸ್ಥಿರವಾಗಿ ನೆಲಕ್ಕೆ ಬೇರಿಳಿಸುವ ಮೊದಲೇ ಬಿಡಾರ ಎತ್ತಿ ನಡೆವ, ಪಾಶ್ಚಾತ್ಯ ಜೀವನಶೈಲಿಯ ಬದಲಾವಣೆ ಅನಗತ್ಯ ಎನಿಸಿತ್ತು. ಅಗತ್ಯವಿಲ್ಲದಿದ್ದರೂ ಬದಲಾವಣೆಯನ್ನು ಹೇರಿಕೊಳ್ಳಬೇಕಿಲ್ಲ. ಹಣ, ಗೆಲುವು, ಯಶಸ್ಸು ಮುಖ್ಯವಾಗುತ್ತಾ ಬದಲಾಗಲೇಬೇಕೆಂಬ ಒತ್ತಡಕ್ಕೆ ಸಿಲುಕ ಬೇಕಿಲ್ಲ ಅನಿಸಿತ್ತು.

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೮೯

ಆರು ಆರು ತಿಂಗಳಿಗೂ ಕೆಲಸ ಬದಲಿಸುವ ಸ್ನೇಹಿತರು ನೆನಪಾದರು. ಗಂಡನ ಹಿಂದೆ ಬಿಡಾರ ಹೊತ್ತು, ಮಕ್ಕಳಶಾಳೆ ಬದಲಾಯಿಸಿ ರೋಸಿ ಹೋದ ಹೆಂಡತಿ, ಕಡೆಗೆ ತಾನೊಂದು ಸಣ್ಣ ಕೆಲಸ ಹಿಡಿದು ಒಂದು ಕಡೆ ಗೂಟ ಬಡಿದು 'ನಿಮಗೆ ಎತ್ತ ಬೇಕು ಹೋಗಿ ಬನ್ನಿ' ಎಂದು ಕುಳಿತಳು. ಹಾಗಂತ ಬದಲಾವಣೆ ಬೇಕೇ ಬೇಕೆಂದಲ್ಲ. ಆದರೆ ಬದಲಾವಣೆ ಅನಿವಾರ್ಯವಾದಾಗ ಹೊಂದಿಕೊಳ್ಳುವ ಅಗತ್ಯವಿದೆ. ಬರುವ ವರ್ಷಗಳಲ್ಲಿ ಬದಲಾಗುವ ಹೊಸ ಬದುಕಿಗೆ ರಾಧ ಹೊಂದಿಕೊಳ್ಳುತ್ತಾಳೆಂಬ ಭರವಸೆ.

ಇದ್ದಕ್ಕಿದ್ದಂತೆ ಬದುಕು ಬದಲಾಗಬಹುದು. ಎಲ್ಲ ಬದಲಾವಣೆಗಳು ಪ್ರಿಯವೋ, ಅಪ್ರಿಯವೋ ಬರುತ್ತಲೇ ಇರುತ್ತವೆ. ಆ ಬದಲಾವಣೆಗಳಿಗೆ ನಾವು ಹೆದರದೆ, ಬೆದರದೆ ವೈಚಾರಿಕ ಮನೋಭಾವನೆಯನ್ನು ರೂಢಿಸಿಕೊಂಡು ಬದುಕಿಗೆ ಹೊಂದುಕೊಳ್ಳುವುದು ಅನಿವಾರ್ಯ ಎಂಬ ಅಂಶವನ್ನು ನೇಮಿಚಂದ್ರರು ಈ ಪ್ರಬಂಧ ಲೇಖನದಲ್ಲಿ ತಿಳಿಸಿದ್ದಾರೆ.

ಸಿಟಿ ಬಸ್ಸಿನಲ್ಲಿ ಯೋಗಾಸನ :

ನಾವು ಹತ್ತಾರು ವರ್ಷಗಳಿಂದ ಸಿಟಿ ಬಸ್ಸುಗಳಲ್ಲಿ ಪ್ರಯಾಣ ಮಾಡುತ್ತಾ ಎಲ್ಲರ ಹಾಗೆ ನಗುನಗುತ್ತಾ ಬದುಕಿದ್ದೇವೆ ಎಂದ ಬಳಿಕ ಸಿಟಿ ಬಸ್‌ಗಳ ಹಿರಿಮೆಯನ್ನು ಕೊಂಡಾಡಲು ನಮಗಿಂತ ಅರ್ಹರು ಯಾರಿರಲು ಸಾಧ್ಯ? ಇಷ್ಟು ದಿನವು ಸಿಟಿ ಬಸ್ಸುಗಳಲ್ಲಿ ಪ್ರಾಣವನ್ನು ಕೈಯಲ್ಲಿ ಹಿಡಿದುಕೊಂಡು ಜೋತಾಡುತ್ತಾ ಕೈಯಲ್ಲಿ ಏನೂ ಹಿಡಿದುಕೊಳ್ಳುವುದು ಸಾಧ್ಯವಿಲ್ಲದ ದಿನ ಪ್ರಾಣವನ್ನು ವ್ಯಾನಿಟಿ ಬ್ಯಾಗಿನಲ್ಲಿ ತುರುಕಿಕೊಂಡು ಪ್ರಯಾಣ ಮಾಡಿದ್ದಿದೆ.

ಹೀಗೆ ನಮ್ಮನ್ನು ನಿತ್ಯ ಅಳಿಸುವ, ನಗಿಸುವ, ಹೊತ್ತೊಯ್ಯುವ, ಕುಕ್ಕಿ ಬಿಸಾಡುವ, ಕಿವಿ ತೂತು ಮಾಡುವ ಸಿಟಿ ಬಸ್ಸ್‌ಗಳು ನಮ್ಮ ಜೀವನದ ಅವಿಭಾಜ್ಯ ಅಂಗಗಳೇ ಆಗಿ ಹೋಗಿವೆ. ಒಂದು ದಿನ ರಜೆಯಿದ್ದು ಸಿಟಿ ಬಸ್ಸಿನ ಸ್ಪರ್ಶ ದೇಹಕ್ಕೆ ಆಗದಿದ್ದರೆ ಅವತ್ತಿಡೀ ಒಂದು ಬಗೆಯ ಅಸ್ವಸ್ಥತೆ ನಮ್ಮನ್ನು ಕಾಡುತ್ತದೆ. ಏನೋ ಕಳೆದುಕೊಂಡವರಂತೆ ಜೋರಾಗಿ ಚಲಿಸುವ ದಿನಚರಿ ನಿಂತು ಸ್ತಬ್ಧವಾಗಿ ಹೋದಂತೆ ಭಾಸವಾಗಿ ಚಡಪಡಿಸುತ್ತೇವೆ. ಬಸ್ಸು ಚಲಿಸುತ್ತಿರುವಂತೆಯೇ ತಮ್ಮ ವಿವಿಧ ಬಗೆಯ ಸಿಟಿ, ಬ್ರೇಕು, ಹಾರ್ನ್, ಜಂಪು, ಹಂಪುಗಳಿಗೆ "ನಮ್ಮ ದೇಹವನ್ನು ಒಡ್ಡಿ ಅನೇಕ ಬಗೆಯ ವ್ಯಾಯಾಮಗಳನ್ನು ಮಾಡಿಸುವ ಸಿಟಿ ಬಸ್ಸ್‌ಗಳನ್ನು ಚಲಿಸುವ ವ್ಯಾಯಾಮಾ ಶಾಲೆ ಎಂದು ಕರೆದರೆ ಚೆಂದ"[೧]

೧.ಭುವನೇಶ್ವರಿ ಹೆಗಡೆ; ಸಿಟಿಬಸ್ಸಿನಲ್ಲಿ ಯೋಗಾಸನ, ಪುಟ-೧೫೨

'ದೇಹಕ್ಕೆ ವ್ಯಾಯಾಮ ಮನಸ್ಸಿಗೆ ಆರಾಮ' ಈ ತತ್ವ ಇಂದಿನ ಯಾಂತ್ರಿಕೃತ ಜಗತ್ತಿಗೆ ಹೆಚ್ಚು ಜನಪ್ರಿಯವಾಗುತ್ತಿರುವ ಸ್ಲೋಗನ್ ಕೇವಲ ಟಿಕೆಟ್ ಹಣದಲ್ಲಿಯೇ ವಿವಿಧ ಭಂಗಿಯ ಯೋಗಾಸನಗಳನ್ನು - ವ್ಯಾಯಾಮವನ್ನು ಕಲಿಸುವ ನಮ್ಮ ಸಿಟಿ ಬಸ್ಸುಗಳ ಮಹಿಮೆಯನ್ನು ಕೊಂಡಾಡಿದಷ್ಟು ಕಡಿಮೆಯೇ? ಸಿಟಿ ಬಸ್ಸುಗಳು ನಮಗೆ ಕಲಿಸುವ ಆಸನಗಳು ಈ ರೀತಿ ಗುರುತಿಸಬಹುದು. ಶೇಕಾಸನ ಅಥವಾ ಶಾಕಾಸನ ಕಾಲು ನೋವಿನಿಂದ ಬಳಲುವ ಅನೇಕ ವ್ಯಕ್ತಿಗಳು ದೇಹವನ್ನು ವಿವಿಧ ಮಗ್ಗಲುಗಳಿಂದ ಶೇಕ್ ಮಾಡಿಸಿ ತಿರುಚಿ ಶೇಕ್ ಆಸನ ಹಾಕಿಸಿ ದೇಹದಲ್ಲಿ ಅಡಗಿ ಕುಳಿತ ನೋವನ್ನು ಒದ್ದೋಡಿಸಿಬಹುದು. ಇನ್ನೊಂದು ಆಸನವೆಂದರೇ ಏಕಪಾದಾಸನ. ಇನ್ನೇನು ಆಫೀಸು ಪ್ರಾರಂಭವಾಗುವ ಪೀಕ್ ಅವರ್ಸ್‌ನಲ್ಲಿ ಬಸ್ಸೇರಿದರೆ ಗಿಜಿಗುಡುವ ಬಸ್ಸಿನಲ್ಲಿ ಎರಡು ಕಾಲು ಊರಿ ನಿಂತು ಪ್ರಯಾಣಿಸುವುದು ಸಾಧ್ಯವಿಲ್ಲ. ಬದಲು ಒಂದೇ ಕಾಲನ್ನು ಊರಲು ಸ್ಥಳ ಸಿಕ್ಕಿದೆ ಅದೇ ಏಕಪಾದಾಸನ ಎಂದು ಕರೆಯಬಹುದು.

ಖಾಸಗಿ ಸಿಟಿಬಸ್ಸುಗಳಲ್ಲಿ ಎರಡು ಮೂರು ಜನ ಬಾಯಲ್ಲಿ ಸೀಟಿ ಹಾಕುವವರನ್ನು ನೇಮಿಸಿಕೊಂಡಿರುತ್ತಾರೆ. ಒಬ್ಬನ ಕೆಲಸ ಮುಂದೋಗಿ ಎಂದೂ, ಮುಂಬಾಗಿಲಲ್ಲಿ ನಿಂತವ ಹಿಂದಕ್ಕೊಗಿ ಎಂದು ಬೊಬ್ಬೆ ಹಾಕುತ್ತಿರುತ್ತಾರೆ. ನಡುವೆ ಓಡಾಡುತ್ತ ಟಿಕೆಟ್ ಕೊಡುವವನ ಬಾಯಲ್ಲೂ ಒಂದು ಸೀಟಿ ಇದ್ದು ಅದನ್ನಾತ ಮೊಳಗಿಸುತ್ತಲೇ ರೈಟ್, ಪೋಯೀ ಎಂದು ಕಿರುಚುತ್ತಾನೆ. ಹಿಂದೆ ಅದೇ ರೂಟಿನ ಇನ್ನೊಂದು ಬಸ್ಸು ಬರುತ್ತಿರುವ ಸುಳಿವು ಸಿಕ್ಕರಂತೂ ಈ ಬೊಬ್ಬೆ ಕರ್ಕಶವಾಗುತ್ತದೆ. ನಂತರ ಸೋಪಾನ ನೇತಾಡಾಸನ ಮೆಟ್ಟಿಲ ಮೇಲೆ ಒಂದು ಕಾಲ್ಲೂರಿದ ಕೆಲವರು ಒಂದು ಬೆರಳಿಟ್ಟು ಮೇಲಿನ ಸರಳೋ ಬಾಗಿಲಿನ ಚೂರು ಹಿಡಿದುಕೊಂಡು ದೇಹ ಪೂರ್ತಿ ಬಸ್ಸಿನ ಹೊರಭಾಗದಲ್ಲೇ ಇರುತ್ತದೆ. ಬಸ್ಸು ಗಕ್ಕನೆ ಬ್ರೇಕ್ ಹಾಕಿದಾಗ ಈ ಮಾನವ ಗೋಪುರ ಧರಾಶಯ್ಯಿಯಾಗುವುದು ಉಂಟು. 'ಕರಪಾದ ಕುಟ್ಟಾಸನ' ನಿಮ್ಮ ಹಿಂದೆ ನಿಂತಾತ ಆಗಾಗ ತನ್ನ ಮಣಭಾರದ ಬೂಟಿನಿಂದ ನಿಮ್ಮ ಕಾಲನ್ನು ಕುಟ್ಟಿ ಅಪ್ಪಚ್ಚಿ ಮಾಡುತ್ತಿದ್ದರೆ ನೀವು ಅರಚಬಾರದು ಅದು ಅನಾಗರಿಕ ನಡವಳಿಕೆಯಾಗುತ್ತದೆ. ಬದಲು ಎಕ್ಸ್‌ಕ್ಯೂಸ್‌ಮಿ ನಿಮ್ಮ ಬೂಟಿನಡಿ ನನ್ನ ಕಾಲು ಚಟ್ನಿಯಾಗಿದೆ ಎನ್ನುತ, ಆತ ಕಾಲೆತ್ತಿದ್ದರೆ ನಮ್ಮ ಪುಣ್ಯ ಆದರೆ ಆತನ ವ್ಯಾಯಾಮವನ್ನು ತಡೆಯುವ ಹಕ್ಕು ನಿಮ್ಮದ್ದಲ್ಲ.

'ಪರಬಾಹುನಿದ್ರಾಸನ' ಸುಖ ಜೀವಿಗಳು ಎಲ್ಲೆಂದರಲ್ಲಿ ನಿದ್ರಿಸಿಬಿಡುತ್ತಾರೆ. ಮುಂದಿನ ಸೀಟಿನಲ್ಲಿ ಕೂತ ಗಜಗಾತ್ರದ ವ್ಯಕ್ತಿಯೊಂದು ಪಕ್ಕದ ಸಣಕಲ ವ್ಯಕ್ತಿಯ ಭುಜದ ಮೇಲೆ ತಲೆಯಿಟ್ಟು ನಿದ್ರಿಸಿದ್ದಾನೆ ಅಥವಾ ಪರಬಾಹು ನಿದ್ರಾಸನ ಸ್ಥಿತಿಯಲ್ಲಿದ್ದಾನೆ. ಪಾಪ ಆ ಸಣಕಲು ಜೀವಿ ಸಂಕಟದಿಂದ ಒದ್ದಾಡುತ್ತಿದೆ. "ಕೆಲವು ಬಾರಿ ಪಕ್ಕ ಕುಳಿತಾಕೆ ಯುವತಿಯಾಗಿದ್ದರೆ ಈ ವ್ಯಾಯಾಮ?

ಭಂಗಗೊಳಿಸುವ ಹಕ್ಕು ಆ ಯುವತಿಗಿರುತ್ತದೆ"[1] 'ಛಿದ್ರವೇಣಿ ಪ್ರಲಾಪಾಸನ' ಉದ್ದ ಜಡೆಯಿರುವ ಲಲನೆಯರು ಮಾತ್ರ ಮಾಡಬಹುದಾದ ಆಸನ ಇದು. ನಿಮ್ಮ ಜಡೆ ಯಾರೊದೋ ವ್ಯಾನಿಟಿ ಬ್ಯಾಗಿನಲ್ಲಿ ಸಿಲುಕಿಕೊಂಡಿದೆ. ರಷ್‌ನಲ್ಲಿ ಎಳೆದು ಬಿಡಿಸಿಕೊಳ್ಳಲಾಗುತ್ತಿಲ್ಲ. ಆಗ ಜೋರಾಗಿ ಎಳೆದರೆ ಒಂದು ಜೊಂಪೆ ಕಿತ್ತು ಬಂದು ಆಗ ಛಿದ್ರವೇಣಿ ಆಗುತ್ತದೆ.

'ಅಧೋವದಸಾನ' ಬಸ್ಸಿನ ರಷ್‌ನಲ್ಲಿ ಎತ್ತರ ದೇಹಿಗಳ ಕೆಳಗಡೆ ಸಿಕ್ಕಿಹಾಕಿಕೊಂಡು ತಲೆ ಎತ್ತಲು ಆಗದಂತೆ ನಿಂತಿರುವವರು ಹಾಕುವ ಆಸನ ಇದು. ಇನ್ನು ಚಿಕ್ಕ ಮಕ್ಕಳು ಹಾಕುವ ಮರ್ಕಟಾಸನ, ಕುಕ್ಕಟಾಸನಗಳು ನೋಡಲು ಚೆಂದ. ಸ್ಕೂಲು ಬ್ಯಾಗ್, ಟಿಫನ್ ಬಾಕ್ಸ್ ಹೊತ್ತ ಮಕ್ಕಳಿಗೆ ಗಾರ್ಧಭಾಸನ, ಅರ್ಧಮಕರಾಸನ, ಆದರೆ ಈ ಎಲ್ಲಾ ಯೋಗಾಸನಗಳನ್ನು ನೀವು ಮೈಮರೆತು ವೀಕ್ಷಿಸುತ್ತಾ ನಿಂತು ಬಿಟ್ಟರೆ ನಿಮ್ಮ ಸ್ಟಾಪು ಮರೆತು ಮುಂದೆ ಹೋಗಿಬಿಟ್ಟೀರಿ. ಚಲಿಸುವ ವ್ಯಾಯಾಮ ಶಾಲೆಯಾದ ಬಸ್ಸಿನಲ್ಲಿ ದೈವಿಕ ಆಸನಗಳ ಪರಿಚಯವಾದ ಮೇಲೆ ಮಾನಸಿಕವಾಗಿ ಉಚಿತ ಸಂತೋಷವನ್ನು ಪಡೆಯಬಹುದು. ಇಂತಹ ಸಿಟಿಬಸ್ಸುಗಳಲ್ಲಿ ಒಂದು ತಿಂಗಳು ಓಡಾಡಿದರೆ ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳುವುದರ ಜೊತೆಗೆ ದೈಹಿಕವಾಗಿ ಹಾಗೂ ಸದೃಢತೆ ಹೊಂದಬಲ್ಲವರು ಎಂಬುದು ನೇಮಿಚಂದ್ರರ ಅಭಿಪ್ರಯವಾಗಿದೆ.

ಮಹಿಳೆ ಮತ್ತು ವಿಜ್ಞಾನ:

ಕಳೆದೆರಡು ದಶಕಗಳಲ್ಲಿ ಸ್ತ್ರೀವಾದಿಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ಪುರುಷರ ಏಕಸ್ವಾಮ್ಯತೆಯೇ ಅವರ ಶಕ್ತಿಯ ಮೂಲಕಾರಣವಾಗಿದೆ ಎಂದು ಗುರುತಿಸಿದ್ದಾರೆ. ವಿಜ್ಞಾನ- ತಂತ್ರಜ್ಞಾನದ ಸಮಾಜದ ಮೇಲಾದ ಪ್ರಭಾವವನ್ನು ಕುರಿತು ಸಮಾಜಶಾಸ್ತ್ರಜ್ಞರು ಬಹುಕಾಲದಿಂದ ಅಧ್ಯಯನ ನಡೆಸುತ್ತಿದ್ದಾರೆ. ಆದರೆ ಅವರ ಗಮನ ಲಿಂಗಾಧಾರಿತವಾದ ವಿಜ್ಞಾನದತ್ತ ಹೊರಳಿರಲಿಲ್ಲ. ಇತ್ತೀಚಿನ ವರ್ಷಗಳಲ್ಲಿ ಸ್ತ್ರೀವಾದಿಗಳು ವಿಜ್ಞಾನ, ತಂತ್ರಜ್ಞಾನ, ಸ್ತ್ರೀಪುರುಷರ ಬದುಕಿನ ಮೇಲೆ ಬೇರೆ ಬೇರೆಯೇ ಆದ ಪ್ರಭಾವ ಬೀರುತ್ತವೆ. ಬೇರೆ ಬೇರೆಯೇ ಬದಲಾವಣೆಯನ್ನು ತರುತ್ತವೆ ಎಂದು ಗುರುತಿಸಿದರು. ವಿಜ್ಞಾನದ ಸ್ತ್ರೀವಾದಿ ಸಿದ್ಧಾಂತಿಗಳು ಪ್ರಮುಖವಾಗಿ ಎರಡು ಬಗೆಯ ಕೆಲಸದಲ್ಲಿ ತೊಡಗಿದ್ದಾರೆ. ಒಂದು ವಿಜ್ಞಾನದ ವಿಧಾನಗಳು, ಸಿದ್ಧಾಂತಗಳು, ವಿಜ್ಞಾನ ಒಂದು ಸಂಸ್ಥೆಯಾಗಿ ಲಿಂಗತಾರತಮ್ಯವನ್ನು ತೋರುವ ರೀತಿಯನ್ನು ಪರೀಕ್ಷಿಸುವುದು.

ಮತ್ತೊಂದು ಹೊಸದೇ ಆದ ಲಿಂಗತಾರತಮ್ಯವಿಲ್ಲದ ವೈಜ್ಞಾನಿಕ ವಿಧಾನಗಳನ್ನು ಕಂಡುಹಿಡಿಯುವುದು ಮಹಿಳಾ ವಿಜ್ಞಾನಿಗಳ ಅಧ್ಯಯನ, ಸ್ತ್ರೀವಾದಿ ವಿಜ್ಞಾನದ ಒಂದು

೧.ಭುವನೇಶ್ವರಿ ಹೆಗಡೆ; ಸಿಟಿಬಸ್ಸಿನಲ್ಲಿ ಯೋಗಾಸನ, ಪುಟ-೧೭೭

ಭಾಗವಾಯಿತು. ವೈಜ್ಞಾನಿಕ ವಿಧಾನವನ್ನು ಪ್ರತಿಪಾದಿಸಿದ ನೊಬೆಲ್ ಪಾರಿತೋಷಕ ಪಡೆದ ಬಾರ್ಬರ್ ವ್ಯಾಕ್ಲಿಂಟಾಕ್‌ರ ಜೀವನಚರಿತ್ರೆ ಹಾಗೂ ಅಮೂಲ್ಯ ಕೊಡುಗೆ ಇತ್ತು. ಗುರುತಿಸಿದೆ ಬಿಟ್ಟು ಹೋದ ರೊಸಲಿಂಡ್ ಪ್ರಾಂಕ್ಲಿನಳ ಜೀವನದಲ್ಲಿನ ವಿಶೇಷ ಆಸಕ್ತಿಯನ್ನು ಸ್ತ್ರೀವಾದಿಗಳು ತೋರಿಸಿದರು.

ಮಹಿಳೆಯರಿಂದ ವಿಜ್ಞಾನವನ್ನು ದೂರವಿಟ್ಟದ್ದು, ವಿಜ್ಞಾನ ಚರಿತ್ರೆಯಲ್ಲಿ ಸಾಕಷ್ಟು ಸಾಕ್ಷಿ ಪುರಾವೆಗಳಿಂದ ಸಾಬೀತಾಗಿದೆ. ವಿಜ್ಞಾನ ರಂಗದಲ್ಲಿಯ ಸ್ತ್ರೀದೃಷ್ಟಿಕೋನದ ಅನುಪಸ್ಥಿತಿಯನ್ನು ವಸ್ತುನಿಷ್ಠತೆ, ನಿರ್ಲಿಪ್ತೆ ಎಂದು ಹೇಳುವ ವಿಜ್ಞಾನದಲ್ಲಿಯ ಪೂರ್ವಾಗ್ರಹಗಳನ್ನು ತಿಳಿಸಿದರು. ಲಿಂಗಭೇದದಿಂದ ಮುಕ್ತವಾದ ವಿಜ್ಞಾನ ಲಿಂಗಾತೀತ ವಿಜ್ಞಾನದ ಸಾಧ್ಯತೆಯತ್ತ ಸ್ತ್ರೀವಾದಿಗಳು ಯೋಚಿಸಿದರು. ಇಂದು 'ಸ್ತ್ರೀವಾದ ಮತ್ತು ವಿಜ್ಞಾನ' ಅಧ್ಯಯನದ ಅಡಿಯಲ್ಲಿ ಬಹಳಷ್ಟು ವಿಷಯಗಳು ಸೇರ್ಪಡೆಯಾಗಿವೆ. ವಿಜ್ಞಾನರಂಗದಿಂದ ಸ್ತ್ರೀಯರನ್ನು ದೂರ ಇಟ್ಟದ್ದನ್ನು, ಸ್ತ್ರೀದೃಷ್ಟಿಕೋನವಿಲ್ಲದ ವಿಜ್ಞಾನ ನಿಜವಾದ ವಿಜ್ಞಾನವಾಗುವಲ್ಲಿ ಸೋತದ್ದನ್ನು ಅರ್ಥೈಸುತ್ತದೆ. ಪುರುಷರಿಗೆ ಅನುಕೂಲಕರವಾದ ತಂತ್ರಜ್ಞಾನ ನಮಗೆ ಬೇಕು ಎಂಬ ನಿರ್ಧಾರಗಳಲ್ಲಿ ನಮ್ಮ ಪಾತ್ರ ಎಷ್ಟಿದೆ, ಎಂಬ ವಿಚಾರಕ್ಕಿಳಿದಿದೆ. ವಿಜ್ಞಾನ ತಂತ್ರಜ್ಞಾನದಿಂದ ಮಹಿಳೆಯ ಜೀವನದ ಮೇಲಾಗುತ್ತಿರುವ ಪ್ರಭಾವ, ಆ ವಿಜ್ಞಾನ ತಂತ್ರಜ್ಞಾನವನ್ನು ಮಹಿಳೆ ನಿಯಂತ್ರಿಸುವ ಬಗ್ಗೆ ಈ ಎಲ್ಲವನ್ನು ಚರ್ಚಿಸುತ್ತದೆ.

ವಿಜ್ಞಾನದ ಕ್ರಾಂತಿಯೊಂದಿಗೆ ಆಧುನಿಕ ವಿಜ್ಞಾನ ವ್ಯವಸ್ಥಿತ ರೂಪ ಪಡೆಯುವಾಗ "ವಸ್ತುನಿಷ್ಠತೆ, ಪ್ರತ್ಯಕ್ಷ ವೀಕ್ಷಣೆ ಏಕಮಾತ್ರ ಸತ್ಯದಂತಹ ಗಂಡುಗುಣಗಳನ್ನು ವಿಜ್ಞಾನದ ವಿಧಾನಗಳು"[೧] ಎಂದು ವ್ಯಾಖ್ಯಾನಿಸಿದರು. ಹೆಣ್ಣುಗುಣಗಳಾದ ಸ್ತ್ರೀಸೂಕ್ಷ್ಮತೆಗೆ ಒಳ ಅರಿವಿಗೆ ಇಲ್ಲಿ ಸ್ಥಳವಿರಲಿಲ್ಲ. ಸ್ತ್ರೀವಾದಿಗಳು ಇಂದು ಈ ಮೂಲಭೂತ ವೈಜ್ಞಾನಿಕ ವಿಧಾನವನ್ನೇ ಪ್ರಶ್ನಿಸಿದ್ದಾರೆ. ಮೂಲತಃ ಅಣುವಿನೊಳಗಿನ ಕಣಗಳನ್ನು ಕುರಿತು ಹೇಳುವ ಈ ಜ್ಞಾನಶಾಖೆ, ಒಂದು ಕಣದ ವೇಗ ಮತ್ತು ಅದಿರುವ ಸ್ಥಾನವನ್ನು ಸಂಪೂರ್ಣ ನಿಖರತೆಯಿಂದ ಏಕಕಾಲದಲ್ಲಿ ತಿಳಿಯಲು ಸಾಧ್ಯವಿಲ್ಲ ಎಂಬ ನಿಶ್ಚಿತತತ್ವವನ್ನು ಪ್ರತಿಪಾದಿಸಿತು.

ಆರೋಗ್ಯ ರಕ್ಷಣೆಯ ವಿಷಯ ಬಂದಾಗಲೂ ಸ್ತ್ರೀಯರ ರೋಗಗಳು ಅಲಕ್ಷ್ಯಗೊಳ್ಳುತ್ತವೆಂದೂ ಸ್ತ್ರೀವಾದಿಗಳು ಗುರುತಿಸಿದ್ದಾರೆರ. ಮಹಿಳೆಯ ರಕ್ಷಣೆಗೆ ಆಕೆಯ ನಿಯಂತ್ರಣದಲ್ಲಿರುವಂತಹ ಹೊಸ ವಿಧಾನಗಳತ್ತ ವಿಜ್ಞಾನ ಹೆಚ್ಚು ಗಮನಹರಿಸಿಲ್ಲ.

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ-೯೧

ಉದಾ: ಕಾಂಡಮ್ಸ್ ಧರಿಸಿ ಏಡ್ಸಿನಿಂದ ತಪ್ಪಿಸಿಕೊಳ್ಳಿ ಎಂದು ಕೇವಲ ಪುರುಷರಿಗೆ ಮಾತ್ರ ಸಂರಕ್ಷಣೆಯನ್ನು ಹೇಳುತ್ತವೆ, ಹೊರತು ಮಹಿಳೆಗೆ ಏನೂ ಹೇಳಿಲ್ಲ. ಆದರೂ ವಿಜ್ಞಾನ ಮಹಿಳೆಯರ ಬದುಕನ್ನು ಬದಲಿಸುವಲ್ಲಿ ವರದಾನವಾಗಿರುವುದು ಉಂಟು. ಹೆಣ್ಣಿನ ನಿತ್ಯಬದುಕನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಫಲವಾಗಿ ಯಂತ್ರಗಳು ಸಂಪೂರ್ಣ ಹಗುರಗೊಳಿಸಿದವು.

ಸ್ತ್ರೀದೇಹಕ್ಕೆ ಸಂಬಂಧಿಸಿದಂತೆ ಈ ರಂಗಗಳ ಅಭಿವೃದ್ಧಿ ಅನೇಕ ವಿಚಿತ್ರ ತೊಡಕುಗಳನ್ನು ತಂದಿದೆ. ಉದಾ: ಬಾಡಿಗೆ ಗರ್ಭಕೋಶ ಪಡೆಯುವುದು. ಶ್ರೀಮಂತ ಹೆಣ್ಣುಗಳು ಬಸಿರು-ಹೆರಿಗೆಯ ರೇಜಿಗೆಗೆ ಹೋಗದೆ ಬಡ ಹೆಂಗಸರ ಗರ್ಭಕೋಶವನ್ನು ಬಾಡಿಗೆಗೆ ಪಡೆಯಬಲ್ಲ ಸಾಧ್ಯತೆಯೇ ಸ್ತ್ರೀಶೋಷಣೆಯ ಹೊಸ ರೂಪವನ್ನು ತೋರುತ್ತದೆ. ವಿಜ್ಞಾನ, ತಂತ್ರಜ್ಞಾನ ಇಂದು ಸಣ್ಣ ವಿಷಯಗಳಿಂದ ಹಿಡಿದು ಜೆನಿಟಿಕ್‌ರಂಗದ ಮುಂಚೂಣಿಯ ಸಂಶೋಧನೆಗಳವರೆಗೂ ಹಬ್ಬಿದೆ. ಇಂದು ಜೆನಟಿಕ್‌ರಂಗದ ಅನೇಕ ಸಂಶೋಧನೆಗಳು ಮಹಿಳೆಯರ ಅನುಕೂಲಕ್ಕೆ ಒದಗಿಬಂದಿದೆ. ಇಂದು ವಿಜ್ಞಾನರಂಗದಲ್ಲಿ ಹೆಚ್ಚುತ್ತಿರುವ ಮಹಿಳೆಯರ ಸಂಖ್ಯೆ ಒಂದಿಷ್ಟು ಸಂಶೋಧನೆಯತ್ತ ಪ್ರಭಾವ ಬೀರುತ್ತಿದ್ದಾರೆ ಎಂಬುದು ನೇಮಿಚಂದ್ರರ ಅಭಿಪ್ರಾಯವಾಗಿದೆ.

ಏನಾದರೂ ಮಾಡಿ ದೂರಬೇಡಿ:

ಸಣ್ಣ ಊರಿನಿಂದ ಬಂದ ನೆಂಟರ ಹುಡುಗನೊಬ್ಬ ಬೆಂಗಳೂರಿನ ಎಂ.ಜಿ.ರಸ್ತೆ ಪೂರ ಸುತ್ತಿ ಬಂದು, "ಅಕ್ಕ ಬರೀ ವಿದೇಶಿ ಅಂಗಡಿ ಸಾಮಾನು, ವಿದೇಶಿ ಸಂಸ್ಕೃತಿ ಶೋಕಿ ನಮ್ಮ ದೇಶ ಹಾಳಾಗಿ ಹೋಗ್ತಾ ಇದೆ" ಎಂದು ಮಾತು ಆರಂಭಿಸಿದ. ಉಪಯೋಗಿಸುವ ಸೋಪು, ಟೂತ್ ಪೇಸ್ಟ್, ಹಾಕುವ ಚಪ್ಪಲಿ, ಕುಡಿಯುವ ಕೋಲಾ ಎಲ್ಲವೂ ವಿದೇಶಿ ಕಂಪನಿಗಳದ್ದೆ. ಮೊದಲು ನಮ್ಮ ಮನೆಯಲ್ಲಿ ಒಂದಿಷ್ಟು ಸುಧಾರಣೆ ತರಬಹುದಲ್ಲ ಎಂದು ಉದ್ದಕ್ಕೆ ಉಪದೇಶ ಕೊಟ್ಟೆ. ನನ್ನಲ್ಲಿದ್ದ ಸ್ವದೇಶಿ ಕಂಪನಿಗಳು, ಅವುಗಲ ತಯಾರಿಕೆಗಳ ಒಂದು ದೊಡ್ಡ ಪಟ್ಟಿಯನ್ನು ತೆಗೆದುಕೊಟ್ಟೆ. ಹಾಗೆಂದು ನಾನು ಬಳಸುವುದೆಲ್ಲವೂ ಸ್ವದೇಶಿ ಎಂದು ಹೇಳಲಾರೆ. ಆದರೆ ಅಂಗಡಿಗೆ ಹೋದಾಗಲೆಲ್ಲ, ಸ್ವದೇಶಿ ಕಂಪನಿಯ ವಸ್ತುಗಳನ್ನು ಪ್ರಜ್ಞಾಪೂರ್ವಕವಾಗಿ ಹುಡುಕುತ್ತೇವೆ. ವಿದೇಶಿ ಕಂಪನಿಯವರು ಕೊಟ್ಟ ಆಕರ್ಷಕ ಇನಾಮು, ಶೋಕೇಸು, ಫ್ರಿಜ್‌ಗಳನ್ನು ಪಡೆದು ಸ್ವದೇಶಿ ವಸ್ತುಗಳನ್ನು ಮಾರದೆ ಇರುವ ಅಂಗಡಿಯವರನ್ನು ತರಾಟೆಗೆ ತೆಗೆದುಕೊಳ್ಳುತ್ತೇವೆ." "ನಮ್ಮ ಅತಿ ಸಣ್ಣ ಯತ್ನದಲ್ಲೂ ಬದಲಾವಣೆ ಮತ್ತು ಸುಧಾರಣೆಯ ಹಾದಿಯಲ್ಲಿ ಒಂದು ಪುಟ್ಟ ಹೆಜ್ಜೆ ಮುಂದಿಡಲು ಸಾಧ್ಯ"[೧] ಎಂಬ ನಂಬುಗೆ. ಇದನ್ನು ಕಲಿಸಿದ್ದು ಪು.ತಿ.ನ. ಹಾಗೂ ಅವರು ಹೇಳಿದ

೧.ನೇಮಿಚಂದ್ರ; ಬದುಕು ಬದಲಿಸಬಹುದು, ಪುಟ-೧೧೫

ಮಾತೆಂದರೆ "ಸುಮ್ಮನೆ ದೂರಬೇಡಿ ಏನಾದರೂ ಮಾಡಿ".

ನಮ್ಮಲ್ಲಿ ಕೆಲವರಿಗೆ ದೂರುವುದು ಒಂದು ಹವ್ಯಾಸವಾಗಿರುತ್ತದೆ. ಮತ್ತೆ ಕೆಲವರಿಗೆ ದೂರುವುದೇ ಕಸುಬು ಆಗಿರುತ್ತದೆ. 'ಅದು ಸರಿ ಇಲ್ಲ, ಇದು ನೆಟ್ಟಗಿಲ್ಲ' ಎಂಬ ದೂರಿನ ಪಟ್ಟಿ ಹನುಮಾನ್ ಬಾಲವಾಗಿರುತ್ತದೆ. ಕ್ರಾಂತಿ ಆಗಬೇಕೆನ್ನುತ್ತೇವೆ, ಆದರೆ ಅದನ್ನು ಮತ್ಯಾರಾದರೂ ಮಾಡಬೇಕೆಂದು ಬಯಸುತ್ತೇವೆ. ನಂಬಿದ ಮೌಲ್ಯಗಳ ಹೋರಾಟಕ್ಕೆ ಎಲ್ಲರೂ ಇಳಿಯಲು ಸಾಧ್ಯವಾಗದಿರಬಹುದು. ಆದರೆ ನಮ್ಮಿಂದ ಸಾಧ್ಯವಾಗುವುದು ಬಹಳಷ್ಟಿದೆ. ನಿತ್ಯ ವ್ಯಾನಿಟಿ ಬ್ಯಾಗಿನಲ್ಲಿ ಒಂದು ಕೈಚೀಲ ಇಟ್ಟುಕೊಳ್ಳಬೇಕೆಂದು ಪ್ರತಿದಿನ ಅಂದುಕೊಳ್ಳುತ್ತೇವೆ. ವಾರಕ್ಕೆ ನಾಲ್ಕು ದಿನ ಮರೆಯುವುದು, ಅಂಗಡಿಯವನು ಕೊಡುವ ಪ್ಲಾಸ್ಟಿಕ್ ಚೀಲಗಳನ್ನು ಹೊತ್ತು ತರುತ್ತೇವೆ.

ಭಾರತಿಪ್ರಭು ವಾಕ್-ಶ್ರವಣ ತಜ್ಞರು. ಪರಿಸರದ ಬಗ್ಗೆ ನಿಜವಾದ ಕಳಕಳಿ ಇರುವ ವ್ಯಕ್ತಿ. ತಮ್ಮಿಂದ ಪರಿಸರ ಮಲಿನವಾಗದಂತೆ ಬಲು ಎಚ್ಚರ ವಹಿಸುವ ಕುಟುಂಬ ಅವರದು. ಇಬ್ಬರು ಚಿಕ್ಕ ಮಕ್ಕಳಿರುವ ಆ ಮನೆಯಲ್ಲಿ ದೀಪಾವಳಿಯಂದು ದೀಪಗಳು ನರ್ತಿಸುತ್ತವೆ. ಪಟಾಕಿಗಳು ಸಿಡಿದು ಹೊಗೆಯಬ್ಬಿಸುವುದಿಲ್ಲ. ಭಾರತಿ ಸದಾ ಮನೆಯಿಂದಲೇ ಕೈಚೀಲ ಹಿಡಿದು ಹೊರಡುತ್ತಾರೆ. ಅಂಗಡಿಯಿಂದ ಏನೇ ಕೊಂಡರೂ, ತಮ್ಮದೇ ಚೀಲದಲ್ಲಿ ಹಾಕಿಸಿಕೊಳ್ಳುತ್ತಾರೆ, ಹೊರತು ಅಂಗಡಿಯವರನ ಪ್ಲಾಸ್ಟಿಕ್ ಚೀಲದಲ್ಲಿ ತುರುಕಿ ಕೊಡಲು ಬಿಡುವುದಿಲ್ಲ. ಪರಿಸರ ಸಂರಕ್ಷಣೆಯ ಬಗ್ಗೆ ಸರಳವಾದ ಕರಪತ್ರ ತಯಾರಿಸಿದ್ದಾರೆ. ಅದನ್ನು ಗೊತ್ತಿರುವ ಅಂಗಡಿಗಳಿಗೆ ಹಂಚಿ ಅಂಟಿಸಿದ್ದಾರೆ.

ಲೇಖಕಿಯಾದ ನೇಮಿಚಂದ್ರರು ವಿದೇಶ ಯಾತ್ರೆಗಳ ಸಮಯದಲ್ಲಿ ಕೆಲವು ಭಾರತೀಯರ ಮನೆಗಳಲ್ಲಿ ಉಳಿದುಕೊಳ್ಳುವ ಸಂದರ್ಭ ಒದಗಿತ್ತು. ಆಗ ಅವರು ಭಾರತ ದೇಶದ ಸ್ವಚ್ಛತೆಯ ಬಗ್ಗೆ ದೂರುವುದನ್ನು ಕೇಳಿಸಿಕೊಂಡಿದ್ದರು. ನಮ್ಮ ಸುತ್ತಮುತ್ತಲಿನ ಜನರು ವೈಜ್ಞಾನಿಕ ಮನೋಭಾವ ಬೆಳೆಸಿಕೊಂಡು ಸ್ವಚ್ಛತೆಯ ಕಡೆಗೆ ಗಮನ ನೀಡಬೇಕು.

ಪ್ರಜ್ಞಾಪೂರ್ವಕ ಪ್ರಯತ್ನ, ಒಂದಿಷ್ಟೇ ಶ್ರಮ ಇಷ್ಟು ಸಾಕು ನಮ್ಮ ಸುತ್ತಲಿನ ಪರಿಸರದಲ್ಲಿ ಬಹಳಷ್ಟು ಸುಧಾರಣೆಯನ್ನು ತರಬಹುದು. ಯಾವ ಕೀಟನಾಶಕವನ್ನು ಬಳಸದೆ, ರಾಸಾಯನಿಕ ಗೊಬ್ಬರವನ್ನೂ ಬಳಸದೆ ಮನೆಯ ತುಂಬಾ ಹೂವು, ತರಕಾರಿ, ಹಣ್ಣಿನ ಗಿಡ ಬೆಳೆಸಿರುವುದು. ಮನೆಯ ಕಸವನ್ನು ಬೀದಿಗೆ ಎಸೆಯದೆ ಹಿತ್ತಿಲಿನಲ್ಲಿ ಒಂದು ಗುಂಡಿ ತೋಡಿ, ಮನೆಯ ಕಸಮುಸುರೆಯನ್ನೆಲ್ಲ ಅದರಲ್ಲಿ ಹಾಕಿ ಮಣ್ಣು ಮುಚ್ಚುವುದು, ಕೊಳೆಯ ಗೊಬ್ಬರವಾದಾಗ ಅದನ್ನೇ ಗಿಡಗಳಿಗೆ ಬಳಸಬಹುದು. ಸಹಜ ಕೀಟನಾಶಕಗಳನ್ನು ಬಳಸಬಹುದು. ಇದು ಅತಿ ಸಣ್ಣ ಪ್ರಯತ್ನವಾಗಿ ಕಾಣಬಹುದು. ನಮ್ಮಿಂದ ದೊಡ್ಡ ಚಳುವಳಿ ಸಾಧ್ಯವಾಗದಿರಬಹುದು. ಆದರೆ ನಮ್ಮ ಮಿತಿಯಲ್ಲೇ ನಮ್ಮ ಪರಿಸರ ಮತ್ತು ಸಮಾಜದ ಬಗ್ಗೆ ಇರುವ ಕಳಕಳಿಯನ್ನು ಕಾರ್ಯರೂಪಕ್ಕಿಳಿಸಲು ಸಾಧ್ಯವಿದೆ. ಹಾದಿಬೀದಿಗಳಲ್ಲಿ ಪ್ಲಾಸ್ಟಿಕ್ ಕಸದ ಪರ್ವತಗಳನ್ನು ಕಂಡಾಗ "ಸುಮ್ಮನೆ ದೂರಬೇಡ,

ಏನಾದರೂ ಮಾಡು, ಸಮಸ್ಯೆಯ ಭಾಗವಾಗಬೇಡ ಪರಿಹಾರದ ಹಾದಿಯಲ್ಲಿ ಸಣ್ಣ ಹೆಜ್ಜೆಯನ್ನಾದರೂ ಇಡು."

ಮಹಿಳಾ ವಿಜ್ಞಾನಿಗಳ ಪ್ರಬಂಧ ಲೇಖನಗಳು:

ವೈದ್ಯಕೀಯ ರಂಗದಲ್ಲಿ ಸಾಧನೆ ಮಾಡಿದ ಮಹಿಳೆಯರು:

ರಾಜೇಶ್ವರಿಯವರು ೧೯೪೭ರಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿವೇತನದ ಮೇಲೆ 'ಮಿಚಿಗನ್ ವಿಶ್ವವಿದ್ಯಾಲಯಕ್ಕೆ ಹೋಗಿ ಪ್ರಸಿದ್ಧ ವಿಜ್ಞಾನಿ ವಲಿಯಮ್ ಜಿ.ಡೌ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿದರು. ಅವರ ಪಿಎಚ್.ಡಿ.ಯ ವಿಷಯ ಕಂಪ್ಯೂಟರಿನ 'ಬೇಸಿಕ್ ಟ್ರಿಗರ್ ಸರ್ಕ್ಯೂಟ್ಸ್'ಗೆ ಸಂಬಂಧಿಸಿತ್ತು. ಆಧುನಿಕ ಕಂಪ್ಯೂಟರಿನ ಆರಂಭದ ದಿನಗಳವು. ಪಿಎಚ್.ಡಿ ಪದವಿ ಪಡೆದು ರಾಜೇಶ್ವರಿ ೧೯೫೩ರಲ್ಲಿ ಭಾರತಕ್ಕೆ ಹಿಂತಿರುಗಿ ಬಂದರು. ನಂತರ ಅವರು 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಇಂಜಿನೀಯರಿಂಗ್ ವಿಭಾಗದಲ್ಲಿ ಲೆಕ್ಚರರ್ ಆಗಿ ಸೇರಿದರು. ಅವರನ್ನು ಐ.ಐ.ಎಸ್ಸಿಯ ಪ್ರಥಮ ಮಹಿಳಾ ಪ್ರಾಧ್ಯಾಪಕರೆನ್ನಬಹುದು.

ರಾಜೇಶ್ವರಿ ಅವರ ಸಂಶೋಧನಾ ಕಾರ್ಯ ವಿದ್ಯುತ್ಕಾಂತಿಯ ಸಿದ್ಧಾಂತಗಳಿಗೆ, ಮೈಕ್ರೋವೇವ್ ಇಂಜಿನಿಯರಿಂಗ್, ಎಲೆಕ್ಟ್ರಾನಿಕ್ ಸಲಕರಣೆಗಳು ಮತ್ತು ಆಂಟೆನಾಗೆ ಸಂಬಂಧಿಸಿದ್ದು, ವಿದ್ಯುತ್ಕಾಂತೀಯ ವಿಷಯವನ್ನು ಕುರಿತಂತೆ, ಅದರ ಅಳವಡಿಕೆಗಳನ್ನು ಕುರಿತಂತೆ ಮೂಲಭೂತ ಸಂಶೋಧನೆ ನಡೆಸಿರುವ ರಾಜೇಶ್ವರಿ ಅವರು ೧೧೦ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧವನ್ನು ಪ್ರಕಟಿಸಿದ್ದಾರೆ. ತಮ್ಮ ಸಂಶೋಧನಾ ರಂಗ 'ಮೈಕ್ರೋವೇವ್ ಇಂಜಿನಿಯರಿಂಗ್ ಮಿಲಿಮೀಟರ್ ವೇವ್, ಸಬ್ ಮಿಲಿಮೀಟರ್ ವೇವ್ ಕುರಿತಂತೆ ಆರು ಪುಸ್ತಕಗಳನ್ನು ಬರೆದಿದ್ದಾರೆ.

ಐ.ಐ.ಎಸ್.ಸಿಯನ್ನು ಸೇರಿದ್ದ ಡಾ.ಚಟರ್ಜಿ ಅವರ ಪರಿಚಯವಾಗಿತ್ತು. ಈ ಪರಿಚಯ ಪ್ರೇಮವಾಗಿ ಅರಳಿ ೧೯೫೩ರಲ್ಲಿ ರಾಜೇಶ್ವರಿಯವರು ಚಟರ್ಜಿಯವರನ್ನು ವಿವಾಹವಾದರು. ವಿವಾಹ ರಾಜೇಶ್ವರಿಗೆ ಹೊರೆಯಾಗಲಿಲ್ಲ. ಮದುವೆಯ ಹೊಸತರಲ್ಲಿಯೇ ಪತಿ ಚಟಜರ್ಜಿ 'ನಮ್ಮ ಬೆಂಗಾಲಿ ಮನೆಗಳಲ್ಲಿ ಹೆಂಗಸರು ಸೂರ್ಯನ ಕಿರಣವನ್ನೇ ನೋಡೋಲ್ಲ, ಇಡೀ ದಿನ ಅಡಿಗೆ ಮನೆಯ್ಲಲಿ ಬಂಧಿಯಾಗಿರುತ್ತಾರೆ. ನೀನು ಅಡಿಗೆ ಮಾಡದಿದ್ದರೂ ಚಿಂತೆ ಇಲ್ಲ"[೧] ಎಂದಿದ್ದರು.

೧.ನೇಮಿಚಂದ್ರ; ಮಹಿಳಾ ಅಧ್ಯಯನ, ಪುಟ-೫೧

ಮನೆಗೆಲಸಕ್ಕೆ ಕೆಲಸದವರನ್ನಿಟ್ಟುಕೊಂಡು ಆದಷ್ಟು ಸಮಯ ತಮ್ಮ ಅಧ್ಯಯನ ಸಂಶೋಧನೆಗೆ ಮೀಸಲಿಟ್ಟರು.

ಡಾ.ಪಾರ್ವತಿ ಗೋಪಾಲ್ :

ಡಾ.ಪಾರ್ವತಿ ಗೋಪಾಲ್ 'ವೈಮಾನಿಕ ವೈದ್ಯಕೀಯ'ದಲ್ಲಿ (Aviation Medicine) ಎಂ.ಡಿ. ಮಾಡಿರುವ ಏಷಿಯಾದ ಮೊಟ್ಟ ಮೊದಲ ಮಹಿಳೆ. ವೈಮಾನಿಕ ವೈದ್ಯಕೀಯದಲ್ಲಿ ಸ್ನಾತಕೋತ್ತರ ಪದವಿ ಪಡೆದ ಜಗತ್ತಿನ ಮೊದಲ ಮಹಿಳೆ. ಯುರೋಪು, ಅಮೆರಿಕದ ದೇಶಗಳಲ್ಲಿ ವೈಮಾನಿಕ, ವೈದ್ಯಕೀಯದಲ್ಲಿ ಡಿಪ್ಲೊಮಾಗಳಿವೆ. ಆದರೆ ಸ್ನಾತಕೋತ್ತರ ಪದವಿ ಇರುವುದು ನಮ್ಮ ಭಾರತದಲ್ಲ ಮತ್ತು ಇಂಗ್ಲೆಂಡಿನಲ್ಲಿ ಮಾತ್ರ. ಇಡೀ ಏಷಿಯಾದಲ್ಲಿ ವೈಮಾನಿಕ ವೈದ್ಯಕೀಯವನ್ನು ಕುರಿತಂತೆ ಇರುವ ಒಂದೇ ಒಂದು ಸಂಸ್ಥೆ ನಮ್ಮ ಬೆಂಗಳೂರಿನ 'ಐ.ಎ.ಎಮ್. ಇನ್‌ಸ್ಟಿಟ್ಯೂಟ್ ಆಫ್ ಏವಿಯೇಷನ್ ಮೆಡಿಸನ್' ಮಾತ್ರ.

ಪ್ರಕೃತಿ ಮನುಷ್ಯನನ್ನು ಭೂಮಿಯ ಮೇಲೆ ಎರಡು ಕಾಲಲ್ಲಿ ನಡೆಯಲು ಸೃಷ್ಟಿಸಿತು. ಹಾಗೆಂದೇ ನಮ್ಮ ದೇಹ ಭೂಮಿಯ ಮೇಲಿನ ಪರಿಸರಕ್ಕೆ ತಕ್ಕದಾಗಿ ನಿರ್ಮಿಸಲ್ಪಟ್ಟಿದೆ. ಅದೇ ಮಾನವ ಸಾವಿರಾರು ಕಿಲೋಮೀಟರ್ ಎತ್ತರದಲ್ಲಿ ಆಕಾಶದಲ್ಲಿ ಹಾರುವಾಗ, 'ಪೈಟರ್ ವಿಮಾನ'ಗಳಲ್ಲಿ ವೇಗವಾಗಿ ತಲೆಕೆಳಗಾಗಿ ನುಗ್ಗುವಾಗ, ಅಂತರೀಕ್ಷದ ಶೂನ್ಯ ಗುರುತ್ವಾಕರ್ಷಣದಲ್ಲಿ ಬಿಡಾರ ಬಿಟ್ಟಾಗ, ಅವನ ದೇಹದ ಮೇಲೆ ಆಗುವ ಪರಿಣಾಮಗಳೇನು? ಇವನ್ನು ಅಧ್ಯಯನ ಮಾಡುವ ರಂಗವೇ 'ವೈಮಾನಿಕ ವೈದ್ಯಕೀಯ' ನೆಲದ ಮೇಲೆ ಅಂತಹ ವಾತಾವರಣವನ್ನು ಸೃಷ್ಟಿಸಿ, ಸಿಮ್ಯುಲೇಟರ್‌ಗಳಲ್ಲಿ ವಿಮಾನ ಚಾಲಕರಿಗೆ, ಅಂತರಿಕ್ಷ ಯಾನಿಗಳಿಗೆ ತರಬೇಕು ನೀಡುವ ಮತ್ತು ಅಂತಹ ವಿಷಮ ಪರಿಸರದಲ್ಲಿ ಅವರ ದೇಹ ದುಡಿಯಲು ಶಕ್ತವಾಗಿದೆಯೇ ಎಂದು ಪರೀಕ್ಷಿಸುವ ಅದ್ಭುತ ರಂಗದಲ್ಲಿ ಡಾ.ಪಾರ್ವತಿ ಗೋಪಾಲ್ ಕೆಲಸ ಮಾಡುತ್ತಿದ್ದಾರೆ.

ಈ ರಂಗಕ್ಕೆ ಹೆಚ್ಚಾಗಿ ಸೇನೆಯಲ್ಲಿರುವ ಜನ ಬರುತ್ತಾರೆ. ಅವರಿಗಾಗಲೇ ವೈಮಾನಿಕ ರಂಗದ ಅನುಭವ ಮತ್ತು ಹಿನ್ನೆಲೆ ಇರುವುದುಂಟು. ಮಹಿಳೆಯಾಗಿ ಅದರಲ್ಲೂ ಸಿವಿಲಿಯನ್ ಆಗಿ ಈ ರಂಗದಲ್ಲಿ ಡಾ.ಪಾರ್ವತಿ ಅವರ ಸಾಧನೆ ಮೆಚ್ಚುವಂತಹುದು. ಇಂದು ಡಾ.ಪಾರ್ವತಿ ಗೋಪಾಲನ್ 'ರಿಸರ್ಚ್ ಅಂಡ್ ಹ್ಯೂಮನ್ ಪ್ಯಾಕ್ಟರ್ಸ್ ವಿಭಾಗದ' ಮುಖ್ಯಸ್ಥೆ. ಪುರುಷರ ಹಕ್ಕಿನ ರಂಗದಲ್ಲಿ ಮಹಿಳೆಯಾಗಿ ಎದುರಿಸುವ ಎಲ್ಲವನ್ನೂ ಇವರು ಎದುರಿಸಿದವರೇ. ಅಧಿಕಾರದ ವೃತ್ತಿಯ ಏಣಿಯಲ್ಲಿ ಏರುವುದು ಸುಲಭವಿರಲಿಲ್ಲ. ಕಠಿಣ ಪರಿಶ್ರಮ ನಿಮ್ಮನ್ನು ಮೇಲೇರಿಸುತ್ತದೆ. ನಿಮ್ಮನ್ನು ಯಾರೂ ಉಪೇಕ್ಷಿಸದಂತೆ ಮಾಡುತ್ತದೆ ಎನ್ನುವ ಡಾ.ಪಾರ್ವತಿ ಅವರ ಬದುಕು, ಅವರ ನಂಬಿಕೆಗಳಿಗೆ ನಿದರ್ಶನವಾಗಿದೆ.

ಬೆಂಗಳೂರಿಗೆ ಬಂದ ಡಾ.ಪಾರ್ವತಿ, ಬೆಂಗಳೂರಿನ ಸಿಟಿ ಕಾರ್ಪೋರೇಷನ್‌ನಲ್ಲಿ ಅಸಿಸ್ಟೆಂಟ್ ಸರ್ಜನ್ ಆಗಿ ಸೇರಿಕೊಂಡರು. ಐದು ವರ್ಷ ಇಲ್ಲಿ ದುಡಿದರು. ನಂತರ ಎಂ.ಡಿ. ಮಾಡಬಯಸಿದರು. ಇವರಿಗೆ ವೈಮಾನಿಕ ವೈದ್ಯಕೀಯದ ವಿಷಯ ತಿಳಿಯಿತು. ಐ.ಎ.ಎಂ ಜಾಹೀರಾತು ನೋಡಿ ತಕ್ಷಣವೇ ಅರ್ಜಿ ಹಾಕಿದರು. ಪ್ರತಿವರ್ಷ ಐದು ಅಥವಾ ಆರು ಮಂದಿಯನ್ನು ಇಲ್ಲಿ ತೆಗೆದುಕೊಳ್ಳುತ್ತಾರೆ. ವೈಮಾನಿಕ ವೈದ್ಯಕೀಯ ರಂಗದಲ್ಲಿ ಶರೀರಶಾಸ್ತ್ರ, ಜೀವರಸಾಯನಶಾಸ್ತ್ರ, ಸಾಮಾನ್ಯವೈದ್ಯ ಎಲ್ಲದರೊಡನೆ ವೈಮಾನಿಕ ವೈದ್ಯಕೀಯವನ್ನು ಕಲಿಯಬೇಕು. ಅಸಾಮಾನ್ಯ ವಾತಾವರಣದಲ್ಲಿ ಮಾನವ ಶರೀರದ ಮೇಲಾಗುವ ಪರಿಣಾಮಗಳನ್ನು ವಿಶೇಷವಾಗಿ ಅಧ್ಯಯನ ಮಾಡಬೇಕು. ೧೯೮೬ರಲ್ಲಿ ಪಾರ್ವತಿ ವೈಮಾನಿಕ ವೈದ್ಯಕೀಯದಲ್ಲಿ ಎಂ.ಡಿ.ಪದವಿಯನ್ನು ಪಡೆದರು.

ಐ.ಐ.ಎಮ್‌ನಲ್ಲಿ ಒಂದು ಲಕ್ಷ ಅಡಿ ಎತ್ತರದಲ್ಲಿಯ ವಾತಾವರಣವನ್ನು ಸೃಷ್ಟಿಸುವ ಸಿಮ್ಯುಲೇಟರ್‌ಗಳಿವೆ. ಇವುಗಳಲ್ಲಿ ವಿಮಾನ ಚಾಲಕರಿಗೆ ತರಬೇತು ನೀಡಲಾಗುತ್ತದೆ. ಇಂಥ ಪರಿಸ್ಥಿತಿಯನ್ನು ಅವರು ನಿಭಾಯಿಸಬಲ್ಲರೇ, ತಡೆದುಕೊಳ್ಳಬಲ್ಲರೆ ಎಂದು ಪರೀಕ್ಷೆ ಮಾಡಲಾಗುತ್ತದೆ. ಅದಕ್ಕಾಗಿ ಡಾ.ಪಾರ್ವತಿ ಕೂಡ ಮಹಿಳಾ ಚಾಲಕರೊಡನೆ ತಾವೂ ಮೇಲಕ್ಕೆ ಹಾರುತ್ತಾರೆ. ಅವರ ಅನುಭವಕ್ಕೆ ಬರುವ ಆ ಅಧಿಕ 'ಜಿ' ಒತ್ತಡಕ್ಕೆ ತಮ್ಮನ್ನು ಒಡ್ಡಿಕೊಳ್ಳುತ್ತಾರೆ. ನಮ್ಮ ವಿಮಾನ, ಹೆಲಿಕಾಪ್ಟರುಗಳು ಪುರುಷರ ಎತ್ತರ, ಅಗಲ, ಬಾಹುಬಲಕ್ಕೆ ತಕ್ಕಂತೆ ವಿನ್ಯಾಸಗೊಂಡಿವೆ. ಇದರಿಂದ ಮಹಿಳೆಯರಿಗೆ ವಿಶೇಷ ಅನಾನುಕೂಲಗಳಿವೆ ಎಂದೂ ಕೂಡ ಅಧ್ಯಯನ ಮಾಡಿದ್ದಾರೆ. ವೈಮಾನಿಕ ಪ್ರಯೋಗಶಾಲೆಗಳಿಗೆ ಸಲಹೆಗಾರರಾಗಿದ್ದಾರೆ. ಈ ರಂಗದಲ್ಲಿ ಸಂಶೋಧನೆ ನಡೆಸಿ ೨೪ ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ.

ಇವಲ್ಲದೆ ಶ್ವಾಸಕೋಶದ ರೋಗಿಗಳಿಗೆ, ವಾಸಿಯಾಗದ ಅಲ್ಸರ್ ಇರುವವರಿಗೆ, ಇಂಗಾಲದ ಮಾನಾಕ್ಸೈಡಿನ ವಿಷಗಾಳಿಗೆ ಈಡಾದವರಿಗೆ 'ಒತ್ತಡದಲ್ಲಿಯ ಆಮ್ಲಜನಕ'ದ ಚಿಕಿತ್ಸೆಯನ್ನೂ ಸಹ ನೀಡುತ್ತಾರೆ. ಇವರ ಕೆಲಸದಲ್ಲಿ ಎಂ.ಡಿ. ವಿದ್ಯಾರ್ಥಿಗಳಿಗೆ ವೈಮಾನಿಕ ವೈದ್ಯಕೀಯದಲ್ಲಿ ತರಬೇತು ನೀಡುವುದನ್ನು ಸಹ ಸೇರಿಸಿದ್ದಾರೆ.

ಸಂಸಾರ, ಸಂಶೋಧನೆ ಅಷ್ಟೇ ಅಲ್ಲ ಸತತ ಅಭ್ಯಾಸದ ಅಗತ್ಯವಿರುವ ಭರತನಾಟ್ಯವನ್ನು ಸಹ ಮುಂದುವರೆಸಿಕೊಂಡು ಉತ್ತಮ ನರ್ತಕಿ ಎಂದೂ ಗುರುತಿಸಲ್ಪಟ್ಟ ಡಾ.ಪಾರ್ವತಿ ಗೋಪಾಲ್, ನಾವು ಬಯಸಿದರೆ ಯಾವುದೇ ರಂಗದಲ್ಲೂ ಯಶಸ್ಸು ಕಾಣಬಲ್ಲೆವು. ಏನನ್ನು ಸಾಧಿಸಬಲ್ಲರು. ಮಹಿಳೆಯು ಸುಖೀ ಸಂಸಾರವನ್ನು, ಉತ್ಕಟ ಹವ್ಯಾಸ ಎಲ್ಲವನ್ನು ಉಳಿಸಿಕೊಂಡು, ಸಂಶೋಧನಾ ರಂಗದಲ್ಲೂ ಯಶಸ್ಸು ಗಳಿಸಬಲ್ಲಳು ಎಂಬುದಕ್ಕೆ ಉತ್ತಮ ಉದಾಹರಣೆಯಾಗಿದ್ದಾರೆ. ಹಾಗೂ ಹೊಸ ಪೀಳಿಗೆಗೆ ಮಾದರಿಯಾಗಿದ್ದಾರೆ.

ಡಾ.ಸಂಧ್ಯಾ :

ಇಂಗ್ಲೇಂಡಿನ ಶಾಲೆಯಲ್ಲಿ ಓದಿ, ಜಾಂಬಿಯಾದಲ್ಲಿ ವಿದ್ಯಾಭ್ಯಾಸ ಮುಂದುವರೆಸಿ, ಭಾರತಕ್ಕೆ ಹಿಂತಿರುಗಿ ವಿಜ್ಞಾನಿಯಾದ ಡಾ.ಸಂಧ್ಯಾ ಚಿಕ್ಕ ವಯಸ್ಸಿಗೆ ವಿವಾಹವಾದರೂ, ಉನ್ನತ ವ್ಯಾಸಂಗ ಸಂಶೋಧನೆಯನ್ನು ಮುಂದುವರೆಸಿದ ಅಪರೂಪದ ಮಹಿಳೆ. 'ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯ' ಯಂಗ್ ಸೈಂಟಿಸ್ಟ್ ಮೆಡಲ್ ಪಡೆದಿರುವ ಕೆಲವೇ ಮಹಿಳೆಯರಲ್ಲಿ ಈಕೆ ಒಬ್ಬರು.

ಇವರು ವೈಜ್ಞಾನಿಕ ಸಂಶೋಧನೆಯ ಪಿಎಚ್.ಡಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾ ಮತ್ತು ಪ್ರವಚನಗಳನ್ನು ನೀಡುತ್ತಿದ್ದರು. ಸಂಧ್ಯಾ ಮೂವತ್ತಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಇವರ ಸಂಶೋಧನಾ ರಂಗ "ಜೀವಕೋಶಗಳ ಸಂಕೇತ ಸಾಗಣೆ ಮತ್ತು ಜೀವಕೋಶಗಳ ನಿಯಂತ್ರಣ, ಪ್ರೊಟೀನುಗಳ ರಚನೆ ಮತ್ತು ಕಾರ್ಯವಿಧಾನ"[೧]ಕ್ಕೆ ಸಂಬಂಧಿಸಿದೆ. ನಮ್ಮ ದೇಹದ ಪ್ರತಿ ಜೀವಕೋಶವೂ ಹೊರಗಿನ ಪ್ರಚೋದನೆಗೆ ಪ್ರತಿಕ್ರಿಯಿಸುತ್ತದೆ. ಜೀವಕೋಶದಲ್ಲಿ ಈ ಪ್ರತಿಕ್ರಿಯೆ ಅಭಿವ್ಯಕ್ತವಾಗಲು ದಾರಿಯಾಗುವ ಸಂಪರ್ಕ ವ್ಯವಸ್ಥೆಯ ಬಗ್ಗೆ ಇವರ ಸಂಶೋಧನೆ ಇದೆ. 'ಜೀವಕೋಶಗಳ ಸಂಕೇತ ಸಂಪರ್ಕ, ಜೀವಿಗಳಲ್ಲಿ ಒಂದು ಪ್ರಮುಖ ಪ್ರಕ್ರಿಯೆ. ಕಾರಣ ಇದು ಒಂದು ಏಕಜೀವ ಕೋಶದೊಳಗೆ ಸಂಪರ್ಕಕ್ಕೆ ಕಾರಣವಾಗುವಂತೆ, ಪ್ರಧಾನ ಜೀವಿಗಳಲ್ಲಿ ಅನೇಕ ಜೀವಕೋಶಗಳ ನಡುವೆ ಸಂಪರ್ಕಕ್ಕೆ ಹಾದಿಯಾಗುತ್ತದೆ. ನಮ್ ಕರುಳಿನೊಳಗೆ ರೋಗ ತರುವ ಬ್ಯಾಕ್ಟೀರಿಯಾ 'ಜೀವಿಕಗಳನ್ನು ಯಾವ ರೀತಿಯಲ್ಲಿ ಜೀವಕೋಶದೊಳಗೆ ದೂಡಿ ಭೇದಿಗೆ ಕಾರಣವಾಗುತ್ತದೆ' ಎಂಬುದು ಇವರ ಮತ್ತೊಂದು ಪ್ರಮುಖ ಶೋಧನೆಯಾಗಿದೆ.

ಡಾ.ಭವಾನಿ ಬೆಳವಾಡಿ :

ಒಂದು ಕಾಲಕ್ಕೆ ತಾಯಿಯ ಎದೆಹಾಲಿಗಿಂತ ಡಬ್ಬದ ಹಾಲು ಶ್ರೇಷ್ಠ ಎಂಬ ನಂಬಿಕೆ ಮೂಡಿತ್ತು. ಇಂಥ ತಪ್ಪು ಕಲ್ಪನೆಯನ್ನು ತೊಡೆಯುವಲ್ಲಿ, ತಾಯಿಯ ಹಾಲಿನ ಮಹತ್ವವನ್ನು ತಿಳಿಸುವಲ್ಲಿ ವಿಜ್ಞಾನಿ ಡಾ.ಭವಾನಿ ಬೆಳವಾಡಿಯವರ ಕೊಡುಗೆ ಅಪಾರವಾಗಿದೆ. 'ಡಾಕ್ಟರೇಟ್ ಆಫ್ ಸೈನ್ಸ್' ಪದವಿ ಪಡೆದ ಕರ್ನಾಟಕದ ಪ್ರಥಮ ಮಹಿಳೆ ಡಾ.ಭವಾನಿ ಬೆಳವಾಡಿಯವರು. ಬಿ.ಎಸ್ಸಿ. ಮಾಡಲು ಸೆಂಟ್ರಲ್ ಕಾಲೇಜಿಗೆ ಸೇರಿದಾಗ, ಇಡೀ ತರಗತಿಗೆ ಇವರೊಬ್ಬರೇ ಹುಡುಗಿ. ೧೯೪೭ರಲ್ಲಿ ಭವಾನಿ ರಸಾಯನಶಾಸ್ತ್ರದೊಡನೆ ಬಿ.ಎಸ್ಸಿ. ಆನರ್ಸ್ ಮಾಡಿದರು. ಬಿ.ಎಸ್ಸಿ ಆನರ್ಸ್ ಮಾಡಿದ ವಿದ್ಯಾರ್ಥಿಗಳು ಸಂಶೋಧನೆ ಮಾಡಬಹುದಿತ್ತು. ಜೀವರಸಾಯನ ಶಾಸ್ತ್ರದಲ್ಲಿ ಭವಾನಿಯವರಿಗೆ ಎಲ್ಲಿಲ್ಲದ ಆಸಕ್ತಿಯಿತ್ತು. 'ಆ ಕಾಲಕ್ಕೆ ನಾಗಪುರ, ಕಲ್ಕತ್ತ ಹೀಗೆ ಕೆಲವೇ ಸ್ಥಳಗಳಲ್ಲಿ ಮಾತ್ರ

೧.ನೇಮಿಚಂದ್ರ; ಈ ನೆಲದ ಮಹಿಳಾ ವಿಜ್ಞಾನಿಗಳು, ಪುಟ-೬೦

ಜೀವರಸಾಯನಶಾಸ್ತ್ರ ವಿಭಾಗವಿದ್ದದ್ದು' ಭವಾನಿ ನಾಗಪುರ್ ವಿಶ್ವವಿದ್ಯಾಲಯದ ಜೀವರಸಾಯನ ಶಾಸ್ತ್ರ ವಿಭಾಗಕ್ಕೆ ರಿಸರ್ಚ್ ಫೆಲೋ ಆಗಿ ಸೇರಿಕೊಂಡರು.

ನಾಗಪುರ ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಸಂಶೋಧನೆ ನಡೆಸಿದ್ದರು ಭವಾನಿ. ಕಲಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊಫೆಸರ್ ಆಗಿದ್ದ ಡಾ.ಎಸ್.ಬ್ಯಾನರ್ಜಿಯವರ ಮಾರ್ಗದರ್ಶನದಲ್ಲಿ ತಮ್ಮ ಡಾಕ್ಟರೇಟ್ ಸಂಶೋಧನೆ ಆರಂಭಿಸಿದರು. ಅವರ ಸಂಶೋಧನೆ ಆಸ್ಕೊರ್ಬಿಕ್ ಆಮ್ಲ (Ascorbicacid)ವನ್ನು ಕುರಿತಾಗಿತ್ತು. 'ಈ ಆಮ್ಲ ಸಿಹಿಮೂತ್ರ ರೋಗವನ್ನು ನಿಯಂತ್ರಿಸುವುದರಲ್ಲಿ ಸಹಾಯಕ ಎಂದು ಕಂಡು ಹಿಡಿದರು. ಅದೇ ಆಸ್ಕೊರ್ಬಿಕ್ ಆಮ್ಲದ ಆಮ್ಲಜನಕ ಸಂಯುಕ್ತವಾದ ಡಿಹೈಡ್ರೋ ಆಸ್ಕೊರ್ಬಿಕ್ ಆಮ್ಲ ಸಿಹಿಮೂತ್ರ ರೋಗವನ್ನು ಉತ್ತೇಜಿಸುತ್ತದೆ' ಎಂದೂ ಇವರ ಸಂಶೋಧನೆಗಳು ತೋರಿಸಿದವು. ಇವರ ಸಂಶೋಧನೆ ವಿಟಮಿನ್ 'ಸಿ' ಮತ್ತು ಚೋದಕ ಸ್ರಾವಗಳ ನಡುವಿನ ಸಂಬಂಧವನ್ನು ಸ್ಥಾಪಿಸಿತು. ಕ್ಯಾಲಿಕಟ್‌ನಿಂದ ಡಿ.ಎಸ್ಸಿಯ ಸಂಶೋಧನೆ ಮುಗಿಸಿ ಥೀಸೀಸ್ ಒಪ್ಪಿಸಿದರು.

ಭವಾನಿ ಊಟಿಯ ಬಳಿ ಇರುವ ಕೂನೂರ್‌ನ 'ನ್ಯೂಟ್ರಿಷನ್ ರಿಸರ್ಚ್ ಲ್ಯಾಬ್' ಸೇರಿದರು. ಈ ಸಂಶೋಧನಾ ಪ್ರಯೋಗಶಾಲೆ ಕೆಲಕಾಲ ನಂತರ ಹೈದರಾಬಾದಿಗೆ ವರ್ಗವಾಗಿ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯೂಟ್ರಿಷನ್' ಆಗಿ ಬೆಳೆಯಿತು. ವಿಶ್ವ ಆರೋಗ್ಯ ಸಂಸ್ಥೆ ಎಳೆಯ ಮಕ್ಕಳಲ್ಲಿ ಪೋಷಕ ಆಹಾರದ ಕೊರತೆಯನ್ನು ಕುರಿತು ಅಧ್ಯಯನ ತಂಡವನ್ನು ಯೋಜಿಸಿತು. ಈ ಅಧ್ಯಯನ ತಂಡದಲ್ಲಿ ಒಬ್ಬರಾಗಿ ಭವಾನಿ ದುಡಿದರು. ತಾಯಿಯ ಎದೆಹಾಲು ಕುರಿತಂತೆ ಬಹಳಷ್ಟು ತಪ್ಪು ನಂಬಿಕೆಗಳಿದ್ದ ಕಾಲ ಅದು. ಪೋಷಣೆ ಇಲ್ಲದ ತಾಯಿಯ ಎದೆಯಲ್ಲಿ ಹಾಲು ಉತ್ಪನ್ನವಾಗುವುದಿಲ್ಲ. ಉತ್ಪನ್ನವಾದ ಅತಿ ಕಡಿಮೆ ಹಾಲಿನಲ್ಲಿ ಪೋಷಕಾಂಶಗಳಿರುವುದಿಲ್ಲ ಎಂಬ ಭಾವನೆಯಿತ್ತು. ಹೀಗಾಗಿ ಆಫ್ರಿಕಾದಂತಹ ಬಡದೇಶಗಳಲ್ಲಿ ಹಾಲಿನ ಪುಡಿಯನ್ನು ಪುಕ್ಕಟ್ಟೆಯಾಗಿ ಹಂಚತೊಡಗಿದ್ದರು. ಎದೆಹಾಲಿಗೆ ಬದಲು ಬಾಟಲಿ ಹಾಲು, ಡಬ್ಬದ ಹಾಲು ಪ್ರಚಾರ ಪಡೆಯುತ್ತಿದ್ದ ಕಾಲ. 'ತಾಯಿಯ ಎದೆಹಾಲಿಗಿಂತ ಇದು ಶ್ರೇಷ್ಠ' ಎಂಬ ಭಾವ ಮೂಡಿತ್ತು. ವಿಶ್ವ ಆರೋಗ್ಯ ಸಂಸ್ಥೆಯ ಅಧ್ಯಯನ ತಂಡದಲ್ಲಿ ಭಾಗಿಯಲ್ಲಿ ಸಂಶೋಧನೆ ನಡೆಸಿದ ಭವಾನಿಯವರು ಪೋಷಣೆ ಕಾಣದ ತಾಯಿಯ ಎದೆಯಲ್ಲಿಯೂ ಮಗುವಿಗೆ ಬೇಕಾಗುವಷ್ಟು ಹಾಲು ಉತ್ಪತ್ತಿಯಾಗುತ್ತದೆ ಎಂದು ತೋರಿಸಿದರು. ಇವರನ್ನು ಒಳಗೊಂಡ ಸಂಶೋಧನಾ ತಂಡ ತಾಯಿಯ ಎದೆ ಹಾಲಿನ ಪೌಷ್ಟಿಕತೆ ಮತ್ತು ಶ್ರೇಷ್ಠತೆಯನ್ನು ಸಾಬೀತು ಮಾಡಿ ತೋರಿಸಿತು. 'ಇಂದು ಡಬ್ಬದ ಹಾಲಿನ ಮೇಲೆ 'ತಾಯಿಯ ಹಾಲೇ ಶ್ರೇಷ್ಠ' ಎಂದು ಬರೆಯುವುದು ಕಡ್ಡಾಯವಾಗಿದೆ. ಇದರ ಹಿನ್ನೆಲೆಯಲ್ಲಿ ಡಾ.ಭವಾನಿಯವರಂತಹ ವಿಜ್ಞಾನಿಗಳ ಅವಿರತ ಸಂಶೋಧನೆಯ ಶ್ರಮವಿದೆ ಎಂದರೆ

ಉತ್ಪ್ರೇಕ್ಷೆಯಲ್ಲ"[೧]

ಡಾ.ವಿ.ಶುಭಾ :

ಸಿ.ಎಸ್.ಐ.ಆರ್. ಯುವ ವಿಜ್ಞಾನ ಪ್ರಶಸ್ತಿ ಪಡೆದ ಕರ್ನಾಟಕದ ಮಹಿಳಾ ವಿಜ್ಞಾನಿಯೆಂದರೆ ಡಾ.ವಿ.ಶುಭಾ ಒಬ್ಬರೆ. ರಾಷ್ಟ್ರಪತಿಯವರಿಂದ ಪ್ರಶಸ್ತಿ ಪಡೆಯಲು ಹೋದಾಗ, ಪ್ರಶಸ್ತಿ ವಿಜೇತರಲ್ಲಿ ಈಕೆಯೊಬ್ಬರೆ ಮಹಿಳೆ. ತುಂಬು ಕುಟುಂಬದಲ್ಲಿ ಕಡೆಯವರಾಗಿ ಹುಟ್ಟಿದ ಡಾ.ಶುಭಾ ಅವಿವಾಹಿತರಾಗಿ ಉಳಿದವರು. ತಂದೆಯ ಪ್ರೋತ್ಸಾಹದಲ್ಲಿ ಹೆಚ್ಚಿನ ವಿದ್ಯಾಭ್ಯಾಸದ ಕನಸು ಕಂಡವರು. ಭೌತಶಾಸ್ತ್ರದಲ್ಲಿ ಎಂ.ಎಸ್ಸಿ. ಮುಗಿಸಿ ನ್ಯಾಷನಲ್ ಏರೋನಾಟಿಕಲ್ ಲ್ಯಾಬ್‌ನಲ್ಲಿ ಪಿಎಚ್.ಡಿ.ಗೆ ಸೇರಿದರು. ಇವರ ಸಂಶೋಧನಾ ವಿಷಯ 'ಅಧಿಕ ಒತ್ತಡ ಮತ್ತು ತಾಪಮಾನದಲ್ಲಿ ಲೋಹಗಳ ಮತ್ತು ಮಿಶ್ರಲೋಹಗಳ ಎಲೆಕ್ಟ್ರಾನಿಕ್ ಗುಣಲಕ್ಷಣ'ಗಳನ್ನು ಕುರಿತಾಗಿತ್ತು. ಪಿಎಚ್.ಡಿ ಪದವಿಯನ್ನು ಗಳಿಸಿದರು.

ಇವರು 'ಪದಾರ್ಥವಿಜ್ಞಾನ' (Material Science) ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಅತ್ಯಧಿಕ ಒತ್ತಡ ಹಾಗೂ ಶಾಖದಲ್ಲಿ ಕೆಲವು ವಿಶೇಷ ಲೋಹಗಳು, ಮಿಶ್ರಲೋಹಗಳು, ಲೋಹ ಗಾಜುಗಳು, ಅರೆ ನಿರ್ವಾಹಕಗಳು ವರ್ತಿಸುವ ಬಗೆಯನ್ನು ಕುರಿತ ಇವರ ಸಂಶೋಧನೆಗೆ 'ಯುವ ವಿಜ್ಞಾನಿ ಪ್ರಶಸ್ತಿ' ಲಭಿಸಿತು. ಇವರ "ಸ್ಪೆಸಿಫಿಕ್ ಹೀಟ್ ಸಿಸ್ಟಮ್"ನಲ್ಲಿ ತಾಪಮಾನವನ್ನು ನಿಯಂತ್ರಿಸಿ, ವಸ್ತುವೊಂದರ ವಾಹಕತೆ ತಾಪಮಾನದೊಡನೆ ಹೇಗೆ ಬದಲಾಗುತ್ತದೆ' ಎಂದು ಅಧ್ಯಯನ ಮಾಡಬಹುದಾಗಿದೆ. ಒಂದು ವಸ್ತುವು ತಾಪಮಾನ ಏರಿದಂತೆ ಒಂದು ಅವಸ್ಥೆಯಿಂದ ಇನ್ನೊಂದು ಅವಸ್ಥೆಗೆ ಹೇಗೆ ಬದಲಾಗುತ್ತದೆ ಎನ್ನುವುದನ್ನು ಕುರಿತಾಗಿದೆ. ಇವರು ದೇಶಿಯ ವಿನ್ಯಾಸದ ವಿವಿಧ ತಾಪಮಾನ ವಿಶ್ಲೇಷಕವನ್ನು ತಯಾರಿಸಿದ್ದಾರೆ. ಇದರಲ್ಲಿರುವ ಫರ್ನೆಸ್‌ನಲ್ಲಿ ಪ್ರಯೋಗಕ್ಕೆ ಒಳಪಡುವ ವಸ್ತುವನ್ನಿಟ್ಟು ತಾಪಮಾನವನ್ನು ನಿಯಂತ್ರಿತ ರೀತಿಯಲ್ಲಿ ಹೆಚ್ಚಿಸಬಹುದು.

ರಾಸಾಯನಿಕ ಕಾರ್ಖಾನೆಗಳಲ್ಲಿ, ಔಷಧಿ ಕಾರ್ಖಾನೆಗಳಲ್ಲಿ ಇವುಗಳ ಬಹಳಷ್ಟು ಅಳವಡಿಕೆಗಳಿವೆ. 'ಅವಸ್ಥೆ' ಬದಲಾಗುವ ಸೂಕ್ಷ್ಮ ಹಂತದಲ್ಲಿ ವಸ್ತುವೊಂದರ ಗುಣ ವಿಶೇಷಗಳು ಒಂದೇ ಒಂದು ಡಿಗ್ರಿಯಷ್ಟು ತಾಪಮಾನದ ವ್ಯತ್ಯಾಸದಲ್ಲಿಯೂ ಬಹಳಷ್ಟು ಬದಲಾಗಿಬಿಡಬಲ್ಲದು. ಹಾಗಾಗಿ ನಿಖರವಾದ ತಾಪಮಾನ ನಿಯಂತ್ರಣ ಅತ್ಯಗತ್ಯ. ಔಷಧಿಗಳ ಗುಣ ಹೆಚ್ಚಿನ

೧.ನೇಮಿಚಂದ್ರ; ಈ ನೆಲದ ಮಹಿಳಾ ವಿಜ್ಞಾನಿಗಳು, ಪುಟ–೫೫

ತಾಪಮಾನದಲ್ಲಿ ಬದಲಾಗುತ್ತದೆ. ಶುಭಾ ಈ 'ಸ್ಪೆಸಿಫಿಕ್ ಹೀಟ್ ಸಿಸ್ಟಮ್'ನ ವಿನ್ಯಾಸ ವೈರಿಂಗ್ ಎಲ್ಲವನ್ನು ಸ್ವತಃ ಮಾಡಿದ್ದಾರೆ. ಸ್ಪೆಸಿಫಿಕ್ ಹೀಟ್ ಸಿಸ್ಟಮ್‌ನ್ನು ಕಂಪ್ಯೂಟರಿನೊಡನೆ ಜೋಡಿಸಿದ್ದು, ವಿಷಯ ವಿಶ್ಲೇಷಣೆಗೆ ಅನುಕೂಲವಿದೆ. ಅಗ್ಗದ ಇಂತಹ ತಾಪಮಾನ ನಿಯಂತ್ರಕಗಳು ಕಾಲೇಜಿನ ಪ್ರಯೋಗಶಾಲೆಗೂ ಅನುಕೂಲವಾಗುವಂತೆ ವಿನ್ಯಾಸ ಮಾಡಲಾಗಿದೆ.

ಶುಭಾ ಅವರು "ಮ್ಯಾಗ್ನೆಟಿಕ್ ರೆಸೊನೆನ್ಸ್' ಕಂಡು ಹಿಡಿದಾಗ, ಅದು ಮುಂದೊಂದು ದಿನ ಮಿದುಳಿನಾಳದ ಗಡ್ಡೆಗಳನ್ನು ಕಂಡು ಹಿಡಿಯುವ ಅದ್ಭುತ ಸಲಕರಣೆಯಾಗುತ್ತದೆ ಎಂದು ಯಾರು ಕಂಡಿದ್ದರು"

ಒಟ್ಟಾರೆ ಹೇಳುವುದಾದರೆ ೧೫೦ ವರ್ಷಗಳ ಹಿಂದೆ ಭಾರತದಲ್ಲಿ ಮಹಿಳೆಗೆ ವೈದ್ಯರಂಗಕ್ಕೆ ಪ್ರವೇಶವಿರಲಿಲ್ಲ. ೫೦ ವರ್ಷಗಳ ಹಿಂದೆ ಇಂಜಿನಿಯರಿಂಗ್‌ಗೆ ಪ್ರವೇಶವಿರಲಿಲ್ಲ. ೧೯೯೨ರವರೆಗೆ ಸೇನೆಗೆ ಪ್ರವೇಶವಿರಲಿಲ್ಲ, ವಿಜ್ಞಾನರಂಗ ಶತಶತಮಾನಗಳ ಕಾಲ ಮಹಿಳೆಯರಿಗೆ ಬಾಗಿಲು ಮುಚ್ಚಿತ್ತು. ಇಂದು ಹೆಣ್ಣುಮಕ್ಕಳ ಎದುರು ಬಹಳಷ್ಟು ಬಾಗಿಲುಗಳು ತೆರೆದಿವೆ. ಇಂದು ಮಹಿಳಾ ವೈದ್ಯರಿಲ್ಲದ ವೈದ್ಯರಂಗವನ್ನು ಊಹಿಸುವುದು ಅಸಾಧ್ಯವೆನಿಸುತ್ತದೆ. ವಿವಿಧ ರಂಗಗಳಲ್ಲಿ ಸದ್ದಿಲ್ಲದೆ ದುಡಿಯುತ್ತಿರುವ ಮಹಿಳಾ ವೈದ್ಯರು, ವಿಜ್ಞನಿಗಳು ನಮಗೆ ಮಾದರಿಗಳಾಗಬಲ್ಲರು. ಈ ನಿಟ್ಟಿನಲ್ಲಿ ತೆರೆಮರೆಯಲ್ಲಿರುವ ಅನೇಕ ಮಹಿಳಾ ವೈದ್ಯರನ್ನು, ವಿಜ್ಞಾನಿಗಳು ಅವರ ಸಾಧನೆಗಳನ್ನು ಸಮಾಜಕ್ಕೆ ಪರಿಚಯಿಸಿದ ಕೀರ್ತಿ ನೇಮಿಚಂದ್ರರಿಗೆ ಸಲ್ಲುತ್ತದೆ ಎಂದರೆ ತಪ್ಪಾಗಲಾರದು.

ವಿಜ್ಞಾನ ರಂಗದಲ್ಲಿ ಸಾಧನೆ ಮಾಡಿದ ಮಹಿಳೆಯರು :

ಮರಿಯಾ ಗೋಪರ್ಟ್ ಮೇಯರ್ :

ನೊಬೆಲ್ ಪ್ರಶಸ್ತಿಯ ಇತಿಹಾಸದಲ್ಲಿಯೇ ಸಂಬಳವಿಲ್ಲದೇ ಸ್ವಯಂಸೇವಕಳಾಗಿ ವಿಜ್ಞಾನರಂಗದಲ್ಲಿ ಮೂವತ್ತು ವರ್ಷಗಳ ಕಾಲ ದುಡಿದ ಅದ್ಭುತ ದಾಖಲೆ ಮರಿಯಾಳದು. ಮರಿಯಾ ತರಗತಿಗಳಲ್ಲಿ ಪಾಠ ಮಾಡಿದ್ದಳು. ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ್ದಳು. ವಿಶ್ವವಿದ್ಯಾಲಯದ ಆಯೋಗಗಳಲ್ಲಿ ಸೇವೆ ಸಲ್ಲಿಸಿದ್ದಳು. ನೂರಾರು ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಳು. ಆದರೆ ಯಾವುದಕ್ಕೂ ಆಕೆ ಸಂಬಳ ತಗೊಂಡವಳಲ್ಲ.

'ಕ್ವಾಟಂ ಮೆಕಾನಿಕ್ಸ್' ಬಹುಶಃ ಇಪ್ಪತ್ತನೆ ಶತಮಾನದ ದೊಡ್ಡ ಬೌದ್ಧಿಕ ಸಾಧನೆ. ಕ್ವಾಟಂ ಮೆಕಾನಿಕ್ ಪರಮಾಣುಗಳ ಬೀಜಗಳ ವರ್ತನೆಯನ್ನು ವಿವರಿಸುವ ಅದ್ಭತ ರಂಗ. ಮರಿಯಾ ಗಣಿತವನ್ನು ಓದಲೆಂದು ವಿಶ್ವವಿದ್ಯಾಲಯ ಪ್ರವೇಶಿಸಿದ್ದಳು. ಆದರೆ ಕ್ವಾಟಂ ಮೆಕಾನಿಕ್ಸ್ ರುಚಿ ಹತ್ತಿಸಿಕೊಂಡ ಮರಿಯಾ ಭೌತಶಾಸ್ತ್ರಜ್ಞಳಾದಳು. ಈಕೆ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ

ಪಿಎಚ್.ಡಿ ಪಡೆದು ಬಂದಿದ್ದ ಜೋಸೆಫ್ ಮೇಯರ್‌ನನ್ನು ವಿವಾಹವಾದಳು. ಮರಿಯಾಳ ಬದುಕಿನುದ್ದಕ್ಕೂ ಜೋಸೆಫ್ ಒತ್ತಾಸೆಯಾಗಿದ್ದು, ವಿಜ್ಞಾನರಂಗದಲ್ಲಿ ಮುಂದುವರೆಯುವಂತೆ ಪ್ರೋತ್ಸಾಹ, ಬೆಂಬಲ, ಸಹಕಾರ ಎಲ್ಲವನ್ನೂ ನೀಡಿದ್ದನು.

ಎರಡನೇ ಮಹಾಯುದ್ಧದ ದಿನಗಳು ಈ ಯುದ್ಧ ಹೆಚ್ಚು ಕಡಿಮೆ ಭೌತಶಾಸ್ತ್ರಜ್ಞರ ಯುದ್ಧದಂತಿತ್ತು. ಭೌತಶಾಸ್ತ್ರಜ್ಞರು ರಡಾರು ಕಂಡು ಹಿಡಿದಿದ್ದರು. ಜರ್ಮನಿಯ ಬಾಂಬ್ ದಾಳಿಯಿಂದ ಬ್ರಿಟನ್‌ನ್ನು ರಡಾರ್ ರಕ್ಷಿಸಿತ್ತು. ಹಾಗೆಯೇ ಭೌತಶಾಸ್ತ್ರಜ್ಞರು ಮಹಾಯುದ್ಧವನ್ನು ಮುಗಿಸಿದ ಪರಮಾಣು ಬಾಂಬನ್ನು ಕಂಡು ಹಿಡಿದರು. ಈ ಯುದ್ಧದ ದಿನಗಳಲ್ಲಿ ಭೌತಶಾಸ್ತ್ರಜ್ಞರಿಗೆ ಎಷ್ಟು ಬೇಡಿಕೆ ಇತ್ತೆಂದರೆ, ಮಹಿಳೆಯಾದರೂ ಮರಿಯಾಗೂ ಒಂದು ಕೆಲಸ ಸಿಕ್ಕಿತ್ತು.

ಮರಿಯಾ ಮತ್ತು ಆಕೆಯ ಪತಿ ಶಿಕಾಗೋಗೆ ಬಂದಾಗ ಮರಿಯಾಗೆ ಮೊಟ್ಟಮೊದಲಿಗೆ ವಿಜ್ಞಾನ ರಂಗದಲ್ಲಿ ತೆರೆದ ಹೃದಯದ ಸ್ವಾಗತ ಸಿಕ್ಕಿತು. ಮರಿಯಾ ಚಿಕಾಗೋ ವಿಶ್ವವಿದ್ಯಾಲಯದ 'ನ್ಯೂಕ್ಲಿಯರ್ ಅಧ್ಯಯನ ಸಂಸ್ಥೆ'ಯನ್ನು ಸೇರಿ ಎನ್ರಿಕೋ ಫರ್ಮಿಯ ಮಾರ್ಗದರ್ಶನದಲ್ಲಿ ನ್ಯೂಕ್ಲಿಯರ್ ಭೌತಶಾಸ್ತ್ರದಲ್ಲಿ ಆಸಕ್ತಳಾದಳು. ಆನಂತರ ಅಗೋಳನ್ ರಾಷ್ಟ್ರೀಯ ಪ್ರಯೋಗಶಾಲೆಯಲ್ಲಿ ಕೆಲಸ ಸಿಕ್ಕಿತು. ಮರಿಯಾಳ ಆಸಕ್ತಿ ಪರಮಾಣು ಬೀಜದ ಸ್ಥಿರತೆಯತ್ತ (Nuclear stability) ಹರಿದಿತ್ತು. ಪರಮಾಣು ಬೀಜದಲ್ಲಿ ಪ್ರೋಟಾನುಗಳು, ನ್ಯೂಟ್ರಾನುಗಳು 'ಶೆಲ್ ಮಾದರಿ'ಯಲ್ಲಿ ಜೋಡಿಸಲ್ಪಟ್ಟಿವೆ ಎಂದು ಊಹಿಸಿ ಪರಮಾಣು ಬೀಜದೊಳಗಿನ ರಚನೆಗೆ ಮಾದರಿಯೊಂದನ್ನು ಮುಂದಿಟ್ಟ ಈಕೆಯ ಈ ಮಹತ್ತರದ ಅನ್ವೇಷಣೆ ಕ್ರಾಂತಿಯಾಗಿತ್ತು. ಈ ಕ್ರಾಂತಿಕಾರಿ ಅನ್ವೇಷಣೆಯ ಹತ್ತು ವರ್ಷಗಳ ನಂತರ ಐವತ್ತಮೂರು ವರ್ಷಕ್ಕೆ ಮರಿಯಾಗೆ ಸಂಬಳದ ಪ್ರೊಫೆಸರ್ ಹುದ್ದೆ ದೊರಕಿತ್ತು. ನಂತರ ಮರಿಯಾ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದಳು.

ಕ್ರೆಸ್ಟೀನ್ ಮಸ್‌ಲಾಯ್ನ್ ವೋಲ್ ಹಾರ್ಡ್ :

ವೈದ್ಯರಂಗದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ ಕ್ರೀಸ್ಟೀನ್ ಮಸ್‌ಲಾಯ್ನ್. ಜಗತ್ತಿನ ಮುಂಚೂಣಿಯ ವಂಶವಾಹಿ ತಜ್ಞರಲ್ಲಿ ಕ್ರಿಸ್ಟೀನ್ ಒಬ್ಬಳು. ಈಕೆಯ ಸಂಶೋಧನೆ ಹಣ್ಣಿನ ಕೀಟಗಳ ವಂಶವಾಹಿಗಳನ್ನು ಕುರಿತಾದ್ದಾಗಿದೆ. ಹಣ್ಣಿನ ಕೀಟಗಳ ವಿಕಾಸವನ್ನು ನಿರ್ದೇಶಿಸುವ ವಂಶವಾಹಿಯನ್ನು ಕಂಡು ಹಿಡಿದುದಲ್ಲದೆ, ಮನುಷ್ಯನೂ ಸೇರಿದಂತೆ ಇತರ ಪ್ರಾಣಿಗಳ ವಿಕಾಸವನ್ನು ನಿರ್ದೇಶಿಸುವ ವಂಶವಾಹಿಗಳನ್ನು ಈಕೆ ಕಂಡು ಹಿಡಿದಳು. ಈಕೆಯ ಸಂಶೋಧನೆಯಿಂದ ವಿಜ್ಞಾನಿಗಳು ಜೀವವಿಕಾಸವನ್ನು ನೋಡುತ್ತಿದ್ದ ದೃಷ್ಟಿಯನ್ನೇ ಬದಲಿಸಿದೆ. ಹಣ್ಣಿನಲ್ಲಿರುವ ಕೀಟದ ಭ್ರೂಣಗಳ ವಿಕಾಸಕ್ಕೆ ಕಾರಣವಾಗುವ ವಂಶವಾಹಿಗಳನ್ನು ಗುರುತಿಸಿದ ಸಂಶೋಧನೆಗಳಿಂದ ಇದೇ

ಬಗೆಯ ವಂಶವಾಹಿಗಳು ಮಾನವನೂ ಸೇರಿದಂತೆ ಬೇರೆ ಬೇರೆ ಪ್ರಾಣಿಗಳಲ್ಲೂ ಗುರುತಿಸಲು ಸಾಧ್ಯವಾಯಿತು. ಈ ಕಾರಣದಿಂದ ಹುಟ್ಟಿನಿಂದ ಬಂದ ಊನಗಳನ್ನು, ಕೆಲವು ತರಹದ ಸಹಜ ಗರ್ಭಪಾತಗಳನ್ನು ವಿವರಿಸಲು ಸಹಾಯಕವಾಗಿದೆ.

ಜರ್ಮನಿಯ ವಿಜ್ಞಾನಿ ಕ್ರಿಸ್ಟೀನ್ ಮಸಲಾಯ್ನ್ ಜೀವಶಾಸ್ತ್ರದಲ್ಲಿ ಓದು ಮುಂದುವರೆಸಿ ಸಂಶೋಧಕಿಯಾಗಬೇಕೆಂದು ನಿರ್ಧರಿಸಿ, ೧೯೭೮ರಲ್ಲಿ ಟ್ಯೂಬಿನ್‌ಗೆನ್ ವಿಶ್ವವಿದ್ಯಾಲಯ ಹೊಸದಾಗಿ ಜೀವರಸಾಯನಶಾಸ್ತ್ರವನ್ನು ಕಲಿಸಲು ಆರಂಭಿಸಿದಾಗ ಕ್ರಿಸ್ಟೀನ್ ಅಲ್ಲಿಗೆ ಹೋಗಿ ಸೇರಿಕೊಂಡಳು. ಕ್ರಿಸ್ಟಿನ್ 'ಮೈಕ್ರೋಬಯಲಾಜಿ' ಮತ್ತು 'ಜೆನಿಟಿಕ್ಸ್' ವಿಷಯಗಳನ್ನು ಪರಿಚಯ ಮಾಡಿಕೊಂಡು ಅಧ್ಯಯನ ಮುಂದುವರೆಸಿದಳು.

ಕೀಟದ ವಿಕಾಸವನ್ನು ಕುರಿತು ಸಂಶೋಧನೆ ಮಾಡಿಭ್ರೂಣದ ಮೊದಲ ಹಂತದ ಬೆಳವಣಿಗೆಯನ್ನು ನಿರ್ದೇಶಿಸುವ ಹನ್ನೆರಡಕ್ಕೂ ಹೆಚ್ಚಿನ ವಂಶವಾಹಿಗಳನ್ನು ಗುರುತಿಸಿದ್ದರು. ಡಾ.ಡಬ್ಲ್ಯೂ ಗೇರಿಂಗ್ ಅವರ ಪ್ರಯೋಗಶಾಲೆಯಲ್ಲಿ ವಿಜ್ಞಾನಿ ಎರಿಕ್ ವಿಶಾನ್ಸ್‌ನನ್ನು ಭೇಟಿಯಾಗಿದ್ದಳು. ಜೀವರಸಾಯನ ಶಾಸ್ತ್ರದಲ್ಲಿ ತರಬೇತು ಪಡೆದ ಕ್ರೀಸ್ಟಿನ್ ಹಣ್ಣಿನ ಕೀಟದ ವಿಕಾಸದ ವಂಶವಾಹಿಯನ್ನು ಕುರಿತು ತಿಳಿಯಲು ಇಲ್ಲಿಗೆ ಬಂದಿದ್ದಳು. ಈ ಸಮಾನ ಆಸಕ್ತಿಯ ಈ ಇಬ್ಬರು ವಿಜ್ಞಾನಿಗಳ ಸ್ನೇಹಸಂಬಂಧ ರೂಪುಗೊಂಡಿತು. ಇವರಿಬ್ಬರ ಆಸಕ್ತಿ 'ಡ್ರಸಾಫಲ್' ಹಣ್ಣಿನ ಕೀಟವನ್ನು ಅಧ್ಯಯನ ಮಾಡುವುದಾಗಿತ್ತು. ಇದಲ್ಲದೆ ಕೆಲವು ವಂಶವಾಹಿಗಳು ವಿಕೃತಿಗೊಂಡಾಗ (Mutation) ದೇಹದ ನಿರ್ದಿಷ್ಟ ಭಾಗಗಳೇ ಇಲ್ಲವಾಗುವುದನ್ನು ಕಂಡುಕೊಂಡರು. ಸಾವಿರಾರು ಹಣ್ಣಿನ ನೊಣಗಳನ್ನು ಅಧ್ಯಯನ ವಿಕಾಸನೀಯ ವಂಶವಾಹಿಗಳನ್ನು ಗುರುತಿಸಲಾಯಿತು. ಈ ಮೂಲಕ ಬೇರೆ ಬೇರೆ ಬಗೆಯ ವ್ಯತ್ಯಾಸಕ್ಕೆ ಕಾರಣವಾದ ವಂಶವಾಹಿಯನ್ನು ನಿಖರವಾಗಿ ಗುರುತಿಸಲು ಸಾಧ್ಯವಾಯಿತು.

ಈ ವಿಜ್ಞಾನಿಗಳ ಸಂಶೋಧನೆ ದೇಹವಿಕಾಸದ ನಕಾಶೆ ಹಾಗೂ ವಿಕಾಸವನ್ನು ನಿರ್ದೇಶಿಸುವ ಜೆನಿಟಿಕ್ ಸಾಧನಗಳು ಎಲ್ಲಾ ಪ್ರಾಣಿಗಳಲ್ಲೂ ಒಂದೇ ಎಂಬುದನ್ನು ತೋರಿಸಿತು. ಮಾನವರಲ್ಲಿ ಅನೇಕ ವಂಶವಾಹಿ ಊನಗಳನ್ನು ಮುಂದೊಂದು ದಿನ 'ಜೀನ್ ಥೆರಪಿ' ಅಂದರೆ ವಂಶವಾಹಿ ಚಿಕಿತ್ಸೆಯ ಮೂಲಕ ಸರಿಪಡಿಸುವ ಸಾಧ್ಯತೆಯನ್ನು ಇವರ ಸಂಶೋಧನೆ ಊಹಿಸಿದೆ.

ಗರಟ್ರೂಡ್ ಇಲಿಯನ್ :

ಗರಟ್ರೂಡ್ ಇಲಿಯನ್ ಔಷಧ ತಯಾರಿಕಾ ರಂಗದಲ್ಲಿ ಕ್ರಾಂತಿ ತಂದ ವಿಜ್ಞಾನಿ. ತಾತನನ್ನು, ಪ್ರಿಯಕರನನ್ನು ವಾಸಿ ಮಾಡದ ರೋಗಕ್ಕೆ ಕಳೆದುಕೊಂಡಿದ್ದ ಇಲಿಯನ್ ಕ್ಯಾನ್ಸರಿಗೊಂದು ಔಷಧ ಕಂಡು ಹಿಡಿಯುವುದು ಸಂಶೋಧನೆಯ ಗುರಿಯಾಯಿತು. ಕ್ಯಾನ್ಸರ್ ಚಿಕಿತ್ಸೆಗಾಗಿ ೬ ಎಂ.ಪಿ

(6 Mercaptopurine) ಎಂಬ ಹೊಸ ಸಂಯುಕ್ತವನ್ನು ಕಂಡು ಹಿಡಿದಳು. ೬ ಎಂ.ಪಿ. ಔಷಧಕ್ಕೆ ನಿಕಟವಾದ ಥಿಯೋಗ್ವಾನೀನ್ ಅನ್ನೂ ತಯಾರಿಸಿದಳು. ೬ ಎಂ.ಪಿ. ಅಥವಾ ಥಿಯೋಗ್ವಾನೀನ್ ಅನ್ನು ಇತರ ಔಷಧಗಳೊಂದಿಗೆ ಬೆರೆಸಿ ರಕ್ತದ ಕ್ಯಾನ್ಸರಿನ ಮಕ್ಕಳಿಗೆ ಚಿಕಿತ್ಸೆ ಮಾಡಿದಾಗ, ರೋಗವನ್ನು ಸಮರ್ಥವಾಗಿ ತಡೆಗಟ್ಟುವುದು ಸಾಧ್ಯವಾಯಿತು. ಇಂದು ಶೇಖಡ ೮೦ರಷ್ಟು ಮಕ್ಕಳಲ್ಲಿ ರಕ್ತದ ಕ್ಯಾನ್ಸರನ್ನು ವಾಸಿ ಮಾಡಲು ಸಾಧ್ಯವಾಗಿದೆ.

ಔಷಧ ಸಂಶೋಧನೆಯಲ್ಲಿ ಕೆಲಸ ಮಾಡುತ್ತಿರುವ ಅಪ್ರತಿಮ ವ್ಯಕ್ತಿ ಇಲಿಯನ್. ಇಲಿಯನ್ ಡಾಕ್ಟರೇಟ್ ಪದವಿ ಇಲ್ಲದೆಯೂ ನೊಬೆಲ್ ಪ್ರಶಸ್ತಿ ಪಡೆದ ಅಪರೂಪದ ವಿಜ್ಞಾನಿ. ರಕ್ತದ ಕ್ಯಾನ್ಸರ್‌ಗೆ ಚಿಕಿತ್ಸೆ ಕಂಡು ಹಿಡಿದಾಕೆ. ದೇಹದ ಅಂಗಗಳ ಕಸಿಯನ್ನು ಸಾಧ್ಯವಾಗಿಸಿದಾಕೆ. ಸಂಧಿವಾತ, ಹರ್ಪಿಸ್ ಮಲೇರಿಯಾ, ಮೂತ್ರ ಮತ್ತು ಶ್ವಾಸಕೋಶಗಳಿಗೆ ಸಂಬಂಧಿಸಿದ ಸೋಂಕು ರೋಗಗಳಿಗೆ ಹೊಸ ಚಿಕಿತ್ಸಾ ವಿಧಾನಗಳ ಬಾಗಿಲು ತೆರೆದಾಕೆ. ಮೊಟ್ಟ ಮೊದಲ ವೈರಸ್ ವಿರೋಧಿ ಔಷಧವನ್ನು ಕಂಡು ಹಿಡಿದ ಈಕೆಯ ಸಂಶೋಧನೆಗಳು ಮುಂದುವರೆದು, ಏಡ್ಸ್ ರೋಗದ ಮೊಟ್ಟ ಮೊದಲ ಔಷಧವಾದ 'ಎ, ಸೆಟ್.ಟಿ' ತಯಾರಿಸಲು ಕಾರಣವಾಯಿತು. ಈಕೆಯ ಸಂಶೋಧನೆ ಮತ್ತು ಔಷಧ ತಯಾರಿಕೆಯಿಂದ ಜೀವ ಪಡೆದ ಸಹಸ್ರ ಸಹಸ್ರ ಜನ ಕೃತಜ್ಞತೆ ಅರ್ಪಿಸಿದ್ದಾರೆ.

ಅಮೆರಿಕಾದ ವಿಜ್ಞಾನಿ ಇಲಿಯನ್‌ಗೆ ಜೀವ ರಸಾಯನಶಾಸ್ತ್ರ (Bio Chemistry) ಒಂದು ಅಮೂರ್ತ ವಿಜ್ಞಾನ ಶಾಖೆಯಾಗಿರಲಿಲ್ಲ. ಪ್ರತಿರೋಗಕ್ಕೆ ಔಷಧ ಕಂಡು ಹಿಡಿಯುವ ಸತತ ಶೋಧನೆಯ ಜೀವಂತರಂಗವಾಗಿತ್ತು. ಇಲಿಯನ್ ರಸಾಯನಶಾಸ್ತ್ರದ ಸಂಶೋಧನಾ ರಂಗವನ್ನು ಪ್ರವೇಶಿಸುವ ಮೊದಲು ಹಲವು ವರ್ಷಗಳ ಕಾಲ ಶಾಲೆಯಲ್ಲಿ ಪಾಠ ಹೇಳಿಕೊಟ್ಟಿದ್ದಳು. ಕೆಲಸಕ್ಕಾಗಿ ಆಪ್ತಕಾರ್ಯದರ್ಶಿಯ ತರಬೇತು ಪಡೆದಿದ್ದಳು. ಪುರುಷ ರಸಾಯನಶಾಸ್ತ್ರಜ್ಞರ ಸಂಖ್ಯೆ ಕಡಿಮೆಯಾಗಿ ಈ ಮಹಿಳೆಗೆ ಮೊದಲ ಬಾರಿಗೆ ಸಂಶೋಧನೆಯತ ಅವಕಾಶ ದೊರೆಯಿತು. ಏಳು ವರ್ಷಗಳ ಕಾಲ ಈ ಪ್ರತಿಭಾವಂತ ಪದವೀಧರೆ ಸಣ್ಣಪುಟ್ಟ ತಾತ್ಕಾಲಿಕ ಹುದ್ದೆಗಳಲ್ಲಿ ದುಡಿಯುತ್ತಾ ಒಂದಿಷ್ಟು ಅನುಭವವನ್ನು ಕೂಡಿಸುತ್ತಾ, ಇಷ್ಟಷ್ಟೇ ಅಂಗುಲ ಅಂಗುಲವಾಗಿ ರಸಾಯನಶಾಸ್ತ್ರದ ಸಂಶೋಧನೆಯತ್ತ ಮುಂದುವರೆದಳು.

ಪ್ರಯೋಗಶಾಲೆಯಲ್ಲಿ ಕೆಲಸ ಮಾಡಲು ಲಭ್ಯವಿದ್ದ ಪುರುಷ ರಸಾಯನಶಾಸ್ತ್ರಜ್ಞರ ಸಂಖ್ಯೆ ಸಣ್ಣದಾಗಿತ್ತು. ತಟ್ಟನೆ ಮಹಿಳಾ ವಿಜ್ಞಾನಿಗಳಿಗೆ ಅವಕಾಶಗಳ ಬಾಗಿಲು ತೆರದವು. ಇಲಿಯನ್ ಬರೋಸ್ ವೆಲ್ಕಮ್ ಔಷಧ ಕಂಪನಿಯನ್ನು ಸೇರಿದಳು. ರಕ್ತದ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಹೊಸದೇ ದಿಗಂತವನ್ನು ತೆರೆದಿದ್ದಳು. '೬ಎಂ.ಪಿ.ಸುಧಾರಿತ ರೂಪವಾದ 'ಇಮ್ಯುರಾನ್' ದೇಹದ ಅಂಗಗಳ ಕಸಿಯನ್ನು ಸಾಧ್ಯವಾಗಿಸಿತು'೮ ವಿಜ್ಞಾನಿಗಳು ವೈರಸ್ ವಿರೋಧಿ ಔಷಧವನ್ನು ಕಂಡು ಹಿಡಿಯಲು

ಸಾಧ್ಯವೇ ಇಲ್ಲ ಎಂದು ಗಟ್ಟಿಯಾಗಿ ನಂಬಿದ್ದ ಕಾಲದಲ್ಲಿ ಇಲಿಯನ್ ವೈರಸ್‌ಗಳು ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವ 'ಅನಿಕ್ಲೋನೀರ್' ಎಂಬ ಸಂಯುಕ್ತವನ್ನು ಕಂಡು ಹಿಡಿದಳು. ಅನೇಕ ಸಂಶೋಧನೆಗಳನ್ನು ನಡೆಸಿ, ೨೨೫ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸಿದಳು. ಎಪ್ಪತ್ತನೇ ವಯಸ್ಸಿನಲ್ಲಿ ಇಲಿಯನ್‌ಗೆ ನೊಬೆಲ್ ಪ್ರಶಸ್ತಿ ಲಭಿಸಿತು.

ಡರೋತಿ ಕ್ರೊಫುಟ್ ಹಾಜ್ಕಿನ್ :

ಅಸಾಧ್ಯವನ್ನು ಸಾಧ್ಯವಾಗಿಸುವ ಛಲದ ವಿಜ್ಞಾನಿ ಡರೋತಿ ಕ್ರೊಫುಟ್ ಹಾಜ್ಕಿನ್. ವಿಜ್ಞಾನದ ಸರಹದ್ದಿನಲ್ಲಿ ದುಡಿದ ಈ ವಿಜ್ಞಾನಿ, ಒಂದಾದ ಮೇಲೊಂದು ಮಹತ್ತರದ ಅನ್ವೇಷಣೆಗಳನ್ನು ಮಾಡಿದಳು. ದೇಹದಲ್ಲಿ ಕೆಂಪು ರಕ್ತಕಣಗಳನ್ನು ತಯಾರಿಸಲು ಬೇಕಾದ ವಿಟಮಿನ್ ಬಿ೧೨ ದೊರೆಯದ ಜನ, ಹಾನಿಕರ ರಕ್ತಹೀನತೆಯಿಂದ ಸಾಯುತ್ತಾರೆ. ಆದರೆ ಬಿ೧೨ ರಚನೆ ವಿಪರೀತ ಸಂಕೀರ್ಣದ್ದು, ಇದರ ಸಂಪೂರ್ಣ ರಚನೆ ತಿಳಿದು ಬಂದರೆ, ಈ ಜೀವ ಉಳಿಸುವ ವಿಟಮಿನ್ ರಚನೆಯನ್ನು ಕಂಡು ಹಿಡಿಯುವುದು ಸುಲಭದ ಮಾತಾಗಿರಲಿಲ್ಲ. 'ಡರೋತಿಯ ಸೂಕ್ಷ್ಮ ಅರಿವು, ಒಳನೋಟ, ಮೂರು ಆಯಾಮದಲ್ಲಿ ಪರಮಾಣುಗಳ ಜೋಡಣೆಯನ್ನು ಊಹಿಸುವಲ್ಲಿದ್ದ ಅಗಾಧ ಕಲ್ಪನೆ, ಅಷ್ಟೇ ಮುಖ್ಯವಾದ ಆಕೆಯ ಗಣಿತದ ಮೇಲಿನ
ಹಿಡಿತ, ಆಕೆಯ ಈ ಮಹತ್ತರದ ಸಾಧನೆಗೆ ಕಾರಣವಾಗಿದ್ದವು'[೧]

ಪೆನ್ಸಿಲಿನ್ ರಚನೆಯನ್ನು ಕಂಡು ಹಿಡಿದಳು. ನಂತರದ ದಿನಗಳಲ್ಲಿ ಹಾನಿಕರ ರಕ್ತಹೀನತೆಯ ರೋಗ 'ಅನೀಮಿಯಾ'ವನ್ನು ವಾಸಿ ಮಾಡುವ ವಿಟಮಿನ್ ಬಿ೧೨ರ ಸಂಕೀರ್ಣ ರಚನೆಯನ್ನು ಕಂಡು ಹಿಡಿದು, ಸಿಹಿ ಮೂತ್ರ ರೋಗಿಗಳಿಗೆ ಜೀವದಾನ ಮಾಡಿದ ಇನ್ಸುಲಿನ್‌ನ ರಚನೆಯನ್ನೂ ತೆರೆದಿಟ್ಟಳು. ಇತರರು ಇದು ಅಸಾಧ್ಯ ಎಂದು ಕೈಬಿಟ್ಟ ಯೋಜನೆಗಳನ್ನು ಡರೋತಿ ಎತ್ತಿಕೊಂಡಿದ್ದಳು. ಅಗಾಧ ಕಲ್ಪನೆ, ಸತತ ಶ್ರಮ, ಮಿಂಚಿದ ಪ್ರತಿಭೆಯಿಂದ ಡರೋತಿ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿದು ಸ್ಫಟಿಕಶಾಸ್ತ್ರದ (Crytallography) ತಾಂತ್ರಿಕ ಸಾಮರ್ಥ್ಯವನ್ನು ವೈಜ್ಞಾನಿಕ ಸಲಕರಣೆಯಾಗಿ ಪರಿವರ್ತಿಸಿದಳು. ಪರಮಾಣು ರಚನೆಯ ಸಹಾಯದಿಂದ ಜೀವಶಾಸ್ತ್ರೀಯ ಕ್ರಿಯೆಯನ್ನು ವಿವರಿಸಲು, ಸಮಕಾಲೀನ ವಿಜ್ಞಾನದ ಪ್ರಮುಖ ಗುಣಲಕ್ಷಣಗಳನ್ನು ಸ್ಥಾಪಿಸಲು ಸಹಾಯ ಮಾಡಿದಳು.

೧.ನೇಮಿಚಂದ್ರ; ಶತಮಾನದ ಮಹಿಳಾ ವಿಜ್ಞಾನಿಗಳು, ಪುಟ–೭೭

ಪೆನ್ಸಿಲಿನ್ ಕಂಡು ಹಿಡಿಯುವ ಮೊದಲು ಒಂದು ಗುಲಾಬಿಯ ಮುಳ್ಳು ಗೀಚಿದ್ದೂ ಕೂಡ ಜೀವಕ್ಕೆ ಅಪಾಯಕಾರಿಯಾಗಬಹುದಿತ್ತು. ಆದ ಕಾರಣ ಬ್ಯಾಕ್ಟೀರಿಯಾದ ಸೋಂಕು ತಡೆಗಟ್ಟಬಲ್ಲ ಔಷಧಿಯ ತೀವ್ರ ಅಗತ್ಯವಿತ್ತು. ಪೆನ್ಸಿಲಿನ್‌ನ ಅಣುರಚನೆಯನ್ನು ಕಂಡು ಹಿಡಿದರೆ, ಅದನ್ನು ಸುಲಭವಾಗಿ ದೊಡ್ಡ ಪ್ರಮಾಣದಲ್ಲಿ ತಯಾರಿಸಬಹುದು ಎಂಬುದು ಆಕೆಯ ಉದ್ದೇಶವಾಗಿತ್ತು. ಅತ್ಯಂತ ಜಟಿಲವಾಗಿ ಬಿಡಿಸಲಾಗದ ಒಗಟಿನಂತಿದ್ದ ಪೆನ್ಸಿಲಿನ್ ಅಣುರಚನೆಯನ್ನು ಕಂಡುಹಿಡಿದಳು.

ಆಕ್ಸ್‌ಫರ್ಡ್‌ನಲ್ಲಿ ಡರೋತಿಗೆ ತನ್ನ ಸಂಶೋಧನೆಗೆ ದೊರೆತದ್ದು ನೆಲಮಾಳಿಗೆಯಲ್ಲಿದ್ದ ಒಂದು ಹಳೆಯ ಪ್ರಯೋಗಶಾಲೆ. ಅದರ ತುಂಬಾ ಮಧ್ಯಕಾಲೀನ ಪುರಾತತ್ವ ವಸ್ತುಗಳು, ಸರೀಸೃಪಗಳ ಅಸ್ತಿಪಂಜರಗಳು. ನೆಲದಿಂದ ಮೇಲೆ ಅಷ್ಟೇತ್ತರದಲ್ಲಿದ್ದ ಪುರಾತನ ಕಿಟಕಿಗಳು, ಇಂಥ ಕೋಣೆಯಲ್ಲಿ ಡರೋತಿ ಕೀಲುರಿತದ ಒಂದು ಕೈಯಲ್ಲಿ ತನ್ನ ಅಮೂಲ್ಯ ಸ್ಪಟಿಕಗಳನ್ನು ಹಿಡಿದು ಇನ್ನೊಂದು ಕೈಯಲ್ಲಿ ಏಣಿಯನ್ನು ಹಿಡಿದು ಮೇಲಿನ ಕಿಟಕಿಯನ್ನು ತಲುಪಿ, ಆ ಬೆಳಕಿನಲ್ಲಿ ಸೂಕ್ಷ್ಮದರ್ಶಕದ ಅಡಿಯಲ್ಲಿ ಸ್ಪಟಿಕಗಳನ್ನು ಅಧ್ಯಯನ ಮಾಡುತ್ತಿದ್ದಳು. ಅಸ್ತ್ರಗಳ ನಿಷೇಧ ಮತ್ತು ವಿಶ್ವಶಾಂತಿ ನಮ್ಮ ಮೊದಲ ಆದ್ಯತೆಯಾಗಬೇಕೆಂದು ಡರೋತಿ ಶಾಂತಿ ಸಂಸ್ಥೆಗಳಲ್ಲಿ ಕೆಲಸ ಮಾಡಿದಳು. ತನ್ನ ಸಂಶೋಧನೆಯ ಬದುಕಿನ ಅತ್ಯಂತ ಕಠಿಣ ಸಂಶೋಧನೆಯಾದ ಇನ್ಸುಲಿನ್‌ನ ೨೨೨ ಪರಮಾಣುಗಳೊಡನೆ ದುಡಿಯುತ್ತಿದ್ದಳು. ಇನ್ಸುಲಿನ್ ರಚನೆ ಅದೆಷ್ಟು ಸಂಕೀರ್ಣ ಮತ್ತು ಅನಿಯಮಿತವಿತ್ತು ಎಂದರೆ ಅದನ್ನು ಕಂಡು ಹಿಡಿಯುವುದು ಸುಲಭದ್ದಾಗಿರಲಿಲ್ಲ. ಆದರೂ ಡರೋತಿ ಇನ್ಸುಲಿನ್ ರಚನೆಯನ್ನು ಕಂಡು ಹಿಡಿದಳು. "ಹೆಳವಳಾಗಿ ಗಾಲಿ ಕುರ್ಚಿಗೆ ಅಂಟಿದರೂ ಬದುಕಿನ ಕೊನೆಯವರೆಗೂ ವೈಜ್ಞಾನಿಕ ಹಾಗೂ ಶಾಂತಿ ಸಭೆಗಳಿಗೆ ದೇಶ ವಿದೇಶಗಳಿಗೆ ಪ್ರವಾಸ ಮಾಡಿ ಭಾಗವಹಿಸಿದಳು. ರಸಾಯನಶಾಸ್ತ್ರದ ನೊಬೆಲ್ ಪ್ರಶಸ್ತಿ ದೊರೆಯಿತು.

ಬಾರ್ಬರ ಮ್ಯಾಕ್ ಕ್ಲಿಂಟಾಕ್ :

ಅಮೆರಿಕಾದ ಪ್ರಸಿದ್ಧ ಸಸ್ಯ ಜೀವಶಾಸ್ತ್ರಜ್ಞೆ, ಅತ್ಯಂತ ಪ್ರತಿಭಾವಂತ ವಿಜ್ಞಾನಿಗೆ, ಮಹಿಳೆ ಎಂಬ ಒಂದೇ ಕಾರಣಕ್ಕೆ ಕೆಲಸ ದೊರೆಯುವಂತಿರಲಿಲ್ಲ. ಬಾರ್ಬರ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಣ್ಣ ಅವಧಿಯ ಫೆಲೋಷಿಪ್ ಪಡೆದು ತನ್ನ ಸಂಶೋಧನೆಯನ್ನು ಏಕಾಂಗಿಯಾಗಿ ಮುಂದುವರೆಸಿದಳು. ಕಡೆಗೂ ಲಾಂಗ್ ದ್ವೀಪದ 'ಕೋಲ್ಡ್ ಸ್ಪ್ರಿಂಗ್ ಹಾರ್ಬರ್' ಪ್ರಯೋಗಶಾಲೆಯಲ್ಲಿ ಬಾರ್ಬರಾಗೆ ಕೆಲಸ ದೊರೆತಾಗ ವಾರದ ಆರು ದಿನವೂ ಬೆಳಗಿನಿಂದ ರಾತ್ರಿಯವರೆಗೂ ದುಡಿದಳು. ಈಕೆಯ ಮಹಾನ್ ಅನ್ವೇಷಣೆ 'ಜಂಪಿಂಗ್ ಜೀನ್ಸ್' ಕುರಿತಾಗಿದೆ. ಇದು ವರ್ಣತಂತು (Chromosomes)ಗಳು ಸ್ಥಿರವಾಗಿಲ್ಲ, ವಂಶವಾಹಿ(Genetic) ವಸ್ತುಗಳು ಊಹಿಸಲಾರದಂತೆ ಪೀಳಿಗೆಯಿಂದ ಪೀಳಿಗೆಗೆ ಸ್ಥಳಾಂತರಿಸುವುದೆಂದು ಕಂಡು ಹಿಡಿದ ಸಂಶೋಧನೆ. ಈ ಅನ್ವೇಷಣೆ

ಜೀವಕೋಶದ ವ್ಯತ್ಯಾಸಗಳನ್ನು ಅರ್ಥ ಮಾಡಿಕೊಳ್ಳುವತ್ತ ಹಾದಿ ತೋರಿತು. ಮೆಕ್ಕೆಜೋಳವನ್ನು ಸಂಶೋಧನಾ ಸಲಕರಣೆಯಾಗಿ ಬಳಸಿದ ಬಾರ್ಬರಾ 'ಜಂಪಿಂಗ್ ಜೀನ್ಸ್' ಸಿದ್ಧಾಂತವನ್ನು ಪ್ರತ್ಯಕ್ಷ ಪ್ರದರ್ಶಿಸಿ ತೋರಿಸಿದಳು.

'ವರ್ಣತಂತುವಿನ ಉದ್ದಕ್ಕೂ ಒಂದು ತುದಿಯಿಂದ ಇನ್ನೊಂದು ತುದಿಗೆ ಚಲಿಸಬಲ್ಲ ಸ್ವಿಚ್‌ಗಳಂತೆ ಕಾರ್ಯ ನಿರ್ವಹಿಸುವ ಜಿನೆಟಿಕ್ ಘಟಕಾಂಶಗಳಿಂದ, ಮೆಕ್ಕೆಜೋಳದ ತಿರುಳಿನ ಬಣ್ಣ ಮತ್ತು ಗುಣವನ್ನು ಬೇಕೆಂದಾಗ ಬರಿಸಬಹುದು. ಇಲ್ಲವೆಂದರೆ ನಂದಿಸಬಹುದು' ಎಂದು ಆಕೆ ತೋರಿಸಿದಳು. ಆದರೆ ಇದು ನಿಜಕ್ಕೂ ಕೇವಲ ಕಟ್ಟುಕತೆಯಾಗಿ ಕಾಣಿಸಿ ಬಾರ್ಬರಾಳನ್ನು, ಆಕೆಯ ಸಂಶೋಧನೆಯನ್ನು ಉಪೇಕ್ಷಿಸಿದರು. "ಯಹೂದಿಗಳಿಗೆ, ನೀಗ್ರೋಗಳಿಗೆ, ಮಹಿಳೆಯರಿಗೆ, ತಾರತಮ್ಯದ ರೀತಿನೀತಿಗಳನ್ನು ಅನುಭವಿಸಿ ಅಭ್ಯಾಸವಾಗಿದೆ. ಹಾಗೆಂದೇ ಅವರು ಸುತ್ತಲ ಸಮಾಜದಿಂದ ಹೆಚ್ಚಿನದೇನನ್ನು ನಿರೀಕ್ಷಿಸುವುದಿಲ್ಲ. ಸಮಾಜದ ಇಂಥಾ ಅರ್ಥಹೀನ, ತರ್ಕಹೀನ ತಡೆಗಳು, ಅಡ್ಡಗೋಡೆಗಳು ಕುಸಿದು ಬಿದ್ದಾಗ ನನಗೆ ಸಮಾಧಾನ"[೧] ಎಂದು ಬಾರ್ಬರಾ ಹೇಳುತ್ತಿದ್ದರು. ಈಕೆಯ ಸಂಶೋಧನೆ ಜೆನಿಟಿಕ್ಸ್ ರಂಗದ ಮೈಲಿಗಲ್ಲಾಗಿತ್ತು. ಆದರೆ ಬಾರ್ಬರಾಳ ಅಧ್ಯಯನ ಬಹಳ ಕಾಲ ಯಾರ ಗಮನಕ್ಕೂ ಬಾರದೇ ಉಳಿದುದಲ್ಲದೆ ಈಕೆಯನ್ನು ಹುಚ್ಚಿ, ಭ್ರಮಾಧೀನೆ ಎನ್ನುವ ಮಟ್ಟಕ್ಕೂ ಹೋದವರಿದ್ದರು.

ಅಣುಜೀವ ವಿಜ್ಞಾನ (Molecular Biology) ರಂಗದ ಅಭಿವೃದ್ಧಿಗಳು ಕಡೆಗೂ ಬಾರ್ಬರಾಳ ಸಂಶೋಧನೆಯ ಮಹತ್ವವನ್ನು ಅರಿಯುವಂತೆ ಮಾಡಿದವು. ಜಂಪಿಂಗ್ ಜೀನ್ಸ್ ಜಿಗಿವ ವಂಶವಾಹಿಗಳನ್ನು ಎಲ್ಲೆಲ್ಲಿಯೂ ಗುರುತಿಸಿದರು. ಅವು ಮನುಷ್ಯರಲ್ಲಿಯೂ ಕಂಡು ಬಂದವು. 'ಹುಟ್ಟಿನಿಂದ ಬಂದ ಅನೇಕ ನ್ಯೂನತೆಗಳಿಗೆ ಹಾಗೂ ಬಹುಶಃ ಕ್ಯಾನ್ಸರ್‌ಗೂ ಈ ಜಿಗಿವ ವಂಶವಾಹಿಗಳ ಪ್ರಭಾವ ಹಿನ್ನೆಲೆ ಇದೆ ಎಂದು ತಿಳಿದರು' ಬಾರ್ಬರಾಗೆ ೮೧ ವಯಸ್ಸಿನಲ್ಲಿ ವೈದ್ಯರಂಗದ ನೊಬೆಲ್ ಪರಿತೋಷಕ ದೊರೆಯಿತು. ನೊಬೆಲ್ ಕಮಿಟಿ ಬಾರ್ಬರಾಳ ಸಂಶೋಧನೆಯನ್ನು 'ಜೀವಶಾಸ್ತ್ರ ರಂಗ'ದ ಅತಿ ದೊಡ್ಡ ಆವಿಷ್ಕಾರವೆಂದು ಗುರುತಿಸಿತು.

ಸಿಗ್ಮಂಡ್ ಫ್ರಾಯ್ಡ್‌ಗೆ ಸವಾಲು ಹಾಕಿದ ಮನಃಶಾಸ್ತ್ರಜ್ಞೆ ಕಾರೆನ್ ಹಾರ್ನಿ ೧೮೮೫-೧೯೫೨

ಫ್ರಾಯ್ಡ್‌ನ 'ಸ್ತ್ರೀಮನಃಶಾಸ್ತ್ರವನ್ನು' ಕುರಿತಾದ ಸಿದ್ಧಾಂತಗಳನ್ನು ತಿರಸ್ಕರಿಸಿದ ಮೊಟ್ಟ ಮೊದಲ ವಿಜ್ಞಾನಿ ಕಾರೆನ್ ಹಾರ್ನಿ. ಇದು ಪುರುಷಮನಃಶಾಸ್ತ್ರದ ನ್ಯೂನತೆ ಎಂದು ಸಾಧಿಸಿದಳು. ಆಕೆ ಸಿಗ್ಮಂಡ್ ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತಗಳನ್ನು ಪರಿಷ್ಕರಿಸಿ 'ಮನುಷ್ಯನಲ್ಲಿ

೧.ನೇಮಿಚಂದ್ರ; ಶತಮಾನದ ಮಹಿಳಾ ವಿಜ್ಞಾನಿಗಳು, ಪುಟ-೮೧

ಬದಲಾಗುವ ಮತ್ತು ಬೆಳೆಯುವ ಶಕ್ತಿ ಇದೆ' ಎಂದು ಬಲವಾಗಿ ಪ್ರತಿಪಾದಿಸಿದ ಮನಃಶಾಸ್ತ್ರಜ್ಞೆ. ಮನೋಬೇನೆಯನ್ನು ಉಂಟು ಮಾಡುವಲ್ಲಿ ಅಥವಾ ಅದನ್ನು ನಿಯಂತ್ರಿಸುವಲ್ಲಿ, ಸಾಮಾಜಿಕ ಪರಿಸ್ಥಿತಿಗಳಿಗೆ ಇಷ್ಟು ದಿನ ಇಲ್ಲದೆ ಹೋಗಿದ್ದ ಅದ್ಯತೆಯನ್ನು ಹಾರ್ನಿ ನೀಡಿದಳು. ವ್ಯಕ್ತಿಯ ಮನಸ್ಸಿನ ಮೇಲೆ ಕುಟುಂಬ ಮತ್ತು ಸುತ್ತಲಿನ ಸಮಾಜದ ಪ್ರಭಾವವನ್ನು ಮೊಟ್ಟ ಮೊದಲಿಗೆ ಗುರ್ತಿಸಿದ್ದಳು. ಪರಿಸರ, ವಾತಾವರಣ ಮನುಷ್ಯನೊಬ್ಬನ ಮಾನಸಿಕ ಆರೋಗ್ಯದ ಬಗ್ಗೆ ಉಂಟಾಗುವ ಪರಿಣಾಮಗಳನ್ನು ಅಧ್ಯಯನ ಮಾಡಿ ಸಿದ್ಧಾಂತಗಳಾಗಿ ಪ್ರತಿಪಾದಿಸಿದ ಕೀರ್ತಿ ಕಾರೆನ್ ಹಾರ್ನಿಯದು. ಇವರ ಮಹತ್ವದ ಕೃತಿ 'ಫೆಮಿನೈಸ್ ಸೈಕಾಲಜಿ'.

ವ್ಯಕ್ತಿ ಸಮಾಜದ ಅವಿಭಾಜ್ಯ ಅಂಗ. ಆರೋಗ್ಯಕರವೂ, ಪ್ರೋತ್ಸಾಹದಾಯಕವೂ ಆದ ಸಂಸ್ಕೃತಿ, ಆರೋಗ್ಯಕರ ವ್ಯಕ್ತಿಗಳನ್ನು ಸೃಷ್ಟಿಸುತ್ತದೆ ಎಂದು ತಿಳಿಸಿ, ನವ್ಯ ಫ್ರಾಯ್ಡ್‌ವಾದಿಯಾದ ಆಕೆ ಸ್ತ್ರೀವಾದಿ ಮತ್ತು ಮಾನವತಾವಾದಿ ರೂಢಿಗತ ವಿಚಾರಗಳನ್ನು ತಿರಸ್ಕರಿಸಿ ಹೊಸ ಆಲೋಚನೆಗಳತ್ತ ದಿಟ್ಟ ಹೆಜ್ಜೆ ಇಟ್ಟ ವಿಜ್ಞಾನಿ ಕಾರೆನ್ ಹಾರ್ನಿ.

ನಿಗೂಢ ನಾಸ್ಕಾ ಗೆರೆಗಳ ಅಧ್ಯಯನದಲ್ಲಿ ಅರ್ಧ ಶತಮಾನ ಕಳೆದ ಮರಿಯಾ ರೇಕಿ ೧೯೦೩-೧೯೯೮

ನಾಸ್ಕಾ ಗೆರೆಗಳು ಸಮತಟ್ಟು ನೆಲದಲ್ಲಿ ಹರಡಿರುವ ಭೂ ಚಿತ್ರಗಳು, ಮೈಲಿಯುದ್ದಕ್ಕೂ ಜ್ಯಾಮಿತಿ ವಿನ್ಯಾಸಗಳು ಹರಡಿ ನಿಂತಿವೆ. ಈ ಚಿತ್ರಗಳ ವಿಶೇಷವೆಂದರೆ ಬೃಹತ್ ಚಿತ್ರಗಳನ್ನು ಏಕಗೆರೆಯಿಂದ ತಯಾರಿಸಲಾಗಿದೆ. ಮರಳುಭೂಮಿಯಲ್ಲಿ ಬೇರೆ ಬೇರೆ ಬಗೆಯ ತ್ರಿಕೋನಗಳು, ಆಯಾತಾಕಾರಗಳು, ಸುರುಳಿಗಳು, ವೃತ್ತಗಳು, ಪ್ರಾಣಿ, ಪಕ್ಷಿಗಳ ಚಿತ್ರಗಳು. ಮರಿಯಾ ರೇಕಿ ಜರ್ಮನಿಯ ಡ್ರೆಸ್ಡನ್ ಎಂಬ ತಾಣದಲ್ಲಿ ೧೫ ಮೇ ೧೯೦೩ರಲ್ಲಿ ಜನಿಸಿದಳು. ಹಿಟ್ಲರ್‌ನ ಜರ್ಮನಿಯಲ್ಲಿರುವುದು ಮರಿಯಾಗೆ ಇಷ್ಟವಿಲ್ಲದೆ, ಜರ್ಮನ್ ಶಿಕ್ಷಕಿಯಾಗಿ ಕುಸ್ಕೋಗೆ ಆಗಮಿಸಿದ ಮರಿಯಾಳನ್ನು ಅಂಡಿಯಾನ್ ಪರ್ವತಗಳ ನಟ್ಟ ನಡುವಿನ ಕುಸ್ಕೋನಗರ ಮತ್ತು ಇನ್ಕಾ ನಾಗರೀಕತೆ ತುಂಬಾ ಆಕರ್ಷಿಸಿತು. ಇದರಿಂದ ಮರಿಯಾಗೆ ಪುರಾತತ್ವ ಶಾಸ್ತ್ರದಲ್ಲಿ ಆಸಕ್ತಿ ಚಿಗುರಿತು. ಮರಿಯಾ ಇನ್ಕಾಗಳ ಮತ್ತು ಅವರ ಪೂರ್ವಿಕರ ಕಲ್ಲಿನ ಕಟ್ಟಡಗಳನ್ನು, ಕುಸಿದು ಬಿದ್ದ ಪಾಳು ದೇಗುಲಗಳನ್ನು ಪರೀಕ್ಷೆ ಮಾಡಿದ್ದಳು. ಅವಳ ಗಮನ ಹಾಗೂ ಮೊದಲ ಸಂಶೋಧನೆ ಅಧ್ಯಯನ, ಮಾಚುಪಿಚುವಿನಲ್ಲಿರುವ 'ಇಂತಿಹಂತಾನಾ' ಎಂಬ ಸೂರ್ಯ ವೀಕ್ಷಣಾಲಯಗಳನ್ನು ಕುರಿತದ್ದಾಗಿತ್ತು. ತನ್ನ ಸ್ವಲ್ಪವೇ ಸಮಯವನ್ನು ನಾಸ್ಕಾಗೆ ಮುಡುಪಾಗಿಟ್ಟಳು. ಕ್ರಿ.ಪೂ.೧೦೦೦ಕ್ಕೂ ಹಿಂದೆ ಈ ನಾಸ್ಕಾ ಕಣಿವೆಯಲ್ಲಿ ಅದ್ಭುತ ನಾಗರೀಕತೆಯಿತ್ತು, ಜನರಿದ್ದರು, ಸಾಕಷ್ಟು ಅಭಿವೃದ್ಧಿಗೊಂಡ ಕೃಷಿ ವಿಧಾನಗಳನ್ನು ಬಲ್ಲವರಾಗಿದ್ದರು. ನೀರಾವರಿಯನ್ನು ಕಟ್ಟಿದ್ದರು. ಬೆಳೆಯಲ್ಲಿ ಸುಧಾರಣೆಯನ್ನು ತಂದವರು. ಮುಂದಿನ ೧೫೦೦ ವರ್ಷಗಳಲ್ಲಿ ಈ ನಾಸ್ಕಾ ಜನರು ತಮ್ಮ ಪ್ರತಿಭೆ ಮತ್ತು ಕೌಶಲ್ಯವನ್ನು ನೇಯ್ಗೆ,

ಮಡಕೆ, ಕುಡಿಕೆ, ವಾಸ್ತುಶಿಲ್ಪ, ಕಲೆಗಳಲ್ಲಿ ಪ್ರದರ್ಶಿಸಿದ್ದರು. ಈ ಮರುಭೂಮಿ ಜನರ ಅದ್ಭುತ ನಾಗರೀಕತೆ, ಧರ್ಮ ಮತ್ತು ಸಂಸ್ಕೃತಿಯ ಕುರುಹುಗಳೆಲ್ಲ ಸ್ಪೇನ್ ಜನರ ಆಕ್ರಮಣದಲ್ಲಿ ಅಳಿಸಿಹೋಯಿತು.

ನಾಸ್ಕಾ ಚಿತ್ರಗಳ ಆಳದ ತನಿಖೆಗೆ ಮರಿಯಾ ಇಳಿದಿದ್ದಳು. ತನ್ನ ಡ್ರಾಯಿಂಗ್ ಕಿಟ್ ಹಿಡಿದು ಸುತ್ತಲೂ ಬಯಲು ಬೆಟ್ಟಗಳನ್ನು ಅಲೆದು ಸುತ್ತುತ್ತಿದ್ದಳೂ. ಇನ್ಕಾಗಳು ನಕ್ಷತ್ರಗಳನ್ನು ವೀಕ್ಷಿಸಲು ಮತ್ತು ಕ್ಯಾಲೆಂಡರ್ ದಿನಾಂಕಗಳನ್ನು ನಿಗದಿ ಪಡಿಸಲು 'ಇಂತಿಹುತಾನಾ'ಗಳನ್ನು ನಿರ್ಮಿಸಿದ್ದರು. ಈ ನಾಸ್ಕಾ ಚಿತ್ರಗಳ ಅಧ್ಯಯನ ಮಾಡುವುದೇ ತನ್ನ ಜೀವನದ ಗುರಿಯಾಗಿಸಿಕೊಂಡಿದ್ದಳು. ಮರಿಯಾ ರೇಕಿ ಹಾಗೂ ಅದರ ಬಗ್ಗೆ ಉತ್ಕಟ ಸಂಶೋಧನೆಗೆ ತೊಡಗಿಸಿಕೊಂಡಿದ್ದಳು. ಮರಿಯಾ ಐದು ಭಾಷೆಗಳಲ್ಲಿ ಪೆರುವಿನ ಮರಳುಗಾಡಿನ ಈ ರಹಸ್ಯ ಚಿತ್ರಗಳ ಬಗ್ಗೆ ಬರೆದಿದ್ದಳು. ಅದು ೧೯೪೯ರಲ್ಲಿ 'ಮಿಸ್ಟರಿ ಆಫ್ ದಿ ಡೆಸರ್ಟ್' ಆಗಿ ಪ್ರಕಟವಾಯಿತು.

ಮರಿಯಾಳ ಸುಮಾರು ಐದು ದಶಕಗಳ ಅವಿಶ್ರಾಂತ ಅಧ್ಯಯನದ ಫಲ ದೊರಕಿತು. ನಾಸ್ಕಾ ಚಿತ್ರಗಳ ಗಂಭೀರ ಅಧ್ಯಯನಕ್ಕೆ ಮೆಲ್ಲನೆ ಜಗತ್ತು ಕಣ್ಣು ತೆರೆಯಿತು. ಏಕಾಂಗಿಯಾಗಿ ಮರಿಯಾ ಈ ನಾಸ್ಕಾ ಗೆರೆಗಳು ಜನರಿಂದ ನಿರ್ಲಕ್ಷ್ಯದಿಂದ ಹಾಳಾಗುವುದನ್ನು ತಡೆದಿದ್ದಳು. ಪೆರುವಿನ ಸರಕಾರ ಈಕೆಯ ಅವಿರತ ಶ್ರಮವನ್ನು, ಅಪೂರ್ವ ಪ್ರಯತ್ನವನ್ನು ಗುರುತಿಸಿ ಪುರಾತತ್ವ ಪ್ರದೇಶದ 'ಗೌರವ ಪಾಲಕಿ' ಬಿರುದನ್ನು ನೀಡಿತು. ನಾಸ್ಕಾ ನಗರದ ತುಂಬೆಲ್ಲ ಮರಿಯಾ ತುಂಬಿ ಹೋಗಿದ್ದಾಳೆ. ಈಕೆಯ ಹೆಸರಿನಲ್ಲಿ 'ಪ್ಲಾನೆಟೇರಿಯಂ' ಇದೆ. ಈಕೆಯ ಹೆಸರನ್ನು ಹೊತ್ತ ಪುಟ್ಟ ವಿಮಾನ ನಿಲ್ದಾಣದಿಂದ ನಾಸ್ಕಾ ಗೆರೆಗಳ ಮೇಲೆ ವಿಮಾನಗಳು ಹಾರುತ್ತವೆ.

ಕೀನ್ಯಾದ ಕಾಡುಗಳಲ್ಲಿ ನಾಲ್ಕು ದಶಕಗಳ ಕ್ಷೇತ್ರ ಕಾರ್ಯ ಜೇನ್ ಗುಡಾಲ್

ಪ್ರಸಿದ್ಧ ಪ್ರಾಣಿಶಾಸ್ತ್ರಜ್ಞೆ 'ಇತಾಲೊಜಿ' ವಿಭಾಗಕ್ಕೆ ವಿಶೇಷ ಕೊಡುಗೆ ನೀಡಿರುವ ವಿಜ್ಞಾನಿ. ಆಫ್ರಿಕಾದ ಕಾಡುಗಳಲ್ಲಿ ಚಿಂಪಾಂಜಿಗಳನ್ನು ಅವುಗಳ ಸಹಜ ವಾಸಸ್ಥಾನದಲ್ಲಿ ಅತ್ಯಂತ ನಿಕಟವಾಗಿ ಅಧ್ಯಯನ ಮಾಡಿದವಳು. ಈ ಅಧ್ಯಯನ ಅನೇಕ ದಿಗ್ಭ್ರಮೆಯ ಸತ್ಯಗಳನ್ನು ಹೊರಹಾಕಿತು. ಮಾನವ ವಿಕಾಸದ ಹಾದಿಯತ್ತ ಬೆಳಕು ಚೆಲ್ಲಿತು. ಒಂದು ಬೊಂಬೆ ಚಿಂಪಾಂಜಿಯನ್ನು ಉಡುಗೊರೆಯಾಗಿ ಪಡೆದ ಬಾಲೆ, ಚಿಂಪಾಂಜಿಗಳ ಅದ್ಭುತ ಲೋಕವನ್ನು ತನ್ನ ಸಂಶೋಧನೆಯ ಮೂಲಕ ತೆರೆದಿಡುತ್ತಾಳೆ ಎಂದು ಯಾರೂ ಊಹಿಸಿರಲಿಲ್ಲ. ಪ್ರಾಣಿಗಳೆಂದರೆ ಜೇನ್‌ಗೆ ಅತ್ಯಂತ ಪ್ರೀತಿ ಹಾಗೂ ಎಲ್ಲಿಲ್ಲದ ಆಸ್ಥೆ, ಕುತೂಹಲವಿದ್ದು ಆಕೆ ಪ್ರಾಣಿ ಜಗತ್ತಿನ ಅದ್ಭುತಗಳನ್ನು ಸೂಕ್ಷ್ಮವಾಗಿ ವೀಕ್ಷಿಸುವ ಹವ್ಯಾಸಿ ಪ್ರಕೃತಿ ಶಾಸ್ತ್ರಜ್ಞೆಯಾಗಿ ಬೆಳೆದಳು.

ಚಿಂಪಾಂಜಿ ಪೂರ್ವ ಆಫ್ರಿಕಾದ ಕಾಡುಗಳ ಮಾನವನ ವಾನರ (Anthropoid Apc) ಚಿಂಪಾಂಜಿ ಮಾನವನ ಬುದ್ಧಿವಂತಿಕೆಗೆ ಅತಿ ಹತ್ತಿರವಾದ ಪ್ರಾಣಿ. ಪ್ರಯೋಗಾಲಯದ ಪ್ರಯೋಗಗಳಲ್ಲಿ ಮಾನವನಿಗೆ ಬದಲಾಗಿ ಇವುಗಳನ್ನು ಬಳಸುವುದು ಜಾರಿಯಲ್ಲಿತ್ತು. ಆದರೆ ಯಾರೊಬ್ಬರೂ ಈ ಅಪೂರ್ವ ಪ್ರಾಣಿಗಳನ್ನು ಅವುಗಳ ಸಹಜ ವಾಸಸ್ಥಾನದಲ್ಲಿ ಅಧ್ಯಯನ ಮಾಡಿರಲಿಲ್ಲ. ಕಾಲೇಜಿನ ಮೆಟ್ಟಿಲು ತುಳಿಯದ ಹುಡುಗಿ ಏಕಾಂಗಿಯಾಗಿ ಸಂಶೋಧನಾ ಕ್ಷೇತ್ರಕಾರ್ಯವನ್ನು ಕೈಗೊಳ್ಳುವಳೆಂದು, ನಂಬಲು ಅನೇಕ ವಿಜ್ಞಾನಿಗಳಿಗೆ ಸಾಧ್ಯವಾಗಲೇ ಇಲ್ಲ.

ಚಿಂಪಾಂಜಿಗಳಿಗೆ ಮತ್ತೂ ಹತ್ತಿರವಾಗಿ, ಅವುಗಳನ್ನು ಅರ್ಥ ಮಾಡಿಕೊಳ್ಳಲು ಜೇನ್ ಅವುಗಳ ವರ್ತನೆ, ಸ್ವಭಾವ, ಅಭ್ಯಾಸ, ಚಾಳಿಗಳನ್ನೆಲ್ಲ ಅನುಸರಿಸ ತೊಡಗಿದಳು. ಟಾನನೀಕಾ ಸರೋವರದ ದಂಡೆಯಲ್ಲಿನ ಚಿಂಪಾಂಜಿಗಳು ಜೇನ್‌ಳನ್ನು ತಮ್ಮಲೊಬ್ಬಳೆಂಬಂತೆ ಸ್ವೀಕರಿಸಿದವು. ಜೇನ್ ಚಿಂಪಾಂಜಿಯ ಅತ್ಯಂತ ಸೂಕ್ಷ್ಮ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ದಾಖಲಿಸುತ್ತಾ ಚಿಂಪಾಂಜಿಗಳ ಪ್ರವೃತ್ತಿ, ಗುಣ, ಸ್ವಭಾವ, ವರ್ತನೆ, ನಡತೆಗಳನ್ನು ಅರ್ಥ ಮಾಡಿಕೊಳ್ಳತೊಡಗಿದಳು. ಚಿಂಪಾಂಜಿಗಳು ಮಾಂಸ ತಿನ್ನುತ್ತವೆ ಎಂಬ ಸತ್ಯವನ್ನಷ್ಟೇ ಅಲ್ಲ, ಬರೀ ಹುಳು, ಹುಪ್ಪಟೆ, ಹಕ್ಕಿಯ ಮರಿಗಳನ್ನು ಹಾಗೂ ಕೆಂಪು ಕೊಲಂಬಸ್ ಕೋತಿಗಳನ್ನು, ಬಬೂನ್ ಕೋತಿಯ ಮರಿಗಳಂಥಾ ದೊಡ್ಡ ಪ್ರಾಣಿಗಳನ್ನು ವ್ಯವಸ್ಥಿತವಾಗಿ ಗುಂಪುಗಳಲ್ಲಿ ಬೇಟೆ ಮಾಡಿಕೊಂಡು ಕೊಂದು ತಿನ್ನುತ್ತವೆಂಬ ವಿಷಯವನ್ನು ಬಯಲಿಗೆ ತಂದಳು. ನಾಲಿಗೆಯಿಂದ ಗೆದ್ದಲುಹುಳುಗಳನ್ನೆಲ್ಲ ಸವರಿ ನೆಕ್ಕಿ ಚಪ್ಪರಿಸುತ್ತಿದ್ದವು. ಒಂದಿಷ್ಟು ಎಲೆಗಳನ್ನು ಸ್ಪಂಜಿನಂತೆ ನೀರು ಹೀರಿ ಕುಡಿಯಲು ಬಳಸುತ್ತಿದ್ದವು. ಈ ಎರಡೂ ಮಹತ್ತರದ ಅನ್ವೇಷಣೆಗಳು ಆದಿ ಮಾನವ ಮತ್ತು ಆತನ ವಿಕಾಸವನ್ನು ಕುರಿತ ಅಧ್ಯಯನದ ಮೇಲೆ ವಿಶಿಷ್ಟವಾದ ಬೆಳಕು ಚೆಲ್ಲಿದವು.

ಜೇನ್‌ಗುಡಾಲು ವೈಜ್ಞಾನಿಕ ಪತ್ರಿಕೆಗಳಲ್ಲಿ, ವೈಜ್ಞಾನಿಕ ಪ್ರಬಂಧಗಳನ್ನು ಪ್ರಕಟಿಸುತ್ತಲೇ ಜನ ಸಾಮಾನ್ಯರಿಗೆ ಜನಪ್ರಿಯ ಮಾಧ್ಯಮದಲ್ಲಿ ಲೇಖನಗಳನ್ನು ಬರೆದಳು. ನ್ಯಾಷನಲ್ ಜಿಯಾಗ್ರಫಿಕಲ್ ಸೊಸೈಟಿಗಾಗಿ 'ಮಿಸ್ ಗುಡಾಲ್ ಮತ್ತು ಕಾಡು ಚಿಂಪಾಂಜಿಗಳು' ಎಂಬ ದಾಖಲು ಚಿತ್ರ ತಯಾರಾಯಿತು. ನಾವು ಚಿಂಪಾಂಜಿಗಳನ್ನು ನೋಡುವ ದೃಷ್ಟಿಯಲ್ಲಿ ಕ್ರಾಂತಿ ತಂದಳು. ಚಿಂಪಾಂಜಿಗಳು ಶಾಂತಿಪ್ರಿಯ ಪ್ರಾಣಿಗಳು, ಅವುಗಳು ಕೂಡ ಸಾಕಷ್ಟು ರಾಜಕೀಯ ಮಾಡಬಲ್ಲವು. ಬಹಳಷ್ಟು ನಮ್ರತೆ, ಮರುಕ, ಸಹಾನುಭೂತಿ ಉಳ್ಳ ಈ ಮಾನವ ನಿಕಟ ಸಂಬಂಧಿಗಳು ಮಾನವನಂತೆಯೇ ಸಂಚು, ಪಿತೂರಿ, ಕುಟೋಪಾಯಗಳನ್ನು ಮಾಡಬಲ್ಲವು ಎಂಬುದನ್ನು ರುಜುವಾತು ಮಾಡಿದ್ದಳು. "ದಿ ಚಿಂಪಾಂಜಿ ದಿ ಲಿವಿಂಗ್ ಲಿಂಕ್ ಬಿಟ್‌ವಿನ್ ಮ್ಯಾನ್ ಅಂಡ್ ಬೀಸ್ಟ್" ಆಕೆಯ ಪುಸ್ತಕಗಳನ್ನು ಹಾರ್ವರ್ಡ್ ವಿಶ್ವವಿದ್ಯಾಲಯ ಸ್ಕೀಪನ್ ಜೇ ಗೋಲ್ಡ್ ಪಶ್ಚಿಮ

ಜಗತ್ತಿನ ಅತಿ ದೊಡ್ಡ ವೈಜ್ಞಾನಿಕ ಸಾಧನೆಗಳಲ್ಲೊಂದು"[೧] ಎಂದು ವರ್ಣಿಸಿದ್ದಾರೆ.

ಸಮುದ್ರದಾಳದಲ್ಲಿ ಸಂಶೋಧನೆ ಅಮಂಡಾ ವಿನ್ಸೆಂಟ್ :

ಪ್ರಾಣಿಶಾಸ್ತ್ರಜ್ಞೆ ಅಮಂಡಾ ವಿನ್ಸೆಂಟ್ ಸಮುದ್ರದಾಳದ ಹವಳದ ತೆನೆಗಳ ನಡುವೆ ವಾಸಿಸುವ ಕಡಲ ಕುದುರೆ (Sea horse) ಎಂಬ ಜಾತಿಯ ಮೀನುಗಳ ಅಧ್ಯಯನ ಮಾಡಿರುವಾಕೆ. "ಸ್ವತಃ ಸ್ತ್ರೀವಾದಿಯಾಗಿರುವ ನನಗೆ ಗಂಡು ಗರ್ಭಧರಿಸುವ ಈ ತಿರುಗುಮುರುಗಾದ ಹೆಣ್ಣು-ಗಂಡಿನ ಪಾತ್ರಗಳು, ಕಾರ್ಯಕೇತ್ರ ವಿಂಗಡಣೆ ವಿಶೇಷ ಕುತೂಹಲದ ಸಂಶೋಧನೆಯಾಗಿದೆ" ಎನ್ನುತ್ತಾರೆ. ತನ್ನ ಪ್ರಯೋಗಶಾಲೆಯಲ್ಲಿ ಕಡಲ ಕುದುರೆಗಳನ್ನು ಸಾಕಿ ಅನೇಕ ಪ್ರಯೋಗಗಳನ್ನು ನಡೆಸಿದಾಕೆ ಮುಂದೆ ಆಸ್ಟ್ರೇಲಿಯಾದ ಸಿಡ್ನಿ ಬಂದರಿನ ಬಳಿ ಸಮುದ್ರದಾಳಕ್ಕಿಳಿದು ಕಡಲ ಕುದುರೆಗಳನ್ನು ಅಧ್ಯಯನ ಮಾಡಿದಳು.

ಕಡಲ ಕುದುರೆಗಳೊಡನೆ ಅಮಂಡಾಳ ಒಡನಾಟ ಆರಂಭವಾಗಿ ಕಾಲು ಶತಮಾನ ಕಳೆದಿತ್ತು. ನ್ಯಾಷನಲ್ ಜಿಯಾಗ್ರಫಿಕ್ ಪತ್ರಿಕೆ ಅಮಂಡಾಳನ್ನು ಏಷಿಯಾದ ಉದ್ದಗಲಕ್ಕೂ ಸಣ್ಣ ಸಣ್ಣ ಮೀನುಗಾರಿಕೆಯ ಹಳ್ಳಿಗಳಿಗೆ ಭೇಟಿ ನೀಡಿ ಈ ಕಡಲ ಕುದುರೆಗಳ ವ್ಯಾಪಾರದ ಬಗ್ಗೆ ಮಾಹಿತಿ ಸಂಗ್ರಹಿಸಲು, ಜಾಗೃತಿ ಮೂಡಿಸಲು ಕರೆ ನೀಡಿತು. ಈ ಮೂಲಕ ಸಮುದ್ರದ ಈ ಪ್ರಾಣಿಗಳನ್ನು ಉಳಿಸುವ ಪ್ರಯತ್ನಕ್ಕೆ ಅಮಂಡಾ ಕೈ ಹಾಕಿದಳು.

ಈ ಪ್ರಾಣಿಗಳ ವಿಶೇಷವೆಂದರೆ ಹೆಣ್ಣು ಅಂಡಾಣುಗಳನ್ನು ಸ್ಖಲಿಸಿ ಹೋಗುತ್ತದೆ ಹಾಗೂ ಗಂಡು ಗರ್ಭಧರಿಸುತ್ತದೆ. ಈ ಗಂಡುಗಳಲ್ಲಿ ಬಾಲದ ನಡುಭಾಗದಲ್ಲಿ ಮರಿಗಳಿಗಾಗಿ ಒಂದು ಚೀಲವಿರುತ್ತದೆ. ಹೆಣ್ಣು ಬಂದು ಗಂಡನ್ನು ಕೂಡಿ, ತನ್ನ ಮೊಟ್ಟೆಗಳನ್ನು ಈ ಚೀಲದಲ್ಲಿ ತುಂಬಿ ಹೋಗುತ್ತದೆ. ಮೊಟ್ಟೆಗಳು ಗಂಡಿನ ಒಡಲ ಚೀಲದಲ್ಲಿ ಫಲಿತು ಗಂಡು ಗರ್ಭಧರಿಸುತ್ತದೆ. ೨೧ ದಿನಗಳ ಗರ್ಭಾವಸ್ಥೆಯ ನಂತರ ಪ್ರಸವ ವೇದನೆಯಲ್ಲಿ ಗಂಡು ಹೊರಳಿ ಹೊಸೆದು ಮರಿಗಳನ್ನು ಹೊರ ಹಾಕುತ್ತವೆ. ಮರಿಗಳನ್ನು ಹೊರುವ, ಹೆರುವ ಪೋಷಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತದೆ.

ಅಮಂಡಾಗೆ ಕಡಲ ಕುದುರೆಗಳು ಅದೆಷ್ಟು ಪರಿಚಿತವಾದವು ಎಂದರೆ ಅವುಗಳಿಗೆ ಹೆಸರಿಟ್ಟು ಆ ಹೆಸರಿನಿಂದಲೇ ಕರೆಯುತ್ತಿದ್ದಳು. ಅವುಗಳ ಕ್ರಿಯೆಯನ್ನು ಆಕೆ ಆತ್ಮೀಯವಾಗಿ ವಿವರಿಸುವುದುಂಟು. "ನೋಡಿ ಹ್ಯಾರಿ ತಲೆ ಎತ್ತಿ ಕರೆಯುತ್ತಿದ್ದಾನೆ, ಮ್ಯಾಬೆಲ್ ಈಜಿ ಬಳಿ ಬಂದು,

---

೧. ನೇಮಿಚಂದ್ರ; ಮಹಿಳಾ ವಿಜ್ಞಾನಿಗಳು, ಪುಟ-೧೧೭

ಇಬ್ಬರೂ ತಮ್ಮ ಬಾಲದ ತುದಿಗಳನ್ನು ತಿರುಚಿಕೊಂಡು ಖುಷಿಯಿಂದ ಸಣ್ಣ ನೃತ್ಯ ಮಾಡಿ ಅಲ್ಲೋಡಿ ಹೇಗೆ ಬೇರ್ಪಟ್ಟರು" ಎಂದು ಬಹಳ ಆತ್ಮೀಯವಾಗಿ ತೆರೆದಿಡುವ ಪರಿ ಇದು.

ಎಷ್ಟೆಲ್ಲಾ ಅಚ್ಚರಿಯ ಸತ್ಯಗಳನ್ನು ಹೊರಹಾಕುವ ಅಮಂಡಾ ಹೇಳುತ್ತಾಳೆ. "ನಮಗೆ ಕಡಲ ಕುದುರೆಗಳ ಬಗ್ಗೆ ತಿಳಿಯುವುದು ಬಹಳಷ್ಟಿದೆ. ನಮಗಿನ್ನು ಕಡಲ ಕುದುರೆಗಳು ಎಷ್ಟು ವರ್ಷಗಳ ಕಾಲ ಬದುಕುತ್ತದೆ ಎಂದು ಕೂಡ ಗೊತ್ತಿಲ್ಲ, ತಿಳಿಯ ಬೇಕಾದುದು ಅಗಾಧವಿದೆ"[೧] ಎನ್ನುತ್ತಾರೆ. ಅಮಂಡಾ ತನ್ನ ಸಹೋದ್ಯೋಗಿಗಳೊಡನೆ 'ಪ್ರಾಜೆಕ್ಟ್ ಸೀ ಹಾರ್ಸ್" ಎಂಬ ಯೋಜನೆ ಹಾಕಿಕೊಂಡು ಕಡಲ ಕುದುರೆಗಳ ಬಗ್ಗೆ ಆಸಕ್ತಿ ತೋರಿದವರಿಗೆ ಮಾರ್ಗದರ್ಶನ ನೀಡುತ್ತಿದ್ದಾಳೆ.

ಒಟ್ಟಾರೆ ಹೇಳುವುದಾದರೆ ಇತಿಹಾಸದ ಆಳಕ್ಕಿಳಿದು ವಿಜ್ಞಾನಕ್ಕೆ ಮಹಿಳೆಯರು ನೀಡಿರುವ ಕೊಡುಗೆಯನ್ನು ಹುಡುಕ ಹೊರಟರೆ ಮಹಿಳಾ ವಿಜ್ಞಾನಿಗಳ ದೊಡ್ಡ ಪಟ್ಟಿಯೇ ತಯಾರಾಗುತ್ತದೆ. ತಮ್ಮ ಕಾಲದ ಸಮಾಜ ಕಟ್ಟಲೆಯಲ್ಲೂ ಅವಕಾಶಗಳಿಲ್ಲದ, ಕಲಿಸುವವರಿಲ್ಲದ ಅಡೆತಡೆಯಲ್ಲೂ ವಿಜ್ಞಾನದತ್ತ ಆಕರ್ಷಿತರಾದ ಅಸಂಖ್ಯಾತ ಮಹಿಳೆಯರು ಅಜ್ಞಾತರಾಗಿಯೇ ಉಳಿದಿದ್ದಾರೆ. ವಿಜ್ಞಾನರಂಗಕ್ಕೆ ನುಗ್ಗಲು ಮಹಿಳೆಯರಿಗೆ ತೆಗೆದ ಬಾಗಿಲಿರಲಿಲ್ಲ. ಹೆದ್ದಾರಿಗಳಿರಲಿಲ್ಲ, ರಾಜಮಾರ್ಗಗಳಿರಲಿಲ್ಲ. ಅಜ್ಞಾನದ ಗೊಂಡಾರಣ್ಯದ ನಡುವೆ ಕತ್ತಲ ಕಾಲು ಹಾದಿಯಲ್ಲೂ ಕೋಲ್ಮಿಂಚಿನಂತೆ ಮಿಂಚಿ, ದಾರಿದೀಪವಾದ ಮಹಿಳಾ ವಿಜ್ಞಾನಿಗಳನ್ನು ತಿಳಿಯುವ ಯತ್ನ ಇಲ್ಲಿದೆ.

೨.೪ ಪ್ರವಾಸ ಕಥನಗಳಲ್ಲಿ :

ಕನ್ನಡ ಪ್ರವಾಸ ಸಾಹಿತ್ಯವು ಒಂದು ವಿಶಿಷ್ಟವಾದ ಮತ್ತು ಪ್ರಮುಖವಾದ ಸಾಹಿತ್ಯ ಪ್ರಕಾರವಾಗಿದೆ. ಈ ಪ್ರಕಾರವು ಇಂದು ವೈವಿಧ್ಯಮಯವಾಗಿ ಬೆಳೆಯುತ್ತಿದೆ. ಕವಿಗಳು, ಕಾದಂಬರಿಕಾರರು, ವೈಚಾರಿಕ ಬರಹಗಾರರು ಮತ್ತು ಇತರ ಲೇಖಕರು ಪ್ರವಾಸ ಸಾಹಿತ್ಯ ಪ್ರಕಾರಗಳಲ್ಲಿ ಪಡಿಮೂಡಿಸಿದ್ದಾರೆ. ಕನ್ನಡದಲ್ಲಿ ಪ್ರವಾಸ ಪದವನ್ನು ಹಲವು ರೀತಿಯಲ್ಲಿ ಪ್ರಯೋಗ ಮಾಡಿದ್ದಾರೆ. ಅಲ್ಲದೆ ಪ್ರವಾಸ ಪದದ ಸಮಾನಾರ್ಥದಲ್ಲಿ ಪ್ರದಕ್ಷಿಣೆ, ಪರ್ಯಟನೆ, ಪ್ರಯಾಣ, ಯಾತ್ರೆ, ಸುತ್ತಾಟ, ಸಂಚಾರ ಮೊದಲಾದ ಪದಗಳನ್ನು ಬಳಸುತ್ತಿದ್ದಾರೆ. ವಾಸ್ತವವಾಗಿ ಪ್ರವಾಸ ಪದವು ಸಂಸ್ಕೃತ ಪದ. ಇಂಗ್ಲೀಷಿನಲ್ಲಿ ಇದಕ್ಕೆ 'Travel'ದ ಎಂದು ಕರೆಯಲಾಗಿದೆ. ಡಾಕ್ಟರ್ ಶಿವರಾಮಕಾರಂತರ 'ಸಿರಿಗನ್ನಡ ಅರ್ಥಕೋಶದಲ್ಲಿ' ಪ್ರವಾಸ ಪದದ ಅರ್ಥವು ದೂರದೇಶಕ್ಕೆ ಹೋಗುವವನು, ಪ್ರದೇಶ ಸಂಚಾರ, ಪ್ರಯಾಣ ಮಾಡುವಿಕೆ ಎಂಬುದಾಗಿದೆ.

೧.ನೇಮಿಚಂದ್ರ; ಸಮುದ್ರದಾಳದ ಸಂಶೋಧಕಿ, ಪುಟ-೧೨೩

ಪ್ರವಾಸ ಮಾನವನ ಮೂಲ ಪ್ರವೃತ್ತಿಯಾಗಿದೆ. ಇವನ ಜೀವನದಲ್ಲಿ ಅಂತರ್ಗತವಾಗಿ ಬೆಳೆದು ಬಂದ ಪ್ರವಾಸ ಸ್ವಭಾವ ಪ್ರವೃತ್ತಿಯಿಂದ ಹವ್ಯಾಸವಾಗುವಲ್ಲಿ ವೈಜ್ಞಾನಿಕವಾಗಿ ಮುಂದುವರೆದಿದೆ. 'ದೇಶ ನೋಡು, ಕೋಶ ಓದು' ಎಂಬ ಜಾಣ್ನುಡಿಯು ಪ್ರವಾಸದ ಮಹತ್ವವನ್ನು ತಿಳಿಸುತ್ತದೆ. ಕುವೆಂಪುರವರು ಮನುಷ್ಯನ ಆತ್ಮದಲ್ಲಿಯೇ ಯಾತ್ರೆಯ ಅವಶ್ಯಕತೆಗೆ ಒಂದು ಆಧಾರವಿರಬಹುದೇ? ಮನುಷ್ಯ ವಾಸ್ತವವಾಗಿಯೂ ಈ ಪ್ರಪಂಚದಲ್ಲಿ ಒಬ್ಬ ಪ್ರವಾಸಿ. ಅವನ ಜೀವನ ಸಮಸ್ತವು ಒಂದು ಪ್ರವಾಸ.' ಎಂದಿದ್ದಾರೆ.

ಪ್ರವಾಸ ಕಥನಗಳಲ್ಲಿ ಚೀನಾ ದೇಶದ ಪ್ರವಾಸಿಗರ ಪ್ರವಾಸ ಕಥನವನ್ನು ಜಿ.ಪಿ.ರಾಜರತ್ನಂ ಮೊದಲಿಗೆ ಕನ್ನಡದಲ್ಲಿ ನೀಡಿದ್ದಾರೆ. ಇವರ ಕೃತಿಗಳಾದ 'ಚೀನಾದ ದೇಶದ ಬೌದ್ಧಯಾತ್ರಿಕರು' ಹಾಗೂ 'ಫಾಹಿಯಾನನ ಕ್ಷೇತ್ರಯಾತ್ರೆ' ಎರಡು ಕೃತಿಗಳು ಭಾರತದ ಸನಾತನ ಧರ್ಮವಾದ ಬೌದ್ಧಮ,ತತ ಅರಿವು ಹಾಗೂ ಅಧ್ಯಯನದಿಂದ ಆಕರ್ಷಿತರಾಗಿ ಭಾರತಕ್ಕೆ ಬಂದ ಚೀನಾ ಯಾತ್ರಿಕರಾದ ಹ್ಯೂ ಎನ್ ತ್ಸಾಂಗ್, ಇತ್ಸಿಂಗ್ ಮತ್ತು ಫಾಹಿಯಾನನ ಜೀವನ ಮತ್ತು ಪ್ರಯಾಣ ಸಾಹಸವನ್ನು ಧಾರ್ಮಿಕ ಶ್ರದ್ಧೆಯಿಂದ ಚಿತ್ರಿಸಿರುತ್ತಾರೆ.

ಪೆರುವಿನ ಪವಿತ್ರ ಕಣಿವೆಯಲ್ಲಿ:

ಮಹಿಳೆಯರು ದೇಶವಿದೇಶಗಳಲ್ಲಿ ಸಂಚಾರ ಮಾಡಿ ಅವರ ಅನುಭವಗಳನ್ನು ಪ್ರವಾಸ ಸಾಹಿತ್ಯದಲ್ಲಿ ದಾಖಲಿಸಿರುವುದನ್ನು ಕಾಣುತ್ತೇವೆ. ಮಹಿಳೆಯರ ಪ್ರವಾಸ ಸಾಹಿತ್ಯದಲ್ಲಿ ಸ್ತ್ರೀಪರವಾದ ಕಾಳಜಿಗಳು, ಸ್ತ್ರೀಪರವಾದ ಸಂವೇದನೆಗಳು, ಸಂಸ್ಕೃತಿಯ ಬಗೆಗಿನ ಕಾಳಜಿ, ರಾಜಕೀಯವನ್ನು ಕುರಿತಾದ ಅಂಶಗಳು, ವಿಜ್ಞಾನ, ಸಂಶೋಧನೆ, ಪ್ರಕೃತಿ ಹಾಗೂ ನಿಸರ್ಗದ ಬಗೆಗಿನ ಕಾಳಜಿಗಳು, ಭಿನ್ನ ಸಂಸ್ಕೃತಿಗಳ ತೌಲನಿಕ ಅಧ್ಯಯನ ಇವುಗಳನ್ನು ಕುರಿತಾದ ಬಹಳಷ್ಟು ಅಂಶಗಳನ್ನು ದಾಖಲಿಸಿರುತ್ತಾರೆ. ವಿದೇಶದಲ್ಲಿ ಮಹಿಳೆಯರ ಸ್ಥಾನಮಾನ, ಅಲ್ಲಿನ ಅಭದ್ರತೆಯನ್ನು ಸಾಮಾಜಿಕ ಜೀವನವನ್ನು ಚಿತ್ರಿಸಿದ್ದಾರೆ.

ಲೇಖಕಿಯರಲ್ಲಿ ಪ್ರಮುಖರಾದ ಶ್ರೀಮತಿ ನೇಮಿಚಂದ್ರರ ಪ್ರವಾಸ ಕಥನವೇ ಪೆರುವಿನ ಪವಿತ್ರ ಕಣಿವೆಯಲ್ಲಿ. ಸ್ತ್ರೀವಾದಿ ನೆಲೆಯಿಂದ ಆಲೋಚಿಸುವ ಸ್ತ್ರೀಪರ ಚಿಂತನೆಗಳನ್ನು ಕುರಿತು ಕಾಳಜಿಯಿರುವ ಇವರು ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಸಾಹಿತ್ಯವನ್ನು ನೀಡಿದ್ದಾರೆ. ವಿಜ್ಞಾನ ಸಾಹಿತ್ಯಕ್ಕೆ ಇವರ ಕೊಡುಗೆ ಅಪಾರವಾಗಿದೆ. ವೃತ್ತಿಯಲ್ಲಿ ಇಂಜಿನಿಯರ್ ಆದ ಇವರ ಕಾಳಜಿಗಳು ಹೊಸ ಅನ್ವೇಷಣೆ, ಕುತೂಹಲಗಳ ಕಡೆಗೇ ಇರುತ್ತದೆ. ಆದ ಕಾರಣ ಪೆರುವಿನ ಪ್ರವಾಸ ಮಾಡಲು ಉತ್ಸುಕರಾದದ್ದು.

ಈ ಕೃತಿಯಲ್ಲಿ ನೇಮಿಚಂದ್ರರು ಪೆರುವಿನ ಪ್ರಾಚೀನ 'ಇನ್ಕಾ ನಾಗರೀಕತೆ', ಇನ್ಕಾ ಸಂಸ್ಕೃತಿಯ ಬಗೆಗಿನ ಕುತೂಹಲ ಮತ್ತು ಅಲ್ಲಿನ ಸೌಂದರ್ಯವನ್ನು ವೀಕ್ಷಿಸಲು ಪ್ರಯಾಣ ಬೆಳೆಸುತ್ತಾರೆ. ಲೇಖಕಿ ಕಛೇರಿಯಲ್ಲಿ ತಮ್ಮ ಹಿರಿಯ ಸಹೋದ್ಯೋಗಿ ಮಾಲತಿಯವರೊಂದಿಗೆ "ನಾನು ಪೆರುವಿಗೆ ಹೋಗುವೆ, ಬ್ರಜಿಲ್, ಅಮೆಜಾನ್ ಮೇಲೆ ತೇಲಿ ಬರುವೆ ನಾಲ್ಕು ಗೆರೆಗಳ ಮೇಲೆ ಹಾರುವೆ, ಮಾಚುಪಿಚುವಿನ ಎತ್ತರವನ್ನು ತಲುಪುವೆ" ಎನ್ನುತ್ತಾ ತಮ್ಮ ಪ್ರಯಾಣದ ವಿವರವನ್ನು ತೆರೆದಿಡುತ್ತಾರೆ. ಗೆಳತಿ ಮಾಲತಿಯೊಂದಿಗೆ ಪ್ರಯಾಣಿಸಲು ಆರೋಗ್ಯದ ದೃಷ್ಟಿಯಿಂದ ಹಾಕಿಸಿಕೊಳ್ಳಬೇಕಾದ 'ಎಲ್ಲೊ ಫಿವರ್ ಇಂಜೆಕ್ಷನ್' ಪ್ರಸಂಗವು ಬರುತ್ತದೆ. ನಂತರ ಪೆರುವಿಗೆ ಪ್ರಯಾಣಿಸುವಾಗ ಎಲ್ಲರ ಪ್ರಶ್ನೆ ಒಂದೇ – ಎಲ್ಲಾ ಬಿಟ್ಟು ಪೆರುವಿಗೇಕೆ ಹೋಗ್ತೀರಾ? ಸ್ಪಾನಿಷ್ ಭಾಷೆ ಬಾರದೆ, ಅಲ್ಲಿ ನಿಭಾಯಿಲಾಗದು. ಪೆರುವಿನ ಜನರಿಗೆ ಒಂದಕ್ಷರವು ಇಂಗ್ಲೀಷ್ ಬಾರದು ಹೇಗೆ ನಿಭಾಯಿಸುತ್ತೀರಾ ಎಂಬುದಾಗಿತ್ತು. ಆದರೆ ಲೇಖಕಿಯ ಎದೆಯಲ್ಲಿ ಎಂದಥೋ ಆತ್ಮವಿಶ್ವಾಸವಿತ್ತು. ಹೊರ ಆಕ್ರಮಣದಲ್ಲಿ ನೂರಾರು ವರ್ಷಗಳು ತುಳಿತಕ್ಕೆ ಸಿಕ್ಕಿ ಪುಟಿದೇಳುತ್ತಿರುವ ಪೆರು ನಮಗೆ ಅಭೇದ್ಯವಾದುದು ಎಂಬ ವಿಶ್ವಾಸ, ಪೆರುವಿನ ಅಯಸ್ಕಾಂತ ಆಕರ್ಷಣೆ ಸೆಳೆದಿತ್ತು. ನಮ್ಮಿಚ್ಛೆಯಂತೆ ಅಲೆದು ಬರಬೇಕು, ಕಾಲದ ನಿರ್ಬಂಧವಿಲ್ಲದೆ ಕಂಡಲ್ಲಿ ಮನಸೋತಲ್ಲಿ ನಿಂತು ನಡೆವ ಸಮಯವಿರಬೇಕು, ಸ್ವಾತಂತ್ರ್ಯವಿರಬೇಕು. ಇಂತಹ ಹೊತ್ತು ತರುವ ಅನುಭವಗಳಿಗೆ ಎಲ್ಲೆ ಇರುವುದಿಲ್ಲ ಎನ್ನುತ್ತಾ ತಮ್ಮ ಪ್ರಯಾಣದ ಇಚ್ಛೆಯನ್ನು ತಿಳಿಸುತ್ತಾರೆ.

ನೇಮಿಚಂದ್ರ ತಮ್ಮ ಪ್ರವಾಸದಲ್ಲಿ ಯಾವುದೇ ರೀತಿಯ ದುಂದುವೆಚ್ಚಗಳಿಗೆ ಅವಕಾಶವಿಲ್ಲದಂತೆ ಎಚ್ಚರ ವಹಿಸಿದ್ದಾರೆ. ಲೇಖಕಿ ಜೀವನದ ನೈತಿಕ ಮೌಲ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದು ತಿಳಿಯುತ್ತದೆ. ಲೀಮಾದಿಂದ ದಕ್ಷಿಣಕ್ಕೆ ನಾಸ್ಕಾಗೆ ಹೋಗಿ ಅಲ್ಲಿನ ಅದ್ಭುತ ರಹಸ್ಯದ ಗೆರೆಗಳನ್ನು ನೋಡಬೇಕು, ಅವುಗಳನ್ನು ರಕ್ಷಿಸಲು ದುಡಿದ ಮಹಿಳಾವಿಜ್ಞಾನಿ ಮರಿಯಾರೇಕಿಯ ಬಗ್ಗೆ ಮಾಹಿತಿ ಸಂಗ್ರಹಿಸಬೇಕು, ಭೇಟಿಯಾಗಬೇಕು, ನಂತರ ಅಲ್ಲಿಂದ ಜ್ವಾಲಾಮುಖಿಗಳ ನಡುವಿನ ನಗರಿ 'ಅರಿಕೇಫಾ' ಹೋಗಿ ಅಲ್ಲಿಂದ ದಕ್ಷಿಣಕ್ಕೆ ಸರಿದು 'ಕುಸ್ಕೋ' ತಲುಪುವುದು, ಇನ್ಕಾ ಸಾಮ್ರಾಜ್ಯದ ರಾಜಧಾನಿ ಕುಸ್ಕೋವನ್ನು ಸಂದರ್ಶಿಸುತ್ತಾ, ಕುಸ್ಕೋರ ಪೆರುವಿನ ಪವಿತ್ರ ಕಣಿವೆಗಿಳಿಯುವುದು, ಅಲೆಯುವುದು, ಆಂಡೀಸ್ ಪರ್ವತಶಿಖರಗಳ ತುತ್ತ ತುದಿಯಲ್ಲಿರುವ ಕಳೆದು ಹೋದ ಇನ್ಕಾ ನಗರಿಯ ಮಾಚುಪಿಚುವನ್ನು ಕಾಣುವುದು, ಆಮೇಲೆ ಲೀಮಾಗೆ ಹಿಂದುರುಗಿ ಉತ್ತರಕ್ಕೆ ಸಾಗಿ ಅಮೆಜಾನ್ ಬೇಸ್ ತಲುಪಿ ಅಲ್ಲಿಂದ ಅಮೆಜಾನ್ ನದಿಯ ಮೇಲೆ ಹಾಯ್ದು ಪೆರುವಿನಿಂದ ಬ್ರೆಜಿಲ್ ದೇಶಕ್ಕೆ ಹೋಗುವ ಪ್ರಯಾಣದ ಯೋಜನೆ ಹಾಕಿಕೊಂಡಿರುವುದನ್ನು ನೇಮಿಚಂದ್ರ ತಿಳಿಸುತ್ತಾರೆ.

ದಕ್ಷಿಣ ಅಮೇರಿಕಾದ ಪೆರುವಿಗೆ ಕಾಲಿಟ್ಟ ಸಂದರ್ಭದಲ್ಲಿ ನೇಮಿಚಂದ್ರರು ಪ್ರಯಾಣ, ಪ್ರವಾಸಗಳ ಬಗ್ಗೆ ಒಂದು ದರ್ಶನವನ್ನೇ ನೀಡುತ್ತಾರೆ. ಪೆರುವಿನಲ್ಲಿ ಕಾಲಿಡುತ್ತಿದ್ದಂತೆ ಮೈಯಲ್ಲಿ

ಎಂತಹ ರೋಮಾಂಚನ, ಪುರಾತನ ಸಂಸ್ಕೃತಿಯ ನೆಲಕ್ಕೆ ಆಗಮಿಸಿದ್ದು, ಸಾವಿರ ಸಾವಿರ ವರ್ಷಗಳ ವೈಭವದ ವರ್ಣರಂಜಿತ ಇತಿಹಾಸದ ನೆಲಕ್ಕೆ, ನಾಗರೀಕತೆಯ ತೊಟ್ಟಿಲು ತೂಗಿದ ಸ್ಥಳಕ್ಕೆ ಬಂದಿಳಿದಿದ್ದೆವು. ಅಮೆರಿಕದಂತೆ ಎಲ್ಲಿಂದಲೋ ವಲಸೆ ಬಂದು ಸ್ಥಳೀಯರನ್ನೆಲ್ಲಾ ಬಡಿದು ಮುಗಿಸಿ ರಾತ್ರೋರಾತ್ರಿ ಏರಿನಿಂತು ಬೇರಿಲ್ಲದೆ ಬೆಳೆದ ಸಂಸ್ಕೃತಿಯಲ್ಲ. ಈ ನೆಲದಲ್ಲಿ ಸಾವಿರಾರು ವರ್ಷಗಳ ಚರಿತ್ರೆಯಿತ್ತು. ಅತ್ಯಂತ ಪುರಾತನ ಆಂಡೀಸ್ ಬೆಟ್ಟಗಳ ಕಠಿಣ ನೆಲದಲ್ಲಿ ಜೀವಂತವಿದ್ದ ಜನಜೀವನವಿತ್ತು ಎನ್ನುತ್ತಾರೆ ನೇಮಿಚಂದ್ರರು. ಕನಸು ಕಾಣಬೇಕು ಕನಸುಗಳಿಗೆ ಅದ್ಭುತ ಶಕ್ತಿಯಿದೆ. ಆಗ ಹಾರಲು ರೆಕ್ಕೆಗಳು ಮೊಳೆಯುತ್ತವೆ. ಆರಂಭದಲ್ಲಿ ಕಷ್ಟ, ಮೊದಲ ಹೆಜ್ಜೆ ಇಟ್ಟಂತೆ ಹಾದಿ ಸುಗಮ. ದೂರದ ದೇಶಗಳು ದೂರದಲ್ಲಿ ಕುಳಿತು ನೋಡಿದಾಗ ಅದು ಅಭೇದ್ಯ. ಗೊತ್ತಿಲ್ಲದ ಅಂಶಗಳು ದಿಗಿಲು ಹುಟ್ಟಿಸುತ್ತದೆ. ಆದರೆ ರೆಕ್ಕೆ ಬಿಚ್ಚಿ ಹಾರಲು ಹೊರಟರೆ ನಾವು ಗುರಿ ತಲುಪಲು ಸಾಧ್ಯ. ಮನುಷ್ಯನಿಗೆ ಅಸಾಧ್ಯವಾದುದು ಯಾವುದು ಇಲ್ಲವೆನ್ನುತ್ತಾರೆ ಲೇಖಕಿ.

ಪೆರುವಿನ ಜನರಲ್ಲಿ ಬಡತನವಿದ್ದರೂ ಪ್ರೀತಿ ವಾತ್ಸಲ್ಯಗಳಿಗೆ ಕೊರತೆಯಿಲ್ಲವೆನ್ನುತ್ತಾರೆ. ಭಾರತ ದೇಶದಲ್ಲಿದ್ದಂತೆ ಪ್ರೀತಿ, ವಿಶ್ವಾಸ ಹಾಗೂ ಅತಿಥಿ ದೇವೋಭವ ಗುಣಗಳನ್ನು ಹೋಲಿಕೆ ಮಾಡುತ್ತಾರೆ ಲೇಖಕಿ. ಅಲ್ಲಿನ ಚುನಾವಣೆಯನ್ನು ಗುರುತಿಸುತ್ತಾ ಇದುವರೆಗೆ ಇದ್ದಂತಹ ಫ್ಯೂಜಿಮೊರಿ ಮತ್ತು ಮಾಂಟೆನಿನೊರ ಸರ್ವಾಧಿಕಾರದಿಂದ ಬಿಡುಗಡೆ ಪಡೆಯಲು ಪೆರುವಿನ ಜನರು ಹೋರಾಡಿದ್ದನ್ನು ತಿಳಿಸುತ್ತಾರೆ. ಸ್ವತಃ ಫ್ಯೂಜಿಮೊರಿಯ ಪತ್ನಿ ಸುಸಾನ್, ಪತಿಯ ಭ್ರಷ್ಟ ರಾಜಕೀಯದ ವಿರುದ್ಧ ದನಿ ಎತ್ತಿದ್ದನ್ನು ತಿಳಿಸುತ್ತಾರೆ. ಪೆರುವಿನಲ್ಲಿ ಮಹಿಳೆಯರ ಪರವಾದ ದನಿಗಳು ಎದ್ದಿವೆ. ಭಾರತೀಯ ಸ್ತ್ರೀಯರಂತೆ ಇಲ್ಲಿನ ಸ್ತ್ರೀಯರು ಎಲ್ಲ ಕ್ಷೇತ್ರಗಳಲ್ಲಿ ಇರುವುದನ್ನು ಗಮನಿಸುತ್ತಾ ಲ್ಯಾಟಿನ್ ಅಮೆರಿಕದ ವೆನೆಸ್ಸುಲಾ, ಅರ್ಜೆಂಟೀನಾ, ಕೊಲಂಬಿಯಾ ದೇಶಗಳಲ್ಲಿ ಮಹಿಳೆಯರು ಸಾಕಷ್ಟು ಗಮನ ಸೆಳೆದಿದ್ದಾರೆ ಎನ್ನುತ್ತಾ, ಪೆರುವಿನ ಬಡಮಹಿಳೆಯರ ಹೋರಾಟಕ್ಕಾಗಿ ದುಡಿದ ಮರಿಯಾ ಎಲೆನಾ ಅತ್ಯಂತ ದಾರಿದ್ರ್ಯದ ಬಾಲ್ಯದಿಂದ ಮೇಲೆದ್ದ ಕಪ್ಪು ಮಹಿಳೆ. ಲೀಮಾದ ಕೊಳಚೆ ಪ್ರದೇಶ "ವಿಲ್ಲಾ ಎಲ್ ಸಲ್ವಾದರ" ಎಡಪಕ್ಷದ ಚುನಾಯಿತ ಉಪಮೇಯರ್ ಆದದ್ದು. ಹೋರಾಟದ ನಂತರ ಗೆರಿಲ್ಲಾಗಳು ಹತ್ಯೆ ಮಾಡಿದ್ದು ಎಲ್ಲವನ್ನು ದಾಖಲಿಸಿದ್ದಾರೆ.

ಪೆರುವಿನ ನೆಲದಲ್ಲಿ ಅಡಿಗಡಿಗೆ ಪೂರ್ವಿಕರ ಶ್ರಮ, ಶಕ್ತಿ, ಜ್ಞಾನ, ತಂತ್ರಜ್ಞಾನದ ಬಗ್ಗೆ ಅಚ್ಚರಿ ಮೂಡಿಸುತ್ತದೆ. ಕಿರಿದಾದ ಕಣಿವೆಯಲ್ಲಿ ಬೇಸಾಯಕ್ಕೆ ಸ್ಥಳವಿಲ್ಲದೆ ಬೆಟ್ಟಗುಡ್ಡಗಳನ್ನು ಕಡಿದು ಟರೇಸ್ ಮಾಡಿ ಬೆಳೆದದ್ದು, ದುರ್ಗಮವಾದ ಆಂಡೀಸ್ ಪರ್ವತ ಶ್ರೇಣಿಯ ತುತ್ತ ತುದಿಯಲ್ಲಿ 'ಮಾಚುಪಿಚು' ನಂತಹ ಪಟ್ಟಣವನ್ನು ಕಟ್ಟಿದ್ದು, ಭಾರಿ ಗಾತ್ರದ ಸೂರ್ಯದೇವಾಲಯ ನಿರ್ಮಿಸಿದ್ದು ಲೀಮಾದಲ್ಲಿ ಈಗಷ್ಟೆ ಅನಾವರಣಗೊಳ್ಳುತ್ತಿರುವ ಪಿರಮಿಡ್ಡುಗಳು, ಏನೆಲ್ಲಾ ಕಥೆಗಳನ್ನು ಅರಗಿಸಿಕೊಂಡಿದೆಯೋ, ಕಳೆದುಹೋದ ಸಾಮ್ರಾಜ್ಯದ ಗುಟ್ಟು ಒಡೆಯುವುದು ಸುಲಭವಲ್ಲ. ಅದರ

ಚರಿತ್ರೆ, ಸಂಸ್ಕೃತಿ, ಧರ್ಮ ಎಲ್ಲವು ಅಳಿಸಿ ಹಾಕಿದ ಹಿನ್ನೆಲೆಯಲ್ಲಿ ಈ ನೆಲದ ಜನರ ಇತಿಹಾಸ ಅರಿಯುವುದು ಸುಲಭದ ಕೆಲಸವಲ್ಲ ಎನ್ನುತ್ತಾರೆ. 'ನಾಸ್ಕಾದ ಗೆರೆ' ಇವುಗಳ ಬಗ್ಗೆ ಹೆಚ್ಚಿನ ಕೆಲಸ ಮಾಡಿದ ಮಹಿಳಾ ವಿಜ್ಞಾನಿಯಾದ ಡಾ.ಮರಿಯಾರೇಕಿಯ ಸಾಧನೆಯನ್ನು ಗುರುತಿಸುತ್ತಾರೆ.

ನೇಮಿಚಂದ್ರರು ಕಂಡಂತಹ ಅನೇಕ ಸ್ಥಳಗಳ ಮಾಹಿತಿಗಳನ್ನು ಪರಿಚಯಿಸುತ್ತಾರೆ. ಅಲ್ಲಿ ಫಲವಂತಿಕೆಗಾಗಿ ಬೇಡಿ ಪೂಜಿಸಿದ ದೊಡ್ಡ ಬೃಹತ್ ಶಿಶ್ನಗಳ ಬಯಲು ದೇಗುಲವನ್ನು ಕಂಡು, ಭಾರತೀಯರ ಲಿಂಗಪೂಜೆಯ ಸಂಸ್ಕೃತಿಗಿಂತ ವಿಭಿನ್ನವಾಗಿಲ್ಲವೆಂದು ತಿಳಿಸುತ್ತಾರೆ. ಹೆಜ್ಜೆ ಹೆಜ್ಜೆಗೂ ಭಾರತ ಹಾಗೂ ಪೆರುವಿನ ನಡುವಿನ ಸಾಮ್ಯತೆ ತರುತ್ತಾರೆ. ಇನ್ಕಾ ಪೂರ್ವ ಸಮಾಧಿಗಳ, ಮರುಭೂಮಿಯ ದೈತ್ಯ ಚಿತ್ರಣಗಳನ್ನು ಬೆಟ್ಟದ ಇಳಿಜಾರಿನಲ್ಲಿ ಮನುಷ್ಯ ಚಿತ್ರಗಳ ಬಗ್ಗೆ ತಿಳಿಸುತ್ತಾರೆ. ಇಂದು ನಾಸ್ಕಾ ರಹಸ್ಯದ ಗೆರೆಗಳು ಉಳಿದಿದ್ದರೆ ಡಾ.ಮರಿಯರೇಕಿಯ ಕಾರಣದಿಂದ, ಮರಿಯಾಳನ್ನು ಜಗತ್ತು "ದಿ ಲೇಡಿ ಆಫ್ ದಿ ಲೈನ್ಸ್"[೧] ಎಂದೇ ಗುರುತಿಸಿತು. ಯುನೆಸ್ಕೋ ನಾಸ್ಕಾ ಚಿತ್ರಗಳನ್ನು ವರ್ಲ್ಡ್ ಕಲ್ಚರ್ ಹೇರಿಟೇಜ್ ಎಂದು ಘೋಷಿಸಿತು.

ಲೀಮಾದಿಂದ ನಾಸ್ಕಾ ಮರುಭೂಮಿ ೨೫೦ಮೈಲಿ ದಕ್ಷಿಣಕ್ಕಿದೆ. ಕ್ರಿ.ಪೂ.೧೦೦೦ಕ್ಕೂ ಹಿಂದಿನ ಈ ನಾಸ್ಕಾ ಕಣಿವೆಯಲ್ಲಿ ಅದ್ಭುತ ನಾಗರೀಕತೆಯಿತ್ತು, ಜನರಿದ್ದರು ಸಾಕಷ್ಟು ಅಭಿವೃದ್ಧಿಗೊಂಡ ಕೃಷಿ ವಿಧಾನಗಳನ್ನು ಬಲ್ಲವರಾಗಿದ್ದರು. ನೀರಾವರಿಯಿಂದ ಬೆಳೆಯಲ್ಲಿ ಸುಧಾರಣೆಯನ್ನು ತಂದವರಾಗಿದ್ದರು. ನಂತರ ೧೫೦೦ವರ್ಷಗಳಲ್ಲಿ ಈ ನಾಸ್ಕಾ ಜನರು ತಮ್ಮ ಪ್ರತಿಭೆ ಮತ್ತು ಕೌಶಲವನ್ನು ನೇಯ್ಗೆ, ಮಡಿಕೆ-ಕುಡಿಕೆ, ವಾಸ್ತುಶಿಲ್ಪಕಲೆಗಳಲ್ಲಿ ಪ್ರದರ್ಶಿಸಿದರು. ಈ ಮರುಭೂಮಿಯು ಅದ್ಭುತ ನಾಗರೀಕತೆ ಧರ್ಮ ಮತ್ತು ಸಂಸ್ಕೃತಿಯ ಕುರುಹು ಎಲ್ಲವೂ ಸ್ಪೇನ್ ಆಕ್ರಮಣದಲ್ಲಿ ಅಳಿದಿದ್ದನ್ನು ತಿಳಿಸಿದ್ದಾರೆ. ನಾಸ್ಕಾ ಜಗತ್ತನ್ನು ಕುರಿತ ಹಲವು ಗ್ರಂಥಗಳು ಹೊರಬಂದಿರುತ್ತವೆಯಾದರೂ ಅವುಗಳಲ್ಲಿನ ಸತ್ಯಾಸತ್ಯತೆಯನ್ನು ಕುರಿತು ಆಲೋಚಿಸಬೇಕಾಗಿದೆ.

ಅರಿಕೀಪಾ ನಗರವನ್ನು ಕಟ್ಟಿದ್ದು ಬಿಳಿಬಣ್ಣದ ಜ್ವಾಲಾಮುಖಿಯ ಕಲ್ಲುಗಳಿಂದ, ಚಚಾನಿ ಜ್ವಾಲಾಮುಖಿ ಉಗುಳುವ ಲಾವಾರಸ ಕಠಿಣ ಕಲ್ಲಾಗಿ, ಆ ಬೂದಿಯ ಕಲ್ಲುಗಳಿಂದ ಕಟ್ಟಡಗಳನ್ನು ಕಟ್ಟಿದ್ದಾರೆ. ಇದು ಲೀಮಾ ನಂತರದ ಪೆರುವಿನ ಅತಿ ದೊಡ್ಡ ನಗರ. ಇಲ್ಲಿನ ಸೇಂಟ್ ಕ್ಯಾರೋಲಿನಾ ಮೊನೆಸ್ಟರಿ ನಗರದ ಸುಂದರ ಚೌಕ ನಂತರ ಪ್ಲಾಸಾಡೆ ಅರ್ಮಸ್‌ಗಳನ್ನು ಲೇಖಕಿ ವೀಕ್ಷಿಸುತ್ತಾರೆ.

ಇನ್ಕಾ ಸಾಮ್ರಾಜ್ಯದ ನಾಭಿಕೇಂದ್ರ 'ಕುಸ್ಕೋ'. ಇನ್ಕಾ ಸಾಮ್ರಾಜ್ಯದ ರಾಜಕೀಯ, ಧಾರ್ಮಿಕ ರಾಜಧಾನಿಯಾಗಿತ್ತು. ಈಗ ಪ್ರತಿಪ್ರಮುಖ ಬೀದಿಯಲ್ಲೂ ಇನ್ಕಾಗಳ ಅವಶೇಷವಿದೆ. ಅಲ್ಲಿನ ಪಿಸಾಕ್

೧.ನೇಮಿಚಂದ್ರ; ಪೆರುವಿನ ಪವಿತ್ರ ಕಣಿವೆಯಲ್ಲಿ, ಪುಟ-೧೫೧

ಹಳ್ಳಿಯಲ್ಲಿ ಇನ್ಕಾದ ಅವಶೇಷವಿದೆ. ಅಲ್ಲಿನ ಮಾರುಕಟ್ಟೆಯಲ್ಲಿ ಹಳ್ಳಿಯ ಹೆಣ್ಣುಮಕ್ಕಳನ್ನು ಕಂಡುದಾಗಿ ತಿಳಿಸುತ್ತಾರೆ.

ಓಲಂತಾಯ್‌ತೋಂಬೋದಲ್ಲಿ ಬರುವ ಮತ್ತೊಂದು ದೈವ ವೀರಕೋಚನನ್ನು ಕುರಿತ ಒಂದು ಪ್ರಾರ್ಥನೆ-

ವೀರಕೋಚ ವಿಶ್ವದ ದೊರೆಯೆ
ನೀನು ಹೆಣ್ಣೋ, ಗಂಡೋ
ಆದರೆ ಜಗತ್ತಿಗೆ ಶಾಖವನ್ನು ಫಲವತ್ತತೆಯನ್ನು
ನೀಡಿದವನು ಎಲ್ಲಿರುವ ನೀನು?
ಓ ಸೃಷ್ಟಿಕರ್ತ ವೀರಚೋನ ನೀನು ಹೆಣ್ಣಾಗಿರು, ಗಂಡಾಗಿರು
ಧರ್ಮದ ನಿಲುವಾಗಿರಬಹುದೇನೋ

(ನೇಮಿಚಂದ್ರ; ಪೆರುವಿನ ಪವಿತ್ರ ಕಣಿವೆಯಲ್ಲಿ ಪುಟ-೨೩೫)

ಎನ್ನುತ್ತಾರೆ. ಶತಶತಮಾನಗಳ ನೋವಿನ ಕಥೆಯನ್ನು ಹೇಳುವ ಕುಸ್ಕೋ ನಗರದ ವ್ಯಾಪಾರ ಚೌಕವೊಂದರಲ್ಲಿ ೧೫೩೩ರಲ್ಲಿ ಇನ್ಕಾ ಸಾಮ್ರಾಜ್ಯದ ಅತಹುಲ್ಪನನ್ನು ಹತ್ಯೆ ಮಾಡಲು ಆಜ್ಞೆ ನೀಡಿದ್ದನಂತೆ, ಸ್ಪೇನ್ ದೇಶದ ಪಿಜಾರೋ, ಇನ್ಕಾ ಸಾಮ್ರಾಜ್ಯದ ಐಶ್ವರ್ಯವನ್ನು ಲೂಟಿ ಮಾಡಿ ಅತಹುಲ್ಪನನ್ನು ಕ್ರಿಸ್ತಧರ್ಮಕ್ಕೆ ಮತಾಂತರಗೊಳ್ಳಲು ಆಮಿಷವೊಡ್ಡಿ ಬೆದರಿಸಿದ್ದನ್ನು ತಿಳಿಸುತ್ತಾರೆ. ಪ್ಲಾಸದ ಚೌಕದಲ್ಲಿಯೇ ಅತಹುಲ್ಪನನ್ನು ಕತ್ತು ಹಿಸುಕಿ ಕೊಲ್ಲಲಾಯಿತು ಎನ್ನುತ್ತಾರೆ. ಇನ್ಕಾ ಸಾಮ್ರಾಜ್ಯ ಕೊನೆಗೊಂಡಿದ್ದನ್ನು ತಿಳಿಸುತ್ತಾರೆ. ನಂತರ ಬಹಳಷ್ಟು ಬದಲಾವಣೆಗಳಾಯಿತೆಂದು, ಕುಸ್ಕೊದ ಸುಪ್ರಸಿದ್ಧ ಇನ್ಕಾಗಳ ಸೂರ್ಯದೇವಾಲಯದ ಮೇಲೆ ಸ್ಪಾನಿಷ್ ಜನ ಕಟ್ಟಿದ ಚರ್ಚ್ ಇದೆ ಎನ್ನುತ್ತಾ, ಸೂರ್ಯ ದೇವಾಲಯದಲ್ಲಿ ಬಳಸಲಾದ ಭಾರಿ ಏಕಶಿಲಾಕಲ್ಲುಗಳಿಂದ ಚರ್ಚಿನ ಗೋಡೆಗಳನ್ನು ಕಟ್ಟಿರುವುದನ್ನು ಗಮನಿಸುತ್ತಾರೆ.

'ಇಕಿಟಸ್' ಪೆರುವಿನ ಅಮೆಜಾನ್ ಬೇಸ್‌ನ ನಟ್ಟನಡುವಿದೆ. ಲೀಮಾದಿಂದ ಇಲ್ಲಿಗೆ ೧೦೦೦ಕಿ.ಮೀ.ಗೂ ಹೆಚ್ಚು ದೂರ. ಇಕಿಟಸ್‌ನ ದೊಡ್ಡ ರಾಜಧಾನಿ 'ಲೊರೆತೋ'. ಈ ನಗರ ಅಮೆಜಾನ್ ನದಿಯ ತೀರದಲ್ಲಿದೆ. ನಗರದ ಸುತ್ತಾ ನದಿಗಳು, ನಾಲೆಗಳು ನಾಪೋ ನದಿ ಮತ್ತು ಅಮೆಜಾನ್ ಇಕಿಟಸ್ ಹತ್ತಿರ ಸಂಗಮವಾಗಿದೆ. ಅಮೆಜಾನ್ ತಟದ ಪ್ರಕೃತಿಯ ಚೆಲುವು ಜನರ ಬದುಕಿನ ಚಿತ್ರಣವನ್ನು ನೀಡುತ್ತಾರೆ. ಒಮ್ಮೆ ದೋಣಿ ಸಂಚಾರದಲ್ಲಿ ಅಲ್ಲಿದ್ದದ ಜನರು ಬಿಸ್ಕೆಟ್, ಚಾಕೊಲೇಟ್, ತಿಂಡಿಗಳನ್ನು ಹಂಚಿಕೊಂಡು ತಿಂದದ್ದನ್ನು ನೆನೆಸುತ್ತಾ, ಹಂಚಿ ತಿನ್ನುವ, ಎದುರಿಗಿರುವವರಿಗೆ ನೀಡುವ ಪ್ರವೃತ್ತಿ ಭಾರತೀಯ ಸಂಪ್ರದಾಯವನ್ನು ಪೆರುವಿನಲ್ಲಿ ಕಂಡೆ ಎನ್ನುತ್ತಾರೆ.

ಕುಸ್ಕೋದಿಂದ ಮಾಚುಪಿಚುವಿಗೆ ಮೂರುಗಂಟೆಯ ಪ್ರಯಾಣ. ಮಾಚುಪಿಚು ಕಳೆದು ಹೋದ ಇನ್ಕಾಗಳ ಪ್ರಸಿದ್ಧ ನಗರ. ಇನ್ಕಾಗಳು ಈ ಕಡಿದಾದ ಬೆಟ್ಟದ ಮೇಲೆ ತಮ್ಮ ನಗರವನ್ನು ಸ್ಥಾಪಿಸಲು ಯೋಜಿಸಿದ್ದನ್ನು ಕುರಿತು ಕುತೂಹಲ ತಳೆಯುತ್ತಾರೆ. ನೇಮಿಚಂದ್ರರು ಅಲ್ಲಿ ಬೆಳೆದು ನಿಂತ ಆರ್ಕಿಡ್‌ಗಳನ್ನು ವೀಕ್ಷಿಸುತ್ತಾ ಇನ್ಕಾ ನಗರಕ್ಕಿಂತ ಎತ್ತರದ ಬೆಟ್ಟದ ಭಾಗದಲ್ಲಿ ನೋಡುತ್ತಾ ನಿಲ್ಲುತ್ತಾರೆ. ಕಾಲದ ಗರ್ಭದಲ್ಲಿ ಹುದುಗಿ ನಲುಗಿದ ಭವ್ಯ ನಗರದ ಸುತ್ತಲೂ ಪರ್ವತಗಳೂ ಮುಗಿಲೆತ್ತರವಿದ್ದೂ ಹೊರಗಿನ ಲೋಕಕ್ಕೆ ಮಾಚುಪಿಚು ನಗರ ಪರ್ವತ ಶಿಖರಗಳ ನಡುವೆ ತೂಗಿದ ತೊಟ್ಟಿಲಲ್ಲಿದೆ. ಪರ್ವತ ಶಿಖರಗಳ ನಡುವೆ ಸಂರಕ್ಷಿತವಾಗಿ ಉಳಿದ ಮಾಚುಪಿಚು ರಹಸ್ಯ ನಗರ, ಎರಡೂ ಪಕ್ಕಕ್ಕೂ ಆಳದ ಕಣಿವೆಗಳು, ಒಂದು ಕಡೆ ಉರುಬಂಬಾ ನದಿಯೂ ಮಾಚುಪಿಚುವನ್ನು ಸುತ್ತಿ ತಿರುವಿ ಹಾವಿನಂತೆ ಹರಿಯುತ್ತಿದ್ದಾಳೆ. ಪ್ರಕೃತಿ ಸಂಪತ್ತನ್ನು ಸೂಕ್ಷ್ಮವಾಗಿ ಬುದ್ಧಿವಂತಿಕೆಯಿಂದ ಬಳಸಿಕೊಂಡಿದ್ದು ಆಂಡೀಸ್ ನಾಗರೀಕತೆ ಮತ್ತು ಇನ್ಕಾ ಸಾಮ್ರಾಜ್ಯದ ಯಶಸ್ಸಿಗೆ ಕಾರಣವೆನ್ನುತ್ತಾ ಮಾಚುಪಿಚುವನ್ನು ಕಾಣುವ ಕನಸು ನನಸಾಯ್ತು ಎಂದಿದ್ದಾರೆ. ಕಳೆದುಹೋದ ಇನ್ಕಾ ನಗರಿಯು ಉತ್ಖನನಕ್ಕೆ ಮೊದಲು ಮತ್ತು ನಂತರದ ಅಂಶಗಳನ್ನು ದಾಖಲಿಸಿದ್ದಾರೆ.

ಬ್ರೆಜಿಲ್‌ನ್ನು ಸಂದರ್ಶಿಸುತ್ತಾ ಅಲ್ಲಿನ ಬಯೋಟೆಕ್ ಕಂಪನಿಗಳ ದುರಾಸೆಯನ್ನು ಕುರಿತು ಮಾಹಿತಿ ನೀಡುತ್ತಾರೆ. ಕೊಲಂಬಿಯಾ ನೆಲಕ್ಕೂ ಕಾಲಿಟ್ಟು ಅಲ್ಲಿ ಸ್ಪೇನ್ ದೇಶದ ಹುಡುಗಿಯೊಬ್ಬಳು ಹಿಂದಿಯಲ್ಲಿ ಮಾತನಾಡಿದ್ದನ್ನು ಕಂಡು ವಿಚಾರಿಸುತ್ತಾ, ಆಕೆ ತಾನು ಫ್ಯಾಷನ್ ಕೋರ್ಸ್ ಮಾಡಲು ಭಾರತದಲ್ಲಿದ್ದುದ್ದನ್ನು ತಿಳಿಯುತ್ತಾರೆ. ಪೆರುವಿಗೆ ಮತ್ತೆ ಪ್ರಯಾಣಿಸಿ ಪೆರುವಿನ ಅಧ್ಯಕ್ಷ ಸ್ಥಾನಕ್ಕೆ ನಿಂತ ತೊಲೆದೋ ಆಂಡಿಯನ್ ಮೂಲದ ವ್ಯಕ್ತಿ, ಅಮೇರಿಕಾದ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದು ಅರ್ಥಶಾಸ್ತ್ರಜ್ಞನಾದ. ಪತ್ನಿ ಎಲಿನಾಕಾರ್ಫ್ ಮಾನವಶಾಸ್ತ್ರಜ್ಞೆ, ಬೆಲ್ಜಿಯಂ ಮೂಲದವಳಾದರೂ ಕೆಚುವಾ ಭಾಷೆಯನ್ನು ಬಲ್ಲವಳು, ತೊಲೆದೋವನ್ನು ಆಯ್ಕೆ ಮಾಡಿ ಸರ್ವಾಧಿಕಾರಕ್ಕೆ ಇತಿಶ್ರೀ ಹಾಡಿ ಡೆಮೊಕ್ರಸಿ ತರುವ ಆಶಾವಾದ ಜನರಲ್ಲಿದೆ. ತೊಲೆದೋ ಭ್ರಷ್ಟತೆ ಇಲ್ಲದ ನ್ಯಾಯ, ಸಮಾನತೆಯ ಸಮಾಜ ಕಟ್ಟುವ ಆಶಾಭಾವನೆ ಇದೆ. ಕೆಲವರಿಗೆ ಮಾತ್ರ ತೊಲೆದೋರನ್ನು ಆಯ್ಕೆ ಮಾಡುವ ಬಗ್ಗೆ ಆತಂಕಗಳು ಇದ್ದವೆನ್ನುತ್ತಾರೆ.

'ಹೋಗಿ ಬರುವೆ ಪೆರು' ಅಧ್ಯಾಯದಲ್ಲಿನ ಇಕಿಟಸ್ ಎಂಬ ಬಂದರು ನಗರವು ಒಂದು ಕಾಲಕ್ಕೆ ಜಗತ್ತಿನ ಪ್ರಮುಖ ರಬ್ಬರ್ ರಾಜಧಾನಿಯಾಗಿತ್ತಂತೆ. ೧೯೦೦ರಲ್ಲಿ ರಬ್ಬರಿಗೆ ಬೇಡಿಕೆಯಿದ್ದ ಕಾರಣ ಜಗತ್ತಿನಾದ್ಯಂತ ರಬ್ಬರನ್ನು ಹುಡುಕಿ ಹೊರಟ ದಂಡಯಾತ್ರೆಗಳಿಗೆ ಕಾರಣವಾಗಿ ಇಕಿಟಸ್ ನಲ್ಲಿ 'ಅಂತರಾಷ್ಟ್ರೀಯ ಕಾರ್ಪೋರೇಷನ್' ನೆಲಸಿ ಇಲ್ಲಿನ ಸ್ಥಳೀಯ ಹಳ್ಳಿಗರನ್ನು ರಬ್ಬರ್ ಒದಗಿಸುವಂತೆ ಬೆದರಿಸಿ ಒತ್ತಾಯಿಸಿದವು. ಯುರೋಪಿಯನ್ನರ ಒಡೆದು ಆಳುವ ನೀತಿಯಿಂದ ಹಳ್ಳಿಗಳನ್ನು ಎತ್ತಿಕಟ್ಟಿ ಲಾಭ ಪಡೆದರು. ರಬ್ಬರ್‌ಗಾಗಿ ಜನಾಂಗೀಯ ಹತ್ಯೆಗಳೇ ನಡೆಯಿತು ಎನ್ನುತ್ತಾ

ರಬ್ಬರ್ ಬೇಡಿಕೆಯ ದಿನಗಳಲ್ಲಿ ಕ್ರೂರ ಶೋಷಣೆಗಾಗಿ ಬಲಿಯಾದ ಪೆರುವಿನ ಸ್ಥಳೀಯರ ಚಿತ್ರಣಗಳನ್ನು ದಾಖಲಿಸುತ್ತಾರೆ.

ನೇಮಿಚಂದ್ರರ ಪ್ರವಾಸ ಕಥನವು ಪ್ರಾರಂಭದಿಂದ ಅಂತ್ಯದವರೆಗೆ ಒಂದೊಂದು ಅಧ್ಯಾಯವೂ ಮುಖ್ಯವೆನಿಸುತ್ತವೆ. ಓದುಗರ ಮನದಲ್ಲಿ ಇನ್ಕಾ ನಾಗರೀಕತೆ, ಪೆರುವಿನ ದರ್ಶನ, ಅಮೆಜಾನಿನ ದರ್ಶನ ಮಾಡಿಸುತ್ತಾರೆ. ಪ್ರವಾಸ ಕಥನದಲ್ಲಿ ಸ್ತ್ರೀವಾದ, ಸ್ತ್ರೀಪರ ಕಾಳಜಿಗಳು, ಪ್ರಕೃತಿಯ ಬಗೆಗಿನ ಕಾಳಜಿ, ಶೋಧನೆ ರಾಜಕೀಯ, ವಿಜ್ಞಾನ ಎಷ್ಟೆಲ್ಲಾ ವಿಷಯಗಳನ್ನು ಕುರಿತು ಮಾಹಿತಿ ನೀಡಿರುವುದು ಗಮನಿಸಬೇಕಾದ ಅಂಶಗಳಾಗಿವೆ. ಸಾಂಸ್ಕೃತಿಕ ಅಧ್ಯಯನಕ್ಕೆ ಈ ಕೃತಿ ಸಹಾಯಕವೂ ಆಗಿದೆ. ಇದು ಉತ್ತಮ ಪ್ರವಾಸ ಕೃತಿಯೆಂಬುದರಲ್ಲಿ ಎರಡು ಮಾತಿಲ್ಲ. ಪೆರುವಿನ ನೆಲವನ್ನು ಬಿಡುವಾಗ ಲೇಖಕಿಗೆ ಅನಿಸಿದ್ದು, "ಈ ಪುರಾತನ ಸಂಸ್ಕೃತಿಯ ತೊಟ್ಟಿಲಲ್ಲಿ ಎಷ್ಟೆಲ್ಲಾ ಅದ್ಭುತಗಳು, ಇನ್ನೂ ಶೋಧಿಸದೆ ಉಳಿದಿವೆ. ಇಲ್ಲಿ ಹೆಜ್ಜೆ ಹೆಜ್ಜೆಗೂ ಇತಿಹಾಸ ಬಿಚ್ಚಿಕೊಳ್ಳುತ್ತದೆ. ಕಾಣೆಯಾದ ಚರಿತ್ರೆ ಹೊರಬೀಳುತ್ತದೆ. ಭಾರತದಂತೆ ಅತ್ಯಂತ ಪುರಾತನ ಸಂಸ್ಕೃತಿಯ ಅದ್ಭುತ ನೆಲ. ಇಲ್ಲಿ ಅಲೆದಷ್ಟೂ ಹೊಸದಿತ್ತು. ಈ ಆಂಡೀಸ್ ಪರ್ವತಗಳು, ಬೆಟ್ಟ ಕಣಿವೆಗಳು, ಮರಳುಗಾಡು, ಅಮೆಜಾನ್ ಮಳೆ ಕಾಡು" ನಾವು ಕಂಡದ್ದು ಒಂದು ಗುಟುಕು ಮಾತ್ರ, ಮತ್ತೆ ಬರುವೆ, ಪುರುಸತ್ತಾಗಿ ಪೆರುವಿನ ಮೂಲೆ ಮೂಲೆಗಳಲ್ಲಿ ಅಲೆಯಲು ಬರುವೆ. ಅಂದುಕೊಂಡೇ, ವಿಮಾನ ಮೆಲ್ಲನೆ ನೆಲಬಿಟ್ಟು ಹಾರಿದಂತೆ, 'ಹೋಗಿ ಬರುವೆ' ಎನ್ನುತ್ತಾ ಪೆರುವಿಗೆ ಹೃದಯ ತುಂಬಿ ವಿದಾಯ ಹೇಳಿದೆ ಎನ್ನುತ್ತಾರೆ ನೇಮಿಚಂದ್ರ.

ಒಂದು ಕನಸಿನ ಪಯಣ:

ಇದು ಒಂದು ಪ್ರವಾಸ ಕಥನ. ಪ್ರವಾಸ ಕೈಗೊಳ್ಳಲು ಉದ್ದೇಶ ಇರಲೇಬೇಕೆಂದಿಲ್ಲ, ಬೇಕನ್ ಹೇಳಿರುವಂತೆ "ಚಿಕ್ಕವರಿಗೆ ಪ್ರವಾಸ ಒಂದು ಶಿಕ್ಷಣ, ದೊಡ್ಡವರಿಗೆ ಒಂದು ಅನುಭವ" ಎಂದಿದ್ದಾನೆ. ಲೇಖಕಿ ನೇಮಿಚಂದ್ರರು ತಮ್ಮ ಯುರೋಪಿನ ಪ್ರವಾಸದ ಅನುಭವಗಳನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ. ಇಡೀ ಯುರೋಪನ್ನು ತಮ್ಮ ಗೆಳತಿ ಹೇಮಲತಾ ಮಹಿಷಿಯವರೊಡನೆ ಸುತ್ತಾಡಿ ಬಂದು ಬರೆದ ಪ್ರವಾಸ ಕಥನವಾಗಿದೆ.

ಲೇಖಕಿ ನೇಮಿಚಂದ್ರರಿಗೆ ಒಂದು ಕನಸಿತ್ತು. ಜಗತ್ತು ನೋಡಬೇಕು, ಜನ ನೋಡಬೇಕು ಎಂಬ ಕನಸು. ಮಹಿಳಾ ವಿಜ್ಞಾನಿಗಳನ್ನು ಕುರಿತು ಒಂದೂವರೆ ದಶಕಗಳಿಂದ ಪುಸ್ತಕ ಬರೆಯುತ್ತಿದ್ದು, ಆ ಸ್ಥಳಗಳನ್ನು ನೋಡಬೇಕೆಂಬ ಆಸೆ ಪುಟಿಯಿತು. ಸಾಹಿತ್ಯ, ವಿಜ್ಞಾನ, ಮಹಿಳಾ ಅಧ್ಯಯನ ಇವು ಆಸಕ್ತಿಯ ವಿಷಯಗಳಾದ ಕಾರಣ ಮೇರಿಕ್ಯೂರಿಯ ಪ್ರಯೋಗಶಾಲೆಯನ್ನು, ಬ್ರಾಂಟೆಯ 'ಮೂರ್'ಗಳನ್ನು, ಪ್ರಥಮ ಸ್ತ್ರೀವಾದಿ ಲೇಖಕಿ ಆಫ್ರಾಳ ಹಳ್ಳಿಯನ್ನು ಹಾಗೂ ಹಾರ್ಬಲ್ ಡೌನ್‌ನನ್ನು,

೧೯ನೇ ಶತಮಾನದ ಖಗೋಳ ಶಾಸ್ತ್ರಜ್ಞೆ ಕ್ಯಾರೋಲಿನ್ ಹರ್ಷಲ್‌ಳ 'ಸ್ಲೌ'ನ್ನು, ರೋಸಲಿಂಡಳ ಕಿಂಗ್ಸ್ ಹ್ಯಾಂಪ್‌ಸ್ಟೆಡ್ ಹೀತ್‌ನ ಮನೆಯನ್ನು, ಕೊನೆಯುಸಿರೆಳೆದ ರೋಮಿನ ಆ ಏಕಾಂತದ ಕೋಣೆಯನ್ನು, ಫ್ಲಾರೆನ್ಸ್ ನೈಟಿಂಗೇಲಳ ಆಸ್ಪತ್ರೆಯನ್ನು, ವರ್ಡ್ಸ್‌ವರ್ತ್‌ನ ಸ್ವರ್ಗೀಯ ನೆಲವನ್ನು, ಆನ್‌ಫ್ರಾಂಕ್ ಅವಿತಿದ್ದ ಆ ಗುಪ್ತ ಜಾಗವನ್ನು ಕುಸಿದ ಬರ್ಲಿನ್ ಗೋಡೆಯನ್ನು,ಡಕಾವ್ ನಾಜಿ ಕ್ಯಾಂಪನ್ನು, ಸಾಪೇಕ್ಷತಾವಾದ ರೂಪಗೊಂಡ ಐನ್‌ಸ್ಟೀನ್ ತಾಣವನ್ನು, ವ್ಯಾನ್‌ಗೋನ ಬಿಸಿಲು ಹಳದಿ ಸೂರ್ಯಕಾಂತಿಗಳನ್ನು ಕಂಡು ಬರಲು ಕನಸುಗಳನ್ನು ಹೊತ್ತು ಹೇಮಲತಾ ಮಹಿಷಿಯವರ ಜೊತೆ ಹೊರಟರು.

ಲಂಡನ್ನಿನ ಕ್ಯಾಂಟರ್‌ಬರಿಯಲ್ಲಿ ವೇಶ್ಯೆಯರ ಹಕ್ಕುಗಳಿಗಾಗಿ ಹೋರಾಡಲು ಅಗಾಧ ಧೈರ್ಯ ಮತ್ತು ಸಾಹಸದ ಅಗತ್ಯವಿತ್ತು. ಜೋಸೆಫಿನ್ ಬಟ್ಲರ್ ವೇಶ್ಯೆಯರ ಪರವಾಗಿ ಇನ್ನಿಲ್ಲದಂತೆ ಹೋರಾಡಿದಾಕೆ. ಲಿಂಗಭೇದಗಳ ವಿರುದ್ಧ ಒಂದೂವರೆ ಶತಮಾನಗಳ ಹಿಂದೆಯೇ ದನಿಯೆತ್ತಿದವಳು. ಆಫ್ರಾಬೆನ್, ಹದಿನೇಳನೇ ಶತಮಾನದ ಸ್ತ್ರೀವಾದಿ ಲೇಖಕಿ. ಎಮಿಲಿ ಬ್ರಾಂಟೆಯನ್ನು ನೋಡುವ ಸಲುವಾಗಿ 'ಹಾವರ್ತ್'ಗೆ ಬಂದಾಗ, "ನೇಮಿಚಂದ್ರರಿಗೆ ಇದು ಬ್ರಾಂಟೆಯ ನೆಲ ಎಂದಾಗ ರೋಮಾಂಚನವಾಯಿತು"[೧] ಎಮಿಲಿ ಬ್ರಾಂಟೆಯ 'ವುದರಿಂಗ್ ಹೈಟ್ಸ್' ಕಾದಂಬರಿ ಉಗ್ರ ಉತ್ಕಟ ಪ್ರೀತಿಯ ಕತೆ. ಹತಾಶ ಸೇಡಿನ ಉನ್ಮತ್ತ ಕತೆ ಇದು. ಈ ಕತೆಯ ಹಿನ್ನೆಲೆಯಲ್ಲಿ ಯಾರ್ಕ್‌ಶೈರ್‌ನ ಬೋಡುಬೆಟ್ಟಗಳಿವೆ. ಗಾಳಿ ಊಳಿಡುವ, ಸದಾ ಬಡಿದು ಘೀಳಿಡುವ ಗಿಡವಿಲ್ಲದೆ, ಮರವಿಲ್ಲದೆ, ಹಸಿರಿಲ್ಲದೆ ಭಣಗುಟ್ಟುವ ಬೋಳುಬೆಟ್ಟಗಳು ಇವೇ ಬ್ರಾಂಟೆಗೆ ಪ್ರಿಯವಾದ ಮೂರ್‌ಗಳು. ಅದ್ಭುತ ವರ್ಣನೆಯೇ ಲೇಖಕಿಯರನ್ನು ಎಳೆದು ತಂದಿತ್ತು. ಈ ನೆಲದಲ್ಲಿ ಇಂಗ್ಲೀಷ್ ಸಾಹಿತ್ಯದ ಒಂದು ವಿಶಿಷ್ಟ ಅಧ್ಯಾಯ ಬರೆಯಲ್ಪಟ್ಟಿತ್ತು.

ವರ್ಡ್ಸ್‌ವರ್ತ್‌ನ ನಿಸರ್ಗ ಸ್ವರ್ಗ ನೋಡಲು ಮ್ಯಾಂಚೆಸ್ಟರಿಗೆ ಬಂದರು. ಹತ್ತೊಂಬತ್ತನೇ ಶತಮಾನದ ಆಂಗ್ಲ ಭಾಷೆಯ ಮಹಾನ್ ಕವಿ ವಿಲಿಯಂ ವರ್ಡ್ಸ್‌ವರ್ತ್ ನಿಸರ್ಗದ ಮಡಿಲಲ್ಲಿ ಇದ್ದ ಲೇಕ್ ಡಿಸ್ಟ್ರಿಕ್ಸ್‌ನಲ್ಲಿ ವರ್ಡ್ಸ್‌ವರ್ತ್‌ನ ಕಾವ್ಯ ಸೌರಭ ಹರಡಿದೆ. ಇಲ್ಲಿಯೇ ಸಂತೃಪ್ತ, ಸರಳ ಬಾಳನ್ನು ಬಾಳಿ ವೃದ್ಧಾಪ್ಯವನ್ನು ಕಳೆದು ಅಲ್ಲಿಯೇ ಸಾವಿನ ಸೆರಗಲ್ಲಿ ಮಲಗಿದ್ದಾನೆ. ೧೭೯೬-೧೮೦೩ರ ಕಾಲವನ್ನು ವರ್ಡ್ಸ್‌ವರ್ತ್‌ನ ಮಹತ್ತರ ದಶಕ ಎಂದು ಗುರುತಿಸಿದ್ದಾರೆ. ಕಾರಣ ಅವನ ಅತ್ಯುತ್ತಮ ಕೃತಿಗಳು ಈ ಸಮಯದಲ್ಲಿಯೇ ಹೊರಬಂದದ್ದು. ಫ್ಲಾರೆನ್ಸ್ ನೈಟಿಂಗೇಲ್ 'ಲೇಡಿ ವಿತ್ ದಿ ಲ್ಯಾಂಪ್', ಈಕೆ ಮಿಲಟರಿ ಮತ್ತು ಸಿವಿಲ್ ನರ್ಸಿಂಗ್ ಅಭಿವೃದ್ಧಿಪಡಿಸಿದಾಕೆ. ಈಕೆ ತನ್ನ ಕಾಲದಲ್ಲೇ ದಂತಕತೆಯಾದವಳು. ಶ್ರೀಮಂತ ಕುಟುಂಬದಿಂದ ಬಂದರೂ ಐಷಾರಾಮಿಕ ಜೀವನವನ್ನು

೧.ನೇಮಿಚಂದ್ರ; ಒಂದು ಕನಸಿನ ಪಯಣ, ಪುಟ-೧೦೨

ಇಷ್ಟಪಡದೆ, ಚಿಕ್ಕ ವಯಸ್ಸಿಗೆ ಸೇವೆಯ ಹಾದಿ ತುಳಿದ ಮಹಾನ್ ಮಹಿಳೆ ಫ್ಲಾರೆನ್ಸ್ ನೈಟಿಂಗೇಲ್. ಈ ಸುಂದರ ಹುಡುಗಿ ಹುಡುಕಿಕೊಂಡು ಬಂದ ಶ್ರೀಮಂತ ಯುವಕರನ್ನು ನಿರಾಕರಿಸಿ ಜನರ ಸೇವೆಗೆ ಇಳಿದಿದ್ದಳು. ಯುದ್ಧದಲ್ಲಿ ಗಾಯಗೊಂಡ, ರೋಗಪೀಡಿತರಾದ ಯೋಧರ ನೆರವಿಗೆ ಸ್ವಇಚ್ಛೆಯಿಂದ ಧಾವಿಸುತ್ತಿದ್ದಳು. ಆಶ್ಚರ್ಯವೆಂದರೇ ಆಕೆಗೆ ಭಾರತ ಹಾಗೂ ಭಾರತೀಯ ವಿಷಯಗಳ ಬಗ್ಗೆ ಅಖಂಡವಾಗಿ ತಿಳಿದಿದ್ದು, ಫ್ಲಾರೆನ್ಸ್ ನೇಟಿಂಗಲ್ 'ಸೆಂಟ್ ಥಾಮಸ್ ಆಸ್ಪತ್ರೆ'ಯನ್ನು ಲಂಡನ್ನಿನಲ್ಲಿ ಸ್ಥಾಪಿಸಿದ್ದಾಳೆ. ಇದು ಜಗತ್ತಿನಲ್ಲೇ ಮೊಟ್ಟಮೊದಲ ನರ್ಸಿಂಗ್ ಶಾಲೆಯಾಗಿದೆ.

ನೇಮಿಚಂದ್ರರು ಊಟದ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಅಲ್ಲಿಯೇ ಸಿಗುತ್ತಿದ್ದ ಬ್ರೆಡ್ ಮತ್ತು ಆಲೂಗಡ್ಡೆಯ ತುಂಡೇ ಅವರ ನಿತ್ಯದ ಆಹಾರವಾಗಿತ್ತು. ಪ್ಯಾರಿಸ್‌ನಲ್ಲಿ ಮೇರಿಕ್ಯೂರಿಯ ಪ್ರಯೋಗಶಾಲೆ ಹುಡುಕಿ ಹೊರಟ ಲೇಖಕಿಗೆ ಮೇರಿಯಾ, ಪಿಯರ್, ಮಗಳು ಐಡೆನ್, ಅಳಿಯ ಜೋಲಿಯೋ ಕ್ಯೂರಿಯೋರ ನೊಬೆಲ್ ಪ್ರಶಸ್ತಿಯ ಭಾಷಣದ ಪ್ರತಿ ಸಿಕ್ಕಿದ್ದವು. ಮೇರಿಕ್ಯೂರಿ ರೇಡಿಯಂ ಕಂಡುಹಿಡಿದ ಆ ಸ್ಥಳ ನೋಡುವ ಉತ್ಕಟೇಚ್ಛೆಯಿಂದ ಮುಂದೆ ಹೊರಟಾಗ 'ರೂ ವೊಕಲಾನ್'ನಲ್ಲಿದ್ದ ಆ ಪ್ರಯೋಗಶಾಲೆಯ ಕೋಣೆಯ ರೇಡಿಯಂ ಕಂಡುಹಿಡಿದ ಮುರುಕಲು ಕೊಟ್ಟಿಗೆ ಇದ್ದ ಸ್ಥಳ ಎಂದು ಗೋಡೆಯ ಮೇಲೆಲ್ಲ ಹಾಕಿದ್ದ ಆ ಕೊಟ್ಟಿಗೆಯ ವಿವಿಧ ಕೋನಗಳ ಚಿತ್ರವನ್ನು ತೋರಿಸಿದರು. ಅಲ್ಲಿಂದ ಪ್ಯಾಂಥಿಯನ್ನುಗೆ ಬಂದು ಅಲ್ಲಿ ನೆಳಮಾಳಿಗೆಯಲ್ಲಿ ಬೀಗ ಹಾಕಿದ್ದ ಕಬ್ಬಿಣದ ಬಾಗಿಲ ಹಿಂದೆ ಪಿಯರ್ ಮತ್ತು ಮೇರಿಯರ ಸಮಾಧಿಗಳಿದ್ದವು. ಬದುಕಿಡೀ ದುಡಿದ ಜೀವಗಳು ಚಿರನಿದ್ರೆಯಲ್ಲಿ ಮಲಗಿದ್ದವು. ಅಲ್ಲಿಂದ ಹೊರಟ ಲೇಖಕಿ ಹೇಮಲತಾ ಅವರನ್ನು ಕರೆದುಕೊಂಡು, 'ರೂಕ್ಯುವ್ಯೇ' ನಲ್ಲಿದ್ದ 'ಮೇರಿ ಮತ್ತು ಪಿಯರಿ ಸಂಸ್ಥೆ' ತಲುಪಿದರು. ನೊಬೆಲ್ ಪಾರಿತೋಷಕ ಬಂದ ನಂತರ ದಿನಗಳಲ್ಲಿ ಇಲ್ಲಿ ಮೇರಿ ಮತ್ತು ಪಿಯರ್ ಜೊತೆಜೊತೆಯಾಗಿ ಸಂಶೋಧನೆ ನಡೆಸಿದ್ದರು.

ಪತಿಯನ್ನು ಸಾವು ಎಳೆದೊಯ್ದ ಆ ಕ್ಷಣ 'ಪಿಯರ್ ಇನ್ನಿಲ್ಲ' ಎಂದ ಕ್ಷಣ, ಮೇರಿ ಕುಸಿದಿರುವ ಸ್ಥಿತಿ ಹಾಗೂ ನಂತರ ಕಳೆದ ದಿನಗಳು ಮರುಕಳಿಸಿದವು. ರೋಮ್‌ನಲ್ಲಿದ್ದ ಕೀಟ್ಸ್‌ನ ಮನೆ ಹುಡುಕಿ ಹೋದಾಗ, ಬದುಕು ಪೂರಾ ನೊಂದ ಕೀಟ್ಸ್‌ನ ಕೊನೆಯ ಕ್ಷಣದ ಕೋಣೆ ನೋಡಿದರು. ಮದ್ದಿಲ್ಲದ ರೋಗಕ್ಕೆ ಗುರಿಯಾಗಿ, ವೈದ್ಯರ ಸಲಹೆಯಂತೆ ಇಂಗ್ಲೇಂಡ್ ತೊರೆದು ಇಟಲಿಗೆ ತನ್ನ ಗೆಳೆಯ ಜೋಸೆಫ್ ಸೆವರ್ನ್ ಜೊತೆ ಬಂದಿದ್ದನು. ಕಾವ್ಯಸೌರಭ ಇಲ್ಲಿ ಮುಗಿದಿತ್ತು. ದಿನಾಂಕ ೨೪ ಆಗಸ್ಟ್ ಕ್ರಿ.ಶ.೭೯, ವಿಸುವಿಯಸ್ ಜ್ವಾಲಾಮುಖಿ ಭುಗಿಲೆದ್ದು ಬೆಂಕಿಯ ಮಳೆಗರೆಯಿತು. ಪಾಂಪೆ ನಗರ ೨೩ಅಡಿ ಲಾವಾರಸದ ಬೂದಿಯಲ್ಲಿ ತಟ್ಟನೆ ಮುಳುಗಿ ಸಮಾಧಿಯಾಗಿತ್ತು.

ಹತ್ತೊಂಭತ್ತು ಶತಮಾನಗಳಿಗೂ ಹೆಚ್ಚು ಕಾಲ ಹೂತು ಸಮಾಧಿಯಾದ ಈ ನಗರ ಇಂದು ಪೂರ್ಣರೂಪದಲ್ಲಿ ಉತ್ಖನನಗೊಂಡು ಗ್ರೀಕ್ ರೋಮನ್ ಸಂಸ್ಕೃತಿಯ ಅದ್ಭುತ ಜೀವಂತಚಿತ್ರವನ್ನು ನೋಡುತ್ತಾ ಹೊರಟರು. ಜರ್ಮನಿಯ ರಾಜಧಾನಿ ಬರ್ಲಿನ್ ನೋಡಿಕೊಂಡು ಅಮ್‌ಸ್ಟರ್‌ಡ್ಯಾಂ ತಲುಪಿ, ಪ್ರಸಿದ್ಧ ಡಚ್ ಚಿತ್ರಕಾರ ವ್ಯಾನ್‌ಗೋನ ಮ್ಯೂಸಿಯಂನಲ್ಲಿ ಆತನ ನೂರಾರು ಚಿತ್ರಗಳನ್ನು ನೋಡಿದಾಗ, ಆತನ ಬದುಕಿನ ಒಂದೊಂದೇ ಪುಟಗಳು ಲೇಖಕಿಯ ಎದುರು ತೆರೆದುಕೊಂಡವು.

ಲೇಖಕಿ ನೇಮಿಚಂದ್ರರು ಮುಂದೆ ಕಂಡಂತಹ ಅನೇಕ ಸ್ಥಳಗಳ ಮಾಹಿತಿಗಳನ್ನು ಪರಿಚಯಿಸುತ್ತಾರೆ. ಮ್ಯೂನಿಕ್ ನಗರದ ಡಕಾವ್ 'ನಾಜಿ ಕ್ಯಾಂಪ್' ಹೆಸರೇ ಮೈನಡುಗಿಸುವಂಥದ್ದು. ಮನೋವೈದ್ಯನಾದ ವಿಕ್ಟರ್ ಫ್ರಾಂಕಲ್ ನಾಜಿ ಕ್ಯಾಂಪಿನಲ್ಲಿ ಉಳಿದುಬಂದವರು. ಹಿಂಸೆಯ ಕ್ರೌರ್ಯದ ಈ ಮೃತ್ಯುಕೂಪದಲ್ಲಿ, ತನ್ನ ಕುಟುಂಬವನ್ನೆಲ್ಲ ಕಳೆದುಕೊಂಡು ಬದುಕುಳಿದು ಬಂದ ಈ ಮನುಷ್ಯ ಬದುಕಿನ ಅರ್ಥವನ್ನು ಹುಡುಕಿ ಹೊರಟಿದ್ದನು. ಇತಿಹಾಸದ ಭೀಭತ್ಸ ಪುಟಗಳು ನೆತ್ತರಲ್ಲಿ ಬರೆದಿದ್ದವು ಎಂದರೇ ನಂಬಲಾರದಷ್ಟು ಮ್ಯೂನಿಕ್ ನಗರ ಪ್ರಶಾಂತವಾಗಿತ್ತು.

ಮನುಷ್ಯನ ಕೈಗೆ ಸರ್ವಾಧಿಕಾರ ಬಂದರೇ ತನ್ನ ವೈಯುಕ್ತಿಕ ಪೂರ್ವಗ್ರಹಗಳಿಗೆ ಎಂಥಾ ಕರಾಳ ರೂಪನೀಡಬಲ್ಲ. ೬೦ ಜನರ ಕೋಣೆಯಲ್ಲಿ ೪೦೦ ಜನರನ್ನು ತುರುಕಿದ ದಾಖಲೆ ಇದೆ. ಇತಿಹಾಸದ ರಕ್ತರಾತ್ರಿಗಳನ್ನು ಡಕಾವ್ ಸಂಗ್ರಹಾಲಯದಲ್ಲಿನ ಛಾಯಾಚಿತ್ರಗಳು ಹೇಳಬಲ್ಲವು. ಓರ್ವ ತಾಯಿ ತನ್ನ ಮೂರು ಸಣ್ಣ ಮಕ್ಕಳನ್ನು, ಚಳಿಗೆ ಬೆಚ್ಚಗೆ ತಲೆಯನ್ನು ಕಟ್ಟಿ, ದಪ್ಪ ಕೋಟು, ಬೂಟು ಹಾಕಿ ಅದೆಷ್ಟು ಸಂರಕ್ಷಿಸಿ ಕರೆದೊಯ್ಯುತ್ತಿದ್ದಾಳೆ. ಆದರೆ ಆಕೆಗೂ ತಿಳಿದಿರಲಿಲ್ಲ. ಅವರು ನಡೆದದ್ದು 'ಗ್ಯಾಸ್ ಛೇಂಬರ್'ಗೆಂದು! ದೇಹದಲ್ಲಿ ಮಾಂಸವೆಲ್ಲ ಕರಗಿ ಮೂಳೆಚಕ್ಕಳವಾಗಿ ಉಸಿರೊಂದೇ ಉಳಿದ ಜೀವಂತ ಹೆಣಗಳ ಚಿತ್ರಗಳು. ಸತ್ತವರ ಹರಕು ಬೂಟುಗಳ ಬೆಟ್ಟದೆತ್ತರದ ರಾಶಿ, ಅಸ್ತಿಪಂಜರವಾದ ಹೆಣಗಳ ಬಣವೆ. ವಿದ್ಯುತ್ ಬೇಲಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡು ಮುರುಟಿದ ದೇಹಗಳು, ಎಳೆಯ ವಯಸ್ಸಿನ ಸ್ವೀಡನ್ ದೇಶದ ಡಿಪ್ಲೊಮ್ಯಾಟ್ ರವೂಲ್ ಗುಸ್ತಾಫ್ ವಾಲೆನ್‌ಬರ್ಗನು ಸಾವಿನ ದವಡೆಯಲ್ಲಿದ್ದ ಯಹೂದ್ಯದಿಗಳನ್ನು ಉಳಿಸಿದವ. ಈ ಯುವಕ ನಾಜ಼ಿಗಳಿಂದ ಬಚಾವಾದರೂ ರಷ್ಯದ ಜೈಲುಗಳಲ್ಲಿ ಕಳೆದುಹೋಗಿದ್ದ ಇತಿಹಾಸದಲ್ಲಿ ಮರೆತು ಹೋದ.

ಈ ಪ್ರವಾಸ ಲೇಖಕಿ ನೇಮಿಚಂದ್ರರ ಕನಸನ್ನು ನನಸಾಗಿತ್ತು. ಶ್ರೀಮಂತ ದೇಶಗಳ ಕುರಿತ ಭ್ರಮೆ ಬಿಡಿಸಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಭಾರತವನ್ನು ಶೋಧಿಸುವ ಹೊಸ ಉತ್ಸಾಹ ನೀಡಿತ್ತು. "ಐ ವಾಸ್ ಎ ಫ್ಯಾಷನೆಟ್ ಫಿಲಿಗ್ರಿಮ್" ಎಂದು ಗುರುತಿಸಿಕೊಂಡಿದ್ದರು. ಯಾವುದೇ ಅಹಿತಕರ ಘಟನೆಗಳಿಲ್ಲದೆ ನಿರಾತಂಕವಾಗಿ, ಬಯಸಿದ ಜಾಗಗಳನ್ನು ನೋಡಿ ಬಂದ ಖುಷಿ ನೇಮಿಚಂದ್ರರಲ್ಲಿದ್ದಿತು.

ನಾಗತಿಹಳ್ಳಿ ಚಂದ್ರಶೇಖರ್‌ರವರ 'ದಕ್ಷಿಣ ಧ್ರುವದಿಂ' ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ ಪ್ರವಾಸ ಕೃತಿಯ ಬೆನ್ನುಡಿಯಲ್ಲಿ ಡಾ.ಚಂದ್ರಶೇಖರ ಕಂಬಾರರು ಪ್ರವಾಸ ಮಾಡದವನಿಗೆ 'ಜೀವನ ದರ್ಶನ ಸಾಧ್ಯವಿಲ್ಲವೆಂದು ಜಾನಪದ ಹೇಳುತ್ತದೆ' ಎನ್ನುತ್ತಾರೆ. ಹಾಗೆಯೇ ನಾಗತಿಹಳ್ಳಿ ಚಂದ್ರಶೇಖರ್ ತಮ್ಮ ಪ್ರವಾಸ ಕೃತಿಯಲ್ಲಿ ಈ ಯಾತ್ರೆ ಕೈಗೊಳ್ಳದಿದ್ದರೆ ನನ್ನ ಅನುಭವ ಲೋಕ ಬಡವಾಗುತ್ತಿತ್ತು ಎನ್ನುತ್ತಾ ಪ್ರವಾಸದ ಮಹತ್ವವನ್ನು ತಿಳಿಸುತ್ತಾರೆ.

ಅಲೆಮಾರಿಯ ಅಂಡಮಾನ್ ಹಾಗೂ ಮಹಾನದಿ ನೈಲ್ ಪ್ರವಾಸ ಕಥನವು ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಕೃತಿಯಾಗಿದೆ. ಶೀರ್ಷಿಕೆಗೆ ಅನುಗುಣವಾಗಿ ಅಂಡಮಾನ್ ಪ್ರವಾಸದ ಅನುಭವ ನಿರೂಪಣೆಯಾಗಿದೆ. ಎರಡನೆಯ ಭಾಗವಾದ ಮಹಾನದಿ ನೈಲ್ ಪ್ರವಾಸಿಗರ ಪ್ರವಾಸ ಕಥನವನ್ನು ತಮ್ಮ ಭಾಷೆಯಲ್ಲಿ ನಿರೂಪಿಸುತ್ತಾರೆ. ಮತ್ತೊಬ್ಬರ ಪ್ರವಾಸಾನುಭವ ಸಂಗ್ರಹಿಸಿರುವ ರೀತಿ ಪರೋಕ್ಷ ಬರವಣಿಗೆಯಾಗಿದೆ. ಅಂಡಮಾನಿಗೆ ಪ್ರಯಾಣಿಸಿದ ಹಡಗಿನ ಅನುಭವಗಳನ್ನು ಸಮುದ್ರದ ವಿಶಾಲತೆಯನ್ನು ಚಿತ್ರಿಸುತ್ತಾರೆ. ಪೋರ್ಟ್‌ಲೇರ್ ಬಂದರು, ಝರವಾ, ಬಂಗೇಸೆಂಟನಲ್ ಜನರ ಬಗ್ಗೆ ಬರೆಯುತ್ತಾ ಇಲ್ಲಿಯ ಮುಖ್ಯ ಉದ್ಯೋಗ, ನಿಸರ್ಗವನ್ನು ವರ್ಣಿಸುತ್ತಾರೆ. ಟಾರ್ನೆಡೋ, ಕರಿಮೀನು. ಲಾಬೆಸ್ಟರ್, ವಾಡಕ್ರ್ಯಾಬ್ ಮತ್ತು ಜಯಂತ್ ಅಸ್ಟರ್ ಇವೇ ಮೊದಲಾದ ಮೀನು ಜಾತಿಗಳನ್ನು ಪರಿಚಯಿಸುತ್ತಾ ತಮ್ಮ ಮೀನು ಶಿಕಾರಿಯ ಗೀಳನ್ನು ವಿವರಿಸುತ್ತಾರೆ. ಜ್ಞಾನದಾಹದ ಪರಿಶೀಲನೆ ಮತ್ತು ಚಿಂತನೆಯಲ್ಲಿ ಗಾಳಕ್ಕೆ ತಗುಲಿದ ಮೀನುಗಳು ಪುನಃ ಸಮುದ್ರ ಸೇರುವಂತೆಯೇ ನಾಗರೀಕತೆಯ ಸೋಗಿನಲ್ಲಿ ಅಂಡಮಾನಿನ ಮೇಲಾಗುತ್ತಿರುವ ಅತ್ಯಾಚಾರದ ಬಗ್ಗೆ ಸೂಕ್ಷ್ಮವಾಗಿ ಎಚ್ಚರಿಸುತ್ತಾರೆ.

ಅನಾದಿಕಾಲದಿಂದಲೂ ಮಾನವ ತಾನಿರುವ ವಾಸಸ್ಥಳದಿಂದ ಬೇರೆಡೆ ಹೋಗಲು ಹಾತೊರೆಯುತ್ತಾ ಬಂದಿದ್ದಾನೆ. ಅದು ಬೇರೆ ಸ್ಥಳದ ಬಗ್ಗೆ ಕುತೂಹಲವಿರಬಹುದು, ಅಲ್ಲಿನ ಸ್ಥಿತಿಗತಿ ಅರಿಯಲು ಇರಬಹುದು. ಭಾರತದ ಪೂರ್ವಚರಿತೆಯನ್ನು ನೋಡಿದಾಗ ಸಮಾಜಗಳ ಮತ್ತು ಸಂಸ್ಕೃತಗಳ ವಲಸೆಯ ಪ್ರವಾಸ ಕಾಣಬಹುದು. ವೈಚಾರಿಕ ಪ್ರಗತಿ ಹೊಂದುವ ಮೊದಲು ಪ್ರವಾಸ ತುಂಬಾ ಕಷ್ಟಕರವಾಗಿಯೂ ಮತ್ತು ಸಾಹಸಮಯವಾಗಿಯೂ ಇತ್ತು. ವಿಜ್ಞಾನದ ಅಭಿವೃದ್ಧಿಯ ಕಾರಣ ಕೆಲವೇ ಗಂಟೆಗಳಲ್ಲಿ ಜೀವಮಾನವಿಡೀ ಕಾಣಲಾಗದ ಪ್ರದೇಶಗಳನ್ನು ಪ್ರವಾಸದ ಮುಖಾಂತರ ಕಾಣುತ್ತಿದ್ದಾರೆ. ಪಾದಯಾತ್ರೆ, ಪಯಣ, ಪ್ರಾಣಿ ವಾಹನದ ಪ್ರಯಣ, ಯಂತ್ರ ವಾಹನಗಳ ಪ್ರಯಾಣ, ಹಡಗು ಪ್ರಯಾಣ, ವಿಮಾನ ಪ್ರಯಾಣಗಳನ್ನು ಇಂದು ಕಾಣಬಹುದು.

ವಿದೇಶಗಳನ್ನು ನೋಡುವ ಭಾಗ್ಯ ಅದೃಷ್ಟವಂತರಿಗೆ, ಸಿರಿವಂತರಿಗೆ ಮಾತ್ರ ಸಾಧ್ಯ. ಇವರ ಸಂಖ್ಯೆಯೂ ಸೀಮಿತ. ಹೀಗಿರುವಾಗ ಪ್ರವಾಸದ ಸ್ಥಾನದಲ್ಲಿ ಪ್ರವಾಸ ಸಾಹಿತ್ಯ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಿದೆ. ಪಂಡಿತ್ ಜವಾಹರಲಾಲ್ ನೆಹರೂರವರ 'ವಿಶ್ವ ಪರ್ಯಟನೆ' ಎಂಬ

ಗ್ರಂಥಕ್ಕೆ ಮುನ್ನುಡಿ ಬರೆಯುತ್ತಾ ಕೆ.ಪಿ.ಎಸ್ ಮೆನನ್ ಹೀಗೆ ಹೇಳಿದ್ದಾರೆ. "ಪ್ರವಾಸ ಮಾಡುವುದು ಒಳ್ಳೆಯದು, ಹಾಗೆ ಪ್ರವಾಸ ಮಾಡಲಾರದೆ ಹೋದಾಗ ಪ್ರಪಂಚದ ಬಗೆಗೆ ಬಂದಿರುವ ಸಾಹಿತ್ಯವನ್ನಾದರೂ ಓದುವುದು ಉತ್ತಮ ಹವ್ಯಾಸ."

ಅಧ್ಯಾಯ – ೪

ನೇಮಿಚಂದ್ರರ ವಿಜ್ಞಾನ ಸಾಹಿತ್ಯ

೪.೧ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್

೪.೨ ಸಾಹಿತ್ಯ ಮತ್ತು ವಿಜ್ಞಾನ

ಅಧ್ಯಾಯ –೪
ನೇಮಿಚಂದ್ರರ ವಿಜ್ಞಾನ ಸಾಹಿತ್ಯ

೪.೧ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್

ಇಪ್ಪತ್ತು ವರ್ಷಗಳ ಹಿಂದೆ ಇಂಜಿನಿಯರಿಂಗ್ ಓದುತ್ತಿದ್ದ ಎಲೆಕ್ಟ್ರಾನಿಕ್ಸ್ ವಿಷಯದ ವಿದ್ಯಾರ್ಥಿಗಳು ಕೂಡ ಕಂಪ್ಯೂಟರ್ ಹೇಗಿರುತ್ತದೆ ಎಂದು ನೋಡುವುದಕ್ಕೆ ಸಾಧ್ಯವಿರಲಿಲ್ಲ. ಆದರೆ ಇಂದು ಪ್ರಾಥಮಿಕ ಶಾಲೆಗಳ ಮಕ್ಕಳೂ ಸಹ ಕಂಪ್ಯೂಟರ್ ಕಲಿಯುತ್ತಿದ್ದಾರೆ. ಎಲೆಕ್ಟ್ರಾನಿಕ್ಸ್ ಇಲ್ಲದ ಜಗತ್ತನ್ನು ಇಂದು ಊಹಿಸುವುದು ಅಸಾಧ್ಯವಾಗುತ್ತದೆ. ೧೮೭೬ರಲ್ಲಿ ಗ್ರಹಾಂಬೆಲ್ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ತನ್ನ ಸ್ವರವನ್ನು ದೂರವಾಣಿಯ ಮೂಲಕ ರವಾನಿಸಿದ್ದು ಕ್ರಾಂತಿಯಾಗಿತ್ತು. ಇಂದು ಜಗತ್ತಿನ ಈ ಮೂಲೆಯಿಂದ ಆ ಮೂಲೆಗೆ ಕ್ಷಣದಲ್ಲಿ ಗುಂಡಿ ಒತ್ತಿ ಸಂಭಾಷಣೆ ಮಾಡಬಹುದು. ಉದ್ಯಾನವನದಲ್ಲಿ ಅಡ್ಡಾಡುತ್ತಾ ಮಾತನಾಡಬಹುದು. ಕಾರು ಓಡಿಸುತ್ತಾ ಸೆಲ್ಯುಲರ್ ಫೋನ್ ಮೂಲಕ ಬೇರೆಯವರ ಜೊತೆ ಸಂಪರ್ಕದಲ್ಲಿರಬಹುದು, ಮಣಿಕಟ್ಟಿನ ಮೇಲೆ ಗಡಿಯಾರದಂತೆ ಕಟ್ಟಬಲ್ಲ ಪುಟ್ಟ ಸೆಲ್ಯುಲರ್‌ಗಳನ್ನು ಕಾಣಬಹುದು.

ಸಣ್ಣ ತೆಳು ತಟ್ಟೆಯಂಥಾ ಕಾಂಪಾಕ್ಟ್ ಡಿಸ್ಕ್‌ಗಳಲ್ಲಿ ಮಾಹಿತಿ, ಸ್ವರ, ಚಿತ್ರ, ಚಲನಚಿತ್ರಗಳನ್ನೆಲ್ಲ ಸಂಗ್ರಹಿಸಿಡಬಹುದು. ಎನ್‌ಸೈಕ್ಲೋಪೀಡಿಯಾಗಳನ್ನು ಸಂಗ್ರಹಿಸಿಡಬಹುದು. ಸ್ಟ್ಯಾಂಡ್ ಮೇಲೆ ಕುಳಿತಿರುವ ನಮ್ಮ ಮನೆಗಳ ೨೧ ಅಂಗುಲದ ದೂರದರ್ಶನದ ಬದಲಾಗಿ ೪೧, ೬೦ ಅಂಗುಲವಿದ್ದು, ಗೋಡೆಗೆ ತೂಗು ಹಾಕುವಷ್ಟು ಚಪ್ಪಟೆಯಾದ ದೂರದರ್ಶನಗಳು ಇಂದು ಬಂದಿವೆ. ಹಾಗೆಯೇ ಅತಿಸಣ್ಣದಾದ ಅಂಗೈಯಲ್ಲಿ ಹಿಡಿಯುವಷ್ಟು ಗಾತ್ರದ ದೂರದರ್ಶನಗಳೂ ದೊರಕುತ್ತವೆ. ಮೊಟ್ಟಮೊದಲ ಎಲೆಕ್ಟ್ರಾನಿಕ್ ಕಂಪ್ಯೂಟರ್ 'ಎನಿಯಾಕ್' ಕಂಪ್ಯೂಟರ್ ೧೫,೦೦೦ ಚದರ ಅಡಿ ನೆಲವನ್ನು ಆವರಿಸಿ ೩೦ಟನ್ ತೂಕ ತೂಗಿತ್ತು. ಆದರೆ ಇಂದು ತೊಡೆಯ ಮೇಲೆ ಕೂಡುವಷ್ಟು ಚಿಕ್ಕದಾಗಿರುವ ಲ್ಯಾಪ್‌ಟಾಪ್ ಕಂಪ್ಯೂಟರ್‌ಗಳಿವೆ. ಮಣಿಕಟ್ಟಿನ ಮೇಲೆ ಗಡಿಯಾರದಂತೆ ಕಟ್ಟಬಹುದಾದಷ್ಟು ಪುಟ್ಟದಾಗಿದೆ. ಕಳೆದ ಮೂವತ್ತು ವರ್ಷಗಳಲ್ಲಿ ಕಂಪ್ಯೂಟರುಗಳು ಕುಗ್ಗಿರುವ ರೀತಿಯಲ್ಲಿಯೇ ನಮ್ಮ ತಾಜ್‌ಮಹಲ್ ಕುಗ್ಗಿದ್ದರೆ, ಇಂದು ನಮ್ಮಗಳ ಕೈಯಲ್ಲಿ ಚಿಕ್ಕದಾಗಿ ಕೂರುವಷ್ಟು ಪುಟ್ಟದಿರುತ್ತಿತ್ತು.

ಕಂಪ್ಯೂಟರ್‌ಗಳು ಇಂದು ಬಸ್ಸು, ರೈಲು, ವಿಮಾನ ನಿಲ್ದಾಣ, ಬ್ಯಾಂಕ್, ಕಛೇರಿ, ಕಾರ್ಖಾನೆ, ಶಾಲೆ, ಕಾಲೇಜು, ಆಸ್ಪತ್ರೆ, ಅಂಗಡಿ, ಮನೆಗಳಿಗೆ ನುಗ್ಗಿ ಬದುಕಿನ ಎಲ್ಲಾ ರಂಗಗಳಿಗೂ ಹೊಕ್ಕು ಸರ್ವಾಂತರ್ಯಾಮಿಗಳಾಗಿವೆ. ಒಂದು ಕಾಲದಲ್ಲಿ ಕೇವಲ ನಕಾಶೆ, ದಿಕ್ಸೂಚಿ ಹಿಡಿದು ಎಲ್ಲಿದ್ದೇವೆ,

ಎಲ್ಲಿಗೆ ಹೋಗುತ್ತಿದ್ದೇವೆ ಎಂದು ಪರದಾಡಬೇಕಿದ್ದ ಪ್ರಯಾಣ, ಇಂದು ಇಡೀ ಭೂಮಿಯ ನಕಾಶೆಯನ್ನೇ ಸಂಗ್ರಹಿಸಿಟ್ಟುಕೊಂಡು ಹಾದಿ ತೋರಿಸುವ ಜಿ.ಪಿ.ಎಸ್. ಉಪಕರಣಗಳನ್ನು ಹೊಂದಿದ್ದು, ಎಲ್ಲಾ ವಾಹನಗಳಿಗೂ ಅಳವಡಿಸುವಷ್ಟು ಹಾಗೂ ಚಾರಣಗಾರರು ಕೈಯಲ್ಲಿ ಹಿಡಿದು ಒಯ್ಯುವಷ್ಟು ಸಣ್ಣದಿದೆ. ಭವಿಷ್ಯದಲ್ಲಿ ಜನಗಳು ಬೆಂಗಳೂರು ಬಿಡದೆ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ತರಗತಿಗಳಲ್ಲಿ ಉಪಸ್ಥಿತರಾಗಬಲ್ಲರು.

ಕ್ಷಣದಲ್ಲಿ ಆಹಾರ ಬಿಸಿ ಮಾಡಿಕೊಡುವ ಮೈಕ್ರೋವೇವ್ ಒಲೆ, ಕೈಸುಟ್ಟು ಕೊಳ್ಳದೇ ಒಲೆಯಿಂದ ನೇರವಾಗಿ ಪಾತ್ರೆಗಳನ್ನು ಇಳಿಸಬಹುದಾದ ಸಾಧ್ಯತೆಯಿದೆ. ಯಂತ್ರಕ್ಕೆ ಬಟ್ಟೆ ತುಂಬಿ ಪ್ರೋಗ್ರಾಂ ಮಾಡಿದರೆ ನಮಗೆ ಬೇಕೆಂದ ರೀತಿಯಲ್ಲಿ ಬಟ್ಟೆಗಳನ್ನು ಒಗೆದು ಒಣಗಿಸಿ ಕೊಡುವ ಎಲೆಕ್ಟ್ರಾನಿಕ್ಸ್ ಒದಗಿ ಬಂದಿದೆ. ಮುಂದೊಂದು ದಿನ ತೋರುಬೆರಳಲ್ಲಿ ತೋರಿಸಿದ್ದನ್ನು ಗ್ರಹಿಸಿ, ಹೇಳಿದ ಕೆಲಸ ಮಾಡುವ ಗೃಹೋಪಯೋಗಿ ರೋಬಾಟ್‌ಗಳು ಬರಲಿವೆ ಎಂದರೆ ಅತಿಶಯವಾಗಲಾರದು. ಭವಿಷ್ಯದಲ್ಲೊಂದು ದಿನ ಎಲೆಕ್ಟ್ರಾನಿಕ್ಸ್ ನಮ್ಮ ಮನೆಯ ಪೂರ್ಣ ಉಸ್ತುವಾರಿಕೆ ವಹಿಸಿಕೊಳ್ಳಲಿದೆ. ಜಪಾನಿನಲ್ಲಿ ಈಗಾಗಲೇ ಒಂದು ಕಂಪ್ಯೂಟರ್ ನಿಯಂತ್ರಿತ ಮನೆಯ ಮಾದರಿ ತಯಾರಾಗಿದೆ. ಉಷ್ಣಾಂಶ, ತೇವಾಂಶ, ಮನುಷ್ಯನ ಇರವನ್ನು ಗ್ರಹಿಸಿ, ಆತ ಕೋಣೆಯೊಳಕ್ಕೆ ಬಂದೊಡನೆ ದೀಪ ಹಾಕುತ್ತದೆ. ಇದು ಗೃಹಜೀವನಕ್ಕೆ ಭವಿಷ್ಯದಲ್ಲಿ ಕಂಪ್ಯೂಟರ್ ನೀಡಬಲ್ಲ ಐಷಾರಾಮದ ಪರಮಾವಧಿ.

ಭೂಮಿಯ ಮೇಲೆ ಕುಳಿತೇ ಮಂಗಳಗ್ರಹದ ಮೇಲಿನ ಮಣ್ಣು ಹೆಕ್ಕಿ ಪರೀಕ್ಷಿಸುವ ಸಾಧ್ಯತೆಯನ್ನು ತಂದಿತು. ೧೯೭೬ರಲ್ಲಿಯೇ ಮಂಗಳನ ಅಂಗಳದಲ್ಲಿ ಇಳಿದ ದೂರ ನಿಯಂತ್ರಿತ ರೋಬಾಟ್‌ವಾಹನ ಇಂತಹ ಶೋಧ ನಡೆಸಿತ್ತು. ಇಂದು ರೋಬಾಟ್‌ಗಳು ಎಲ್ಲಾ ರಂಗಗಳಲ್ಲಿಯೂ ದುಡಿಯುವುದಲ್ಲದೇ ಅನ್ಯಗ್ರಹ, ಉಪಗ್ರಹಗಳ ಮೇಲೂ ಕಾಲಿಡುತ್ತಿವೆ. ಎಲೆಕ್ಟ್ರಾನಿಕ್ಸ್ ಸಂಶೋಧನೆಗೆ ಸಾಧನವಾಗಿ, ನಮಗೆ ಮನೋರಂಜನೆಯಾಗಿ ಆರಾಮ ಐಷಾರಾಮಗಳನ್ನು ತಂದಿದೆ.

ಎಲೆಕ್ಟ್ರಾನಿಕ್ಸ್

ವಿದ್ಯುತ್ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಒಂದೆರಡು ಗಂಟೆ ವಿದ್ಯುತ್ ಕಡಿತವಾದರೆ ನಾವು ಕುರುಡರಾಗುತ್ತೇವೆ ಹಾಗೂ ಚಡಪಡಿಸುತ್ತೇವೆ. ಒಂದು ಕ್ಷಣ ನಮ್ಮ ಮನೆಗಳಲ್ಲಿನ ವಿದ್ಯುತ್ ಚಾಲಿತ ಉಪಕರಣಗಳು ಎಷ್ಟಿವೆ ಎಂದು ಎಣಿಸಹೋದರೆ ಒಂದೇ ಎರಡೇ, ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಒಂದು ಕ್ಷಣ ಕಣ್ಣುಮುಚ್ಚಿ ಒಂದು ಶತಮಾನದಷ್ಟು ಹಿಂದೆ ಸೀಮೆಎಣ್ಣೆ ಬುಡ್ಡಿಗಳು, ಕಲ್ಲಿದ್ದಲಿನ ಹೊಗೆಯುಗುಳಿ ನಿಂತ ಕಾರ್ಖಾನೆಗಳು, ರಾತ್ರಿಗಳೆಂದರೇ ಕತ್ತಲೆಯ ಕಾರಾಗೃಹಗಳು, ಇಂತಹ ಪ್ರಪಂಚಕ್ಕೇ ಚಾಲನೆಯನ್ನು ಕೊಟ್ಟದ್ದು ವಿದ್ಯುತ್ತು. ಈ ವಿದ್ಯುತ್ತು

ಮತ್ತೇನೂ ಅಲ್ಲ, ಹರಿಯುತ್ತಿರುವ 'ಎಲೆಕ್ಟ್ರಾನು'ಗಳ ಸಮೂಹ. ತಂತಿಗಳ ಮೂಲಕ ವಿದ್ಯುತ್ ಬಹು ಸುಲಭವಾಗಿ ಹರಿದು ಬರುತ್ತದೆ. ಇದನ್ನು ವಿದ್ಯುತ್ ಪ್ರವಾಹ (Electrical Current) ಎನ್ನುತ್ತಾರೆ.

"ವಿದ್ಯುತ್ತು ದೀಪ ಕೊಟ್ಟ ವಿಜ್ಞಾನಿ ಥಾಮಸ್ ಆಲ್ವಾ ಎಡಿಸನ್ ದೀಪಕ್ಕೆ ವಿದ್ಯುತ್ ಒದಗಿಸಲು ತಂತಿಗಳೇ ಒಂದು ದಿನ ಬೆಳಕಿನೊಡನೆ ಮನೆ ಬಳಕೆಗೆ ಶಾಖವನ್ನು ಒದಗಿಸುವವು. ಹೊಲಿಗೆ ಯಂತ್ರ ಓಡಿಸಬಹುದು, ಅಡಿಗೆಯನ್ನು ತಯಾರಿಸಲು ವಿದ್ಯುತ್ ಒದಗಿ ಬರಬಹುದು ಎಂದು ಸಾರಿದಾಗ, "ಶುದ್ಧ ಅಸಂಬದ್ಧ ವಿಚಾರಗಳು ಎಂದು ಲಂಡನ್ನಿನ ಪ್ರೊ.ಸಿಲ್ವಾನಸ್ ಥ್ಯಾಪ್ಸನ್ ಚೀರಿದ್ದ".[೧]

ಆದರೆ ಎಲೆಕ್ಟ್ರಾನಿಕ್ ಯುಗ ಅಸಾಧ್ಯವನ್ನು ಸಾಧ್ಯವಾಗಿಸಿದೆ. ವಿದ್ಯುತ್ ಪ್ರವಾಹದ ಬಹು ನಿಖರವಾದ ನಿಯಂತ್ರಣವನ್ನು 'ಎಲೆಕ್ಟ್ರಾನಿಕ್ಸ್' ಎನ್ನಬಹುದು. ಎಲೆಕ್ಟ್ರಾನ್‌ಗಳನ್ನು ದುಡಿಸಿಕೊಳ್ಳುವ ವಿಧಾನ ಎಲೆಕ್ಟ್ರಾನಿಕ್ಸ್. ನಮ್ಮ ಮನೆಯ ರೇಡಿಯೋ, ಟಿ.ವಿ, ಕ್ಯಾಸೆಟ್ ಪ್ಲೇಯರ್, ಸ್ವಯಂಚಾಲಿತ ಒಗೆವ ಯಂತ್ರ, ಕಂಪ್ಯೂಟರ್ ಎಲ್ಲವೂ ಎಲೆಕ್ಟ್ರಾನಿಕ್ ಉಪಕರಣಗಳು.

ಇಂದು ಎಲೆಕ್ಟ್ರಾನಿಕ್ಸ್ ಕುರುಡರಿಗೆ ಕಣ್ಣಾಗುತ್ತಿದೆ, ಕಿವುಡರಿಗೆ ಕಿವಿಯಾಗಿ, ಮೂಗರಿಗೆ ಮಾತಾಗಿ, ಪಾರ್ಶ್ವವಾಯು ಪೀಡಿತರಿಗೆ ಕೈಕಾಲು ಕೂಡ ಆಗಿದೆ. ಅತಿಶಾಬ್ದಿಕ ಸಂವೇದನೆಗಳನ್ನು ಅಳವಡಿಸಿದ ಕೋಲು ಕುರುಡರಿಗೆ, ಹಾದಿಯ ಅಡೆತಡೆಗಳ ನಡುವೆ ದಾರಿ ತೋರಿಸುತ್ತದೆ. ಕರ್ಣಶಂಖದಿಂದ ಇಂಪ್ಲಾಂಟ್‌ಗಳು ಕಿವುಡರಿಗೆ ಕಿವಿಯಾಗಿವೆ. ಮೂಗರಿಗೆ ಕೃತಕಸ್ವರವನ್ನು ಒದಗಿಸಿಕೊಡುವ ಕಂಪ್ಯೂಟರ್‌ಗಳಿವೆ. ಇಂದಿನ ಯುದ್ಧಗಳು ಎಲೆಕ್ಟ್ರಾನಿಕ್ ಯುದ್ಧಗಳಾಗಿವೆ. ಕತ್ತಲಲ್ಲೂ ಶತೃವನ್ನು ಪತ್ತೆ ಹಚ್ಚಿ, ಗುರುತಿಸುವ ಆಕಾಶ, ನೀರು, ನೆಲ, ನೀರಿನಾಳದಲ್ಲಿ ಅವಿತ ಶತೃವನ್ನು ಹೊಡೆದುರುಳಿಸುವ, ವೀಡಿಯೋ ಆಟದಂತೆ ಗುಂಡಿ ಒತ್ತಿ ಭಯಂಕರ ಕ್ಷಿಪಣಿಯನ್ನು ಗುರಿ ಇಟ್ಟು ಬಿಡುಗಡೆ ಮಾಡುವ ಸಾಧ್ಯತೆಯನ್ನು ತಂದಿದೆ. ಸೈನಿಕರೇಕೆ ಸಾಯುವುದು ಎಂದು, ಚಾಲಕನೇ ಇಲ್ಲದ ಸ್ವಯಂಚಾಲಿತ ಯುದ್ಧ ವಿಮಾನಗಳು ವಿನ್ಯಾಸಗೊಳ್ಳುತ್ತಿವೆ.

ಎಲೆಕ್ಟ್ರಾನಿಕ್ಸ್‌ನಿಂದಾಗಿ ಇಂದು ನಾವು ಭೂಮಿಯ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೂಡ ಸಂಪರ್ಕ ಪಡೆಯಬಹುದು. ಹಾಗೆಯೇ ಕುಳಿತ ಕಡೆಯಲ್ಲೇ ಅಗಾಧ ಮಾಹಿತಿಯ ವಿನಿಮಯ ಮಾಡಿಕೊಳ್ಳಬಹುದು. ಇಡೀ ಭೂಮಿಯೇ ಎಲೆಕ್ಟ್ರಾನಿಕ್ಸ್‌ನಿಂದಾಗಿ ಒಂದು ಸಣ್ಣ ಗ್ರಾಮವಾಗಿದೆ. ಎಲೆಕ್ಟ್ರಾನಿಕ್ಸ್ ಇಲ್ಲದ ಜಗತ್ತನ್ನು ಊಹಿಸಿಕೊಳ್ಳುವುದೂ ಕಷ್ಟವಾಗುತ್ತದೆ. ಎಲೆಕ್ಟ್ರಾನಿಕ್ಸ್ ನಮ್ಮ ದಿನನಿತ್ಯದ ಬದುಕಿನ ಗತಿಯನ್ನೇ ಬದಲಿಸಿ, ಹೊಸ ಜೀವನಶೈಲಿಯ ಹರಿಕಾರನಾಗಿಸಿದೆ. ತಂತಿರಹಿತ ರೇಡಿಯೋ ಕಂಡುಹಿಡಿದ ವಿಜ್ಞಾನ ಜೆ.ಸಿ.ಬೋಸ್‌ರವರು ಅಮೆರಿಕೆಯ ಎಲೆಕ್ಟ್ರಾನಿಕ್ಸ್ ಅಂಡ್ ಎಲೆಕ್ಟ್ರಿಕಲ್ ಇಂಜಿನಿಯರ್ಸ್‌ನ ವಿಜ್ಞಾನಿಗಳ ತಂಡವೊಂದು ಸತತ ಪ್ರಯತ್ನದ ನಂತರ

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೭

ಚರಿತ್ರೆಯ ಪುಟಗಳಲ್ಲಿ ಕಳೆದುಹೋಗಿದ್ದ ಈ ಸತ್ಯಸಂಗತಿಗಳನ್ನು ಹುಡುಕಿ ಹೊರತೆಗೆದರು. ದೊರೆತಿರುವ ಮಾಹಿತಿ, ದಾಖಲೆಗಳಿಂದ ಬೋಸ್ ನೂರು ವರ್ಷದ ಹಿಂದೆಯೇ ಮೈಕ್ರೋತರಂಗಗಳ ಹೊಸವಿಜ್ಞಾನವನ್ನು, ರೇಡಿಯೋ ಸಂಪರ್ಕದ ಹೊಸರಂಗವನ್ನು ಒಟ್ಟಿಗೇ ಸೃಷ್ಟಿಸಿದ್ದರು. ವಿಪರ್ಯಾಸವೆಂದರೇ ಅವರ ಈ ಮಹತ್ತರ ಕೊಡುಗೆಯನ್ನು ಅವರ ಕಾಲದಲ್ಲಿ ಯಾರೊಬ್ಬರೂ ಗುರ್ತಿಸಲಿಲ್ಲ. ಆದರೆ ಈಗ ರೇಡಿಯೋ ರಂಗಕ್ಕೆ ಬೋಸ್ ನೀಡಿರುವ ಕೊಡುಗೆಯನ್ನು ಸ್ಮರಿಸುವ ಕೆಲಸ ಶುರುವಾಗಿದೆ.

ಒಂದು ಕಂಪ್ಯೂಟರಿನಿಂದ ಇನ್ನೊಂದು ಕಂಪ್ಯೂಟರಿಗೆ ಮಾಹಿತಿ ಕಳುಹಿಸಲು, ಫ್ಯಾಕ್ಸ್ ಸಂದೇಶ ಕಳುಹಿಸಲು ದೂರವಾಣಿಯನ್ನು ಬಳಸಲಾಗುತ್ತಿದೆ. ಅದು ಸ್ಟಾಕ್ ಮಾರುಕಟ್ಟೆಯ ಸುದ್ದಿ ಇರಬಹುದು, ಕ್ರೀಡೆ, ಸಾಮಾನ್ಯ ಸುದ್ದಿ ಸಮಾಚಾರ, ಹವಾಮಾನ ವರದಿ, ಮನೋರಂಜನೆಯ ಮಾಹಿತಿ ಹೀಗೆ ಯಾವುದೇ ಮಾಹಿತಿಯಾಗಿರಬಹುದು. ಇದೇ ದೂರವಾಣಿ ನೆಟ್‌ವರ್ಕ್‌ನ್ನು ಎಲೆಕ್ಟ್ರಾನಿಕ್ ಅಂಚೆಗೂ ಪತ್ರವ್ಯವಹಾರಕ್ಕೂ ಬಳಸಬಹುದು. ಇದನ್ನು ಇ.ಮೇಲ್ ಎನ್ನುತ್ತಾರೆ. ಮೊಟ್ಟಮೊದಲ ಫ್ಯಾಕ್ಸ್ ಯಂತ್ರವನ್ನು ೧೮೪೨ರಲ್ಲಿ ಅಲೆಕ್ಸಾಂಡರ್ ಬೇನ್ ಎಂಬಾತ ಕಂಡುಹಿಡಿದ. ನಂತರದಲ್ಲಿ "ವೇಗವಾಗಿ ಮಾಹಿತಿಯನ್ನು ಕಳುಹಿಸಬಲ್ಲ ಡಿಜಿಟಲ್ ಫ್ಯಾಕ್ಸ್‌ನ್ನು ೧೯೬೨ರಲ್ಲಿ ಡಾ.ರಾಬರ್ ಇ.ವೆನಿಕಾಫ್‌ರಿಂದ ಕಂಡುಹಿಡಿಯಲ್ಪಟ್ಟಿತು".[೧] ದೂರವಾಣಿ ಬೂತ್ ಹುಡುಕಿಹೋಗುವ ಅಗತ್ಯವಿಲ್ಲದೆ, ನಮ್ಮೊಡನೆ ಸದಾ ದೂರವಾಣಿಯನ್ನು ಹೊತ್ತೊಯ್ದು, ಎಲ್ಲಿಂದ ಬೇಕಾದರೂ ದೂರವಾಣಿ ಕರೆ ಮಾಡಬಹುದಾದ ಸಾಧ್ಯತೆಯನ್ನು, ಸದಾ ನಮ್ಮವರೊಡನೆ ಸಂಪರ್ಕದಲ್ಲಿರಬಹುದಾದ ಸಾಧ್ಯತೆಯನ್ನು ಇಂದು ಸೆಲ್ಯುಲರ್ ದೂರವಾಣಿ ತಂದಿದೆ.

ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲರ ಬದುಕು, ಚಿಂತನೆಯನ್ನು ವಿಪರೀತವಾಗಿ ಪ್ರಭಾವಿಸುತ್ತಿರುವ ಒಂದು ಮಾಧ್ಯಮವೆಂದರೆ 'ದೂರದರ್ಶನ'. ಸ್ಕಾಟ್ಲೆಂಡ್‌ನ ಜಾನ್ ಲೋಗಿ ಬೆಯರ್ಡ್ ದೂರದರ್ಶನ ವಾಸ್ತವವಾಗಿ ಸಾಧ್ಯವಾಗಬಲ್ಲದು ಎಂದು ಪ್ರಯೋಗಿಸಿ, ಪ್ರದರ್ಶಿಸಿ ತೋರಿಸಿದ ಮೊಟ್ಟಮೊದಲ ಅನ್ವೇಷಕ. ಉತ್ತಮ ಅನ್ವೇಷಣೆಯಿಂದಾಗಿ ನಮಗಿಂದು ಉತ್ತಮ ಗುಣಮಟ್ಟದ ದೂರದರ್ಶನಗಳು ದೊರೆಯುತ್ತಿವೆ. ಎರಡನೇ ಮಹಾಯುದ್ಧದ ಅಗ್ನಿಕುಂಡದಲ್ಲಿ ಜನಿಸಿದ "ರೆಡಾರ್" ಅತಿಕಡಿಮೆ ಸಮಯದಲ್ಲಿ ಅಗಾಧ ಬೆಳವಣಿಗೆ ಕಂಡ ಅದ್ಭುತ ಉಪಕರಣ. ಇಂದಿಗೂ ಸಹ ರಡಾರಿನ ಬಳಕೆ ಯುದ್ಧರಂಗದಲ್ಲಿಯೇ ಅಧಿಕವಾಗಿದ್ದರೂ ರಡಾರಿನ ಶಾಂತಿಯುತ ಉಪಯೋಗಗಳೂ ಹೆಚ್ಚುತ್ತಿವೆ, ಹಾಗೂ ಜನಸಾಮಾನ್ಯನ ದಿನನಿತ್ಯದ ಬಳಕೆಗೂ ಎಟುಕುವಷ್ಟು ಹತ್ತಿರವಾಗುತ್ತಿವೆ.

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೪೧

ರಡಾರ್ ಎಂಬ ಪದ ಬಂದಿರುವುದೇ "ರೇಡಿಯೋ ಡಿಟೆಕ್ಷನ್ ಆಂಡ್ ರೇಂಜಿಂಗ್" (Radio Detection and Ranging)[೧] ಎಂಬ ಪದಪುಂಜದಿಂದ, ರೇಡಿಯೋ ತರಂಗಗಳಿಂದ ಪತ್ತೆ ಹಚ್ಚುವ ಮತ್ತು ದೂರದಳತೆಯನ್ನು ಮಾಡುವ ತಂತ್ರ ರಡಾರಿನದು. ಇದು ಬರೀ ದೂರದಳತೆಯನ್ನಷ್ಟೇ ಮಾಡುವುದಿಲ್ಲ. ಆವಸ್ತು ಸ್ಥಗಿತವಾಗಿದೆಯೇ, ಚಲಿಸುತ್ತಿದೆಯೇ ಎಂದೂ ಸಹ ಹೇಳಬಲ್ಲದು. ಜೊತೆಗೆ ಚಲಿಸುವ ವಸ್ತುವಾದರೆ ಅದರ ವೇಗವನ್ನೂ ತಿಳಿಸಬಲ್ಲದು. ಇಂದಿಗೂ ಕೂಡ ರಡಾರಿನ ಅತ್ಯಧಿಕ ಬಳಕೆ ಯುದ್ಧಕಾಲಕ್ಕೆ ಮೀಸಲಾಗಿದೆ. ಯುದ್ಧ ವಿಮಾನಗಳು, ಹಡಗುಗಳು ರಡಾರಿನಿಂದ ಸದಾ ಸಿದ್ಧವಾಗಿರುತ್ತವೆ. ರಕ್ಷಣೆಗೆ ನೆಲದ ಮೇಲೆ, ಸಮುದ್ರ ತೀರದಲ್ಲಿ, ಉಪಗ್ರಹಗಳ ಮೇಲೆ ರಡಾರಗಳನ್ನು ನೆಟ್ಟಿರುತ್ತಾರೆ. ಯುದ್ಧ ವಿಮಾನಗಳಲ್ಲಿ, ಹೆಲಿಕಾಪ್ಟರ್‌ಗಳಲ್ಲಿ, ಹಡಗುಗಳಲ್ಲಿ ನೆಟ್ಟ ರಡಾರ್ ನಾಲ್ಕು ದಿಕ್ಕಿಗೂ ತಿರುಗಿ ಶತ್ರುಪಡೆಯನ್ನು ಪತ್ತೆ ಹಚ್ಚಿ, ಕ್ಷಿಪಣಿಗಳನ್ನು ಮಾರ್ಗದರ್ಶಿಸಿ ಕೆಡುವುತ್ತದೆ. ಕೈಬೆರಳ ತುದಿಯಲ್ಲಿ ಗುಂಡಿ ಒತ್ತುವುದರ ಮೂಲಕ ಸಾವಿರ ಮೈಲಿಗಳಾಚೆಗೆ ಕ್ಷಿಪಣಿಯನ್ನು ಒಗೆದು ಶತ್ರು ಪಡೆಯನ್ನು ನಾಶ ಮಾಡುವ ತಾಂತ್ರಿಕತೆ ಎಲೆಕ್ಟ್ರಾನಿಕ್ ರಂಗದ ಮುನ್ನಡೆಯಿಂದ ಸಾಧ್ಯವಾಗಿದೆ ಎನ್ನಬಹುದು.

ಯುದ್ಧದ ಬಿಸಿಯಲ್ಲಿ ಜನಿಸಿದ ರಡಾರ್ ಕಳೆದ ನಲ್ವತ್ತು ವರ್ಷಗಳಲ್ಲಿ ಶಾಂತಿ ಸಮಯದ ಬಳಕೆಯತ್ತಲೂ ಕಣ್ಣು ಹಾಯಿಸಿದೆ. ವಿಮಾನಗಳ ಸುರಕ್ಷಿತ ಹಾರಾಟಕ್ಕೆ, ಹಡಗು ಪ್ರಯಾಣಕ್ಕೆ, ಹವಾಮಾನ ವರದಿಗೆ ಹಾಗೂ ವಾಹನಗಳ ವೇಗ ನಿಯಂತ್ರಣಕ್ಕೆ ಹೀಗೆ ಹತ್ತು ಹಲವು ಬಗೆಯಲ್ಲಿ ಉಪಯೋಗಿಸುತ್ತಾ ಬಂದಿದ್ದಾರೆ. ಲೇಸರ್ ಬೆಳಕು ವಜ್ರದಂತಹ ಕಠಿಣ ಪದಾರ್ಥವನ್ನು ಸುಲಭವಾಗಿ ಕತ್ತರಿಸಬಲ್ಲದು. ಲೇಸರ್ ಎಂಬುದು ಒಂದೇ ಆವರ್ತನದ ಒಂದೇ ಅವಸ್ಥೆಯಲ್ಲಿರುವ ಬೆಳಕು. ಪೋಲೀಸ್ ಇಲಾಖೆಗಳಲ್ಲ ಪತ್ತೇದಾರಿ ಕೆಲಸಕ್ಕೆ ಲೇಸರ್ ಬಳಸಿ ಕಣ್ಣಿಗೆ ಸ್ಪಷ್ಟವಾಗಿ ಕಾಣದಿದ್ದ ಬೆರಳೊತ್ತುಗಳನ್ನು(FingerPrint)ಗುರುತಿಸಲು ಸಾಧ್ಯವಾಗಿದೆ. ಮರ, ಕಾರ್ಡ್‌ಬೋರ್ಡ್, ಬಟ್ಟೆ ಮುಂತಾದವುಗಳ ಮೇಲಿನ ಬೆರಳೊತ್ತುಗಳನ್ನು ಲೇಸರ್ ಬಳಸಿ ಕಾಣುವಂತೆ ಮಾಡುಲಾಗುತ್ತಿದೆ.

ಮಿಲಿಟರಿಯಲ್ಲಿ ಲೇಸರ್ ಬಳಕೆ ಬಹಳಷ್ಟಿದೆ. ಹೇಗೆಂದರೆ ಲೇಸರ್ ಗನ್‌ಗಳು ಶತೃಗಳನ್ನು ಹೊಡೆದುರುಳಿಸಬಲ್ಲವು. ಲೇಸರ್ ಕಿರಣವು ಶತ್ರುವಿನ ವಾಹನದ ಮೇಲ್ಮೈಯನ್ನು ಸುಟ್ಟು ಹಾಕುವುದರ ಜೊತೆಗೆ ಒಳಗಿನ ಸಲಕರಣೆಗಳನ್ನು ನಾಶ ಮಾಡುತ್ತದೆ. "ಲೇಸರ್ ಅಸ್ತ್ರಗಳು ಕ್ಷಿಪಣಿಗಳನ್ನೂ ನಾಶ ಮಾಡುವುದರ ಜೊತೆಗೆ, ಶತ್ರುವಿಗೆ ಸುಳಿವುಗಳನ್ನೂ ನಾಶ ಮಾಡುವುದರ ಜೊತೆಗೆ, ಶತ್ರುವಿನ ಸುಳಿವು ನೀಡುವ ಪತ್ತೇದಾರಿ ಉಪಗ್ರಹಗಳ ನಾಶಕ್ಕೂ ಲೇಸರ್ ಅಸ್ತ್ರಗಳನ್ನು

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೬೬

ಬಳಸುವ ಪ್ರಯೋಗ ನಡೆದಿವೆ"[1] ಮನುಷ್ಯ ಸೃಷ್ಟಿಯ ಹಂಬಲದ ಯಶಸ್ವೀ ಪ್ರತಿರೂಪ ರೋಬಾಟ್ಸ್. ಮನುಷ್ಯನ ನೇರ ನಿಯಂತ್ರಣವಿಲ್ಲದೆ, ಸ್ವತಂತ್ರವಾಗಿ ಮನುಷ್ಯನಂತೆ ದುಡಿಯಬಲ್ಲ ಸ್ವಯಂಚಾಲಿತ ಯಂತ್ರ ರೋಬಾಟ್. ಒಂದು ಕಾಲಕ್ಕೆ ಕೇವಲ ಯಾಂತ್ರಿಕವಾಗಿದ್ದ ರೋಬಾಟ್‌ಗಳು, ಇಂದು 'ಎಲೆಕ್ಟ್ರಾನಿಕ್' ರೋಬಾಟ್‌ಗಳಾಗಿವೆ. ರೋಬಾಟ್ ರಂಗದ ಬೆಳವಣಿಗೆಗೆ ಸಹಾಯಕವಾದ ಇಪ್ಪತ್ತನೇ ಶತಮಾನದ ಅತ್ಯಂತ ಪ್ರಮುಖ ಅನ್ವೇಷಣೆಯಾಗಿದೆ.

"ಆಧುನಿಕ ರೋಬಾಟ್‌ಗಳು ಯಂತ್ರ ಮತ್ತು ಕಂಪ್ಯೂಟರ್‌ಗಳ ಜೋಡಣೆಯಿಂದ ಜನ್ಮ ಪಡೆದವು. ಕಂಪ್ಯೂಟರುಗಳ ಕಾರಣದಿಂದಾಗಿ, ಒಂದೇ ಯಂತ್ರ ಅನೇಕ ಕೆಲಸಗಳನ್ನು ಮಾಡುವಂತೆ ಪ್ರೋಗ್ರಾಮ್ ಮಾಡಲು ಸಾಧ್ಯವಾಯಿತು"[2] ಎಂದು ನೇಮಿಚಂದ್ರ ತಿಳಿಸಿದ್ದಾರೆ. ರೋಬಾಟಿನ ಕಾರ್ಯವೈಖರಿ ಬಹಳ ವಿಶಾಲವಾದುದು. ಮೊದಲನೆಯದಾಗಿ ಕಾರ್ಖಾನೆಗಳಲ್ಲಿ ರೋಬಾಟ್‌ನನ್ನು ಎಲ್ಲಾ ಕೆಲಸಗಳಲ್ಲು ಬಳಸಿಕೊಳ್ಳುತ್ತಾರೆ. ಅದೆಂದರೆ ಅಚ್ಚು ಮಾಡುವುದಕ್ಕೆ, ಬಿಡಿಭಾಗಗಳನ್ನು ಜೋಡಿಸುವುದಕ್ಕೆ, ಬೆಸುಗೆ ಹಾಕುವುದಕ್ಕೆ, ವಿದ್ಯುದ್ಲೇಪನಕ್ಕೆ, ತುಂತುರು ಬಣ್ಣದ ಕೆಲಸಕ್ಕೆ, ಅಪಾಯಕಾರಿ ವಿಕಿರಣ ಕೆಲಸಕ್ಕೆ ಬಳಸಿಕೊಳ್ಳುವ ಸಾಧ್ಯತೆ ಇದೆ. ವೈದ್ಯಕೀಯ ರಂಗದಲ್ಲೂ ರೋಬಾಟ್‌ನ ಸಹಾಯ ಕಾಣಬಹುದು. ಅದು ಹೇಗೆಂದರೆ ಕೀಲು ಹಿಡಿದವರಿಗೆ, ಪಾರ್ಶ್ವವಾಯು ಬಡಿದವರಿಗೆ, ದೈಹಿಕ ವ್ಯಾಯಾಮ ಮಾಡಿಸಲು ರೋಬಾಟ್ ಸಹಾಯ ಮಾಡುತ್ತದೆ. ರೋಗಿಗಳಿಗೆ ರೋಬಾಟ್ ಸೇವಕನಲ್ಲದೆ ಸ್ನೇಹಿತನೂ ಹೌದು. ನಂತರ ವ್ಯವಸಾಯದಲ್ಲಿ ನೋಡಿದಾಗ ತೋಟಗಳಲ್ಲಿನ ಹಣ್ಣುಗಳನ್ನು ಕೀಳುತ್ತವೆ, ಜಾಗರೂಕತೆಯಿಂದ ಎಲೆ, ಹೀಚುಗಳನ್ನು ದೂರ ಸರಿಸಿ ಮಾಗಿದ ಹಣ್ಣುಗಳನ್ನು ತಮ್ಮ ಕ್ಯಾಮರಕಣ್ಣಿನಿಂದ ಆರಿಸುತ್ತವೆ ಎಂದು ಲೇಖಕಿ ತಿಳಿಸುತ್ತಾರೆ. ಈ ಆಧುನಿಕ ಯುಗದಲ್ಲಿ "ವಯಸ್ಸಾದವರಿಗೆ, ವೃದ್ಧರಿಗೆ, ಒಂಟಿಜೀವಿಗಳಿಗೆ ರೋಬಾಟ್‌ಗಳು ಸಂಗಾತಿಗಳಾಗುವ ಕಾಲ ದೂರವಿಲ್ಲ"[3] ಎಂದು ಲೇಖಕಿ ನೇಮಿಚಂದ್ರರ ಅಭಿಮತವಾಗಿದೆ.

ಕಾನಿಷ್ಕ ವಿಮಾನ ದುರಂತದ ನಂತರ ಸಮುದ್ರದ ತಳ ಸೇರಿದ ವಿಮಾನದ ಭಾಗಗಳನ್ನು ರೋಬಾಟ್ ಆರಿಸಿ ತಂದಿತು. ಇನ್ನು ಅಂತರಿಕ್ಷದ ಮಂಗಳಗ್ರಹದಿಂದ ಮಣ್ಣು ಮತ್ತು ಕಲ್ಲಿನಲ್ಲಿರುವ ಮೂಲಧಾತುಗಳ ಮಾಹಿತಿಯನ್ನು ಸಹ ಭೂಮಿಗೆ ರವಾನಿಸುತ್ತಿದೆ. ಇಂದು ವೈದ್ಯರಂಗದಲ್ಲಿ ಎಲೆಕ್ಟ್ರಾನಿಕ್ಸ್ ನಿಜಕ್ಕೂ ಕ್ರಾಂತಿ ಮಾಡಿದೆ. ದೇಹವನ್ನು ಬಗೆಯದೆ, ಶಸ್ತ್ರಚಿಕಿತ್ಸೆ ಇಲ್ಲದೆ, ಕ್ಷ-ಕಿರಣ, ಸಿಟಿಸ್ಕ್ಯಾನ್, ಅಲ್ಟ್ರಾಸಾನಿಕ್ಸ್, ಎಮ್.ಆರ್.ಐ, ಪಿ.ಇ.ಟಿ. ಸಾಧನಗಳ ಮೂಲಕ ದೇಹದೊಳಗಿಣುಕುವ

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೯೦

೨. ಅದೇ, ಪುಟ-೯೩

೩. ಅದೇ, ಪುಟ-೧೦೨

ಸಾಧ್ಯತೆಯನ್ನು ತಂದಿವೆ. ಎಲೆಕ್ಟ್ರಾನಿಕ್ಸ್ ಕಂಪ್ಯೂಟರ್ ರೂಪದಲ್ಲಿ ರೋಗಗಳನ್ನು ಪತ್ತೆ ಹಚ್ಚಬಲ್ಲದು, ಪೇಸ್‌ಮೇಕರ್ ರೂಪದಲ್ಲಿ ಎದೆ ಬಡಿತವನ್ನು ನಿಯಂತ್ರಿಸಿ ಜನಗಳಿಗೆ ಜೀವದಾನ ಮಾಡಬಲ್ಲದು.

ಕಂಪ್ಯೂಟರ್:

"ಒಂದು ಕಾಲಕ್ಕೆ ಕೋಣೆಗಳ ತುಂಬಾ ಆವರಿಸಿ ಕುಳಿತು ಕ್ಲಿಷ್ಟ ಸಮಸ್ಯೆಗಳನ್ನೋ, ಮಂಗಳ ಗ್ರಹದ ಕಕ್ಷೆಯನ್ನೋ, ಕ್ಷಿಪಣಿಯ ಮಾರ್ಗವನ್ನೋ ಗಂಭೀರವಾಗಿ ಯೋಚಿಸುತ್ತಿದ್ದು ವಿಜ್ಞಾನಿಗಳ ತಂತ್ರಜ್ಞರ ಕೈಗೆ ಮಾತ್ರ ಸಿಗುತ್ತಿದ್ದ ಕಂಪ್ಯೂಟರ್ ಇವತ್ತು ನಮ್ಮ ಮೇಜಿನ ಮೇಲೆ, ತೊಡೆಯ ಮೇಲೆ ಕೂರುವಷ್ಟು ಚಿಕ್ಕದಾಗಿದೆ, ಅಂಗೈಯಲ್ಲಿ ಹಿಡಿಯುವಷ್ಟು, ಮಣಿಕಟ್ಟಿನ ಮೇಲೆ ಕಟ್ಟುವಷ್ಟು ಪುಟ್ಟದಾಗಿದೆ". ತುಂಬಾ ಹಿಂದೆ ಕಂಪ್ಯೂಟರ್ ಎಂಬ ಪದದ ಅರ್ಥ 'ಗುಣಿಸುವ ಕೆಲಸ ಮಾಡುವ ವ್ಯಕ್ತಿ' ಎಂದಿತ್ತು. ಆದರೆ ಹೊಸನಿಘಂಟು ತೆರದು ನೋಡಿದಾಗ ಅದರಲ್ಲಿ Computer a programmable electronic device ಎಂದು ವಿವರಿಸಿದ್ದಾರೆ". ಒಂದು ಕಾಲಕ್ಕೆ ಮನುಷ್ಯ ಮಾಡುತ್ತಿದ್ದ ಕೆಲಸವನ್ನೆಲ್ಲ ಇಂದು ಕಂಪ್ಯೂಟರ್ ಮಾಡುತ್ತಿದೆ ಮಾತ್ರವಲ್ಲ, ಮನುಷ್ಯ ಮಾಡಲಾರದ ಕೆಲಸವನ್ನು ಕಂಪ್ಯೂಟರ್ ಮಾಡುತಿದೆ."[೧] ಇಪ್ಪತ್ತು ವರ್ಷಗಳ ಅಂತರದಲ್ಲಿ ಈ ಪವಾಡ ಸಾಧ್ಯವಾಗಿದೆ. ಸಣ್ಣಗಾತ್ರದ, ಅಧಿಕಶಕ್ತಿಯ, ಕಡಿಮೆ ಬೆಲೆಯ ಕಂಪ್ಯೂಟರಿನ ವಿಕಾಸ ಮತ್ತು ಮುಂದುವರೆದಿದೆ.

ಆಡಾ ಅಗುಸ್ಟಾ ಲವ್ಲೇಸ್ ಮತ್ತು ಚಾರ್ಲ್ಸ್ ಬ್ಯಾಬೇಜ್ ಇವರಿಬ್ಬರ ಶ್ರಮದಿಂದ ಹುಟ್ಟಿದ ಯಂತ್ರವೇ ಕಂಪ್ಯೂಟರ್. ಕಂಪ್ಯೂಟರ್‌ನಲ್ಲಿ ಹಾರ್ಡ್‌ವೇರ್, ಸಾಫ್ಟ್‌ವೇರ್ ಎಂಬ ಪದಗಳನ್ನು ನಾವು ಕೇಳಿದ್ದೇವೆ. ಮನುಷ್ಯನನ್ನು ಕಂಪ್ಯೂಟರಿನ ಪಾರಿಭಾಷಿಕ ಪದಗಳಲ್ಲಿ ಹೇಳುವುದಾದರೆ ಅವನ ದೇಹವನ್ನು ಹಾರ್ಡ್‌ವೇರ್ ಎಂದೂ, ಬುದ್ಧಶಕ್ತಿಯನ್ನು ಸಾಫ್ಟ್‌ವೇರ್ ಎಂದು ವರ್ಣಿಸಬಹುದು. ಕಂಪ್ಯೂಟರನ ವಿವಿಧ ವಿಭಾಗಗಳನ್ನು ಈ ರೀತಿಯಾಗಿ ವಿವರಿಸಬಹುದು. 'ಇನ್‌ಪುಟ್' ಕಂಪ್ಯುಟರಿಗೆ ಮಾಹಿತಿ ಉಣಿಸುವ ವಿಭಾಗ. 'ಔಟ್‌ಪುಟ್' ಮಾಹಿತಿಯನ್ನು ಹೊರಹಾಕುವ ವಿಭಾಗ. 'ಮೆಮೊರಿ'ಯಲ್ಲಿ ದತ್ತಾಂಶಗಳು ಹಾಗೂ ಆಯಾ ಸಮಯಕ್ಕೆ ಅಗತ್ಯವಾದ ಪ್ರೋಗ್ರಾಮ್‌ಗಳು ಸಂಗ್ರಹವಾಗಿರುತ್ತದೆ. 'ಸಿಪಿಯು' ಇದು ಕಂಪ್ಯೂಟರಿನ ಮೆದುಳು. ವಿವಿಧ ಭಾಗಗಳನ್ನು ನಿಯಂತ್ರಣ ಮಾಡುವ ಕೇಂದ್ರಬಿಂದು.

"ಇಂಟರ್ನೆಟ್" ಜಗತ್ತಿಗೆ ತೆರೆದಿಟ್ಟ ಬಾಗಿಲು. ಇಂಟರ್ನೆಟ್ ಎಂದರೇನು ಅಂತ ಸರಳವಾಗಿ ಹೇಳುವುದಾದರೆ –"ಒಂದಿಷ್ಟು ಕಂಪ್ಯೂಟರ್ ಜಾಲಗಳ ಮಹಾಜಾಲ. ಸದಾ ಅಲ್ಲಿಂದಿಲ್ಲಿಗೆ,

---

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೧೪೫

ಇಲ್ಲಿಂದಲ್ಲಿಗೆ ಮಾಹಿತಿ ಹರಿದಾಡುವ ಮಹಾಹೆದ್ದಾರಿ. ದೂರವಾಣಿ ತಂತಿಗಳಿಂದಲೋ, ಉಪಗ್ರಹದ ಮೂಲಕವೋ ಪರಸ್ಪರ ಜೋಡಿಸಲ್ಪಟ್ಟು, ಪರಸ್ಪರ ಮಾತನಾಡಬಲ್ಲ ಕಂಪ್ಯೂಟರ್‌ಗಳ ಗುಂಪಿಗೆ ಇಂಟರ್ನೆಟ್ ಎನ್ನಬಹುದು".[೧] ಸಂಗೀತ, ಸಾಹಿತ್ಯ, ನೃತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ, ಭೂಗೋಳ, ಪರಿಸರ, ಆಸಕ್ತಿ, ಹವ್ಯಾಸ, ಉದ್ಯೋಗ ಯಾವುದೇ ಇರಲಿ ಇಂಟರ್ನೆಟ್ ಅಳವಡಿಸಿದ ಕಂಪ್ಯೂಟರ್ ಹೊಸ ಜಗತ್ತನ್ನು ತೆರೆಯಬಲ್ಲದು. ಸಾವಿರ ಸಂಖ್ಯೆಯ ಸಾಧ್ಯತೆಯನ್ನು ಇಂಟರ್ನೆಟ್ ತಂದಿದೆ. ಇಡೀ ಪ್ರಪಂಚವನ್ನೇ ಕಂಪ್ಯೂಟರ್ ಜಾಲದಲ್ಲಿ ಬಂಧಿಸಿ, ಹತ್ತಿರಕ್ಕೆ ತಂದಿದೆ. ಇಂದು ದೂರದಂತರವನ್ನು ಕಡಿಮೆ ಮಾಡಿ ಭೂಮಿಯನ್ನು ಒಂದು ಸಣ್ಣಗ್ರಾಮವಾಗಿಸಿದೆ. ಇನ್ನೊಂದು ಗಮನಿಸಬೇಕಾದ ಸಂಗತಿ ಎಂದರೆ ಪ್ರಪಂಚದ ಚರಿತ್ರೆಯಲ್ಲಿಯೇ ವೆಬ್ ಅತ್ಯಂತ ವೇಗವಾಗ ಬೆಳೆಯುತ್ತಿರುವ ಸಂಪರ್ಕ ಸಾಧನ.

ಇಂಟರ್ನೆಟ್ ಜೋಡಣೆ ಇರುವ ಒಂದಷ್ಟು ಕಂಪ್ಯೂಟರ್‌ಗಳನ್ನು ಒಳಗೊಂಡ ಕೆಫೆಯೇ 'ಸೈಬರ್ ಕೆಫೆ'. ಮನೆಗಳಲ್ಲಿ, ಕಛೇರಿಗಳಲ್ಲ ಕಂಪ್ಯೂಟರ್ ಬಳಸುವ ಅವಕಾಶವಿಲ್ಲದ ವಿದ್ಯಾರ್ಥಿಗಳು, ಉದ್ಯಮಿಗಳು, ಸಾಮಾನ್ಯಜನರು ಮಾಹಿತಿ ಪಡೆಯಲು ಇಂತಹ ಸೈಬರ್ ತಾಣಗಳಿಗೆ ಬರುತ್ತಾರೆ. ಇಂದು ಸೈಬರ್ ತಾಣಗಳು ಎಲ್ಲೆಂದರಲ್ಲಿ ಚಿಗುರೊಡೆದು ಜನಸಾಮಾನ್ಯರಿಗೂ ಈ ಹೈ-ಟೆಕ್ ತಾಂತ್ರಿಕತೆಯ ಅನುಭವ ಮತ್ತು ಅನುಕೂಲಗಳೆರಡನ್ನು ಒದಗಿಸುತ್ತಿವೆ, ಒಂದು ಜಗತ್ತನ ಯಾವುದೇ ಮೂಲೆಯ ವ್ಯಕ್ತಿಯನ್ನು ಸಂಪರ್ಕಿಸಬಹುದಾದರೆ ಅದಕ್ಕೆ ಕಾರಣ ಇ-ಮೇಲ್ ಎನ್ನಬಹುದು. ಇನ್ನು ಮುಂದಿನ ಆವಿಷ್ಕಾರವೆಂದರೆ ಯು.ಪಿ.ಎಸ್. (Uninterrupted Power Supply) ಅರ್ಥ ತಡೆ ಇಲ್ಲದ ವಿದ್ಯುತ್ ಸರಬರಾಜು ಎಂದರ್ಥ. ಇದು ಕಂಪ್ಯೂಟರಿಗೆ ವಿದ್ಯುತ್ ಸರಬರಾಜಿನ ಏರುಪೇರಿನ ನಡುವೆ ರಕ್ಷಣೆ ಹಾಗೂ ತಡೆ ಇಲ್ಲದೆ ವಿದ್ಯುತ್ ಸರಬರಾಜನ್ನೂ ನೀಡುತ್ತದೆ. ಪ್ರಸ್ತುತ ಎಲ್ಲಾ ಕಡೆ ಡಿ.ಟಿ.ಪಿ.ಯದೇ ಕಾರುಬಾರು. ಡಿ.ಟಿ.ಪಿ.ಎಂದರೆ ಡೆಸ್ಕ್ ಟಾಪ್ ಪಬ್ಲಿಷಿಂಗ್ ಎನ್ನಬಹುದು.

ಒಬ್ಬ ಮನುಷ್ಯ ಕುಳಿತು ಪಠ್ಯ, ಚಾರ್ಟುಗಳು, ಚಿತ್ರಗಳು ಎಲ್ಲವನ್ನೂ ಕಂಪ್ಯೂಟರಿನಲ್ಲಿ ಜೋಡಿಸಿ ಲೇಸರ್ ಮುದ್ರಣದಲ್ಲಿ ಮುದ್ರಿಸಿ ಉತ್ತಮ ಗುಣಮಟ್ಟದ ಪುಸ್ತಕ ಪತ್ರಗಳನ್ನು ಹೊರತರಬಹುದು. ಕಂಪ್ಯೂಟರ್ ಕೊಳ್ಳುವಾಗ ಮನುಷ್ಯನು ತನ್ನ ಆರೋಗ್ಯದ ಕಡೆ ಸಹ ತಕ್ಕ ಗಮನವನ್ನು ನೀಡುವುದು ಅವಶ್ಯಕ. ಕಂಪ್ಯೂಟರನ್ನು ಇಕ್ಕಟ್ಟಾದ ಜಾಗದಲ್ಲಿ ಇಡದೆ ಸರಿಯಾದ ಜಾಗ, ಕುರ್ಚಿ, ಮೇಜುಗಳ ಅವಶ್ಯಕತೆ ತುಂಬಾ ಇದೆ. ಕಂಪ್ಯೂಟರಿನಿಂದ ಮುಖ ಮತ್ತು ದೇಹ ೨೮ ಅಂಗುಲದಷ್ಟು ದೂರ, ನೇರವಾಗಿ ಕುಳಿತು, ಬೆನ್ನಿನ ಕೆಳಭಾಗಕ್ಕೆ ಆಸರೆ ನೀಡುವಂತಿರಬೇಕು. ಪ್ರತಿಗಂಟೆಗೊಮ್ಮೆ ಐದು-ಹತ್ತು ನಿಮಿಷಗಳ ವಿಶ್ರಾಂತಿ ಮುಖ್ಯ. ಜೊತೆಗೆ ಕೈಕಾಲ ಬೆರಳುಗಳನ್ನು

೧.ನೇಮಿಚಂದ್ರ; ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್, ಪುಟ-೨೧೮

ಚಾಚಿ ಅಲ್ಲಾಡಿಸಿ ರಕ್ತಸಂಚಾರ ಚೆನ್ನಾಗಿರುವಂತೆ ನೋಡಿಕೊಳ್ಳಬೇಕು.

ಇಂದಿನ ಜಗತ್ತಿನ ತಾಂತ್ರಿಕತೆಯು ಕೇವಲ ಮಾಹಿತಿಯ ಭಂಡಾರ ಮಾತ್ರವಲ್ಲ, ಅದು ಜೀವನದ ಅವಿಭಾಜ್ಯ ಅಂಗವೂ ಆಗಿದೆ. ಮಾಹಿತಿ ತಂತ್ರಜ್ಞಾನ ನಿರ್ವಹಿಸುವ ಕೆಲಸವನ್ನು ಈಗಲೂ ಒಂದು ಬಗೆಯ ಬೆರಗಿನಿಂದಲೇ ನೋಡಲಾಗುತ್ತಿದೆ. ನಮ್ಮ ಪರಿಣಿತರ ಬರಹಗಳು ನಮ್ಮ ಜನರಲ್ಲಿ ಇನ್ನೂ ಅದರ ಕುರಿತಾದ ಸ್ಪಷ್ಟ ಕಲ್ಪನೆಯನ್ನು ತಂದು ಕೊಟ್ಟಿಲ್ಲ. ಆ ಕೊರತೆಗಳನ್ನು ತುಂಬಿಕೊಡುವಷ್ಟು ವಿಸ್ತಾರವಾಗಿ ಅಲ್ಲದಿದ್ದರೂ ಸ್ವಲ್ಪ ಮಾಹಿತಿಯನ್ನು ಒದಗಿಸುವ ಪ್ರಯತ್ನ ಇಲ್ಲಿ ನಡೆದಿದೆ. ಒಂದು ರೀತಿಯಲ್ಲಿ ಇಂತಹ ಬರವಣಿಗೆಯೂ ಸಾಹಿತ್ಯ ಚರಿತ್ರೆಯ ಒಂದು ಭಾಗವೇ ಆಗಿರುತ್ತದೆ ಎಂಬುದನ್ನು ಗಮನಿಸಬಹುದು. ಗಣಕಗಳ ಬೆಳವಣಿಗೆಯ ಇತ್ತೀಚಿನ ಹಂತದಲ್ಲಿ ಎರಡು ಕವಲುಗಳು ಕಂಡು ಬಂದಿವೆ. ಒಂದು ಮೈಕ್ರೋಸಾಫ್ಟ್ ನಂತಹ ಬೃಹತ್ ಸಂಸ್ಥೆಗಳು ರೂಪಿಸಿ ಮಾರಾಟ ಮಾಡುತ್ತಿರುವ ಎಂಡೋಸ್‌ನಂತಹ ಒಡೆತನ ತಂತ್ರಾಂಶ ಇನ್ನೊಂದು ಯಾವುದೇ ಬೆಲೆನೀಡದೆ ಬಳಸಬಹುದಾದ ಮುಕ್ತ ಆಕರ ತಂತ್ರಾಂಶದವರು ರೂಪಿಸಿರುವ ಲಿನಕ್ಸ್‌ನಂತಹ ತಂತ್ರಾಂಶಗಳು. ಮಾಹಿತಿ ತಂತ್ರಜ್ಞಾನ ಮೊದಲಿಗೆ ಕೇವಲ ಗಣಕ ತಂತ್ರಜ್ಞಾನವಾಗಿತ್ತು. ಯಾವಾಗ ಗಣಕಗಳು ಕೇವಲ ಲೆಕ್ಕಾಚಾರ, ವಿಜ್ಞಾನದ ಕೆಲಸಗಳು ಮುಂತಾದವನ್ನು ಮೀರಿ ಎಲ್ಲ ಕ್ಷೇತ್ರಗಳ ಕೆಲಸಗಳನ್ನೂ ನಿರ್ವಹಿಸತೊಡಗಿತೋ ಅಲ್ಲಿಂದಾಚೆಗೆ ಅವೆಲ್ಲವನ್ನು ಸೇರಿಸಿ ಇಡೀ ಕ್ಷೇತ್ರವನ್ನು ಮಾಹಿತಿ ತಂತ್ರಜ್ಞಾನ ವಲಯ ಎಂದು ಗುರುತಿಸಲಾಯಿತು. ಕೇವಲ ಗಣಕ ತಂತ್ರಜ್ಞರ ಒಡನಾಡಿಗಳಾಗಿದ್ದ ಗಣಗಳು, ಕೆಲವೇ ವರ್ಷಗಳಲ್ಲಿ ಸಾಮಾನ್ಯರ ಬಳಿಗೂ ಅಡಿಯಿಟ್ಟು ಅವರ ಜೀವನ ಶೈಲಿಯನ್ನು ಬದಲಿಸಿದವು.

ಅಂತರಜಾಲ ಎಂದರೆ ತುಂಬ ಸರಳವಾಗಿ ಪರಸ್ಪರ ಸಂಪರ್ಕ ಸಾಧ್ಯತೆಯನ್ನು ಇರಿಸಿಕೊಂಡಿರುವ ಗಣಕ ಜಾಲಬಂಧಗಳ ಸಮೂಹ. ಅಂತರಜಾಲ ಇಂದು ವ್ಯಾಪಕವಾಗಿ ಬೆಳೆದು ನಿಂತು ಕ್ರಾಂತಿ ಸದೃಶ ಪರಿಣಾಮವನ್ನು ನಮ್ಮ ಜೀವನದಲ್ಲಿ ತಂದಿದೆ. ಇಂದು ಅಂತರಜಾಲದ ಸಹಾಯ ಪಡೆಯದ ಕ್ಷೇತ್ರವಿಲ್ಲ. ಗಣಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಎಂದು ನಾಮಕರಣಗೊಂಡದ್ದು ಅಂತರಜಾಲದಿಂದಾಗಿಯೇ. ಇದರ ಅನ್ವಯಗಳು ಅಪರಿಮಿತ. ಬಸ್ಸು, ರೈಲು, ವಿಮಾನಗಳ ಟಿಕೆಟ್ಟು ಖರೀದಿ, ದಿನಪತ್ರಿಕೆಗಳನ್ನು ಓದುವುದು ಮುಂತಾದವುಗಳಿಂದ ಹಿಡಿದು, ಪರಿಣತ ವೈದ್ಯರು ಸಹಸ್ರಾರು ಕಿಲೋಮೀಟರುಗಳಷ್ಟು ದೂರದಲ್ಲಿರುವ ರೋಗಿಯೊಬ್ಬನ ಶಸ್ತ್ರಚಿಕಿತ್ಸೆ ಮಾಡುವ ತನಕ ಸಾವಿರಾರು ನಿದರ್ಶನಗಳನ್ನು ನೀಡಬಹುದು. ಮಾನವ ಸಮಾಜದ ಮೇಲೆ ಬಹುಶಃ ಇದರಷ್ಟು ವ್ಯಾಪಕ ಪರಿಣಾಮ ಬೀರಿದ ಬೇರೆ ಸಂಗತಿ ಇಲ್ಲವೆಂದು ಧೈರ್ಯವಾಗಿ

ಹೇಳಬಹುದು. ಅಂತರಜಾಲದ ಕಾರ್ಯ ನಿರ್ವಹಣೆ ತಾತ್ವಿಕವಾಗಿ ಸರಳ ಎನಿಸಿದರೂ ಸಂಕೀರ್ಣ ತಂತ್ರಜ್ಞಾನವನ್ನು ಬಳಸುತ್ತದೆ. ಅಂತರಜಾಲದ ಸುಗಮ ನಿರ್ವಹಣೆಗೆ ಒಂದೆಡೆ ಮಾಹಿತಿ ಸರಬರಾಜು ವ್ಯವಸ್ಥೆ ಮತ್ತು ಮಾಹಿತಿ ಹರಿವಿನ ವ್ಯವಸ್ಥೆ ಅಗತ್ಯ. ಇನ್ನೊಂದೆಡೆಯಲ್ಲಿ ಬಳಕೆದಾರನಲ್ಲಿ ಉತ್ತಮ ತರಂಗ ವಿಸ್ತಾರದ ಅಂತರಜಾಲ ಸಂಪರ್ಕ ಮತ್ತು ಉತ್ತಮ ಗುಣಮಟ್ಟದ ಗಣಕಗಳು ಇರಬೇಕು.

ಅಂಚೆ ಕಚೇರಿ ನಮ್ಮೆಲ್ಲ ಅಂಚೆ ಅವಶ್ಯಕತೆಗಳನ್ನು ಪೂರೈಸುತ್ತಿದ್ದ ರೀತಿಯಲ್ಲಿ ಅನೇಕ ಸಂಸ್ಥೆಗಳು ವಿದ್ಯುನ್ಮಾನ ಅಂಚೆಯ ಸೇವೆಯನ್ನು ಒದಗಿಸುವುದಕ್ಕೆ ಪ್ರಾರಂಭಿಸಿದವು ಇಂದು ಪ್ರಮುಖವಾಗಿ ಯಾಹೂ, ರೀಡಿಫ್, ಯುಎಸ್. ಎಮೈಲ್, ಹಾಟ್‌ಮೈಲ್, ಜಿಮೈಲ್ ಸಂಸ್ಥೆಗಳ ವಿ. ಅಂಚೆ ಸೇವೆ ವ್ಯಾಪಕವಾಗಿ ಬಳಕೆಯಲ್ಲಿದೆ. ಅಂತರಜಾಲದಲ್ಲಿ ಮಾಹಿತಿಯನ್ನು ಸದಾಕಾಲ ಎಲ್ಲರಿಗೂ ದೊರೆಯುವಂತೆ ಇರಿಸುವ ವ್ಯವಸ್ಥೆ ಇದೆ. ಈ ವ್ಯವಸ್ಥೆಯೇ ಅಂತರಜಾಲ ಇದು ಮೊದಲು ಬಹಳ ಸರಳವಾಗಿತ್ತು. ಈಗ ಸಂಕೀರ್ಣವಾದ ವಿದ್ಯಮಾನವಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಹಿಡಿದು ಎಲ್ಲರೂ ಅಂತರಜಾಲತಾಣಗಳನ್ನು ನಿರ್ಮಿಸಿಕೊಳ್ಳ ಬಯಸುತ್ತಾರೆ. ಈಗ ಅಂತರಜಾಲತಾಣದ ನಿರ್ಮಾಣ ಸ್ವಲ್ಪಮಟ್ಟಿಗೆ ಸರಳವಾಗಿದೆ. ಅಂತರಜಾಲ ಏಕೆ ಇಷ್ಟೊಂದು ಜನರನ್ನು ಆಕರ್ಷಿಸಿದೆ ಎಂದರೆ ಅದು ತನ್ನ ಬೃಹತ್ ಒಡಲಲ್ಲಿ ಇರಿಸಿಕೊಂಡಿರುವ ಬಗೆಬಗೆಯ ಮಾಹಿತಿಯೇ ಆಗಿದೆ.

ಇತ್ತೀಚೆಗೆ ಅಂತರ್ ಜಾಲದಲ್ಲಿ ಬಹುವಾಗಿ ಪರಿಚಿತವಾಗಿರುವ ವಿದ್ಯಮಾನ ಬ್ಲಾಗುಗಳು. ಮೊದಲು ಇದು ವೆಬ್‌ಲಾಗ್ ಎಂದರೆ ಅಂತರಜಾಲದಲ್ಲಿ ದಿನಚರಿ ಎಂಬರ್ಥದಲ್ಲಿ ಪ್ರಯೋಗವಾಯಿತು. ಕ್ರಮೇಣ ಇದರಲ್ಲಿ ಬೇರೆ ಬೇರೆ ಅಂಶಗಳನ್ನೂ ಇರಿಸಬಹುದೆಂಬ ಅಂಶ ನಿಚ್ಚಳವಾಗಿ ಅನೇಕರು ಈಗ ಬ್ಲಾಗು ಎಂದರೆ ಹೊಸದೊಂದು ಅಭಿವ್ಯಕ್ತಿ ಮಾಧ್ಯಮ ಎಂದು ಭಾವಿಸಿದ್ದಾರೆ. ಇದು ನಿಜವೂ ಹೌದು. ಅನೇಕರು ತಮ್ಮ ತಮ್ಮ ಸೃಜನಶೀಲ ಕೃತಿಗಳನ್ನು ಬ್ಲಾಗುಗಳ ಮೂಲಕ ಪ್ರಕಟಿಸುತ್ತಿದ್ದಾರೆ. ಕನ್ನಡದಲ್ಲಿ ೨೦೧೧ರ ಫೆಬ್ರವರಿ ವೇಳೆಗೆ ಸುಮಾರು ೯೫೦ ಕ್ಕೂ ಹೆಚ್ಚಿನ ಸಂಖ್ಯೆಯ ಬ್ಲಾಗುಗಳು ಇರುವುದನ್ನು ಅಂತರಜಾಲದಲ್ಲಿ ಇರುವ ಕನ್ನಡ ಬ್ಲಾಗ್ ಸೂಚಿ ದಾಖಲಿಸಿದೆ. ಕನ್ನಡದ ಬ್ಲಾಗುಗಳ ಪೈಕಿ, ಅವಧಿ, ಕೆಂಡಸಂಪಿಗೆ ಮುಂತಾದವು ಜನ ಪ್ರಿಯವಾಗಿವೆ. ಇವುಗಳಲ್ಲಿರುವ ವೈವಿಧ್ಯವು ಗಮನಾರ್ಹವಾದದ್ದು. ಇಲ್ಲಿ ಕಥೆ, ಕವನ, ವಿಮರ್ಶೆ, ಪಕ್ಷಿಗಳೂ ಸೇರಿದಂತೆ ವನ್ಯಜೀವಿ ಛಾಯಾಚಿತ್ರಳು, ಭಾಷೆಯ ವಿಷಯಗಳ ಕುರಿತಾದ ಚರ್ಚೆ ಎಲ್ಲವೂ

ಇರುತ್ತದೆ. ಪ್ರಜಾವಾಣಿ ಪತ್ರಿಕೆ ಪ್ರತಿವಾರ ಒಂದು ಕನ್ನಡದ ಬ್ಲಾಗನ್ನು ಪರಿಚಯಿಸುವ ಅಂಕಣವನ್ನು ಪ್ರಕಟಿಸುತ್ತಿದೆ.

ಬ್ಲಾಗಿನದ ಇನ್ನೊಂದು ರೂಪವೇ ಟ್ವಿಟರ್. ಇದರಲ್ಲಿ ಚಿಕ್ಕ ಸಂದೇಶಗಳಿಗೆ ಮಾತ್ರ ಅವಕಾಶ. ಒಟ್ಟು ೧೪೦ ಅಕ್ಷರಗಳಿಗಿಂತ ಕಡಿಮೆ ಇರುವ ಸಂದೇಶಗಳು ಮಾತ್ರ ಪ್ರಕಟವಾಗುತ್ತವೆ. ಅಂತರಜಾಲ ಸಂಪರ್ಕ ಪಡೆದವರು ಬೇಸರ ನೀಗಿಸಿಕೊಳ್ಳಲು ಏನು ಮಾಡುತ್ತಿದ್ದೀರಿ ಎಂದು ಪ್ರಶ್ನೆ ಕೇಳಿದರೆ ಚುಟುಕಾಗಿ ಉತ್ತರಿಸಲು ಇದನ್ನು ಬಳಸಬಹುದು. ಹಾಗೆಯೇ ಅಂದಂದಿನ ವಿದ್ಯಮಾನಗಳಿಗೆ ತಕ್ಷಣದ ಪ್ರತಿಕ್ರಿಯೆಯನ್ನು ನೀಡಲು ರಾಜಕಾರಣಿಗಳು, ಪ್ರಭಾವಿ ವ್ಯಕ್ತಿಗಳು, ಜನಪ್ರಿಯ ತಾರೆಯರು ಇದನ್ನು ಬಳಸುತ್ತಾರೆ. ವಿದೇಶಿ ಹೂಡಿಕೆಯ ಬಗೆಗೆ ಅಭಿಪ್ರಾಯವನ್ನು ಸೂಚಿಸಲು ಇದನ್ನು ಬಳಸಬಹುದು, ಚಲನಚಿತ್ರ ಯಶಸ್ವಿಯಾಗಿದ್ದಕ್ಕೆ ತಾರೆಯರು ಟ್ವಿಟರ್ ಮೂಲಕ ಸಂತೋಷವನ್ನು ಹಂಚಿಕೊಳ್ಳಬಹುದು. ಬಹುತೇಕ ಮೊಬೈಲ್ ಪೋನಿನ ಎಸ್.ಎಂ.ಎಸ್ ನಂತೆ ಇದು ಕಾರ್ಯನಿರ್ವಹಿಸುತ್ತದೆ ಎನ್ನಬಹುದು.

ವೈಬ್‌ಕಾಸ್ಟ್- ಅಂತರಜಾಲದ ಮೂಲಕ ವೀಡಿಯೋಗಳನ್ನು ಪ್ರಸಾರ ಮಾಡುವುದಕ್ಕೆ ಹೀಗೆ ಹೇಳುತ್ತಾರೆ. ಬ್ರಾಡ್‌ಕಾಸ್ಟ್ ಎನ್ನುವ ಪದದ ನೆರವಿನಿಂದ ಇದು ಜನಿಸಿದೆ. ನೇರವಾಗಿ ಬೇರೆ ಯಾವುದೇ ಮಾಧ್ಯಮದ ಹಂಗಿಲ್ಲದೆ ಯಾರೋ ತೆಗೆದ ವೀಡಿಯೋ ತುಣುಕೊಂದನ್ನು ಅಂತರಜಾಲದ ಮೂಲಕ ಜಗತ್ತಿಗೆ ತೆರೆದಿಡಲು ವೆಬ್‌ಕಾಸ್ಟ್ ಸಹಾಯಕವಾಗುತ್ತದೆ. ಇದು ನೇರವಾಗಿ ಎಷ್ಟು ಜನರಿಗೆ ಬೇಕಾದರೂ ಏಕಕಾಲದಲ್ಲಿ ಲಭ್ಯವಿರುವ ಹಾಗೆ ವ್ಯವಸ್ಥೆಗೊಂಡಿರುತ್ತದೆ ಮಾಧ್ಯಮ ಬಿತ್ತರ ಇದರ ವೈಶಿಷ್ಟ್ಯ.

ಪೇಸ್‌ಬುಕ್- ಪೇಸ್‌ಬುಕ್ ಎಂಬುದು ಒಂದು ಸಾಮಾಜಿಕ ಸಂಪರ್ಕ ಕಲ್ಪಿಸುವ ಅಂತರಜಾಲತಾಣ. ಇದು ಮುಖ್ಯವಾಗಿ ಸಮಾಜದ ಎಲ್ಲರನ್ನೂ ಒಂದು ಸಂಪರ್ಕವಲಯದಲ್ಲಿ ತರುವ ಪ್ರಯತ್ನವಾಗಿದೆ. ಜುಲೈ ೨೦೧೧ ರಂತೆ ಫೇಸ್‌ಬುಕ್ ಸಂಪರ್ಕ ವ್ಯವಸ್ಥೆಯಲ್ಲಿ ಎಂಟು ಕೋಟಿಗೂ ಹೆಚ್ಚು ಜನ ಸೇರಿಕೊಂಡಿದ್ದಾರೆ. ಇದು ಎಲ್ಲ ವಿಚಾರಗಳ ಚರ್ಚೆಗೆ, ಸಂದೇಶಗಳ ರವಾನೆಗೆ, ಸುದ್ಧಿ ಬಿತ್ತರಕ್ಕೆ, ವೀಡಿಯೋ ತುಣುಕುಗಳನ್ನು ರವಾನಿಸುವುದಕ್ಕೆ, ಉತ್ಪನ್ನವೊಂದರ ವಿವರಣೆ ನೀಡುವುದಕ್ಕೆ ಅವುಗಳ ಗುಣಮಟ್ಟ ಕುರಿತು ಚರ್ಚೆ ನಡೆಸುವುದಕ್ಕೆ, ಪರಸ್ಪರ ಟಿಪ್ಪಣಿಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ಅವಕಾಶ ನೀಡುತ್ತದೆ. ಆದುದರಿಂದ ಅತ್ಯಂತ ಜನಪ್ರಿಯ ಸಂಪರ್ಕಜಾಲವಾಗಿದೆ. ಹಾಗೆಂದು ಇಲ್ಲಿ ಎಲ್ಲವೂ ಸರಿ ಇದೆ ಎಂದಲ್ಲ. ಇಲ್ಲಿಯ ಸಂಪರ್ಕ

ಪಡೆದುಕೊಂಡವರ ಖಾಸಗಿ ಮಾಹಿತಿಯೂ ಸೇರಿದಂತೆ ಎಲ್ಲಾ ಮಾಹಿತಿಗಳನ್ನೂ ಫೇಸ್‌ಬುಕ್ ದುರುಪಯೋಗ ಮಾಡಿಕೊಳ್ಳುತ್ತಿದೆ. ಹಾಗೂ ಮಾಹಿತಿಗೆ ಸಂಬಂಧಿಸಿದ ಹಾಗೆ ಇದೊಂದು ಅಷ್ಟೇನೂ ಸುರಕ್ಷಿತವಾದ ತಾಣವಲ್ಲ ಎನ್ನುವ ಅಭಿಪ್ರಾಯಗಳೂ ಇವೆ.

'ಮೈಸ್ಪೇಸ್' ಎಂಬುದು ಅಂತರಜಾಲ ತಾಣಗಳಲ್ಲಿ ಮುಖ್ಯವಾದುದು. ಈ ತಾಣವೂ ಜನಪ್ರಿಯವಾಗಿದೆ. ಕೆಲವು ವಿಷಯಗಳಲ್ಲಿ ಇದು ಫೇಸ್‌ಬುಕ್‌ಗಿಂತ ಹೆಚ್ಚಿನ ಸೌಕರ್ಯಗಳನ್ನು ಒದಗಿಸುತ್ತದೆ. ಕನ್ನಡ ವಿಕಿಪೀಡಿಯ ಒಂದು ಜಗತ್ಪ್ರಸಿದ್ದ ಮುಕ್ತ ಮತ್ತು ಸ್ವತಂತ್ರ ವಿಶ್ವಕೋಶ. ಇದು ಅಂತರಜಾಲದಲ್ಲಿ ಲಭ್ಯ. ವಿಕಿಪೀಡಿಯ ಕನ್ನಡ ಭಾಷೆಯಲ್ಲೂ ಲಭ್ಯವಿದೆ. ವಿಕಿಪೀಡಿಯದಲ್ಲಿ ಜಗತ್ತಿನ ೨೮೭ ಭಾಷೆಗಳ ೩೦ ಮಿಲಿಯನ್ ಲೇಖನಗಳಿವೆ. ಅದರಲ್ಲಿ ೨೦ಕ್ಕೂ ಹೆಚ್ಚು ಭಾರತೀಯ ಭಾಷೆಗಳು ಸೇರಿವೆ. ಸಮಾಜವನ್ನು ಒಡೆಯುವ ಮತ್ತು ಒಂದುಗೂಡಿಸುವ ಕಾರ್ಯ ಮಾಡಬಲ್ಲ ಸಾಮರ್ಥ್ಯ ಸಾಮಾಜಿಕ ಜಾಲತಾಣಗಳಿಗಿರುವಾಗ ಅದರ ಸದ್ಬಳಕೆಯಾಗಬೇಕಿರುವಂತೆಯೇ ಅದರ ದುರ್ಬಳಕೆಯ ಲಗಾಮು ನಮ್ಮ ಕೈಯಲೇ ಇದೆ. ಎಂಬುದು ಗಮನದಲ್ಲಿರಬೇಕಷ್ಟೆ.

ಒಟ್ಟಾರೆ ಹೇಳುವುದಾದರೆ ಎಲೆಕ್ಟ್ರಾನಿಕ್ಸ ಮತ್ತು ಕಂಪ್ಯೂಟರ್ಸ್ ನಮ್ಮ ಸಂಪೂರ್ಣ ಬದುಕನ್ನು ಆವರಿಸಿಕೊಳ್ಳಲಿವೆ. ಕೃತಕ ಬುದ್ಧಿವಂತಿಕೆಯನ್ನು ಅಳವಡಿಸಿಕೊಂಡ ಸ್ಮಾರ್ಟ್ ಎಲೆಕ್ಟ್ರಾನಿಕ್ ಸಲಕರಣೆಗಳು ಮತ್ತು ಕಂಪ್ಯೂಟರ್‌ಗಳು ನಮ್ಮ ದಿನಚರಿಯ ಅನಿವಾರ್ಯ ಭಾಗವಾಗಲಿವೆ. ಮನೆಯಲ್ಲಿ ಕುಳಿತೇ ಕಂಪ್ಯೂಟರ್ ಮೂಲಕ ವೈದ್ಯಕೀಯ ಸವಲತ್ತು, ಕಲಿಯುವ ಶಿಕ್ಷಣಾವಕಾಶ, ಉದ್ಯಮ ನಡೆಸುವ ಸಾಧ್ಯತೆ ಎಲ್ಲವೂ ದೊರೆತು ದೂರದಂತರವನ್ನು ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್‌ಗಳು ತೊಡೆದು ಹಾಕಲಿವೆ. ಸಣ್ಣ ಸಣ್ಣ ಗ್ರಾಮಗಳಿಗೂ ದೊಡ್ಡ ಪಟ್ಟಣಗಳ ಸಂಪರ್ಕ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿ, ಇಡೀ ಭೂಮಿಯೇ ಒಂದು ಪುಟ್ಟ ಗ್ರಾಮವಾಗಿ ಕಾಣಲಿದೆ.

೪.೨ ಸಾಹಿತ್ಯ ಮತ್ತು ವಿಜ್ಞಾನ :

ಸಾಹಿತ್ಯ ಮತ್ತು ವಿಜ್ಞಾನ ಪರಸ್ಪರ ವಿರೋಧಾಭಾಸದ ವಿಭಿನ್ನ ಕ್ಷೇತ್ರಗಳೆಂಬ ಸಾಮಾನ್ಯ ನಂಬಿಕೆಯಿಂದೆ. 'ಸಾಹಿತ್ಯ' ಕಲ್ಪನಾ ಪ್ರಧಾನವಾದದ್ದು. 'ವಿಜ್ಞಾನ' ಪೂರ್ಣವಾಗಿ ವಾಸ್ತವದಲ್ಲಿ ಕಾಲೂರಿದ್ದು, ಸಾಹಿತ್ಯ ಭಾವನಾ ಪ್ರಧಾನವಾಗಿದ್ದು, ಮಾನವನ ಸುಖ-ದುಃಖ, ಆಸೆ-ನಿರಾಶೆಗಳೆಲ್ಲವನ್ನು ಪ್ರತಿಬಿಂಬಿಸುತ್ತಾ ಮಾನವನ ಅಂತರಂಗದ ಪ್ರಪಂಚವನ್ನು ತೆರೆಯುವುದು. ಆದರೆ

ವಿಜ್ಞಾನ ವಾಸ್ತವಿಕ ದತ್ತಾಂಶಗಳೊಡನೆ ಹಾಗೂ ಅಂಕಿ-ಸಂಖ್ಯೆಗಳೊಡನೆ ದುಡಿಯುತ್ತಾ ಹೊರಗಿನ ಪ್ರಪಂಚವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುತ್ತದೆ. ವಿಜ್ಞಾನ ಪ್ರಶ್ನಿಸುತ್ತದೆ. ಪೂರ್ವಗ್ರಹಗಳನ್ನು ಧಿಕ್ಕರಿಸುತ್ತದೆ. ಸಿದ್ದ ಜಾಡಿನ ಆಲೋಚನೆಗಳಲ್ಲಿ ಬಿದ್ದರೆ ವಿಜ್ಞಾನ ಮುಂದುವರೆಯಲಾರದು. ಹೊಸ ಚಿಂತನೆಗಳತ್ತ ದಿಗಂತಗಳತ್ತ, ಸತ್ಯಗಳತ್ತ ಕೈಚಾಚುತ್ತದೆ. ಅದ್ಭುತವಾದ ಕಲ್ಪನಾಶಕ್ತಿ ವಿಜ್ಞಾನಕ್ಕೆ ಬೇಕಾಗಿದೆ. ಗೆಲಿಲಿಯೋನಂಥಾ ವಿಜ್ಞಾನಿಗಳು, ಧರ್ಮ ಮೌಲ್ಯಗಳನ್ನು ಎದುರು ಹಾಕಿಕೊಂಡು ತಮ್ಮ ಚಿಂತನೆಯ ದಾರಿಯಲ್ಲಿ ತಾವೊಬ್ಬರೇ ಏಕಾಂಗಿಯಾಗಿ ನಡೆದು, ತಾವು ಕಂಡ ಸತ್ಯವನ್ನು ದೂರದರ್ಶಕದ ದೂರದೃಷ್ಟಿಗೆ ತಮ್ಮ ದೃಷ್ಟಿ ಕೂಡಿಸಿ ಪ್ರಪಂಚದ ಸತ್ಯಚಿತ್ರವನ್ನು ಎದುರಿಗಿಟ್ಟರು. ಚರ್ಚ್‌ನಲ್ಲಿ ಹಾಕಿದ ಬಹಿಷ್ಕಾರ, ಗೃಹಬಂಧನಕ್ಕೆ ಒಳಗಾದರೂ ತಮ್ಮ ವಿಜ್ಞಾನದ ಜಾಡಿನಲ್ಲೇ ನಡೆದರು.

'ಸಾಹಿತ್ಯ ಮತ್ತು ವಿಜ್ಞಾನ' ಕೃತಿಯೂ ಅಂತರ್‌ಶಿಸ್ತೀಯಾ ನೆಲೆಯ ಅಧ್ಯಯನವನ್ನು ಒಳಗೊಂಡಿದೆ. ಸಾಹಿತ್ಯವನ್ನು ಇತರ ಶಿಸ್ತುಗಳೊಂದಿಗೆ ತುಲನೆ ಮಾಡಿ ಅಧ್ಯಯನ ಮಾಡುವ ಕ್ರಮವಿದೆ. ಇದೇ ಮಾದರಿಯಲ್ಲಿ ಸಾಹಿತ್ಯ ವಿಜ್ಞಾನ ಕೃತಿಯು ಹೊರಹೊಮ್ಮಿದೆ. ಈ ಕೃತಿಯು ಏಳು ಅಧ್ಯಾಯಗಳನ್ನು ಹೊಂದಿದೆ. ಮೇಲ್ನೋಟಕ್ಕೆ ಸಂಪೂರ್ಣವಾಗಿ ವಿಭಿನ್ನ ಪ್ರಕಾರಗಳಾಗಿ ಸಾಹಿತ್ಯ ಮತ್ತು ವಿಜ್ಞಾನ ಕಂಡರೂ ಮೂಲಭೂತವಾಗಿ ಎರಡು ರಂಗಗಳ ನಡುವಿನ ಅಂತರ ಅತ್ಯಲ್ಪವೆಂದೇ ಹೇಳಬೇಕಾಗುತ್ತದೆ. ವಿಜ್ಞಾನ ಪ್ರಶ್ನೆ ಮಾಡುತ್ತದೆ ಹಾಗೂ ಪೂರ್ವಗ್ರಹ ವಿಚಾರಗಳನ್ನು ಧಿಕ್ಕರಿಸುತ್ತದೆ. ಬದುಕಿನ ಸತ್ಯ ಚಿತ್ರಣವನ್ನು ಕೊಡುವ ಪ್ರಯತ್ನ ಸಾಹಿತ್ಯದ್ದು. ಇವೆರಡೂ ಸತ್ಯದ ಅನ್ವೇಷಣೆಯ ಬೇರೆ ಬೇರೆ ಮಾಧ್ಯಮಗಳು ಎಂದು ಲೇಖಕಿ ನೇಮಿಚಂದ್ರ ವಿವರಿಸುತ್ತಾರೆ. ವಿಜ್ಞಾನದ ಚರಿತ್ರೆಯನ್ನು ಹೇಳುತ್ತಾ ನೇಮಿಚಂದ್ರರು ಕ್ರಿಸ್ತಪೂರ್ವ ೬೦೦ರಿಂದ ೪ನೇ ಶತಮಾನದ ಅರಿಸ್ಟಾಟಲ್ ೧೬೬೧ರ ರಾಬರ್ಟ್‌ಬಾಯ್ಲೆ, ೧೭ನೇ ಶತಮಾನದ ನ್ಯೂಟನ್ಸ್ ಚರಿತ್ರೆ ೧೯೦೫ರ ಅಲ್ಬರ್ಟ್ ಐನ್‌ಸ್ಟೈನ್ ಚರಿತ್ರೆ ಹಾಗೂ ಕೊನೆಯದಾಗಿ ೧೯೨೭ರ ಹೆಸೆನ್‌ಬರ್ಗ್ ಚರಿತ್ರೆಯವರೆಗೆ ವಿಸ್ತಾರವಾಗಿ ತಿಳಿಸಿದ್ದಾರೆ.

ಹಿರಿಯ ಸಾಹಿತಿಗಳ ಕೃತಿಗಳ ಅಧ್ಯಯನ ಸಾಹಿತ್ಯ ರಚನೆಗೆ ಪೂರಕವಾಗಬಲ್ಲದಾದರೂ ಅದು ಅನಿವಾರ್ಯವಲ್ಲ, ಸ್ವಂತ ಬದುಕಿನ ಅನುಭವವೊಂದನ್ನೇ ಬಂಡವಾಳವಾಗಿಸಿ ಓದು, ಬರಹ, ಬಾರದವರೂ, ಕಾಗುಣಿತ ಕೂಡ ಸರಿಯಾಗಿ ಕಲಿತಿರದವರು ತಮ್ಮ ಮನೆ ಹೊಸ್ತಿಲನ್ನು ದಾಟದವರೂ ಅಚ್ಚುಕಟ್ಟಾಗಿ ಕತೆ, ಕವನ ಬರೆದ ಉದಾಹರಣೆಗಳಿವೆ. ಆದರೆ ವಿಜ್ಞಾನ ಐಸಾಕ್ ನ್ಯೂಟನ್ ಹೇಳಿದಂತೆ "ಹಿಂದಿನವರ ಹೆಗಲ ಮೇಲೆ ನಿಂತು ಮುಂದಕ್ಕೆ ಬಹು ದೂರಕ್ಕೆ ನೋಡಬಲ್ಲ ಕ್ರಿಯೆ"[೧] ಎಂದು ನೇಮಿಚಂದ್ರರು 'ಎರಡು ಶಿಸ್ತುಗಳ ನಡುವೆ' ಕತೆಯಲ್ಲಿ ತಿಳಿಸಿದ್ದಾರೆ. ಇಂದು ಸಾಹಿತಿಯಿಂದ ಬಹಳಷ್ಟು ನಿರೀಕ್ಷೆಯಿದೆ. ಆತ ತೋರುವ ವಾಸ್ತವ, ಬೊಟ್ಟು ಮಾಡುವ ಹಾದಿ, ಧೋರಣೆ ಎಲ್ಲವು ಸುತ್ತಲ ಸಮಾಜದೊಡನೆ ಸಂಬಂಧವಿರುವಂಥದು. ವೈಜ್ಞಾನಿಕ ಪರಿಸರದಲ್ಲಿ, ಪುರಾಣ ಪುಣ್ಯಕಥೆಗಳಲ್ಲಿ ಭಕ್ತ ಕನಕದಾಸ, ಭಕ್ತಕುಂಬಾರ, ಬೇಡರಕಣ್ಣಪ್ಪನಂತೆ ಕಡೆಯಲ್ಲಿ ದೇವರು ಪ್ರತ್ಯಕ್ಷವಾಗಿ ಎಲ್ಲವು ಸರಿಹೋಗುವ ಕನಸಿನ ಅಂತ್ಯಗಳಲ್ಲಿ ಓದುಗ ತೃಪ್ತನಾಗಲಾರ. ಓದುಗನ ಪ್ರಶ್ನಿಸುವ ಮನೋಭಾವ, ಮುಗ್ಧ ಮನಸ್ಸನ್ನು ದಾಟಿ ನಿಂತ ಶೋಧಕ ಮನೋಭಾವ ಸಾಹಿತ್ಯ ಹಿಡಿದ ಹಾದಿಗೆ ಕಾರಣವಾಗಿದೆ.

ಅನ್ವೇಷಕ ಭಾವನೆ, ಸಾಹಸ ಪ್ರವೃತ್ತಿ ವಿಜ್ಞಾನಿಯಂತೆ ಸಾಹಿತಿಗೂ ಬೇಕು. ಜನ ನಂಬುವುದನ್ನು ಜನ ಬಯಸಿದ್ದನ್ನು ಬರೆದವರು ಬರಹಗಾರರಾಗಿರುತ್ತಾರೆಯೇ ಹೊರತು ಸಾಹಿತಿಯಲ್ಲ. ಸಾಹಿತ್ಯ ವಿಜ್ಞಾನ ಎರಡೂ ಸತ್ಯದ ಅನ್ವೇಷಣೆಯ ಬೇರೆ ಬೇರೆ ಮಾಧ್ಯಮಗಳು, ವಿಜ್ಞಾನ ಬರಹಗಾನಿಗೆ ಬದುಕನ್ನು ಕಾಣುವ ದೃಷ್ಟಿಯನ್ನು ಹೇಳಿಕೊಡಬಲ್ಲದು. ಭಾವುಕ ಮನಸ್ಸಿನೊಡನೆ, ಪ್ರಶ್ನಿಸುವ ಪ್ರವೃತ್ತಿ ಅವನ ಕತೆಗಳಿಗೆ ಬಹಳಷ್ಟು ಹದವನ್ನು ನೀಡಬಲ್ಲದು. ಸಾಹಿತ್ಯಕ್ಕೆ ಮಾತ್ರ ಅಗಾಧ ಕಲ್ಪನೆಯ ಅಗತ್ಯವಿದೆ ಎಂಬುದು ಅಷ್ಟು ಸರಿಯಲ್ಲ. ನಿಜವಾಗಿ ನೋಡಿದರೆ ವಿಜ್ಞಾನಕ್ಕೆ ಆ ಕಲ್ಪನೆಯ ಅವಶ್ಯಕತೆ ಮತ್ತೂ ಹೆಚ್ಚಿನದು. ರೇಡಿಯೋ, ದೂರದರ್ಶನಗಳ ಸಾಧ್ಯವಾಗಿಸಿರುವ ವಿದ್ಯುತ್ ಕಾಂತೀಯ ತರಂಗಗಳನ್ನು ಸ್ಪರ್ಶಿಸಲಾಗದು. ಪಂಚೇಂದ್ರಿಯಗಳ ಅನುಭವಕ್ಕೆ ನಿಲುಕದ ಇವೆಲ್ಲವನ್ನು ವಿಜ್ಞಾನಿ ಕಂಡು ಹಿಡಿದದ್ದೇಗೆ ಎಂದು ಅಚ್ಚರಿಯಾಗದೆ ಇರದು. ಇದಕ್ಕೆ ವೈಜ್ಞಾನಿಕ ವಿಧಾನಬೇಕು, ವಿಜ್ಞಾನದ ಒಂದೊಂದು ಅವಿಷ್ಕಾರವು ಹಿಂದಿನವರು ಗುಡ್ಡೆ ಹಾಕಿದ ಜ್ಞಾನದ ರಾಶಿಯ ಮೇಲೆ ಏರಿ ಮುಂದುವರೆಯುತ್ತದೆ, ಸಾಹಿತ್ಯ ಇದಕ್ಕೆ ತದ್ವಿರುದ್ಧ.

೧.ನೇಮಿಚಂದ್ರ; ಸಾಹಿತ್ಯವಿಜ್ಞಾನ, ಪುಟ-೧೩

ರಾಮಾಯಣ, ಮಹಾಭಾರತದಂತೆಯೇ ಅನೇಕ ಪುರಾಣ, ಇತಿಹಾಸದ ಕತೆಗಳೂ ಇಂದಿನ ಲೇಖಕರ ಬರಹದ ವಸ್ತುವಾಗಿ ಕತೆ ಹಳೆಯದಾದರೂ, ಅದರ ನೋಟ ಹೊಸದಿದ್ದು ಪ್ರಶ್ನಿಸುವ, ಪರಿಶೀಲಿಸುವ, ವೈಜ್ಞಾನಿಕ ವಿಧಾನ ಇಲ್ಲಿಯವರೆಗೂ ತಿಳಿದಿರದ ಕತೆಯ ಮತ್ತಷ್ಟು ಆಯಾಮಗಳನ್ನು, ಮಗ್ಗುಲುಗಳನ್ನು ತೆರೆದು ತೋರಿಸುತ್ತಿದೆ. ಬಿಂದುವಿನಲ್ಲಿ ವಿಜ್ಞಾನ-ಸಾಹಿತ್ಯ ಪರಸ್ಪರ ಒಂದು ಗೂಡಿ ಐಕ್ಯವಾಗುವುದನ್ನು ಕಾಣಬಹುದು. ಸಾಹಿತ್ಯಕ ಆಶಯಗಳೂ ಇಂದು ಕೇವಲ ಮನೋರಂಜನೆಗೆ ಅಳರಸರ ಹಾಡಿ ಹೊಗಳಲು ಪುರಾಣಗಳಂತೆ, ದಂತಕತೆಗಳಂತೆ ಧರ್ಮದ ತಾತ್ವಿಕತೆಯ ವಕಾಲತ್ತು ಮಾಡಲು ಸೀಮಿತವಾದವುಗಳಲ್ಲ. ವಿಜ್ಞಾನ ಮತ್ತು ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆಯನ್ನು ತಳ್ಳಿಹಾಕಲಾಗದು. ಮಾನವನ ಬಹಳಷ್ಟು ಸಂಕಷ್ಟಗಳಿಗೆ ನೆರವಾಗಬಲ್ಲ ಆಶಾವಾದ ಇಂದು ವಿಜ್ಞಾನವನ್ನು ಅತ್ಯಮೂಲ್ಯವಾಗಿಸಿದೆ. ಇಂಥ ಸಾಧ್ಯತೆ ಸಾಹಿತ್ಯಕ್ಕೂ ಬರಬೇಕು. ಬದುಕನ್ನು ಬಿಂಬಿಸುವ ಸಾಹಿತ್ಯ ಬದುಕನ್ನು ಬದಲಿಸುವ ವಿಜ್ಞಾನ ಇವೆರಡೂ ಜೊತೆಯಲ್ಲಿ ಸಾಗುವುದರಲ್ಲಿ ಹೆಚ್ಚು ಅರ್ಥವಿದೆ. ಹಾಗೂ ಮಾನವ ಜನಾಂಗದ ಸಂರಕ್ಷಣೆಯೂ ಆಗಿದೆ.

ಸಾಹಿತ್ಯದ ಮೇಲೆ ವಿಜ್ಞಾನದ ಪ್ರಭಾವ ಎಂಬ ಅಧ್ಯಾಯದಲ್ಲಿ ವಿಜ್ಞಾನದ ಪ್ರಭಾವಕ್ಕೆ ಒಳಗಾಗಿರುವ ಕೃತಿಗಳನ್ನು ಚರ್ಚಿಸುತ್ತಾ, ವಿಜ್ಞಾನವು ಮಾನವನ ಬದುಕಿನ ರೀತಿ ನೀತಿಯನ್ನೇ ಬದಲಿಸಿತು ಹಾಗೂ ಬಹುಮುಖ್ಯವಾಗಿ ರೂಢಿಗತ ಪದ್ಧತಿಗಳನ್ನು ಮೊದಲ ಸಲ ಪ್ರಶ್ನಿಸಿತು. ಈ ಶತಮಾನದ ಆರಂಭದಲ್ಲೇ ಜಾತೀಯತೆ, ಬಾಲ್ಯವಿವಾಹ ಪದ್ಧತಿಗಳಿಗೆ ತೀವ್ರವಾಗಿ ಪ್ರತಿಕ್ರಿಯಿಸಿದ ಕಾದಂಬರಿಗಳು ಹೊರಬಂದವು ಎಂದು ನೇಮಿಚಂದ್ರರು ವಿವರಿಸುತ್ತಾರೆ. ವೈಜ್ಞಾನಿಕತೆಗಳು ಎನ್ನುವ ಅಧ್ಯಾಯದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ನೇರವಾಗಿ ಕಾಣಬಹುದು. ಲೇಖಕಿ ಹಲವು ವೈಜ್ಞಾನಿಕತೆಗಳನ್ನು ಉದಾಹರಣೆ ಸಹಿತ ಚರ್ಚಿಸಿದ್ದಾರೆ.

ವಿಜ್ಞಾನದ ಬಗೆಗೆ ಮತ್ತೊಂದು ತಪ್ಪುಗ್ರಹಿಕೆ ಇದೆ. ವಿಜ್ಞಾನವೆಂದರೆ ಕೇವಲ ಪ್ರಯೋಗಲಾಯದಲ್ಲಿ ನಡೆಸುವ ಪ್ರಯೋಗಗಳನ್ನು ಕುರಿತದ್ದು ಎಂಬ ಭಾವನೆ ಅನೇಕರಲ್ಲಿದೆ. ಆದರೆ ವಿಜ್ಞಾನ ಅದನ್ನು ಒಳಗೊಂಡು ಅದನ್ನು ಮೀರಿದ್ದಾಗಿದೆ. ಅದು ಇಡೀ ಬದುಕನ್ನು ಆವರಿಸಿಕೊಂಡಿರುವ ಮತ್ತು ಪ್ರಭಾವಿಸುವ ಒಂದು ಶಿಸ್ತು. ಎ.ವಿ.ಗೋವಿಂದರಾವ್ ತಮ್ಮ ಲೇಖನ ಏನು? ಏಕೆ? ಹೇಗೆ? ಎಂಬುದರಲ್ಲಿ "ಸರ್ವಸಮ್ಮತ ನಿರ್ದಿಷ್ಟ ಉತ್ತರ ಕೊಡುವುದು ಬಲು ಸುಲಭವೇನಲ್ಲ"[೧] ಎಂಬ ಅಭಿಪ್ರಾಯ ಪಟ್ಟಿದ್ದಾರೆ. ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳಸುವುದು,

---

೧.ಎ.ವಿ.ಗೋವಿಂದರಾವ್; ಜನಪ್ರಿಯ ವಿಜ್ಞಾನ, ಏನು? ಏಕೆ? ಹೇಗೆ? ಕ.ರಾ.ವಿ.ಪ, ಪುಟ-೯೧೦

ವಿಜ್ಞಾನ ವಿಷಯವನ್ನು ಸರಳ ಭಾಷೆಯಲ್ಲಿ ತಜ್ಞರಿಗೆ ವಿವರಿಸುವುದು, ಇಂದಿನ ವ್ಯಯಕ್ತಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಜೀವನ ನಿರ್ವಹಣೆಗೆ ಅತ್ಯಗತ್ಯವಾಗಿ ತಿಳಿದಿರಲೇಬೇಕಾದ ವಿಜ್ಞಾನ.

ವಿಜ್ಞಾನ ಸಾಹಿತ್ಯವೆಂದರೇ ಜನ ಸಾಮಾನ್ಯರು ಅರ್ಥ ಮಾಡಿಕೊಳ್ಳುವಷ್ಟು ಸರಳಗೊಂಡ ಮತ್ತು ಅವರು ಮೆಚ್ಚುವಂತಿರುವ ಅಭಿವ್ಯಕ್ತಿಯೇ ಆಗಿದೆ. ಅಂದರೆ ಮೃದುವಾದದ್ದು ಮತ್ತು ಮಧುರವಾದುದು. ವಿಜ್ಞಾನ ಸಾಹಿತ್ಯದ ನಡುವೆ ಯಾವುದೇ ಭೇದವನ್ನು ಕಾಣಲಾಗದು ಎನ್ನಬಹುದು. ವಿಜ್ಞಾನದ ಅರಿವು ಮತ್ತು ವೈಜ್ಞಾನಿಕ ಚಿಂತನೆಗಳ ನಡುವೆ ವ್ಯತ್ಯಾಸ ಗಮನಿಸಬೇಕು. ಅವು ಒಂದಕ್ಕೊಂದು ಪೂರಕ ಎಂದು ತಿಳಿಯಬಹುದು. ವೈಜ್ಞಾನಿಕ ಚಿಂತನಾಕ್ರಮ ಹಾಗೂ ವಿಜ್ಞಾನ ವಸ್ತು ವಿಷಯಗಳ ಬಗೆಗಿನ ಅರಿವು ಸಮಗ್ರ ವಿಜ್ಞಾನವು ಈ ಅಗತ್ಯವನ್ನು ಪೂರೈಸುವುದೇ ಆಗಿದೆ. ಜನರಿಗೆ ವಿಜ್ಞಾನದ ಸಾಹಿತ್ಯದ ಗುರಿಯನ್ನು ಮುಟ್ಟಿಸುವುದು, ಜನಸಾಮಾನ್ಯರನ್ನು ತಲುಪಬಲ್ಲ ರೀತಿಯಲ್ಲಿ ವಿಜ್ಞಾನ ಸಾಹಿತ್ಯವನ್ನು ಮೃದು ಮಧುರಗೊಳಿಸುವುದು ಸುಲಭಗ್ರಾಹ್ಯವಾಗುವಂತೆ ಮತ್ತು ರುಚಿಸುವಂತೆ ಮಾಡುವುದು.

ವಿಜ್ಞಾನದ ಅರಿವಿನಷ್ಟೇ ಮುಖ್ಯವಾದುದು ವೈಜ್ಞಾನಿಕ ಚಿಂತನಾಕ್ರಮ, ದಿನನಿತ್ಯ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ತುಳಿಯಬೇಕಾದ ಹಾದಿಯನ್ನು ತೋರಿಸುತ್ತದೆ. 'ವೈಜ್ಞಾನಿಕ ಮನೋಭಾವದ ಪ್ರಸರಣ ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಸರಣಕ್ಕಿಂತ ಹೆಚ್ಚಿನದು'[೧] ಎಂದು ನೆಹರು ಕೇಂದ್ರದ ವೈಜ್ಞಾನಿಕ ಮನೋಭಾವ ನಿರೂಪಣೆ ಹೇಳುತ್ತದೆ. ವೈಜ್ಞಾನಿಕ ಚಿಂತನ ಕ್ರಮದ ಮಹತ್ವವನ್ನು ನಮ್ಮ ಅನೇಕ ಕವಿ, ಸಾಹಿತಿಗಳು ಪ್ರಸ್ತಾಪಿಸಿದ್ದಾರೆ. ಅವರು ಅದನ್ನು ವೈಚಾರಿಕತೆ ವಿಚಾರವನ್ನು ಆಧರಿಸಿದ ಚಿಂತನೆ ಎಂಬ ಅರ್ಥದಲ್ಲಿದೆ ಎಂದು ಹೇಳಿದ್ದಾರೆ. ಮತ್ತು ತಮ್ಮ ಬರಹಗಳಲ್ಲಿ ಜನರು ವೈಚಾರಿಕತೆಯನ್ನು ಬಳಸಿಕೊಳ್ಳಬೇಕೆಂದು ಕರೆ ನೀಡಿದ್ದಾರೆ. ವೈಚಾರಿಕತೆ ಮತ್ತು ವಿಜ್ಞಾನದ ಪರವಾಗಿ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. 'ಓ ಬನ್ನಿ ಸೋದರರೆ, ಬೇಗ ಬನ್ನಿ' ಎಂಬ ಕವಿತೆಯಲ್ಲಿ ಕುವೆಂಪು 'ಮೌಢ್ಯತೆಯ ಮಾರಿಯನ್ನು ಹೊರದೂಡಲ್ಕೆ ತನ್ನಿ ವಿಜ್ಞಾನ ದೀವಿಗೆಯ ಹಿಡಿಯಬನ್ನಿ'[೨]

೧.ಎಂ.ಎ.ಸೇತುರಾವ್ (ಅನು); ವೈಜ್ಞಾನಿಕ ಮನೋಭಾವ, ವಿವಿಧ ಲೇಖಕರು, ಪುಟ-೧

೨. ಕುವೆಂಪು; ಕೋಗಿಲೆ ಮತ್ತು ಸೋವಿಯಟ್ ರಷ್ಯ, ಪುಟ-೨೩

‘ಕತೆ, ಕಾದಂಬರಿ, ಲಲಿತಪ್ರಬಂಧ ಲೇಖಕರ ಜವಾಬುದಾರಿಗಿಂತ ಹೆಚ್ಚಿನದು ವಿಜ್ಞಾನ ವಾಙ್ಮಯ ಲೇಖಕರದ್ದು’[೧] ವಿಜ್ಞಾನ ಸಾಹಿತ್ಯದಲ್ಲಿ ಭಾಷೆ ಮತ್ತು ಗಹನತೆಗೆ ಸಂಬಂಧಿಸಿದ ಕಾಠಿಣ್ಯ ಇದರಲ್ಲಿ ಅಷ್ಟಾಗಿ ಕಡಿಮೆ ಇರುವುದಿಲ್ಲ. ಸಾಹಿತ್ಯಕ ಸಾಂದ್ರತೆ ಹೆಚ್ಚಾಗಿರುತ್ತದೆ. ಸ್ವಲ್ಪ ಹೆಚ್ಚು ಓದಿಕೊಂಡವರಿಗೆ ಸಾಹಿತ್ಯದ ಪರಿಚಯ ಉಳ್ಳವರಿಗೆ ಇದು ಹೆಚ್ಚು ಪ್ರಿಯವಾಗುತ್ತದೆ. ಎರಡರಲ್ಲೂ ಬೀಜರೂಪದಲ್ಲಿ ವಿಜ್ಞಾನ ಸಾರವಿದೆ. ವಿಜ್ಞಾನ ಸತ್ಯವಿದೆ. ಎರಡರಲ್ಲೂ ತಿರುಳಿನ ರೂಪದಲ್ಲಿ ಸಾಹಿತ್ಯದ ರುಚಿ ರಸವಿದೆ ಎನ್ನಬಹುದು. ವಿಜ್ಞಾನ ಸಾಹಿತ್ಯ ಓದುವುದರಿಂದ ಆನಂದ ಸಿಗಬೇಕು, ಅರಿವು ಮೂಡಬೇಕು, ಜ್ಞಾನವೃದ್ಧಿಯಾಗಬೇಕು. ಹಾಗಾಗಿ ವಿಜ್ಞಾನ ಸಾಹಿತ್ಯ ಅನಿವಾರ್ಯವಾಗಿ ಬೇಕಾಗಿದೆ.

ವಿಜ್ಞಾನ ಎಲ್ಲಿ, ಸಾಹಿತ್ಯ ಎಲ್ಲಿ ಒಂದಕ್ಕೊಂದು ಸಂಬಂಧವೇ ಇಲ್ಲ ಎಂದು ತಿಳಿದವರೇ ಹೆಚ್ಚು. ಇದಕ್ಕೆ ಕಾರಣ ನಮ್ಮ ಶಿಕ್ಷಣ ಕಾರಣವಾಗಿದೆ. ಸಾಹಿತ್ಯದಲ್ಲಿ ವಿಜ್ಞಾನಾಂಶ, ವಿಜ್ಞಾನದಲ್ಲಿ ಸಾಹಿತ್ಯಾಂಶ ಎಂಬ ಧೋರಣೆ ಕಾಣಬಹುದು. ಭಟ್ಟತೌತನ ಪ್ರಕಾರ ‘ವಾಗ್ದೇವಿಗೆ ಮಾರ್ಗಗಳು ಎರಡು. ಒಂದು ಶಾಸ್ತ್ರ, ಇನ್ನೊಂದು ಕಾವ್ಯ. ಇವುಗಳಲ್ಲಿ ಮೊದಲನೆಯದು ಪ್ರಜ್ಞೆಯಿಂದ ಜನಿಸಿದ್ದು, ಕೊನೆಯದು ಪ್ರತಿಭೆಯಿಂದ ಉದ್ಭವಿಸಿದ್ದು’[೨] ವಿಜ್ಞಾನದ ರಾಜನೆಂದು ಪರಿಗಣಿತವಾಗಿರುವ ಗಣಿತವನ್ನು ಕನ್ನಡಿಗರು ಕಡೆಗಣಿಸಿಲ್ಲ. ಅದಕ್ಕೆ ಸಾಕ್ಷಿ ರಾಜಾದಿತ್ಯ. ವ್ಯವಹಾರ ಗಣಿತ, ಕ್ಷೇತ್ರಗಣಿತ ಮೊದಲಾದ ಗಣಿತ ಗ್ರಂಥಗಳನ್ನು ರಚಿಸಿದ್ದಾನೆ. ಇವು ೧೨ ಶತಮಾನದಲ್ಲಿ ಕರ್ನಾಟಕದಲ್ಲಿದ್ದ ಗಣಿತ ಜ್ಞಾನದ ಸ್ವರೂಪವನ್ನು ತಿಳಿಸುತ್ತದೆ.

ಹನ್ನೆರಡನೇ ಶತಮಾನದಲ್ಲಿದ್ದ ಎರಡನೆ ಭಾಸ್ಕರಾಚಾರ್ಯನ ‘ಲೀಲಾವತಿ’ ಗ್ರಂಥವಂತೂ ಬಹಳ ರಮ್ಯವೂ, ಕಾವ್ಯಮಯವೂ ಆದ ಉದಾಹರಣೆಗಳನ್ನು ಒಳಗೊಂಡಿದೆ. ಇದರಲ್ಲಿ ಅಂಕಗಣಿತ, ರೇಖಾಗಣಿತ, ಬೀಜಾಗಣಿತ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕಾಣಬಹುದು. ಉದಾಹರಣೆಯಾಗಿ ನೋಡಿದರೆ ‘ಅರ್ಜುನನು ಮಹಾಭಾರತದ ಯುದ್ಧದಲ್ಲಿ ಕರ್ಣನ ಸಂಹಾರಕ್ಕೋಸ್ಕರ ಕೆಲವು ಬಾಣಗಳನ್ನು ಧನಸ್ಸಿನಲ್ಲಿಡಲು ತೆಗೆದು, ಅದರ ಅರ್ಧದಿಂದ ಕರ್ಣನ ಬಾಣ ಸಮೂಹವನ್ನು ನಿವಾರಿಸಿ ವರ್ಗಮೂಲದ ನಾಲ್ಕರಷ್ಟರಿಂದ ಕುದುರೆಗಳನ್ನು, ಆರು ಬಾಣಗಳಿಂದ ಶಲ್ಯನನ್ನು ಮೂರರಿಂದ (ಕರ್ಣನ) ಛತ್ರ, ಬಾವುಟ ಮತ್ತು ಬಿಲ್ಲುಗಳನ್ನು ಮುರಿದು

೧.ವಿಜ್ಞಾನ ಬರವಣಿಗೆಯ ಸಮಸ್ಯೆಗಳು, ಪುಟ-೩೨
ತೀ.ನಂ.ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಪುಟ-೬೪

ಉಳಿದ ಒಂದು ಬಾಣದಿಂದ (ಕರ್ಣನ) ತಲೆಯನ್ನು ಕತ್ತರಿಸಿದರೆ (ಅರ್ಜುನನು) ತೆಗೆದ ಬಾಣಗಳ ಸಂಖ್ಯೆ ಎಷ್ಟು'[೧]

ಲೀಲಾವತಿ ಗಣಿತ ಮತ್ತು ಶ್ರೀನಿವಾಸ ರಾಮಾನುಜಮ್ ಎಂಬ ತನ್ನ ಮತ್ತೊಂದು ಕಿರುಹೊತ್ತಿಗೆಯಲ್ಲಿ ಬಿ.ಸೀತಾರಾಮಶಾಸ್ತ್ರಿಗಳು ಲೀಲಾವತಿಯ ಬಗ್ಗೆ ಹೀಗೆ ಹೇಳುತ್ತಾರೆ. 'ಲೀಲಾವತಿಯು ನಮ್ಮನ್ನು ಯಾವುದೋ ಒಂದು ಮನಮೋಹಕವಾದ ನೂತನ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ. ಹೂವಿನ ತೋಟಗಳಲ್ಲಿ ಝೇಂಕರಿಸುವ ಭೃಂಗ ಸಮೂಹಗಳು, ನಲಿದು ನರ್ತಿಸುವ ನವಿಲುಗಳು, ಮರಗಳಿಂದ ಇಳಿದು ಬರುತ್ತಿರುವ ಅಥವಾ ಮರಗಳ ಮೇಲೆ ಹಾರುತ್ತಿರುವ ಕಪಿಗಳು, ವಿವಿಧ ಲೀಲೆಯಲ್ಲಿರುವ ಆನೆಗಳ ಗುಂಪು, ಚಕ್ರ ಚಾಕುಲಿತವಾದ ಸರೋವರಗಳು, ಸ್ಥಲ ಪದ್ಮೀನೀವನಗಳು, ಜಲ ಕೇಲಿ ಕಲಹದಲ್ಲಿರುವ ಅಥವಾ ವರ್ಷಾ ಕಾಲದಲ್ಲಿ ಮಾನನಾಭಿಮುಖವಾಗಿರುವ ಕಲಹಂಸಗಳು, ರಾಜಮಾರ್ಗಗಳು, ತೀರ್ಥಯಾತ್ರಿಕರು, ರಾಜ, ಸೈನ್ಯಗಳು, ಯುದ್ಧಭೂಮಿಗಳು, ಮಾಣಿಕ್ಯ, ಇಂದ್ರನೀಲ ಮುತ್ತು ಫಲಾದಿರತ್ನ ವ್ಯಾಪಾರಿಗಳು, ಕವಿಗಳು, ದೇವಪೂಜಾರಾಧಕರು, ತ್ಯಾಗಿಗಳು, ರಾಜಹರ್ಮ್ಯಗಳು, ನಂದಾದೀಪಗಳು, ಕರ್ಪೂರಾದಿ ಪರಿಮಳ ದ್ರವ್ಯಗಳು ಈ ಪ್ರಪಂಚದಲ್ಲಿ ಮರೆತು ಹೋಗುತ್ತೇನೆ'[೨]

'ವಿಜ್ಞಾನ ಸಾಹಿತ್ಯದ ಸಂಶ್ಲೇಷಣೆಗೆ ವಿಜ್ಞಾನ ಮತ್ತು ಸಾಹಿತ್ಯದ ಅರಿವು ಅಗತ್ಯ. ವಿಜ್ಞಾನದ ಪ್ರಖರತೆ ಸಾಹಿತ್ಯದ ಸೌಮ್ಯತೆ ಎರಡರ ಮಿಲನದಿಂದ ರಸಗಟ್ಟಿ ತಯಾರಾಗಬೇಕು. ಸೌಂದರ್ಯವನ್ನು ಸವಿಯಬಹುದು, ಅನುಭವಿಸಬಹುದು, ಆದರೆ ಅದನ್ನು ಸೂತ್ರರೂಪದಲ್ಲಿ ಹೇಳಲಾಗುವುದಿಲ್ಲ"[೩] ಎನ್ನುತ್ತಾರೆ ಜಿ.ಎಸ್.ಶಿವರುದ್ರಪ್ಪ. ಸತ್ಯವೇ ವಿಜ್ಞಾನದ ಆತ್ಮ, ಕಾವ್ಯಕ್ಕೆ ರಸವಿದ್ದಂತೆ. ಸಾಹಿತಿ ತನ್ನ ರಸಾವೇಶದಲ್ಲಿ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗುವಂತೆ ವಿಜ್ಞಾನಿ ತನ್ನ ಅನವೇಷಣಾವೇಶದಲ್ಲಿ ಸತ್ಯಶೋಧದಲ್ಲಿ ತೊಡಗುತ್ತಾನೆ. ಇವು ಬೀರುವ ಪ್ರಭಾವದಲ್ಲಿ ಏನಂಥ ವ್ಯತ್ಯಾಸ ಕಾಣಸಿಗುವುದಿಲ್ಲ. ಅವರವರು ಕೈಗೊಂಡ ಕಾರ್ಯದಲ್ಲಿ ತನ್ಮಯರಾಗುವಂತೆ, ಮರೆಯುವಂತೆ ಮಾಡುತ್ತದೆ.

೧.ತೀ.ನಂ.ಶ್ರೀಕಂಠಯ್ಯ; ಭಾರತೀಯ ಕಾವ್ಯಮೀಮಾಂಸೆ, ಪುಟ-೬೪

೨. ಬಿ.ಸೀತಾರಾಮಶಾಸ್ತ್ರಿ; ಲೀಲಾವತಿ ಗಣಿತ ಮತ್ತು ಶ್ರೀನಿವಾಸ ರಾಮಾನುಜನ್, ಪುಟ-೨೭

೩.ಜಿ.ಎಸ್.ಶಿವರುದ್ರಪ್ಪ; ಸೌಂದರ್ಯ ಸಮೀಕ್ಷೆ, ಪುಟ-೬೧

ಮೊದಲೇ ಹೇಳಿದಂತೆ ರಸವೇ ಕಾವ್ಯದ ಆತ್ಮ ಎನ್ನುವಂತೆ, ಸತ್ಯವೇ ವಿಜ್ಞಾನದ ಆತ್ಮ ಮತ್ತು ಸತ್ಯವೇ ಸೌಂದರ್ಯ ರಸ, ಸತ್ಯ ಮತ್ತು ಸೌಂದರ್ಯಗಳ ಸಂಯೋಗದಿಂದ ವಿಜ್ಞಾನ ಸಾಹಿತ್ಯ ಸೃಷ್ಟಿಯಾಗಬೇಕು ಎನ್ನಬಹುದು. ವಿಸ್ಮಯದಿಂದ ರಸಾನುಭವಗೊಂಡು ಅಲ್ಲಿಯೇ ನಿಲ್ಲದೆ ಅರಿವನ್ನು ಪಡೆದಾಗ ವೃತ್ತ ಪೂರ್ಣಗೊಳ್ಳುತ್ತದೆ. ವಿಜ್ಞಾನ ಸಾಹಿತ್ಯ ಸಾರ್ಥಕವಾಗುತ್ತದೆ. ಅರಿವಾಹ್ಲಾದ ಮೂಡುತ್ತದೆ. ಸೌಂದರ್ಯಾನುಭವಕ್ಕೆ ಕಲಾದೃಷ್ಟಿ ಬೇಕು, ಕಲಾದೃಷ್ಟಿ ನಿಸ್ಸಂಗ ಪರಿಭಾವನೆ ಮತ್ತು ಮಾನಸಿಕ ದೂರ ಪರಿಕಲ್ಪನೆಗಳನ್ನು ಮೈಗೂಡಿಸಿಕೊಂಡಿದೆ. ವಿಜ್ಞಾನ ಸಾಹಿತ್ಯದ ದೃಷ್ಟಿಯಿಂದ ಎರಡು ರೀತಿಯ ಪರಿಭಾವನೆಯನ್ನು ಪರಿಗಣಿಸುವುದು ಅಗತ್ಯವೆಂದು ನಾನು ಭಾವಿಸುತ್ತೇನೆ.

ಕಣ್ಣೆದುರಿನ ಹೂವನ್ನು ಕಾವ್ಯದೃಷ್ಟಿಯಿಂದ ವಿವರಿಸುವಾಗ ಕಣ್ಣೆದುರಿನ ಹೂವಷ್ಟೇ ಮುಖ್ಯವಾಗುತ್ತದೆ. ಅಂದರೆ ಹೂವುಗಳು ಸಾವಿರಾರು ಇದ್ದರೂ ನಮ್ಮ ವಿವರಣೆ ಸಾಧಾರಣೀಕರಿಸಿಕೊಂಡಿರುವುದಿಲ್ಲ. ಸೌಂದರ್ಯಾನುಭವಕ್ಕೆ ಇದು ಮುಖ್ಯ. ಹಾಗೆಯೇ ವಿಜ್ಞಾನ ಸಾಹಿತ್ಯದಲ್ಲೂ ವಿಜ್ಞಾನ ವಸ್ತುವೊಂದನ್ನು ವಿವರಿಸುವಾಗ (ಉದಾಹರಣೆ; ದೂರದರ್ಶಕ)ಆ ವಸ್ತುವನ್ನೋ, ಸಾಧನವನ್ನೋ ಕಣ್ಣೆದುರಿಗೆ ಇರಿಸಿಕೊಂಡು ಜನಪ್ರಿಯ ವಿಜ್ಞಾನ ಸಾಹಿತಿ ತನ್ನ ದೃಷ್ಟಿಗೆ ಅದು ಕಂಡದ್ದು ಹೇಗೆ ವಸ್ತು ತೀರ ಅನನ್ಯವಾಗೇ ಉಳಿದುಬಿಡುತ್ತದೆ. ಪ್ರೀತಿಯಿಲ್ಲದ ಸೌಂದರ್ಯ ಅನುಭವವಿಲ್ಲ.

ಸೌಂದರ್ಯಾನುಭವದ ವಿಷಯಕ್ಕೆ ಬಂದರೇ ಇಷ್ಟವಾದುದು ಪ್ರಿಯವಾಗುತ್ತದೆ, ಪ್ರಿಯವಾದುದು ಸುಖಾನುಭವ ನೀಡುತ್ತದೆ. ಸುಖಾನುಭ ಸುಂದರಾನುಭವ ನೀಡುತ್ತದೆ. ಅಂದರೇ ತಾರ್ಕಿಕವಾಗಿ ಇಂದಿನ ಆಧುನಿಕ ಮನುಷ್ಯ ವಿಜ್ಞಾನ ವಿಷಯಗಳಲ್ಲೂ ಸೌಂದರ್ಯವನ್ನು ಕಾಣುವ ಮನಸ್ಥಿತಿಯನ್ನು ರೂಢಿಸಿಕೊಂಡಿರಬೆಕು. ಏಕೆಂದರೆ ಇಂದಿನ ಮನುಷ್ಯನಿಗೆ ಆಧುನಿಕ ವಿಜ್ಞಾನ ವಸ್ತುಗಳೇ ಹೆಚ್ಚು ಹೆಚ್ಚಾಗಿ ಬೇಕಾಗಿವೆ. ಆದರೆ ಆತನಲ್ಲಿ ಸೌಂದರ್ಯಾನುಭ ಉಂಟಾಗುತ್ತಿರುವುದು ಅನುಮಾನ ಇದಕ್ಕೆ ಕಾರಣ ಆ ವಸ್ತುಗಳು ಬೇಕಾಗಿವೆ ಅಷ್ಟೇ. ನಿಸ್ಸಂಗವಾಗಿ ಪರಿಭಾವಿಸುವವರಿಗೆ ಮಾತ್ರ ಸೌಂದರ್ಯಾನುಭವವಾಗುತ್ತದೆ. ಈ ಫಜೀತಿ ಜನ ಸಾಮಾನ್ಯರಿಗೆ ಆಗಿಲ್ಲ. ಅದನ್ನು ವಿಜ್ಞಾನ ಸಾಹಿತ್ಯ ಸಾಧ್ಯವಾಗಿಸಬೇಕಾಗಿದೆ.

ಯಾವುದೇ ಸಾಹಿತ್ಯದ ಬೆಳವಣಿಗೆಗೆ ಮೂವರನ್ನು ಅವಲಂಭಿಸಿದೆ. ಬರೆಯುವವರು, ಪ್ರಕಟಿಸುವವರು, ಓದುವವರು. ಈ ಮೂವರು ಕ್ರಿಯಾಶೀಲವಾಗಿದ್ದಲ್ಲಿ ಮಾತ್ರ ಆ ಸಾಹಿತ್ಯ, ಆ ಭಾಷೆ ಕೂಡ ಬೆಳೆಯುತ್ತದೆ. ಈ ಮೂವರು ಒಬ್ಬರನ್ನೊಬ್ಬರು ದೂಷಿಸುತ್ತಾ ವಿಜ್ಞಾನದ ಸಾಹಿತ್ಯದ

ಬೆಳವಣಿಗೆಯನ್ನು ಮಂದಗೊಳಿಸಿದ್ದಾರೆ. ರಾಷ್ಟ್ರಕವಿ ಕುವೆಂಪು ಬಹಳ ಹಿಂದೆಯೇ 'ಕನ್ನಡ ವೈಜ್ಞಾನಿಕ ಭಾಷೆಯಾಗಬಲ್ಲದು' ಎಂದು ಹೇಳಿದ್ದಾರೆ. ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ಏನೂ ಕೆಲಸ ನಡೆದಿಲ್ಲದಿರುವುದಕ್ಕೆ ಕಾರಣ ಈ ಕ್ಷೇತ್ರವನ್ನು ಗಂಭೀರವಾಗಿ ತೆಗೆದುಕೊಂಡು ಅದರ ಮೀಮಾಂಸೆ ಮಾಡದಿರುವುದೇ ಆಗಿದೆ.

ವಿಜ್ಞಾನಿ ಎಂದರೆ ಡಿಗ್ರಿಗಳ ಸಾಲನ್ನೋ, ಕಂಪ್ಯೂಟರ್ ಜ್ಞಾನವನ್ನೋ ಅರಗಿಸಿಕೊಂಡವನೆಂದಲ್ಲ. ಆದರೆ ವಿಜ್ಞಾನವನ್ನು ಪಠ್ಯವಾಗಿ ಓದಿದವರೆಲ್ಲ ವಿಜ್ಞಾನ ರಂಗದಲ್ಲಿ ದುಡಿವವರೆಲ್ಲ ವೈಜ್ಞಾನಿಕ ಮನೋಭಾವದವರಲ್ಲ ಎಂಬುದು ವಿಷಾಧನೀಯವಾದರೂ ಅದೇ ವಾಸ್ತವ ಆಗಿದೆ. ಗ್ರಹಣದ ಬಗ್ಗೆ ತರಗತಿಯಲ್ಲಿ ನೆರಳು-ಬೆಳಕಿನಾಟವೆಂದು ವಿವರಿಸುವ ಭೌತಶಾಸ್ತ್ರದ ಪ್ರಾಧ್ಯಾಪಕ ಮನೆಗೆ ಹೋಗಿ ಶಾಂತಿ, ಹೋಮ, ಹವನ ಮಾಡಿ ಸ್ನಾನ ಮಾಡುವುದಾದರೆ ಅವರನ್ನು ವಿಜ್ಞಾನಿ ಎನ್ನಬಹುದೇ? ಆದರೆ ನಿಜವಾದ ಪೂರ್ವಗ್ರಹಗಳನ್ನು, ಅತೀತ ಶಕ್ತಿಗಳನ್ನು, ಆಧಾರವಿಲ್ಲದ ಅಂತೆ-ಕಂತೆಗಳನ್ನು ನಂಬುವವನಲ್ಲ. ಹಾಗೆಯೇ ರಾಶಿ ಹಾಕಿದ ಮಾಹಿತಿಗಳಿಗೆ, ಅತಿ ಸೂಕ್ಷ್ಮ ಸತ್ಯಗಳಿಗೆ, ಸಾಮಾನ್ಯರೂ ಕುರುಡಾದ ವಿವರಗಳಿಗೆ ವಿಜ್ಞಾನಿ ಕಣ್ಣು ಬಿಡುತ್ತಾನೆ. ಅಂಥಹ ಆ ಕಾಣುವ ಕಣ್ಣು ಸಾಹಿತಿಯದೂ ಕೂಡಾ. ಶಿವರಾಮಕಾರಂತ, ಪೂರ್ಣಚಂದ್ರ ತೇಜಸ್ವಿಯವರಂಥ ಸಾಹಿತಿಗಳು ಅಪ್ಪಟ ವಿಜ್ಞಾನಿಗಳಾಗಿರುವುದು ಆಕಸ್ಮಿಕವಲ್ಲ.

ಮೇರಿಕ್ಯೂರಿ ಕವನಗಳನ್ನು ಬರೆದದ್ದು, ಪ್ರಸಿದ್ಧ ಗಣಿತಜ್ಞ ಓಮರ್ ಖಯ್ಯಾಮ್ ರೂಬಾಯ್ಯತ್ ಪದ್ಯಗಳನ್ನು ಬರೆದದ್ದು. ಪ್ರೆಂಚ್ ಭಾಷೆಯ ಲೇಖಕ ವಾಲ್‌ಟೇರ್ ನ್ಯೂಟನ್ನನ ಸಿದ್ಧಾಂತಗಳ ಪ್ರಸಾರದಲ್ಲಿ ಪ್ರಮುಖ ಪಾತ್ರವಹಿಸಿದ್ದು, ನೊಬೆಲ್ ಪಾರಿತೋಷಕ ಪಡೆದ ಭೌತಶಾಸ್ತ್ರಜ್ಞ ರಿಚರ್ಡ್ ಪೈಮಾನ್‌ರ ಪುಸ್ತಕಗಳು ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅತ್ಯಧಿಕ ಮಾರಾಟದ ಪುಸ್ತಕಗಳಾದದ್ದು. ಅಂತರರಾಷ್ಟ್ರೀಯ ಗೌರವಕ್ಕೆ ಪಾತ್ರರಾದ ಸೋಂಕು ರೋಗದ ರಕ್ಷಾಶಾಸ್ತ್ರಜ್ಞ ಇಮ್ಯುನೋಲಜಿಸ್ಟ್ ಮೀರೋಸ್ಲಾವ್ ಹೋಲಬ್, ಯೂರೋಪಿನ ಪ್ರಸಿದ್ಧ ಕವಿಯಾಗಿರುವುದು ಕಾಕತಾಳೀಯವಲ್ಲ, ವಿಜ್ಞಾನಿಗಳಿಗೂ ಭಾಷೆಯ ಮೇಲಿನ ಪ್ರಭುತ್ವದ ಅಗತ್ಯವಿದೆ. ಕ್ಲಿಷ್ಟ ವೈಜ್ಞಾನಿಕ ಸತ್ಯಗಳನ್ನು ಸರಳವಾಗಿ ತೆರೆದಿಡಲು, ಸಂಪರ್ಕಿಸಲು ಪದಗಳನ್ನು ಬಳಸುವ ಕಲೆಯ ಅಗತ್ಯವಿರುತ್ತದೆ. ವಿಜ್ಞಾನ ಮತ್ತು ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆಯನ್ನು ತಳ್ಳಿಹಾಕಲಾಗದು. ಮಾನವನ ಬಹಳಷ್ಟು ಸಂಕಷ್ಟಗಳಿಗೆ ನೆರವಾಗಬಲ್ಲ ಆಶಾವಾದ, ಇಂದು ವಿಜ್ಞಾನವನ್ನು ಅತ್ಯಮೂಲ್ಯವಾಗಿಸಿವೆ. ಇಂಥ ಸಾಧ್ಯತೆ ಸಾಹಿತ್ಯಕ್ಕೂ ಬರಬೇಕು.

ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು

ಸಂಶೋಧನೆಗಳನ್ನು ಕೈಗೊಂಡ ನೊಬೆಲ್ ಪಾರಿತೋಷಕಗಳನ್ನು ಗಳಿಸಿದ ಮಹಿಳಾ ವಿಜ್ಞಾನಿಗಳ ಬದುಕಿನ ಸಾಧನೆಗಳನ್ನು ಲೇಖಕಿ ನೇಮಿಚಂದ್ರ ಇಲ್ಲಿ ದಾಖಲಿಸಿದ್ದಾರೆ.

ಮೇರಿಕ್ಯೂರಿ ೧೯೦೨, ೧೯೧೧ ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ

ಅದ್ವಿತೀಯ ಗಣಿತಜ್ಞೆ ಹಿಪಾಟಿಯಾ ೩೭೦-೪೧೨

ಗರ್ಟಿತೆರೇಸಾ ಕೋರಿ – ೧೯೪೦ ವೈದ್ಯಶಾಸ್ತ್ರ

ಅಪ್ರತಿಮ ವಿಜ್ಞಾನ ಲೇಖಕಿ ಮೇರಿ ಸೋಮರ್ವಿಲ್ ೧೭೮೦ – ೧೮೩೨

ಪ್ರಾಯ್ಡಗೆ ಸವಾಲು ಹಾಕಿದ ಮನಃಶಾಸ್ತ್ರಜ್ಞೆ ಕಾಕಿನ್ ಹಾರ್ನಿ ೧೮೮೫-೧೯೫೨

ನಿಗೂಢ ನಾಸ್ಕ ಗೆರೆಗಳ ಅಧ್ಯಯನದಲ್ಲಿ ಅರ್ಧ ಶತಮಾನದ ಕಳೆದ ಮರಿಯಾರೇಕಿ ೧೯೦೩ – ೧೯೯೮

ವಿಜ್ಞಾನ ರಂಗದ ದುರಂತ ನಾಯಕಿ ರೋಸಲಿಂಡ್ ವಿಲ್ಲೀ ಪ್ರಾಂಕ್ಲಿನ್ ೧೯೨೦ – ೧೯೫೮

ಅತ್ಯಧಿಕ ಧೂಮಕೇತುಗಳನ್ನು ಕಂಡು ಹಿಡಿದಿರುವ ಕ್ಯಾರೊಲಿನ್ ಶೂಮೇಕರ್ – ೧೯೨೯

ಕೀನ್ಯಾದ ಕಾಡುಗಳಲ್ಲಿ ನಾಲ್ಕು ದಶಕಗಳ ಕ್ಷೇತ್ರಕಾರ್ಯ ಮಾಡಿದ ಜೇನ್‌ಗುಡಾಲ್ – ೧೯೩೪

ಸಮುದ್ರದಾಳದಲ್ಲಿ ಸಂಶೋಧನೆ ಅಮಂಡಾ ವಿನ್ಸೆಂಟ್ ಕ್ರಿಸ್ಟೀನ್ ನುಸ್‌ಲಾಯ್ನ್ ವೋಲ್ ಹಾಡ್ ೧೯೯೫ ವೈದ್ಯಶಾಸ್ತ್ರ

ಈ ಮಹಿಳಾ ವಿಜ್ಞಾನಿಗಳು ಮನೆ, ಮಕ್ಕಳು, ಸಂಸಾರದ ಜವಾಬ್ದಾರಿಗಳ ಜೊತೆಗೆ ತಮ್ಮ ಇಷ್ಟವುಳ್ಳ ಕ್ಷೇತ್ರದಲ್ಲಿ ಸಾಧನೆ ಮಾಡಿ ಕೀರ್ತಿಯನ್ನು ಗಳಿಸಿದರು. ಇವರು ಆಯ್ಕೆ ಮಾಡಿದ ಪುರುಷ ಸಂಗಾತಿಗಳು ಕೂಡ ಪತ್ನಿಯರ ಪ್ರತಿಭೆಯನ್ನು ಪೋಷಿಸಿ ಸಹಕಾರ ನೀಡಿದವರು. ಈ ತೆರನಾದ ವಿವಿಧ ವಿಜ್ಞಾನಿಗಳ ಜೀವನ ಸಾಧನೆಯನ್ನು ಗುರುತಿಸಲಾಗಿದೆ. ಇಂಥ ಅಸಾಧಾರಣ ಸಾಧನೆಗೈದ ಮಹಿಳೆಯರನ್ನು ಪರಿಚಯಿಸಿದ ಲೇಖಕಿ ನೇಮಿಚಂದ್ರ ಅಭಿನಂದನಾರ್ಹರು.

ಮಹಿಳಾ ವಿಜ್ಞಾನಿಗಳ ಲೇಖನಗಳು :

ವಿಜ್ಞಾನ ಎಲ್ಲರ ಬದುಕಿನ ಭಾಗವಾಗಿದೆ. ಆಧುನಿಕ ಯುಗದಲ್ಲಿ ಬದುಕುತ್ತಿರುವ ವ್ಯಕ್ತಿ ಎಲ್ಲಿಯೇ ಇರಲಿ ಹೇಗೆ ಇರಲಿ ಅವನಿಗೆ ಬೇಕಾಗಿರಲಿ, ಬೇಡವಾಗಿರಲಿ ವಿಜ್ಞಾನ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರುತ್ತದೆ. ವಿಜ್ಞಾನದ ಬಗ್ಗೆ ಒಂದು ತಪ್ಪು ಗ್ರಹಿಕೆ ಇದೆ. ವಿಜ್ಞಾನವೆಂದರೆ ಕೇವಲ ಪ್ರಯೋಗಾಲಯದಲ್ಲಿ ನಡೆಸುವ ಪ್ರಯೋಗಗಳನ್ನು ಕುರಿತದು ಎಂಬ ಭಾವನೆ ಅನೇಕರಲ್ಲಿವೆ. ಆದರೆ ವಿಜ್ಞಾನ ಅದನ್ನು ಒಳಗೊಂಡು ಅದನ್ನೂ ಮೀರಿದ್ದಾಗಿದೆ. ಅದು ಇಡೀ ಬದುಕನ್ನು ಆವರಿಸಿಕೊಂಡಿರುವ ಮತ್ತು ಪ್ರಭಾವಿಸುವ ಒಂದು ಶಿಸ್ತು.

ವಿಜ್ಞಾನದ ಅರಿವಿನಷ್ಟೆ ಮುಖ್ಯವಾದುದು ವೈಜ್ಞಾನಿಕ ಚಿಂತನಾ ಕ್ರಮ. ಒಂದು ಸ್ತರದಲ್ಲಿ ವೈಜ್ಞಾನಿಕ ಚಿಂತನಾ ಕ್ರಮ ವಿಜ್ಞಾನಕ್ಕಿಂತ ಮುಖ್ಯ ವೈಚಾರಿಕತೆ ವಿಚಾರವನ್ನು ಆಧರಿಸಿದ ಚಿಂತನೆ ಎಂಬ ಅರ್ಥವಿದೆ. "ಕುವೆಂಪು ವೈಚಾರಿಕತೆ ಮತ್ತು ವಿಜ್ಞಾನದ ಅರಿವಿನ ಪರವಾಗಿ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ. ಅನೇಕ ಲೇಖನ, ಕವಿತೆಗಳನ್ನು ಬರೆದಿದ್ದಾರೆ" ವಿಜ್ಞಾನ ಹುಟ್ಟಿದ್ದು ಯಾವಾಗ? ಯಾವತ್ತು ಮನುಷ್ಯ ಪ್ರಶ್ನೆಗಳನ್ನು ಕೇಳಲು ಮೊದಲು ಮಾಡಿದನೋ ಅಂದೇ ವಿಜ್ಞಾನ ಹುಟ್ಟಿತು. ವಿಜ್ಞಾನಕ್ಕೆ ಬೀಜ ಪ್ರಶ್ನೆ, ಪ್ರಶ್ನೆಗೆ ಮೂಲ ಸಂದೇಹ. ಹೀಗೆ ವಿಜ್ಞಾನ ಮನುಷ್ಯನ ಇತರ ಚಟುವಟಿಕೆಯೊಂದಿಗೆ ಬೆಳೆದು ಬಂದಿದೆ.

ಬೆಳಕಿನೊಂದು ಕಿರಣ ಮೇರಿ ಕ್ಯೂರಿ :

೧೯೯೩ರಲ್ಲಿ ಪ್ರಕಟವಾದ ಈ ಕೃತಿ ಮೇರಿಕ್ಯೂರಿಯ ಸಾಹಸಗಾಥೆಯನ್ನು ಪರಿಚಯಿಸುವಲ್ಲಿ ತನ್ನದೇ ಆದ ಕಾವ್ಯಮಯವಾದ ಭಾಷಾ ಶೈಲಿಯಿಂದಾಗಿ ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ಮೇರಿ ಕ್ಯೂರಿ ದಂಪತಿಗಳ ಸಾಮರಸ್ಯವನ್ನು ಕುರಿತು ಬರೆಯುತ್ತಾ "ಪರಸ್ಪರ ಸರಿಸಾಟಿಯಾದ ಮೇಧಾವಿ ಪತಿ-ಪತ್ನಿಯರ ದುಡಿಮೆಯಲ್ಲಿ ಮೇಲು-ಕೀಳುಗಳಿರಲಿಲ್ಲ. ನನ್ನದು ನಿನ್ನದೆಂಬುದಿರಲಿಲ್ಲ. ಪಿಯರ್ ಅಪ್ಪಟ್ಟ ವಿಜ್ಞಾನಿ. ಗಂಡಿನ ಗಂಡನ ಅರ್ಥಹೀನ ಹಮ್ಮು - ಬಿಮ್ಮುಗಳ ಅನುಭವವೇ ಇಲ್ಲದ ತುಂಬ ಪ್ರೀತಿಯ ಪತಿ. ವಿಜ್ಞಾನವನ್ನು, ತನ್ನ ಜೊತೆಯಾದ ಈ ವಿಜ್ಞಾನಿಯನ್ನು ಉತ್ಕಟವಾಗಿ ಪ್ರೀತಿಸಿದ ವಿಜ್ಞಾನಿ. ಈ ಪರಸ್ಪರರ ಸಹಾಯ ಸಹಕಾರ ಸಮಾನವಿತ್ತು ಎನ್ನುತ್ತಾರೆ ಲೇಖಕಿ ನೇಮಿಚಂದ್ರರವರು.

ಯುರೇನಿಯಂ ಅದಿರಾದ ಪಿಚ್‌ಬ್ಲೆಂಡ್ ಅನ್ನು ತಂದು ಕುದಿಸಿ, ಶೋಧಿಸಿ, ಶೇಖರಿಸಿ ಅದರಲ್ಲಿದ್ದ ಎರಡನೆಯ ಮೂಲಧಾತುವಿನ ಇರುವಿಕೆಯನ್ನು ಡಿಸೆಂಬರ್ ೨೬, ೧೮೯೮ರಲ್ಲಿ ಪ್ರಕಟಿಸಿದರು. ಇದಕ್ಕೆ ರೇಡಿಯಂ ಎಂದು ಹೆಸರಿಟ್ಟರು. ಎರಡು ಬಾರಿ ನೊಬೆಲ್ ಬಹುಮಾನ ಪಡೆದ ಮೇರಿ ೧೯೦೬ರಲಲಿ ಪತಿ ಪಿಯರ್‌ನನ್ನು ಕಳೆದುಕೊಂಡು ಏಕಾಂಗಿಯಾಗಿ ತನ್ನ ಸಾಧನೆಯನ್ನು

ಮುಂದುವರೆಸಿದಳು. ತಾನು ಪಿಯರ್ ಜೊತೆಯಾಗಿ ಕಂಡ ಕನಸಿನ ಪ್ರಯೋಗಾಲಯವನ್ನು ನಿರ್ಮಿಸಿದಳು. ಯುದ್ಧದ ಅಗ್ನಿಕುಂಡದಲ್ಲಿ ಬೆಂದವರಿಗೆ, ನೊಂದವರಿಗೆ ಮೇರಿ ಅಪತ್ಕಾಲಕ್ಕೊದಗಿ ಬಂದ ದೇವತೆಯಂತೆ ಜೀವದಾನ ನೀಡಿದಳು. ತಾನೇ ಕಂಡು ಹಿಡಿದ ರೇಡಿಯಂನ ನಿರಂತರ ಒಡನಾಟದಿಂದಾಗಿ ಅದರ ದುಷ್ಪರಿಣಾಗಳೀಗೆ ಒಳಗಾಗಿ ಜುಲೈ ೪, ೧೯೩೪ರಲ್ಲಿ ಈ ಬೆಳಕಿನ ಕಿರಣ ಅಸ್ತಮಿಸಿತು. ಲೇಖಕಿಯೇ ಹೇಳುವಂತೆ "ಹೆಜ್ಜೆ ಮೂಡುವ ಹಾದಿಯಲ್ಲಿ ಮೇರಿ ನಡೆದಿದ್ದಳು. ಹುಟ್ಟು ಸಾಹಸಿಯಂತೆ ಸಿದ್ಧಜಾಡಿನ ಆರಾಮ ಐಷರಾಮಗಳನ್ನು ತ್ಯಜಿಸಿ ಯಾವ ಮಹಿಳೆಯರೂ ಹೆಜ್ಜೆ ಊರದಿದ್ದ, ವಿಜ್ಞಾನದ ಅದ್ಭುತ, ಅಸ್ಪರ್ಶಿತ ಯಶಸ್ವಿಯಾಗಿ, ಮಾದರಿಯಾಗಿ ಕೇವಲ ಮಹಿಳೆಯರಿಗಲ್ಲ, ಉತ್ಕಟ ಪ್ರೇಮಿಗಳಿಗೆಲ್ಲ ಮೇರಿಕ್ಯೂರಿ ಆದರ್ಶವಾದಳು. ಮಾನವತಾ ವಾದಿಗಳೀಗೆ ದಾರಿ ದೀಪವಾದಳು. ಕೈಬೀಸಿ ಕರೆವ ಕೈಮರವಾದಳು"[೧] ಮೇರಿಕ್ಯೂರಿಯ ಈ ಜೀವನಚಿತ್ರ ಸಾಹಸಗಾಥೆಯಂತೆ ಕಂಡರೆ ಅಚ್ಚರಿಯಲ್ಲ.

ಕ್ಯಾರೊಲಿನ್ ಹರ್ಷಲ್ – ೧೭೫೦ – ೧೮೪೮ :

ಧೂಮಕೇತುಗಳನ್ನು ಕಂಡು ಹಿಡಿದ ಪ್ರಥಮ ಮಹಿಳಾ ವಿಜ್ಞಾನಿ. ಕ್ಯಾರೊಲಿನ್ ಹರ್ಷಲ್ ಈಕೆ ಹದಿನೆಂಟನೆ ಶತಮಾನದ ಮಹಾನ್ ಖಗೋಳಶಾಸ್ತ್ರಜ್ಞ ವಿಲಿಯಂ ಹರ್ಷಲ್‌ನ ತಂಗಿ. ಏನಾದರೂ ಕಲಿಯ ಬೇಕೆಂಬ ತುಡಿತವಿರುವ ಹುಡುಗಿ. ಅಣ್ಣನ ಜೊತೆ ಜೊತೆ ಕೆಲಸ ಮಾಡುತ್ತಾ ಸಂಗೀತವನ್ನೂ ಕಲಿತಳು. ತನ್ನ ಅಣ್ಣನಿಗೆ ಸಹಾಯ ಮಾಡುತ್ತಾ ಖಗೋಳಶಾಸ್ತ್ರದಲ್ಲಿ ಸಾಕಷ್ಟು ಪರಣಿತಳಾದಳು. ಅಣ್ಣ ಕೊಟ್ಟ ದೂರದರ್ಶಕದಿಂದ ಸಾಕಷ್ಟು ಆಸಕ್ತಿ ಹುಟ್ಟಿಸಿತು. ಮೊದಲಿಗೆ ನಕ್ಷತ್ರ ನೀಹಾರಿಕೆಯನ್ನು ಕಂಡು ಹಿಡಿದಳು. ೧೭೮೬ರ ಆಗಸ್ಟ್ ೧೦ರಂದು ಧೂಮಕೇತುವಿನಂಥ ಆಕಾಯಕಾಯ ಕಣ್ಣಿಗೆ ಕಾಣಿಸಿತು. ವಿಜ್ಞಾನಿಗಳು ಇದನ್ನು "ಮೊತ್ತ ಮೊದಲ ಮಹಿಳಾ ಧೂಮಕೇತು"[೨] ಎಂದು ಕರೆದರು. ಮುಂದೆ ಒಂಭತ್ತು ವರ್ಷಗಳಲ್ಲಿ ಆಕೆ ಮತ್ತೆ ಏಳು ಧೂಮಕೇತುಗಳನ್ನು ಕಂಡು ಹಿಡಿದಳು. ಅವುಗಳಲ್ಲಿ ಐದು ಬಹಳ ಮುಖ್ಯವಾದ ಧೂಮಕೇತುಗಳು ಆಗಿದ್ದವು. ಕ್ಯಾರೊಲಿನ್ ಹರ್ಷಲ್ ಕಣ್ಣುಗಳು ಬಹಳ ಚುರುಕು ಮತ್ತು ಸೂಕ್ಷ್ಮವಾದ ಅವಲೋಕನ ಶಕ್ತಿ ಕ್ಯಾರೊಲಿನ್‌ದಾಗಿತ್ತು. ಎಂದರೆ ಕೆಲವನ್ನು ಆಕೆ ಮೊದಲು ಬರಿಗಣ್ಣಿನಲ್ಲೇ ಗುರುತಿಸಿದ್ದಳು.

೧೮೨೨ರಲ್ಲಿ ತನ್ನ ಅಣ್ಣ ವಿಲಿಯಂ ತೀರಿಕೊಂಡಾಗ ಕ್ಯಾರೊಲಿನ್ ಇಂಗ್ಲೇಂಡಿನಿಂದ ತನ್ನ ತಾಯ್ನಾಡಾದ ಹ್ಯಾನೋವರಿಗೆ ಹಿಂದಿರುಗಿದಳು. ಅದು ೭೫ ವರ್ಷಗಳ ನಂತರ. ೧೮೩೫ರಲ್ಲಿ

೧.ನೇಮಿಚಂದ್ರ; ಶತಮಾನದ ಮಹಿಳಾ ವಿಜ್ಞಾನಿಗಳು, ಪುಟ-೬೮
೨. ನೇಮಿಚಂದ್ರ; ಕಾಲು ಹಾದಿಯ ಕೋಲ್ಮಿಂಚುಗಳು – ಮಹಿಳಾ ವಿಜ್ಞಾನಿಗಳು, ಪುಟ-೫೦

ರಾಯಲ್ ಅಸ್ಟ್ರೊನಮಿಕಲ್ ಸೊಸೈಟಿಯ ಗೌರವ ಸದಸ್ಯಳಾಗಿ ಚುನಾಯಿಸಲ್ಪಟ್ಟ ಮೊತ್ತ ಮೊದಲಮಹಿಳಾ ವಿಜ್ಞಾನಿ ಇವರು. ನಕ್ಷತ್ರ ಪುಂಜ ಮತ್ತು ನೀಹಾರಿಕೆಗಳನ್ನು ಪಟ್ಟಿ ಮಾಡಿ ಬೇರೆ ಬೇರೆ ಮಂಡಲಗಳಾಗಿ ವ್ಯವಸ್ಥಿತವಾದ ಪಟ್ಟಿ ತಯಾರಿಸಿದಳು. ಇದನ್ನು ಗುರುತಿಸಿದ ರಾಯಲ್ ಅಸ್ಟ್ರಾನಮಿಕಲ್ ಸೊಸೈಟಿ ಚಿನ್ನದ ಪದಕ ನೀಡಿ ಗೌರವಿಸಿತು. ಖಗೋಳ ಶಾಸ್ತ್ರಜ್ಞೆಯಾಗಿ ೯೮ ವರ್ಷಗಳ ಸಾರ್ಥಕ ಜೀವನ ನಡೆಸಿದರು.

ಅಪ್ರತಿಮ ವಿಜ್ಞಾನ ಲೇಖಕಿ ಮೇರಿ ಸೋಮರ್ವಿಲ್ : ೧೭೮೦ – ೧೮೭೨

ಗಣಿತ, ವಿಜ್ಞಾನವನ್ನು ಜನ ಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯಬಹುದು ಎಂದು ತೋರಿಸಿದ್ದು ಮಾತ್ರವಲ್ಲ ಗಣಿತಜ್ಞರಲ್ಲಿ ಮುಖ್ಯವಾದವರು ಮೇರಿ ಸೋಮರ್ವಿಲ್. ಒಬ್ಬ ಮಹಿಳೆ ಈ ಕಾರ್ಯಕ್ಕಿಳಿಯುವುದು ಅಸಾಧ್ಯವಿತ್ತು. ಆ ಕಾಲದಲ್ಲಿ ಕೈಗಾರಿಕಾ ಕ್ರಾಂತಿ ಆಗಷ್ಟೇ ಶುರುವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಹೊಸ ಆಸಕ್ತಿ ಮೂಡಿದ್ದ ಕಾಲ. ಮೇರಿ ಸುದೀರ್ಘ ಕಾಲ ಬದುಕಿದ್ದು ವಿಜ್ಞಾನ, ಗಣಿತಗಳ ಹೊಸ ಹೊಸ ಅನ್ವೇಷಣೆಗಳನ್ನು ಕುರಿತು ಬರೆದು ಜನಪ್ರಿಯವಾಗಿಸುವತ್ತ ಆಕೆಯ ಕೊಡುಗೆ ಅತ್ಯಂತ ಮಹತ್ವದ್ದು. ಹೆಂಗಸರು ಗಣಿತ, ವಿಜ್ಞಾನ ಓದುವುದು ತಪ್ಪು ಎನ್ನುವ ಕಾಲದಲ್ಲಿ ಬೀಜಗಣಿತದ ಬಗ್ಗೆ ಆಸಕ್ತಿ ಹುಟ್ಟಿ, ಮನೆಗೆಲಸದ ಜೊತೆ ಗಣಿತ ಸಮಸ್ಯೆಗಳಿಗ ಉತ್ತರಗಳನ್ನು ಕಂಡುಕೊಳ್ಳುತ್ತಿದ್ದಳು. ೧೮೦೪ರಲ್ಲಿ ಮೇರಿ ತನ್ನ ಸಂಬಂಧಿಯಾದ ರಷ್ಯದ ನೌಕಪಡೆಯ ಕ್ಯಾಪ್ಟನ್ ಸ್ಯಾಮ್ಯುಯೆಲ್‌ನನ್ನು ಮದುವೆ ಆಗಿ ಮೂರು ವರ್ಷಕ್ಕೆ ಗಂಡನನ್ನು ಕಳೆದುಕೊಂಡಳು. ೨೭ ವರ್ಷದ ಮೇರಿ ಆರ್ಥಿಕವಾಗಿ ಸ್ವತಂತ್ರಳಿದ್ದು ವಿದ್ಯಾಭ್ಯಾಸವನ್ನು ಮುಂದುವರಿಸಿದಳು.

೧೮೧೨ ರಲ್ಲಿ ಮೇರಿ ಡಾ.ವಿಲಿಯಂನನ್ನು ಮದುವೆಯಾಗಿ ಲಂಡನ್ನಿನಲ್ಲಿ ನೆಲೆಸಿದರು. ಇಲ್ಲಿ ಕಲೆ, ಸಾಹಿತ್ಯ, ವೈಜ್ಞಾನಿಕ ರಂಗಗಳು ಮುಂಚೂಣಿಯಲ್ಲಿದ್ದರಿಂದ, ಮೇರಿಯ ವೈಜ್ಞಾನಿಕ ಚಟುವಟಿಕೆ ಆರಂಭವಾಗಿ, ಹತ್ತೊಂಭತ್ತನೇ ಶತಮಾನದ ಪ್ರಮುಖ ಗಣಿತಜ್ಞಳಾಗಿ ಮೇರಿ ಸೋಮರ್ವಿಲ್ ಗುರುತಿಸಲ್ಪಟ್ಟಳು. ೧೮೨೬ರಲ್ಲಿ ರಾಯಲ್ ಸೊಸೈಟಿಗಾಗಿ 'ದಿ ಮ್ಯಾಗ್ನಿಟಿಕ್ ಪ್ರಾಪರ್ಟಿಸ್ ಆಫ್ ದಿ ವೈಲೆಟ್ ರೇಸ್ ಆಫ್ ದಿ ಸೋಲಾರ್ ಸ್ಪೆಕ್ಟ್ರಮ್' ಎಂಬ ವೈಜ್ಞಾನಿಕ ಪ್ರಬಂಧವನ್ನು ತಯಾರಿಸಿದಳು. ಇದಕ್ಕಾಗಿ ಅವಳ ಗಂಡ ವಿಲಿಯಂ ಪ್ರೋತ್ಸಾಹ ಮತ್ತು ಬೆಂಬಲ ಕೊಡುತ್ತಿದ್ದ. ಮುಂದಿನ ಪುಸ್ತಕ "ಆನ್ ದಿ ಕನೆಕ್ಷನ್ ಆಫ್ ದಿ ಫಿಸಿಕಲ್ ಸೈನ್ಸ್' ಅಗಾಧ ಜನಪ್ರಿಯತೆ ಪಡೆದು, ಹತ್ತು ಬಾರಿ ಮರು ಮುದ್ರಣಗೊಂಡು ಇಟಲಿ, ಫ್ರೆಂಚ್, ಜರ್ಮನ್ ಭಾಷೆಗೆ ಅನುವಾದವಾಯಿತು. ಹೀಗಾಗಿ ಅಂತರರಾಷ್ಟ್ರೀಯ ಗೌರವಕ್ಕೆ ಪಾತ್ರಳಾಗಿದ್ದಳು. "ಹೆಣ್ಣಾಗಿ ಕಲಿಯಲು

ತಾನು ಎದುರಿಸಿದ ಅಡೆತಡೆಗಳನ್ನು ನೆನೆದು ಮೇರಿ ಒಂದು ಆಕ್ಸ್‌ಫರ್ಡ್ ಮಹಿಳಾ ಕಾಲೇಜು' ತೆರೆಯಲು ಹಣಬಿಟ್ಟು ಹೋಗಿದ್ದಳು ಮೇರಿ"[೧]

ಜಗತ್ತಿನ ಮೊಟ್ಟ ಮೊದಲ ಕಂಪ್ಯೂಟರ್ ಪ್ರೋಗ್ರಾಮರ್ ಆಡಾ ಅಗುಸ್ಥಾ ಆಪ್ಲೇಸ್ (೧೮೧೫-೧೮೫೨)

ಈಕೆ ಮೇಧಾವಿ ಗಣಿತಜ್ಞೆ, ಗಣಕಯಂತ್ರಗಳನ್ನು ಕಂಡು ಹಿಡಿದ ಬ್ಯಾಬೇಜನ ಆತ್ಮೀಯ ಗೆಳತಿ. 'ಆಡಾ' ಇದು ಕಂಪ್ಯೂಟರ್ ಭಾಷೆಯಲ್ಲಿ ಚಿರಪರಿಚಿತ. ಇದೀಗ ಪಾತ್ರ ವಹಿಸಿದ್ದು ಗಣಿತ ಮತ್ತು ವಿಜ್ಞಾನಕ್ಕೆ ಆಡಾ ನೀಡಿದ ಕೊಡುಗೆಯತ್ತ ವಿಜ್ಞಾನಿಗಳ ಗಮನ ಹರಿದಿದೆ. ಆಕೆ ಒಂದು ಶತಮಾನದಷ್ಟು ಮುಂದಕ್ಕೆ ಯೋಚಿಸಿ ಕಂಪ್ಯೂಟರ್‌ಗಳಿಗೆ ಕಾರ್ಯ ನಿರ್ವಹಿಸುವ ರೀತಿಯನ್ನು ಅವುಗಳೊಡನೆ ಸಂಭಾಷಿಸುವ ಬಗೆಯನ್ನು ವಿವರಿಸಿದ್ದಳು. ಡಿಸೆಂಬರ್ ೧೦, ೧೮೧೫ರಂದು ಲಂಡನ್‌ನಲ್ಲಿ ಜನಿಸಿದಳು. ತಂದೆಯ ಪ್ರೀತಿ ಇಲ್ಲದೆ ಬೆಳೆದ ಮಗಳು ಅವನ ಗುಣಗಳಿಗೆ ತದ್ವಿರುದ್ಧ.

೧೮೩೮ರಲ್ಲಿ ಆಡಾ ಚಾರ್ಲ್ಸ್‌ಬ್ಯಾಬೇಜನ ವೈಜ್ಞಾನಿಕ ಸಂಶೋಧನೆಗಳಿಂದ ಪ್ರಭಾವಿತಳಾಗಿ ಆತನೊಡನೆ ಕೆಲಸ ಮಾಡಲು ನಿಶ್ಚಯಿಸಿದಳು. ವರ್ಷಗಳು ಕಳೆದಂತೆ ಬ್ಯಾಬೇಜನಿಗೆ ವಿದ್ಯಾರ್ಥಿಯಾಗಿದ್ದ ಆಡಾ ಆತ್ಮವಿಶ್ವಾಸದಿಂದ ಸಹ ಉದ್ಯೋಗಿಯಾಗಿ ಬೆಳೆದು ನಿಂತಳು. ಆಡಾ ಮತ್ತು ಬ್ಯಾಬೇಜ್ ಜೊತೆ ಸೇರಿ 'ಸಂಭವನೀಯತೆ'ಯ ಗಣಿತದ ಸಿದ್ಧಾಂತಗಳನ್ನು ಪರೀಕ್ಷಿಸಲು ಹೋಗಿ ದಾರಿದ್ರ್ಯದ ಅಂಚಿಗೆ ಬಂದು ನಿಂತರು. ೧೮೫೨ರಲ್ಲಿ ಆಡಾ ಗರ್ಭಕೋಶದ ಕ್ಯಾನ್ಸರಿಗೆ ತುತ್ತಾದಳು.

ಆಡಾ ಗಣಿತಕ್ಕೆ ನೀಡಿದ ಕೊಡುಗೆ ಆಗಾಧವಾದುದು. ಬೆರ್‌ಬ್ರಾಮ್‌ಬಾಡೆನ್ 'ಫಾಸ್ಟರ್ ದ್ಯಾನ್ ಥಾಟ್' ಎಂಬ ಪುಸ್ತಕದಲ್ಲಿ ಕಂಪ್ಯೂಟರ್‌ಗಳ ಇತಿಹಾಸವನ್ನು ಬರೆದಾಗ ಆಡಾಳ ಕೊಡುಗೆಯನ್ನು ಉಲ್ಲೇಖಿಸಿ ಆಡಾಳನ್ನು 'ಪ್ರವಾದಿ' ಎಂದು ಕರೆದ.

ವಿಜ್ಞಾನರಂಗದ ದುರಂತ ನಾಯಕಿ ರೊಸಲಿಂಡ್ ಎಲ್ಸಿ ಪ್ರಾಂಕ್ಲಿನ್

೧೯೫೩ರಲ್ಲಿ ಡಿ.ಎನ್.ಎ ರಚನೆಯನ್ನು ಕಂಡು ಹಿಡಿದ ಇವರಿಗೆ ೧೯೬೨ರಲ್ಲಿಯೇ ನೊಬೆಲ್ ಪ್ರಶಸ್ತಿ ಲಭಿಸಿತ್ತು. ಡಿ.ಎನ್.ಎ ರಚನೆಯನ್ನು ಕಂಡು ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದ ಮಹಿಳಾ ವಿಜ್ಞಾನಿ ರೋಸ್‌ಲಿಂಡ್ ಹೆಸರು ನಮಗೆಲ್ಲೂ ಕೇಳಿಬರುವುದಿಲ್ಲ. ಆನ್‌ಸೈರ್ ಹೇಳುವಂತೆ 'ಗೆದ್ದವರು ಎಲ್ಲವನ್ನು ಬಾಚಿಕೊಂಡಿದ್ದರು" ಇಂದು ರೋಸ್ ಲಿಂಡ್ ಅವರ ಬದುಕು

೧.ನೇಮಿಚಂದ್ರ; ಅಪ್ರತಿಮ ವಿಜ್ಞಾನ ಲೇಖಕಿ, ಪುಟ-೫೭

ಮತ್ತು ಸಾಧನೆಯನ್ನು 'ಗಂಡುರಂಗ'ದಲ್ಲಿ ಹೆಣ್ಣು ಪಡುವ ಪಾಡಿನ ಶ್ರೇಷ್ಠ ಉದಾಹರಣೆಯಾಗಿ ಸ್ತ್ರೀವಾದಿಗಳು ಗುರುತಿಸುತ್ತಿದ್ದಾರೆ.

ರೋಸ್‌ಲಿಂಡ್ ಪ್ರಾಂಕ್ಲಿನ್ ನೊಬೆಲ್ ಪಾರಿತೋಷಕ ಪಡೆದ ಬ್ರಿಟನ್ನಿನ ಮೊಟ್ಟಮೊದಲ ಮಹಿಳೆಯಾಗಬೇಕಿತ್ತು. ಆದರೆ ರೋಸ್‌ಲಿಂಡ್ ತೀರಿಕೊಂಡ ಕಾರಣ ಎಲ್ಲರೂ ಆಕೆಯನ್ನು ಆಕೆಯ ಚಾರಿತ್ರಿಕ ಕೊಡುಗೆಯನ್ನು ನಿರಾಯಾಸವಾಗಿ ಮರೆತರು. ಬ್ರಿಟನ್ನಿನ ಈ ವಿಜ್ಞಾನಿ ಅತ್ಯಂತ ಪ್ರತಿಭಾವಂತ ಸ್ಪಟಿಕ ಶಾಸ್ತ್ರಜ್ಞೆ. ಈಕೆ ಭೌತ ರಸಾಯನಶಾಸ್ತ್ರ ಮತ್ತು ಅಣು ಜೀವಶಾಸ್ತ್ರಕ್ಕೆ ವಿಶೇಷ ಕೊಡುಗೆ ನೀಡಿದ ಸಂಶೋಧಕಿ. ಈಕೆ ಮೇಲ್ಮಧ್ಯಮ ವರ್ಗದ ಯಹೂದಿ ಕುಟುಂಬವಾದದ್ದರಿಂದ ಆಕೆಯ ಎಲ್ಲ ಅಗತ್ಯಗಳನ್ನು ಪೂರೈಸಬಲ್ಲ ಸ್ಥಿತಿವಂತ ಕುಟುಂಬವಾಗಿದ್ದರಿಂದ ಆಕೆಯ ವಿದ್ಯಾಭ್ಯಾಶಕ್ಕಾಗಲಿ, ಸಂಶೋಧನೆಗಾಗಲಿ ಯಾರೊಬ್ಬರೂ ಅಡ್ಡ ಬರಲಿಲ್ಲ.

೧೯೪೭-೫೦ರವರೆಗೆ ಪ್ಯಾರಿಸ್ಸಿನ ಸರಕಾರಿ ಪ್ರಯೋಗ ಶಾಲೆಯಲ್ಲಿ ಅಸ್ಪಟಿಕ ಇಂಗಾಲಗಳ ಕ್ಷ-ಕಿರಣ ಚದುರುವಿಕೆಯನ್ನು ಕುರಿತು ಸಂಶೋಧನೆ ನಡೆಸಿದ್ದು, ಇಂಗಾಲಗಳ ಕ್ಷ-ಕಿರಣ ವಿವರ್ತನೆ ಚಿತ್ರಗಳ ಸವಿಸ್ತಾರದ ವಿಶ್ಲೇಷಣಾ ವಿಧಾನವನ್ನು ಕಂಡು ಹಿಡಿದಳು. ಹಾಗೆಯೇ ತ್ರಾಣದ ಇಂಗಾಲದ ಎಳೆಗಳ ವಿಜ್ಞಾನ ಮತ್ತು ತಂತ್ರಜ್ಞಾನ ಕಂಡುಹಿಡಿದವರಲ್ಲಿ ಮುಖ್ಯಳು. ಈಕೆಯ ಜಾಗರೂಕ ಹಾಗೂ ವ್ಯವಸ್ಥಿತ ಸಂಶೋಧನಾ ಕೆಲಸ ಡಿ.ಎನ್.ಎ.ಯ ಎರಡು ಸ್ಥಿತಿಗಳನ್ನು ಗುರುತಿಸಲು ಕಾರಣವಾಗಿತ್ತು. ರೋಸ್‌ಲಿಂಡ್ ತೀರಿಕೊಂಡಾಗ ಆಕೆಯ ವಯಸ್ಸು ೩೭. ಹೊಸ ತಾಂತ್ರಿಕ ಅನ್ವೇಷಣೆಗಳು ಮತ್ತು ನಿಖರವಾದ, ಖಚಿತವಾದ ತಂತ್ರಗಳನ್ನು ಸಂಕೀರ್ಣ ಬೃಹದಣುಗಳ ಸಂಶೋಧನೆಯಲ್ಲಿ ಬಳಸಿದ್ದು, ವಿಜ್ಞಾನಕ್ಕೆ ಈಕೆ ನೀಡಿದ ಮುಖ್ಯ ಕೊಡುಗೆ.

ಮೊಟ್ಟ ಮೊದಲ ಪೇಟೆಂಟ್

೧೭೧೫ರಲ್ಲಿ ಕಾಲೋನಿ ವಾಸಿಗಳಿಗೆ ದೊರೆತ ಮೊಟ್ಟ ಮೊದಲ ಪೇಟೆಂಟ್ ಪೆನ್ಸಿಲ್ವೇನಿಯಾದ ಸಿಬಿಲ್ಲಾ ಎಂಬ ಮಹಿಳೆ ಕಂಡು ಹಿಡಿದ ಮುಸುಕಿನ ಜೋಳವನ್ನು ಶುಚಿಗೊಳಿಸುವ ಹೊಸ ಸಲಕರಣೆಗೆ ದೊರೆತದ್ದು, ಪೇಟೆಂಟ್ ಆಕೆಯ ಗಂಡ ಥಾಮಸ್ ಮಾಸ್ಟರ್ಸ್ ಹೆಸರಿನಲ್ಲಿತ್ತು. ೧೮೮೯ರವರೆಗೆ ಹೆಂಗಸರಿಗೆ ತಮ್ಮ ಹೆಸರಿನಲ್ಲಿ ಪೇಟೆಂಟ್ ಪಡೆಯುವ ಹಕ್ಕು ಕೂಡ ಇರಲಿಲ್ಲ. ೧೯೩೦ರ ದಶಕದಲ್ಲಿ ಐವತ್ತಕ್ಕೂ ಹೆಚ್ಚು ಪೇಟೆಂಟ್‌ಗಳನ್ನು ಪಡೆದ ಲೂಯಿ ಹೆನ್ರಿ ಲೇಡಿ ಎಡಿಸನ್ ಎಂದೇ ಪ್ರಸಿದ್ಧಳಾದಳು.

ಮೇರಿ ಲವೋನಿಯರ್ :

ಮೇರಿ ೧೭೭೧ರಲ್ಲಿ ಲವೋನಿಯರ್‌ನನ್ನು ಮದುವೆ ಆದಳು. ಆಗ ಅವಳ ವಯಸ್ಸು ೧೪. ಪತಿಯ ಪ್ರೋತ್ಸಾಹದಲ್ಲಿ ಆಕೆಯ ವಿದ್ಯಾಭ್ಯಾಸ ಮುಂದುವರಿದು, ಹಲವು ಭಾಷೆಗಳನ್ನು ಕಲಿತ ಈಕೆ, ಪತಿಗೆ ಉಪಯುಕ್ತ ವೈಜ್ಞಾನಿಕ ಮಾಹಿತಿಗಳ ಪುಸ್ತಕಗಳನ್ನು ಭಾಷಾಂತರಿಸಿಕೊಟ್ಟಳು. ಲವೋನಿಯರ್ ಪತ್ನಿಯ ಮೇಧಾವಿತನವನ್ನು, ಪ್ರತಿಭೆಯನ್ನು ಮೆಚ್ಚಿ ಗೌರವಿಸಿದನು. ಮೇರಿ ಉತ್ತಮ ಅತಿಥೇಯಳು ಆಗಿದ್ದೂ, ವಿಜ್ಞಾನಿಗಳಿಗೆ, ಮೇಧಾವಿಗಳಿಗೆ ಔತಣಕೂಟ ಏರ್ಪಡಿಸಿ, ಚರ್ಚೆ-ವಿಷಯ ವಿನಿಮಯ ಮಾಡಿಕೊಳ್ಳುತ್ತಿದ್ದಳೂ. ಆಕೆಯ ಈ ಸುಖ ಜೀವನ ತಟ್ಟನೆ ದುರಂತದಲ್ಲಿ ಕೊನೆಯಾಯಿತು. ಗಂಡನ ಮೇಲಿನ ಅಪವಾದಗಳನ್ನು ಸುಳ್ಳೆಂದು ಸಾಬೀತು ಪಡಿಸಿ, ಆತನ ವಿರೋಧಿಗಳನ್ನು ನೆಲಕಚ್ಚಿಸಿದಳು. ನಂತರ ಪ್ರಾಯೋಗಿ ವಿಜ್ಞಾನಿ ಬೆಂಜಮಿನ್ ಥಾಂಪ್ಸನ್‌ನನ್ನು ವಿವಾಹವಾದಳು. ಆದರೆ ಆಕೆಯ ವೈವಾಹಿಕ ಜೀವನ ಸುಖಮಯವಾಗಿರಲಿಲ್ಲ. ಕಾರಣ ಬೆಂಜಮಿನ್‌ಗೆ ಪತ್ನಿ ತನ್ನ ವೈಜ್ಞಾನಿಕ ಸಂಶೋಧನೆಗಳಲ್ಲಿ ಭಾಗಿಯಾಗುವುದು ಇಷ್ಟವಿರಲಿಲ್ಲ. ಮೇರಿಗೆ ಈ ವಿವಾಹ ಉಸಿರು ಕಟ್ಟಿಸಿರಬೇಕು, ಬೇಗನೆ ಅವರಿಬ್ಬರು ಬೇರ್ಪಟ್ಟರು.

ವಿಜ್ಞಾನಕ್ಕಾಗಿ ಗಂಡಾದವರು :

ಅನೇಕ ಮಹಿಳೆಯರು ಸುತ್ತಲ ಸಮಾಜದ ಲಿಂಗಭೇದದ ರೀತಿ ನೀತಿಯಿಂದಾಗಿ ಪುರುಷರ ಹೆಸರಿಟ್ಟುಕೊಂಡು ದುಡಿದದ್ದು ಉಂಟು, ಬರೆದದ್ದು ಇದೆ. ಅಗ್ನೆಡೈಸ್ ಕ್ರಿ.ಪೂ.ನಾಲ್ಕನೇ ಶತಮಾನದಲ್ಲಿದ್ದ ಗ್ರೀಕ್ ಮಹಿಳೆ. ಈಖೆ ಪುರುಷರಿಗಷ್ಟೇ ಮೀಸಲಿದ್ದ ಪ್ರಸಿದ್ಧ ವೈದ್ಯ ಹಿರೋ ಥಲಸ್ಸನ ತರಗತಿಗಳಿಗೆ ಪುರುಷ ವೇಷದಲ್ಲಿ ಪ್ರವೇಶಿಸಿ ವೈದ್ಯಶಾಸ್ತ್ರವನ್ನು ಕಲಿತಳು. ವಿಷಯ ಬಯಲಾಗಿ, ಪುರುಷರಿಗಷ್ಟೇ ಮೀಸಲಿದ್ದ ವೈದ್ಯವೃತ್ತಿ ಕೈಗೊಂಡ ಆರೋಪ ಹೊರಿಸಲಾಯಿತು. ಹದಿನೆಂಟನೇ ಶತಮಾನದ ಸೋಫಿಯಾ ಜರ್ಮನ್, ಪ್ರಸಿದ್ಧ ಗಣಿತಜ್ಞ ಫೆಡರಿಕ್‌ಗಾಸ್‌ನೊಡನೆ ಗಂಡು ಹೆಸರಿನಲ್ಲಿ ಪತ್ರ ವ್ಯವಹಾರ ಪ್ರಾರಂಭಿಸಿದ್ದಳು. ತನ್ನ ವೈಜ್ಞಾನಿಕ ಪ್ರಬಂಧವನ್ನು ಗಂಡು ಹೆಸರಿನಲ್ಲಿ ಬರೆದು ಒಪ್ಪಿಸಿದ್ದಳು. ೧೭೯೫ರಲ್ಲಿ ಹುಟ್ಟಿದ ಡಾ.ಜೇಮ್ಸ್‌ಬ್ಯಾರಿ ಬದುಕಿನುದ್ದಕ್ಕೂ ತನ್ನ ನಿಜವಾದ ಲಿಂಗವನ್ನು ಮರೆಮಾಚಿ ಪುರುಷನಂತೆ ವೇಷ ತೊಟ್ಟು ಬ್ರಿಟನಿನ ಭೂ ಸೇನೆಗೆ ಸೇರಿ ಸುದೀರ್ಘಕಾಲ ದಕ್ಷ ವೈದ್ಯಳಾಗಿ ದುಡಿದಳು. ಆಕೆ ಸತ್ತ ನಂತರ ಹೆಣ್ಣೆಂಬ ಸತ್ಯ ಹೊರಬಿದ್ದಿತು.

೧೮೮೫ರಲ್ಲಿ ಹುಟ್ಟಿದ ಅಮೆರಿಕಾದ ಕಾರನ್ ಹಾರ್ನಿ ಸಿಗ್ಮಂಡ್ ಪ್ರಾಯ್ಡ್‌ನ ಸ್ತ್ರೀಯರ ಮನಃಶಾಸ್ತ್ರವನ್ನು ಕುರಿತಾದ ಸಿದ್ಧಾಂತಗಳನ್ನು ತಿರಸ್ಕರಿಸಿದ ಮೊಟ್ಟ ಮೊದಲ ಮನಃಶಾಸ್ತ್ರಜ್ಞೆ. ಫ್ರಾಯ್ಡ್‌ನ ಈ ಸಿದ್ಧಾಂತವನ್ನು ಗಂಡು ಮನಃಶಾಶ್ತ್ರದ ನ್ಯೂನತೆ ಎಂದು ಸಾಧಿಸಿದಳು. ಪ್ರಾಯ್ಡ್‌ನ ತತ್ವಗಳನ್ನು ಪ್ರಶ್ನಿಸಿದ ಈಕೆಗೆ, ಪುರುಷ ಪ್ರಧಾನ ಸಂಸ್ಕೃತಿಯ ಮಹಿಳೆಯರ ಮಾನಸಿಕ ರೋಗಗಳಿಗೆ

ಕಾರಣ ಇರಬೇಕೆನಿಸಿತು. ಕಾರನ್ ಹಾರ್ನಿ ತನ್ನದೇ ಆದ ಮನೋವಿಶ್ಲೇಷಣಾ ಸಂಸ್ಥೆಯನ್ನು ಸ್ಥಾಪಿಸಿ ಯಶಸ್ವಿಯಾದಳು.

ಅದ್ವಿತೀಯ ಗಣಿತಜ್ಞೆ ಹಿಪಾಟಿಯ – ೩೭೦-೪೧೨

ಮೊಟ್ಟ ಮೊದಲ ಪ್ರಸಿದ್ಧ ಮಹಿಳಾ ವಿಜ್ಞಾನಿ ಮತ್ತು ಗಣಿತಜ್ಞೆ ಹಿಪಾಟಿಯ. ಈಕೆ ಗ್ರೀಕರ ಬೌದ್ಧಿಕ ಪರಾಕಾಷ್ಠೆಯ ಸಮಯದಲ್ಲಿ ಅಲೆಕ್ಸಾಂಡ್ರಿಯಾ ನಗರದಲ್ಲಿ ಜೀವಿಸಿದ್ದ ಮಹಿಳೆ. ಕ್ರಿ.ಶ.೩೭೦ರಲ್ಲಿ ಹಿಪಾಟಿಯ ಹುಟ್ಟಿದಾಗ ಅಲೆಕ್ಸಾಂಡ್ರಿಯಾ ವಿಶ್ವವಿದ್ಯಾಲಯ ಏಳುನೂರು ವರ್ಷಗಳಷ್ಟು ಹಳೆಯದಾಗಿತ್ತು. ಅಲೆಕ್ಸಾಂಡ್ರಿಯ ರೋಮನ್ನರ ಅಧೀನದಲ್ಲಿತ್ತು. ರೋಮನ್ ಯುದ್ಧದಾಹದ ಸಮಯದಲ್ಲಿ ಗಣಿತಕ್ಕೆ ಯಾರ ಗಮನವಾಗಲೀ, ಪ್ರೋತ್ಸಾಹವಾಗಲೀ ಇರಲಿಲ್ಲ. ಇವರು ಗಣಿತದಲ್ಲಿ ತೀರ ಹಿಂದಿದ್ದರು. ಒಡ್ಡೊಡ್ಡು ರೋಮನ್ ಅಂಕಿಗಳನ್ನು ಇಟ್ಟುಕೊಂಡು ಸರಳವಾದ ಕೂಡಿ, ಗುಣಿಸುವ ಕೆಲಸ ಮಾಡುವುದು ಕೂಡ ಕಷ್ಟವಿತ್ತು. ಹಿಪಾಟಿಯ ಗಣಿತಜ್ಞ ಥಿಯಾನನ ಮಗಳು. ಹಿಪಾಟಿಯಾಳ ಪ್ರತಿಭೆ, ಪಾಂಡಿತ್ಯದೊಡನೆ ಆಕೆಯ ಸೌಂದರ್ಯವೂ ಪ್ರಸಿದ್ಧವಾಗಿತ್ತು. ಆಕೆಯ ಉಪನ್ಯಾಸಗಳು ವಿಶ್ವವಿದ್ಯಾಲಯದಲ್ಲಿ ಅತ್ಯಂತ ಜನಪ್ರಿಯವಿದ್ದು, ಯುರೋಪ್, ಏಷ್ಯಾ, ಆಫ್ರಿಕಗಳಿಂದ ಆಕೆಯ ಉಪನ್ಯಾಸವನ್ನು ಕೇಳಲು ವಿದ್ಯಾರ್ಥಿಗಳು ಬರುತ್ತಿದ್ದರು. ಆಕೆಯ ಮನೆ ಬೌದ್ಧಿಕ ವಿಚಾರಗಳ ಕೇಂದ್ರವಾಗಿದ್ದು, ವೈಜ್ಞಾನಿಕ ಹಾಗೂ ತತ್ತ್ವಜ್ಞಾನದ ಚರ್ಚೆಗೆಂದು ವಿದ್ವಾಂಸರು ಬಂದಿಳಿಯುತ್ತಿದ್ದ ಸಂಗಮ ಸ್ಥಳವಾಗಿತ್ತು.

ಹಿಪಾಟಿಯ ಪ್ಲೇಟೋ ಮತ್ತು ಪೈಥಾಗೊರಸನ ತತ್ತ್ವಗಳಲ್ಲಿ ನಂಬಿಕೆ ಇಟ್ಟವಳು. ಆದರೆ ಹಿಪಾಟಿಯಳ ದಾರುಣ ಹತ್ಯೆಯಾಯಿತು. ಹಿಪಾಟಿಯಾ ತನ್ನ ಗ್ರೀಕ್ ವೈಜ್ಞಾನಿಕ, ವೈಚಾರಿಕ ಚಿಂತನೆಗಳನ್ನು ಸಾರ್ವಜನಿಕವಾಗಿ ಬೆಂಬಲಿಸಿದ್ದೇ ಆಕೆಯ ಜೀವಕ್ಕೆ ಕುತ್ತಾಯಿತು. ಹಿಪಾಟಿಯಳ ಹತ್ಯ ಯುರೋಪಿನ ಸ್ವತಂತ್ರ ಚಿಂತನೆ, ವೈಚಾರಿಕತೆಯ ಶೋಧನೆಯ ಹತ್ಯೆಯನ್ನು ಪುರಾತನ ವಿಜ್ಞಾನದ ಅಂತ್ಯವನ್ನು ಸಂಕೇತಿಸಿತು. ಹಿಪಾಟಿಯಾಳ ಮೂಲಕೃತಿಗಳ ಯಾವ ಪ್ರತಿಯೂ ಲಭ್ಯವಿಲ್ಲದಿದ್ದರೂ, ಆಕೆಯ ಕೊಡುಗೆ ಉಲ್ಲೇಖಗಳು ಯಥೇಚ್ಛವಾಗಿ ದೊರಕಿದವು. ಗಣಿತ ಮತ್ತು ಖಗೋಳಶಾಸ್ತ್ರವನ್ನು ಕುರಿತು ಅನೇಕ ಪುಸ್ತಕಗಳನ್ನು ಬರೆದಳು. ಬೀಜಗಣಿತ ಮೂಲಗ್ರಂಥ 'ಅರ್ಥಮೆಟಿಕಾ'ವನ್ನು ಕುರಿತು ವ್ಯಾಖ್ಯಾನವನ್ನು ಬರೆದಳು. ಹಿಪಾಟಿಯಾ ಖಗೋಳಶಾಸ್ತ್ರವನ್ನು ಕುರಿತ ತನ್ನ ಕೃತಿಯಲ್ಲಿ ಗ್ರಹತಾರೆಗಳ ಚಲನೆಯ ಪಟ್ಟಿಗಳನ್ನು ನೀಡಿದ್ದಳು.

ಚಲನಶಾಸ್ತ್ರ ಮತ್ತು ತಂತ್ರಜ್ಞಾನದಲ್ಲಿಯೂ ಆಸಕ್ತಿ ಇತ್ತು. ಅನೇಕ ವೈಜ್ಞಾನಿಕ ಸಲಕರಣೆಗಳನ್ನು ತಯಾರಿಸಿದಳು. ನೀರನ್ನೂ ಬಟ್ಟಿ ಇಳಿಸುವ ಯಂತ್ರವನ್ನು ಕಂಡು ಹಿಡಿದಳು. ದ್ರವಗಳ ಸಾಂದ್ರತೆಯನ್ನು ಅಳೆಯುವ ಮೊಟ್ಟ ಮೊದಲ ಸಲಕರಣೆಯನ್ನು ಕಂಡು ಹಿಡಿದಳು.

ಜೀವನ ಮತು ಸಾಧನೆಯನ್ನು ಕುರಿತಂತೆ ಸಾಕಷ್ಟು ದಾಖಲೆಗಳು ಸಿಗುವ ಮೊಟ್ಟ ಮೊದಲ ಮಹಿಳಾ ವಿಜ್ಞಾನಿ ಗಣಿತಜ್ಞೆ ಹಿಪಾಟಿಯಾ. ಮಹಿಳಾ ವಿಜ್ಞಾನಿಗಳ ಪರಂಪರೆಯಲ್ಲಿ ಹಿಪಾಟಿಯಾ ಮೊಟ್ಟ ಮೊದಲಿಗಳಾಗಿ ನಿಲ್ಲುತ್ತಾಳೆ.

ಜ್ಞಾನೋದಯ ಕಾಲದ ವಿಜ್ಞಾನಿ - ಎಮಿಲಿ ದು ಶಾಟೆಲೆ ೧೭೦೬-೧೭೪೯

ಎಮಿಲಿ ೧೭೦೬ ಫ್ರಾನ್ಸ್ ದೇಶದ ಶ್ರೀಮಂತ ಕುಟುಂಬದಲ್ಲಿ ಜನಿಸಿದಳು. ಚರಿತ್ರಕಾರರು ಜ್ಞಾನೋದಯದ ಕಾಲವೆಂದು ಗುರುತಿಸಿದ ಸಮಯದಲ್ಲಿ ಎಮಿಲಿ ಹುಟ್ಟಿ, ಬಾಳಿ ಬದುಕಿ ದುಡಿದಳು. ಫ್ರಾನ್ಸ್ ದೇಶದ ಗಣಿತಜ್ಞೆ ಮತ್ತು ಭೌತಶಾಸ್ತ್ರಜ್ಞೆ, ಈಕೆ ಎಳೆಯ ವಯಸ್ಸಿನಲ್ಲಿಯೇ ಇಂಗ್ಲೀಷ್, ಲ್ಯಾಟಿನ್ ಮತ್ತು ಇಟಲಿ ಭಾಷೆಗಳಲ್ಲಿ ಪ್ರವೀಣಳಾದಳು. ಗಣಿತದಲ್ಲಿ ಪಾರಂಗತಳಾದಳು. ಎಮಿಲಿಯ ಬುದ್ಧಿವಂತಿಕೆ ಅಸಾಧಾರಣವಿತ್ತು. ಇಪ್ಪತ್ತೇಳರ ವಯಸ್ಸಿನಲ್ಲಿ ಕವಿ, ತತ್ತ್ವಜ್ಞಾನಿ, ಚರಿತ್ರಜ್ಞ ವಾಲ್ಟೈರ್‌ನೊಡನೆ ಆಕೆಯ ಸ್ನೇಹ ಸಂಬಂಧ ಆರಂಭವಾಯಿತು. ೧೭೪೭ರ ಹೊತ್ತಿಗೆ ಎಳೆಯ ವಿಜ್ಞಾನಿಗಳು, ಗಣಿತಜ್ಞರು ಎಮಿಲಿಯೊಡನೆ ಅಧ್ಯಯನ ಮಾಡಲು ಆಕೆಯನ್ನು ಹುಡುಕಿಕೊಂಡು ಬರುತ್ತಿದ್ದರು. ಆಗಿನ ಕಾಲಕ್ಕೆ ಹೆಂಗಸೊಬ್ಬಳನ್ನು ಅಧ್ಯಾಪಕಿಯಾಗಿ ಹುಡುಕಿ ಬಂದದ್ದು ಬಹು ಅಪರೂಪದ ಘಟನೆಯಾಗಿತ್ತು. ಎಮಿಲಿ "ನ್ಯೂಟನ್, ಲಾಯಬ್ನಿಜ್, ಡೇಕಾರ್ಟ್ ಅವರ ವಿಚಾರಗಳನ್ನು ತೀಕ್ಷಣವಾಗಿ ಮಂಡಿಸಿದ್ದಳು."[೧] ೧೭೪೯ ಎಮಿಲಿ ಬಾಣಂತಿ ಜ್ವರದಲ್ಲಿ ನರಳಿ ಕೆಲವೇ ದಿನಗಳಲ್ಲಿ ತೀರಿಕೊಂಡಳು. ಆಕೆಯ ಕುಟುಂಬ ಹಾಗೂ ವಾಲ್ಟೈರ್‌ನನ್ನು ದುಃಖದಲ್ಲಿ ಮುಳುಗಿಸಿತು. ತನ್ನ ಕಾಲದ ಮಿತಿಯಲ್ಲಿಯೂ ಎಮಿಲಿಯ ಗಣಿತ ಮತ್ತು ವಿಜ್ಞಾನಕ್ಕೆ ನೀಡಿದ ಕೊಡುಗೆ ಸ್ಮರಣೀಯವಾದದ್ದು.

ಗಣಿತ ಬೃಹತ್ ಗ್ರಂಥದ ಲೇಖಕಿ ಮೇರಿ ಗೆತಾನಾ ಆಗ್ನೇಸಿ ೧೭೧೮-೧೭೯೯

ಮೇರಿ ಇಟಲಿಯ ಮಿಲಾನ್‌ನಲ್ಲಿ ೧೭೧೮ರಲ್ಲಿ ಶ್ರೀಮಂತ ಸುಸಂಸ್ಕೃತ ಕುಟುಂಬದಲ್ಲಿ ಜನಿಸಿದಳು. ಮೇರಿ ಪ್ರತಿಭಾವಂತ ಹುಡುಗಿ, ಆಕೆಯ ತಂದೆಗೆ ಇವಳ ಪ್ರತಿಭೆ ಕಂಡು ತುಂಬಾ ಅಭಿಮಾನ ಪಡುತ್ತಿದ್ದರು. ತಂದೆಯು ಸಹ ಗಣಿತಜ್ಞ, ಆತನ ಪ್ರೋತ್ಸಾಹದಿಂದ ಮೇರಿ ವಿದ್ಯಾಭ್ಯಾಸ ಪಡೆಯಲು ಸಾಧ್ಯವಾಯಿತು. ೧೭೩೮ರಲ್ಲಿ ತತ್ವಶಾಸ್ತ್ರೀಯ ಪ್ರಮೇಯಗಳನ್ನು ಕುರಿತು 'ಪ್ರಪೋಸಿಸ್ಟೋನ್ ಫಿಲಾಸಾಫಿಕೆ' ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದಳು. ಇದು ಸುಪ್ರಸಿದ್ಧ ಗಣಿತದ ಪುಸ್ತಕಗಳಲ್ಲಿ ಒಂದಾಗಿದೆ. ಆಕೆಯ ಎರಡು ಆವೃತ್ತಿಯ 'ಅನಲಿಟಿಕಲ್ ಇನ್‌ಸ್ಟಿಟ್ಯೂಷನ್'

೧.ನೇಮಿಚಂದ್ರ; ಜ್ಞಾನೋದಯ ಕಾಲದ ವಿಜ್ಞಾನಿ, ಪುಟ-೧೪೦

ಬಹಳಷ್ಟು ಆಸಕ್ತಿ ಕುತೂಹಲವನ್ನು ಹುಟ್ಟಿಸಿತ್ತು. ಈ ಪುಸ್ತಕ ಬೀಜಗಣಿತ, ಜ್ಯಾಮಿತಿ, ಸಂಕಲನ ಗಣಿತವನ್ನು ಕುರಿತಂತೆ ಪರಿಪೂರ್ಣವಾದ ಸಮಗ್ರ ಕೃತಿ. ಸ್ತ್ರೀಯರು ಸಹ ಗಣಿತದಂಥ ವಿಷಯಗಳಲ್ಲೂ ಮಿನುಗಬಲ್ಲರು ಎಂದು ತೋರಿಸಿದ್ದಳು. ಹಾಗೂ ಗಂಡು ಹೆಣ್ಣಿನ ಬುದ್ಧಿವಂತಿಕೆಯಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲವೆಂದು ಬಿತ್ತರಿಸಿದ್ದಳು. ಮೇರಿ ಆಗ್ನೆಸಿ ಇಂದಿಗೂ 'ಸೈನು ವಕ್ರರೇಖೆ'ಯನ್ನು ಕುರಿತ ಪದ್ಯರೂಪದ ವರ್ಸಿಯೇರಾ ಎಂಬ ಕೃತಿಗೆ ಪ್ರಸಿದ್ಧಳಾಗಿದ್ದಾಳೆ. ಮೇರಿ ೧೭೯೯ರಲ್ಲಿ ೮೧ನೇ ವಯಸ್ಸಿನಲ್ಲಿ ತೀರಿಕೊಂಡಳು. ಮಹಿಳೆಯು ಸಮಾಜಕ್ಕೆ ನೀಡಬಹುದಾದ ಬೌದ್ಧಿಕ ಕೊಡುಗೆಯ ಉದಾಹರಣೆಯನ್ನು ಮೇರಿಯಲ್ಲಿ ಕಾಣಬಹುದು. ಹಾಗೂ ಸ್ತ್ರೀಯರಿಗೆ ತಮ್ಮ ಕುಟುಂಬ ಜೀವನದ ಒತ್ತಡದ ನಡುವೆಯೂ ಬೌದ್ಧಿಕ ಪರಾಕಾಷ್ಠೆಯನ್ನು ಮುಟ್ಟಲು ಸಾಧ್ಯ ಎಂದು ತೋರಿಸಿದಳು.

ಅನೇಕ ಪ್ರಥಮಗಳ ವಿಜ್ಞಾನಿ ಸೋನ್ಯಾ ಕೋವಲೇಪ್ಸ್ಕಿಯಾ ೧೮೫೦–೧೮೯೧

ವಿಜ್ಞಾನದ ಸಂಸ್ಥೆಗಳ ಕಟು ವಿರೋಧದ ನಡುವೆ ಗಣಿತದಲ್ಲಿ ಡಾಕ್ಟರೇಟ್ ಪದವಿ ಪಡೆದ ಮೊಟ್ಟ ಮೊದಲ ಮಹಿಳೆ ಸೋನ್ಯಾ. ರಷಿಯನ್ ಇಂಪೀರಿಯಲ್ ವಿಜ್ಞಾನ ಅಕಾಡೆಮಿಗೆ ಚುನಾಯಿತಳಾದ ಪ್ರಥಮ ಮಹಿಳೆ. ಸೋನ್ಯಾ ೧೮೫೦ರ ಜನವರಿ ತಿಂಗಳಿನಲ್ಲಿ ಮಾಸ್ಕೋದಲ್ಲಿ ಜನಿಸಿದಳು. ಈಕೆ ಏಕಾಂಗಿಯಾಗಿ, ಅಂತರ್ಮುಖಿಯಾಗಿ ಬೆಳೆದವಳು. ಸ್ವೀಡನ್ನಿನ ಮೊಟ್ಟ ಮೊದಲ ಮಹಿಳಾ ಪ್ರಾಧ್ಯಾಪಕಿ ಎಂದೆನಿಸಿಕೊಂಡವಳು. ಸೋನ್ಯಾ ಅಸಾಮಾನ್ಯ ಪ್ರತಿಭೆಯ ಮಹಿಳೆ. ಈಕೆ ಗಣಿತದ ಸಮೀಕರಣಗಳನ್ನು ವಿವರಿಸುವಷ್ಟೇ ಸಲೀಸಾಗಿ ಶನಿಗ್ರಹದ ಉಂಗುರಗಳ ಬಗ್ಗೆ ಸಂಶೋಧನೆಗೆ ತೊಡಗಿದ್ದಳು. ಜೊತೆಗೆ ಕೇವಲ ಸಾಹಿತಿ, ಗಣಿತಜ್ಞೆಯಷ್ಟೆ ಅಲ್ಲ, ಸ್ತ್ರೀಯರ ಹಕ್ಕುಗಳಿಗೆ ಹೋರಾಡಿದಾಕೆ. ಸಾಮಾಜಿಕ ವಿಷಯಗಳಲ್ಲಿ ತನ್ನ ಪುರೋಗಾಮಿ ಚಿಂತನೆಗಳನ್ನು ಪ್ರತಿಪಾದಿಸಲು ಸೋನ್ಯಾ ತನ್ನ ಬರಹದ ಸಾಮಾರ್ಥ್ಯವನ್ನು ಬಳಸಿಕೊಂಡಳು. ೧೯ನೇ ಶತಮಾನದ ವೈಜ್ಞಾನಿಕ ಜಗತ್ತಿನಲ್ಲಿ ಸೋನ್ಯಾಗೆ ವಿಶೇಷ ಸ್ಥಾನವಿದೆ.

ಅಣ್ವಸ್ತ್ರ ತಯಾರಿಸಲು ನಿರಾಕರಿಸಿದ ವಿಜ್ಞಾನಿ ಲೀ ಮೇಟ್ನರ್ ೧೮೭೮–೧೯೬೮ :

ಅಖಂಡ ಸಾಧನೆಯ ನಂತರವೂ ಚರಿತ್ರೆಯಲ್ಲಿಯೇ ಮರೆತು ಹೋದ ವಿಜ್ಞಾನಿ ಲೀ ಮೇಟ್ನರ್. 'ಯುರೇನಿಯಂ ವಿದಲನ'ವನ್ನು ಮೊಟ್ಟ ಮೊದಲಿಗೆ ವಿವರಿಸಿದ ವಿಜ್ಞಾನಿ ಲೀ ಮೇಟ್ನರ್. ಆಗಸ್ಟ್ ೬, ೧೯೪೫ ಹಿರೋಷಿಮಾದ ಆಗಸದಲ್ಲಿ ಸಹಸ್ರ ಸೂರ್ಯರ ಕಣ್ಣು ಕುಕ್ಕುವ ಬೆಳಕು, ಜಗತ್ತಿನ ಮೊಟ್ಟ ಮೊದಲ ಪರಮಾಣು ಬಾಂಬು ಸ್ಫೋಟಿಸಿತ್ತು. ಒಂದು ಲಕ್ಷಕ್ಕೂ ಹೆಚ್ಚು ಜನರ ಜೀವ ಕಿತ್ತುಕೊಂಡು, ಹಿರೋಷಿಮಾ ನಗರವನ್ನು ಕ್ಷಣದಲ್ಲಿ ಸಂಪೂರ್ಣ ನಾಶ ಮಾಡಿತು. ಯುರೋನಿಯಂ

ವಿದಲನವನ್ನು ವಿವರಿಸಿದ ಈ ವಿಜ್ಞಾನಿ ಅಮೆರಿಕಾ ಆಹ್ವಾನವನ್ನು ತಿರಸ್ಕರಿಸಿ, ಅಣ್ವಸ್ತ್ರವನ್ನು ತಯಾರಿಸಲು ನಿರಾಕರಿಸಿದಳು.

೧೮೭೮ರಲ್ಲಿ ಆಸ್ಟ್ರೀಯಾದ ಯಹೂದಿ ಕುಟುಂಬದಲ್ಲಿ ಜನನ. ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದ ಪ್ರಥಮ ಮಹಿಳೆ. ವಿಜ್ಞಾನ ರಂಗದಲ್ಲಿ ಅಲ್ಪಸಂಖ್ಯಾತರಾದ ಮಹಿಳೆಯರು ಪುರುಷ ಪೂರ್ವಗ್ರಹಗಳನ್ನು ಹೆಜ್ಜೆ ಹೆಜ್ಜೆಗೂ ಎದುರಿಸಬೇಕಿತ್ತು. ಮೇಟ್ನರ್ ಸಹ ಇದಕ್ಕೆ ಹೊರತಾಗಿರಲಿಲ್ಲ. ಒಮ್ಮೆ 'ಎನ್‌ಸೈಕ್ಲೋಪಿಡಿಯಾ'ದ ಸಂಪಾದಕರು ಪ್ರೊ.ಮೇಟ್ನರ್ ಅವರ ಲೇಖನಕ್ಕಾಗಿ ಆತುರದಿಂದ ಪತ್ರ ಬರೆದರು. ಆದರೆ ಮೇಟ್ನರ್ ಮಹಿಳೆ ಎಂದು ತಿಳಿದೊಡನೆ ತಮ್ಮ ಬೇಡಿಕೆಯನ್ನು ಹಿಂತೆಗೆದುಕೊಂಡರು. ಆದರೂ ಆಕೆ ಸಂಶೋಧನೆಯ ಉತ್ಸಾಹವನ್ನು ಕಳೆದುಕೊಳ್ಳಲಿಲ್ಲ. ಮೇಟ್ನರ್ ಫೀಲ್ಡ್ ಆಸ್ಪತ್ರೆಯಲ್ಲಿ ಕ್ಷ-ಕಿರಣ ತಂತ್ರಜ್ಞೆಳಾಗಿಯೂ, ದಾದಿಯಾಗಿಯೂ ದುಡಿದಳು. ಆಕೆಯ ಜೀವಿತ ಕಾಲದಲ್ಲಿ ಆಕೆಗೆ ನ್ಯಾಯವಾಗಿ ಸಲ್ಲಬೇಕಿದ್ದ ಗೌರವ ಪ್ರಶಸ್ತಿಗಳು ದೊರೆಯಲಿಲ್ಲ. ೧೯೯೨ರಲ್ಲಿ ಮೂಲಧಾತುವಿಗೆ 'ಮೇಟ್ನೆರಿಯಮ್' ಎಂಬ ಹೆಸರು ನೀಡಿ ಗೌರವ ಸಲ್ಲಿಸಲಾಗಿದೆ.

ಅಧ್ಯಾಯ – ೫

ಸಮಕಾಲೀನ ಬರಹಗಾರರು ಮತ್ತು ನೇಮಿಚಂದ್ರರ ಗದ್ಯಸಾಹಿತ್ಯ

ಅಧ್ಯಾಯ – ೫

ಸಮಕಾಲೀನ ಬರಹಗಾರರು ಮತ್ತು ನೇಮಿಚಂದ್ರರ ಗದ್ಯ ಸಾಹಿತ್ಯ

ಕನ್ನಡ ಮಹಿಳಾ ಕಥಾಸಾಹಿತ್ಯದ ನಾಲ್ಕನೆಯ ಪೀಳಿಗೆಯ ಲೇಖಕಿಯರಲ್ಲಿ ನೇಮಿಚಂದ್ರ ಅವರು ಪೂರ್ಣವಾಗಿ ಸ್ತ್ರೀವಾದಿ ಚಿಂತನೆಯ ನೆಲೆಯಿಂದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಸಿಕೊಂಡವರು. ನೇಮಿಚಂದ್ರರ ಕತೆಗಳು ಸ್ತ್ರೀ ಶಕ್ತಿಯನ್ನು ಬಿಂಬಿಸುವ ಹಿನ್ನೆಲೆಯಿಂದ ಬಂದ ಕತೆಗಳಾಗಿ ಸ್ತ್ರೀವಾದಿ ನೆಲೆಯು ಸಹ ಪ್ರಧಾನವೆನಿಸುತ್ತದೆ. ಪುರುಷ ಪ್ರಧಾನ ಸಮಾಜ ಸ್ತ್ರೀಯರ ಮೇಲೆ ಹೇರಿರುವ ಪಾತಿವ್ರತ್ಯ, ಶೀಲ ಮುಂತಾದ ಮೌಲ್ಯಗಳನ್ನು ಗಂಭೀರವಾಗಿ ಪರಿಗಣಿಸದ ಕಥಾನಾಯಕಿಯರು, ಪುರುಷ ಪ್ರಾಬಲ್ಯದಿಂದ ಬರುವಂಥಹ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ದಿಟ್ಟತನ ಹಾಗೂ ಛಲಗಾರ್ತಿ ಸ್ತ್ರೀಪಾತ್ರಗಳು ನೇಮಿಚಂಧ್ರ ಅವರ ಕತೆಗಳಲ್ಲಿದ್ದಾರೆ. ಮಹಿಳಾ ಪ್ರಜ್ಞೆ ಬೇರೆ ಬೇರೆ ಸಂಗತಿಗಳಲ್ಲಿ ಹಾಗೂ ಕಾಲಗಳಲ್ಲಿ ಅಭಿವ್ಯಕ್ತಗೊಂಡಿದೆ. ಅವರ ಕತೆಗಳಲ್ಲಿ ಹೆಣ್ಣಿನ ಸಮಸ್ಯೆಗಳಲ್ಲಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ದೃಷ್ಟಿಕೋನದ ವಿವೇಚನೆಯಿದೆ. ನೇಮಿಚಂದ್ರರ ಕತೆಗಳಲ್ಲಿನ ಕಲ್ಪನೆಯ ಸ್ತ್ರೀಪಾತ್ರಗಳು ಬಹಳ ವೈಚಾರಿಕ ಆಲೋಚನೆಯುಳ್ಳ ಕೆಲವು ಸಲ ಸಾಂಪ್ರದಾಯಿಕ ವ್ಯವಸ್ಥೆಗೆ ಆಘಾತವುಂಟು ಮಾಡುವ ಕ್ರಾಂತಿಕಾರಿ ಸ್ತ್ರೀಯರುಗಳಾಗಿದ್ದಾರೆ. ಇಂದು ಮಹಿಳಾ ಸಾಹಿತ್ಯ ಸಾಮಾಜಿಕ ಬದುಕಿನ ಎಲ್ಲಾ ಸಮಸ್ಯೆಗಳಿಗೂ ಸ್ಪಂದಿಸುವಂತಾಗಿದೆ. ವಚನಗಾರ್ತಿಯರ, ಲೇಖಕಿಯರ ವೈಚಾರಿಕತೆಯ ಪ್ರೇರಣೆ ಮಧ್ಯಮವರ್ಗದ ಅನುಭವಗಳೊಂದಿಗೆ ಶೋಷಿತರ ಸಂವೇದನೆಯನ್ನು ಬಿಚ್ಚಿಟ್ಟಿದ್ದಾರೆ. ಪುರುಷನ ಸರಿಸಮಾನವಾಗಿ ಸ್ತ್ರೀಯು ಸಹ ಇಂದು ನಾನಾ ಕ್ಷೇತ್ರಗಳಲ್ಲಿ ಸಮಾನಳಾಗಿ ಭಾಗವಹಿಸುತ್ತಾಳೆ.

ನೇಮಿಚಂದ್ರರ ಕತೆಗಳಲ್ಲಿ ಕಾಣಿಸುವ ಹೊಸ ಹೆಣ್ಣಿನ ಆಕಾರವನ್ನು ಗುರುತಿಸುವ ಪ್ರಯತ್ನ ಮಾಡಬಹುದು. ಕಾಣದ ಗಂಡಿನ ಎಲ್ಲ ಬಗೆಯ ದಮನಗಳಿಂದ ಮುಕ್ತರಾಗಲು ಇವರ ಬರವಣಿಗೆಯ ನಾಯಕಿ ಆಹರ್ನಿಶಿ ಹೋರಾಡುತ್ತಾಳೆ. ಹೆಣ್ಣಿನ ಸವಾಲುಗಳು ಅವಳು ಎದುರಿಸುತ್ತಾ ಹೋದಷ್ಟು ಹೆಚ್ಚಾಗುವ ಪರಿಯನ್ನು ಕುರಿತು ವ್ಯಗ್ರತೆ, ಸೋಲಬಾರದೆನ್ನುವ ಛಲ, ತಾಯಿಯಾಗಿ, ತಂಗಿಯಾಗಿ, ಮಗಳಾಗಿ, ಹೆಂಡತಿಯಾಗಿ, ಪ್ರೇಯಸಿಯಾಗಿ, ಉದ್ಯೋಗಸ್ಥೆಯಾಗಿ, ಗೃಹಿಣಿಯಾಗಿ ಬೇರೆ ಬೇರೆ ಪಾತ್ರಗಳಲ್ಲಿ ಚಿತ್ರಿತವಾಗಿದ್ದಾಳೆ. ತ್ರಿವೇಣಿ, ಕೊಡಗಿನ ಗೌರಮ್ಮ, ವೈದೇಹಿ ಮುಂತಾದ ಪ್ರತಿಭಾವಂತ ಈ ಲೇಖಕಿಯರ ಸಾಲಿನಲ್ಲಿ ನಿಲ್ಲಬಲ್ಲ ಪ್ರತಿಭಾವಂತೆ ನೇಮಿಚಂದ್ರು, ತಮ್ಮ

ಪರಂಪರೆಯ ಹಿರಿಯ ಲೇಖಕಿಯರು ಬರೆದ ಕೆಲವು ಕತೆಗಳನ್ನೇ ನೇಮಿಚಂದ್ರ ಅವರೂ ಬರೆದಿದ್ದಾರೆ. ಬೇರೆ ಧಾಟಿಯಲ್ಲಿ ಬೇರೆ ಹದದಲ್ಲಿ ಬರೆಸಿದ್ದಾರೆ. ತನ್ನ ಕಾಲದ ಕೆಲವು ಅರ್ಥಪೂರ್ಣ ಹುಡುಕಾಟಗಳಲ್ಲಿ ನೇಮಿಚಂದ್ರ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದಾರೆ. ಮತ್ತು ಸ್ವತಃ ಕೆಲವು ಕ್ಷೇತ್ರಗಳಲ್ಲಿ ಹೊಸ ಬೆಳಕು ಹಾಯಿಸಿದ್ದಾರೆ ಎನ್ನುವುದು ಮುಖ್ಯವಾದ ಮಾತು.

ನವೋದಯ ಬರಹಗಾರರಿಗಿಂತ ನೇಮಿಚಂದ್ರ ನಿರ್ಣಾಯಕವಾಗಿ ಭಿನ್ನರಾಗುವುದು, ತಾಳ್ಮೆ, ಸಹನಶೀಲತೆಗೆ ಹೆಸರಾದ ಮಾಸ್ತಿ, ಕಾರಂತರ ಬಹಳಷ್ಟು ಸ್ತ್ರೀಪಾತ್ರಗಳಿಗಿಮತ ಭಿನ್ನವಾದ ಮಾದರಿಗಳನ್ನು ನೇಮಿಚಂದ್ರ ಸೃಷ್ಟಿಸಿದ್ದಾರೆ. ಇವರ ಪಾತ್ರಗಳು ಸರಳ ಬಂಡಾಯದ ಮಾದರಿಗಳಲ್ಲ, ಅರಿವಿನ ಸ್ಫೋಟ ಅರ್ಥಪೂರ್ಣ ಕ್ರಿಯೆಯನ್ನು ಪ್ರಚೋದಿಸಿ ಹೆಣ್ಣು ತಾನೇ ಸ್ವತಃ ತೊಟ್ಟ ಅಥವಾ ತನಗೆ ತೊಡಿಸಿದ ಕವಚಗಳಿಂದ ನಿಧನಿಧಾನವಾಗಿ ಹೊರಬಂದು ಹೊಸ ಮನುಷ್ಯಳಾಗುವ ಪ್ರಕ್ರಿಯೆ ನೇಮಿಚಂದ್ರ ಅವರ ಕತೆಯನ್ನು ಕಟ್ಟುತ್ತದೆ.

'ಕಪ್ಪುಮೋಡ ಬೆಳ್ಳಿಅಂಚು' ಕಥೆಯಲ್ಲಿ ಮಧು ತನ್ನ ಗಂಡ ರವಿಯನ್ನು ಎಷ್ಟು ಅವಲಂಭಿಸಿರುತ್ತಾಳೆಂದರೆ ಆ ಅವಲಂಬನೆ ತನ್ನ ವ್ಯಕ್ತಿತ್ವವನ್ನೇ ನುಂಗಿ ಹಾಕಿರುವುದನ್ನು ಗ್ರಹಿಸಲಾರದವಳಾಗಿರುತ್ತಾಳೆ. ಈ ಅವಲಂಬನೆ ಅವಳಿಗೆ ಅಲ್ಪ ತೃಪ್ತಿಯನ್ನು ತಂದು ಬಿಟ್ಟಿದೆ. ಬದುಕಿನ ಬಗ್ಗೆ ಅವಳ ಜವಾಬ್ದಾರಿಯನ್ನು ಮರೆಸಿಬಿಟ್ಟಿದೆ. ರವಿ ತನ್ನ ಹೆಂಡತಿಯನ್ನು ತ್ಯಜಿಸಿದಾಗ ಅವಳು ತನ್ನ ಬದುಕಿಗೆ ತಾನೇ ಜವಾಬ್ದಾರಳಾಗಬೇಕಾಗುತ್ತದೆ. ರವಿ ಮಧುವನ್ನು ಬಿಡಲು ಕಾರಣ "ನಮ್ಮ ನಡುವೆ ಏನೂ ಉಳಿದಿಲ್ಲ. . . . ನನ್ನ ಮನಸ್ಸು ಬೇರೆಲ್ಲಿಗೋ ಹಾರಿದೆ ನಾ ಸ್ವತಂತ್ರನಾಗ ಬಯಸುತ್ತೇನೆ"[೧] ಕಥೆ ರವಿಯ ವರ್ತನೆಯನ್ನು ಹಲವು ಕೋನಗಳಿಂದ ವಿಮರ್ಶಿಸುತ್ತದೆ. ಮಧುಗೆ ತಮ್ಮ ಸಂಬಂಧ ವ್ಯರ್ಥ ಸಂಬಂಧ ಅನಿಸಿಬಿಟ್ಟು ವಿಚ್ಛೇದನಾ ಅರ್ಜಿಗೆ ಸಹಿ ಹಾಕಿರುತ್ತಾಳೆ. ತಾನೇ ಒಡ್ಡಿಕೊಂಡ ಅವಲಂಬನೆಯು ಮಯಣದರವಮನೆ ಕರಗುತ್ತಿದ್ದಂತೆ ಇದೇ ಮಧು ಇಡೀ ಪ್ರಕರಣವನ್ನು ಇನ್ನೊಂದು ನೆಲೆಯಲ್ಲಿ ನೋಡುವ ಪ್ರಯತ್ನ ಮಾಡುತ್ತಾಳೆ. "ಕಿಡಿಗೇಡಿ ಪ್ರಶ್ನೆಯೊಂದು ಕಣ್ಣು ಮಿಟುಕಿಸಿತು. ಶೋಷಿತರು ಯಾರು? ನಾನೇ, ಅವಳೇ? ಯೌವನವನ್ನೆಲ್ಲ ಅವನಿಗೆ ಅರ್ಪಿಸಿ ಖಾಲಿಯಾದ ನಾನೇ, ಇಲ್ಲ ಇಪ್ಪತ್ತರ ಕುಡಿ ಯೌವನವನ್ನು ಅವನಿಗೆ ಅರ್ಪಿಸಿ ಹೊರಟ ಅವಳೇ? ಎಂಥ ಹುಚ್ಚಿಯರು?

೧.ನೇಮಿಚಂದ್ರ; ಕಪ್ಪು ಅಂಚು ಬೆಳ್ಳಿಮೋಡ, ಪುಟ-೨೨೪

ಅರೆ ಗಂಡನಿಗೂ ಪೂರ್ಣ 'ಸತಿ' ಯಾದವರು?"[೧]

ಮಧುಳ ಸ್ನೇಹಿತೆ ಶೀಲಾ ಆಕೆಯ ಸಮಸ್ಯೆಯನ್ನು ತೀರಾ ಭಿನ್ನ ರೀತಿಯಲ್ಲಿ ವಿವೇಚಿಸುತ್ತಾಳೆ. ಮಧು ಹೇಳುವ ಪ್ರೀತಿ, ಪ್ರೇಮ, ವಿವಾಹದ ಪವಿತ್ರ ಬಂಧನಗಳನ್ನು ತಮಾಷೆ ಮಾಡುವಂತೆ ಅಸಹಾಯಕ ಸಿಟ್ಟು ತೋರಿಕೆಯ ಆತ್ಮಗೌರವಗಳನ್ನು ಲೇವಡಿ ಮಾಡುತ್ತಾಳೆ. ಮೂರನೆಯ ಹೆಣ್ಣು ಖಳನಾಯಕಿಯಾಗಬೇಕಿಲ್ಲ. ಒಂದು ದಿನದಲ್ಲಿ ಜೀವನಕ್ರಮ ಬದಲಾಗಿಬಿಡುವುದಿಲ್ಲ ಎಂದು ತೂಕದ ಮಾತುಗಳನ್ನಾಡುವ ಶೀಲಾ ಒಂದು ಘಟ್ಟದಲ್ಲಿ 'ನಾ ಅನುಕಂಪ ಸುರಿಸಬಹುದು. ನಿನ್ನ ಪರವಹಿಸಿ ಅವನಿಗಿಷ್ಟು ಹಿಡಿ ಹಾಕಬಹುದು. ಹೇಳು ಅದರಿಂದ ಏನು ಪ್ರಯೋಜನ?' ಎಂದು ತನ್ನ ಧೋರಣೆಯನ್ನು ಸ್ಪಷ್ಟಪಡಿಸುತ್ತಾಳೆ. ಅವಲಂಬನೆ ಮಧುಳ ಕೇವಲ ಭೌತಿಕ ಸ್ಥಿತಿಯಾಗಿರದೆ ಅದು ಅವಳ ಮಾನಸಿಕ ಸ್ಥಿತಿಯೂ ಆಗಿರುತ್ತದೆ ಎಂಬ ನಿಷ್ಟುರ ಸತ್ಯವನ್ನು ಕಥೆ ಅವಳ ಬಗ್ಗೆ ಸಹಾನುಭೂತಿ ಕಳೆದುಕೊಳ್ಳದೆಯೇ ದಾಖಲಿಸುತ್ತದೆ. ಹಾಗಾಗಿ ಈ ಅವಲಂಬಿತ ಸ್ಥಿತಿಯಿಂದ ಸ್ವಾವಲಂಬನೆಯ ಸಾಧ್ಯತೆಯತ್ತ ಮಧುಳ ಕಷ್ಟಸಾಧ್ಯ ಚಲನೆಯ ಪ್ರಕ್ರಿಯೆಯನ್ನು ಅವೇಶವಿಲ್ಲದಂತೆ ಚಿತ್ರಿಸಲು ಲೇಖಕಿಗೆ ಸಾಧ್ಯವಾಗಿದೆ. ಕೇವಲ ನೆನಪುಗಳೊಡನೆ ಗುದ್ದಾಡುತ್ತಿದ್ದ ಮಧು ಕ್ರಮೇಣ "ಭೂತವನ್ನು ಅಳಿಸುವ ಶ್ರಮವೇಕೆ? ಭೂತವನ್ನು, ಭೂತವಾಗಿ ಸ್ವೀಕರಿಸಿಬಿಟ್ಟರಾಯಿತು, ಭವಿಷ್ಯವಾಗಲು ಬಿಡದೆ"[೨] ಎಂಬ ಸ್ಥಿತಿಯನ್ನು ತಲುಪುತ್ತಾಳೆ. ಅರಿವಿನ ಸ್ಫೋಟ ಕ್ರಿಯೆಯಲ್ಲೂ ನಿಜವಾಗುತ್ತದೆ. 'ಮೆಲ್ಲ ಮೆಲ್ಲನೆ ನನ್ನ ಮುದುಡಿದ ನೈಟಿಯ ಕವಚದಿಂದ ಪೂರ್ಣಪ್ರಮಾಣದ ಮಹಿಳಾ ಉದ್ಯಮಿ ಹೊರಬಂದಳು . . . .'

ಮಧು ತನ್ನ ಮನಸ್ಸಿನ ಕಹಿಯನ್ನು ಪೂರ್ಣವಾಗಿ ತೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ವಿಜಯದ ಗಳಿಗೆಯಲ್ಲೂ ಪೂರ್ಣವಾಗಿ ತೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ವಿಜಯದ ಗಳಿಗೆಯಲ್ಲೂ ಪೂರ್ಣವಾಗಿ ತೊಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ತನ್ನ ವಿಜಯದ ಗಳಿಗೆಯಲ್ಲೂ ಅವಳು ರವಿಯಲ್ಲಿ ಅಪರಾಧಿ ಪ್ರಜ್ಞೆಯನ್ನು ಗುರುತಿಸಿ ಹೊರಡುತ್ತಾಳೆ. ಇದಕ್ಕೆ ಪ್ರಾಯಶಃ ಇನ್ನೂ ಒಂದು ಕಾರಣವಿದೆ. ಅವಳಿಗೆ ರವಿಯೊಂದಿಗೆ ಸಂಬಂಧವನ್ನು ಪೂರ್ತಿಯಾಗಿ ತೊರೆಯಲು ಸಾಧ್ಯವಿಲ್ಲ. ಪ್ರೀತಿಯಲ್ಲಾಗಲೀ, ಅವಲಂಬನೆಯಲ್ಲಾಗಲೀ, ದ್ವೇಷದಲ್ಲಾಗಲೀ ಅದು

೧.ನೇಮಿಚಂದ್ರ; ಕಪ್ಪುಮೋಡ ಬೆಳ್ಳಿಅಂಚು, ಪುಟ-೨೨೭
೨.ಅದೇ, ಪುಟ-೨೪೧

ಅಭಿವ್ಯಕ್ತಗೊಳ್ಳಲೇಬೇಕು. ನನ್ನ ಪತಿಯ ಸ್ಥಾನದಿಂದ ನಿವೃತ್ತನಾದರೂ ಪುಟ್ಟಿಯ ಅಪ್ಪನಾಗಿ ಅವನ ಕರ್ತವ್ಯಗಳಿವೆ'[೧] ಜೀವನಾಂಶ ಕುರಿತು ಮಧುಳ ಸ್ವಗತಕ್ಕೆ ವಿವರಣೆಗೆ ಸಿಕ್ಕದ ಇನ್ನು ಹಲವು ಒತ್ತಡಗಳಿದ್ದವು. 'ಶೀಲಾ ಏನೇ ಹೇಳಿದರೂ ನನ್ನ ಅವಳ ನಡುವೆ ಅವಲಂಬನೆಯ ಹೊರತಾಗಿಯೂ ಒಂದು ಸಂಬಂಧವಿತ್ತು. ಪ್ರೀತಿಯೋ, ಪ್ರೇಮವೋ ಯಾವುದೋ ಒಂದು ನನ್ನನ್ನು ಈ ವೈವಾಹಿಕ ನಿಶ್ಚಿಂತೆಯಲ್ಲಿ ಸುಷುಪ್ತಯಲ್ಲಿ ಮಲಗಿಸಿದ ಒಂದಿಷ್ಟು ಸಿಹಿ ವರ್ಷಗಳು . . . .' ಹೀಗೆ ಕಥೆ ಹಲವು ಕಡೆ ಜಗ್ಗುವ ಅಲೆಗಳನ್ನು ತನ್ನ ರಚನಾ ವಿನ್ಯಾಸದಲ್ಲೆ ತಡೆಯುತ್ತ ಸಮತೋಲನವನ್ನು ಸಾಧಿಸುತ್ತದೆ. ರವಿಯನ್ನು ಕಟಕಟೆಯಲ್ಲಿ ನಿಲ್ಲಿಸುತ್ತಲೇ ಅವನ ಕ್ರಿಯೆಗೆ ಮಧು ರೂಢಿಸಿಕೊಂಡ ಜೀವನಕ್ರಮವೂ ಕಾರಣವಾಗಿರಬಹುದೇ ಎಂಬ ಸೂಕ್ಷ್ಮ ಪ್ರಶ್ನೆಯನ್ನು ಕಥೆಯ ಒಳಗೇ ಹೊಳಯಿಸಿ ಲೇಖಕಿ ಕಥೆಯ ವಿನ್ಯಾಸವನ್ನು ಸಂಕೀರ್ಣಗೊಳಿಸಿದ್ದಾರೆ. ಕೇವಲ ತಾಳಿಕೆ ಇಲ್ಲವೇ ಅರ್ಥ ಸೂಚಿಸದ ಸಿಡಿತಗಳ ಮಾದರಿಗಿಂತ ಭಿನ್ನವಾದದ್ದನ್ನೂ, ಸ್ವಾತಿಕವಾದರೂ ಕ್ರಿಯಾಶೀಲವಾಗಿರುವಂಥದ್ದನ್ನೂ ಕಥೆ ಸೃಷ್ಟಿಸಬಯಸುತ್ತದೆ. ಘೋಷಿತ ಸಮತೋಲನ ಕಥೆಯ ಒಂದು ಪಾತ್ರವಾದ ಶೀಲಳಿಂದ ಸೂಚಿತವಾದರೂ ಕಥೆ ತನ್ನ ಸೃಜನಶೀಲ ಪ್ರಕ್ರಿಯೆಯಲ್ಲಿ ಅವಳನ್ನು ಮೀರಿ ಬೆಳೆಯುತ್ತದೆ. ಈ ಸವಾಲುಗಳನ್ನು ಎದುರಿಸುವ ಪ್ರಕ್ರಿಯೆಯಲ್ಲಿಯೇ ಬದುಕಿನ ಚೇತೋಹಾರಿ ಗುಣಗಳು ಹಿಂದೆಂದಿಗಿಂತ ಹೆಚ್ಚು ತೀವ್ರವಾಗಿ ನಮ್ಮ ಅನುಭವಕ್ಕೆ ಬರುವುದನ್ನು ನೇಮಿಚಂದ್ರರ ಕತೆಗಳು ಶಕ್ತವಾಗಿ ತೋರಿಸಿಕೊಡುತ್ತವೆ.

ನೇಮಿಚಂದ್ರ 'ಹೊಸಹುಟ್ಟು' ತಾಯ್ತನವನ್ನು ಪಡೆಯಲಾಗದ ಕಲಾವಿದೆಯೊಬ್ಬಳ ಕತೆ. ವೃತ್ತಿಪರತೆಯಲ್ಲಿ ನಂಬಿಕೆ ಇಟ್ಟ ಕಲಾವಿದೆಗೆ ಆರಂಭದಲ್ಲಿ ತಾಯ್ತನ ಒಂದು ತೊಡಕು ಎನಿಸಿದರೂ ಮುಂದುವರಿದ ಘಟ್ಟದಲ್ಲಿ ಮಗು ಬೇಕು ಎನಿಸಿದಾಗ ಜೈವಿಕವಾಗಿ ತಾನು ತಾಯಿಯಾಗಲು ಸಾಧ್ಯವಿಲ್ಲ ಎನಿಸಿ ಕಂಗಾಲಾಗುತ್ತಾಳೆ. ಏನೆಲ್ಲ ಪ್ರಯತ್ನಗಳ ನಂತರವೂ ಇದು ಆಗದ್ದು ಎನಿಸಿದಾಗ, ಕುಸಿದವಳಿಗೆ ಸಹ ಕಲಾವಿದೆಯೊಬ್ಬಳು, ತಾಯ್ತನದ ವ್ಯಾಖ್ಯಾನವನ್ನೇ ವಿಸ್ತರಿಸಿ, ಮಾರ್ಪಡಿಸಿ ಇವಳೆದುರಿಗೆ ಮಂಡಿಸಿದಾಗ ತಾಯ್ತನವೇ ದೊರೆತ ನೆಮ್ಮದಿಯನ್ನು ಇವಳು ಅನುಭವಿಸುತ್ತಾಳೆ. "ತಾಯ್ತನವೆನ್ನುವುದು ಸೃಷ್ಟಿಕ್ರಿಯೆ ಎಂದಾದರೆ, ನೀನು ರಚಿಸುವ ಕಲಾಕೃತಿಗಳೇ ನಿನ್ನ ಮಕ್ಕಳಲ್ಲವೇ?"[೨] ಎನ್ನುವ ಗೆಳತಿಯ

---

೧. ನೇಮಿಚಂದ್ರ; ಕಪ್ಪುಮೋಡ ಬೆಳ್ಳಿಅಂಚು, ಪುಟ-೨೩೪

೨. ನೇಮಿಚಂದ್ರ; ಹೊಸಹುಟ್ಟು, ಪುಟ-೨೭೯

ದೃಷ್ಟಿಕೋನ ಶಂಕೆಯಿಲ್ಲದ ದೃಢ ನಂಬಿಕೆಯನ್ನು ಇವಳಲ್ಲಿ ಹುಟ್ಟಿಸುತ್ತದೆ. ತಾಯ್ತನದ ಕೊರತೆ ತನಗಿಲ್ಲ ಎನ್ನುವ ಆತ್ಮವಿಶ್ವಾಸವನ್ನು ಇದು ಅವಳಲ್ಲಿ ತುಂಬುತ್ತದೆ. ಈ ಕತೆಯ ಮಹತ್ವ ಇರುವುದು ತಾಯ್ತನದ ವ್ಯಾಖ್ಯಾನವನ್ನು ವಿಸ್ತರಿಸಿರುವುದರಲ್ಲಿ ಮತ್ತು ಈ ಮೂಲಕ ಹೆಣ್ಣಿನ ವ್ಯಕ್ತಿತ್ವದ ವ್ಯಾಖ್ಯಾನವನ್ನು ಭಿತ್ತಿಯನ್ನೂ ಇದು ಅದ್ಭುತವಾಗಿ ವಿಸ್ತರಿಸುತ್ತದೆ ಎನ್ನುವ ಕಾರಣಕ್ಕೆ.

ನೇಮಿಚಂದ್ರರ ಎರಡು ಕತೆಗಳು ಯಶಸ್ವಿಯಾಗಿ ಮುರಿದುಕಟ್ಟುತ್ತವೆ. ಆಗೋಚರವು ಅಧೀನವೂ ಆಗಿದ್ದ ಹೆಣ್ಣಿನ ನೆಲೆಗಳನ್ನು ಸ್ವಾಯತ್ತ ನೆಲೆಗೂ ಆಯ್ಕೆಯ ನೆಲೆಗೂ ಈ ಕತೆಗಳೂ ಪಲ್ಲಟಿಸುತ್ತವೆ. ಅನಿವಾರ್ಯವಾದಾಗಲೂ ಅದನ್ನು ಹೆಣ್ಣು ತನ್ನಿಚ್ಛೆಯಂತೆ ರಚಿಸಿಕೊಳ್ಳುವ ಮೂಲಕ ಅಗತ್ಯವಾದ ಅವಕಾಶವನ್ನು ಸೃಷ್ಟಿಸಿಕೊಳ್ಳುವ ವ್ಯಕ್ತಿ ಸ್ವಾತಂತ್ರ್ಯವನ್ನು ಇವುಬಲವಾಗಿ ಪ್ರತಿಪಾದಿಸುತ್ತವೆ. ಪ್ರತಿಕೂಲ ಪರಿಸ್ಥಿತಿಯನ್ನು ತನ್ನತನದ ರಚನೆಗೆ ಬಳಸಿ ಗೆಲ್ಲುವ ಈ ನಾಯಕಿಯರು ನಮ್ಮ ನಡುವಿನ ಹೊಸ ಹೆಣ್ಣಿನ ಮಾದರಿಗಳು.

ಡಾ.ಅನುಪಮಾ ನಿರಂಜನ ಅವರು ಕನ್ನಡದ ಪ್ರಮುಖ ಲೇಖಕಿ. ಪುರುಷನಷ್ಟೇ ಸಮರ್ಥವಾಗಿ ಗಟ್ಟಿಯಾಗಿ ಬರೆಯಬಲ್ಲಳೆಂಬುದನ್ನು ಅನುಪಮಾ ತಮ್ಮ ಕೃತಿಗಳ ಮೂಐಲಕ ತೋರಿಸಿಕೊಟ್ಟಿದ್ದಾರೆ. ವೈಚಾರಿಕತೆಯ ಲೇಖಕಿಯರ ಸಾಲಿನಲ್ಲಿ ಕೂಡ ಅನುಪಮಾ ಅವರದ್ದು ದೊಡ್ಡ ಹೆಸರು. ಅವರ 'ಆಳ' ಕಾದಂಬರಿಯ ನಾಯಕಿ ಮಾಲಿನಿ ಬೌದ್ಧಿಕ ಸೌಖ್ಯವನ್ನು ಬಯಸಿ ರವೀಂದ್ರನನ್ನು ಮದುವೆಯಾದರೆ, ರವೀಂದ್ರ ಅವಳಿಂದ ಬಯಸುವುದು ಕೇವಲ ದೈಹಿಕ ಸೌಖ್ಯ ಮತ್ತು ವಿಧೇಯತೆ. ಗಂಡ ಹೆಂಡತಿಯನ್ನು ದೂರವಿರಿಸಿ ಮತ್ತೊಂದು ಮದುವೆಯಾಗಬಹುದು. ಆದರೆ ಈ ಕಾದಂಬರಿಯಲ್ಲಿ ಹೆಂಡತಿಯಾದ ಮಾಲಿನಿ ತನ್ನ ಗಂಡನ ಆಹಂಭಾವ ಮನೋಭಾವದ ವಿರುದ್ಧ ದಂಡೆದ್ದು ಸ್ವಾಭಿಮಾನಕ್ಕೆ ಬೆಲೆಕೊಟ್ಟು ಆತನಿಂದ ದೂರವಾಗಿ ಬಿಡುತ್ತಾಳೆ. ಈ ಕಾದಂಬರಿಯ ನಾಯಕಿ ಮಾಲಿನಿ ಹನ್ನೆರಡನೇ ಶತಮಾನದ ಅಕ್ಕಮಹಾದೇವಿಯನ್ನು ನೆನಪಿಗೆ ತರುತ್ತಾಳೆ. ಕೇವಲ ಕಾಮುಕನಾಗಿ ಕಂಡ ಕೌಶಿಕ ಕೊನೆಗೂ ಅಕ್ಕಮಹಾದೇವಿಯನ್ನು ಮನಃಪೂರ್ವಕವಾಗಿ ಪಡೆಯಲು ವಿಫಲನಾಗುತ್ತಾನೆ. ಪ್ರಭುವು ಆಗಿದ್ದ, ಪತಿಯೂ ಕೌಶಿಕರಾಜನನ್ನು ತಿರಸ್ಕರಿಸುವುದರ ಮೂಲಕ ಅಕ್ಕಮಹಾದೇವಿ ಆತ್ಮಗೌರವಕ್ಕೆ ಬೆಲೆ ಕೊಡುತ್ತಾಳೆ. ಕೇವಲ ಕಾಮುಕ ಭಾವನೆಯಿಂದ ಕೂಡಿದ ಅಹಂಕಾರಿಯೊಂದಿಗೆ ಬಾಳುವುದಕ್ಕಿಂತ ಕಾಣದ ಚೆನ್ನಮಲ್ಲಿಕಾರ್ಜುನನಲ್ಲಿ ಪತಿಸುಖವನ್ನರಸುತ್ತಾಳೆ. ಇಲ್ಲಿಯೂ ಕೂಡ ಮಾಲಿನಿ ಈ ಪುರುಷ ಪ್ರಧಾನ ವ್ಯವಸ್ಥೆಯ ನಾಡಿನಲ್ಲಿ ಹೊಸ ತೀರ್ಮಾನ ತೆಗೆದುಕೊಳ್ಳುವುದರ ಮೂಲಕ ವಿಧೇಯತೆಗಿಂತ ವಿನಯ ದೊಡ್ಡದು,

ಶರಣಾಗತಿಗಿಂತ ಸ್ವಾಭಿಮಾನ ಹೆಚ್ಚಿನದು ಎಂದು ಸಿದ್ಧಪಡಿಸಿ ತೋರಿಸುತ್ತಾಳೆ. ಆದುದರಿಂದ ಅವರ 'ಆಳ' ಕಾದಂಬರಿಯು ವಿಶಿಷ್ಟವಾಗಿ ಕಾಣುತ್ತದೆ.

ಡಾ.ಅನುಪಮ ನಿರಂಜನರ ಇನ್ನೊಂದು ವಿಶಿಷ್ಟ ಕಾದಂಬರಿ 'ಋಣ'. ಇದರಲ್ಲಿ ಸ್ವತಂತ್ರಕ್ಕೂ ಮುಂಚೆ ಇದ್ದ ಜೀವನಚಿತ್ರಣವನ್ನು ಕಾಣಬಹುದು. ಇಲ್ಲಿ ಬರುವ ಮುಖ್ಯ ಪಾತ್ರ ಗೋದಾವರಿಯದು. ಇವಳು ಅತ್ಯಂತ ಸರಳ ಸ್ವಭಾವದ ಬಿಚ್ಚು ಮನಸ್ಸಿನ, ಕುಟುಂಬವೇ ಸರ್ವಸ್ವವೆಂದು ಭಾವಿಸಿದ ಹೆಣ್ಣಾಗಿ ಚಿತ್ರಿತಳಾಗಿದ್ದಾಳೆ. ಕುಡುಕ, ಕಾಮುಕ ಗಂಡನ ದುಷ್ಟತನ, ಕೆಟ್ಟ ಚಾಳಿಗಳನ್ನು ವಿರೋಧಿಸಲಾಗದೆ, ತಿದ್ದಲಾಗದೆ ಸಹನೆ, ತಾಳ್ಮೆಗಳ ಪ್ರತಿರೂಪವಾಗಿ ಬಾಳಿದವಳು ಗೋದಾವರಿ. ಮಕ್ಕಳಾದ ರಾಜೀವ ಮತ್ತು ರಂಗನಾಥರ ದೌರ್ಜನ್ಯ, ಶೋಷಣೆಗಳನ್ನು ಅನುಭವಿಸಿ ಕೊನೆಯಲ್ಲಿ ಯಾರು ದಿಕ್ಕಿಲ್ಲದಂತಾಗಿ ಕಾಯಿಲೆಯಿಂದ ನರಳಿ ಒಕ್ಕಲು ಮಗನ ಬಳಿಯಿದ್ದು, ಕೊನೆಯುಸಿರು ಎಳೆಯುತ್ತಾಳೆ. ತನ್ನನನ್ನು ಆಶ್ರಯಿಸಿ ಬಂದ ಎಲ್ಲರಿಗೂ ಒಳ್ಳೆಯದನ್ನೇ ಮಾಡಬೇಕು ಎಂದು ಯಾರನ್ನು ಹಳಿಯದೆ ಕೊನೆಯವರೆಗೆ ದೇವರ ಧ್ಯಾನದಲ್ಲಿ ತನ್ನೆಲ್ಲಾ ಸಮಯವನ್ನು ಕಂಡುಕೊಳ್ಳುತ್ತಾ ನರಳಿ ಸಾಯುತ್ತಾಳೆ.

ರಾಮಣ್ಣ ದುಷ್ಟ ಮತ್ತು ಕಾಮುಕನಾಗಿ ಕಂಡು ಬರುತ್ತಾನೆ. ಈತ ಗೋದಾವರಿಯ ಗಂಡ. 'ಋಣ' ಕಾದಂಬರಿಯಲ್ಲಿ ಹಳ್ಳಿಯ ಮುಗ್ಧ ಹುಡುಗಿ ಹಾಗೂ ತಮ್ಮ ಮನೆಯ ಒಕ್ಕಲು ಮಗಳು ಆಗಿದ್ದ ಮಲ್ಲಿಯನ್ನು ತನ್ನ ಕಾಮಕ್ಕೆ ಬಲಿಯಾಗಿಸಿಕೊಳ್ಳುತ್ತಾನೆ ರಾಮಣ್ಣ. ತನ್ನ ತಪ್ಪು ಯಾರಿಗೂ ತಿಳಿಯದಂತೆ ಎಚ್ಚರವಹಿಸುತಾನೆ. ಮತ್ತೆ ಅವಳ ಕಡೇ ತಿರುಗಿಯೂ ನೋಡುವುದಿಲ್ಲ. ಮಲ್ಲಿ ಮಗು ಹೆತ್ತು ಕಾಯಿಲೆಯಿಂದ ಸತ್ತು ಹೋದ ಸುದ್ದಿ ಕೇಳಿ ಸಂತೋಷ ಪಡುತ್ತಾನೆ. ಕೆಲವು ಕಾಲದ ನಂತರ ರಾಮಣ್ಣನೂ ಸಹ ಪಾಶ್ವವಾಯುವಿನಿಂದ ನರಳುತ್ತಾ ಮಲಗಿದ್ದು, ಇನ್ನೂ ತನ್ನ ಅಂತ್ಯ ಬಂತು ಎಂದು ತಿಳಿದಾಗ, ತಾನು ಮಾಡಿದ ತಪ್ಪನ್ನು ತನ್ನ ಹೆಂಡತಿ ಗೋದಾವರಿಗೆ ಹೇಳಿ ಸಾಯುತ್ತಾನೆ. ಗೋದಾವರಿಯ ದೊಡ್ಡ ಮಗ ರಾಜೀವ ಸ್ವಾರ್ಥಿಯಾಗಿ ಬೆಳೆಯುತ್ತಾನೆ. ತನ್ನ ತಂದೆ ಸತ್ತ ನಂತರ ಬಂದ ಇನ್ಸೂರೆನ್ಸ್ ಹಣ ಪಡೆಯಲು ತಾಯಿಯ ಬಳಿ ವ್ಯಾಪಾರ ಮಾಡುತ್ಥೇನೆ ಎಂದು ಹೇಳಿ ಹಣ ಪಡೆಯುತ್ತಾನೆ. ತಾನು ಇಷ್ಟಪಟ್ಟ ಹುಡುಗಿಯೊಂದಿಗೆ ಮದುವೆಯಾಗಿ ತಾಯಿಯನ್ನು ಬಿಟ್ಟು ಬೇರೆ ಮನೆಯಲ್ಲಿ ವಾಸಿಸಲು ಆರಂಭಿಸುತ್ತಾನೆ.

ಎರಡನೆಯ ಮಗ ರಂಗನಾಥ ಚಿಕ್ಕಂದಿನಿಂದಲೂ ತಾಯಿ ಎಂದರೆ ಅತಿ ಪ್ರೀತಿ. ತಾಯಿ ಹೇಳಿದಂತೆ ಕೇಳುತ್ತಾನೆ. ತಾಯಿ ತೋರಿಸಿದ ಹುಡುಗಿಯನ್ನು ಮದುವೆಯಾಗುತ್ತಾನೆ. ತನ್ನ ಹೆಂಡತಿ

ಹಾಗೂ ಮಾವ ಇಬ್ಬರೂ ಸೇರಿ ತನ್ನ ತಾಯಿಗೆ ಮೋಸ ಮಾಡಿದ್ದಾರೆ ಎಂದು ತಿಳಿದು ಮಾವನನ್ನು ಒಡೆದು ಸಾಯಿಸಿ ಜೈಲಿಗೆ ಹೋಗುತ್ತಾನೆ. ತಾಯಿಯ ಈ ಸ್ಥಿತಿಗೆ ತಾನೇ ಕಾರಣ ಎನ್ನುವಂತೆ ಸಂಕಟ ಪಡುತ್ತಾನೆ ರಂಗನಾಥ. ರಾಮಣ್ಣನ ಕಾಮಕ್ಕೆ ಬಲಿಯಾಗಿದ್ದ ಮಲ್ಲಿಗೆ ಒಂದು ಗಂಡು ಮಗು ಆಗುತ್ತದೆ. ಆ ಮಗುವಿಗೆ ಶಾಮ ಎಂದು ಹೆಸರಿಡುತ್ತಾಳೆ. ಆದರೆ ಆ ವಿಷಯವನ್ನು ಯಾರಿಗೂ ಹೇಳದೆ ಮಗನನ್ನು ಸಾಕಿ ಬೆಳೆಸುತ್ತಾಳೆ. ಮಗುವಿಗೆ ಬುದ್ಧಿ ಬರುವ ಮೊದಲೇ ಮಲ್ಲಿ ಸತ್ತು ಹೋಗುತ್ತಾಳೆ. ತಾಯಿ ಮುಖ ಕಾಣದೆ ಬೆಳೆದನು. ಗೋದಾವರಿ ಎಲ್ಲವನ್ನು ಕಳೆದುಕೊಂಡು ಹಳ್ಳಿಗೆ ಬಂದಾಗ, ಆಕೆಯನ್ನು ತನ್ನ ಸ್ವಂತ ತಾಯಿಯಂತೆ ಕಾಣುತ್ತಾನೆ. ಅವಳು ಕೊನೆಯುಸಿರು ಎಳೆಯುವವರೆಗೂ ಆಕೆಯ ಜೊತೆಯಲ್ಲಿದ್ದು ಆರೈಕೆ ಮಾಡುತ್ತಾನೆ. ಬಿತ್ತಿದಂತೆ ಬೆಳೆ, ಒಳ್ಳೆಯ ಬೀಜಕ್ಕೆ ಒಳ್ಳೆಯ ಬೆಲೆ, ಕೆಟ್ಟ ಬೀಜಕ್ಕೆ ಕೆಟ್ಟ ಬೆಳೆ ಎಂಬ ಜಾಣ ಮಾತಿನಂತೆ, ರಾಮಣ್ಣ ಆದಾಯಕ್ಕಿಂತ ಹೆಚ್ಚಿನ ಲಾಭ ಬಯಸಿ ಕೆಟ್ಟ ಕಾರ್ಯಕ್ಕೆ ಇಳಿದಿರುತ್ತಾನೆ. ಅದರಿಂದ ಹೊರಬರಲಾಗದೆ ಅದರ ಸುಳಿಯಲ್ಲಿ ಸಿಕ್ಕಿ ನರಳಿ ಸಾಯುತ್ತಾನೆ. ಆದರೆ ಗೋದಾವರಿ ಎಲ್ಲರನ್ನು ನಂಬುತ್ತಾಳೆ. ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತಾಳೆ. ಆದರೂ ಅವಳಿಗೆ ಕೆಟ್ಟ ಪ್ರತಿಫಲವೇ ಸಿಗುತ್ತದೆ. ಕೊನೆಗೆ ಗೋದಾವರಿ ತಆಯಿಯಾಗಿ ಮಕ್ಕಳ ಋಣವನ್ನು, ಹೆಂಡತಿಯಾಗಿ ಗಂಡನ ಋಣವನ್ನು, ತನ್ನ ಮನೆಯ ಗೃಹಲಕ್ಷ್ಮಿಯಾಗಿ ಎಲ್ಲರಿಗೂ ಮಾಡಬೇಕಾದ್ದನ್ನು ಮಾಡಿ ಸಂಪೂರ್ಣ ಋಣಮುಕ್ತಳಾಗುತ್ತಾಳೆ.

ನೇಮಿಚಂದ್ರರ 'ಏನೊಂದು ಆಗದವರು' ಕಥೆ ಬೇರೆ ಬೇರೆ ರೀತಿಯಲ್ಲಿ ಹೇಳಿದಂತಿದೆ. 'ಕಪ್ಪು ಮೋಡ ಬೆಳ್ಳಿಅಂಚು' ಕಥೆಯಲ್ಲಿ ಮಧುಳ ಪೂರ್ವಾರ್ಧದ ಬದುಕಿನ ಅನೇಕ ಮೌಲ್ಯಗಳೇ 'ಏನೊಂದು ಆಗದವರು' ಕಥೆಯ ರವಿಯ ಕೆಲವು ಮೌಲ್ಯಗಳು ಆಗಿರುವಂತಿವೆ. ಅವನೂ ಅಲ್ಪತೃಪ್ತ. ಹೊಸತನದ ಅನ್ವೇಷಣೆಯ ಲವಲವಿಕೆಯಿಲ್ಲದ, ಸಾಹಸ ಪ್ರವೃತ್ತಿಯಿಲ್ಲದ, ಮುನ್ನುಗ್ಗುವ ಜೀವನೋತ್ಸಾಹವಿಲ್ಲದ , ಏರುತಗ್ಗಿಲ್ಲದ ಸಮತಟ್ಟು ನೆಲದಲ್ಲಿ ಜೋಡೆತ್ತಿನ ಗಾಡಿ' ಹೂಡ ಬಯಸಿದವ. "ನಿಶ್ಚಿತಾರ್ಥ ಆದಾಗಲಿಂದ ಶಶಿ ಎಂದಿದ್ದರೂ ನನ್ನವಳು ಎಂದು ನಿಶ್ಚಿಂತನಾಗಿರುವವ, ಊಟ ತಿಂಡಿ ಹರಟೆ ನಿದ್ದಗಳ ಪುಟ್ಟ ಜಗತ್ತಿನಲ್ಲಿ ಅವ ಸುಖಿ"[೧] ರವಿ ಪ್ರೀತಿಯಲ್ಲೂ ಗೆದ್ದವನಲ್ಲ. ಕವಿ ಸಮಯಗಳಲ್ಲಿ ಮಾತನಾಡುವುದಿರಿಲಿ, ಕಡೆಗೆ ನಮ್ಮ ಎಂಟು ವರ್ಷಗಳ ಸಂಬಂಧದಲ್ಲಿ

೧.ನೇಮಿಚಂದ್ರ; ಏನೊಂದು ಆಗದವರು, ಪುಟ-೨೯೨

ಒಮ್ಮೆಯಾದರೂ ಕೈಹಿಡಿದು ಅಮುಕಿದ್ದಿಲ್ಲ, ಬರಸೆಳೆದು ಚುಂಬಿಸಿದ್ದಿಲ್ಲ. ರವಿಯದು ಸಂಯಮವೋ, ಪ್ರಯತ್ನಹೀನತೆಯೋ? ಸರಳತೆಯೋ, ಅಭಾವವೈರಾಗ್ಯವೋ? ಮಿತಿಗಳ ಅರಿವೋ, ಅಖಂಡ ಜಡತ್ವವೋ? ಶಾಂತ ಪ್ರಕೃತಿಯೋ, ಸೋಮಾರಿತನವೋ? ಶಶಿಯದು ದುರಾಸೆಯೋ? ಮಹತ್ವಾಕಾಂಕ್ಷಿಯೋ? ರವಿಯದು ಸಂತೃಪ್ತಿಯೋ, ಅಪ್ರಾಮಾಣಿಕತೆಯೋ? ಶಶಿಯ ಸ್ವಗತ ಇಂಥ ದ್ವಂದ್ವಗಳನ್ನ ತೂಗಿ ಕಥೆಯಾಗುತ್ತದೆ. ರವಿಯ ಗೆಳೆಯ ಸುಂದರನ ಸಾಹಸಗಳನ್ನು ಕೇವಲ ಸಂಪಾದನೆಯ ದೃಷ್ಟಿಯಿಂದ ನೋಡಲು ಸಿದ್ದಳಿಲ್ಲ.

ಸುಂದರ ಸಂಪಾದಿಸುವುದು ಹಣ ಒಂದನ್ನೇ ಏನು? ಎಂದು ಕೇಳುವಾಗ 'ಕಪ್ಪುಮೋಡ ಬೆಳ್ಳಿಅಂಚು' ಕಥೆಯಲ್ಲಿ ಮಧು ಪ್ರಬುದ್ಧಳಾಗುತ್ತಿದ್ದಂತೆ ಆಕೆಗೆ ಹೊಳೆಯುವ ಸತ್ಯಕ್ಕೆ ಇದು ಸಮೀಪವಾಗುತ್ತದೆ. 'ನನಗೆ ಅಷ್ಟೈಶ್ವರ್ಯಗಳೂ ಬೇಕು, ಕಮರ್ಷಿಯಲ್ ರಸ್ತೆಯಲ್ಲಿ ಮುನ್ನೂರರ ಆ ಫ್ರಾಂಕ್ ಕೊಳ್ಳುವೆನೋ ಇಲ್ಲವೋ? ಆ ಕೊಳ್ಳಬಲ್ಲ ಶಕ್ತಿ ನಾ ಗಳಿಸಬೇಕು. ಹದಿನೆಂಟು ರೂ.ಗಳು ಐಸ್‌ಕ್ರೀಮ್‌ಗೆ ಸುರಿಯುವುದು ಎಷ್ಟು ಸಾಧುವೋ ಚಿಂತೆ ಇಲ್ಲ. ಅದು ಬೇಡ ಎಂದು ನಿರ್ಣಯಿಸುವ ಆಯ್ಕೆ ನನಗೆ ಬೇಕು' ಈ ಕಥೆಯಲ್ಲಿ ಮಧುಗೆ 'ಸೆಲ್ಫ್‌ಡ್ರೈವ್' ಇಲ್ಲವೆಂದು ಶೀಲಾ ಟೀಕಿಸುವಂತೆ 'ಏನೊಂದು ಆಗದವರು' ಕಥೆಯಲ್ಲಿ ಶಶಿ ರವಿಯನ್ನು ಟೀಕಿಸುತ್ತಾಳೆ. "ತನ್ನ ಪ್ರಪಂಚ ವಿಸ್ತಾರವಾದಂತೆ ಅವಳು ರವಿಯನ್ನು ತ್ಯಜಿಸುವುದು ಅನಿವಾರ್ಯವಷ್ಟೇ ಅಲ್ಲ ಅಪೇಕ್ಷಣೀಯವೂ, ಸಹಜವೂ ಆಗುತ್ತದೆ"[೧] ಕಪ್ಪುಮೋಡ ಬೆಳ್ಳಿಅಂಚುವಿನಲ್ಲಿ ರವಿಯು ಮಧುವನ್ನು ತೊರೆಯುವುದಕ್ಕೂ ಇದೇ ಕಾರಣವಿರಬಹುದೇ? ಅಂದರೇ ಒಂದು ಕಥೆಯಲ್ಲಿ ಹೆಣ್ಣನ್ನೂ ಮತ್ತೊಂದು ಕಥೆಯಲ್ಲಿ ಗಂಡನ್ನೂ ಪರೀಕ್ಷೆಯೊಡ್ಡುವ ಲೇಖಕಿ ಅರ್ಥಪೂರ್ಣ ಗಂಡು ಹೆಣ್ಣಿನ ಸಂಬಂಧ ಕೆಲವು ಸಮಾನ ಮೌಲ್ಯಗಳ ನೆಲೆಯಲ್ಲಿ ಮಾತ್ರ ಸಾಧ್ಯ; ಸಮಾಜ ಹೇರುವ ಗೃಹೀತಗಳ ಆಧಾರಗಳ ಮೇಲೆ ಅಲ್ಲ ಎಂದು ಸೂಚಿಸುತ್ತಿದ್ದಾರೆ ಎನಿಸುತ್ತದೆ. ಕರ್ಮ ಮತ್ತು ಕರ್ತವ್ಯಗಳ ಸಾಂಪ್ರದಾಯಿಕ ಮೌಲ್ಯಗಳನ್ನು ಎತ್ತಿ ಹಿಡಿಯದೆ ಆಯ್ಕೆ ಸಾಧನೆಗಳಂಥ ಮೌಲ್ಯಗಳನ್ನು ಯಾವತ್ತೂ ಮುನ್ನೆಲೆ ತರುವ ನೇಮಿಚಂದ್ರ ಅರಿವಿಗಿಂತ ಕ್ರಿಯೆಗೆ ಕೊಡುವ ಒತ್ತು ಗಮನಾರ್ಹವಾಗಿದೆ.

೧.ನೇಮಿಚಂದ್ರ; ಏನೊಂದು ಆಗದವರು, ಪುಟ-೨೯೬

ಸಾರಾಅಬೂಬಕ್ಕರ್ ಅವರ ಕಾದಂಬರಿ 'ವಜ್ರಗಳು' ಸ್ತ್ರೀ ಶೋಷಣೆಯನ್ನು ಪರಿಣಾಮಕಾರಿಯಾಗಿ ಚಿತ್ರಿಸಿದೆ. ಈ ಕೃತಿಯಲ್ಲಿಯೂ ಧರ್ಮದ ನಿಯಮಗಳನ್ನು ತಮಗೆ ಅನುಕೂಲವಾಗುವಂತೆ ತಿರುಚಿ ದುರುಪಯೋಗ ಪಡಿಸಿಕೊಂಡು, ಮಹಿಳೆಯರನ್ನು ತೀವ್ರ ಶೋಷಣೆಗೆ ಒಳಪಡಿಸುವ ಪುರುಷರ ಹುನ್ನಾರಗಳನ್ನು ಪರಿಣಾಮಕಾರಿಯಾಗಿ ಅನಾವರಣಗೊಳಿಸಲಾಗಿದೆ. ಮುಸ್ಲಿಂ ಸಮಾಜದಲ್ಲಿ ಹೆಣ್ಣು ಕೇವಲ ಅಲಂಕಾರದ ಬೊಂಬೆ, ಲೈಂಗಿಕವಸ್ತು ಮಾತ್ರ. ಅಲ್ಲಿ ಆಕೆಗೆ ಸ್ವಂತ ವ್ಯಕ್ತಿತ್ವವಾಗಲೀ, ಅಸ್ತಿತ್ವವಾಗಲೀ ಇಲ್ಲ. ಈ ಸತ್ಯವನ್ನು 'ವಜ್ರಗಳು' ಸಮರ್ಥವಾಗಿ ನಿರೂಪಿಸುತ್ತದೆ. ಗಂಡು ಆ ವಸ್ತುವನ್ನು ತನಗೆ ಬೇಕಾದಂತೆ ಬಳಸಿ ಬಿಸಾಡಬಹುದು. ಪುರುಷರ ಈ ದುಷ್ಟ ಪ್ರವೃತ್ತಿಗೆ ಧರ್ಮ ಒತ್ತಾಸೆಯಾಗಿದೆ. ಹೆಣ್ಣಿಗೊಂದು ಮನಸ್ಸು ಹಾಗೂ ಭಾವನೆಗಳಿವೆ ಎಂಬ ಕಲ್ಪನೆಯೇ ಈ ಕೃತಿಯಲ್ಲಿನ ಪುರುಷರಿಗೆ ಇರುವುದಿಲ್ಲ. ಪುರುಷ ಪ್ರಧಾನ ಮುಸ್ಲಿಂ ಸಾಮಾಜಿಕ ವ್ಯವಸ್ಥೆಯಲ್ಲಿ ಮಹಿಳೆ ಸಂಪೂರ್ಣ ಗುಲಾಮಳಾಗಿ ಸೇವಕಿಯಾಗಿದ್ದಾಳೆ. ಇಂಥ ಅಮಾನವೀಯ ಸಂಸ್ಕೃತಿಯನ್ನು 'ವಜ್ರಗಳು' ಅದ್ಭುತವಾಗಿ ದಾಖಲಿಸುತ್ತದೆ.

ಪ್ರಸ್ತುತ ಕಾದಂಬರಿಯ ನಾಯಕಿ ನಫೀಸ ಸ್ಥಿತಿವಂತ ಕುಟುಂಬದಲ್ಲಿ ಜನಿಸಿ ಸುಖವಾಗಿ ಬೆಳೆದ ಮುಗ್ಧ ಹೆಣ್ಣುಮಗಳು. ತಾಯಿಯ ಅಪೇಕ್ಷೆಯಂತೆ ಬದ್ರುದ್ದೀನ್ ಎಂಬ ಪಟ್ಟಣದ ಯುವಕನೊಂದಿಗೆ ಆಕೆಯ ವಿವಾಹವಾಗುತ್ತದೆ. ಮುಸ್ಲಿಂ ಸಂಪ್ರದಾಯದಲ್ಲಿ ಮದುವೆಗೆ ಮುಂಚೆ ಗಂಡು, ಹೆಣ್ಣನ್ನು ನೋಡುವುದಿಲ್ಲವಾದ್ದರಿಂದ ಮದುವೆಯ ನಂತರದ ಮೊದಲ ರಾತ್ರಿ ನಫೀಸಳನ್ನು ನೋಡಿದ ಬದ್ರುದ್ದೀನ್‌ಗೆ ನಿರಾಶೆಯಾಗುತ್ತದೆ. ಬೊಂಬಾಯಿಯಲ್ಲಿ ಕೆಲಸ ಮಾಡುತ್ತಿದ್ದ ಈತ ನಫೀಸಳ ಸೌಂದರ್ಯದ ಬಗೆಗೆ ಅತಿಯಾಗಿ ಕಲ್ಪಿಸಿಕೊಂಡಿದ್ದೇ ಆತನ ನಿರಾಶೆಗೆ ಕಾರಣ. ಸಾಧಾರಣ ರೂಪ ಮತ್ತು ಸ್ವಲ್ಪ ಕಪ್ಪುಬಣ್ಣ ಹೊಂದಿದ್ದ ನಫೀಸಳನ್ನು ಬದ್ರುದ್ದೀನ್ ಮೊದಲ ರಾತ್ರಿಯಿಂದಲೇ ತಿರಸ್ಕಾರದಿಂದ ಕಾಣುತ್ತಾನೆ. ಆನಂತರ ಬಾಣಂತನಕ್ಕೆ ಹೋದ ನಫೀಸಳಿಗೆ ಬದ್ರುದ್ದೀನ್‌ನಿಂದ ತಲಾಖ್ ಸಿಗುತ್ತದೆ. ವಿದ್ಯಾಭ್ಯಾಸದ ನೆಪದಲ್ಲಿ ನಫೀಸಳಿಂದ ಅವಳ ಗಂಡನನ್ನು ಕಸಿದು ಕೊಳ್ಳಲಾಗುತ್ತದೆ.

ಮದುವೆಯ ಮೊದಲ ರಾತ್ರಿಯಿಂದ ಆರಂಭವಾದ ನಫೀಸಳ ಸಂಕಟಗಳಿಗೆ ಕೊನೆಯೇ ಇಲ್ಲವಾಗುತ್ತದೆ. ನಫೀಸ ತನ್ನ ಬದುಕಿನಲ್ಲಿ ಅನೇಕ ರೀತಿಯ ಕಷ್ಟಗಳನ್ನು ಎದುರಿಸುವುದಲ್ಲದೆ ನೋವು, ಹಿಂಸೆಯನ್ನು ಅನುಭವಿಸಬೇಕಾಗುತ್ತದೆ. ತನ್ನ ಮಗುವನ್ನು ತನ್ನಿಂದ ದೂರ ಮಾಡಿದ

ಮೇಲೆ ತಂದೆ-ತಾಯಿಯರ ಒತ್ತಾಯಕ್ಕೆ ಮಣಿದು ತನ್ನ ತಂದೆಯ ವಯಸ್ಸಿನ ನಾಲ್ಕು ಮಕ್ಕಳ ತಂದೆಯಾಗಿದ್ದ, ಮೊಮ್ಮಕ್ಕಳನ್ನು ಹೊಂದಿದ್ದ ಉಸ್ಮಾನ್ ಹಾಜಿ ಎಂಬಾತನನ್ನು ಮದುವೆಯಾಗಿ ಆತನ ಹಾಗೂ ಆತನ ಮಕ್ಕಳ ಆರೈಕೆಯಲ್ಲಿ ನೆಮ್ಮದಿ ಕಾಣಲೆತ್ನಿಸುತ್ತಾಳೆ. ಆದರೆ ಮತ್ತಾಂಧನೂ, ದುಷ್ಟನೂ, ಕ್ರೂರಿಯೂ ಆದ ಉಸ್ಮಾನ್ ಹಾಜಿಯಮಗ ಹುಸೈನ್‌ನ ಮೋಸ ಕುತಂತ್ರಗಳಿಂದ ಅಲ್ಲಿಯೂ ನಫೀಸ ಅಪಾರವಾದ ದುಃಖ ಅನುಭವಿಸುತ್ತಾಳೆ. ಅವನ ದುಷ್ಟತನಕ್ಕೆ ಅವನು ತನ್ನ ತಂದೆಯಿಂದ ನಫೀಸಳಿಗೆ ತಲಾಖ್ ಕೊಡುವ ರೀತಿಯೇ ಸಾಕ್ಷಿಯಾಗಿದೆ. ಉಸ್ಮಾನ್ ಹಾಜಿ ತೀವ್ರ ಕಾಯಿಲೆಯಿಂದ ಹಾಸಿಗೆ ಹಿಡಿದಾಗ ತಲಾಖ್ ಪತ್ರ ಬರೆದು ತಂದೆಯ ಕೈಹಿಡಿದು ಹೆಬ್ಬೆಟ್ಟು ಒತ್ತಿಸಿ ನಫೀಸಳಿಗೆ ತಲಾಖ್ ಕೊಡಿಸುತ್ತಾನೆ. ಹೀಗೆ ನಫೀಸಳಿಗೆ ಎರಡು ಬಾರಿ ತಲಾಖ್ ಸಿಗುತ್ತದೆ. ಕೊನೆಗೆ ಮಗನ ಮದುವೆ ಕಾರ್ಯದಲ್ಲಿ ಭಾಗವಹಿಸಲು ತಾನು ಯೋಗ್ಯಳಲ್ಲವೆಂದು ತಿಳಿದಾಗ ಪ್ರತಿಭಟಿಸುತ್ತಾಳೆ. ಆದರೆ ಆಕೆಯ ಪ್ರತಿಭಟನೆಗೆ ಬೆಲೆಯಿಲ್ಲವೆಂದು ತಿಳಿದು ಅಣ್ಣನ ಆಶ್ರಯದಲ್ಲಿ ಅನಾಥ ಮಗುವೊಂದರ ಪೋಷಣೆಯಲ್ಲಿ ನಿರತಳಾಗುತ್ತಾಳೆ.

ಹೆಣ್ಣಿಗೆ ಮಾತನಾಡಲು ಸ್ವಾತಂತ್ರ್ಯವೇ ಇಲ್ಲದ ಪರಿಸರದಲ್ಲಿಯೂ ನಫೀಸ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ. ಉದಾಹರಣೆಗೆ ಹುಸೈನ್‌ನ ಹೆಂಡತಿ ತೀವ್ರ ಹೆರಿಗೆ ನೋವು ಅನುಭವಿಸುತ್ತಿದ್ದಾಗ ನಫೀಸ ಡಾಕ್ಟರ್‌ನ್ನು ಕರೆತರಲು ಸೂಚಿಸುತ್ತಾಳೆ. ಆದರೆ ಕಟ್ಟಾ ಇಸ್ಲಾಂವಾದಿಯಾದ ಹುಸೈನ್ ಪರ ಪುರುಷರು ತನ್ನ ಹೆಂಡತಿಯನ್ನು ನೋಡಬಾರದೆಂದು ನಫೀಸಳ ಸಲಹೆಯನ್ನು ತಿರಸ್ಕರಿಸುತ್ತಾನೆ. ಆಗಿನ ನಫೀಸಳ ಪ್ರತಿಕ್ರಿಯೆಯನ್ನು ಲೇಖಕಿ ಹೀಗೆ ನಿರೂಪಿಸಿದ್ದಾರೆ. ಪ್ರಾಣ ಹೋಗುತ್ತಿರುವಾಗಲೂ ಪರದೆಯೇ? ನಫೀಸಳ ಎದೆಯಲ್ಲಿ ಹೆಪ್ಪುಗಟ್ಟಿದ ನೋವು, ದುಃಖ, ತಿರಸ್ಕಾರವೆಲ್ಲಾ ಆ ಗಳಿಗೆಯಲ್ಲಿ ರೋಷವಾಗಿ ಮಾರ್ಪಟ್ಟು ಕುದಿಯುವ ಲಾವಾರಸದಂತೆ ಆಕೆಯ ಬಾಯಿಂದ ಹೊರಬಿದ್ದವು. "ಆಕೆಗೇನಾದರೂ ಆದರೆ ನಿಮಗೇನೂ ನಷ್ಟವಾಗುವುದಿಲ್ಲ. ನಾಳೆಯೇ ಇನ್ನೊಬ್ಬಳು ಬರುತ್ತಾಳೆ. ಆದರೆ ಆ ಮಕ್ಕಳಿಗೆ ಇನ್ನೊಬ್ಬ ತಾಯಿ ಬರಲಾರಳು. ನಿಮ್ಮಂತಹವರಿಗೂ ಹೆಣ್ಣು ಕೊಡುವವರಿದ್ದಾರಲ್ಲಾ. ಈ ಸಮಾಜದಲ್ಲಿ? ಅಂತಹವರನ್ನು ನಡುನೀರಿನಲ್ಲಿ ಮುಳುಗಿಸಬೇಕು. ಬೆಂಕಿಯನ್ನು ಕಣ್ಣುಗಳಲ್ಲಿ ಹೊರಸೂಸುತ್ತಾ ಕ್ರೋಧತಪ್ತಳಾಗಿ ಒಳನಡೆದಳು"[೧] ಗಂಡಸರ ಎದುರಿಗೆ ನಿಲ್ಲಲ್ಲೂ ಹಿಂಜರಿಯುವ ಮುಸ್ಲಿಂ ಮಹಿಳೆಯಿಂದ ಈ

೧.ಸಾರಾ ಅಬೂಬಕ್ಕರ್; ವಜ್ರಗಳು, ಪುಟ-೧೪

ರೀತಿಯ ಪ್ರತಿಕ್ರಿಯೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಲೇಖಕಿ ವೈಚಾರಿಕತೆಯ ಹಿನ್ನೆಲೆಯ ಚಿಂತನೆಯಿಂದ ಈ ರೀತಿಯ ಸಂದರ್ಭಗಳನ್ನು ಕಲ್ಪಿಸಿದ್ದಾರೆ. ಸಾರಾ ಅಬೂಬಕ್ಕರ್ ಅವರ ಮತ್ತೊಂದು ಕಾದಂಬರಿ 'ಬಿರುಗಾಳಿ'ಯ ಕತೆಯ ಫಾತಿಮ ತಲಾಖಿತ ಮಹಿಳೆ. ಕಷ್ಟಪಟ್ಟು ಮಕ್ಕಳನ್ನು ಸಾಕಿದಳು. ಆದರೆ ಬಿರುಗಾಳಿಗೆ ಸಿಕ್ಕಿ ಮಕ್ಕಳು ಅಸುನೀಗುತ್ತಾರೆ. ಫಾತಿಮ ಮರಿಯಮ್ಮ ಮೋಸ ಹೋಗುತ್ತಾರೆ. ಅಶಿಕ್ಷಿತರೂ, ಮುಗ್ಧರೂ ಎಲ್ಲಾ ಧರ್ಮದ ಬಡವರಾಗಿರುತ್ತಾರೆ. ಉಳ್ಳವರ ಕುತಂತ್ರಕ್ಕೆ ಎಲ್ಲಾ ಬಡವರೂ, ಕೂಲಿಕಾರರೂ, ಅಶಿಕ್ಷಿತರು, ಮಹಿಳೆಯರು ಬಲಿಯಾಗುತ್ತಾರೆ. ಸಾರಾ ಅವರ ಬಡ ಮುಸಲ್ಮಾನ ಮಹಿಳೆಯರ ಯಾತನೆಗಳನ್ನು ಅವರ ಕೃತಿಗಳಲ್ಲಿ ಕಾಣಬಹುದು. ಅವರ 'ಚಂದ್ರಗಿರಿಯ ತೀರದಲ್ಲಿ' ಈ ಕಾದಂಬರಿಯಲ್ಲಿ ಪುರುಷರ ಪ್ರತಿಷ್ಠೆ, ಸ್ವಾರ್ಥ, ಅಹಂಕಾರಗಳು ಸ್ತ್ರೀಯರ ಬದುಕನ್ನು ಹೇಗೆ ನಾಶಗೊಳಿಸಬಹುದೆಂಬುದನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತಾರೆ. ಕೃತಿಯ ಕರ್ತೃವಿನ ಓರಗೆಯವಳೊಬ್ಬಳು ತನ್ನ ಗಂಡನಿಂದ ತಲಾಖ್ ಪಡೆದು, ತಲಾಖ್ ನೀಡಿದ ಆ ವ್ಯಕ್ತಿ ಆ ಹೆಣ್ಣನ್ನು ಪುನಃ ಮದುವೆಯಾಗಲು ಬಯಸಿ ಮುಂದೆ ಬಂದಾಗ ಕುರಾನ್ ನಿಯಮಗಳು ಅಡ್ಡಿಯಾಗುತ್ತವೆ. ಕೊನೆಗೆ ಆಕೆ ವೃದ್ಧನೊಬ್ಬನನ್ನು ಮದುವೆಯಾಗಿ ಪಡಬಾರದ ಪಾಡು ಪಡುತ್ತಾಳೆ. ಇದನ್ನೆಲ್ಲ ಕಣ್ಣಾರೆ ಕಂಡ ಲೇಖಕಿ ಪ್ರಸ್ತುತ ಕಾದಂಬರಿಯಲ್ಲಿ ಆ ಘಟನೆಗಳನನು ಕಲೆಯಾಗಿಸಿದ್ದಾರೆ.

ಬಿ.ಟಿ.ಲಲಿತಾ ನಾಯಕ್ ಅವರ 'ಗತಿ' ಸ್ತ್ರೀ ಸಂವೇದನೆಯ ಪ್ರಭಾವವನ್ನು ಹಾಗೂ ವೈಚಾರಿಕತೆಯನ್ನು ದಟ್ಟವಾಗಿ ಒಳಗೊಂಡಿರುವ ಕಾದಂಬರಿ. ಲಂಬಾಣಿ ಜನಾಂಗದ ಬದುಕಿನ ಅಂತರಂಗದ ವಿವರಗಳನ್ನು ಅದ್ಭುತವಾಗಿ ದಾಖಲಿಸುವ ಈ ಕೃತಿ ಸಮರ್ಥ ದಾಖಲೆಯಾಗಿದೆ. ಬುಡಕಟ್ಟು ಜನಾಂಗವೊಂದರ ಬದುಕನ್ನು ಅನಾವರಣಗೊಳಿಸುವಾಗಲೂ ಲೇಖಕಿಯ ಸ್ತ್ರೀ ಸಂವೇದನೆಯ ಪ್ರಜ್ಞೆ ಜಾಗೃತವಾಗಿದೆ. ಆದ್ದರಿಂದ ಇಲ್ಲಿ ಸ್ತ್ರೀಪಾತ್ರಗಳು ಪ್ರಧಾನವಾಗಿರುವುದಲ್ಲದೆ ವ್ಯವಸ್ಥೆಗೆ ಸವಾಲಾಗಿ ನಿಲ್ಲುವ ಬಂಡಾಯ ಪಾತ್ರಗಳಾಗಿವೆ. ಪುರುಷ ಪ್ರಾಬಲ್ಯ, ಪುರುಷಾಧಿಪತ್ಯ ಹಾಗೂ ವ್ಯವಸ್ಥೆಯ ಕ್ರೌರ್ಯದ ನಡುವೆಯೂ ಇಲ್ಲಿನ ಸ್ತ್ರೀಯರು ಸಾಹಸಿಗಳಾಗಿದ್ದಾರೆ. 'ಗತಿ' ಕಾದಂಬರಿಯ ನಾಯಕಿ ಸೋನಿಬಾಯಿ, ಈಕೆಯ ಗಂಡ ಮಾನಸಿಂಗ್ ಮತ್ತು ಮಾವ ಹರಿಸಿಂಗ್ ಇಬ್ಬರೂ ಕುಡುಕರು, ಕಳ್ಳತನ, ವ್ಯಭಿಚಾರಗಳಲ್ಲಿ ನಿಷ್ಣಾಂತರಾದ ಅಧಮರು. ಇವರ ದುಷ್ಟತನ ಹಾಗೂ ಕಿತ್ತು ತಿನ್ನುವ ಬಡತನಗಳಿಂದ ಸೋನಿಬಾಯಿ ನಲುಗಿ ಹೋಗುತ್ತಾಳೆ. ಗಂಡನ ಕ್ರೌರ್ಯಕ್ಕೆ ಕೃತಿಯಲ್ಲಿ ಸಾಕಷ್ಟು ನಿದರ್ಶನಗಳಿವೆ. ಎಷ್ಟೋ ವೇಳೆ ಕೇವಲ ಗಂಡನ ಹೀನಕೃತ್ಯಗಳನ್ನು ಖಂಡಿಸಿದ್ದಕ್ಕೆ ಆಕೆ ಚಿತ್ರಹಿಂಸೆಗೆ ಒಳಗಾಗಬೇಕಾಗುತ್ತದೆ. ಆದರೂ ಆಕೆ ಹೇಡಿಯಾಗಿ ಪಲಾಯನ

ಮಾಡದೆ ಅಥವಾ ಆತ್ಮಹತ್ಯೆಗೆ ಯತ್ನಿಸದೇ, ಅದೇ ಊರಿನಲ್ಲಿ ಗಂಡನಿಂದ ದೂರವಾಗಿ, ಪ್ರತ್ಯೇಕ ಗುಡಿಸಲು ಕಟ್ಟಿಕೊಂಡು ತನ್ನ ಮಕ್ಕಳೊಂದಿಗೆ ವಾಸಿಸುತ್ತಾಳೆ. ಹೀಗಿರುವಾಗ ಕೆಲವು ದುಷ್ಟರು ಆಕೆಯ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಸೋನಿಬಾಯಿ ಅವರು ಒಡ್ಡುವ ಅಮಿಷಗಳಿಗೆ ಒಳಗಾಗದೆ, ಬೆದರಿಕೆಗಳಿಗೆ ಹೆದರದೆ ದಿಟ್ಟತನದಿಂದ ಬದುಕುತ್ತಾಳೆ.

ಸೋನಿಬಾಯಿಯ ಧೈರ್ಯ ಸಾಹಸಗಳಿಗೆ ಒತ್ತಾಸೆಯಾಗಿದ್ದು, ವ್ಯವಸ್ಥೆಯ ಎಲ್ಲ ದೌರ್ಜನ್ಯಗಳನ್ನು ಎದುರಿಸಿ ನಿಲ್ಲುವ ಇನ್ನೊಬ್ಬ ಮಹಿಳೆ ಲಚ್ಚಿ ವಿಧವೆಯಾಗಿ ಒಂಟಿಯಾಗಿದ್ದ ಈಕೆ ಸೋನಿಬಾಯಿಗಿಂತ ಹಿರಿಯವಳಾಗಿದ್ದ ಆಕೆಯ ಕಷ್ಟಗಳಿಗೆ ಸಕಾರತ್ಮಕವಾಗಿ ಸ್ಪಂದಿಸುತ್ತಾಳೆ. ಮಾನಸಿಂಗ್‌ನ ಹಿಂಸೆಯಿಂದ ನೊಂದು ಹತಾಶಳಾದ ಸೋನಿಬಾಯಿಗೆ ಬದುಕಿನಲ್ಲಿ ಉತ್ಸಾಹ ತುಂಬಿಸಿ, ಆಕೆಯ ಕಷ್ಟಕಾಲದಲ್ಲಿ ಆಸರೆ ನೀಡಿ ಕೊನೆಯವರೆಗೂ ಆಕೆಗೆ ಬೆಂಗಾವಲಾಗಿ ನಿಂತವಳು ಲಚ್ಚಿ. ಇವರಿಬ್ಬರೂ ಆ ಪರಿಸರದಲ್ಲಿ ಸಾಹಸಿಗಳಾಗಿದ್ದಾರೆ. ಬದುಕಿನಲ್ಲಿ ಕೆಲವು ಆಘಾತಗಳನ್ನು ಅನೇಕ ರೀತಿಯ ಸಂಕಟಗಳನ್ನು, ನೋವನ್ನು ಅನುಭವಿಸಿ ಗಟ್ಟಿಗಿತ್ತಿಯಾದ ಲಚ್ಚಿ ಥಲಗಾತಿ ಹಾಗೂ ಪಟ್ಟಭದ್ರಶಕ್ತಿಗಳ ವಿರುದ್ಧ ಹೋರಾಟ ನಡೆಸಬಲ್ಲ ಹೋರಾಟಗಾರ್ತಿ. ಈಕೆ ಅನಿವಾರ್ಯ ಸಂದರ್ಭಗಳಲ್ಲಿ ಗಂಡಸರನ್ನು ಥಳಿಸಬಲ್ಲ ಧೈರ್ಯವಂತಳು. ಉದಾಹರಣೆಗೆ ಸೋನಿಬಾಯಿಯನ್ನು ಆಸ್ಪತ್ರೆಯಲ್ಲಿ ಬಿಟ್ಟು ಎತ್ತಿನಗಾಡಿಯನ್ನೋಡಿಸಿಕೊಂಡು ಬರುತ್ತಿದ್ದ ಹರಿಸಿಂಗ್‌ನನ್ನು ತಡೆದು, ಗಾಡಿಹತ್ತಿ ಬಂಡಿಯಾ ಗೂಟು ಕೋಲಿನಿಂದ ಅವನನ್ನು ಥಳಿಸುವುದಲ್ಲದೆ, ಬಂಡಿಯಾ ಸಾರಥ್ಯವನ್ನು ತಾನೇ ವಹಿಸಿಕೊಳ್ಳುತ್ತಾಳೆ. ಆನಂತರ ಗಂಡಸನನ್ನು ಥಳಿಸಿದ್ದಕ್ಕೆ ಪಂಚಾಯ್ತಿ ಮುಖಂಡರು ಶಿಕ್ಷೆ ವಿಧಿಸಿದ್ದನ್ನು ಖಂಡಿಸುತ್ತಾಳೆ. ಇಂಥ ಧೈರ್ಯ ಸಾಮಾನ್ಯ ಮಹಿಳೆಯರಿಗೆ ಸಾಧ್ಯವಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಚಾರ.

ಲಚ್ಚಿಯ ಸಹಕಾರ, ಪ್ರೋತ್ಸಾಹ ಮತ್ತು ಮಾರ್ಗದರ್ಶನಗಳಿಂದ ಸೋನಿಬಾಯಿಯೂ ಧೈರ್ಯ ಹಾಗೂ ಸಾಹಸಗುಣಗಳನ್ನು ಬೆಳೆಸಿಕೊಳ್ಳುತ್ತಾಳೆ. ದುಷ್ಟ ವ್ಯಕ್ತಿಗಳನ್ನು ಎದುರಿಸಿ ನಿಂತು ಸ್ವತಂತ್ರವಾಗಿ ಬದುಕುವುದನ್ನು ಕಲಿಯುತ್ತಾಳೆ. ಕೊನೆಗೆ ತನ್ನ ಗಂಡನ ದುಷ್ಟತನ, ನೀಚತನಗಳಿಂದ ಬೇಸತ್ತು ಹೋಗಿದ್ದ ಸೋನಿಬಾಯಿ ಅವನ ವಿರುದ್ಧ ಸ್ಫೋಟಗೊಳ್ಳುತ್ತಾಳೆ. ಉದಾಹರಣೆಗೆ ಪಂಚಾಯ್ತಿ ಕಟ್ಟೆಯಲ್ಲಿ ಸೋನಿಬಾಯಿ ಮತ್ತು ಮಾನಸಿಂಗ್ ಮುಖಾಮುಖಿಯಾಗುವ ಸಂದರ್ಭವನ್ನು ಗಮನಿಸಬಹುದು. “ಈಕಿ ನನ್ನ ಹೆಂಡ್ತಿ ಆದಾಳ ಸುಮ್ಮಬಾಯಿ ಮುಚ್‌ಗೊಂಡ್ ನನ್ನ ಬಲಿ

ಬರಬೇಕು, ನನ್ನ ಮನಿ ಬಾಗ್ಲಾ ಕಾಯಿಕೊಂಡ್ ಬಿದ್ದಿರಬೇಕು"[೧] ಎಂದು ಕೆರಳಿ ನುಡಿಯುತ್ತಾಳೆ. ಸೋನಿಬಾಯಿ ಗಂಡನ ಮನೆಗೆ ಹೋಗಬೇಕೆಂದು ಪಂಚಾಯ್ತಿ ಮುಖಂಡರು ತೀರ್ಮಾನಿಸಿದಾಗಲೂ ಆಕೆ ಈ ತೀರ್ಮಾನವನ್ನು ಧಿಕ್ಕರಿಸುತ್ತಾಳೆ. ಇದು ಪುರಷಾಧಿಪತ್ಯ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಸೋನಿಬಾಯಿ ಪ್ರತಿಭಟನೆಯಾಗಿದೆ. ಈ ರೀತಿ ಲಚ್ಚಿ, ಸೋನಿಬಾಯಿ ಎಂಬ ಸ್ತ್ರೀಪಾತ್ರಗಳನ್ನು ಸಾಮಾನ್ಯ ಸ್ತ್ರೀಯರಿಗಿಂತ ಭಿನ್ನವಾಗಿ ಚಿತ್ರಿಸಿ, ಅವುಗಳಲ್ಲಿ ಧೈರ್ಯ, ಸಾಹಸ ಹಾಗೂ ಪ್ರತಿಭಟನೆಯ ಗುಣಗಳನ್ನು ತುಂಬಿ ಪುರುಷರ ದೌರ್ಜನ್ಯದ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಸಿಡಿದೇಳುವಂಥಾ ಬಂಡಾಯಗಾರ್ತಿಯರನ್ನಾಗಿ ಮಾಡಿರುವ ಬಿ.ಟಿ.ಲಲಿತಾನಾಯಕ್ ಅವರು ವೈಚಾರಿಕತೆಯ ಸ್ಫೂರ್ತಿ ಪಡೆದಿದ್ದಾರೆಂಬುದನ್ನು ಸುಲಭವಾಗಿ ಗ್ರಹಿಸಬಹುದು.

ಹೆಚ್.ಕೆ.ಅನುಸೂಯ ಸಂಪತ್‌ರವರ 'ರಂಜೀತಾ' ಕತೆಯಲ್ಲಿ ಮಧ್ಯಮ ವರ್ಗದ ಜೀವನದ ಚಿತ್ರಣ ಹಾಗೂ ಸಾಮಾಜಿಕ ಸಮಸ್ಯೆಯಾಗಿದ್ದ 'ವರದಕ್ಷಿಣೆ'ಯನ್ನು ಇಲ್ಲಿ ಪ್ರಮುಖ ವಸ್ತುವಾಗಿ ಮಾಡಿದ್ದಾರೆ. ವರದಕ್ಷಿಣೆಯಿಂದ ಪ್ರತಿ ದಿವಸವು ಸಾಯುತ್ತಿದ್ದ ಹೆಣ್ಣುಮಕ್ಕಳ ಪಾಲಿಗೆ ಧೈರ್ಯ ತುಂಬುವ ಹಾಗೂ ಸ್ವಾಭಿಮಾನ, ದಿಟ್ಟತನಗಳಿಂದ ಬದುಕಲು ಕಲ್ಪಿಸುವಂತಹ ಕಥಾವಸ್ತು ಇದಾಗಿದೆ. ಒಂದು ತುಂಬು ಕುಟುಂಬಕ್ಕೆ ಹಲವಾರು ಆಸೆ, ಕನಸ್ಸುಗಳನ್ನು ಹೊತ್ತು ಬರುತ್ತಾಳೆ ರಂಜಿತಾ. ಆದರೆ ವರದಕ್ಷಿಣೆ ತರಬೇಕು ಎಂಬ ಅವಳ ಅತ್ತೆಯ ಮಾತಿಗೆ, ಹೊಡೆತಕ್ಕೆ ಬಗ್ಗದೆ ಮನೆಯಿಂದ ಹೊರಗೆ ಬಂದು, ತಾಯಿ, ತಂದೆ, ತಮ್ಮನ ಸಹಕಾರದಿಂದ ಸ್ವಂತ ದುಡಿಮೆಯಿಂದ ಸಮಾಜದಲ್ಲಿ ತಲೆ ಎತ್ತಿ ನಿಲ್ಲುತ್ತಾಳೆ.

ರಂಜಿತಾ ಮದುವೆಯ ನಂತರ ಅತ್ತೆಮನೆಯ ಕೆಲಸದ ಜೊತೆಗೆ ಹೊರಗೆ ಆಫೀಸಿನಲ್ಲೂ ದುಡಿಯುತ್ತಾಳೆ. ಆದರೂ ಅವಳ ಅತ್ತೆ ವರದಕ್ಷಿಣೆ ತಂದಿಲ್ಲವೆಂದು ಹೀಯ್ಯಾಳಿಸುತ್ತಾಳೆ, ಹಿಂಸಿಸುತ್ತಾಳೆ. ಮನೆಯ ಆಳಿನಂತೆ ಕಾಣುತ್ತಾಳೆ. ಬಸುರಿಯಾದ ಅವಳಿಗೆ ಗಂಡ ಬಲವಂತವಾಗಿ ಗರ್ಭಪಾತ ಮಾಡಿಸುತ್ತಾನೆ. ಅವಳು ಸತ್ತರೆ ಮಗನಿಗೆ ಮತ್ತೆ ಮದುವೆ ಮಾಡಬಹುದೆಂದು ಅತ್ತೆ-ನಾದಿನಿ ಸೀಮೆಎಣ್ಣೆ ಸುರಿದು ಬೆಂಕಿ ಹಚ್ಚುತ್ತಾರೆ. ಗಂಡನ ಮನೆಯಲ್ಲಿ ಓರ್ವ ಬಡಪಾಯಿ ಹೆಣ್ಣುಮಗಳು ಅನುಭವಿಸಬಹುದಾದ ದೌರ್ಜನ್ಯದ ಪರಮಾವಧಿಯನ್ನು ಅನುಭವಿಸುತ್ತಾಳೆ. ಅವಳ

೧.ಬಿ.ಟಿ.ಲಲಿತಾನಾಯಕ್; ಗತಿ, ಪುಟ-೧೦೭

ಗಂಡ ಬಂದು ಬೆಂಕಿ ಆರಿಸಿದರೂ ಭಯಗೊಂಡ ರಂಜಿತ ಅಲ್ಲಿಂದ ತಂದೆ ಮನೆಗ ಓಡಿಬರುತ್ತಾಳೆ.ಅತ್ತೆಯ ತಿರಸ್ಕಾರ ಮತ್ತು ಗಂಡನ ಅಸಹಾಯಕತೆಯಿಂದ ಬೇಸತ್ತ ಅವಳು ತಂದೆಯ ಸಹಕಾರದೊಂದಿಗೆ ತಮ್ಮನ ಜೊತೆಗೆ ಸ್ವಂತ ದುಡಿಮೆ ಮಾಡಿ, ಅತ್ತೆ ಮನೆ ಮಾರಾಟಕ್ಕೆ ಬಂದಾಗ, ಕೊಂಡು ಕೊಳ್ಳುತ್ತಾಳೆ. ಕೊನೆಗೆ ಗಂಡನ ಒಳ್ಳೆಯತನವನ್ನು ಅರಿತು ಅವನ ಬಳಿ ಬಂದು ಸೇರುತ್ತಾಳೆ. ರಂಜಿತಾ ಧೈರ್ಯವಂತೆ, ತಂದೆ ಮನೆಗೆ ಬಂದು ಬದುಕುತ್ತಾಳೆ. ತಂದೆ ಮನೆಗೆ ವಾಪಸ್ಸು ಬಂದರೆ ತಮಗೆ ಅವಮಾನವಾಗುತ್ತದೆ ಎಂದು ಯೋಚಿಸಿ, ತಾವು ಹೆತ್ತಮಗಳನ್ನೇ ಪುನಃ ಗಂಡನ ಮನೆಗೆ ಕರೆದುಕೊಂಡು ಹೋಗಿ ಸಾವಿನ ದವಡೆಗೆ ಕೊಟ್ಟು ಬರುವ ಪೋಷಕರಿದ್ದಾರೆ. ಆದರೆ ರಂಜಿತಾಳ ತಾಯಿ-ತಂದೆ ಹಾಗೆ ಮಾಡಲಿಲ್ಲ. ಅವಳ ಯಶಸ್ಸಿನ ಹಾದಿಗೆ ಬೆಂಗಾವಲಾಗಿ ನಿಂತರು. ಅದರಿಂದ ಅವಳು ಸಮಾಜದಲ್ಲಿ ತಲೆ ಎತ್ತಿ ನಿಲ್ಲುವಂತಾಯಿತು. ರಂಜಿತಾಳ ಬದುಕಿನ ಚಕ್ರ ಉತ್ತಮ ದಾರಿಯಲ್ಲಿ ಮೇಲೇರಿರುವುದನ್ನು ತಿಳಿಸಿರುವುದು, ಧೈರ್ಯವಾಗಿ ಹೆಣ್ಣುಮಕ್ಕಳು ಮನೆಯಿಂದ ಹೊರಗೆ ಬಂದು ಬದುಕಬಹುದು ಎಂಬುದನ್ನು ಸಮಾಜದ ಹೆಣ್ಣುಮಕ್ಕಳಿಗೆ ಅರಿವು ಮೂಡಿಸುವಲ್ಲಿ ಸಹಕಾರಿಯಾಗಿದೆ.

ರಂಜಿತಾಳ ಗಂಡ ಶುದ್ಧ ಒರಟ. ತಂದೆ-ತಾಯಿ ಇಬ್ಬರು ತಂಗಿಯರು, ಒಬ್ಬ ತಮ್ಮ ಹೀಗೆ ಎಲ್ಲರ ಹೊಣೆ ಹೊತ್ತ ಅವನು ತಂಗಿಯ ಮದುವೆ, ಬಾಣಂತನ ಇತ್ಯಾದಿಗಳ ಖರ್ಚಿಗೆ ರಂಜಿತಾಳನ್ನು ಪೀಡಿಸುತ್ತಾಣೆ. ತನ್ನ ತಾಯಿಗೆ ಎದುರು ವಾದಿಸಿದಳು ಎಂದು ಮನ ಬಂದಂತೆ ಹೊಡೆಯುತ್ತಾನೆ. ಅವಳು ಮನೆ ಬಿಟ್ಟು ಹೋದರೂ ಅವನು ಚಿಂತಿಸುವುದಿಲ್ಲ. ಸಾಮಾನ್ಯ ಹೆಣ್ಣೊಬ್ಬಳು ತನ್ನ ಸ್ವಸಾಮರ್ಥ್ಯದಿಂದಲೇ ಮುಂದುವರೆದು ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆದುಕೊಳ್ಳುವುದು ದೊಡ್ಡ ವಿಷಯ. ಸಾಮಾಜಿಕ ಸಮಸ್ಯೆಯಾದ ವರದಕ್ಷಿಣೆಯ ಭೂತ ಬಲಿ ತೆಗೆದುಕೊಳ್ಳುತ್ತಿದ್ದಂತಹ ಸಂದರ್ಭದಲ್ಲಿ ಧೈರ್ಯವಾಗಿ ನಿಂತು ಬದುಕನ್ನು ಸಾಗಿಸುವಂತಹ ಧೈರ್ಯ ಹೆಣ್ಣುಮಕ್ಕಳಿಗೆ ಬರಲಿ ಎಂಬ ಉದ್ದೇಶ ಹೊಂದಿದ್ದು, ಈ ಉದ್ದೇಶದ ಸಾಫಲ್ಯತೆಗೆ ಮೆರಗು ರಂಜಿತಾಳ ಕಥೆ. ವರದಕ್ಷಿಣೆಗೆ ಆತ್ಮಹತ್ಯೆಯೊಂದೇ ದಾರಿ ಎಂದು ತಿಳಿದುಕೊಂಡ ಸ್ತ್ರೀ ಕುಲಕ್ಕೆ ರಂಜಿತಾ ಉತ್ತರವಾಗುತ್ತಾಳೆ. ವೈಚಾರಿಕತೆ, ಛಲ, ಸ್ವಾಭಿಮಾನದಿಂದ ಬದುಕುವ ಯಾವ ಸ್ತ್ರೀಗೂ ಸೋಲು ಇಲ್ಲವೆಂದು ಈ ಕತೆ ಹೇಳುತ್ತದೆ. ಇಂದಿನ ಕಾಲಕ್ಕೆ ಅತ್ಯಗತ್ಯವಾಗಿ ಹೊಂದುವ ಉತ್ತಮ ಕಥೆ ಎಂದು ಹೇಳಬಹುದು.

ಕೆ.ವಿ.ರಾಜೇಶ್ವರಿಯವರ 'ಮಾನಸವೀಣಾಮಧುರಗೀತೆ' ಕಥೆಯಲ್ಲಿ ರಾಜಾವೆಂಟಕರಾಯರು ಘನ ವ್ಯಕ್ತಿತ್ವವುಳ್ಳವರು. ಸಹಾಯ ಕೇಳಿ ಬಂದವರಿಗೆ ಇಲ್ಲ ಎನ್ನದ ಕೊಡುಗೈ ದಾನಿಗಳು. ಇವರ ಮಗಳಾದ ರಶ್ಮಿ ತಂದೆಯಂತೆ ಉದಾರಬುದ್ಧಿಯ ಹುಡುಗಿ. ಸಹಾಯ ಬಯಸಿ ಬಂದ ರಾಜವರ್ಧನನೆಂಬ ಬಡವಿದ್ಯಾರ್ಥಿಗೆ ಕತ್ತಿನಲ್ಲಿದ್ದ ಸರವನ್ನೇ ಬಿಚ್ಚಿಕೊಟ್ಟವಳು. ಅವರ ಸಹಾಯದಿಂದಲೇ ಐ.ಎ.ಎಸ್ ಅಧಿಕಾರಿಯಾಗುವ ರಾಜವರ್ಧನ್ ಅವರಿಗೆ ಕೃತಜ್ಞತೆ ಹೇಳಲು ಬಂದಾಗ ರಾಜವೆಂಟಕರಾಯರು ಸತ್ತು ಅವರ ಮನೆಯವರೆಲ್ಲ ಊರು ಬಿಟ್ಟು ಹೋಗಿದ್ದು ತಿಳಿಯುತ್ತದೆ. ಅಂದಿನಿಂದ ಅವರಿಗೆ ಸಹಾಯ ಮಾಡಬೇಕು ಎಂದು ಊರುಕೇರಿಗಳಲ್ಲಿ ಅಲೆಯುತ್ತಾ ಕೊನೆಗೆ ಸಿಕ್ಕ ಅವರಿಗೆ ಸಹಾಯ ಮಾಡುವ ಮಾನವೀಯ ಮೌಲ್ಯದ ಚಿತ್ರಣವನ್ನು ಇಲ್ಲಿ ಕಾಣಬಹುದು.

ರಾಜವೆಂಕಟರಾಯರ ಎರಡನೆ ಹೆಂಡತಿ ಮಗಳು ರಶ್ಮಿ. ತಂದೆಯ ಸಾವಿನ ಬಳಿಕ ದೊಡ್ಡ ಹೆಂಡತಿಯ ಮಕ್ಕಳ ಕಿರುಕುಳ ಸಹಿಸಲಾರದೆ ಅವರಿಂದ ಹೊರಹಾಕಲ್ಪಟ್ಟ ತಾಯಿ ಮತ್ತು ತಂಗಿಯೊಂದಿಗೆ ಐ.ಎ.ಎಸ್ ಅಧಿಕಾರಿಯಾದ ಜಯಣ್ಣನೆಂಬುವರ ಆಶ್ರಯಕ್ಕೆ ಬರುತ್ತಾಳೆ. ರಾಜಾ ವೆಂಕಟರಾಯರಿಂದ ಸಹಾಯ ಪಡೆದಿದ್ದ ಅವರು ತಾವೇ ನಿಂತು ರಶ್ಮಿಗೆ ಮದುವೆ ಮಾಡಿಸುತ್ತಾರೆ. ಆದರೆ ಮದುವೆಯಾದವನು ನಪುಂಸಕನೆಂದು ತಿಳಿದು ಆಘಾತಕ್ಕೊಳಗಾದ ಅವಳನ್ನು ವಂಶೋದ್ಧಾರಕ್ಕೆ ಇನ್ನೊಬ್ಬನೊಂದಿಗೆ ಸಂಸಾರ ಹೂಡಲು ಅತ್ತೆ ಬಲವಂತಪಡಿಸಿದಾಗ ಅದನ್ನು ಒಪ್ಪದೆ ಅಲ್ಲಿಂದ ತಪ್ಪಿಸಿಕೊಂಡು ತಾಯಿ ಮನೆಗೆ ಬರುತ್ತಾಳೆ. ಗಂಡನಾದವನು ಅಪಘಾತದಲ್ಲಿ ಸತ್ತು ರಶ್ಮಿ ವಿಧವೆಯಾಗುತ್ತಾಳೆ. ಮದುವೆಯಾದದ್ದನ್ನೇ ಮರೆತು ಜಯಣ್ಣನವರ ಆಫೀಸಿನಲ್ಲಿ ಅನಿತ ಎಂಬ ಹೆಸರಿನಿಂದ ಕೆಲಸಕ್ಕೆ ಸೇರುತ್ತಾಳೆ. ಅಲ್ಲಿ ಹೊಸ ಅಧಿಕಾರಿಯಾಗಿ ಬಂದ ಬಾಲ್ಯದ ಗೆಳೆಯ ರಾಜವರ್ಧನ್‌ನನ್ನು ಗುರುತಿಸುತ್ತಾಳೆ. ತನ್ನ ಬದುಕಿನ ದುರ್ಗತಿಯನ್ನು ಬಹಿರಂಗಗೊಳಿಸಲಿಚ್ಛಿಸದ ರಶ್ಮಿ ರಾಜವರ್ಧನನಿಂದ ಸತ್ಯವನ್ನು ಮುಚ್ಚಿಡುತ್ತಾಳೆ. ಅಪಘಾತವೊಂದರಲ್ಲಿ ಕಿಡ್ನಿ ಕಳೆದುಕೊಂಡ ರಾಜವರ್ಧನನಿಗೆ ಕಿಡ್ನಿಯನ್ನು ದಾನ ಮಾಡಿದ ರಶ್ಮಿಯ ನಿಜವೃತ್ತಾಂತವನ್ನು ಜಯಣ್ಣನಿಂದ ಅರಿತು ಅವರಿಗೆಲ್ಲ ಆಧಾರವಾಗುವ ರಾಜವರ್ಧನ್ ರಶ್ಮಿ ವಿಧವೆಯಾದರೂ ಸಹ ಚಿಂತೆ ಇಲ್ಲವೆಂದು ಅವಳನ್ನು ಮದುವೆಯಾಗುತ್ತಾನೆ.

ಒಬ್ಬರು ಮಾಡಿದ ಸಣ್ಣ ಸಹಾಯವನ್ನು ಮರೆಯದೇ ಅವರಿಗೆ ಕಷ್ಟ ಬಂದಾಗ ನೆರವಾಗಲು ತುಡಿಯುವ ಮಾನವೀಯ ಅಂತಃಕರಣವನ್ನು ಇಲ್ಲಿ ಕಾಣಬಹುದು. ದೊಡ್ಡ ಅಧಿಕಾರಿಯಾದರೂ ತನಗೆ ಅನ್ನವಿಟ್ಟು ಓದಲು ಸಹಾಯ ಮಾಡಿದವರನ್ನು ಮರೆಯದೆ ಅವರಿಗಾಗಿ ಊರೂರು ಸುತ್ತಿ

ಹುಡುಕಿ, "ವಿಧವೆಯಾದಳಿಗೆ ಬದುಕು ನೀಡುವ ರಾಜವರ್ಧನನ ಹೃದಯ ವೈಶಾಲ್ಯ ಅಸದೃಶ್ಯವಾದುದು."[೧] ಇಲ್ಲಿ ಸ್ತ್ರೀಸಂವೇದನೆಗಳನ್ನು ಹಾಗೂ ವೈಚಾರಿಕ ಮನೋಭಾವನೆಯನ್ನು ಸಹ ಗುರುತಿಸಬಹುದು. ಸಂಬಂಧಗಳ ಮೌಲ್ಯಗಳು ಅರ್ಥ ಕಳೆದುಕೊಳ್ಳುತ್ತಿರುವ ಪ್ರಸ್ತುತ ದಿನಗಳಲ್ಲಿ ರಶ್ಮಿಯಂಥ ಹೆಣ್ಣುಗಳು, ಸಂಸಾರದ ಸಮಸ್ಯೆಯ ಬೀಸುಕಲ್ಲಿನಲ್ಲಿ ಕಾಳುಗಳು ನುರಿದಂತೆ ತಿರುಗಿ ತಿರುಗಿ ಕೊನೆಗೆ ಹಸಿದವರ ಹೊಟ್ಟೆಗೆ ಆಹಾರವಾಗುವಂತ ಕಥೆ ಇದು. ಇಲ್ಲಿ ಮನುಷ್ಯರ ಸಂಬಂಧಗಳು ಕಾಲಚಕ್ರದಂತೆ ಉರುಳುತ್ತವೆ ಎನ್ನಬಹುದು. ರಶ್ಮಿ ವಿಧವೆಯಾದರೂ ಮನೆ ಬಿಟ್ಟು ಧೈರ್ಯವಾಗಿ ಸಮಾಜದಲ್ಲಿ ಬದುಕುವ ಗುಣ ವೈಚಾರಿಕತೆಯ ಅಂಶ ಎನ್ನಬಹುದು. . ಮತ್ತೊಂದು ರೀತಿಯಾಗಿ ನೋಡಿದಾಗ ಕೈಲಾಗದು ಎಂದು ಕೈಕಟ್ಟಿ ಕುಳಿತವರಿಗೆ, ವಿಧವಾ ಮಹಿಳೆಯರಿಗೆ ಮಾದರಿಯಾಗುತ್ತದೆ ಎನ್ನಬಹುದು. ಒಳ್ಳೆಯದನ್ನೇ ಬಯಸುವವರಿಗೆ ಒಳ್ಳೆಯದೇ ಆಗುತ್ತದೆ ಎಂಬುದಕ್ಕೆ ರಶ್ಮಿಯೇ ಸಾಕ್ಷಿಯಾಗಿ ನಿಲ್ಲುತ್ತಾಳೆ. ವಿಧವೆ ಎಂದು ತಿಳಿದು ನಾನೇ ಅವಳನ್ನು ಮದುವೆಯಾಗುತ್ತೇನೆ ಎಂದು ಮುಂದೆ ಬರುವ ರಾಜವರ್ಧನನ ಗುಣ ಎಲ್ಲರಿಗೂ ಬಂದರೆ ಕತ್ತಲೆಯಲ್ಲಿ ಬದುಕುತ್ತಿರುವ ಎಷ್ಟೋ ಹೆಣ್ಣುಮಕ್ಕಳು ತಮ್ಮ ಜೀವನದಲ್ಲಿ ಬೆಳಕನ್ನು ಕಾಣಬಹುದು.

ಎಸ್.ಮಂಗಳಾಸತ್ಯನ್ ಅವರ 'ಅಮುಖ' ಕಾದಂಬರಿಯಲ್ಲಿ ಮೃದುಸ್ವಭಾವದ ಮುಗ್ಧ ಹೆಣ್ಣು, ಮುಗ್ಧತೆಯಲ್ಲಿಯೇ ತನಗೆ ಮೋಸ ಮಾಡಿಕೊಂಡಯು ಬದುಕುವಂಥ ಕಥಾಚಿತ್ರಣವನ್ನು ನೋಡಬಹುದು. ಸೌಂದರ್ಯವನ್ನು ಪ್ರಮುಖ ವಸ್ತುವನ್ನಾಗಿಸಿ, ವೈಚಾರಿಕತೆ ಮಾನವೀಯ ಮೌಲ್ಯಗಳ ವಿಶಿಷ್ಟ ಭಾವನೆಗಳನ್ನು ಮೈಗೂಡಿಸಿಕೊಂಡಿರುವಂತ ಕಥಾವಸ್ತು ಇದಾಗಿದೆ. ವೀಣಾ-ವಾಣಿ ಅಕ್ಕತಂಗಿಯರು. ಇಬ್ಬರೇ ಮಕ್ಕಳಾದ ಅವರನ್ನು ತಾಯಿ-ತಂದೆ ಬಡತನದಲ್ಲೂ ಪ್ರೀತಿಯಿಂದ ಸಾಕುತ್ತಾರೆ. ವೀಣಾ ಸ್ವಾರ್ಥಿಯಾಗಿದ್ದು, ತನ್ನ ಮನೆಯ ಪರಿಸ್ಥಿತಿಯ ಅರಿವಿಲ್ಲದಂತೆ ತನಗಿಷ್ಟ ಬಂದಂತೆ ನಡೆದುಕೊಳ್ಳುತ್ತಾಳೆ. ವಾಣಿ ಅಕ್ಕನಿಗೆ ವಿರುದ್ಧ ಸ್ವಭಾವದವಳು. ಬಡತನದ ಅರಿವಿದ್ದ ಆಕೆ ತಾಯಿ-ತಂದೆಗೆ ಹೆಚ್ಚು ನೋವು ಕೊಡದೆ ನಡೆದುಕೊಳ್ಳುತ್ತಾಳೆ. ತಂದೆ ತನಗೆ ಬರುವ ಆದಾಯದಲ್ಲಿ ಮಕ್ಕಳ ಮದುವೆಗೆ ಎಂಟು ಸಾವಿರ ಕೂಡಿಟ್ಟಿದ್ದು, ದೊಡ್ಡ ಮಗಳು ವೀಣಾಳ ಮದುವೆಗೆ ಪ್ರಯತ್ನಿಸಿ ಮದುವೆ ಮುಗಿಯುವ ಮೊದಲೇ ಪ್ರಾಣ ಬಿಡುತ್ತಾರೆ. ವಾಣಿ ಕಿರಿಯವಳಾದರೂ, ತಾಯಿಗೆ ಸಮಾಧಾನ ಹೇಳುತ್ತಾ ಅಕ್ಕನನ್ನು ಸಂಭಾಳಿಸುತ್ತಾ ಒಂದು ಸ್ಕೂಲಿನಲ್ಲಿ ಕೆಲಸಕ್ಕೆ ಸೇರುತ್ತಾಳೆ.

೧.ಕೆ.ವಿ.ರಾಜೇಶ್ವರಿ: ಮಾನಸವೀಣಾ ಮಧುರಗೀತೆ, ಪು.೩.೨೬

ಅದರಿಂದ ಬರುವ ಹಣದಲ್ಲಿಯೇ ಅವರ ಹೊಟ್ಟೆಪಾಡು ನಡೆಯುತ್ತಿರುತ್ತದೆ. ಶ್ರೀಧರ ಎಂಬ ಯುವಕ ಸ್ಕೂಲ್ ಮೇಷ್ಟ್ರಾಗಿದ್ದವನು ವೀಣಾಳನ್ನು ಮದುವೆಯಾಗಲು ಮುಂದೆ ಬರುತ್ತಾನೆ.

ಆಕಸ್ಮಿಕವಾಗಿ ಶ್ರೀಧರ್ ಕಣ್ಣು ಕಳೆದುಕೊಂಡಾಗ ಅವನನ್ನು ವೀಣಾ ತಿರಸ್ಕರಿಸುತ್ತಾಳೆ. ವಾಣಿ ಶ್ರೀಧರನನ್ನು ಮದುವೆಯಾಗುತ್ತಾಳೆ. ಮದುವೆಯ ನಂತರ ಶ್ರೀಧರ ತನ್ನ ಕಣ್ಣು ಆಪರೇಷನ್ ಮಾಡಿಸಿಕೊಂಡು ಬರಲು ಹೋಗುತ್ತಾನೆ. ಅವನು ಬರುವುದರಲ್ಲಿ ಅವಳ ತಾಯಿಯು ಅಸುನೀಗುತ್ತಾರೆ. ನೊಂದ ವಾಣಿ ಜ್ವರದಿಂದ ನರಳುತ್ತಾಳೆ. ಅವಳಿಗೆ ಮೈ ಮತ್ತು ಮುಖದ ಮೇಲೆ ಸಿಡುಬು ರೋಗ ಬಂದು ಮುಖ ವಿಕಾರವಾಗುತ್ತದೆ. ಗಂಡ ತನ್ನನ್ನು ನೊಂದುಕೊಳ್ಳುತ್ತಾನೆಂದು ತಿಳಿದು ವೀಣಾಳನ್ನು ಅವನ ಹೆಂಡತಿಯಾಗಲು ಒಪ್ಪಿಸಿ ಅವರ ಮನೆಯ ಕೆಲಸ ಮಾಡಿಕೊಂಡಿರುತ್ತಾಳೆ. ವೀಣಾ ಎರಡನೆ ಮಗುವಿನ ಹೆರಿಗೆಯಲ್ಲಿ ಪ್ರಾಣ ಬಿಡುತ್ತಾಳೆ. ಕೊನೆಗೆ ವಾಣಿಯೇ ಶ್ರೀಧರನ ಹೆಂಡತಿಯೆಂದು ತಿಳಿದು ಕಥೆ ಸುಖಾಂತವಾಗುತ್ತದೆ. ಇಲ್ಲಿ ವೀಣಾ, ವಾಣಿ, ಶ್ರೀಧರ್, ಗುಂಡಣ್ಣ ಪ್ರಮುಖ ಪಾತ್ರಗಳು. ವಯಸ್ಸಿನಲ್ಲಿ ಕಿರಿಯವಳಾದರೂ ವಾಸ್ತವತೆಯ ಪ್ರಜ್ಞೆ ಮೂಡಿಸುವಂತಹ ಪಾತ್ರ ಅವಳದು. ಸೌಮ್ಯ ಸ್ವಭಾವದ ಸದಾ ನಗುತ್ತಾ ಇರುವ ಸುಂದರ, ಬುದ್ಧಿವಂತ ಮುಗ್ಧಹುಡುಗಿಯಾದ ವಾಣಿ ಎಲ್ಲರ ಮೆಚ್ಚುಗೆಗೂ ಪಾತ್ರಳಾಗುತ್ತಾಳೆ. ವಾಣಿಯ ಸ್ವಭಾವದ ವಿರುದ್ಧವಾದ ಪಾತ್ರ ವೀಣಾಳದು. ವಾಣಿ ತ್ಯಾಗಿಯಾಗಿದ್ದರೆ ವೀಣಾ ಸ್ವಾರ್ಥಿ. ಆಕೆ ಶ್ರೀಧರನನ್ನು ಮೆಚ್ಚಿ ಮದುವೆಯಾಗಬಯಸಿದರೂ, ಅವನು ಕುರುಡನೆಂದು ತಿಳಿದು ನಿರಾಕರಿಸುತ್ತಾಳೆ. ಅವನಿಗೆ ಮತ್ತೆ ಕಣ್ಣು ಬಂದಾಗ ತಂಗಿ ಬದುಕನ್ನೇ ಅಕ್ಕನಿಗಿತ್ತು, ನೀನು ಹೆಂಡತಿಯಂತೆ ಇರು ಎಂದು ಹೇಳಿದರೆ, ವೀಣಾ ಒಂಟಿಯಾಗಿರಲು ಇಷ್ಟಪಡದೇ ಸುಲಭವಾಗಿ ಒಪ್ಪಿಬಿಡುತ್ತಾಳೆ. ಆದರೆ ಆ ಸ್ಥಾನ ನೀಡಿದ ವಾಣಿಯನ್ನು ಮನೆಯ ಆಳಿನಂತೆ ಕಾಣುತ್ತಾಳೆ. ಅವಳ ಅಹಂಕಾರದ ನಡತೆಗೆ ಗಂಡನೇ ಬೇಸರಿಸುತ್ತಾನೆ. ಕೊನೆಯಲ್ಲಿ ವೀಣಾಳೇ ನಿಜಾಂಶವನ್ನು ಗಂಡನಿಗೆ ಹೇಳಿ ಸಾಯುತ್ತಾಳೆ. ಅನಾಥನಾದ ಶ್ರೀಧರನು ಕಷ್ಟಪಟ್ಟು ಓದಿ ಸ್ಕೂಲ್ ಮಾಸ್ಟರ್ ಆಗಿರುತ್ತಾನೆ. ತನ್ನ ಹೆಂಡತಿ ಸೌಂದರ್ಯವತಿಯಾಗಿರಬೇಕೆಂದು ಬಯಸುತ್ತಾನೆ. ಕೈಹಿಡಿದ ಹೆಂಡತಿಯನ್ನು ಗುರುತಿಸಲಾರದೆ ಹೋಗುತ್ತಾನೆ. ಆದರೆ ನಿಜ ತಿಳಿದ ನಂತರ ವಾಣಿಯನ್ನು ಸ್ವೀಕರಿಸುತ್ತಾನೆ.

ಸೌಂದರ್ಯಕ್ಕೆ ಮಾರುಹೋದಂತಹ ಜನರ ಜೀವನದಲ್ಲಿ ನಡೆಯುವ ಅನಾಹುತಗಳೇ ಹೆಚ್ಚು. ತಮ್ಮ ಸೌಂದರ್ಯದಲ್ಲಿ ಹೆಚ್ಚು ಒಲವಿರುವವರೂ ಬೇರೆಯವರನ್ನು ಕೀಳಾಗಿಯೂ, ಕುರೂಪಿಗಳಂತೆಯೂ ಕಾಣುತ್ತಾರೆ. ನೋಡಲು ಚೆನ್ನಾಗಿಲ್ಲದಿದ್ದರೂ ಮನಸ್ಸು ಚೆನ್ನಾಗಿದೆ ಎಂದು

ತಿಳಿದುಕೊಳ್ಳುವಂತಹ ದೊಡ್ಡ ಮನಸ್ಸು ಇರುವುದಿಲ್ಲ. "ಬಾಹ್ಯಸೌಂದರ್ಯಕ್ಕಿಂತ ಹೃದಯ ಸೌಂದರ್ಯಮುಖ್ಯ ಎಂದು ಅರಿತು ಬಾಳುವ ಜನ ಕಡಿಮೆ."[೧] ಬಾಹ್ಯ ಸೌಂದಯಕ್ಕೆ ಮಾರು ಹೋಗುವವರೇ ಹೆಚ್ಚು. ಒಳಗಿನ ಸೌಂದರ್ಯ ಅವರ ಕಲ್ಪನೆಗೂ ಬರುವುದಿಲ್ಲ. ಹೃದಯ ವೈಶಾಲ್ಯತೆ, ಹೃದಯ ಸೌಂದರ್ಯ ಇವುಗಳೊಂದಿಗೆ ಮೇಲಿನ ರೂಪಸೌಂದರ್ಯಗಳ ಸ್ಪರ್ಧೆಗೆ ನಿಂತು ಯಾವುದು ಗೆಲ್ಲುತ್ತದೆ ಎಂಬುದೇ ಇಲ್ಲಿ ಮುಖ್ಯವಾಗಿದೆ. ಬಡತನವಿದ್ದರೂ ಸುಖವಾಗಿದ್ದ ಸಂಸಾರ ಕಾಲಚಕ್ರದ ಏರಿಳಿತಕ್ಕೆ ಸಿಲುಕಿ ಛಿದ್ರವಾದರೂ ಬಂದದ್ದನ್ನು ಬಂದ ಹಾಗೆಯೇ ಸ್ವೀಕರಿಸುತ್ತಾ ನಡೆಯುವ ಮನೋಭಾವದ ಪಾತ್ರಗಳನ್ನು ನಿರೂಪಿಸಲಾಗಿದ್ದು, ಅದು ಅರ್ಥಗರ್ಭಿತವಾಗಿದೆ. ತಾಳಿ ಕಟ್ಟಿದರೆ ಮಾತ್ರ ಗಂಡಹೆಂಡತಿಯಾಗುತ್ತಾರೆಯೇ? ಇಲ್ಲಿ ದಾಂಪತ್ಯಕ್ಕೆ ಹೃದಯ, ಮನಸ್ಸುಗಳ ನಂಬಿಕೆ ಮುಖ್ಯವೇ? ಈ ವೈಚಾರಿಕತೆಯ ಮೂಲಕ ಸಂಪ್ರದಾಯದ ಕಟ್ಟಳೆಯನ್ನು ಮುರಿಯುವಂತಹ ಪ್ರಯತ್ನ ಮಾಡಿದ್ದಾರೆ. ಕೊನೆಯಲ್ಲಿ "ಮಾಂಗಲ್ಯದಿಂದ ಎಲ್ಲವೂ ಅಲ್ಲ, ಮನಸ್ಸಿನಿಂದ ಮಾತ್ರವೇ ಎಲ್ಲಾ ಸಾಧ್ಯ"[೨] ಎನ್ನುವ ಸಂದೇಶದೊಂದಿಗೆ ಲೇಖಕಿ ವೀಣಾಳ ಪಾತ್ರವನ್ನು ಮೂಡಿಸಿದ್ದಾರೆ.

ನಮ್ಮ ಸಮಾಜದಲ್ಲಿ ಮಹಿಳೆಯರ ಸ್ಥಿತಿ ಕೆಸರಿನಲ್ಲಿ ಸಿಕ್ಕಿ ಹಾಕಿಕೊಂಡು ಒದ್ದಾಡುವ ಸ್ಥಿತಿಯಾಗಿದೆ ಎಂಬುದನ್ನು ಲೇಖಕಿ ವಿಜಯ ಸುಬ್ಬರಾಜ್ ಅವರು ತಮ್ಮ ಅಭಿಪ್ರಾಯವನ್ನು 'ನೊಣ' ಎಂಬ ಕಥೆಯಲ್ಲಿ ಸಮರ್ಥಿಸುತ್ತಾರೆ. ಈ ಕಥೆಯ ನಾಯಕಿ ಸ್ತ್ರೀ ಸಂವೇದನೆಗೆ ಬದ್ಧವಾಗಿದ್ದು ಸ್ತ್ರೀಸುಧಾರಣೆ, ಸ್ತ್ರೀವಿಮೋಚನೆ, ಸ್ತ್ರೀಸ್ವಾತಂತ್ರ್ಯ ಮೊದಲಾದ ವಿಚಾರಗಳನ್ನು ಕುರಿತು ಮಾತನಾಡುವುದಲ್ಲದೆ ತೀರ ಪ್ರಗತಿಪರವಾದ ಹಾಗೂ ವೈಚಾರಿಕ ಆಲೋಚನೆಗಳನ್ನು ಮೈಗೂಡಿಸಿಕೊಂಡಿರುತ್ತಾಳೆ. ಅವಿವಾಹಿತಳಾದ ಈಕೆ ವಿವಾಹಿತ ಸ್ತ್ರೀಯರ ಬಗೆಗೆ ಗೇಲಿ ಮಾಡುತ್ತಾಳೆ. ಪುರುಷರ ದೌರ್ಜನ್ಯಹಿಂಸೆಗಳನ್ನು ಸಹಿಸಿಕೊಂಡು ಬದುಕುವ ಸ್ತ್ರೀಯರನ್ನು ಕುರಿತು ಈಕೆಗೆ ತಿರಸ್ಕಾರವಿದೆ. "ಹಾಳು ಮುಂಡೇವು ನಮ್ಮ ಹಿಂದೂ ಹೆಣ್ಣುಗಳು. ಗಂಡಂದಿರು ಚಂಡಾಲರಾದರೂ ಬಾಯಿಬಿಡೊಲ್ಲ. ಧೈರ್ಯ ಮಾಡಿ ಇನ್ನೊಬ್ಬನನ್ನು ಮದುವೆಯಾಗೊಲ್ಲ; ಸುಮ್ಮನೆ ಬಿದ್ದುಕೊಂಡು ಈ ನೊಣದ ಹಾಗೆ ಸಾಯೋತನಕ ಒದ್ದಾಡುತ್ತಲೇ ಇರುತ್ತವೆ." ಈ ಮಾತುಗಳು ಕಥಾನಾಯಕಿಯ ಮನೋಭಾವವನ್ನು ತಿಳಿಸುತ್ತದೆ. ಕಥೆಯಲ್ಲಿನ ರಮಾ ಎಂಬುವವಳ ಬದುಕು ಈ

೧.ಎಸ್.ಮಂಗಳಾಸತ್ಯನ್: ಅಮುಖ, ಪು.೨೫೩

೨.ಅದೇ, ಪುಟ-೨೮೮

ಮಾತುಗಳಿಗೆ ಸಮರ್ಥನೆಯನ್ನೊದಗಿಸುತ್ತದೆ. ಪುರುಷತ್ವವೇ ಇಲ್ಲದವನ ಹೆಂಡತಿಯಾಗಿ ರಮಾ ಬಹಳ ಕಷ್ಟ ಅನುಭವಿಸುತ್ತಾಳೆ. ಆಕೆಯ ವೇದನೆಯನ್ನು ಅರಿತ ನಿರೂಪಕಿ ಒಟ್ಟು ಪುರುಷ ಸಮುದಾಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾಳೆ. ಈ ಗಂಡುಗಳನ್ನೆಲ್ಲ ಕ್ರಿಮಿನಾಶಕ ಔಷಧಿಯಿಂದ ಕೊಲ್ಲಬೇಕೆನಿಸುತ್ತದೆ. ಅವಳ ಗಂಡನ ಸಂಪಾದನೆಯಿಂದ ಮಾಡಿದ ಕಾಫಿಯಾದ್ದರಿಂದ ಮುಟ್ಟುವುದಕ್ಕೆ ಅಸಹ್ಯವಾಯಿತು. ಇಂಥ ನುಡಿಗಳು ನಿರೂಪಕಿಯ ವೈಚಾರಿಕತೆಗೆ ಸಾಕ್ಷಿಯಾಗಿದೆ.

ಕತೆಯ ಅಂತ್ಯದಲ್ಲಿ ಲೇಖಕಿಯ ನಿಲುವು ಅಸ್ಪಷ್ಟವಾಗಿದೆ. ನಿರೂಪಕಿ ಮದುವೆಯಾಗಲು ಇಚ್ಛಿಸುವುದಿಲ್ಲ. ಅರ್ಥಾತ್ ಕುಟುಂಬ ಎಂಬ ಸಾಮಾಜಿಕ ಜವಾಬ್ದಾರಿಯನ್ನು ಹೊರಲು ಸಿದ್ಧಳಿಲ್ಲ. ಆದರೆ ತನ್ನ ಆಸೆ, ಆಕಾಂಕ್ಷೆ ಹಾಗೂ ದೈಹಿಕ ಕಾಮನೆಗಳನ್ನು ಈಡೇರಿಸಿಕೊಳ್ಳಲು ಮುಂದಾಗುತ್ತಾಳೆ. ಉದಾಹರಣೆಗೆ ಅವಿವಾಹಿತಳಾದ ಈಕೆ ಮೂರನೆಯ ಹೆಂಡತಿ ತೀರಿಕೊಂಡು ಒಂಟಿಯಾಗಿದ್ದ ಊರ ಪಟೇಲನೊಂದಿಗೆ ಲೈಂಗಿಕ ಸಂಬಂಧ ಬೆಳೆಸುವ ವಿವರಗಳನ್ನು ಗಮನಿಸಬಹುದು. ನಿರ್ಲಿಪ್ತ ಸ್ಥಿತಿಯಲ್ಲಿ ಈ ಘಟನೆಯನ್ನು ವಿವರಿಸುವ ಲೇಖಕಿಯ ನಿಲುವು ಏನಾಗರಿಬಹುದು? ಸ್ತ್ರೀವಾದಿಗಳ ಹೊಣೆಗೇಡಿತನವನ್ನು ಎತ್ತಿ ತೋರಿಸುವ ಉದ್ದೇಶವಿರಬಹುದೆ? ಅಥವಾ ಸ್ತ್ರೀಯರ ವಿವಾಹೇತಹ ಲೈಂಗಿಕ ಸಂಬಂಧಗಳನ್ನು ಅನುಮೋದಿಸುತ್ತಿರುವರೆ? ಸ್ಪಷ್ಟತೆ ಇಲ್ಲ. ಅದೇ ಕೆಲವು ಪಾಶ್ಚಾತ್ಯ ಸ್ತ್ರೀವಾದಿಗಳು ವಿವಾಹ ಸಂಸ್ಥೆಯನ್ನು ಮಹಿಳೆಯರು ತಿರಸ್ಕರಿಸಬೇಕೆಂದು ಕರೆಕೊಟ್ಟಿರುವುದರ ಪ್ರಭಾವ ಇರಬಹುದು. ಅದೇನೇ ಇದ್ದರೂ ಕಥೆಯಲ್ಲಿ ಸ್ತ್ರೀಸಂವೇದನೆಯ ಪ್ರಭಾವ ಹಾಗೂ ವೈಚಾರಿಕತೆಯ ಪ್ರಭಾಔ ದಟ್ಟವಾಗಿದೆ ಎಂಬುದರಲ್ಲಿ ಸಂದೇಹವಿಲ್ಲ.

ಕಾಳೇಗೌಡನಾಗವಾರರು ಕವಿ, ಕಥೆ, ಕಾದಂಬರಿಕಾರ, ವಿಮರ್ಶಕ, ವೈಚಾರಿಕ ಲೇಖಕ ಹಾಗೂ ಜಾನಪದತಜ್ಞರು ಆಗಿದ್ದಾರೆ. ಕಾಳೇಗೌಡ ನಾಗವಾರರ 'ಬೆಟ್ಟಸಾಲು ಮಳೆ' ಎಂಬ ನೀಳ್ಗತೆಯಲ್ಲಿ ಲೇಖಕರ ಬಂಡಾಯ ಧೋರಣೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಈ ಕತೆಯಲ್ಲಿ ಅವರ ಸಮಾಜವಾದಿ ನಿಲುವನ್ನು ಗುರುತಿಸಬಹುದು. ಆಧುನಿಕತೆಯ ಪರಿಣಾಮದಿಂದ ಗ್ರಾಮೀಣ ಬದುಕಿನಲ್ಲಿ ಉಂಟಾಗುತ್ತಿರುವ ಸ್ಥಿತ್ಯಂತರಗಳು ಪ್ರಗತಿಪರ ನೆಲೆಯಲ್ಲಿ ದಾಖಲಿಸುತ್ತಲೇ, ಗ್ರಾಮೀಣ ಜೀವನದಲ್ಲಿನ ಹಳೆಯ ಮತ್ತು ಹೊಸ ತಲೆಮಾರುಗಳ ನಡುವಿನ ಸಂಘರ್ಷಗಳನ್ನು ಪ್ರಭುತ್ವದ ದುಷ್ಟತನವನ್ನು ದುರ್ಬಲರ ಅಸಹಾಯಕತೆಯನ್ನು, ಉಳ್ಳವರ ಅಟ್ಟಹಾಸವನ್ನು ಹಾಗೂ ಜಾಗೃತಿಯನ್ನು ಕಲಾತ್ಮಕವಾಗಿ ಹಿಡಿದಿಟ್ಟಿದ್ದಾರೆ. ತಿಮ್ಮಕ್ಕ ಎಂಬ ಬಡ ಕೂಲಿಕಾರ್ಮಿಕ ಹೆಂಗಸಿನ ಕುಟುಂಬದ ವಿವರಗಳೊಂದಿಗೆ ಕಥೆ ಬಿಚ್ಚಿಕೊಳ್ಳುತ್ತದೆ. ಪೀಚಣ್ಣ ಎಂಬ ದುರ್ಬಲ ಹಾಗೂ ಪಲಾಯನವಾದಿ ವ್ಯಕ್ತಿಯ ಹೆಂಡತಿಯಾದ ತಿಮ್ಮಕ್ಕ ಈ ಕತೆಯ ಮುಖ್ಯಪಾತ್ರಗಳಲ್ಲಿ ಒಂದು. ಈ

ಕತೆಯಲ್ಲಿ ಬಹಳ ಧೈರ್ಯಶಾಲಿ, ಸಾಹಸಿ ಹಾಗೂ ದಿಟ್ಟತನದಿಂದ ಬದುಕನ್ನು ಎದುರಿಸುವಳಾಗಿ ತಿಮ್ಮಕ್ಕ ಚಿತ್ರಿತವಾಗಿದ್ದಾಳೆ. ಈರಣ್ಣ ಎಂಬುವನ ಹೆಂಡತಿ ಆತ್ಮಹತ್ಯೆ ಮಾಡಿಕೊಳ್ಳುವ ಘಟನೆಯಿಂದ ಕಥೆ ಮುಖ್ಯ ಘಟನೆಗಳು ಆರಂಭವಾಗುತ್ತವೆ. ಆಕೆಯ ಸಾವಿನ ಬಗೆಗೆ ಮಾಹಿತಿ ಕಲೆ ಹಾಕಲು ಹಳ್ಳಿಗೆ ಬಂದ ಪೋಲೀಸರು ಅಶ್ವತ್ಥ ಎಂಬ ಯುವಕನಿಗೆ ವಿನಾಕಾರಣ ಥಳಿಸಿದ್ದರಿಂದ ಉಂಟಾದ ಘರ್ಷಣೆ ಊರ ಹೆಂಗಸರಿಂದ ಪೋಲಿಸರು ಪೊರಕೆ ಚಪ್ಪಲಿಗಳಿಂದ ಹೊಡೆತ ತಿಂದು, ಹಗ್ಗದಿಂದ ಕಟ್ಟಿಸಿಕೊಂಡು ಇದಕ್ಕೆ ಪ್ರತಿಯಾಗಿ ಊರಿನ ಕೆಲವು ಯುವಕರನ್ನು ಬಂಧಿಸುವುದರಲ್ಲಿ ಪರ್ಯವಸಾನಗೊಳ್ಳುತ್ತದೆ. ಶಾಂತಿಯಿಂದ ಇದ್ದ ಹಳ್ಳಿಯ ವಾತಾವರಣವನ್ನು ಕದಡಲು ಕಾರಣವಾದ ಪೋಲಿಸರು ಪ್ರಭುತ್ವದ ಸಂಕೇತವಾಗಿದ್ದಾರೆ. ಆ ಗ್ರಾಮದಲ್ಲಿ ಅವರು ನಡೆಸುವ ದಾಂದಲೆಯಿಂದ ಪ್ರಭುತ್ವದ ಕ್ರೌರ್ಯವನ್ನು ಅರಿಯಬಹುದಾಗಿದೆ. ಈ ಕ್ರೌರ್ಯ ಹೆಚ್ಚಾದಾಗ ಜನಸಮುದಾಯ ಉಗ್ರವಾಗಿ ಪ್ರತಿಕ್ರಿಯಿಸುತ್ತದೆ ಎಂಬುದಕ್ಕೆ ಊರಿನ ಜನರು ಪೋಲಿಸರನ್ನು ಥಳಿಸಿ ಕಟ್ಟಿ ಹಾಕುವ ಘಟನೆ ಸಾಕ್ಷಿಯಾಗಿದೆ. ಲೇಖಕರು "ಪ್ರಭುತ್ವದ ಕೊರತೆಯನ್ನು ಇಂಥ ಕಡೆಗಳಲ್ಲಿ ಸಮರ್ಥವಾಗಿ ಮೂಡಿಸುವರು. ಹಾಗೆಯೇ ಈ ತರಹದ ಕ್ರೂರತೆಯ ವಿರುದ್ಧ ಮನುಷ್ಯನ ಆಳದಲ್ಲಿ ಕುಳಿತಿರುವ ಅಸಹನೆಯು ಸ್ಫೋಟವಾದಾಗ ಪ್ರಭುತ್ವದ ಶಕ್ತಿ ನಡುಗುವುದರಲ್ಲಿ ಸಂಶಯವಿಲ್ಲವೆಂಬುದನ್ನು ಇಲ್ಲಿ ತಿಳಿಯಬಹುದು."[೧]

ಕಥೆಯಲ್ಲಿ ಕರಿತಿಮ್ಮಶೆಟ್ಟಿ, ಅಶ್ವತ್ಥ ಮತ್ತು ದಲ್ಲಾಳಿ ಎಂಬ ಮೂರು ಪಾತ್ರಗಳು ಹೊಸ ತಲೆಮಾರಿನ ಪ್ರತೀಕವಾಗಿವೆ. ಈ ಯುವಕರು ಊರಿನಲ್ಲಿ ಹಳೆಯ ಸಂಪ್ರದಾಯಗಳು, ಪದ್ಧತಿಗಳು ಮತ್ತು ಜಾತಿಕಟ್ಟಳೆಗಳ ವಿರುದ್ಧ ಸೆಟೆದು ನಿಲ್ಲುತ್ತಾರೆ. ಊರಿನಲ್ಲಿ ಹಲವು ರೀತಿಯ ಬದಲಾವಣೆಗಳಿಗೆ ಕಾರಣರಾಗಿ ವೈಜ್ಞಾನಿಕ ಧೋರಣೆ ಬೆಳೆಯಲು ಕಾರಣರಾಗುತ್ತಾರೆ. ಇಲ್ಲಿನ ಶೆಟ್ಟಿ ಅತ್ಯಂತ ಪ್ರಗತಿಪರವಾಗಿ ಚಿತ್ರಿಸಲ್ಪಟ್ಟಿದ್ದಾನೆ. ಅವನು ಕುಂಬಾರ ಜಾತಿಗೆ ಸೇರಿದವನಾಗಿದ್ದರೂ ಹೊಲೆಗೇರಿಯ ಗುಡಿಸಲುಗಳಿಗೆ ಭೇಟಿ ಕೊಟ್ಟು ಅವರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾನೆ. ಅವರೊಂದಿಗೆ ಸಂಪೂರ್ಣವಾಗಿ ಬೆರೆಯುತ್ತಾನೆ. ಅವರೊಂದಿಗೆ ಊಟ ಮಾಡುತ್ತಾನೆ. ಈ ಕಾರಣಕ್ಕೆ ಮೇಲ್ಜಾತಿ ಮುಖಂಡರು ವಿಧಿಸಿದ ನಿರ್ಬಂಧಗಳನ್ನು ಉಲ್ಲಂಘಿಸುತ್ತಾನೆ. ಉದಾಹರಣೆಗೆ ಸಾವ್ಕಾರನ ಅವ್ವನ ಶವನ ಮೆರವಣಿಗೆ ಸಂದರ್ಭದಲ್ಲಿ ತಮಟೆ ಬಡಿಯಲು ನಿರಾಕರಿಸಿದ ಹೊಲೆಯರಿಗೆ ಒಕ್ಕಲಿಗರ ಮುಖಂಡರು ಸಾಮಾಜಿಕ ಬಹಿಷ್ಕಾರ ಹಾಕುತ್ತಾರೆ. ಬೆಂಕಿ ನೀರು ಕೊಡಬಾರದು, ಕೂಲಿಗೆ

೧.ದೇವಯ್ಯ ಹರವೆ: ನಾಗವಾರರ ಕಥೆಗಳಲ್ಲಿ ವೈಚಾರಿಕತೆ ಪ್ರಚೋದನೆ ದಲಿತ ಮತ್ತು ಸಾಹಿತ್ಯ ಇತರ ಲೇಖನಗಳು, ಪು, ೧೬೦

ಕರೆಯಬಾರದು ಎಂಬ ನಿರ್ಬಂಧಗಳಿಂದ ಹೊಲೆಯರಿಗೆ ಬಹಳ ತೊಮದರೆಯಾಗುತ್ತದೆ. ಆ ಸಮಯದಲ್ಲಿ ಶೆಟ್ಟಿ ಮತ್ತು ಸಂಗಾತಿಗಳಾದ ಅಶ್ವತ್ಥ, ದಲ್ಲಾಳಿ ಹೊಲೆಯರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆ. ಊರ ಮುಖಂಡರ ಆಜ್ಞೆಯನ್ನು ಧಿಕ್ಕರಿಸಿ ದರೆಂಬ ಕಾರಣಕ್ಕೆ ಈ ಯುವಕರನ್ನು ನ್ಯಾಯಕ್ಕೆ ಕರೆದಾಗ ಹೋಗದೆ, ಪೋಲೀಸರಿಗೆ ದೂರು ನೀಡಿರುವುದಾಗಿ ಹೆದರಿಸುತ್ತಾರೆ. ಇದರಿಂದ ಹೆದರಿದ ಮೇಲ್ಜಾತಿಯವರು ಹೊಲೆಯರಿಗೆ ವಿಧಿಸಿದ್ದ ಬಹಿಷ್ಕಾರವನ್ನು ಹಿಂತೆಗೆದುಕೊಳ್ಳುತ್ತಾರೆ. ಇಂಥ ಬದಲಾವಣೆಗಳನ್ನು ಕಥೆಗಾರರು ಉದ್ದೇಶಪೂರ್ವಕವಾಗಿ ದಾಖಲಿಸುವುದು ಸಮಾಜ ಬದಲಾವಣೆಯ ಅಪೇಕ್ಷೆಯಿಂದ ಎಂಬುದನ್ನು ಅರಿಯಬಹುದಾಗಿದೆ. ಈ ಕತೆಯಲ್ಲಿ ಅಂತರ್ಜಾತಿ ಪ್ರೇಮ ಮತ್ತು ವಿವಾಹಗಳ ಪ್ರಸ್ತಾಪವೂ ಇದೆ. ಶೆಟ್ಟಿ ಕುಂಬಾರ ಜಾತಿಯವನಾಗಿದ್ದು, ಒಕ್ಕಲಿಗರ ಜಾತಿಗೆ ಸೇರಿದ ತಿಮ್ಮಕ್ಕನ ಮಗಳು ಪುಟ್ಟಲಕ್ಷ್ಮಿಯನ್ನು ಪ್ರೀತಿಸಿದ್ದು, ಕೊನೆಯಲ್ಲಿ ಅವರು ಊರು ಬಿಟ್ಟು ಹೋಗಿ ಮದುವೆ ಮಾಡಿಕೊಂಡರೆಂಬ ಸೂಚನೆಯಿದೆ. ಇಂತಹ ಘಟನೆಗಳು ವೈಚಾರಿಕತೆಯಿಂದ ಪ್ರೇರಿತವಾದವುಗಳೆಂಬುದರಲ್ಲಿ ಸಂದೇಹವಿಲ್ಲ.

ಇದೇ ಲೇಖಕರ ಇತರ ಸಣ್ಣ ಕತೆಗಳನ್ನು ಈ ನಿಟ್ಟಿನಲ್ಲಿ ಅವಲೋಕಿಸಬಹುದಾಗಿದೆ. 'ಕೂಡಿಕೆ' ಎಂಬ ಕತೆಯಲ್ಲಿ ಸ್ತ್ರೀಪರ ಕಾಳಜಿ ವ್ಯಕ್ತವಾಗಿದೆ. ಸ್ತ್ರೀಸಂವೇದನೆಯ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈ ಕಥೆ ಗಮನಾರ್ಹವಾಗಿದೆ. ನಮ್ಮ ಸಮಾಜದಲ್ಲಿ ಮದುವೆಯಾಗಿ ಗಂಡನ ಮನೆಗೆ ಹೋಗುವ ಹೆಣ್ಣು ಅಲ್ಲಿ ಅನುಭವಿಸು ನೋವು, ಸಂಕಟಗಳನ್ನು ಲೇಖಕರು ಒಂದೆರಡು ಘಟನೆಗಳ ನಿದರ್ಶನದಿಂದ ಪರಿಣಾಮಕಾರಿಯಾಗಿ ನಿರೂಪಿಸಿದ್ದಾರೆ. ಸ್ತ್ರೀಯರನ್ನು ಕೇವಲ ಸಹನಾಮೂರ್ತಿಯಾಗಿ ಚಿತ್ರಿಸದೆ, ದೌರ್ಜನ್ಯ ಶೋಷಣೆಗಳ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸುವ ಧೈರ್ಯ ಸಾಹಸಗಳನ್ನು ಮೆರೆಯುವವರನ್ನಾಗಿ ಚಿತ್ರಿಸಿದ್ದಾರೆ. ಈ ಕತೆಯ ನಾಯಕಿ ತನ್ನ ಮೇಲೆ ಆಕ್ರಮಣ ಮಾಡಿ ಅತ್ಯಾಚಾರಕ್ಕೆ ಯತ್ನಿಸಿದ ಗೌಡನಿಗೆ ರಕ್ತ ಬರುವಂತೆ ಚಪ್ಪಲಿಯಲ್ಲಿ ಹೊಡೆಯುತ್ತಾಳೆ. ತನ್ನ ರಕ್ಷಣೆಗೆ ನಿಲ್ಲದ ಗಂಡನನ್ನು ತೊರೆದು ತೌರಿಗೆ ಹಿಂದಿರುಗಿ ಧೈರ್ಯವಾಗಿ ಬದುಕುತ್ತಾಳೆ. ಕೊನೆಗೆ ತನಗೆ ಇಷ್ಟವಾದವನೊಂದಿಗೆ ಕೂಡಿಕೆ ಮಾಡಿಕೊಳ್ಳುತ್ತಾಳೆ. ಇಂತಹ ದಿಟ್ಟತನ ಮತ್ತು ಸಾಹಸಗಳನ್ನು ಸ್ತ್ರೀಪಾತ್ರದಲ್ಲಿ ತುಂಬಿರುವ ಲೇಖಕರು ವಾಸ್ತವ ಸಮಾಜದಲ್ಲಿಯೂ ವೈಚಾರಿಕತೆಯುಳ್ಳ ಇಂತಹ ಮಹಿಳಾ ಸಮುದಾಯವನ್ನೇ ನಿರೀಕ್ಷಿಸುತ್ತಿದ್ದಾರೆಂದರೆ ತಪ್ಪಾಗಲಾರದು.

ಸಾಂಪ್ರದಾಯಿಕ ವಿವಾಹ ಸಂಬಂಧ ಮತ್ತು ಪತಿನಿಷ್ಠೆ ಎಂಬ ನಿಯಮಗಳನ್ನು ಉಲ್ಲಂಘಿಸುವ ಪ್ರವೃತ್ತಿ ನೇಮಿಚಂದ್ರ ಅವರ 'ನಮ್ಮ ಕನಸುಗಳಲ್ಲಿ ನೀವಿದ್ದೀರಿ' ಎಂಬ ಕಥೆಯಲ್ಲಿಯು ದಾಖಲಾಗಿದೆ. ಇಲ್ಲಿನ ಕಥಾನಾಯಕಿ ಕಾವ್ಯ ತನ್ನ ಗಂಡನ ಸ್ನೇಹಿತನೊಂದಿಗೆ ಅನೈತಿಕ ಸಂಬಂಧ

ಇಟ್ಟುಕೊಳ್ಳುವುದಲ್ಲದೆ, ಆತನೊಂದಿಗೆ ಹೊರಟು ಹೋಗುತ್ತಾಳೆ. ಅವಳು ತನ್ನ ಕೃತ್ಯದ ಬಗೆಗೆ ಪಶ್ಚಾತ್ತಾಪ ಪಡುವುದಿಲ್ಲ. ಅದು ಅವಳ ದೃಷ್ಟಿಯಲ್ಲಿ ಅನೈತಿಕವಲ್ಲ. ಇನ್ನೊಬ್ಬ ಗಂಡನೊಂದಿಗಿದ್ದಾಗಲೂ ತನ್ನ ಸ್ವಾತಂತ್ರ್ಯ ಕಳೆದುಕೊಳ್ಳಲು ಆಕೆ ಸಿದ್ಧಳಿಲ್ಲ. ತನ್ನ ಎರಡನೇ ಗಂಡನೊಂದಿಗೆ ಸಂಸಾರ ಪ್ರಾರಂಭಿಸಿದಾಗ ಅಲ್ಲಿನ ಹೆಂಗಸೊಬ್ಬಳು 'ಮಿಸೆಸ್ ಕಿರಣ್' ಎಂದು ಕರೆದಿದ್ದಕ್ಕೆ ಕಾವ್ಯ "ನಾನ್ಯಾರದೋ ಮಿಸೆಸ್ ಆಗಿ ಏಕೆ ಗುರುತಿಸಲ್ಪಡಬೇಕು? ನಾನು ಕಾವ್ಯ ಅಷ್ಟೇ, ಮತ್ಯಾರದೋ ಹೆಸರನ್ನು ಸೇರಿಸಿಕೊಂಡೇಕೆ ಇಂಥವರ ಸ್ವತ್ತು ಎಂದು ಸಾರಬೇಕು"[೧] ಎನ್ನುತ್ತಾಳೆ. ಇಂಥ ಪ್ರಗತಿಪರ ಧೋರಣೆಯ ವೈಚಾರಿಕತೆಯ ಪ್ರಭಾವದಿಂದ ರೂಢಿಯಾದುದು ಎಂಬುದರಲ್ಲಿ ಸಂದೇಹವಿಲ್ಲ. ಗಂಡನಿಗೆ ನಿಷ್ಠೆಯಿಂದಿದ್ದು, ವಿಧೇಯಳಾಗಿದ್ದು, ಅವನನ್ನು ಅನುಸರಿಸಿ ನಡೆಯುವ ಸತಿಯೇ ಆದರ್ಶ ಗೃಹಿಣಿ ಎಂಬ ಪಾರಂಪರಿಕ ಕಲ್ಪನೆಯನ್ನು ಭಂಜಿಸುವುದು ಸ್ತ್ರೀವಾದಿಗಳ ಸಾಮಾನ್ಯ ಪ್ರವೃತ್ತಿ. ನೇಮಿಚಂದ್ರ ಅವರು ತಮ್ಮ ಕಥೆಗಳಲ್ಲಿ ಇಂಥ ಪಾತ್ರಗಳು ಮತ್ತು ಘಟನೆಗಳನ್ನು ಕಲ್ಪಿಸಿ ಸ್ತ್ರೀವಾದಿ ಧೋರಣೆಯನ್ನು ಸಾಕಾರಗೊಳಿಸಿದ್ದಾರೆ. ಈ ಲೇಖಕಿಯ 'ಮತ್ತೆ ಬರೆದ ಕವನಗಳು' ಈ ರೀತಿಯ ಪುರೋಗಾಮಿ ಕಥೆಯಾಗಿದೆ. ಇಲ್ಲಿನ ಕಥಾನಾಯಕಿ ಅನು, ಕಾನ್ಫರೆನ್ಸ್‌ಗೆಂದು ಕಾಶ್ಮೀರಕ್ಕೆ ಹೋದವಳು ತನ್ನ ಗಂಡನ್ನು ಮರೆತು ಅಜಯ್ ಎಂಬ ಇನ್ನೊಬ್ಬ ಯುವಕನೊಂದಿಗೆ ಪ್ರವಾಸ ಕೈಗೊಂಡು, ಸ್ನೇಹ ಬೆಳೆಸುತ್ತಾಳೆ ಮುಂದೆ ಆ ಸ್ನೇಹ ಪ್ರೇಮವಾಗುತ್ತದೆ. ಇದು ಸಾಂಪ್ರದಾಯಿಕ ನಿಯಮಕ್ಕೆ ವಿರುದ್ಧವಾಗಿದೆ. ಗಂಡನಿದ್ದೂ ಇನ್ನೊಬ್ಬ ಪುರುಷನೊಂದಿಗೆ ಪ್ರೇಮದಿಂದಿರುವುದು ಸಂಪ್ರದಾಯವಾದಿಗಳ ದೃಷ್ಟಿಯಲ್ಲಿ ಅನೈತಿಕ ಹಾಗೂ ಸ್ವೇಚ್ಛಾಚಾರವಾಗುತ್ತದೆ. ಆದರೆ ಸ್ತ್ರೀವಾದಿಗಳ ದೃಷ್ಟಿಯಲ್ಲಿ ಅದು ಲೈಂಗಿಕ ಸ್ವಾತಂತ್ರ್ಯವಾಗುತ್ತದೆ. "ಅಪ್ಪ ಹಾಕಿದ ಆಲದ ಮರ ಅಲ್ಲೆಲ್ಲೊ ಬೆಂಗಳೂರಲ್ಲೇ ಕೊನೆಯಾಗಿರಬೇಕು"[೨] ಎಂದು ಕಥಾನಾಯಕಿಯಿಂದ ಹೇಳಿಸಿರುವ ಲೇಖಕಿ ನೇಮಿಚಂದ್ರರು ಸಂಪ್ರದಾಯ ವಿರೋಧಿ ಎಂಬುದನ್ನು ಸಾಬೀತುಗೊಳಿಸಿದ್ದಾರೆ. ಇಂಥ ಅತಿ ಪ್ರಗತಿಗಾಮಿತ್ವವು ಸಮಾಜದ ಹಿತಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ಪುರುಷ ವಿರೋಧಿಧೋರಣೆ ಮತ್ತು ಲೈಂಗಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಸಾಮಾಜಿಕ ಅನೈತಿಕತೆ ಹಾಗೂ ಅರಾಜಕತೆಯುಂಟಾಗದಂತೆ ಎಚ್ಚರ ವಹಿಸುವುದು ಸಾಹಿತಿಗಳ ಕರ್ತವ್ಯವೆಂಬುದನ್ನು ಇಂಥ ಲೇಖಕಿಯರು ಮರೆಯಬಾರದು. ಲೇಖಕಿಯ ಈ ಧೋರಣೆ ವೈಚಾರಿಕತೆ ಹಾಗೂ ಸ್ತ್ರೀವಾದದಿಂದ ಪ್ರೇರಿತವಾದುದು ಎಂಬುದು ವೇದ್ಯವಾಗುತ್ತದೆ.

೧.ನೇಮಿಚಂದ್ರ; ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಪು, ೩೦೧
೨. ನೇಮಿಚಂದ್ರ; ಮತ್ತೆ ಬರೆದ ಕವನಗಳು, ಪುಟ-೨೦೪

ಕೆಲವು ಪಾಶ್ಚಾತ್ಯ ತೀವ್ರವಾದಿ ಸ್ತ್ರೀವಾದಿಗಳು, ಮಹಿಳೆಯರು ವಿವಾಹ ಸಂಸ್ಥೆಯನ್ನೇ ಬಹಿಷ್ಕರಿಸಬೇಕೆಂದು ಕರೆಕೊಟ್ಟಿರುವುದು ಹಿಂದೆಯೇ ನಾವು ಗಮನಿಸಿದ್ದೇವೆ. ಅವರ ದೃಷ್ಟಿಯಲ್ಲಿ ಮದುವೆ, ಹೆಣ್ಣಿನ ಬದುಕನ್ನು ನಾಶ ಮಾಡುವ, ಅವರ ಕನಸುಗಳನ್ನು ಭಗ್ನಗೊಳಿಸುವ ಶೋಷಣಾ ಸಂಸ್ಥೆ. ಈ ಧೋರಣೆ ನೇಮಿಚಂದ್ರ ಅವರ 'ಮತ್ತೆ ಬರೆದ ಕವನಗಳು' ಕಥೆಯಲ್ಲಿ ಪ್ರತಿಬಿಂಬಿತವಾಗಿದೆ. ಇಲ್ಲಿನ ಕಥಾನಾಯಕಿ ತನ್ನ ಪ್ರೇಮಿಯೊಂದಿಗೆ ತನ್ನ ಮದುವೆಯನ್ನು ಕುರಿತು ಮಾತನಾಡುತ್ತಾ "ನನ್ನ ವಿವಾಹವಾದ ವರ್ಷ ಕಾವ್ಯನಾಮದಡಿ ಅಡಗಿದ್ದ ಕಿಶೋರ ಕನಸುಗಳೆಲ್ಲ ತಣ್ಣನೆ ಅನುಭವದ ಅಡಿಯಲ್ಲಿ ನಿಸ್ಸಾರವಾದ ವರ್ಷ"[೧] ಎನ್ನುತ್ತಾಳೆ.ಇದು ವಿವಾಹವೆಂಬುದು ಪವಿತ್ರ ಬಂಧವೆಂಬ ಸಾಂಪ್ರದಾಯಿಕ ಪರಿಕಲ್ಪನೆಗೆ ವಿರುದ್ಧವಾಗಿದೆ. ಸಮಾಜದ ಸುವ್ಯವಸ್ಥೆಗೆ ಕಾರಣವಾಗಿರುವ ಮದುವೆಯನ್ನು ವಿರೋಧಿಸುವ, ವಿವಾಹ ಬಾಹಿರ ಸಂಬಂಧಗಳನ್ನು ಪ್ರೋತ್ಸಾಹಿಸುವ ಸ್ತ್ರೀವಾದದ ಅತಿರೇಕ ಅಪಾಯಕಾರಿಯಾದುದು ಎನ್ನದೆ ವಿಧಿಯಿಲ್ಲ.

ನೇಮಿಚಂದ್ರರ 'ಕಪ್ಪು ಮೋಡ ಬೆಳ್ಳಿ ಅಂಚು' ಕಥೆಯಲ್ಲಿ ಪುರುಷ ವಿರೋಧಿ ದೋರಣೆಯಿದೆ. ಇಲ್ಲಿ ಪುರುಷ ಪಾತ್ರವನ್ನು ಖಳನಾಯಕನನ್ನಾಗಿ ಚಿತ್ರಿಸಲಾಗಿದೆ, ಮತ್ತು ಸ್ತ್ರೀ ಪಾತ್ರಗಳಲ್ಲಿ ಧೈರ್ಯ, ಸಾಹಸ, ವೈಚಾರಿಕತೆಗಳನ್ನು ತುಂಬಲಾಗಿದೆ. ಅಲ್ಲದೆ ಪುರುಷ ಅವಲಂಭನೆಯಿಂದ ಹಾಗೂ ಅವರ ಹಿಡಿತದಿಂದ ಸ್ತ್ರೀಪಾತ್ರಗಳು ಬಿಡುಗಡೆಗೊಂಡಂತೆ ಚಿತ್ರಿಸಲಾಗಿದೆ.

ಈ ಕಥೆಯಲ್ಲಿನ ಶೀಲಾ ವೃತ್ತಿಯಿಂದ ವೈಧ್ಯೆಯಾಗಿದ್ದು, ಇತರ ಸಾಂಪ್ರದಾಯಿಕ ಸ್ತ್ರೀಯರಿಗಿಂತ ತೀರ ಭಿನ್ನವಾಗಿದ್ದಾಳೆ. ಮದುವೆಯ ಬಗೆಗೆ ಅಣಕಿಸಿ ಮಾತನಾಡುತ್ತಾಳೆ. ಮಹಿಳೆಯರ ಸೌಮ್ಯ ಹಾಗೂ ನಯ ನಾಜೂಕಿನ ಭಾವನೆಗಳನ್ನು ವಿರೋಧಿಸುತ್ತಾಳೆ. ಮಧು ಎಂಬ ಇನ್ನೊಂದು ಸ್ತ್ರೀಪಾತ್ರ ಸ್ವಾವಲಂಭಿಯಾಗಿ ಬಾಳಲು ಉತ್ತೇಜನ ನೀಡಿದವಳು, ಶೀಲಾ. ಈಕೆಯ ಪ್ರೋತ್ಸಾಹದಿಂದ ಮಧು ತನ್ನನ್ನು ನಿರ್ಲಕ್ಷಿಸಿದ್ದ ತನ್ನ ಗಂಡನಿಗೆ ವಿಚ್ಛೇಧನ ನೀಡಿ, ಬಟ್ಟೆ ಹೊಲಿದು, ಉಡುಪು ವಿನ್ಯಾಸದ ಅಂಗಡಿ ತೆರೆದು ಸ್ವತಂತ್ರವಾಗಿ ಜೀವನ ಸಾಗಿಸುತ್ತಾಳೆ. ಹೀಗೆ ಇಲ್ಲಿ ಪುರುಷರನ್ನು ದುಷರನ್ನಾಗಿಯೂ, ಸ್ತ್ರೀಯರನ್ನು ಸದ್ಗುಣಿಗಳು, ಸಾಹಸಿಗಳು, ಸ್ವಾವಲಂಭಿಗಳು, ಸ್ವಾಭಿಮಾನಿಗಳು ಮತ್ತು ಪ್ರಗತಿಪರರೆಂದು ಕಲ್ಪಿಸಿರುವುದು ಸ್ತ್ರೀಪರ ಕಾಳಜಿಯಿಂದ ಎಂಬುದು ಸುಲಭವಾಗಿ ಗೊತ್ತಾಗುತ್ತದೆ.

೧.ನೇಮಿಚಂದ್ರ; ಮತ್ತೆ ಬರೆದ ಕವನಗಳು, ಪುಟ-೧೮೬

ಲೇಖಕಿಯ 'ತ್ರಿಕೋನದಾಚೆಗೆ' ಎಂಬ ಕಥೆಯಲ್ಲಿಯೂ ಪುರುಷನ ಶೋಷಕ ವೃತ್ತಿಯನ್ನು ಎತ್ತಿ ತೋರಿಸಲಾಗಿದೆ. ಇಲ್ಲಿನ ಮೂರು ಪಾತ್ರಗಳಲ್ಲಿ ಎರಡು ಸ್ತ್ರೀಪಾತ್ರಗಳು ಮತ್ತು ಒಂದು ಪುರುಷ ಪಾತ್ರವಿದ್ದು, ಈ ಪುರುಷ ಪಾತ್ರ ಎರಡು ಸ್ತ್ರೀ ಪಾತ್ರಗಳ ಪಾಲಿಗೆ ಶೋಷಕನಾಗಿದ್ದಾನೆ. ತುಷಾರ್ ಎಂಬ ನಲವತ್ತೈದರ ವಿವಾಹಿತ ವ್ಯಕ್ತಿ ಹೆಂಡತಿ, ಮಕ್ಕಳಿದ್ದು, ಇಪ್ಪತ್ತೈದರ ಹರೆಯದ ವರ್ಷಾಳನ್ನು ಪರಿಚಯ ಮಾಡಿಕೊಂಡು ಅವಳೊಂದಿಗೆ ಪ್ರೀತಿ ಪ್ರೇಮದ ನಾಟಕವಾಡುತ್ತಾನೆ. ಅದಕ್ಕಾಗಿ ತನ್ನ ಹೆಂಡತಿಗೆ ವಿಚ್ಛೇದನ ನೀಡಲು ಮುಂದಾಗುತ್ತಾನೆ ಇಲ್ಲಿ ಸ್ತ್ರೀಯರಿಗೆ ಅನ್ಯಾಯವಾಗುತ್ತಿದೆ ಎಂಬುದು ಸತ್ಯ. ಆದರೆ ಹಾಗಾಗಲು ಸ್ತ್ರೀಯರೂ ಕಾರಣ ಎಂಬುದನ್ನು ಲೇಖಕಿ ಮರೆತಿಲ್ಲ. ಈ ಕಥೆಯಲ್ಲಿ ಮಧ್ಯವಯಸ್ಕನಾದ ತುಷಾರ್‌ನನ್ನು ಪ್ರೀತಿಸುವ ವರ್ಷಾ ಅವಿದ್ಯಾವಂತಳಲ್ಲ. ಇಂಜಿನಿಯರ್ ಪದವೀಧರೆಯಾಗಿದ್ದು ಪ್ರತಿಷ್ಠಿತ ಸಂಸ್ಥೆಯೊಂದರ ನೌಕರಳು, ಇಂಥ ಸುಶಿಕ್ಷಿತ ಮಹಿಳೆ ಪುರುಷರ ಲಂಪಟತನಕ್ಕೆ ಅಷ್ಟು ಸುಲಭವಾಗಿ ಬಲಿಯಾಗುತ್ತಾಳೆಂದರೆ ಅದರಲ್ಲಿ ಅವರ ಸ್ವಾರ್ಥವಿದೆ ಎಂಬುದು ತಿಳಿಯುತ್ತದೆ. ಲೇಖಕಿಗೆ ಈ ಸತ್ಯ ತಿಳಿದಿರುವುದರಿಂದಲೇ ತುಷಾರನ ಪತ್ನಿ ಲೀಲಾಳ ಬಾಯಲ್ಲಿ "ಗಂಡಸನ್ನು ದೂಷಿಸಿ ಏನು ಪ್ರಯೋಜನ, ಸ್ವತಃ ಗಂಡು ಹೆಣ್ಣನ್ನು ಶೋಷಿಸಲು ಅವಕಾಶ ಮಾಡಿಕೊಡೊ ನಿಮ್ಮಂಥ ಹೆಣ್ಣುಗಳಿರುವಾಗ ಶೋಷಣೆಗೆಲ್ಲಿ ಅಂತ್ಯ"[೧] ಎಂದು ಹೇಳಿಸಿದ್ದಾರೆ. ಕಥೆಯ ಅಂತ್ಯದಲ್ಲಿ ವರ್ಷಾ ತುಷಾರ್‌ನ ಮೋಸವನ್ನು ಅರಿತುಕೊಂಡು ಅವನನನ್ನು ದೂರಮಾಡುತ್ತಾಳೆ. ಇದು ಪುರುಷರ ಶೋಷಣೆಯ ವಿರುದ್ಧ ಸ್ತ್ರೀಯರಲ್ಲಿ ಉಂಟಾಗುತ್ತಿರುವ ಜಾಗೃತಿಯನ್ನು ಹಾಗೂ ವೈಚಾರಿಕತೆಯನ್ನು ಸಂಕೇತಿಸುತ್ತದೆ.

'ನನ್ನದಲ್ಲದ ಬದುಕಿಗಾಗಿ' ಎಂಬ ಕಥೆಯಲ್ಲಿ ನೇಮಿಚಂದ್ರ ಅವರು ಪಿತೃಪ್ರಧಾನ ವ್ಯವಸ್ಥೆಯಲ್ಲಿನ ಸ್ತ್ರೀ ಪುರುಷ ತಾರತಮ್ಯ ನೀತಿಯನ್ನು ಎತ್ತಿ ತೋರಿಸಿದ್ದಾರೆ. ಹೆಣ್ಣಿಗೆ ಮಾತ್ರ ಪಾವಿತ್ರ್ಯ, ಶೀಲ, ಕನ್ಯತ್ವಗಳನ್ನು ಕಡ್ಡಾಯಗೊಳಿಸಿ, ಗಂಡು ಎರಡನೆಯ ಮದುವೆಯಲ್ಲಿಯೂ ಹೆಣ್ಣಿನಲ್ಲಿ ಇವುಗಳನ್ನು ನಿರೀಕ್ಷಿಸುವುದನ್ನು ಲೇಖಕಿ ಈ ಕಥೆಯ ಮೂಲಕ ಖಂಡಿಸಿದ್ದಾರೆ, ಇಲ್ಲಿ ವಿವಾಹ ನಿಶ್ಚಯವಾಗಿರುವ ಯುವತಿಯೊಬ್ಬಳು ತನ್ನ ಭಾವಿ ಗಂಡನಿಗಾಗಿ ಕಳೆದು ಹೋಗಿರುವ ಕನ್ಯಾಪೊರೆಯನ್ನು ಕೃತಕವಾಗಿ ಹೊಲಿಸಿಕೊಳ್ಳಲೆತ್ನಿಸುವುದು, ಈ ಪುರುಷ ಪ್ರಧಾನ ವ್ಯವಸ್ಥೆಯನ್ನು ಅಣಕಿಸುವಂತಿದೆ. ಕೊನೆಗೆ ಆಕೆಗೆ ತನ್ನ ಗೆಳತಿ ಹಾಗೂ ವೈದ್ಯರ ಸಲಹೆಗಳಿಂದ 'ಜ್ಞಾನೋದಯ'ವಾಗಿ ಕನ್ಯಾಪೊರೆಯನ್ನು ಹೊಲಿಸಿಕೊಳ್ಳದೆ ಹಿಂದಿರುಗುತ್ತಾಳೆ. ಪತ್ನಿಯನ್ನು ಕಳೆದುಕೊಂಡು ಮರು ಮದುವೆಯಾಗುತ್ತಿರುವ ಆತ, ತನ್ನಲ್ಲಿಮಾತ್ರ ಕನ್ಯತ್ವವನ್ನು ಅಪೇಕ್ಷಿಸುವುದು ಆಕೆಗೆ ವಿಚಿತ್ರವೆನಿಸುತ್ತದೆ. "ನಾಚಿಕೆಗೇಡಿನ ಅಪರೇಷನ್‌ಗೂ ಸಿದ್ದಳಾಗಿ ನಿಂತಿದ್ದೇನೆನಾನೆಂದೂ ನಾನಾಗಿ, ನನಗಾಗಿ ಬದುಕಲೇ

೧.ನೇಮಿಚಂದ್ರ; ತ್ರಿಕೋನಾದಾಚೆಗೆ, ಪುಟ-೩೫೨

ಇಲ್ಲ. ಇತರರ ಖುಷಿಯ ಉಬ್ಬರಗಳನ್ನು ದೂರದಿಂದ ಕಂಡು ತೃಪ್ತಿಗೊಂಡೆ. ನನ್ನ ಖುಷಿ ಅವರದಾಗಿರದಿದ್ದರೂ, ಅವರ ಖುಷಿ ನನ್ನದೆಂದು ನಂಬಿ ಮೋಸಗೊಂಡೆ,"[೧] ಇಂಥ ಗಂಡಸಿನ ಅಧೀನಳಾಗಿ ಬದುಕುವುದಕ್ಕಿಂತ ಅವಿವಾಹಿತಳಾಗಿ, ಸ್ವತಂತ್ರವಾಗಿ ಬದುಕುವುದೇ ಲೇಸನಿಸಿ ಹಾಗೆ ಇರಲು ನಿರ್ಧರಿಸುತ್ತಾಳೆ. ಲೇಖಕಿಯು ಇಂಥ ಪರಿವರ್ತನೆಯನ್ನು ವಾಸ್ತವ ಸಮಾಜದ ಯುವತಿಯರಲ್ಲಿಯೂ ನಿರೀಕ್ಷಿಸಿದ್ದಾರೆ. ಈ ರೀತಿ ಪಾತ್ರಗಳನ್ನು ಬೆಳೆಸುವುದರಲ್ಲಿ ವೈಚಾರಿಕತೆಯ ಪ್ರಭಾವವನ್ನ ಗುರುತಿಸಬಹುದು.

"ನನ್ನೆದೆಯ ಕದನದಲಿ" ಎಂಬ ಕಥೆಯಲ್ಲಿ ಮಿಹಿಕಾ ನಾಯಕಿಯಾಗಿಯೂ, ಆಕೆಯ ಗಂಡ ಕಿರಣ್ ಖಳನಾಯಕನಾಗಿಯೂ ಚಿತ್ರಿಸಲ್ಪಟ್ಟಿದ್ದಾರೆ. ಮಧ್ಯಮ ವರ್ಗಕ್ಕೆ ಸೇರಿದ ಈ ದಂಪತಿಗಳು ನೆಮ್ಮದಿಯ ಜೀವನ ಸಾಗಿಸುತ್ತಿರುವುದರ ಚಿತ್ರ, ಕಥೆಯ ಆರಂಭದಲ್ಲಿದೆ. ಇಂಥ ಕುಟುಂಬದಲ್ಲಿ ಬಿರುಗಾಳಿ ಉಂಟಾಗಲು ಕಿರಣ್ ಕಾರಣನಾಗುತ್ತಾನೆ. ಅವನ ದುಷ್ಟ ಹಾಗೂ ನೀಚ ಪ್ರವೃತ್ತಿಗಳು ಪ್ರಕಟವಾಗುವ ಸಂದರ್ಭ ಒದಗಿ ಬರುತ್ತದೆ. ಮಿಹಿಕಾ ಮಕ್ಕಳಿಗೆ ರಜೆ ಎಂದೂ ಮಂಡ್ಯಕ್ಕೆ ದೊಡ್ಡಮ್ಮನ ಮಗಳ ಮನೆಗೆ ಹೋಗಿ ಹಿಂದಿರುಗಿದಾಗ ಕಿರಣನ ನಿಜವಾದ ಬಣ್ಣ ಬಯಲಾಗುತ್ತದೆ. ಆತ ಕೆಲಸದ ಹುಡುಗಿಯ ಮೇಲೆ ಅತ್ಯಾಚಾರ ನಡೆಸುವುದನ್ನು ಮಿಹಿಕಾ ಕಣ್ಣಾರೆ ನೋಡುತ್ತಾಳೆ. ಈ ಸಂದರ್ಭದಲ್ಲಿನ ಮಿಹಿಕಾಳ ಪ್ರತಿಕ್ರಿಯೆ ಹಾಗೂ ಆನಂತರದ ಅವಳ ನಿರ್ಧಾರಗಳ ಕಥೆಯಲ್ಲಿನ ವೈಚಾರಿಕತೆಯ ಪ್ರಭಾವವನ್ನು ನಿಚ್ಚಳವಾಗಿಸುತ್ತದೆ. ಬಹುಶಃ ಸಾಂಪ್ರಧಾಯಿಕ ನೆಲೆಯಲ್ಲಿ ಯೋಚಿಸುವ, ಗಂಡನಿಗೆ ಸಂಪೂರ್ಣ ವಿಧೇಯತೆ ತೋರುವ ಹೆಣ್ಣಾಗಿದ್ದರೆ ಗಂಡನ ಇಂಥ ಕೃತ್ಯದ ಬಗೆಗೆ ಅಸಮಾಧಾನ, ಕೋಪಗಳಿದ್ದರೂ ಒಂದೆರಡು ಮಾತು ಬೈಯ್ದು, ತನ್ನ ಕುಟುಂಬದ ಮರ್ಯಾದೆಗೆ ಹೆದರಿ ಸುಮ್ಮನಾಗುತ್ತಿದ್ದರು. ಆದರೆ ಮಿಹಿಕಾ ಗಂಡನನ್ನು ತೀವ್ರವಾಗಿ ಅಕ್ಷೇಪಿಸಿದ್ದಲ್ಲದೆ, ಅವನನ್ನು ವಾಚಾಮಗೋಚರ ಬೈಯ್ಯುತ್ತಾಳೆ. ತನ್ನ ಕೃತ್ಯದ ಬಗ್ಗೆ ಸುಳ್ಳಾಡಿ ಸಮರ್ಥಿಸಿಕೊಳ್ಳಲೆತ್ನಿಸಿದ ಕಿರಣನನ್ನು "ಮುಚ್ಚು ಬಾಯಿ ನಾಯಿಗೂ ಕಡೆ ನೀನು.........."[೨] ಎಂದದ್ದಲ್ಲದೆ ಅವನನ್ನು ತೊರೆದು ಹೋಗುತ್ತಾಳೆ. ಕಿರಣ್ ಒಮ್ಮೆ ಹೆದರಿಸಿ, ಇನ್ನೊಮ್ಮೆ ಬೇಡಿಕೊಂಡರೂ ಲೆಕ್ಕಿಸದೆ ಕೋಣೆಗೆ ಹೋಗಿ ಬಾಗಿಲನ್ನು ಧಡಾರನೆ ಹಾಕಿಕೊಳ್ಳುವುದರ ಮೂಲಕ ಪ್ರತಿಭಟಿಸುತ್ತಾಳೆ. ಕೊನೆಗೆ ಅವನಿಂದ ದೂರವಾಗಿ "ನಾನಿನ್ನು ಮಿಹಿಕಾ ಮಾತ್ರ. ಮಿಹಿಕಾ ಎಸ್. ಕಿರಣ್ ಅಲ್ಲ" ಎಂದು ಸಾರುವುದು ಆಕೆಯ ಸ್ವತಂತ್ರ ಪ್ರವೃತ್ತಿ ಹಾಗೂ ಪುರುಷ ಅವಲಂಭನೆಯಿಂದ ಬಿಡುಗಡೆಗೊಳ್ಳುವುದರ ದ್ಯೋತಕವಾಗಿದೆ. ಮಹಿಳಾ ಹೋರಾಟಗಾರರು, ಸ್ತ್ರೀಯರು ತಮ್ಮ

----

೧. ನೇಮಿಚಂದ್ರ; ನನ್ನದಲ್ಲದ ಬದುಕಿಗಾಗಿ, ಪುಟ-೩೯೩

೨. .ನೇಮಿಚಂದ್ರ; ನನ್ನದೆಯ ಕದನದಲ್ಲಿ ಪುಟ-೧೦೫

ಹೆಸರುಗಳ ಮುಂದೆ ಗಂಡಸರ ಹೆಸರು ಸೇರಿಸಿಕೊಳ್ಳವುದನ್ನು ವಿರೋಧಿಸುತ್ತಾರೆ. ಕಥೆಯ ಈ ಸಂದರ್ಭದಲ್ಲಿ ಮಹಿಕಾಳ ಮಾತುಗಳಲ್ಲಿ ವೈಚಾರಿಕತೆಯ ಮನೋಭಾವ ಇರುವುದನ್ನು ಗಮನಿಸಬಹುದು.

ನೇಮಿಚಂದ್ರ ಅವರ 'ನೆನಪಿನಂಗಳದಲ್ಲಿ ನೂರು ಚಿತ್ತಾರ' ಕಥೆಯೂ ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಶೀಲನೆಗೆ ಅರ್ಹವಾಗಿದೆ. ಈ ಕಥೆಯ ನಾಯಕಿ ಅನಘಾ, ಪ್ರೇಮದಲ್ಲಿ ಬಿದ್ದು ಅದರ ಬಗೆಗೆ ಆದರ್ಶ ಕಲ್ಪನೆಗಳನ್ನು ಕಟ್ಟಿಕೊಂಡು ಕೊರಗುತ್ತಿರುವ ತನ್ನ ಮಗಳಲ್ಲಿ ಮನಃ ಪರಿವರ್ತನೆ ಮಾಡುತ್ತಾಳೆ. ಹಾಗೆ ಮಾಡಲು ಆಕೆ ಅನುಸರಿಸುವ ವಿಧಾನವೆಂದರೆ ತನ್ನ ಭೂತಕಾಲದ ಪ್ರೇಮ ಪ್ರಸಂಗಗಳನ್ನು ಮಗಳಿಗೆ ವಿವರಿಸುವುದು. "ನಾ ಇಲ್ಲಿಗೆ ತಲುಪಿದ್ದರೆ ಹಾರಿಜಿಗಿದು ತಲುಪಿಲ್ಲ. ಹಲವು ಬಾಗಿಲುಗಳನ್ನು ತಟ್ಟಿ ನನ್ನ ಅಂಗಳಕ್ಕೆ ಬಂದಿರುವೆ, ಹಲವು ತಾಣಗಳಲ್ಲಿ ತಂಗಿ, ಪಯಣಿಸಿದ್ದೇನೆ"[೧] ಎಂದು ಹೇಳುತ್ತಾ ತನ್ನ "ತಂಗುದಾಣ"ಗಳನ್ನು ಮಗಳಿಗೆ ಪರಿಚಯಿಸುತ್ತಾಳೆ. ಆದರ್ಶ ಪ್ರೇಮದ ಅಮಲಿನಲ್ಲಿದ್ದ ಮಗಳ ಕಣ್ಣು ತೆರೆಸುತ್ತಾಳೆ.

ಪರಂಪರಾಗತ ಪುರುಷ ಪ್ರಧಾನ ಮೌಲ್ಯಗಳಿಗೆ ಬದ್ಧವಾದ ಕಥಾ ನಾಯಕಿಯರಿಗೂ ಸ್ತ್ರೀವಾದಿ ಪ್ರಜ್ಞೆಯಿಂದ ಸೃಷ್ಟಿಯಾದ ಕಥಾ ನಾಯಕಿಯರಿಗೂ ಇರುವ ವ್ಯತ್ಯಾಸಇಲ್ಲಿ ಸ್ಪಷ್ಟವಾಗುತ್ತದೆ. ಮೊದಲ ಗುಂಪಿನ ಪಾತ್ರಗಳು ಆದರ್ಶ ಗೃಹಿಣಿಯರಾಗಿ, ಪಾತಿವ್ರತ್ಯ, ಪಾವಿತ್ರ್ಯಗಳಿಗೆ ಮನ್ನಣೆ ನೀಡುವುದರಿಂದ, ತಮ್ಮ ಮಕ್ಕಳೆದುರಿಗೆ ತಮ್ಮ ಗತ ಬದುಕಿನ ಹುಳುಕುಗಳನ್ನು, ದೌರ್ಬಲ್ಯಗಳನ್ನು ಎಂದಿಗೂ ಹೇಳಿಕೊಳ್ಳಲಾರರು. ಹಾಗೆ ಮುಚ್ಚಿಡಲು ಕಾರಣ ಸಮಾಜ ಹಾಗೂ ಕುಟುಂಬದಲ್ಲಿ ಭದ್ರವಾಗಿರುವುದು ಮತ್ತು ತಮ್ಮ ಮಕ್ಕಳು ತಮ್ಮಂತೆ 'ಕೆಟ್ಟು'ಹೋದಾರೆಂಬ ಭಯ, ಆದರೆ ಈ ಕಥೆಯ ನಾಯಕಿ, ಈ ನಾಯಕಿಯರಂತೆ ಹೆದರದೆ ತನ್ನ ಪ್ರೇಮ ಪ್ರಸಂಗಗಳನ್ನು ನಿರ್ಲಿಪ್ತವಾಗಿ ಮಗಳೆದುರಿಗೆ ಬಿಚ್ಚಿಟ್ಟು ಆಕೆಯ ಅಜ್ಞಾನವನ್ನು ಹೋಗಲಾಡಿಸುತ್ತಾಳೆ, ಅನಘಾಳಂಥ ಪಾತ್ರ ರಚನೆಯಲ್ಲಿ ವೈಚಾರಿಕತೆಯಿದೆ.

ನೇಮಿಚಂದ್ರರು ಕನ್ನಡದ ಹೊಸ ತಲೆಮಾರಿನ ಕತೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆ ಹಾಗೂ ವೈಚಾರಿಕತೆಯ ಪ್ರತಿಪಾದಕಿಯಾಗಿ ತಮ್ಮ ಕತೆಗಳನ್ನು ಸ್ಪಷ್ಟವಾಗಿ ರಚಿಸಿದ್ದಾರೆ. ನೇಮಿಚಂದ್ರರ ಕತೆಗಳ ನಾಯಕಿಯರು ಶಿಕ್ಷಿತ, ಸಂಪಾದಿಸುವ ಹೆಣ್ಣುಗಳಾದ್ದರಿಂದ ಅವರಿಗೆ ಬದುಕನ್ನು ವೈಜ್ಞಾನಿಕವಾಗಿ ನೋಡುವುದು ಅನಿವಾರ್ಯವಾಗುತ್ತದೆ. 'ನನ್ನದಲ್ಲದ ಬದುಕಿಗಾಗಿ' ಕತೆಯಸರೂ, 'ಹೊಸಹುಟ್ಟು' ಕತೆಯ ಶಶಿ, 'ಕೆಂಪು ಕಲಕಿದ ನೀರು' ಕತೆಯ ಶೀಲಾ ಇತ್ಯಾದಿ ಪಾತ್ರಗಳು ಇವಕ್ಕೆ ಮಾದರಿಯಾಗಿವೆ, ಪರಂಪರಾಗತ ಸ್ತ್ರೀ ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ

೧.ನೇಮಿಚಂದ್ರ ; ನೆನಪಿನಂಗಳದಲ್ಲಿ ನೂರು ಚಿತ್ತಾರ, ಪುಟ-೧೨೦

ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿ ಪರಂಪರೆಯನ್ನು ಧಿಕ್ಕರಿಸಿಕೈಗೊಳ್ಳುವ ವೈಚಾರಿಕ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ.

ನೇಮಿಚಂದ್ರರ ಕಥನ ಶೈಲಿ, ಸಂಭಾಷಣಾ ವಿಧಾನವು ಕತೆಗಳಿಗೆ ಜೀವಂತಿಕೆಯನ್ನು ನೀಡಿವೆ. ಘಟನೆ ಇಲ್ಲವೆ ಪ್ರಕರಣವೊಂದರಿಂದ ಕತೆಗಳು ಪ್ರಾರಂಭವಾಗುವುದನ್ನು ನಾವು ಬಹುತೇಕ ಕಥೆಗಳಲ್ಲಿ ಗುರುತಿಸಬಹುದು. ಹೇಳಬೇಕಾದುದ್ದನ್ನು ನೇರವಾಗಿ ಹೇಳುವ ಹೊಸದುದರ ಕಡೆಗೆ ಮಿಡಿತ ಹಾಗೂ ವೈಚಾಕರಿತೆಯ ತುಡಿತ ಕಾಣಬಹುದು, ಹೀಗೆ ನೇಮಿಚಂದ್ರ ಅವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಅಪಾರ ವಾದ ಕೊಡುಗೆಯನನ್ನು ನೀಡಿದ್ದಾರೆ, ಎಂದರೇ ತಪ್ಪಗಲಾರದು.

ದಲಿತ ಸಾಹಿತ್ಯಕ್ಕೆ ದೇವನೂರ ಮಹಾದೇವ, ಡಾ.ಸಿದ್ದಲಿಂಗಯ್ಯ, ದೇವಯ್ಯ ಹಂಚಿ, ಎಲ್.ಹನುಮಂತಯ್ಯ, ಮೊಗಳ್ಳಿ ಗಣೇಶ್ ಮುಂತಾದವರು ಭದ್ರ ಬುನಾದಿ ಹಾಕಿದಂತೆ, ವಿಜಯದಬ್ಬೆ, ಬಿ.ಎನ್. ಸುಮಿತ್ರಬಾಯಿ, ಎನ್.ಗಾಯಿತ್ರಿ ಕನ್ನಡದಲ್ಲಿ ಸ್ತ್ರೀವಾದಕ್ಕೆ ಪೀಠಿಕೆ ಹಾಕಿದರು. ಬಂಡಾಯ ಚಳುವಳೀಗೆ ಜಿ. ರಾಮಕೃಷ್ಣ, ಬರಗೂರು ರಾಮ ಚಂದ್ರಪ್ಪ, ಚಂಪಾ, ರಂಜಾನ್‌ದರ್ಗ, ಸಿ.ಜಿ.ಕೆ, ಪ್ರಸನ್ನ, ಡಿ.ಆರ್. ನಾಗರಾಜು, ಸಿದ್ದಲಿಂಗಯ್ಯ, ಎಸ್. ಮಾಲತಿ, ಕೆ. ಷರೀಫಾ, ಬಿ.ಟಿ. ಲಲಿತಾನಾಯಕ್, ಕಾಳೇಗೌಡನಾಗವಾರ, ಪೀಠಿಕೆ ಆದಂತೆ, ಬಂಡಾಯದ ಹೊಟ್ಟೆ ಸೀಳಿಕೊಂಡೆ ಮಹಿಳಾ ಸಂವೇದನೆ ಹುಟ್ಟಿತು. ವೈದೇಹಿ, ನೇಮಿಚಂದ್ರರಂತಹ ಲೇಖಕಿಯರು ವಿಶಿಷ್ಟವಾದ ಸ್ತ್ರೀಸಂವೇದನೆಗಳನ್ನು ಯಾವುದೇ ಇಸಂಗಳಿಗೆ ಅಂಟಿಸಿಕೊಳ್ಳದೇ ರಚಿಸಿದರು. ಸಾಹಿತ್ಯ ರಂಗವಾಗಲಿ, ವಿಜ್ಞಾನ ಕ್ಷೇತ್ರವಾಗಲೀ, ಚರಿತ್ರೆಯಾಲಾಗಲ್ಲಿ ಮಹಿಳೆಯರನ್ನು ಬಿಟ್ಟು ಹೋಗಿರುವುದು ಆಕಸ್ಮಿಕವಲ್ಲ ಎಂಬುದು ಸ್ತ್ರೀವಾದಿಗಳ ವಾದ. ಮುಚ್ಚಿ ಹಾಕಿದ್ದ, ದಾಖಲಿಸದೆ ಕೈಬಿಟ್ಟಿದ್ದ ಮಹಿಳೆಯರ ಕೃತಿಗಳನ್ನೆಲ್ಲ ಒಂದೊಂದಾಗಿ ಹೊರತಂದರು. ಕನ್ನಡದಲ್ಲೂ ಇತ್ತೀಚೆಗೆ ನಮ್ಮ ಮಹಿಳಾ ಪರಂಪರೆಯನ್ನು ಗುರುತಿಸಿಕೊಳ್ಳುವ ಪ್ರಯತ್ನಗಳು ನಡೆದಿವೆ. ತಿರುಮಲಾಂಬಾ, ಕಲ್ಯಾಣಮ್ಮ, ಜಾನಕಮ್ಮ ಶ್ಯಾಮಲದೇವಿಯವರ ಬದುಕು ಬರಹಗಳನ್ನು ಮತ್ತೆ ಪರಿಚಯಿಸುವ, ಅಧ್ಯಯಿಸುವ, ಸಾಹಿತ್ಯ ಚರಿತ್ರೆಯಲ್ಲಿ ಲೆಕ್ಕಕ್ಕೆ ಇಲ್ಲವೆಂಬಂತೆ ಬಿಟ್ಟು ಹೋದ ಲೇಖಕಿಯರ ಕೃತಿಗಳ ಪುನರ್ ಮೌಲೀಕರಣದ ಪ್ರಯತ್ನಗಳು ನಡೆಯುತ್ತಿವೆ. ಸ್ತ್ರೀವಾದ ಮಹಿಳೆಗೆ ಮಹಿಳೆಯ ನಿಜ ವ್ಯಕ್ತಿತ್ವವನ್ನು ಪರಿಚಯಿಸ ಹೊರಟಿದೆ. ಇಂದು ಮಹಿಳೆಯರ ಪರಂಪರೆಯನ್ನು ತಿಳಿಯ ಬೇಕಾದ ಅಗತ್ಯ ಎಂದಿಗಿಂತಲೂ ಹೆಚ್ಚಿದೆ.

ಪ್ರಾಚೀನ ಮೌಲ್ಯದ ಪ್ರತಿನಿಧಿಗಳೊಂದಿಗೆ ವೈಚಾರಿಕತೆ ತುಂಬುವ ಕಾರಂತರ ಅಜ್ಜಿಯವರ ಪ್ರಭಾವದಿಂದಲೋ ಎಂ.ಕೆ.ಇಂದಿರಾ 'ಫಣಿಯಮ್ಮ'ನ ಪ್ರತೀಕವನ್ನು ಸೃಷ್ಟಿಸಿದ್ದಾರೆ. ಬಾಲವಿಧವೆಯಾಗಿ ಸಂಪ್ರದಾಯ ವಿಧಿಸಿದ್ದನ್ನು ಚಾಚೂ ತಪ್ಪದೆ ಪಾಲಿಸಿದ ಮಡಿವಂತ ವ್ಯಕ್ತಿತ್ವದ ಫಣಿಯಮ್ಮ ತಮ್ಮ ಹಾಗೂ ಇತರರ ಬವಣಿಯ ಬದುಕು ಕಂಡು ಆಂತರಿಕವಾಗಿ ಎಂಥ ವೈಚಾರಿಕತೆ ಬೆಳಸಿಕೊಂಡಿದ್ದರು

ಎಂಬುದನ್ನು ಬೆರಗು, ಗೌರವ, ವಿಸ್ಮಯಗಳಿಂದ ನಿರೂಪಿಸುತ್ತದೆ ಈ ಕಾದಂಬರಿ, ಡಾ. ಅನುಪಮ ನಿರಂಜನ ತಮ್ಮ ಬಲವಾದ ವಿಚಾರದ ತಾತ್ವಿಕ ನೆಲೆಗಟ್ಟಿನ ಕಾರಣದಿಂದ ಭಿನ್ನವಾಗಿ ಕಾಣುತ್ತಾರೆ. ಪ್ರಗತಿಶೀಲ ಪಂಥದ ಜೊತೆ ತಮ್ಮ ಸಾಹಿತ್ಯಿಕ ನಿಲುವು ಗುರ್ತಿಸಿಕೊಳ್ಳುವ ಅವರು ಸ್ತ್ರೀಸಮಸ್ಯೆಯನ್ನು ವರ್ಗ ಸಂಘರ್ಷದ ಆಧಾರವಾದ ಮಾರ್ಕ್ಸ್‌ವಾದದ ಬೆಳಕಿನಲ್ಲಿ ವಿಶ್ಲೇಷಿಸಲು ಬಯಸುತ್ತಾರೆ. ಅವರ ಕಥಾ ಸಂಕಲನಗಳಾದ 'ಒಂದು ಗಿಣಿಯ ಕಥೆ' 'ಮಾಧವಿ' ಕತೆಗಳಲ್ಲಿ ಸ್ತ್ರೀ ಪ್ರತೀಕಗಳ ಸೃಷ್ಟಿಯನ್ನು ಕಾಣಬಹುದು. 'ಮಾಧವಿ' ತೊತ್ತಾಗಿ ಭೋಗವಸ್ತುವಾಗಿ ಮಾರ್ಪಟ್ಟ ಹೆಣ್ಣು, ಯುಗಯುಗಗಳಿಂದ ಮುಂದುವರೆಯುತ್ತಿರುವ ಶೋಷಣೆಯ ಸಂಕೇತವಾದರೆ, 'ಒಂದು ಗಿಣಿಯ ಕತೆ' ಈ ಶೋಷಿತ ಸ್ಥಿತಿಯಾಚೆಗೆ ಜಿಗಿಯುವ ಸ್ತ್ರೀ ಪ್ರತೀಕಗಳನ್ನು ಕಾಣಬಹುದು. ಸಾಮಾನ್ಯ ಹೆಣ್ಣಿನ ಆಂತರಿಕ ಬೆಳವಣಿಗೆಯನ್ನು ಚಿತ್ರಿಸುವುದಷ್ಟೇ ಅಲ್ಲ ಆಕೆಯೇ ಬದಲಾವಣೆಯ ಸಂಕೇತವೂ ಆಗುವಂತೆ ಮಾಡುತ್ತಾರೆ. ಅನುಪವ ನಿರಂಜನ, ಸಾರಾ ಅಬೂಬಕ್ಕರ್, ನೇಮಿಚಂದ್ರ, ವೈದೇಹಿ ಕೃತಿಗಳಲ್ಲಿ ಬೇರೆ ಬೇರೆ 'ಸ್ತರಗಳನ್ನು ಕಾಣಬಹುದು.

ಸಾಂಪ್ರದಾಯಕ ಸಮಾಜದಲ್ಲಿ ಹೊಸ ಸಂಬಂಧಗಳು ತಲೆ ಎತ್ತುವುದು ಎಷ್ಟ ಕಷ್ಟ ಸಾಧ್ಯ ಎನ್ನುವ ಅರಿವು ಲೇಖಕಿ ನೆಮಿಚಂದ್ರರಿಗೆ ಇಲ್ಲವೇ ಇಲ್ಲ. "ನೀವು ಕಾಣದ ನಾಳೆಗಳಲ್ಲಿ" ಕಥೆಯಲ್ಲಿ ರವಿ-ಶಶಿಯರ ಪ್ರೇಮ ವಿವಾಹ ಮುರಿದು ಬೀಳುತ್ತದೆ. ಇದಕ್ಕೆ ರವಿ ಮತ್ತು ಅವನ ಅಪ್ಪ ಎಷ್ಟು ಕಾರಣರೋ ರವಿಯ ತಾಯಿ, ತಂಗಿಯರೂ ಅಷ್ಟೇ ಕಾರಣರಾಗುತ್ತಾರೆ. ಒಂದು ಸಂಪ್ರದಾಯ ನಿಷ್ಟ ಸಮಾಜದಲ್ಲಿ ಹೆಣ್ಣು ಕೂಡ ಕ್ರೂರಿಯೇ. ರವಿಯ ತಾಯಿಯ ಮಮತೆಯ ಒಡಲಲ್ಲಿ ಶಶಿಯನ್ನು ಕುರಿತ ಕ್ರೌರ್ಯ ಓದುಗರಲ್ಲಿ ದಿಗ್ಭ್ರಮೆ ಹುಟ್ಟಿಸುವಂತಿದೆ. ಶಶಿಯ ಸಮವಯಸ್ಕಳೇ ಆಗಿರಬಹುದಾದ ಆಶಾ ತನ್ನ ಅತ್ತಿಗೆಯ ಬಗ್ಗೆ ಇಟ್ಟು ಕೊಳ್ಳುವ ಧೋರಣೆಗಳೂ ಗಲಿಬಿಲಿ ಹುಟ್ಟಿಸುವಂತಿವೆ. "ಪುರುಷ ಪ್ರಧಾನ ಸೃಷ್ಟಿಸಿದ, ಬಲವಂತವಾಗಿ ಹೇರಿದ ಮೌಲ್ಯಗಳು ಹೆಣ್ಣನ್ನೂ ಎಷ್ಟು ಪ್ರಭಾವಿಸಿದೆ ಎಂದರೆ ಅವಕಾಶ ಸಿಕ್ಕಾಗಲೆಲ್ಲಾ ಅವಳು ಗಂಡಿನಷ್ಟೇ ಕ್ರೂರಿಯಾಗಬಲ್ಲಳು."[೧] ಎಚ್ಚೆತ್ತ ಹೆಣ್ಣನ್ನು ಇಂಥ ಹೆಣ್ಣುಗಳೊಂದಿಗೆ ವೈದೃಶ್ಯದಲ್ಲಿ ತಂದು ನೇಮಿಚಂದ್ರ ಮಹಿಳಾ ವಿಮೋಚನೆಯ ಅಗತ್ಯದ ಅರಿವನ್ನು ಮೂಡಿಸುತ್ತಾರೆ. ಗಂಡು ಹೆಣ್ಣಿನಿಂದ ಕಲಿಯಬೇಕು; ಹೆಣ್ಣು ಗಂಡಿನಿಂದ ಕಲಿಯಬೇಕು. ಆಗ ಮಾತ್ರ ಮೇಲು-ಕೀಳುಗಳ ವಿಕಾರಗಳಿಲ್ಲದ ಸುಖೀ ಸಮಾಜಸಾಧ್ಯ ಎಂಬ ದರ್ಶನ ಮೂಡಲಾರಂಭಿಸುತ್ತದೆ.

೧.ನೇಮಿಚಂದ್ರ; ನೀವು ಕಾಣದ ನಾಳೆಗಳಲ್ಲಿ, ಪುಟ-೨೬೬

ನೇಮಿಚಂದ್ರರ 'ಹೊಸಹುಟ್ಟು' ಕಥೆಯಲ್ಲಿ ಪರಸ್ಪರರನ್ನು ಅರ್ಥಮಾಡಿಕೊಂಡು ಅರ್ಥಪೂರ್ಣ ಸಂಸಾರ ನಡೆಸುವ ಶಶಿ-ರಮೇಶರ ದಾಂಪತ್ಯದ ಚಿತ್ರಣವಿದೆ. ಶಶಿಗೆ ಮಕ್ಕಳಾಗದು ಎಂಬ ಕಾರಣವೂ ಸಹ ಈ ಜೋಡಿಯನ್ನು ಅಗಲಿಸಲಾರದು. ಸುತ್ತಲ ಸಮಾಜ ಶಶಿಗೆ ಪ್ರತಿಕ್ರಿಯಿಸುವ ರೀತಿಯಲ್ಲೇ ತಾಯ್ತನ ಕುರಿತ ಪ್ರಶ್ನೆಗಳನ್ನು ಕಥೆ ಪರಿಶೀಲಿಸುತ್ತ ಹೋಗುತ್ತದೆ. "ಶಶಿ ತನ್ನ ಮನಸ್ಸಿನ ದುರ್ಬಲತೆಯನ್ನು, ಅಳುಕನ್ನು ಗೆಲ್ಲಲು ಸಾಧ್ಯವಾಗುವುದು ರಮೇಶನ ಪ್ರೀತಿ, ವಿವೇಕಗಳಿಂದ"[೧] ಎನ್ನುವುದನ್ನು ಗಮನಿಸಬೇಕು. ಅಂದರೇ ನೇಮಿಚಂದ್ರರ ಕಥೆಗಳ ಒತ್ತು ಇರುವುದು ಏಕಮುಖ ಪುರುಷ ತಿರಸ್ಕಾರದಲ್ಲಿಅಲ್ಲ, ಅವರು ಪುರುಷ ಆಹಂಕಾರದ ಮೌಲ್ಯಗಳನ್ನು ತಿರಸ್ಕರಿಸುತ್ತಾರೆಯೇ ಹೊರತು ಸಾರಸಗಾಟಾಗಿ ಪುರುಷರನ್ನು ವಿರೋಧಿಸುವುದಿಲ್ಲ. ನಮ್ಮ ಸಮಾಜ ವ್ಯವಸ್ಥೆ ಎಷ್ಟು ಭೀಕರವಾಗಿದೆ ಎಂದರೆ ಗಂಡುಗಳಿಗೂ ವಿಮೋಚನೆ ಬೇಕಾಗಿದೆ. ಯಥಾಸ್ಥಿತಿವಾದ ಸಾಮಾನ್ಯವಾಗಿ ಪುರುಷ ಪರವಾಗಿರುವುದರಿಂದ ಮಹಿಳಾ ವಿಮೋಚನೆಗೆ ಒತ್ತು ಬೀಳಬೇಕಾಗಿದೆ ಅಷ್ಟೇ. ಎಚ್ಚೆತ್ತ ಗಂಡು ಮಹಿಳಾ ವಿಮೋಚನೆಗೆ ಪ್ರೇರಕನಾಬಲ್ಲನಾದರೆ ಅವನೂ ಮೆಚ್ಚುಗೆಗೆ ಗೌರವಕ್ಕೆ ಅರ್ಹ ಎಂದು ಲೇಖಕಿ ನೇಮಿಚಂದ್ರರು ಸೂಚಿಸುತ್ತಿರುವ ಹಾಗೆ ಕಾಣುತ್ತದೆ.

'ಕಪ್ಪು ಮೋಡ ಬೆಳ್ಳಿ ಅಂಚು', 'ಏನೊಂದು ಆಗದವರೂ' ಕಥೆಗಳಲ್ಲಿ ಗಂಡು ಅಪರಾಧಿ ಸ್ಥಾನದಲ್ಲಿದ್ದರೆ, 'ಹೊಸ ಹುಟ್ಟು' 'ಮತ್ತೆ ಬರೆದ ಕವನಗಳು' ಈ ಕಥೆಗಳಲ್ಲಿ ಗಂಡು ವಿಮೋಚಕ ಶಕ್ತಿಯಂತೆ ಚಿತ್ರಿತವಾಗಿರುವುದು ನೇಮಿಚಂದ್ರ ಅವರ ಒಟ್ಟಾರೆ ಜೀವನ ದರ್ಶನಕ್ಕೆ ಪೂರಕವಾಗಿಯೇ ಇದೆ. 'ಹೊಸ ಹುಟ್ಟು' ಕತೆಯ ರಮೇಶ, 'ಮತ್ತೆ ಬರೆದ ಕವನಗಳು' ಕಥೆಯ ಅಜಯ, 'ಕಪ್ಪುಮೋಡ ಬೆಳ್ಳಿ ಅಂಚು' ಕಥೆಯ ಶೀಲಾ, 'ಏನೊಂದು ಆಗದವರು' ಕಥೆಯ ಶಶಿ ಇವರೆಲ್ಲ ನೇಮಿಚಂದ್ರ ಬಯಸುವ ಹೊಸ ಸಾಮಾಜಿಕ ವ್ಯವಸ್ಥೆಯ ಪ್ರತೀಕಗಳಾಗುತ್ತಾರೆ. ಅಂಥ ಸಮಾಜದಲ್ಲಿ ವ್ಯಕ್ತಿ ತನ್ನ ಲಿಂಗ ಮಿತಿಗಳನ್ನು ಮೀರಿ ವ್ಯಕ್ತಿತ್ವದ ಸಮಸ್ತ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಾಧ್ಯ. ಮತ್ತೆ 'ಬರೆದ ಕವನಗಳು' ಕಥೆಯ ಅನು, "ಕಪ್ಪು ಮೋಡ ಬೆಳ್ಳಿ ಅಂಚು" ಕಥೆ ಮಧುಹೀಗೆ ಸಮೃದ್ಧಿ ವ್ಯಕ್ತಿತ್ವದ ಸಾಧ್ಯತೆ ಇದ್ದೂ ಕುಬ್ಜರಾಗಿರುವ ಹೆಣ್ಣುಗಳು ತಮ್ಮ ವ್ಯಕ್ತಿತ್ವದ ಸತ್ಯಗಳನ್ನು ಕಂಡು ಕೊಂಡು ಮುಖವಾಡಗಳನ್ನು ಕಳಚಿಕೊಳ್ಳುವ ಕ್ರಿಯೆ, ಈ ಕಾರಣಗಳಿಂದ ಮಹತ್ವಪೂರ್ಣವಾಗುತ್ತದೆ. ಇದನ್ನು ವೈಯಕ್ತಿಕ ದೋಷ ದೌರ್ಬಲ್ಯಗಳ ನೆಲೆಯಲ್ಲಿಮಾತ್ರ ನೋಡಲಾಗದು. ಏಕೆಂದರೆ ಅವೆಲ್ಲ ಪರಂಪರಾಗತ ಜೀವನಕ್ರಮ ಸತತವಾಗಿ ರೂಢಿಸಿಕೊಂಡು ಬಂದ ಮೌಲ್ಯಗಳು.

ತ್ರಿವೇಣಿಯವರ ಕೆಲವು ಕಾದಂಬರಿಗಳ ಮೂಲಕ ನಾವು ಕಂಡಂತೆ, ಮಹಿಳಾ ಸಾಹಿತ್ಯವು ಅಷ್ಟೊಂದು ಪರಿಣಾಮಕಾರಿಯಾಗಲು ಅದು ಬಿಂಬಿಸುವ ದೈನಂದಿನ ಜಗತ್ತಿನ ಚಿತ್ರವೇ ಕಾರಣ.

೧.ನೇಮಿಚಂದ್ರ; ಹೊಸಹುಟ್ಟು, ಪುಟ-೨೭

ದಿನನಿತ್ಯದ ಬದುಕನ್ನು ಬದುಕಿಸುವ ಕ್ಲೇಶ ವೈರುಧ್ಯಗಳು ಇಲ್ಲಿ ಇದ್ದು ಇಲ್ಲವಾಗುತ್ತವೆ. ಓದುವ ತಂತ್ರಗಳನ್ನು ಹೆಚ್ಚು ಪ್ರಜ್ಞಾಪೂರ್ವಕ ಹಾಗೂ ವಿಮರ್ಶಾತ್ಮಕವಾಗಿಸಿದಾಗ ಮಾತ್ರ ಕಥಾನಕದ ಧಾಟಿ, ಭಾಷೆ, ಗ್ರಹಿಕೆಗಳಲ್ಲಿ ಅಡಗಿರುವ ಅರ್ಥಗಳನ್ನು ಕಾಣಲು ಸಾಧ್ಯ, ಸ್ತ್ರೀತ್ವದ ಬಗೆಗಿನ ವಿಚಾರಗಳ ರೂಪರೇಷೆಯನ್ನಷ್ಟೇ ಈಗ ಗುರುತಿಸಲು ಸಾಧ್ಯವಾಗದಿದ್ದರೂ, ಅಲ್ಲಿಬರುವ ಪ್ರತೀಕಗಳು ಪ್ರತಿನಿಧಿಕರಣಗೊಂಡು, ಅಲ್ಲಿ ಸಾಮಾಜಿಕ ಜೀವನದಲ್ಲಿ ಪ್ರಾಬಲ್ಯ ನಿಯಂತ್ರಣ ಅಧೀನತೆಗಳಾಗಿ ಪವಡಿಸುವುದನ್ನು ಸೂಚಿಸಬಹುದು. ಮಹಿಳಾ ಸಾಹಿತ್ಯ ಅಷ್ಟೊಂದು ಪರಿಣಾಮಕಾರಿ ಮಾಧ್ಯಮವಾಗಲು ಕಾರಣ ಅದರ ವಸ್ತುನಿಷ್ಟತೆ ಹಾಗೂ ವೈಚಾರಿಕತೆ, ನಿಖರತೆ, ಹೆಣ್ಣು ಪಾತ್ರಗಳ ನಿರೂಪಣೆಯೂ ಮುಖ್ಯವಾದ ಪಾತ್ರ ವಹಿಸಿದೆ. ನವೋದಯ ಕಾಲದ 'ಸರಸಮ್ಮನ ಸಮಾಧಿ', ಪ್ರಗತಿ ಶೀಲದ 'ವಾತ್ಯಲ್ಯಪಥ', ನವ್ಯ ಚಳುವಳಿಯ ಆಶೋತ್ತರ 'ಮುಕ್ತಿ', ನವೋತ್ತರ ಯುಗದ ಪ್ರತಿನಿಧಿತ್ವಕ್ಕೆ 'ಒಡಲಾಳ' ಗಮನಿಸಬಹುದು. ಒಂದು ಪುರುಷ ಸಂಸ್ಕೃತಿಯೊಳಗೆ ಯಾರೊಬ್ಬರು ಹೆಂಗಸನ್ನು ಪರಿಪೂರ್ಣ ಸತ್ಯವೆನಿಸುವಂತೆ ವಸ್ತುನಿಷ್ಟವಾಗಿ ಚಿತ್ರಿಸುವುದು ಅಸಾಧ್ಯ ಎಂಬ ಸ್ತ್ರೀವಾದಿಗಳ ವಿಚಾರವೊಂದಿದೆ. 'ಇಂದಿರಾಬಾಯಿ' ಮತ್ತು 'ಇಂದಿರಾ'ಕನ್ನಡದ ಮೊಟ್ಟ ಮೊದಲ ಕಾದಂಬರಿಗಳು. ಕನ್ನಡ ಜಿಲ್ಲೆಗಳ ಸಾರಸ್ವತರು ಬ್ರಹ್ಮ ಸಮಾಜದ ಪ್ರಭಾವಕ್ಕೆ ಒಳಗಾಗಿ ಸ್ತ್ರೀಶಿಕ್ಷಣದ ಬಾಲ್ಯ ವಿವಾಹ, ವಿಧವಾ ಮರುವಿವಾಹ, ಕೇಶಮುಂಡನಾ, ಸಮುದ್ರಯಾನ, ಬಹುಪತ್ನಿತ್ವ, ಅಸ್ಪೃಶ್ಯತೆ ಮುಂತಾದ ವಿಷಯಗಳಲ್ಲಿ ಪ್ರಗತಿಶೀಲ, ಧೋರಣೆ ತಾಳಿ ಡಂಬಾಚಾರ, ಅನೈತಿಕತೆಗಳನ್ನು ಕಟುವಾಗಿ ಟೀಕಿಸುತ್ತಿದ್ದ ಕಾಲ ಅದು ಬಾಲವಿಧವೆ ಒಬ್ಬಳ ವೈಧವ್ಯದ ಬವಣೆಗಳನ್ನು ಆಕೆಯ ಮರುವಿವಾಹವನ್ನು ಇಂದಿರಾಬಾಯಿ ಚಿತ್ರಿಸುತ್ತದೆ. ಇಂದಿರಾ ಕೃತಿಯಲ್ಲಿ ಲೇಖಕರು ತೋರಿಸಿರುವ ದಿಟ್ಟತನ ಗಮನಾರ್ಹವಾದದ್ದು. ಸ್ತ್ರೀಯು ಸುಶಿಕ್ಷಿತಳಾದರೆ ಅವಳ ವ್ಯಕ್ತಿತ್ವದ ವಿಕಾಸ ಸಾಧ್ಯ ಎಂಬುದಕ್ಕೆ ಮಾದರಿ ಇಂದಿರೆಯ ವ್ಯಕ್ತಿತ್ವ, ಇಂದಿರೆ ಜಲಜಾಕ್ಷಿ, ಭಾಸ್ಕರರಾಯನ ತಾಯಿಯಂತಹವರ ಮೂಲಕ ಜೀವನ ಪರವಾದ ಪ್ರಗತಿಪರವಾದ ಮಾನವೀಯ ಧೋರಣೆಗಳನ್ನು ಅಮೃತರಾಯ, ಭಾಸ್ಕರರಾಯನ ಮೂಲಕ ವೈಚಾರಿಕತೆಯನ್ನು ಇಂದಿರೆಯ ತಂದೆ-ತಾಯಿಯರ ಮೂಲಕ ಸಂಪ್ರದಾಯಸ್ಥರ ಬದುಕನ್ನು ಲೇಖಕರು ಪ್ರತಿಪಾದಿಸುತ್ತಾರೆ.

ವೈಚಾರಿಕ ಚಿಂತನೆ, ಮಾನವತಾವಾದದ ಮೂಲಕ ಸಂಪ್ರದಾಯಸ್ಥ ಸಮಾಜದ ರೂಢಿಗತ ಬದುಕನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಶಿವರಾಮಕಾರಂತರ 'ಸರಸಮ್ಮಸಮಾಧಿ'ಯು ಪವಾಡದ ಸತ್ಯವನ್ನು ಹೊರಹಾಕಲುಯತ್ನಿಸುತ್ತದೆ. ಸಂಪ್ರದಾಯದ ಬಲವಾದ ಆವರಣದಲ್ಲಿ ಕಂದಚಾರ, ಮೌಢ್ಯ, ಅಹಂಕಾರಗಳಿಂದ ಜಡವಾಗಿರುವ ಸ್ತ್ರೀ-ಪುರುಷ ಸಂಬಂಧಗಳು ಯಾಂತ್ರಿಕತೆಯ ಮೂಲವನ್ನು ವಾಸ್ತವ ದೃಷ್ಟಿಯಿಂದ ಜಿಜ್ಞಾಸೆಗೆ ಗುರಿಪಡಿಸುತ್ತದೆ. ಆರ್. ಕಲ್ಯಾಣಮ್ಮ, ಶ್ಯಾಮಲದೇವಿ, ಸರಸ್ವತಿ ಬಾಯಿ ರಾಜವಾಡೆಯಂಥರ ಬದುಕಿನ ಸಾಧನೆಗಳು ಏಕೆ ವಿಚಾರಪರ

ಲೇಖಕರ ಸಂವೇದನೆಗಳಿಗೆ ಕುತೂಹಲಕಾರಿಯಾಗಲಿಲ್ಲವೆನ್ನುವುದು ಯೋಚಿಸ ಬೇಕಾದ ಸಂಗತಿ. ಹೆಂಗಸರು ಏನು ಮಾಡಬಲ್ಲರು? ಎಂಬ ಅಜ್ಞಾನವೇ, ಅಥವಾ ಸ್ಪರ್ಧಿಗಳಾದರೆಂಬ ಭಯವೇ ಅಥವಾ ತಮ್ಮ ಸುತ್ತಲಿನ ಪರಿಮಿತಿಗಳಿಂದಾಗಿ ತಮ್ಮ ವ್ಯಕ್ತಿತ್ವ ವಿಚಾರ ಕಾರ್ಯಾಚರಣೆಗಳ ಹಿಂದಿರುವ ತಮ್ಮ ಸ್ವತಂತ್ರ ಅಸ್ತಿತ್ವವನ್ನು ಮನದಟ್ಟು ಮಾಡಲಾರದ ಸ್ಥಿತಿಯೇ. ಇದಾವುದೇ ಇರಲಿ, ನಿಜವಾದ ಸತ್ವಯುತ ಸಾಧನೆ ಮಾಡಿದ್ದ ಸ್ತ್ರೀಯರು ಪುರುಷ ನಿರ್ಮಿತ ಇತಿಹಾಸದಡಿಯಲ್ಲಿ ಬದುಕು ದೂಡುವರು. ಅವರಲ್ಲಿ ಮಾತೃತ್ವ ಗುಣದಿಂದ ವ್ಯಕ್ತಿಗಳ ಬದುಕಿನ ಮೇಲೆ ಪ್ರಭಾವ ಬೀರಬಲ್ಲರು. ಪುರುಷರ ರಚನೆಗಳಲ್ಲಿ ಹೆಚ್ಚಾಗಿ ಪ್ರತಿಪಾದಿತವಾದರು.

ಒಟ್ಟಾರೆ ವಾಸ್ತವದಲ್ಲಿಯ ಸ್ತ್ರೀಯು ಕಾದಂಬರಿಗಳಲ್ಲಿ ಪ್ರಕಟಗೊಂಡಿರುವುದಕ್ಕಿಂತ ಸಂಕೀರ್ಣವಾದ ದ್ವಂದ್ವಾತ್ಮಕ ಸನ್ನಿವೇಶಗಳನ್ನು ಎದುರಿಸುತ್ತಿದ್ದಾಳೆ. ಸ್ತ್ರೀಪರತೆಯ ಸಾಹಿತ್ಯಾಭಿವ್ಯಕ್ತಿಯ ವ್ಯಾಪಕ ಅಧ್ಯಯನವು ಇನ್ನೂ ನಡೆಯ ಬೇಕಾಗಿದೆ. ನೇಮಿಚಂದ್ರ ಬಹಳಷ್ಟು ಕಥೆಗಳಲ್ಲಿ ಜೀವನದ ತಿರುವುಗಳಲ್ಲಿ ಎದುರಾಗುವ ನಿರ್ಧಿಷ್ಟ ಸಮಸ್ಯೆಗಳ ಚಿತ್ರಣವಿದೆ. ಈ ಕತೆಗಳಲ್ಲಿ ಹೆಣ್ಣಿನ ಬದುಕಿನಲಯಗಳು ಇಂಥ ನಾಟಕೀಯ ಒತ್ತಡಗಳಿಲ್ಲದೇ ಬಿಟ್ಟುಕೊಂಡು ಲೇಖಕಿಗೆ ಮಾಧ್ಯಮದ ಮೇಲೆ ಇರುವ ಹತೋಟಿಗೆ ಸಾಕ್ಷಿಯಾಗಿದೆ. ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆಗಳಂತೆ ಲಿಂಗ ಪ್ರಜ್ಞೆಯ ಒತ್ತು ತೀರ ಪ್ರಸ್ತುತವಾಗುತ್ತದೆ. ಹೆಣ್ಣಿನ ಗ್ರಹಿಕೆಗೆ ಹೊಸ ಆಯಾಮಗಳು ಧಾರಣವಾಗುವುದು ಹೀಗೆ. ನಾವು ಗಮನಿಸದೇ ಬಿಟ್ಟಿದ್ದ, ಗಮನಿಸಿಯೂ ಗಂಭೀರವಾಗಿ ತೆಗೆದುಕೊಳ್ಳದಿದ್ದ ಜೀವನದ ಅನೇಕ ಅಂಶಗಳತ್ತ ನಮ್ಮ ಅನೇಕ ಪ್ರತಿಭಾವಂತ ಲೇಖಕಿಯರು ಒತ್ತುಕೊಟ್ಟು ಬರೆಯುತ್ತಿದ್ದಾರೆ. ಅದೇನೇ ಇದ್ದರೂ, ನೇಮಿಚಂದ್ರ ಅವರ ಬರವಣಿಗೆ ನಮ್ಮಲ್ಲಿ ಹೊಸ ಅರಿವಿಗೆ ಇಂಬುಕೊಡುವಂತಿದೆ ಎಂಬುದಂತೂ ಸತ್ಯ.

ನೇಮಿಚಂದ್ರರು ಕನ್ನಡದ ಹೊಸ ತಲೆಮಾರಿನ ಕತೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆ ಹಾಗೂ ವಿಜ್ಞಾನ ಮತ್ತು ವೈಚಾರಿಕತೆಯ ಪ್ರತಿಪಾದಕಿಯಾಗಿ ತಮ್ಮ ಕತೆಗಳನ್ನು ಸ್ಪಷ್ಟವಾಗಿ ರಚಿಸಿದ್ದಾರೆ. ನೇಮಿಚಂದ್ರರ ಕತೆಗಳ ನಾಯಕಿಯರು ಶಿಕ್ಷಿತ, ಸಂಪಾದಿಸುವ ಹೆಣ್ಣುಗಳಾದ್ದರಿಂದ ಅವರಿಗೆ ಬದುಕನ್ನು ವೈಜ್ಞಾನಿಕವಾಗಿ ನೋಡುವುದು ಅನಿವಾರ್ಯವಾಗುತ್ತದೆ. 'ನನ್ನದಲ್ಲದ ಬದುಕಿಗಾಗಿ' ಕತೆಯ ಸರೂ, 'ಕೆಂಪು ಕಲಕಿದ ನೀರು' ಕತೆಯ ಶೀಲಾ ಇತ್ಯಾದಿ ಪಾತ್ರಗಳು ಇವಕ್ಕೆ ಮಾದರಿಯಾಗಿವೆ. ಪರಂಪರಾಗತ ಸ್ತ್ರೀಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವರು ಪ್ರಜ್ಞಾಪೂರ್ವಕವಾಗಿ ಪರಂಪರೆಯನ್ನು ಧಿಕ್ಕರಿಸಿ ಕೈಗೊಳ್ಳುವ ವೈಚಾರಿಕಾ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ.

ನೇಮಿಚಂದ್ರರ ಕಥನ ಶೈಲಿ, ಸಂಭಾಷಣಾ ವಿಧಾನವು ಕತೆಗಳಿಗೆ ಜೀವಂತಿಕೆಯನ್ನು ನೀಡಿವೆ. ಘಟನೆ ಇಲ್ಲವೆ ಪ್ರಕರಣವೊಂದರಿಂದ ಕತೆಗಳು ಪ್ರಾರಂಭವಾಗುವುದನ್ನು ನಾವು ಬಹುತೇಕ ಕಥೆಗಳಲ್ಲಿ

ಗುರುತಿಸಬಹುದು. ಹೇಳಬೇಕಾದುದ್ದನ್ನು ನೇರವಾಗಿ ಹೇಳುವ, ಹೊಸದುದರ ಕಡೆಗೆ ಮಿಡಿತ ಹಾಗೂ ವೈಚಾರಿಕತೆಯ ತುಡಿತ ಕಾಣಬಹುದು ಹೀಗೆ ನೇಮಿಚಂದ್ರರು ಅವರು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಎಂದರೇ ತಪ್ಪಾಗಲಾರದು.

ಅಧ್ಯಾಯ – ೬

ಉಪಸಂಹಾರ

ಅಧ್ಯಾಯ – ೬

ಉಪಸಂಹಾರ

ವೈಚಾರಿಕತೆ ಮತ್ತು ಸಾಮಾಜಿಕ ಸಂಘರ್ಷಗಳು ಇತ್ತೀಚಿನದಲ್ಲ ಇವುಗಳ ಕಾರ್ಯಕ್ಷೇತ್ರ ವ್ಯಾಪ್ತಿ ವಿಸ್ತಾರವಾಗುತ್ತಾ ಬಂದಿದೆ. ಈ ಕಲ್ಪನೆಗಳು ಹಿಂದೆ–ಇಂದು–ಮುಂದುಗಳ ಪಾರಂಪರಿಕ ಚರಿತ್ರೆಯನ್ನು ವೃದ್ಧಿಸುತ್ತಾ ಹೋಗುತ್ತವೆಂದು ಹೇಳಬಹುದು. ವಿಚಾರವಂತರ ಆದರ್ಶ ಮಾರ್ಗಗಳನ್ನು ಪಾಲಿಸಿದ್ದೇ ಆದಲ್ಲಿ ಖಂಡಿತ ಸಮಾಜಸುಧಾರಣೆ ಸಾಧ್ಯವಾಗಬಹುದೆಂಬ ಬಯಕೆ. ಇಂದಿನ ವೈಜ್ಞಾನಿಕ ಯುಗದಲ್ಲಿ ವೈಚಾರಿಕತೆ ಬಹಳ ಮುಖ್ಯವಾಗಿದೆ. ಪ್ರತಿಯೊಬ್ಬರು ವೈಚಾರಿಕತೆಯನ್ನು ಬೆಳಸಿಕೊಂಡಾಗ ದೇಶದಲ್ಲಿನ ಅಸಮಾನತೆ ತೊಲಗಿಸಿ ಸಮಾಜದ ಮುನ್ನಡೆಗೆ ಅವಕಾಶವಾಗುತ್ತದೆ. ಇಂದಿನ ವಿದ್ಯಾವಂತ ವರ್ಗ ಸಹ ವೈಚಾರಿಕತೆ ಎಂದರೇನು ಎಂಬುದನ್ನು ತಿಳಿಯದೆ ಮೌಢ್ಯದಲ್ಲಿಯೇ ಮುಳುಗುವ ಮೂಢರಾಗುವುದನ್ನು ಗುರುವಿನ ಸ್ಥಾನದಲ್ಲಿರುವವರು ವಿಚಾರವಂತರು ಮೇಲೆತ್ತುವ ಕೆಲಸ ಮಾಡಬೇಕಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳಿಗೆ ಒಂದು ಪರಂಪರೆ ಇದೆ. ಜನಪದ ಸಾಹಿತ್ಯದಲ್ಲೂ ಕೂಡ ಮಹಿಳೆ ಮನಬಿಚ್ಚಿ ಮಾತನಾಡಿದ್ದಾಳೆ. ಆದರೆ ಮಹಿಳಾ ಸಂವೇದನೆ, ಮಹಿಳಾ ಪ್ರಜ್ಞೆ, ವೈಚಾರಿಕತೆ ಎಂಬವುಗಳ, ಅಧ್ಯಯನ ಕ್ರಮ ರೂಪುಗೊಂಡ ನಂತರದ ಪರಿಭಾಷೆ, ಪರಿಕಲ್ಪನೆಗಳು, ಆಧುನಿಕ ವಚನ ಚಳುವಳಿಯ ಕಾಲದಲ್ಲೆ ವೈಚಾರಿಕತೆ, ಸ್ತ್ರೀ ಸಂವೇದನೆ ವಿಶಿಷ್ಟ ಅಭಿವ್ಯಕ್ತತೆ ನಮ್ಮ ಸಾಹಿತ್ಯ ಕೃತಿಗಳಲ್ಲಿ ಪ್ರಾರಂಭವಾಯಿತು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನವೋದಯ ಕಾಲದಿಂದಲೇ ಈ ತೆರೆನಾದ ವೈಚಾರಿಕ ಪ್ರಜ್ಞೆ ಮತ್ತು ಸಂವೇದನೆಗಳನ್ನು ನಾವು ಗುರುತಿಸಬಹುದಾಗಿದೆ. ನಂತರದ ಪ್ರಗತಿಶೀಲ, ನವ್ಯ, ನವ್ಯೋತ್ತರ ಸಾಹಿತ್ಯಗಳಲ್ಲಿ ಅದು ಇನ್ನಷ್ಟು ನಿಖರತೆಯನ್ನು ಪಡೆದುಕೊಂಡಿತು. ಪ್ರಸ್ತುತ ನೇಮಿಚಂದ್ರ ಅವರು ನವ್ಯೋತ್ತರ ಸಂದರ್ಭದ ಬರಹಗಾರ್ತಿಯರಲ್ಲಿ ಪ್ರಮುಖರು.

ನವ್ಯ ಸಂದರ್ಭದ ಬರವಣಿಗೆಯನ್ನು ಮೈಗೂಡಿಸಿಕೊಂಡಿರುವ ನೇಮೀಚಂದ್ರರ ದನಿ ವೀಣಾಶಾಂತೇಶ್ವರ ನಂತರ ಬಂದ ಎಲ್ಲಾ ಲೇಖಕಿಯರಿಗಿಂತ ಹೆಚ್ಚು ಹೊಸತಾಗಿ, ಸ್ಪಷ್ಟವಾಗಿ ಕೇಳಿಬರುತ್ತದೆ. ಹೊಸ ಸಾಮಾಜಿಕ ಸಂದರ್ಭದಲ್ಲಿ ವೈಚಾರಿಕ ಪ್ರಜ್ಞೆಯನ್ನು ಮುಚ್ಚು ಮರೆಯಿಲ್ಲದೆ ಎದುರಿಸುವ ಮೂಲಕ ಈ ಕತೆಗಾರ್ತಿ ತಮ್ಮ ವೈಶಿಷ್ಟ್ಯವನ್ನು ಗಳಿಸಿಕೊಂಡಿದ್ದಾರೆ. ಸಹಜ ಪ್ರತಿಭೆಯುಳ್ಳ ಈ ಲೇಖಕಿ ಕನ್ನಡತಕ್ಕೆ ಉತ್ತಮ ಕತೆಗಳನ್ನು ನೀಡಿದ್ದಾರೆ.

ನೇಮಿಚಂದ್ರ ಅವರ ಕತೆಗಳ ಬಗೆಗೆ ವಿಮರ್ಶಕರು ವ್ಯಕ್ತಪಡಿಸುವ ಅಭಿಪ್ರಾಯಗಳು ಇಲ್ಲಿ ಪ್ರಸ್ತುತವೆನಿಸುತ್ತದೆ. "ಕನ್ನಡದ ಹೊಸ ಪೀಳಿಗೆಯ ಕತೆಗಾರ್ತಿಯರಲ್ಲಿ ಗಮನಾರ್ಹರಾದ ನೇಮಿಚಂದ್ರ ಅವರ ಬರವಣಿಗೆ ಹೆಣ್ಣಿನ ಮನಃಸ್ಥಿತಿ ಆಶೋತ್ತರಗಳ ಧ್ಯಾನವೇ ಆಗಿದ್ದರೂ ಅದೆಂದೂ ಸರಳವಾದ ಸ್ತ್ರೀಪರ ಪುರುಷವಿರೋಧಿ ಘೋಷಣೆ ಸಡಿಲವಾಗಿಲ್ಲ. ಗಂಡು–ಹೆಣ್ಣಿನ ನಡುವಣ ಗೋಡೆಗಳು ಕರಗಿ ಅವರಿಬ್ಬರೂ ಪ್ರಬುದ್ಧವಾದ ಸಮಾನಸ್ತರದ ಬದುಕು ನಡೆಸಬೇಕಾದ ಕ್ಷಣಗಳಿಗಾಗಿ ಅವರು ಹುಡುಕುತ್ತಿದ್ದಾರೆ. ಈ ಸೃಜನಶೀಲ ಹುಡುಕಾಟವೇ ನೇಮಿಚಂದ್ರರ ಬರವಣಿಗೆಯನ್ನು ಪ್ರಭಾವಿಸಿವೆ" ಎಂದು ಟಿ.ಪಿ. ಅಶೋಕ ಅವರ ಮಾತುಗಳು ಲೇಖಕಿಯ ಕತೆಗಳನ್ನು ಅರ್ಥೈಯಿಸಿ ಕೊಳ್ಳುವಲ್ಲಿ ನೆರವಾಗುತ್ತವೆ.

ನೇಮಿಚಂದ್ರ ಕನ್ನಡದ ಹೊಸ ತಲೆಮಾರಿನ ಕಥೆಗಾರ್ತಿಯಾಗಿ ಸ್ತ್ರೀವಾದಿ ಚಿಂತನೆಯ ಪ್ರತಿಪಾದಕಿಯಂತೆ ತಮ್ಮ ಕತೆಗಳನ್ನು ಸ್ಪಷ್ಟವಾಗಿ ರಚಿಸಿದ್ದಾರೆ. ನೇಮಿಚಂದ್ರತ ಕತೆಗಳ ನಾಯಕಿಯರು ಮಧ್ಯಮ ವರ್ಗದ ಶಿಕ್ಷಿತ, ಸಂಪಾದಿಸುವ ಹೆಣ್ಣುಗಳಾದ್ದರಿಂದ ಅವರಿಗೆ ಬದುಕನ್ನು ತರ್ಕಬದ್ಧವಾಗಿ ನೋಡುವುದು ಅನಿವಾರ್ಯವಾಗುತ್ತದೆ. 'ನನ್ನದಲ್ಲದ ಕತೆಯ'ಸರೂ, 'ಹೊಸಹುಟ್ಟು' ಕತೆಯ ಶಶಿ, 'ಕೆಂಪು ಕಲಕಿದ ನೀರು' ಕತೆಯ ಶೀಲಾ ಇತ್ಯಾದಿ ಪಾತ್ರಗಳು ಇದಕ್ಕೆ ಮಾದರಿಯಾಗಿವೆ. ಪರಂಪರಾಗತ ಸ್ತ್ರೀ–ಪುರುಷ ಅಸಮಾನತೆಯಿಂದ ಸ್ತ್ರೀಯರಿಗೆ ಎದುರಾಗುವ ಸಮಸ್ಯೆಗಳು ಮತ್ತು ಅವರು ಪ್ರಜ್ಞಾ ಪೂರ್ವಕವಾಗಿಯೇ ಪರಂಪರೆಯನ್ನು ಧಿಕ್ಕರಿಸಿ ಕೈಗೊಳ್ಳುವ ನಿಲುವುಗಳನ್ನು ನೇಮಿಚಂದ್ರ ಅವರು ಆಧುನಿಕ ಬದುಕಿನ ನೆಲೆಯಲ್ಲಿ ಚಿತ್ರಿಸುತ್ತಾರೆ.

ಸ್ತ್ರೀವಾದಿ ಚಿಂತನೆಯಿಂದಲೇ ಮೂಡಿ ಬರುವ ಇವರ ಕತೆಗಳಲ್ಲಿ ಸ್ತ್ರೀಯರ ಸ್ಥಿತಿಗತಿಗಳು ಹಾಗೂ ಅವರಿಗೆ ಎದುರಾಗುವ ನಿರ್ಬಂಧಗಳ ಬಗ್ಗೆ ಸ್ಪಷ್ಟ ತಿಳುವಳಿಕೆ ಇದೆ. ಸ್ತ್ರೀವಾದಿ ಚಿಂತನೆಗಳನ್ನು ಪ್ರತಿನಿಧಿಸುವಂತಹ ಪಾತ್ರ ಸನ್ನಿವೇಶ, ಸಂಭಾಷಣೆಗಳನ್ನು ಅವರು ತಮ್ಮ ಕತೆಗಳಲ್ಲಿ ಬಿಂಬಿಸುತ್ತಾರೆ. ಸ್ತ್ರೀಪರ ಕಾಳಜಿಯ ದೃಷ್ಟಿಯಿಂದ ಮೆಚ್ಚಬೇಕಾದ ಕತೆಗಳನ್ನು ಬರೆದಿರುವ ನೇಮಿಚಂದ್ರ ಅವರಲ್ಲಿ ಹೊಸ ಹೊಸ ವಸ್ತುಗಳನ್ನು ಪ್ರಸ್ತುತಪಡಿಸುವ ಕತೆಗಾರಿಕೆ ಇದೆ ಉದಾಹರಣೆಗೆ 'ನನ್ನದಲ್ಲದ ಬದುಕಿಗಾಗಿ', 'ಸಾವಿನತ್ತ ಒಂದು ಹೆಜ್ಜೆ', 'ಬದುಕು ಕಾಯುವುದಿಲ್ಲ', 'ಹೊಸ ಹುಟ್ಟು', ಕತೆಗಳನ್ನು ಹೆಸರಿಸಬಹುದು.

ಇವರು ಸಂಪೂರ್ಣವಾಗಿ ಪುರುಷರನ್ನು ವಿರೋಧಿಸುವುದಿಲ್ಲ, ಶೋಷಣೆಯ ನೆಲೆಯನ್ನು ವಿರೋಧಿಸುತ್ತಾರೆಂಬ ಅಂಶವು ಲೇಖಕಿಯು ಸೃಷ್ಟಿಸಿದ 'ನನ್ನದಲ್ಲದ ಬದುಕಿಗಾಗಿ' ಕತೆಯ ರಮೇಶ, 'ಹೊಸ ಹುಟ್ಟು' ಕತೆಯ ರವಿ, 'ಮರಳಿ ಬದುಕಿಗೆ ಈ ಪಯಣ' ಕತೆಯ ರಿಪುದಮನ್ ಸಿಂಗ್ ಇತ್ಯಾದಿ ಪೋಷಕ ಪಾತ್ರಗಳ ಮೂಲಕ ಮನದಟ್ಟಾಗುತ್ತವೆ.

ನಗುವುದು ಅಳುವುದು ಇತರರೊಂದಿಗೆ ತಮ್ಮ ಭಾವನೆಗಳನ್ನು ಹಂಚಿಕೊಳ್ಳುವುದು ಪ್ರಕೃತಿಯ ಸಹಜ ಕ್ರಿಯೆಗಳು. ಬರೀ ಮೌನವಾಗಿರುವುದು ಸಹ್ಯವಾಗದ ಗುಣ. ಹೀಗೆ ಮೌನವಾಗಿದ್ದು ಅನುಭವಿಸುವ ವೇದನೆಗಳನ್ನು ಲೇಖಕಿಯು ತಮ್ಮ ಕತೆಗಳಲ್ಲಿ ದಟ್ಟವಾಗಿ ಚಿತ್ರಿಸಿದ್ದಾರೆ. ಸ್ತ್ರೀ ಪುರುಷರಿಬ್ಬರ ಅನನ್ಯತೆಗಳು ಸಮಾನ ನೆಲೆಯಲ್ಲಿ ಸ್ವೀಕೃತವಾಗುವಂಥ ಸಾಂಸ್ಕೃತಿಕ ಪರಿಸರದ ನಿರ್ಮಾಣಕ್ಕೆ ಇವರ ಕತೆಗಳು ದಾರಿಮಾಡಿಕೊಡುತ್ತವೆ.

ಕೌಟುಂಬಿಕ ಬದುಕಿನ ಹಲವು ವೈರುದ್ಯಗಳನ್ನು ಪುರುಷ ಸಂಸ್ಕೃತಿಯ ಯಜಮಾನ್ಯವನ್ನು ಯಾವುದೇ ಹಿಂಜರಿಕೆಯಿಲ್ಲದೆ ಕತೆಗಳ ಮೂಲಕ ದಿಟ್ಟತನದಿಂದ ವಿವರಿಸುತ್ತಾರೆ. 'ಕಪ್ಪು ಮೋಡ ಬೆಳ್ಳಿ ಅಂಚು' ಕತೆಯಲ್ಲಿ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಚರ್ಚೆ ನಡೆಸಿದ್ದಾರೆ. ಸ್ತ್ರೀ ಪುರುಷರ ಸಹಾನುಭೂತಿಯಿಂದ ಜೀವನ ನಿರ್ವಹಣೆ ಕ್ರಮವನ್ನು ವಿರೋಧಿಸುತ್ತಾರೆ ನಿನಗಾಗಿ, ನಿನ್ನ ಬದುಕಿಗಾಗಿ ಜೀವನದ ಸೋಲುಗಳನ್ನೆಲ್ಲ ಸವಾಲುಗಳನ್ನಾಗಿ ಉತ್ತರಿಸುವ ಛಲಕ್ಕಾಗಿ, ಪಂಥಾಹ್ವಾನಕ್ಕಾಗಿ ಬದುಕ ಬೇಕೆಂಬ ಅಂಶವು ಕತೆಯಲ್ಲಿ ಅಂತಿಮ ಸಾರಾಂಶವಾಗಿ ಮೂಡಿಬಂದಿದೆ. ಮಹಿಳೆ ತನ್ನ ಜೀವನದ ಪ್ರತಿಯೊಂದು ಹಂತದಲ್ಲಿಯೂ ಗಂಡಸಿಗೆ ಅವಲಂಭಿತಳಾಗಿರುವುದನ್ನು ವಿರೋಧಿಸುತ್ತಾಳೆ. ಮಹಿಳೆಯರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವಂತಹ ಕತೆಗಳನ್ನೇ ನೇಮಿಚಂದ್ರರು ರಚಿಸಿರುವುದು ಶ್ಲಾಘನೀಯ.

ಇವರು ಕತೆಗಳಲ್ಲದೆ ಇನ್ನಿತರ ಬರಹಗಳಾದ ಜೀವನ ಚರಿತ್ರೆ, ಅನುವಾದದಲ್ಲಿಯೂ ಕೂಡ ವೈಚಾರಿಕ ಪ್ರಜ್ಞೆ, ಸ್ತ್ರೀ ಸಂವೇದನೆ ಪ್ರಮುಖವಾಗಿರುವುದನ್ನು ಗಮನಿಸಬಹುದು. ಅದರಲ್ಲೂ ಸಾಧನೆ ಮಾಡಿದ ಅಸಾಮಾನ್ಯ ವ್ಯಕ್ತಿತ್ವ ಹೊಂದಿದ ಮಹಿಳೆಯರನ್ನು ಕೇಂದ್ರವಾಗಿಟ್ಟುಕೊಂಡು ಬರೆದಿರುವುದು ಪರಿಶೀಲಿಸಬೇಕಾದ ಅಂಶವಾಗಿದೆ. ಮೇರಿಕ್ಯೂರಿ (ವಿಜ್ಞಾನಿ), ಈಡಾ ಸ್ಕೋಫಿಯಾ ಸ್ಕಡರ್ (ವೈಧ್ಯಕೀಯ), ಪ್ಲೇವಿಯಾ (ಕುಟುಂಬ), ಮಹಿಳಾ ವಿಜ್ಞಾನಿಗಳು, ಮಹಿಳಾ ವೈಮಾನಿಕರು ಹೀಗೆ ಒಂದಲ್ಲ ಒಂದು ರಂಗದಲ್ಲಿ ಬೆಳಕು ಮೂಡಿಸಿದ ಮಹನೀಯ ಮಹಿಳೆಯರನ್ನು ಗುರುತಿಸಿ ಅವರ ವ್ಯಕ್ತಿತ್ವವನ್ನು ಸಮಾಜಕ್ಕೆ ಪರಿಚಯಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನೇಮಿಚಂದ್ರರ ಕಥನ ಶೈಲಿ, ಸಂಭಾಷಣ ವಿಧಾನವು ಕತೆಗಳಿಗೆ ಜೀವಂತಿಕೆಯನ್ನು ನೀಡಿವೆ. ಆತ್ಮಾರ್ಥಕ ನಿರೂಪಣಾ ವಿಧಾನವನ್ನು ಇವರ ಬಹುಪಾಲು ಕತೆಗಳಲ್ಲಿ ಗುರುತಿಸಬಹುದು. ದಾರ್ಶನಿಕರ, ಮಹನೀಯರ ಹೇಳಿಕೆ, ವಾಕ್ಯಗಳನ್ನು ಕತೆಯ ಮೊದಲಲ್ಲಿ ಇಲ್ಲವೇ ಅಂತ್ಯದಲ್ಲಿ ಬಳಸಿಕೊಳ್ಳುವುದರಿಂದ ಇವರ ಕತೆಗಳು ಓದುಗರ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತವೆ. ಘಟನೆ ಇಲ್ಲವೆ ಪ್ರಕರಣವೊಂದರ ಕತೆಗಳು ಪ್ರಾರಂಭವಾಗುವುದನ್ನು ಇವರ ಬಹುತೇಕ ಕತೆಗಳಲ್ಲಿ ಗುರುತಿಸಬಹುದು. ಕತೆಯ ಸಂಭಾಷಣೆಯಲ್ಲಿ ಸರಳತೆಯಿದೆ ಹೇಳಬೇಕಾದುದ್ದನ್ನು ನೇರವಾಗಿ ಹೇಳುವ, ಹೊಸದುದರ ಕಡೆಗೆ ಮಿಡಿತ ಇರುವುದನ್ನು ಇವರ ಹಲವು ಕತೆಗಳ ಸಂಭಾಷಣೆಯಿಂದ

ತಿಳಿಯಬಹುದು. ಲೈಂಗಿಕತೆಯ ವಿವರಗಳನ್ನು ತೀರ ಸೂಚ್ಯವಾಗಿ ಹೇಳಿಬಿಡುವ ಕುಶಲತೆಯನ್ನು ಕಾಣಬಹುದು.

ಹೀಗೆ ವೈಚಾರಿಕತೆಯ ವಿವಿಧ ನೆಲೆಗಳಲ್ಲಿ ನೇಮಿಚಂದ್ರರ ಕತೆಗಳಲ್ಲಿ ಅಭಿವ್ಯಕ್ತವಾಗಿದೆ. ಸಾಹಿತ್ಯ ಸಂದರ್ಭದಲ್ಲಿ ನವೋದಯ ಕಾಲಘಟ್ಟದಿಂದಲೇ ನಮ್ಮಲ್ಲಿ ಆಧುನಿಕವೆನ್ನಬಹುದಾದ ವಿಚಾರಗಳು ಪ್ರತಿಪಾದಿತವಾಗತೊಡಗಿವೆ. ಅವುಗಳಲ್ಲಿ ಸ್ತ್ರೀಯರ ಅಭಿವ್ಯಕ್ತಿಯು ಇದೆ. ಪುರುಷರ ಅಭಿವ್ಯಕ್ತಿಯು ಇದೆ. ನವೋದಯ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣ, ವಿಧವಾ ವಿವಾಹದಂತಹ ವಿಚಾರಗಳು ಒಂದು ರೀತಿಯ ಸುಧಾರಣಾವಾದಿ ನಿಲುವಿನಲ್ಲಿ ಅಭಿವ್ಯಕ್ತಗೊಂಡವು. ಆರಂಭ ಘಟ್ಟದ ನಮ್ಮ ಕಾದಂಬರಿಗಳು ಇದಕ್ಕೆ ಸೂಕ್ತ ಉದಾಹರಣೆಗಳಾಗಿ ನಿಲ್ಲುತ್ತವೆ. ಮುಂದೆ ವೇಶ್ಯಾ ಸಮಸ್ಯೆಯು ಸಾಹಿತ್ಯದಲ್ಲಿ ಪ್ರವೇಶ ಪಡೆಯಿತು ಪ್ರಗತಿಶೀಲ ಕಾಲಘಟ್ಟದಲ್ಲಿ ಅದರೊಂದಿಗೆ ಲೈಂಗಿಕತೆಯ ವಿಚಾರಗಳು ಪ್ರತಿಪಾದಿತವಾಗತೊಡಗಿದವು. ನವ್ಯ ಸಂದರ್ಭದಲ್ಲಿ ವೈಚಾರಿಕ ಪ್ರಜ್ಞೆಯು ಆತ್ಮಶೋಧಕ್ಕೆ ಒಳಗಾಯಿತು. ನವ್ಯ ಕಾಲಘಟ್ಟದಲ್ಲಿ ಆಧುನಿಕ ರೀತಿಯಲ್ಲಿ ಬರೆಯುತ್ತಿದ್ದ ಕೆಲವು ಲೇಖಕಿಯರಿಗೆ ನವ್ಯೋತ್ತರದ ದಲಿತ ಬಂಡಾಯ ಚಳುವಳಿಗಳು ಹೊಸ ಹುರುಪನ್ನು ನೀಡಿದವು. ಜೊತೆಗೆ ಈಚಿನ ಸ್ತ್ರೀವಾದಿ ವಿಚಾರಧಾರೆಗಳು ಸೇರಿಕೊಂಡು ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆ ಹೆಚ್ಚು ನಿಖರತೆಯನ್ನು ಪಡೆದುಕೊಂಡಿದೆ. ಪರಂಪರೆ ಮತ್ತು ಆಧುನಿಕತೆಗಳ ನಡುವಿನ ಸಂಘರ್ಷ ಹಾಗೂ ಸಮನ್ವಯಗಳೆರಡನ್ನು ಒಳಗೊಂಡ ವೈಚಾರಿಕತೆ ಪ್ರಸ್ತುತ ನೇಮಿಚಂದ್ರ ಅವರು ತಮ್ಮ ಕತೆಗಳ ಮೂಲಕ ಅಭಿವ್ಯಕ್ತಿಸುವ ವೈಚಾರಿಕತೆಯೂ ಅಂತಹುದೇ ಆಗಿದ್ದು ಗಮನ ಸೆಳೆಯುತ್ತದೆ.

ನೇಮಿಚಂದ್ರರ ಸಾಹಿತ್ಯಕ ಪರಿಚಯ

ನೇಮಿಚಂದ್ರರ ಸಾಹಿತ್ಯಿಕ ಪರಿಚಯ

ಕನ್ನಡದ ಬಹು ಅಪರೂಪದ ಲೇಖಕಿ, ಕತೆಗಾರ್ತಿ, ಅಂಕಣಗಾರ್ತಿ, ತಂತ್ರಜ್ಞೆ ನೇಮಿಚಂದ್ರರು ೧೯ ಜುಲೈ ೧೯೫೯ ರಂದು ಚಿತ್ರದುರ್ಗದಲ್ಲಿ ಜನಿಸಿದರು. ತಂದೆ ಪ್ರೊಫೆಸರ್ ಜಿ.ಗುಂಡಣ್ಣ, ತಾಯಿ ತಿಮ್ಮಕ್ಕ, ಪ್ರಾರಂಭಿಕ ಅಂದರೇ ಪ್ರಾಥಮಿಕ ಶಿಕ್ಷಣ ತುಮಕೂರು ನಂತರ ಮೈಸೂರಿನಲ್ಲಿ ಆಯಿತು. ಮೈಸೂರಿನ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್'ನಲ್ಲಿ ಬಿ.ಇ. ಪದವಿ ಪಡೆದರು. ಎಂ.ಎಸ್. ಪದವಿಯನ್ನು ಬೆಂಗಳೂರಿನಲ್ಲಿರುವ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸ್'ನಲ್ಲಿ ಪಡೆದರು. ಉದ್ಯೋಗ ಹಿಡಿದದ್ದು ಚೀಫ್ ಡಿಸೈನರ್ (ಮಾನವ ರಹಿತ ವಿಮಾನ) ಹಿಂದೂಸ್ತಾನ್ ಏರೋನಾಟಿಕಲ್ಸ್ ಲಿಮಿಟೆಡ್ ಮತ್ತು ಡೈರೆಕ್ಟರ್, ಬಿ.ಎ.ಇ.ಎಚ್.ಎ.ಎಲ್ ಸಾಫ್ಟ್‌ವೇರ್ ಲಿಮಿಟೆಡ್. ಇವರ ಮುಖ್ಯ ಆಸಕ್ತಿಗಳೆಂದರೇ ವಿಜ್ಞಾನ, ಸಾಹಿತ್ಯ, ಮಹಿಳಾ ಅದ್ಯಯನ ಮತ್ತು ಪ್ರವಾಸ.

ಇವರ ಕೃತಿಗಳೇಂದರೆ– ಕಥಾಸಂಕಲನ–ನಮ್ಮ ಕನಸುಗಳಲ್ಲಿ ನೀವಿದ್ದಿರಿ, ಮತ್ತೆ ಬರೆದ ಕತೆಗಳು, ಕಳೆಯಬೇಕಿದೆ ನಿನ್ನ ಜೊತೆಯಲಿ, ಒಂದು ಶ್ಯಾಮಲ ಸಂಜೆ, ಇತ್ತೀಚಿನ ಕಥೆಗಳು (ಇಲ್ಲಿಯವರೆಗಿನ ನೇಮಿಚಂದ್ರರ ಕತೆಗಳು) ಮುಂತಾದವು ಸಂವೇದನಾ ಸೂಕ್ಷ್ಮತೆ, ಸಂಯಮ, ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆಯಿಂದ ಕೂಡಿದ ಕತೆಗಳು.

ಸಂಪಾದಿತ ಕೃತಿ–ಬೆಳೆಗೆರೆ ಜಾನಕಮ್ಮ ಬದುಕು–ಬರಹ, ಅಂತರ್‌ಶಿಸ್ತೀಯ ಅಧ್ಯಯನ–ಸಾಹಿತ್ಯ ಮತ್ತು ವಿಜ್ಞಾನ ಜೀವನ ಚರಿತ್ರೆಗಳು–ನೋವಿಗದ್ದಿದ ಕುಂಚ (ಪ್ರಸಿದ್ಧ ಚಿತ್ರಕಾರ ವ್ಯಾನ್‌ಗೋ), ಬೆಳಕಿಕೊಂದು ಕಿರಣ (ಮೇರಿಕ್ಯೂರಿ), ಥಾಮಸ್ ಅಲ್ವಾ ಎಡಿಸನ್.

ವೈಜ್ಞಾನಿಕ ಕೃತಿಗಳು – ನಿಮ್ಮ ಮನೆಗೊಂದು ಕಂಪ್ಯೂಟರ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್.

ಅನುವಾದ–ನನ್ನಕಥೆ–ನಮ್ಮ ವ್ಯಥೆ.

ಪ್ರವಾಸ ಸಾಹಿತ್ಯ–ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ.

ಅಂಕಣಬರಹಕೃತಿ–ಬದುಕು ಬದಲಿಸಬಹುದು, ನ್ಯಾಯಾಕ್ಕಾಗಿ ಕಾದಿರುವ ಭ್ರಾಂವಿದೇವಿ, ನೊಬೆಲ್ ಪ್ರಶಸ್ತಿ ವಿಜೇತಾ ಮಹಿಳಾ ವಿಜ್ಞಾನಿಗಳು, ಮಹಿಳಾ ಅಧ್ಯಯನ, ಬೆಳಕು ತಂದ ಜೀವ ಡಾ॥

ಈಡಾ ಸ್ಕಡರ್, ದುಡಿವ ದಂಪತಿಗಳಿಗಾಗಿ, ದುಡಿವ ಹಾದಿಯಲ್ಲಿ, ಮಹಿಳಾ ವಿಜ್ಞಾನಿಗಳು, ಹೋರಾಟದ ಹಾದಿಯಲ್ಲಿ, ಧೀಮಂತ ಮಹಿಳೆಯರು, ಸಾವೇ ಬರುವುದಿದ್ದರೇ ನಾಳೆ ಬಾ, ಸೋಲೆಂಬುದು ಅಲ್ಪವಿರಾಮ, ಜೇನ್ಗುಡಾಲ್, ಗುಬ್ಬಿಯ ಕರೆಯಿರಿ ಮನೆಯಂಗಳಕೆ–ಮಹಮ್ಮದ್ ದಿಲಾವರ್ ಮುಂತಾದ ಇಪ್ಪಾತ್ತಾರು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರಿಗೆ ಬಂದ ಪ್ರಶಸ್ತಿಗಳು– ಬೆಳಕಿನೊಂದು ಕಿರಣ ಮೇರಿಕ್ಯೂರಿ, ಪೆರುವಿನ ಪವಿತ್ರ ಕಣಿವೆಯಲ್ಲಿ ಮತ್ತು ಯಾದ್ ವಶೇಮ್– ಪುಸ್ತಕಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ.

ಬದುಕು ಬದಲಿಸಬಹುದು– ಪುಸ್ತಕಕ್ಕೆ ಶಿವಮೊಗ್ಗದ ಕರ್ನಾಟಕ ಸಂಘದ ಡಾ॥ ಹಾ.ಮ. ನಾಯಕ್ ಪ್ರಶಸ್ತಿ. ಪೆರುವಿನ ಪವಿತ್ರ ಕಣಿವೆಯಲ್ಲಿ– ಈ ಪುಸ್ತಕಕ್ಕೆ ಮತ್ತೆ ಶಿವರಾಮಕಾರಂತ ಪುರಸ್ಕಾರ ಲಭಿಸಿತ್ತು.

ಯಾದ್ವಶೇಮ್– ಕಾದಂಬರಿಗೆ ಅಕ್ಕ ಪ್ರಶಸ್ತಿ.

ಕಥಾಸಾಹಿತ್ಯಕ್ಕೆ– ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್‌ನ ಇಂದಿರಾತನಯ ಪ್ರಶಸ್ತಿ.

ವಿಜ್ಞಾನ, ಸಾಹಿತ್ಯ, ಮಹಿಳಾ ಅಧ್ಯಯನವನ್ನು ಕುರಿತಂತೆ ಮಂಗಳೂರಿನ ಸಂದೇಶ ಪ್ರಶಸ್ತಿ, ಗದಗದ ಕಲಾಚೇತನಾ ಪ್ರಶಸ್ತಿ ಮತ್ತು ಕೃಷ್ಣಾನಂದ ಕಾಮತರ ಪ್ರಶಸ್ತಿ, ಇಂಡಿಯನ್ ಎಕ್ಸ್‌ಪ್ರೆಸ್‌ನ ದೇವಿ ಪುರಸ್ಕಾರ, ಕರ್ನಾಟಕ ಸರ್ಕಾರದ ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಪ್ರಶಸ್ತಿ, ಸಿದ್ದವನಹಳ್ಳಿ ಕೃಷ್ಣ ಶರ್ಮ ಸ್ಮಾರಕ ಪ್ರಶಸ್ತಿ.

ಒಂದು ಕನಸಿನ ಪಯಣ ಕೃತಿಗೆ– ಮಾತೃಶ್ರೀ ರತ್ನಮ್ಮ ಹೆಗಡೆ ಪ್ರಶಸ್ತಿ.

ಮತ್ತೆ ಬರೆದ ಕಥೆಗಳು– ಕಥಾ ಸಂಕಲನಕ್ಕೆ ಆರ್ಯಭಟ ಪ್ರಶಸ್ತಿ ದೊರೆತಿದೆ.

ನೇಮಿಚಂದ್ರ ಅವರು ಪ್ರವೃತ್ತಿಯಲ್ಲಿ ಸಾಹಿತ್ಯ, ಪ್ರವಾಸ ಆಸಕ್ತರು, ಕರ್ನಾಟಕದ ಲೇಖಕಿಯರ ಸಂಘದ ಕಾರ್ಯದರ್ಶಿಯಾಗಿದ್ದಾರೆ. 'ಅಚಲಾ' ಮಹಿಳಾ ಅಧ್ಯಯನ ಮಾಸ ಪತ್ರಿಕೆಯ ಸಂಪಾದಕೀಯ ಮಂಡಲಿಯ ಸದಸ್ಯೆಯಾಗಿ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ 'ನೆರವು' ಹಿತರಕ್ಷಣಾ ವೇದಿಕೆಗಳ ನಿಕಟ ಸಂಪರ್ಕ ಮತ್ತು ಒಡನಾಟ ಹೊಂದಿದ್ದಾರೆ. ವಿಜ್ಞಾನ ಸಾಹಿತ್ಯ ಮಹಿಳಾ ಅಧ್ಯಯನ ಕುರಿತಂತೆ ಹಲವಾರು ಇವರ ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ನೇಮಿಚಂದ್ರ ಅವರು ಕನ್ನಡ ಕಥಾ ಸಾಹಿತ್ಯಕ್ಕೆ ನೀಡಿರುವಷ್ಟೇ ಸಾಂದ್ರ ಕೊಡುಗೆಯನ್ನು ವಿಜ್ಞಾನ ಸಾಹಿತ್ಯಕ್ಕೂ ನೀಡಿರುವುದು ವಿಶೇಷ. ಸ್ವತಃ ಎಂಜಿನಿಯರ್ ಆಗಿ ತಂತ್ರಜ್ಞಾನದ ಒಳ ಹೊರಗುಗಳೆಲ್ಲವನ್ನೂ ಅರಿತಿರುವ ಲೇಖಕಿ; ಸಾಹಿತ್ಯ ಮತ್ತು ವಿಜ್ಞಾನವನ್ನು ಭಿನ್ನವೆಂದು ನೋಡದೆ ಸೃಜನಶೀಲಾತೆಗೆ ಎರಡನ್ನೂ ಯುಕ್ತವಾಗಿ ಬಳಸಿಕೊಂಡಿದ್ದಾರೆ. ತಂತ್ರಜ್ಞಾನ, ಕಥೆ, ಕಾದಂಬರಿ, ಜೀವನ ಚರಿತ್ರೆ, ಅಂಕಣ ಎಲ್ಲದರಲ್ಲೂ ಛಾಪು ಮೂಡಿಸಿರುವ ಇವರು ಪ್ರೌಢಶಾಲೆಯ ಅಧ್ಯಯನದ ಸಮಯದಲ್ಲೇ ಮೇರಿಕ್ಯೂರಿಯ ಬಗ್ಗೆ ಕುತೂಹಲ ತಳೆದಿದ್ದರು ಮುಂದೆ ಲೇಖಕಿಯಾಗಿ ಮೇರಿಕ್ಯೂರಿಯವರ ಜೀವನ ಚರಿತ್ರೆಯನ್ನೇ ಬರೆಯುವಾಗ ತೀವ್ರ ಅಧ್ಯಯನ ಮಾಡಿದರು. ೧೯೯೩ ರಲ್ಲಿ 'ಬೆಳಕಿನೊಂದು ಕಿರಣ ಮೇರಿ ಕ್ಯೂರಿ' ಎಂಬ ಕೃತಿ ರಚಿಸಿದರು. ನೇಮಿಚಂದ್ರ ಅವರು ಬರೆದ ಬೆಳಕಿನೊಂದು ಕಿರಣ ಮೇರಿಕ್ಯೂರಿ (೧೯೯೩) ಬಹುವಾಗಿ ಓದುಗರು ಮೆಚ್ಚಿಕೊಂಡಿರುವ ಕೃತಿ, ಈ ಕೃತಿ ರಚಿಸುವಲ್ಲಿ ಲೇಖಕಿ ಮೇರಿಕ್ಯೂರಿ ಕುರಿತು ಪ್ರಕಟವಾಗಿರುವ ಅತ್ಯುತ್ತಮ ಇಂಗ್ಲೀಷ್ ಕೃತಿಗಳನ್ನು ಅಧ್ಯಯನ ಮಾಡಿದ್ದಾರೆ. ಇದನ್ನು ಪರಿಷ್ಕರಿಸುವಾಗ ಪ್ಯಾರಿಸ್‌ನ 'ಮೇರಿಕ್ಯೂರಿ ರಸ್ತೆ'ಯಲ್ಲೆ ನಡೆದಿದ್ದಾರೆ. ಆಕೆಯ ಹೆಸರಿನಲ್ಲಿರುವ ರೇಡಿಯಂ ಸಂಸ್ಥೆ ಒಳ ಹೊಕ್ಕು ಬಂದಿದ್ದಾರೆ. ಅವೆಲ್ಲ ಚಿತ್ರಗಳನ್ನೂ ಪುಸ್ತಕದಲ್ಲಿ ಸೇರಿಸಿದ್ದಾರೆ. ಈ ಕೃತಿ ರಚಿಸಲು ಈ ಬಗೆಯ ಉತ್ಸಾಹ, ವಿವೇಕ ಎರಡನ್ನೂ ತೋರುವುದರಿಂದ ಇವರು ರಚಿಸಿದ ಕೃತಿಗಳು ವಿಶೇಷವಾಗಿ ಓದುಗರನ್ನು ಆಕರ್ಷಿಸುತ್ತವೆ. ತಾಜಾ ಮಾಹಿತಿ ಕೊಡುವ ಅಭಿಲಾಷೆ ಅವರಲ್ಲಿ ಬುಗ್ಗೆಯಂತೆ ಚಿಮ್ಮುತ್ತದೆ. ಮೇರಿಕ್ಯೂರಿಯ ಅಂತರಾಳವನ್ನು ಹೊರತೆಗೆಯುವ ಅನೇಕ ಪ್ರಸಂಗಗಳು ಈ ಪುಟ್ಟ ಕೃತಿಯಲ್ಲಿವೆ– 'ಮೇರಿಗೆಂದೂ ವಿವಾಹ, ವಿಜ್ಞಾನಗಳ ನಡುವೆ ಆಯ್ದುಕೊಳ್ಳುವ ವಿಚಾರವೇ ಬಂದಿರಲಿಲ್ಲ. ಅವಳಲ್ಲಿ ಶಕ್ತಿಯಿತ್ತು. ಛಲವಿತ್ತು. ವಿವಾಹವನ್ನು, ತಾಯ್ತನವನ್ನು, ವಿಜ್ಞಾನವನ್ನು, ಎಲ್ಲವನ್ನೂ ತನ್ನ ಪ್ರೀತಿಯಿಂದ, ತೀವ್ರತೆಯಿಂದ ನಿಭಾಯಿಸಿ ಗೆಲ್ಲಬಲ್ಲ ಆತ್ಮವಿಶ್ವಾಸ ವಿತ್ತು. ಮೇರಿಯ ವ್ಯಕ್ತಿತ್ವ ಪತ್ನಿಯಾಗಿ, ಮಾತೆಯಾಗಿ, ವಿಜ್ಞಾನಿಯಾಗಿ, ಪ್ರಾಧ್ಯಾಪಕಳಾಗಿ ಹರಿದು ಹಂಚಿಹೋಗಲಿಲ್ಲ. ಈ ಎಲ್ಲ ಪಾತ್ರಗಳು ಪರಸ್ಪರ ಪೂರಕವಾದ ಘನ ಚಿತ್ರದಂತಿದ್ದಳು ಮೇರಿ'. ನೇಮಿಚಂದ್ರವರು ಆಕೆಯ ಬದುಕಿನ ಒಟ್ಟಂದವನ್ನು ಗ್ರಹಿಸಿರುವ ಪರಿ ಇದು. ಮೇರಿಕ್ಯೂರಿ ಬಗೆಗೆ ಹೊರಬಂದಿರುವ ಅತ್ಯುತ್ತಮ ಕೃತಿ ಇದು. ಮಾನವೀಯ ಸಂವೇದನೆಗೆ ಹೆಣ್ಣು ಒತ್ತು ಕೊಟ್ಟಿರುವುದರಿಂದ ಕೃತಿ ಬಹುಬೇಗ ಜನಪ್ರಿಯವಾಯಿತು. ಇದಕ್ಕೆ 'ಜೀವನ ಚರಿತ್ರೆ' ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಆಕಾಡೆಮಿ ೧೯೯೩ ರಲ್ಲಿ ಪುಸ್ತಕ ಬಹುಮಾನವನ್ನೂ ನೀಡಿತು.

ಒಂದು ಶತಮಾನಕ್ಕೂ ಹಿಂದೆ ೧೯೦೦ ರಲ್ಲಿ ವೆಲ್ಲೂರಿನಲ್ಲಿ ಒಂದು ಹಾಸಿಗೆಯ ಕ್ಲಿನಿಕ್‌ನಿಂದ ವೈದ್ಯವೃತ್ತಿ ಪ್ರಾರಂಭಿಸಿದ ವೈದ್ಯೆ ಈಡಾಸ್ಕಡರ್‌ಳ ಅರ್ಪಣಾ ಮನೋಭಾವವನ್ನು ಕುರಿತು ೨೦೦೭ ರಲ್ಲಿ ಜೀವನ ಚರಿತ್ರೆ ರಚಿಸಿದರು. ಬರಗಾಲ, ಪ್ಲೇಗ್ ಹಾಗೂ ಉಷ್ಣವಲಯದ ಕಾಯಿಲೆಗಳ ತವರಾಗಿದ್ದ ವೆಲ್ಲೂರಿನ ಹಳ್ಳಿ ಹಳ್ಳಿಗಳಿಗೆ ಹೋಗಿ ಶುಶ್ರೂಷೆಗೈದ ಈಡಾ ದಕ್ಷಿಣ ಭಾರತದಲ್ಲೇ ಮೊತ್ತ ಮೊದಲ ಮಹಿಳೆಯರ ವೈದ್ಯಕೀಯ ಶಾಲೆ ಆರಂಭಿಸಿದ್ದಳು. ನೇಮಿಚಂದ್ರ ಆಕೆಯ ಬಗ್ಗೆ ಮತ್ತು ಆಕೆ ಪ್ರಾರಂಭಿಸಿದ ಆಸ್ಪತ್ರೆಯ ಇತಿಹಾಸವನ್ನು ಅತ್ಯಂತ ಶ್ರದ್ಧೆಯಿಂದ ಎಲ್ಲ ಮಾಹಿತಿಗಳೊಂದಿಗೂ ನಿರೂಪಿಸಿದ್ದಾರೆ. ಅತ್ಯಂತ ವಿರಳ ಎನ್ನಬಹುದಾದ ವ್ಯಕ್ತಿಗಳ ಬಗ್ಗೆಯೋ, ಸಂಗತಿಗಳ ಬಗ್ಗೆಯೋ ಬರೆಯುವುದು ನೇಮಿಚಂದ್ರ ಅವರ ಮಾರ್ಗ. ಸಾಹಿತ್ಯ, ಮಹಿಳಾ ಅಧ್ಯಯನ ಮತ್ತು ವಿಜ್ಞಾನ, ತಮ್ಮ ವೃತ್ತಿ ಜೀವನದ ಮಧ್ಯೆ ಅವರು ಆರಿಸಿಕೊಂಡಿರುವ ಕ್ಷೇತ್ರಗಳು. ಕರ್ನಾಟಕ ಸಾಹಿತ್ಯ ಅಕಾಡೆಮಿಗಾಗಿ ೧೯೯೩ ರಲ್ಲಿ ಇವರು ರಚಿಸಿಕೊಟ್ಟ 'ಸಾಹಿತ್ಯ ಮತ್ತು ವಿಜ್ಞಾನ' ಎಂಬ ಕೃತಿಯಲ್ಲಿ ಈ ಎರಡೂ ಕ್ಷೇತ್ರಗಳು ಸೃಜನಶೀಲವೇ ಎಂದು ತಾರ್ಕಿಕವಾಗಿ ವಿಚಾರಗಳನ್ನು ಬೆಳೆಸಿದ್ದಾರೆ. ಸಾಹಿತಿ ಮತ್ತು ವಿಜ್ಞಾನಿಗಳು ಅಗತ್ಯವಾಗಿ ಓದ ಬೇಕಾದ ಕೃತಿ. ಕನ್ನಡ ಪುಸ್ತಕ ಪ್ರಾಧಿಕಾರಕ್ಕಾಗಿ ಬರೆದ 'ಥಾಮಸ್ ಆಲ್ವ ಎಡಿಸನ್' (೧೯೯೫) ಕೂಡ ಜೀವನ ಚರಿತ್ರೆಯ ರಚನೆಗಳಿಗೆ ಯಾವ ಅಂಶಗಳಿಗೆ ಎಷ್ಟು ಒತ್ತುಕೊಡಬೇಕು ಎಂಬುದಕ್ಕೆ ಮಾದರಿಯಾಗಿದೆ. ಇವರ ಉಳಿದ ಕೃತಿಗಳಾದ 'ಮಹಿಳಾ ವಿಜ್ಞಾನಿಗಳು' (೨೦೧೦) 'ನೊಬೆಲ್ ಪ್ರಶಸ್ತಿ ವಿಜೇತ ಮಹಿಳಾ ವಿಜ್ಞಾನಿಗಳು', ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್‌ಗಳು' ಹಾಗೂ 'ನಿಮ್ಮ ಮನೆಗೊಂದು ಕಂಪ್ಯೂಟರ್' ಎಂಬ ತಂತ್ರಜ್ಞಾನ ಕೃತಿಗಳು ಅಷ್ಟೇ ಮಹತ್ವ ಪೂರ್ಣವಾದವುಗಳು.

ಅನುಬಂಧ

೧.ಮೂಲ ಆಕರಗಳು
೨.ಪೂರಕ ಆಕರಗಳು

ಅನುಬಂಧ

ಮೂಲಆಕರಗಳು

೧. ನೇಮಿಚಂದ್ರ : ನಮ್ಮ ಕನಸುಗಳಲ್ಲಿ ನೀವಿದ್ದಿರಿ, ಐ.ಬಿ.ಎಚ್ ಪ್ರಕಾಶನ, ಬೆಂಗಳೂರು – ೧೯೮೫

೨. ನೇಮಿಚಂದ್ರ: ಬೆಳಗೆರೆ ಜಾನಕಮ್ಮ ಬದುಕು – ಬರಹ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು, ೧೯೮೮.

೩. ನೇಮಿಚಂದ್ರ : ಮತ್ತೆಬರೆದ ಕತೆಗಳು, ಶ್ರೀ ಪ್ರಕಾಶನ, ಬೆಂಗಳೂರು – ೧೯೯೨.

೪. ನೇಮಿಚಂದ್ರ : ಸಾಹಿತ್ಯ ಮತ್ತು ವಿಜ್ಞಾನ (ಅಂತರ್ ಶಿಸ್ತೀಯ ಅಧ್ಯಯನ), ಕರ್ನಾಟಕ ಸಾಹಿತ್ಯ ಅಕಾಡಮಿ – ೧೯೯೩.

೫.ನೇಮಿಚಂದ್ರ: ಕಳೆಯಬೇಕಿದೆ ನಿಮ್ಮ ಜೊತೆಯಲ್ಲಿ ಒಂದು ಶ್ಯಾಮಲಸಂಜೆ, ಬೆಂಗಳೂರು ಮುದ್ರಣಾಲಯ, ಬೆಂಗಳೂರು – ೧೯೯೫.

೬. ನೇಮಿಚಂದ್ರ : ಥಾಮಸ್ ಅಲ್ವಾ ಎಡಿಸನ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೧೯೯೯.

೭. ನೇಮಿಚಂದ್ರ : ಪ್ಲೇವಿಯಾ, ನನ್ನ ಕಥೆ–ನಿಮ್ಮ ಕಥೆ, ನೆಲಮಸಿ ಪ್ರಕಾಶನ, ಶ್ರೀರಂಗ ಪಟ್ಟಣ – ೧೯೯೯.

೮. ನೇಮಿಚಂದ್ರ : ನಿಮ್ಮ ಮನೆಗೊಂದು ಕಂಪ್ಯೂಟರ್, ಸಪ್ನ ಬುಕ್ ಹೌಸ್, ಬೆಂಗಳೂರು – ೧೯೯೯.

೯. ನೇಮಿಚಂದ್ರ : ಒಂದು ಕನಸಿನ ಪಯಣ, ಮಹಿಳಾ ಸಾಹಿತ್ಯಕ ನವನಗರ ಹುಬ್ಬಳ್ಳಿ – ೧೯೯೯

೧೦. ನೇಮಿಚಂದ್ರ : ಮಹಿಳಾ ಅಧ್ಯಯನ, ಅಂಕಿತ ಪ್ರಕಾಶನ, ಬೆಂಗಳೂರು – ೨೦೦೧.

೧೧. ನೇಮಿಚಂದ್ರ : ಬೆಳಕು ತಂದ ಜೀವ, ಡಾ. ಈಡಾ ಸೋಫಿಯಾ ಸ್ಕಡರ್, ಅಂಕಿತ ಪ್ರಕಾಶನ, ಬೆಂಗಳೂರು – ೨೦೦೨.

೧೨. ನೇಮಿಚಂದ್ರ : ಬೆಳಕಿನೊಂದು ಕಿರಣ ಮೇರಿಕ್ಯೂರಿ, ಅಂಕಿತ ಪ್ರಕಾಶನ, ಬೆಂಗಳೂರು ೨೦೦೨.

೧೩. ನೇಮಿಚಂದ್ರ : ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್,ಸಪ್ನ ಬುಕ್ ಹೌಸ್, ಬೆಂಗಳೂರು ೨೦೦೩.

೧೪. ನೇಮಿಚಂದ್ರ : ಬದುಕು ಬದಲಿಸಬಹುದು, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೦೫.

೧೫ . ನೇಮಿಚಂದ್ರ : ಮಹಿಳಾ ಲೋಕ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೦೫.

೧೬. ನೇಮಿಚಂದ್ರ : ಯಾದ್ ವಶೇಮ್, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೧.

೧೭. ನೇಮಿಚಂದ್ರ : ನೋವಿಗದ್ದಿದ ಕುಂಚ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೧.

೧೮. ನೇಮಿಚಂದ್ರ : ಹೋರಾಟದ ಹಾದಿಯಲ್ಲಿ ಧೀಮಂತ ಮಹಿಳೆಯರು, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೧.

೧೯. ನೇಮಿಚಂದ್ರ : ಇತ್ತೀಚಿನ ಕಥೆಗಳು, ಅಂಕಿತ ಪುಸ್ತಕ, ಬೆಂಗಳೂರು – ೨೦೧೨.

೨೦. ನೇಮಿಚಂದ್ರ : ದುಡಿವ ಹಾದಿಯಲ್ಲಿ ಜೊತೆಯಾಗಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೨.

೨೧. ನೇಮಿಚಂದ್ರ : ಮಹಿಳಾ ವಿಜ್ಞಾನಿಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೨.

೨೨. ನೇಮಿಚಂದ್ರ : ಪೆರುವಿನ ಪವಿತ್ರ ಕಣಿವೆಯಲ್ಲಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೩.

೨೩. ನೇಮಿಚಂದ್ರ : ಸಾವೇ ಬರುವುದಿದ್ದರೆ ನಾಳೆ ಬಾ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೫.

೨೪. ನೇಮಿಚಂದ್ರ : ಸೋಲೆಂಬುದು ಅಲ್ಪವಿರಾಮ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು ೨೦೧೫.

೨೫. ನೇಮಿಚಂದ್ರ : ಜೇನ್‌ಗುಡಾಲ್, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೫.

೨೬. ನೇಮಿಚಂದ್ರ : ಗುಬ್ಬಿಯ ಕರೆಯಿರಿ ಮನೆಯಂಗಳಕೆ– ಮೊಹಮ್ಮದ್ ದಿಲಾವರ್, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೫.

(ಆ) ಪೂರಕ ಆಕರಗಳು

೨೭. ಜಿ.ಎಸ್.ಅಮೂರ : ಅರ್ಥಲೋಕ, ಸ್ನೇಹ ಪ್ರಕಾಶನ, ಬೆಂಗಳೂರು – ೧೯೮೮.

೨೮ . ಜಿ.ಎಸ್. ಅಮೂರ : ಅವಳ ಕತೆಗಳು, ಪ್ರಿಸಂ ಬುಕ್ ಪ್ಯಲಿ, ಬೆಂಗಳೂರು – ೧೯೯೯

೨೮. ಜಿ.ಎಸ್. ಅಮೂರ : ಸ್ವಾತಂತ್ರ್ಯೋತ್ತರ ಕನ್ನಡ, ಅಂಕಿತ ಪ್ರಕಾಶನ, ಬೆಂಗಳೂರು ೨೦೦೪.

೩೦. ಟಿ.ಆರ್.ಆನಂತರಾಮು : (ಸಂ) ವಿಜ್ಞಾನ – ತಂತ್ರಜ್ಞಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು– ೨೦೧೫.

೩೧. ಡಾ.ಅನುಪಮ ನಿರಂಜನ : ಋಣ, ಬಿ.ವಿ.ಕೆ.ಮೂರ್ತಿ,ಮೈಸೂರು – ೧೯೮೨.

೩೨. ಆರ್ಯಾಂಭ ಪಟ್ಟಾಭಿ: ಪ್ರಕಾಶ ಸಾಹಿತ್ಯ, ಬೆಂಗಳೂರು – ೧೯೭೯.

೩೩. ಹೆಚ್.ಕೆ.ಅನೂಸಯ ಸಂಪತ್: ರಂಜಿತಾ, ಹೇಮಂತ ಸಾಹಿತ್ಯ, ಬೆಂಗಳೂರು – ೧೯೯೧.

೩೪. ಟಿ.ಪಿ.ಅಶೋಕ: ವೈದೇಹಿ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು – ೨೦೧೫.

೩೫. ಜಿ.ಎಸ್.ಅಮೂರ : ನಿಂದ ಹೆಜ್ಜೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು – ೨೦೦೪.

೩೬. ಅರವಿಂದ ಮಾಲಗತ್ತಿ: ಕನ್ನಡ ವಿಮರ್ಶೆಯ ಮಾರ್ಗ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು – ೨೦೦೪.

೩೭. ಆರ್ಯಾಂಭ ಪಟ್ಟಾಭಿ: ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ, ಮೈಸೂರು – ೨೦೦೪.

೩೮. ಅಶ್ವಿನಿ: ಕಪ್ಪುಕೊಳ, ಗೀತಾರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು – ೧೯೮೬.

೩೯. ಎಂ.ಕೆ.ಇಂದಿರಾ: ಪೂರ್ವಪರ, ರವೀಂದ್ರ ಪುಸ್ತಕಾಲಯ, ಬೆಂಗಳೂರು – ೧೯೮೧.

೪೦. ಉಮಾರಾವ್: ನೂರು ಸ್ವರ, ಪತ್ರಿಕೆ ಪ್ರಕಾಶನ, ಧಾರವಾಡ – ೨೦೧೦.

೪೧. ಕುವೆಂಪು : ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮೈಸೂರು – ೧೯೪೪.

೪೨. ಎನ್.ಕೆ.ಕೋದಂಡರಾಮ : ಕನ್ನಡ ಕಥಾಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ, ಗಾಯತ್ರಿ ಸ್ಮಾರಕ ಗ್ರಂಥಮಾಲೆ.ಮೈಸೂರು – ೧೯೯೬.

೪೩. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ,ಧಾರವಾಡ – ೨೦೦೨.

೪೪. ಕಾಳೇಗೌಡ ನಾಗಾವಾರ: ಜೀವನ ಪ್ರೀತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು – ೨೦೦೨.

೪೫. ಕರೀಗೌಡ ಬೀಚನಹಳ್ಳೀ :ಶತಮಾನದ ಸಣ್ಣಕತೆಗಳ ಸಮೀಕ್ಷೆ,ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೨೦೦೩.

೪೬. ಕಾಳೇಗೌಡ ನಾಗಾವಾರ: ಕಣ್ಣಾಚೆಗೆ,ರೂಪ ಪ್ರಕಾಶನ, ಮೈಸೂರು – ೨೦೦೪.

೪೭. ಗೊರೂರು ರಾಮಸ್ವಾಮಿ ಅಯ್ಯಂಗಾರ್: ಅಮೆರಿಕಾದಲ್ಲಿ ಗೊರೂರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೭೯.

೪೮. ಟಿ.ಆರ್.ಗುರುರಾಜರಾವ್ :ಸಾಹಿತ್ಯ ಕಲಾದರ್ಶಿನಿ, ಬೆಂಗಳೂರು – ೧೯೮೯.

೪೯. ವಿ.ಕೃ.ಗೋಕಾಕ್ : ಸಮುದ್ರದೀಚೆಯಿಂದ, ಕರ್ನಾಟಕ ಸಹಕಾರಿ ಸಂಘ,ಕಾರವಾರ – ೧೯೯೦.

೫೦. ಎ.ವಿ.ಗೋವಿಂದರಾವ್: ಏನು? ಹೇಗೆ? ಏಕೆ? (ವಿಜ್ಞಾನ ಸಂವಹನ), ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, (ಜನಪ್ರಿಯ ವಿಜ್ಞಾನ), ಬೆಂಗಳೂರು – ೧೯೯೨.

೫೧. ಗಿರಿಜಾಶಾಸ್ತ್ರೀ : ಆಧುನಿಕ ಸಣ್ಣಕಥೆಗಳು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೦.

೫೨ . ಕೋ.ಚೆನ್ನಬಸಪ್ಪ: ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆಸಾಮಾಜಿಕ ನಿಷ್ಠೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೨೦೧೦.

೫೩. ದೇ.ಜವರೇಗೌಡರು: ವಿದೇಶದಲ್ಲಿ ನಾಲ್ಕು ವಾರ,ಕರ್ನಾಟಕ ಸಹಕಾರಿ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು–೧೯೭೬.

೫೪. ದೇ.ಜವರೇಗೌಡರು: ಪ್ರವಾಸಿ ದಿನಚರಿ, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು – ೧೯೮೪.

೫೫.ತೇಜಸ್ವಿನಿನಿರಂಜನ: ಸ್ತ್ರೀವಾದಿಸಾಹಿತ್ಯವಿಮರ್ಶೆ, ಬೆಂಗಳೂರು ೨೦೧೪.

ಸೀಮಂತಿನಿ ನಿರಂಜನ :

೫೬. ದೇವಯ್ಯ ಹರವೆ : ನಾಗಾವಾರರ ಕಥೆಗಳಲ್ಲಿ ವೈಚಾರಿಕ ಪ್ರಚೋದನೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು,ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೯೧.

೫೭. ನಿರಂಜನ : ಬನಶಂಕರಿ,ಅಭಿನವ ಪ್ರಕಾಶನ, ಬೆಂಗಳೂರು – ೧೯೭೯.

೫೮. ಧರಣಿದೇವಿ ಮಾಲಗತ್ತಿ: ಸ್ತ್ರೀವಾದ ಮತ್ತು ಭಾರತೀಯತೆ,ಚೇತನ ಬುಕ್ ಹೌಸ್, ಮೈಸೂರು ೧೯೯೪.

೫೯. ಡಾ.ಎಚ್.ನರಸಿಂಹಯ್ಯ : ತೆರೆದ ಮನ, ಕನ್ನಡ ಸಂಘ, ಬೆಂಗಳೂರು – ೧೯೯೪.

೬೦. ಡಾ.ಕೆ.ವಿ.ನಾರಾಯಣ : ವಿಚಾರ ಸಾಹಿತ್ಯ – ೨, ಪ್ರಸಾರಾಂಗ,ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು – ೨೦೦೧.

೬೧. ಆರ್.ನಿರ್ಮಲ: ಅಳಿಲು ಮರಿ, ಶತಮಾನದ ಲಲಿತ ಪ್ರಬಂಧ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು –೨೦೦೧.

೬೨. ಡಾ.ಎಚ್.ನರಸಿಂಹಯ್ಯ: ಹೋರಾಟದ ಹಾದಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರತಿಷ್ಠಾನ ಟ್ರಸ್ಟ್, ಹೊಸೂರು – ೨೦೧೦.

೬೩. ಬಸವರಾಜ ಸಬರದ: ಹೊಸದಿಕ್ಕು, ಪಲ್ಲವಿ ಪ್ರಕಾಶನ, ಬೀದರ್ – ೧೯೯೦.

೬೪. ಬರಗೂರು ರಾಮಚಂದ್ರಪ್ಪ: ಕನ್ನಡ ಸಾಹಿತ್ಯ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೧೯೯೨.

೬೫. ಭುವನೇಶ್ವರಿ ಹೆಗಡೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೨೦೦೧

೬೬. ಎಸ್.ಮಂಗಳಾಸತ್ಯನ್: ಆಮುಖ, ಹೇಮಂತ ಸಾಹಿತ್ಯ, ಬೆಂಗಳೂರು – ೧೯೮೬.

೬೭ ಮಲ್ಲಿಕಾಘಂಟಿ : ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ, ಯುವಲೋಕ ಪ್ರಕಾಶನ, ಧಾರವಾಡ – ೧೯೯೪.

೬೮. ಮಲ್ಲಿಕಾರ್ಜುನ ಹುಲಗೋಳ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು – ೨೦೦೧.

೬೯. ಅ.ರಾ.ಮಿತ್ರ : ಸಾಲಾಯ ತಸ್ಮೈ ನಮಃ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೧.

೭೦. ಎಲ್.ಜಿ.ಮೀರಾ : ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್, ಬೆಂಗಳೂರು –೨೦೦೪.

೭೧.ಡಾ.ಎ.ಮುನಿಶಾಮಪ್ಪ : ಸಾಮಾಜಿಕ ಚಳುವಳಿಗಳ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ, ಪ್ರಮುಖ ಪ್ರಕಾಶನ, ಬೆಂಗಳೂರು – ೨೦೧೦.

೭೨. ರಂ.ಶ್ರೀ.ಮುಗಳಿ: ಕನ್ನಡ ಸಾಹಿತ್ಯ ಚರಿತ್ರೆ, ಸಮಾಜ ಪುಸ್ತಕಾಲಯ,ಧಾರವಾಡ – ೨೦೧೨.

೭೩. ಎ.ಎನ್.ಮೂರ್ತಿರಾವ್: ದೇವರು,ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು – ೨೦೧೪.

೭೪. ಎಚ್.ಎಸ್.ರಾಘವೇಂದ್ರರಾವ್: ಆಯ್ದ ಕಥೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೯೧.

೭೫. ರೇಖಾ ಕಾಖಂಡಕಿ: ಅರುಣರಾಗ,ಲೀಲಾಪ್ರಕಾಶನ,ಮೈಸೂರು. ೧೯೮೬.

೭೬. ಕೆ.ವಿ.ರಾಜೇಶ್ವರಿ : ಮಾನಸ ವೀಣಾ ಮಧುರ ಗೀತೆ, ಕಾವ್ಯ ಪ್ರಕಾಶನ, ಬೆಂಗಳೂರು ೧೯೯೨.

೭೭. ರಹಮತ್ ತರೀಕೆರೆ: ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩.

೭೮. ಬಿ.ಎಂ.ರೋಹಿಣಿ : ಸ್ತ್ರೀ ಭಿನ್ನ ಮುಖಗಳು, ಕರಾವಳಿ ಲೇಖಕಿಯರ ವೈಚಾರಿಕ ಸಂಘ, ಕಾಸರಗೋಡು–೨೦೦೪.

೭೯. ಬಿ.ಟಿ.ಲಲಿತಾನಾಯಕ್: ಗತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು – ೧೯೯೧.

೮೦. ಪಿ.ಲಂಕೇಶ್: ಮುಸ್ಸಂಜೆಯ ಕಥಾ ಪ್ರಸಂಗ, ಪತ್ರಿಕೆ ಪ್ರಕಾಶನ, ಬೆಂಗಳೂರು – ೨೦೦೩.

೮೧. ವ್ಯಾಸರಾಯ ಬಲ್ಲಾಳ : ವಾತ್ಸಲ್ಯ ಪಥ, ಸಪ್ನ ಬುಕ್ ಹೌಸ್, ಬೆಂಗಳೂರು – ೧೯೭೮.

೮೨. ವೀಣಾಶಾಂತೇಶ್ವರ: ಹಸಿವು, ಚಂದ್ರನಾಥ ಪ್ರಕಾಶನ, ಧಾರವಾಡ – ೧೯೮೪.

೮೩. ವ್ಯಾಸರಾಯ ಬಲ್ಲಾಳ: ನಾನೊಬ್ಬ ಭಾರತೀಯ ಪ್ರವಾಸಿ, ಗೀತಾ ಬುಕ್ ಹೌಸ್, ಮೈಸೂರು – ೧೯೮೭.

೮೪. ವಿಜಯದಬ್ಬೆ : ಮಹಿಳೆ, ಸಾಹಿತ್ಯ ಸಮಾಜ, ರಚನಾ ಪ್ರಕಾಶನ, ಮೈಸೂರು – ೧೯೮೯.

೮೫. ವೀಣಾಶಾಂತೇಶ್ವರ: ನಡೆದದ್ದೇ ದಾರಿ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ – ೨೦೦೬.

೮೬. ವೈದೇಹಿ : ಅಲೆಗಳಲ್ಲಿ ಅಂತರಂಗ, ಅಕ್ಷರ ಪ್ರಕಾಶನ, ಹೆಗ್ಗೋಡು – ೨೦೦೯.

೮೭. ವೀಣಾಶಾಂತೇಶ್ವರ: ಗಂಡಸರು, ಸುಂದರ ಪುಸ್ತಕ ಪ್ರಕಾಶನ, ಧಾರವಾಡ – ೨೦೧೧.

೮೮. ಜಿ.ಎಸ್.ಶಿವರುದ್ರಪ್ಪ: ಸೌಂದರ್ಯ ಸಮೀಕ್ಷೆ, ತಳುಕಿನ ವೆಂಕಟಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು – ೧೯೭೦.

೮೯. ಜಿ.ಎಸ್.ಶಿವರುದ್ರಪ್ಪ: ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಬೆಂಗಳೂರು – ೧೯೭೧.

೯೦. ತೀ.ನಂ.ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಬೆಂಗಳೂರು – ೧೯೮೭.

೯೧. ಶ್ರೀನಿವಾಸ ಹಾವನೂರ: ಹೊಸಗನ್ನಡ ಅರುಣೋದಯ, ಮೈಸೂರು – ೧೯೭೪.

೯೨.ಸಾರಾ ಅಬೂಬಕ್ಕರ್: ವಜ್ರಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು – ೧೯೮೮.

೯೩. ಬಿ.ಎನ್.ಸುಮಿತ್ರಬಾಯಿ : ಸಾಹಿತ್ಯ ವಿಮರ್ಶೆ, ಲೀಲಾಪ್ರಕಾಶನ, ಬೆಂಗಳೂರು – ೧೯೯೪.

೯೪. ಬಿ.ಸೀತಾರಾಮಶಾಸ್ತ್ರಿ: ಲೀಲಾವತಿ ಗಣಿತ ಮತ್ತು ಶ್ರೀನಿವಾಸ ರಾಮಾನುಜನ್, ಮೈಸೂರು ವಿಶ್ವವಿದ್ಯಾಲಯ, ಮೈಸೂರು – ೧೯೯೪.

೯೫. ಎಲ್.ಎಸ್.ಶೇಷಗಿರಿರಾವ್: ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಬೆಂಗಳೂರು ೧೯೯೯.

೯೬. ಎಂ.ವಿ.ಸೀತಾರಾಮಯ್ಯ : ಮುಗಿಲುಗಳು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೧.

೯೭. ಸಾರಾಅಬೂಬಕ್ಕರ್: ಸಾಹಿತ್ಯ, ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–೨೦೦೭.

೯೮. ಎಚ್.ಎಸ್.ಶ್ರೀಮತಿ : ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ,ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ – ೨೦೦೯.

೯೯. ಡಾ.ಕೆ.ಶಿವರಾಮಕಾರಂತ : ಬಾಳ್ವೆಯೇ ಬೆಳಕು, ಎಸ್.ಬಿ.ಎಸ್. ಪಬ್ಲಿಷರ್ಸ್, ಬೆಂಗಳೂರು ೨೦೧೩.

೧೦೦. ಶಾಂತಿನಾಥ ದೇಸಾಯಿ : ಮುಕ್ತಿ, ಅಭಿನವ ಪ್ರಕಾಶನ, ಬೆಂಗಳೂರು –೨೦೧೪.

೧೦೧. ಎಂ.ಜಿ.ಹೆಗಡೆ : ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೬.

೧೦೨. ಎಂ.ಜಿ.ಹೆಗಡೆ : ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೯.


೧೦೩. ಎಲ್.ಹನುಮಂತಯ್ಯ : ಕಥಾಕಥನ, ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು – ೧೯೯೯.

೧೦೪. ಡಾ.ಎಚ್.ಹನುಮಂತರಾಯಪ್ಪ: ಧರ್ಮ ಮತ್ತು ಕಾವ್ಯಧರ್ಮ, ಸುಮುಖ ಪ್ರಕಾಶನ, ಬೆಂಗಳೂರು – ೨೦೦೬.

ಸಾಹಿತ್ಯ ಪತ್ರಿಕೆಗಳು

೧. ಟಿ.ಪಿ.ಅಶೋಕ : ಹೊಸದಿಂಗತ – ಸಾಹಿತ್ಯ ಸಂಬಂಧ, ೨೦೧೪

೨. ಡಾ.ಎಂ.ಎಸ್.ಆಶಾದೇವಿ : ಪ್ರಜಾವಾಣಿ, ಸಾಪ್ತಾಹಿಕ ಪುರವಾಣಿ, ೧೬–೧೦–೨೦೧೪, ನಾರಿಕೇಳಾ



ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ